ವಿಷಯಾನುಕ್ರಮಣಿಕೆ

|| ಓಂ ಶ್ರೀ ದುರ್ಗಾಯೈ ನಮಃ ||

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

(ಸಂಖ್ಯಾ-೫೭)

ಮಾರ್ಕಂಡೇಯ ಪುರಾಣಂ

(ಕನ್ನಡ ಅನುವಾದ ಸಹಿತ)

ಸಂಚಿಕೆ ೧

ಅನುವಾದಕ

ಆಸ್ಥಾನವಿದ್ವಾನ್, ಪಾಟಣಕರ ಚಂದ್ರಶೇಖರಭಟ್ಟ

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

1953

ಪ್ರಸ್ತಾವನೆ

ಮಹರ್ಷಿ ವೇದವ್ಯಾಸಮುನಿ ರಚಿತವಾದ ಮಾರ್ಕಂಡೇಯ ಮಹಾಪುರಾಣದ ಕನ್ನಡ ಅನುವಾದ ರಚನೆಯ ಉದ್ಯಮವನ್ನು ಸಂತತವಾಗಿ ಮುಂದುವರೆಸಿಕೊಂಡು ಬಂದುದರ ಪರಿಣಾಮವಾಗಿ ಅದರ ಎರಡನೆಯ ಸಂಚಿಕೆಯನ್ನು ವಾಚಕರ ಮುಂದಿರಿಸಲು ಅತ್ಯಂತ ಕುತೂಹಲಿಯಾಗಿದ್ದೇನೆ.

ಈ ಸಂಚಿಕೆಯು ಕುವಲಯಾಶ್ವ–ಮದಾಲಸೆಯರ ದಾಂಪತ್ಯಜೀವನವನ್ನು ಪ್ರತಿಬಿಂಬಿಸುವ ಕಥೆಯನ್ನು ಪ್ರಾರಂಭಿಸುವ ಇಪ್ಪತ್ತಮೂರನೆಯ ಅಧ್ಯಾಯದಿಂದ ಪ್ರಾರಂಭಹೊಂದಿರುವುದು. ಅವರ ದಾಂಪತ್ಯಜೀವನವು ವಿಸ್ಮಯಕಾರಕವೂ ಮತ್ತು ಪ್ರಶಂಸನೀಯವೂ ಆಗಿದೆ. ನಿರುಪಮ ರತಿಸುಖವನ್ನು ಅನುಭವಿಸುತ್ತಿದ್ದ ಆ ದಂಪತಿಗಳಲ್ಲಿ ಕ್ರಮವಾಗಿ ನಾಲ್ಕುಮಂದಿ ಪುತ್ರರು ಜನ್ಮವೆತ್ತುವರು. ಮೊದಲನೆಯ ಮೂರು ಮಂದಿಗೆ ತಂದೆಯು ಪುತ್ರಜನ್ಮದ ಹರ್ಷಾವೇಶ–ಸಂಭ್ರಮಗಳಿಂದ ಕೂಡಿ ನಾಮಕರಣಮಾಡುತ್ತ ಸುಬಾಹು, ವಿಕ್ರಾಂತ ಮತ್ತು ಶತ್ರುಮರ್ದನ ಎಂಬುದಾಗಿ ಕುಮಾರರ ಧೀರೋದಾತ್ತತೆಯನ್ನು ಸೂಚಿಸುವ ಮಂಗಳಕರವಾದ ಹೆಸರನ್ನಿಡುವನು. ಜ್ಞಾನಪೂರ್ಣಳಾದ ಪಟ್ಟಮಹಷಿಯು ಈ ನಾಮಾಂಕಗಳನ್ನು ಕೇಳಿ ನಸುನಕ್ಕು ಹಾಸ್ಯಮಾಡುವಳು ಮತ್ತು ಆ ಮಕ್ಕಳಿಗೆ ತೊಟ್ಟಿಲು ತೂಗಿ, ಹಾಡು ಹೇಳಿ ಸಂತೈಸುವ ನೆಪದಿಂದ ಜ್ಞಾನೋಪದೇಶಮಾಡುವಳು. ಅದರಿಂದ ಆ ಕುಮಾರರಿಗೆ ದೇಹದ ಜೊತೆಗೆ ಜ್ಞಾನನಿಷ್ಠೆಯು ಬೆಳೆದು ಅವರ ಗುರಿಯು ಅವರನ್ನು ವನವಾಸಕ್ಕೆಳೆಯಿತು.

ಈ ಕ್ರಮವನ್ನು ಸತಿಯಲ್ಲಿ ಕುಹಕವೆಂದರಿತ ಕುವಲಯಾಶ್ವರಾಜನು ನಾಲ್ಕನೆಯ ಪುತ್ರನು ಜನಿಸಿದಾಗ ಅವನಿಗೆ ನಾಮಾಂಕವನ್ನಿಡುವಂತೆ ಸತಿಗೆ ನಿರ್ದೇಶಿಸಿದನು. ಆಕೆಯು " ಅಲರ್ಕ " ಎಂದು ನಾಮಾಂಕನವನ್ನು ಇಡುವಳು. ಆಗ ದೊರೆಗೆ ಬಲು ಜುಗುಪ್ಸೆಯುಂಟಾಗುವುದು. ವೀರಕ್ಷತ್ರಿಯಕುಲದಲ್ಲಿ ಜನಿಸಿದ ಕುಮಾರರಿಗೆ ತಾನು ಇಟ್ಟಿರುವ ಮುದ್ದಾದ ಹೆಸರನ್ನು ಕೇಳಿ ಇವಳು ನಗುವುದೇನು ? ಮತ್ತು ನಾಲ್ಕನೆಯ ಪುತ್ರನಿಗೆ ಈಕೆಯು ಅಸಂಬದ್ಧವಾದ ಹೆಸರಿಡುವುದೇನು ? ಇದೊಂದನ್ನೂ ದೊರೆಯು ಅರಿಯದವನಾದನು.

ಆಗ ಅವನು ತಾಳಲಾಗದ ಕೋಪದಿಂದ ಪತ್ನಿಯನ್ನು ಆಕ್ಷೇಪಿಸುವನು. ಆದರೆ ಆತ್ಮನಲ್ಲಿ ನಾಮರೂಪಗಳ ಸಂಪರ್ಕವು ಪರಮಾರ್ಥದೃಷ್ಟಿಯಲ್ಲಿ

ಅಸಂಬದ್ಧವಾದುದರಿಂದ ವ್ಯಾವಹಾರಿಕವಾಗಿರುವ ನಾಮಕಲ್ಪನೆಯು ಯಾವು-ದಾವದರೇನು? ಎಂಬುದು ಅವಳ ಅರಿವಾಗಿದ್ದಿತು. ಆಕೆಯು ಅದನ್ನು ಪತಿಗೆ ಬೋಧಿಸಿ ಕಡೆಯಲ್ಲಿ ಪತಿಯು ವಿವೇಕಿಯಾಗುವನು. ತರುವಾಯ ಪತಿಯ ಇಷ್ಟದಂತೆ ಮದಾಲಸೆಯು ಅಲರ್ಕನಿಗೆ ಪ್ರವೃತ್ತಿಮಾರ್ಗವನ್ನು ಉಪದೇಶಿಸು-ವಳು. ಮತ್ತು ಅಭಯಸ್ಥಿತಿಯನ್ನು ಕೊಡುವ ಉಪದೇಶಗರ್ಭವಾದ ಉಂಗುರ ವನ್ನು ಕೊಡುವಳು. ತರುವಾಯ ಜನನೀ–ಜನಕರು ಅಲರ್ಕನಲ್ಲಿ ರಾಜ್ಯವನ್ನು ಒಪ್ಪಿಸಿ ತಾವು ವನಕ್ಕೆ ತೆರಳುವರು.

ಕಾಲಾಂತರದಲ್ಲಿ ಕಷ್ಟಕ್ಕೆ ಈಡಾದ ಅಲರ್ಕನು ಉಂಗುರದಲ್ಲಿದ್ದ ಸಂದೇಶವಾಣಿಯನ್ನು ಓದಿ ನೋಡುವನು.

ಸಂಗಃ ಸರ್ವಾತ್ಮನಾ ತ್ಯಾಜ್ಯಃ ಸ ಚೇತ್ತ್ಯಕ್ತುಂ ನ ಶಕ್ಯತೇ ।
ಸ ಸದ್ಭಿಃ ಸಹ ಕರ್ತವ್ಯಃ ಸತಾಂ ಸಂಗೋ ಹಿ ಭೇಷಜಮ್ ॥
ಕಾಮಃ ಸರ್ವಾತ್ಮನಾ ಹೇಯೋ ಹಾತುಂ ಚೇಚ್ಛಕ್ಯತೇ ನ ಸಃ ।
ಮುಮುಕ್ಷಾಂ ಪ್ರತಿ ತತ್ಕಾರ್ಯಂ ಸೈವ ತಸ್ಯಾಪಿ ಭೇಷಜಮ್ ॥

ಸಂಗವನ್ನೂ ಕಾಮವನ್ನೂ ತೊರೆಯಲು ಕಷ್ಟವೆನಿಸಿದರೆ ಸಾಧುಸಂಗ-ಮೋಕ್ಷಕಾಮನೆಗಳಿಂದ ಅದನ್ನು ಸಾಧಿಸಬಹುದು. ಎಂಬುದು ಉಪದೇಶದ ಸಾರವು. ಹಾಗೆ ಅಲರ್ಕನು ದತ್ತಾತ್ರೇಯಮುನಿಯ ಸಂಗದಿಂದ ಜ್ಞಾನೋಪ-ದೇಶವನ್ನು ಹೊಂದಿ ಕೃತಾರ್ಥನಾಗುವನು.

ಜನನಿಯ ಉಪದೇಶದಿಂದ ಪ್ರವೃತ್ತಿಧರ್ಮವನ್ನೂ ದತ್ತಾತ್ರೇಯ ಮುನಿಯ ಉಪದೇಶದಿಂದ ನಿವೃತ್ತಿಧರ್ಮವನ್ನೂ ಅಲರ್ಕನು ಅರಿತಿರುವಂತೆ ಈ ಚರಿತ್ರೆಯನ್ನು ಶ್ರದ್ಧೆಯಿಂದ ಓದಿದವರಲ್ಲಿ ಪ್ರವೃತ್ತಿ–ನಿವೃತ್ತಿಧರ್ಮಗಳ ಅರಿವು ಉಂಟಾಗಿ ಅವರಿಗೆ ಶ್ರೇಯಸ್ಸನ್ನು ನೀಡಲು ಈ ಚರಿತ್ರೆಯ ಶ್ರವಣವು ಸಾಧನವಾಗುವುದು.

ಈ ಕಥೆಯು ಹೀಗೆ ಸಮಾಪ್ತಿಗೊಳ್ಳುವಷ್ಟರಲ್ಲಿ ಮಾರ್ಕಂಡೇಯಮುನಿ-ಕ್ರೌಷ್ಟುಕಿ ಇವರೀರ್ವರ ಗುರು–ಶಿಷ್ಯರ ವಾದಕಥೆಯು ಪ್ರಾರಂಭವಾಗುವುದು. ಕ್ರೌಷ್ಟುಕಿಯ ಪ್ರಶ್ನೆಯನ್ನು ಅನುಸರಿಸಿ ಮಾರ್ಕಂಡೇಯ ಮುನಿಯು ವ್ಯಕ್ತ–ಅವ್ಯಕ್ತ ತತ್ತ್ವಗಳು, ಮನ್ವಂತರ, ಭೂಮಂಡಲ ಹಾಗು ಭುವನ ಸನ್ನಿವೇಶ-ಗಳನ್ನು ವಿವರಿಸುವನು.

ಮಾರ್ಕಂಡೇಯ ಮುನಿಯ ಉಪದೇಶದಲ್ಲಿ ಸಂಸಾರತಾಪಗಳಿಂದ ಬೇಸತ್ತ ಮಾನವರು ಗಮನಿಸಬೇಕಾದ ಒಂದು ಮುಖ್ಯ ವಿಷಯವಿದೆ. ನಮ್ಮ ಹಿರಿಯರಲ್ಲಿ ಅನೂಚಾನವಾಗಿ ಅಂತಹ ನಂಬಿಕೆಯು ಬಂದಿರುವುದು. ಅದಕ್ಕೆ ಯುಕ್ತಿ-ಆಧಾರಗಳನ್ನು ಇಲ್ಲಿ ಹೊಂದಬಹುದು. ಉತ್ತಮಸೃಷ್ಟಿಯು ಪ್ರಾದು-ರ್ಭವಿಸಿದಂತೆ ದುಷ್ಟದೇವತೆಗಳ ಸೃಷ್ಟಿಯು ಪ್ರಾದುರ್ಭಾವವಾಗುವುದನ್ನು ತಡೆಯಲಾಗುವುದಿಲ್ಲ. ಸತ್ತ್ವಗುಣದ ಜೊತೆಗೆ ರಜೋಗುಣ-ತಮೋಗುಣ-ಗಳಿಗೂ ಸ್ಥಾನವಿದ್ದೇ ಇದೆ. ಆದರೆ ರಜೋಗುಣ-ತಮೋಗುಣಗಳ ವಿಕಾರ-ಗಳನ್ನು ದೂರಮಾಡಲೆತ್ನಿಸುವ ಜ್ಞಾನಿಯು ಜ್ಞಾನದಿಂದ ವಿವೇಚಿಸಿಕೊಳ್ಳುವಂತೆ ಪ್ರವೃತ್ತಿಮಾರ್ಗಪರನು ತನ್ನ ವರ್ಜ್ಯ-ಅವರ್ಜ್ಯ ಕ್ರಿಯಾಕಲಾಪಗಳಿಂದ ರಜ-ಸ್ತಮೋಗುಣಮಾತ್ರಾತ್ಮಕವಾದ ದುರ್ದೇವತೆಗಳ ಪೀಡೆಯಿಂದ ಪಾರಾಗಬಲ್ಲನು.

ಮಾರ್ಕಂಡೇಯ ಮುನಿಯು ಅಂತಹ ದುರ್ದೇವತೆಗಳ ಕ್ರೋಧ-ಆವೇಶ-ಹಾಗು ಅವುಗಳ ಶಮನೋಪಾಯಗಳನ್ನು ವಿವರಿಸಿರುವನು. ಬಾಲಕ-ಗರ್ಭಿಣಿ ಮುಂತಾದವರಲ್ಲಿ ದುರ್ದೇವತೆಗಳ ಆವೇಶವು ಸುಲಭವಾಗಿ ಆಗಬಹುದಾದ್ದರಿಂದ ಅದನ್ನು ತಡೆಗಟ್ಟಲು ಜಾಗರೂಕತೆಯಿಂದ ರಕ್ಷಾವಿಧಾನವನ್ನು ಆಚರಿಸುವುದು ಆವಶ್ಯಕವೆಂಬುದನ್ನು ತೋರಿಸಿರುವನು. ಅದನ್ನು ತಿಳಿಯುವುದು ಜನ್ಮಾಂತರದ ಭಾವಾವೇಶಗಳಿಂದ ತುಂಬಿದ ನಮ್ಮ ಮುಖ್ಯ ಕರ್ತವ್ಯವಾಗಿದೆ.

ಕಡೆಯಲ್ಲಿ ಭರತಖಂಡದ ಮಹಿಮೆಯನ್ನು ಪ್ರಕಾಶಪಡಿಸಿದೆ. ಅದನ್ನು ಭಾರತದಲ್ಲಿ ವಾಸಮಾಡುವ ನಾವು ಹೆಮ್ಮೆಯಿಂದ ಓದಿಕೊಳ್ಳುತ್ತ ಅದರ ಮಹಿಮೆಯನ್ನು ಹಾಗೆಯೇ ಉಳಿಯುವಂತೆ ವರ್ತಿಸಬೇಕು. ಆ ಪ್ರಶಂಸೆಯ ಪ್ರಣಾಳಿಕೆಯಲ್ಲಿ—

ದೇವಾನಾಮಪಿ ವಿಪ್ರರ್ಷೇ ಸದಾ ಏಷ ಮನೋರಥಃ ।
ಅಪಿ ಮಾನುಷ್ಯಮಾಪ್ಸ್ಯಾಮೋ ದೇವತ್ವಾತ್ಪ್ರಚ್ಯುತಾಃ ಕ್ಷಿತೌ ॥
ಮನುಷ್ಯಃ ಕುರುತೇ ತತ್ತು ಯನ್ನ ಶಕ್ಯಂ ಸುರಾಸುರೈಃ ।
ತತ್ಕರ್ಮನಿಗಡಗ್ರಸ್ತೈಃ ಸ್ವಕರ್ಮಖ್ಯಾಪನೋತ್ಸುಕೈಃ ।
ನ ಕಿಂಚಿತ್ಕ್ರಿಯತೇ ಕರ್ಮ ಸುಖಲೇಶೋಪಬೃಂಹಿತೈಃ ॥

ದೇವತೆಗಳು "ತಮ್ಮ ಪುಣ್ಯಕರ್ಮವು ಕ್ಷಯಿಸಿದ ಬಳಿಕ ಕರ್ಮಭೂಮಿಯಲ್ಲಿ ಮನುಷ್ಯರಾಗಿ ಜನಿಸುವ ಭಾಗ್ಯವು ನಮಗೆ ದೊರಕೀತೆ! ಈ ಸುಖಲೇಶದಿಂದ ಮೈಮರೆತಿರುವ ದೇವ-ದಾನವರಿಂದ ಮಾಡಲಾಗದ ಸತ್ಕರ್ಮಗಳನ್ನು

ಮಾಡಿ ಮಾನವರು ಶಾಶ್ವತ ಸುಖನಿಧಿಯನ್ನು ಅರ್ಜಿಸುವ ಅವಕಾಶವನ್ನು ಹೊಂದಿರುವುದು ಎಂತಹ ಭಾಗ್ಯ!" ಎಂದು ಯೋಚಿಸುತ್ತಿರುವರು. ಭಾರತ-ವರ್ಷದ ಪ್ರಶಂಸಾಪ್ರಣಾಳಿಕೆಯಲ್ಲಿ ರತ್ನಪ್ರಾಯವಾದ ಈ ವಚನಗಳು ರೋಮಾಂಚಕಾರಕವಾಗಿರುವುದರಲ್ಲಿ ಸಂದೇಹವಿಲ್ಲ.

ಆಳುವ ಮಹಾಸ್ವಾಮಿಯವರು **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಬಿ., ಜಿ. ಸಿ. ಎಸ್. ಐ.,** ರವರ ಆಜ್ಞೆಯಂತೆ ಸಂಸ್ಕೃತವಲ್ಲಿದ್ದ ಈ ಗ್ರಂಥವನ್ನು ಕನ್ನಡಿಗರ ತಿಳಿವಳಿಕೆಗಾಗಿ ಕನ್ನಡಕ್ಕೆ ಪರಿವರ್ತನ ಮಾಡಿರುತ್ತೇನೆ. ಆಸ್ತಿಕಶಿರೋಮಣಿಗಳಾದ ಮಹಾಪ್ರಭುಗಳವರು ಪವಿತ್ರ ವಾಙ್ಮಯದ ಪ್ರಸಾರದಿಂದ ಸರಸ್ವತೀದೇವಿಯ ಉಪಾಸಕರಾಗಿ ಲೋಕಕ್ಕೆ ಮಹೋಪಕಾರವನ್ನು ಮಾಡುತ್ತ ಭರತಖಂಡದ ರಾಜಾಧಿರಾಜರಲ್ಲಿ ಅದ್ವಿತೀಯ-ರೆಂದು ಖ್ಯಾತಿಗಳಿಸಿರುವರು. ಕರ್ಣಾಟಕದ ಪ್ರಜಾಕೋಟಿಯ ಭಾಗ್ಯದೇವತೆ-ಯಂತಿರುವ ಮಹಾಸ್ವಾಮಿಯವರು ಸತ್ಪತ್ನೀ-ಪುತ್ರರತ್ನ-ಪರಿವಾರಸಮೇತರಾಗಿ ದೀರ್ಘಾಯುರಾರೋಗ್ಯಾದಿ ಸಕಲ ಸನ್ಮಂಗಳಗಳನ್ನು ಚಿರಕಾಲ ಅನುಭವಿಸು-ವಂತೆ ಕರುಣಿಸಲೆಂದು ಶ್ರೀ ಚಾಮುಂಡಾಂಬಿಕೆಯನ್ನು ಅನನ್ಯಭಕ್ತಿಯಿಂದ ಪ್ರಾರ್ಥಿಸುತ್ತೇನೆ.

ಹೀಗೆ ಈ ಗ್ರಂಥವು ಪ್ರಕಾಶಕ್ಕೆ ಬಂದು ಸಜ್ಜನರ ಸೇವೆಮಾಡಲು ಅವಕಾಶಮಾಡಿಕೊಟ್ಟ ಮಹನೀಯರಲ್ಲಿ ಕೃತಜ್ಞತೆಯನ್ನು ಅರ್ಪಿಸುತ್ತ ವಾಚಕರ ಹೃದಯದಲ್ಲಿ ಜ್ಞಾನಪ್ರಕಾಶವನ್ನು ಬೀರುವ ಈ ಗ್ರಂಥದಿಂದ ರಾಜಮನೆತನದ ಕೀರ್ತಿಯು ಆಚಂದ್ರಾರ್ಕವಾಗಿ ಉಜ್ವಲವಾಗಿರಲೆಂದು ಕೋರುತ್ತೇನೆ.

ಮೈಸೂರು
ತಾ|| 9—10—1953

ಅನುವಾದಕ
ಪಾಟಣಕರ ಚಂದ್ರಶೇಖರಭಟ್ಟ

ವಿಷಯಾನುಕ್ರಮಣಿಕೆ

ಅಧ್ಯಾಯ	ವಿಷಯ	ಪುಟ
೨೩.	ಕುವಲಯಾಶ್ವ-ಮದಾಲಸೆಯರಿಗೆ ಜನಿಸಿದ ಮೂರು ಮಂದಿ ಪುತ್ರರಿಗೆ ಮದಾಲಸೆಯು ಜ್ಞಾನೋಪದೇಶವನ್ನು ಮಾಡಿದುದು. ಅವರು ನಿವೃತ್ತಿಮಾರ್ಗವನ್ನು ಕೈಗೊಂಡುದು. ಮತ್ತು ನಾಲ್ಕನೆಯ ಪುತ್ರನಾದ ಅಲರ್ಕನಿಗೆ ಪತಿಯ ಇಷ್ಟದಂತೆ ಮದಾಲಸೆಯು ಪ್ರವೃತ್ತಿಮಾರ್ಗವನ್ನು ಉಪದೇಶಿಸಿದುದು.	೧
೨೪.	ಇಂದ್ರ ಮುಂತಾದ ಲೋಕಪಾಲಾಂಶಗಳಿಂದ ಕೂಡಿದ ರಾಜನಲ್ಲಿರಬೇಕಾದ ರಾಜಧರ್ಮಗಳನ್ನು ಮದಾಲಸೆಯು ಅಲರ್ಕನಿಗೆ ಬೋಧಿಸಿದುದು.	೧೯
೨೫.	ಮದಾಲಸೆಯು ಅಲರ್ಕನಿಗೆ ಬ್ರಹ್ಮಚರ್ಯ ಮುಂತಾದ ನಾಲ್ಕು ಆಶ್ರಮಗಳ ಧರ್ಮಗಳನ್ನು ಉಪದೇಶಿಸಿದುದು.	೨೮
೨೬.	ಗೃಹಸ್ಥಧರ್ಮವನ್ನು ವಿಶೇಷವಾಗಿ ಬೋಧಿಸಿದುದು. ಗೃಹಸ್ಥನು ಮಾಡುವ ಪಂಚಮಹಾಯಜ್ಞಗಳ ಪ್ರತಿಪಾದನೆ.	೩೮
೨೭.	ನಿತ್ಯ-ನೈಮಿತ್ತಿಕ ಶ್ರಾದ್ಧಕರ್ಮವಿಧಾನದ ಉಪದೇಶವು.	೫೧
೨೮.	ಶ್ರಾದ್ಧಪ್ರಯೋಗ ನಿರೂಪಣ, ಶ್ರಾದ್ಧದಲ್ಲಿ ವರ್ಜ್ಯ-ಅವರ್ಜ್ಯಗಳ ಬೋಧನೆ.	೫೮
೨೯.	ಶ್ರಾದ್ಧಕಲ್ಪದಲ್ಲಿ ವಿಶೇಷವಾಗಿ ಪಿತೃಪ್ರೀತಿಕರವಾದ ಉಪಕರಣಗಳನ್ನು ಬೋಧಿಸಿದುದು.	೭೫
೩೦.	ತಿಥಿ, ನಕ್ಷತ್ರ ವಿಶೇಷಗಳಲ್ಲಿ ಮಾಡಬೇಕಾದ ಕಾಮ್ಯಶ್ರಾದ್ಧಗಳು ಮತ್ತು ಅದರಿಂದ ಲಭಿಸುವ ಫಲಗಳು.	೮೬

ಅಧ್ಯಾಯ	ವಿಷಯ	ಪುಟ
೩೧.	ಬ್ರಾಹ್ಮಮುಹೂರ್ತದಲ್ಲಿ ಎಚ್ಚರಹೊಂದಿ ಮತ್ತೆ ರಾತ್ರಿಯಲ್ಲಿ ನಿದ್ರಿಸುವ ವರೆಗಿನ ಸದಾಚಾರ ನಿರೂಪಣೆ, ಧನದ ಆದಾಯ-ವ್ಯಯಗಳ ವ್ಯವಸ್ಥೆ.	೯೧
೩೨.	ಅಶುಚಿದ್ರವ್ಯಗಳ ಶುದ್ಧೀಕರಣ, ಗೃಹಸ್ಥನಿಗೆ ವರ್ಜ್ಯ-ಅವರ್ಜ್ಯ ವಸ್ತುಗಳ ಬೋಧನ.	೧೨೪
೩೩.	ಕುವಲಯಾಶ್ವ-ಮದಾಲಸೆಯರು ತಪೋವನಕ್ಕೆ ತೆರಳುವುದು. ಕಡೆಯದಾಗಿ ಮದಾಲಸೆಯು ಉಪದೇಶಾಕ್ಷರಗಳಿಂದ ಕೂಡಿದ ಉಂಗುರವನ್ನು ಅಲರ್ಕನ ಕೈಯಲ್ಲಿ ಕೊಟ್ಟು ಉಪದೇಶ-ಮಾಡುವುದು.	೧೫೦
೩೪.	ಅಲರ್ಕನು ತನ್ನ ಕಷ್ಟಸಮಯದಲ್ಲಿ ಉಂಗುರದಲ್ಲಿದ್ದ ಉಪದೇ-ಶಾಕ್ಷರಗಳನ್ನು ನೋಡಿ ಸತ್ಸಂಗದ ಬಯಕೆಯಿಂದ ದತ್ತಾತ್ರೇಯ ಮುನಿಯನ್ನು ಸೇವಿಸಿದುದು.	೧೫೩
೩೫.	ದತ್ತಾತ್ರೇಯಮುನಿಯು ಅಲರ್ಕನಿಗೆ ಅಜ್ಞಾನವೃಕ್ಷವನ್ನು ಪ್ರಕಾಶ-ಪಡಿಸುವುದು, ಹಾಗು ತನ್ನ ಪ್ರಶ್ನೆಯಿಂದ ಅಲರ್ಕನಿಗೆ ಆತ್ಮಜ್ಞಾನ ಮಾರ್ಗವನ್ನು ಸೂಚಿಸುವುದು.	೧೬೫
೩೬.	ದತ್ತಾತ್ರೇಯಮುನಿಯ ಅಷ್ಟಾಂಗಯೋಗನಿರೂಪಣ, ಮತ್ತು ಯೋಗಸಿದ್ಧಿಯ ಲಕ್ಷಣಗಳು.	೧೭೧
೩೭.	ಯೋಗಾಭ್ಯಾಸದಲ್ಲಿ ಒದಗುವ ಉಪಸರ್ಗಗಳು, ಅವುಗಳ ಶಮ-ನೋಪಾಯವು. ಮತ್ತು ‘ ಅಣಿಮಾ ’ ಮುಂತಾದ ಅಷ್ಟೈಶ್ವರ್ಯ ಸಿದ್ಧಿಯ ವಿವರಣೆ.	೧೮೯
೩೮.	ಯೋಗಿಚರ್ಯಾ :—ಭಿಕ್ಷಾಚರಣ, ಭಿಕ್ಷಾನ್ನಸೇವನ, ಏಕಾಂತ-ವಾಸ ಮೊದಲಾದುವುಗಳ ಉಪದೇಶ.	೨೦೨

ಅಧ್ಯಾಯ	ವಿಷಯ	ಪುಟ
೩೯.	ಯೋಗಿಯು ಪರಮಾತ್ಮಪ್ರಾಪ್ತಿಗೆ ಮಾಡಬೇಕಾದ ಓಂಕಾರ ಉಪಾಸನದ ವಿಧಾನ, ಓಂಕಾರದ ಸ್ವರೂಪನಿರೂಪಣ.	೨೦೮
೪೦.	ಮರಣಸೂಚಕವಾದ ಅರಿಷ್ಟಗಳು, ಅರಿಷ್ಟಗಳನ್ನು ನೋಡಿದ ಯೋಗಿಗೆ ಇರಬೇಕಾದ ದೃಢಸಂಕಲ್ಪ ಮತ್ತು ಅವನ ಕಾಲ-ಯಾಪನ. ಅಲರ್ಕನಿಗೆ ವೈರಾಗ್ಯಹುಟ್ಟಿ ರಾಜ್ಯವನ್ನು ಕಾಶಿರಾಜ-ನಿಗೆ ಅರ್ಪಿಸುವುದು.	೨೧೪
೪೧.	ಕಾಶಿರಾಜನು ಸುಬಾಹುವಿನಿಂದ ತತ್ತ್ವೋಪದೇಶವನ್ನು ಪಡೆದು ಅಲರ್ಕನಿಗೆ ರಾಜ್ಯವನ್ನು ಬಿಟ್ಟು ಅವನನ್ನು ಗೌರವಿಸಿ ಹಿಂದಕ್ಕೆ ಹೋದುದು. ಅಲರ್ಕನು ಸರ್ವಸಂಗತ್ಯಾಗವನ್ನು ಮಾಡಿ ಕೃತ-ಕೃತ್ಯನಾದುದು.	೨೩೫
೪೨.	ಕ್ರೌಷ್ಟುಕಿಶಿಷ್ಯನಿಗೆ ಮಾರ್ಕಂಡೇಯಮುನಿಯು ವ್ಯಕ್ತ-ಅವ್ಯಕ್ತ ತತ್ತ್ವಗಳ ಸೃಷ್ಟಿಯನ್ನು ವಿವರಿಸಿದುದು. ಮತ್ತು ಬ್ರಹ್ಮದೇವನ ಉತ್ಪತ್ತಿ.	೨೪೭
೪೩.	ತ್ರಿಮೂರ್ತಿಗಳ ನಿರೂಪಣ ಮತ್ತು ಕಾಲವಿಭಾಗ ವಿವರಣ.	೨೬೬
೪೪.	ಪ್ರಾಕೃತ-ವೈಕೃತ ಸೃಷ್ಟಿಯ ನಿರೂಪಣ. ವರಾಹಾವತಾರದಿಂದ ಶ್ರೀಮನ್ನಾರಾಯಣನು ಭೂಮಿಯನ್ನು ಸಮುದ್ರದಿಂದ ಮೇಲಕ್ಕೆ ಎತ್ತುವುದು.	೨೭೯
೪೫.	ಸತ್ತ್ವ, ರಜಸ್ಸು, ತಮಸ್ಸು—ಎಂಬ ಗುಣತ್ರಯಗಳ ಪರಿಣಾಮ-ದಿಂದ ದೇವ-ಅಸುರ ಮುಂತಾದ ವಿಚಿತ್ರ ಸೃಷ್ಟಿನಿರ್ಮಾಣ.	೨೮೯
೪೬.	ಮಿಥುನಭಾವದಿಂದ ಮಾನುಷ ಸೃಷ್ಟಿ ಮತ್ತು ಸ್ಥಾನ ಕಲ್ಪನಾ ಮುಂತಾದ ಮಾನವ ಸೃಷ್ಟಿಯ ವಿಕಾಸ.	೩೦೧

ಅಧ್ಯಾಯ	ವಿಷಯ	ಪುಟ
೪೭.	ದೇವಾದಿ-ಸ್ಥಾವರಾಂತ ಸೃಷ್ಟಿ, ಮಾನಸಪ್ರಜಾನಿರ್ಮಾಣ, ಧರ್ಮ-ಅಧರ್ಮಯೋನಿಯಾದ ಪ್ರಜಾಪ್ರಾದುರ್ಭಾವ ಮತ್ತು ಯಕ್ಷರಾಜನ ಉತ್ಪತ್ತಿ.	೩೨೨
೪೮.	ಮನ್ಸಹಸಿಂದ ಸಾವಿರಾರು ಮಂದಿ ದುರ್ದೇವತೆಗಳ ಉತ್ಪತ್ತಿ, ದುರ್ದೇವತೆಗಳ ಆವೇಶ ಮತ್ತು ಅವುಗಳ ಪರಿಹಾರಮಾರ್ಗ.	೩೪೭
೪೯.	ರುದ್ರಸೃಷ್ಟಿ, ರುದ್ರದೇವನ ಮೂರ್ತಿ–ಪತ್ನಿ–ಪುತ್ರ–ಸ್ಥಾನ ಮತ್ತು ನಾಮಗಳ ಅಷ್ಟಕಗಳು.	೩೭೮
೫೦.	ಸ್ವಾಯಂಭುವ ಮನ್ವಂತರದ ಚರಿತ್ರೆ, ಮನ್ವಂತರಕಾಲದ ಪರಿಮಾಣ.	೩೮೭
೫೧.	ಭುವನಕೋಶದಲ್ಲಿ ಜಂಬೂದ್ವೀಪವರ್ಣನೆ.	೪೦೦
೫೨.	ಜಂಬೂದ್ವೀಪದ ಉಪಖಂಡಗಳು, ಅಲ್ಲಿರುವ ವನ, ಪರ್ವತ ಮುಂತಾದುವು.	೪೦೯
೫೩.	ವಿಷ್ಣುಪಾದಾಬ್ಜದಿಂದ ಹುಟ್ಟಿದ ಗಂಗೆಯು ಮಂದರ ಮುಂತಾದ ಪರ್ವತಗಳಲ್ಲಿ ಪ್ರವಹಿಸಿ ಭೂಮಂಡಲವನ್ನು ಪಾವನಗೊಳಿಸಿದುದು.	೪೧೫
೫೪.	ಭರತಖಂಡದಲ್ಲಿರುವ ನದೀ-ಪರ್ವತ-ದೇಶ ವಿಶೇಷಗಳ ವಿಭಾಗ ಮತ್ತು ಭರತಭೂಮಿಯ ಪ್ರಶಂಸೆ.	೪೩೨

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ತ್ರಯೋವಿಂಶೋಽಧ್ಯಾಯಃ

(ಪ್ರವೃತ್ತಿಮಾರ್ಗಾನುಶಾಸನಂ)

ಪುತ್ರ ಉವಾಚ :—

ಆಗಮ್ಯ ಸ್ವಪುರಂ ಸೋಽಥ ಪಿತ್ರೋಃ ಸರ್ವಮಶೇಷತಃ ।
ಕಥಯಾಮಾಸ ತನ್ವಙ್ಗೀ ಯಥಾ ಪ್ರಾಪ್ತಾ ಪುನರ್ಮೃತಾ ॥೧॥

ನನಾಮ ಸಾಪಿ ಚರಣೌ ಶ್ವಶ್ರ್ವೋಃ ಶ್ವಶುರಯೋಃ ಶುಭಾ ।
ಸ್ವಜನಂ ಚ ಯಥಾಪೂರ್ವಂ ವನ್ದನಾಶ್ಲೇಷಣಾದಿಭಿಃ ॥೨॥

ಇಪ್ಪತ್ತಮೂರನೆಯ ಅಧ್ಯಾಯ

ಪುತ್ರನು ಇಂತೆಂದನು :—

೧. ತರುವಾಯ ಆ ಋತಧ್ವಜನು ತನ್ನ ನಗರಕ್ಕೆ ಬಂದು ಕೃಶಾಂಗಿಯಾದ ತನ್ನ ಪ್ರೇಯಸಿಯು ಮೃತಳಾದವಳು ಮತ್ತೆ ಹೇಗೆ ಲಭಿಸಿದಳೆಂಬ ವೃತ್ತಾಂತವನ್ನು ಸಂಪೂರ್ಣವಾಗಿ ತನ್ನ ಮಾತಾಪಿತೃಗಳಿಗೆ ತಿಳಿಸಿದನು.

೨. ಮಂಗಳಾಚಾರವನ್ನು ತಿಳಿದ ಮದಾಲಸೆಯು ಅತ್ತೆ-ಮಾವಂದಿರ ಪಾದಗಳಿಗೆ ವಂದಿಸಿದಳು. ಮತ್ತು ಮೊದಲಿನಂತೆ ತನ್ನ ಬಂಧುಜನರಲ್ಲಿ ನಮಸ್ಕಾರ-ಆಲಿಂಗನ ಮುಂತಾದುವುಗಳನ್ನು ಉಚಿತರೀತಿಯಲ್ಲಿ ಮಾಡಿದಳು.

ಪೂಜಯಾಮಾಸ ತನ್ವಙ್ಗೀ ಯಥಾನ್ಯಾಯಂ ಯಥಾವಯಃ ।
ತತೋ ಮಹೋತ್ಸವೋ ಜಜ್ಞೇ ಪೌರಾಣಾಂ ತತ್ರ ವೈ ಪುರೇ ॥೩॥

ಋತಧ್ವಜಶ್ಚ ಸುಚಿರಂ ತಯಾ ರೇಮೇ ಸುಮಧ್ಯಯಾ ।
ನಿರ್ಝರೇಷು ಚ ಶೈಲಾನಾಂ ನಿಮ್ನಗಾಪುಲಿನೇಷು ಚ ॥೪॥

ಕಾನನೇಷು ಚ ರಮ್ಯೇಷು ವನೇಷೂಪವನೇಷು ಚ ॥೫॥

ಪುಣ್ಯಕ್ಷಯಂ ವಾಞ್ಛಮಾನಾ ಸಾಪಿ ಕಾಮೋಪಭೋಗತಃ ।
ಸಹ ತೇನಾತಿಕಾನ್ತಾಸು ರೇಮೇ ರಮ್ಯಾಸು ಭೂಮಿಷು ॥೬॥

ತತಃ ಕಾಲೇನ ಮಹತಾ ಶತ್ರುಜಿತ್ಸ ನರಾಧಿಪಃ ।
ಸಮ್ಯಕ್ಪ್ರಶಾಸ್ಯ ವಸುಧಾಂ ಕಾಲಧರ್ಮಮುಪೇಯಿವಾನ್ ॥೭॥

---

೩. ಮದಾಲಸೆಯು ತನ್ನ ಬಂಧುಜನರ ಗುಂಪಿನಲ್ಲಿ ಅವರವರ ವಯಸ್ಸಿನ ಔಚಿತ್ಯವನ್ನು ಅನುಸರಿಸಿ ವಂದನೆ-ಆಲಿಂಗನಗಳನ್ನು ಮಾಡಿ ಸತ್ಕರಿಸಿದಳು. ಆಗ ಆ ನಗರದಲ್ಲಿ ಪುರಜನರಿಗೆ ಮಹೋತ್ಸವವಾದಂತೆ ಆನಂದ ವುಂಟಾಯಿತು.

೪. ಋತಧ್ವಜನು ಸುಂದರಾಂಗಿಯಾದ ಮದಾಲಸೆಯೊಡನೆ ಗಿರಿಗಳ ನದೀಪ್ರಪಾತಗಳಲ್ಲಿಯೂ, ನದಿಗಳ ತೀರದಲ್ಲಿರುವ ಮರಳುದಿಣ್ಣೆಗಳಲ್ಲಿಯೂ ತನ್ನ ಇಷ್ಟದಂತೆ ಚಿರಕಾಲ ರಮಿಸಿದನು.

೫. ಹಾಗು ಋತಧ್ವಜ-ಮದಾಲಸೆಯರಿಗೆ ರಮಣೀಯವಾದ ಅನೇಕ ಅರಣ್ಯಗಳೂ ಮತ್ತು ಉಪವನಗಳೂ ರತಿಭೋಗಕ್ಕೆ ಅನುರೂಪವಾದ ವಿಹಾರಸ್ಥಾನಗಳಾದುವು.

೬. ಮದಾಲಸೆಯು ಋತಧ್ವಜನೊಡನೆ ಕಾಮಸುಖವನ್ನು ಭುಂಜಿಸಿ ಆರ್ಜಿತವಾದ ಪುಣ್ಯಕರ್ಮವನ್ನು ಕ್ಷಯಗೊಳಿಸುವ ಅಭಿಲಾಷೆಯುಳ್ಳವಳಾಗಿ ಪ್ರಿಯನೊಡನೆ ರಮ್ಯವೂ ಚಿತ್ತಾಕರ್ಷಕವೂ ಆದ ವನಭೂಮಿಗಳಲ್ಲಿ ರಮಿಸಿದಳು.

೭. ತರುವಾಯ ಅನೇಕಕಾಲವು ಕಳೆಯಲಾಗಿ ಶತ್ರುಜಿತನೆಂಬ ರಾಜನು ಭೂಮಿಯನ್ನು ಪ್ರಜಾರಂಜನೆಯಾಗುವಂತೆ ಚನ್ನಾಗಿ ಆಳಿ ಕಡೆಯಲ್ಲಿ ಮರಣವನ್ನೈದಿದನು.

ತತಃ ಪೌರಾ ಮಹಾತ್ಮಾನಂ ಪುತ್ರಂ ತಸ್ಯ ಋತಧ್ವಜಮ್ ।
ಅಭ್ಯಷಿಞ್ಚನ್ತ ರಾಜಾನಮುದಾರಾಚಾರಚೇಷ್ಟಿತಮ್ ॥೮॥

ಸಮ್ಯಕ್ಪಾಲಯತಸ್ತಸ್ಯ ಪ್ರಜಾ: ಪುತ್ರಾನಿವೌರಸಾನ್ ।
ಮದಾಲಸಾಯಾಃ ಸಞ್ಜಜ್ಞೇ ಪುತ್ರಃ ಪ್ರಥಮಜಸ್ತತಃ ॥೯॥

ತಸ್ಯ ಚಕ್ರೇ ಪಿತಾ ನಾಮ ವಿಕ್ರಾನ್ತ ಇತಿ ಧೀಮತಃ ।
ತುತುಷುಸ್ತೇನ ವೈ ಭೃತ್ಯಾ ಜಹಾಸ ಚ ಮದಾಲಸಾ ॥೧೦॥

ಸಾ ವೈ ಮದಾಲಸಾ ಪುತ್ರಂ ಬಾಲಮುತ್ತಾನಶಾಯಿನಮ್ ।
ಉಲ್ಲಾಪನಚ್ಛಲೇನಾಹ ರುದಮಾನಮವಿಸ್ವರಮ್ ॥೧೧॥

---

೮. ಅನಂತರದಲ್ಲಿ ಪುರಜನರು ಮಹಾತ್ಮನೂ, ಉದಾರವಾದ ವೃತ್ತಿ-ಸದಾಚಾರಗಳಿಂದ ಶೋಭಿತನೂ ಆಗಿ ರಾಜಪದವಿಗೆ ಅರ್ಹನಾಗಿದ್ದ ಶತ್ರುಜಿತ-ರಾಜನ ಪುತ್ರನಾದ ಋತಧ್ವಜನನ್ನು ರಾಜಸಿಹ್ಮಾಸನದಲ್ಲಿ ಪಟ್ಟಾಭಿಷೇಕ ಮಾಡಿದರು.

೯. ಆಮೇಲೆ ಪ್ರಜೆಗಳನ್ನು ತನ್ನ ಔರಸಪುತ್ರರಂತೆ ಉತ್ತಮವಾಗಿ ರಕ್ಷಿಸುತ್ತಿರಲು ಋತಧ್ವಜನಿಗೆ ಮದಾಲಸೆಯಲ್ಲಿ ಮೊದಲನೆಯ ಒಬ್ಬ ಪುತ್ರನು ಜನಿಸಿದನು.

೧೦. ತಂದೆಯಾದ ಋತಧ್ವಜನು ಬಹು ಪ್ರತಿಭಾಶಾಲಿಯಾಗುವ ತನ್ನ ಪ್ರಥಮ ಪುತ್ರನಿಗೆ "ವಿಕ್ರಾಂತ" ಎಂದು ಹೆಸರಿಟ್ಟನು. ರಾಜನ ಎಲ್ಲ ಪೋಷ್ಯವರ್ಗವು ಆ ಹೆಸರನ್ನು ಕೇಳಿ ಸಂತೋಷಪಟ್ಟಿತು. ಆದರೆ ಮದಾಲಸೆಯು ನಕ್ಕುಬಿಟ್ಟಳು.

೧೧. ಮದಾಲಸೆಯು ಅಂಗಾತನಾಗಿ ಮಲಗಿ ಮಧುರಸ್ವರದಿಂದ ಅಳುತ್ತಿದ್ದ ಮಗುವನ್ನು ಸಮಾಧಾನ ಮಾಡಲು ವಾತ್ಸಲ್ಯದಿಂದ ಮಾತನಾಡಿಸುವ ನೆಪದಿಂದ ಮಗುವಿಗೆ ಹೀಗೆ ಹೇಳುತ್ತಿದ್ದಳು.

ಶುದ್ಧೋಽಸಿ ರೇ ತಾತ ನ ತೇಽಸ್ತಿ ನಾಮ
ಕೃತಂ ಚ ತೇ ಕಲ್ಪನಯಾಧುನೈವ ।
ಪಞ್ಚಾತ್ಮಕಂ ದೇಹಮಿದಂ ನ ತೇಽಸ್ತಿ
ನೈವಾಸ್ಯ ತ್ವಂ ರೋದಿಷಿ ಕಸ್ಯ ಹೇತೋಃ ॥೧೨॥

ನ ವಾ ಭವಾನ್ ರೋದಿತಿ ವೈ ಸ್ವಜನ್ಮಾ
ಶುದ್ಧೋಽಯಮಾಸಾದ್ಯ ಮಹೀಸಮೂಹಮ್ ।
ವಿಕಲ್ಪ್ಯಮಾನೋ ವಿವಿಧೈರ್ಗುಣಾರ್ಥೈ-
ರ್ಗುಣಾಶ್ಚ ಭೌತಾಃ ಸಕಲೇನ್ದ್ರಿಯೇಷು ॥೧೩॥

ಭೂತಾನಿ ಭೂತೈಃ ಪರಿದುರ್ಬಲಾನಿ
ವೃದ್ಧಿಂ ಸಮಾಯಾನ್ತಿ ಯಥೇಹ ಪುಂಸಃ ।
ಅನ್ನಾಮ್ಬುಪಾನಾದಿಭಿರೇವ ಕಸ್ಯ
ನ ತೇಽಸ್ತಿ ವೃದ್ಧಿರ್ನ ಚ ತೇಽಸ್ತಿ ಹಾನಿಃ ॥೧೪॥

---

೧೨. ಎಲೈ ಮಗುವೆ! ನೀನು ಪರಿಶುದ್ಧನಾಗಿದ್ದೀಯೆ. ಸ್ವಾಭಾವಿಕವಾಗಿ ನಿನಗೆ ನಾಮವು ಇಲ್ಲ. ನಾಮರಹಿತನಾದ ನಿನಗೆ ಈಗ ಕಲ್ಪನೆಯಿಂದ ಒಂದು ನಾಮಧೇಯವು ಇರಿಸಲ್ಪಟ್ಟಿದೆ. ಭೂಮಿ ಮೊದಲಾದ ಪಂಚಭೂತಗಳಿಂದ ಉಂಟಾಗಿರುವ ಈ ದೇಹವು ನಿನ್ನದಾಗಿಲ್ಲ. ಮತ್ತು ನೀನು ದೇಹಸಂಬಂಧಿಯೂ ಆಗಿಲ್ಲ. ಏಕೆ ಅಳುತ್ತಿದ್ದೀಯೆ ?

೧೩. ಪರಿಶುದ್ಧನಾದ ನೀನು ಪೃಥಿವೀ ಮುಂತಾದ ಭೂತಗ್ರಾಮವೆಂಬ ಉಪಾಧಿಯನ್ನು ಹೊಂದಿ ಜನ್ಮವೆತ್ತಿದವನಂತೆ ಆಗಿದ್ದೀಯೆ. ಮತ್ತು ನಾನಾವಿಧವಾದ ಕರ್ತೃತ್ವ-ಭೋಕ್ತೃತ್ವ ಮೊದಲಾದ ಗುಣವಿಕಾರಗಳಿಂದ ಕೂಡಿದವನಂತೆ ಕಲ್ಪಿಸಲ್ಪಡುತ್ತಿದ್ದೀಯೆ. ಆದರೆ ಆ ಕರ್ತೃತ್ವ ಮುಂತಾದುವುಗಳು ಭೂತಭೌತಿಕ, ಸತ್ತ್ವ ಮುಂತಾದ ಗುಣವರ್ಗಗಳಿಗೆ ಸೇರಿರುವುವು. ನೀನು ಅಳಬೇಡ ಮಗು !

೧೪. ಮಾನವನ ಪಂಚಭೂತಗಳು ರೋಗಾದಿಗಳಿಂದ ದುರ್ಬಲವಾದಾಗ ಭೂತಸಂಯೋಗದಿಂದ ವೃದ್ಧಿಯನ್ನು ಹೊಂದಿದಂತೆ ಅನ್ನ-ಪಾನೀಯಗಳ ಸೇವನೆಯಿಂದ ಉಂಟಾಗುವ ವೃದ್ಧಿ-ಕ್ಷಯಗಳು ದೇಹಮಾತ್ರಕ್ಕೆ ಸಂಭವಿಸುವುವು. ಆತ್ಮನಿಗೆ ವೃದ್ಧಿ-ಕ್ಷಯಗಳು ಇರುವುದಿಲ್ಲ.

ತ್ವಂ ಕಞ್ಚುಕೇ ಶೀರ್ಯಮಾಣೇ ನಿಜೇಽಸ್ಮಿಂ-
ಸ್ತಸ್ಮಿನ್ಸ್ವದೇಹೇ ಮೂಢತಾಂ ಮಾ ವ್ರಜೇಥಾಃ ।
ಶುಭಾಶುಭೈಃ ಕರ್ಮಭಿರ್ದೇಹಮೇತ-
ನ್ಮದಾದಿಮೂಢೈಃ ಕಞ್ಚುಕಸ್ತೇ ಪಿನದ್ಧಃ ॥೧೫॥

ತಾತೇತಿ ಕಿಂಚಿತ್ತನಯೇತಿ ಕಿಂಚಿ-
ದಮ್ಬೇತಿ ಕಿಂಚಿದ್ದಯಿತೇತಿ ಕಿಂಚಿತ್ ।
ಮಮೇತಿ ಕಿಂಚಿನ್ನ ಮಮೇತಿ ಕಿಂಚಿ-
ದ್ಭೌತಂ ಹಿ ಸಙ್ಘಂ ಬಹುಧಾ ಲಪೇಥಾಃ ॥೧೬॥

ದುಃಖಾನಿ ದುಃಖೋಪಗಮಾಯ ಭೋಗಾನ್
ಸುಖಾನಿ ಜಾನಾತಿ ವಿಮೂಢಚೇತಾಃ ।
ತಾನ್ಯೇವ ದುಃಖಾನಿ ಪುನಃ ಸುಖಾನಿ
ಜಾನಾತಿ ವಿದ್ವಾನವಿಮೂಢಚೇತಾಃ ॥೧೭॥

---

೧೫. ಪುತ್ರನೆ! ನಿನ್ನ ನಿಜದೇಹವು ಆತ್ಮನಿಗೆ ಕಂಚುಕದಂತೆ ಆವರಣವಾಗಿರುವುದು. ಅಂತಹ ಕಂಚುಕವು ಜೀರ್ಣವಾಗಿ ಹೋದರೆ ಅದರಲ್ಲಿ ನೀನು ಮೋಹಹೊಂದಬೇಡ. ಹಿಂದೆ ಮಾಡಿದ ಶುಭ-ಅಶುಭ ಕರ್ಮಗಳಿಂದ ಈ ದೇಹವು ಹುಟ್ಟಿ ಕಾಮ-ಮದ ಮುಂತಾದ ವಿಕಾರಗಳಿಗೆ ಆಸ್ಪದವಾಗಿ ಕಂಚುಕ ತೊಡಿಸಿದಂತೆ ಆತ್ಮನಿಗೆ ಆವರಣವಾಗಿರುವುದು.

೧೬. ಪರರ ಪಂಚಭೂತವಿಕಾರವಾದ ಮೂರ್ತಿಯನ್ನು ನೋಡುತ್ತ ಒಂದು ಮೂರ್ತಿಯನ್ನು ತಾತ ಎಂದೂ ಮತ್ತೊಂದನ್ನು ತನಯ ಎಂದೂ ಇನ್ನೊಂದನ್ನು ಅಂಬಾ ಎಂದೂ ಮಗದೊಂದನ್ನು ದಯಿತೆ ಎಂದೂ ಬಹುವಿಧವಾಗಿ ನುಡಿಯುತ್ತೀಯೆ. ಹಾಗು ಕೆಲವು ವ್ಯಕ್ತಿಗಳಲ್ಲಿ ಮಮತೆಯನ್ನು ತೋರಿಸುತ್ತ ಕೆಲವು ವ್ಯಕ್ತಿಗಳಲ್ಲಿ ಮಮತೆಯ ಅಭಾವವನ್ನು ತೋರಿಸುತ್ತ ಭೂತಸಂಘದಲ್ಲಿ ಬಗೆಬಗೆಯ ಮಾತುಗಳನ್ನು ಆಡುತ್ತಿದ್ದೀಯೆ.

೧೭. ಮೂಢಬುದ್ಧಿಯುಳ್ಳವರು ಸುಖಸಾಧನವೆಂದು ತಿಳಿದು ಅನೇಕ ದುಃಖಗಳನ್ನು ಅನುಭವಿಸಿ ಪರಿಣಾಮದಲ್ಲಿಯೂ ದುಃಖವನ್ನೇ ಹೊಂದಿದರೂ ಸುಖಪ್ರಾಪ್ತಿಯಾದಂತೆ ಭಾವಿಸುವರು. ಹಾಗೆಯೆ ಮೋಹದಿಂದ ಆವೇಶವಾದ ಮಾನಸವುಳ್ಳ ವಿದ್ವಾಂಸನು ಕೂಡ ಒಂದರ ಮುಂದೊಂದೆಂಬ ಕ್ರಮದಿಂದ ಬರುವ ದುಃಖಪರಂಪರೆಗಳನ್ನು ಸುಖವೆಂದು ಭ್ರಮಿಸುತ್ತಿರುವನು.

ಹಾಸೋಽಸ್ಥಿಸನ್ದರ್ಶನಮಕ್ಷಿಯುಗ್ಮ-
ಮತ್ಯುಜ್ಜ್ವಲಂ ಯತ್ಕಲುಷಂ ವಸಾಯಾಃ ।
ಕುಚಾದಿ ಪೀನಂ ಪಿಶಿತಂ ಘನಂ ತತ್
ಸ್ಥಾನಂ ರತೇಃ ಕಿಂ ನರಕೋ ನ ಯೋಷಿತ್ ॥೧೮॥

ಯಾನಂ ಕ್ಷಿತೌ ಯಾನಗತಶ್ಚ ದೇಹೋ
ದೇಹೇಽಪಿ ಚಾನ್ಯಃ ಪುರುಷೋ ನಿವಿಷ್ಟಃ ।
ಮಮತ್ವಮುರ್ವ್ಯಾಂ ನ ತಥಾ ಯಥಾ ಸ್ವೇ
ದೇಹೇಽತಿಮಾತ್ರಂ ಚ ವಿಮೂಢತೈಷಾ ॥೧೯॥

ತ್ಯಜ ಧರ್ಮಮಧರ್ಮಂ ಚ ಉಭೇ ಸತ್ಯಾನೃತೇ ತ್ಯಜ ।
ಉಭೇ ಸತ್ಯಾನೃತೇ ತ್ಯಕ್ತ್ವಾ ಯೇನ ತ್ಯಜಸಿ ತತ್ತ್ಯಜ ॥೨೦॥

---

೧೮. ಮತ್ತು ಮುಗ್ಧ ಪಂಡಿತನು ನಾರಿಯ ವಿಲಾಸಗಳಿಂದ ವಂಚಿತನಾಗುವನು. ಅವನಿಗೆ ಮೂಳೆಗಳನ್ನು ತೋರ್ಪಡಿಸುವುದು ಮಂದಹಾಸವೂ, ಮಲಿನವಾಗಿರುವ ವಸಾಧಾತುವಿನ ವಿಕಾರವು ಉಜ್ವಲವಾದ ನಯನಗಳೂ ಮತ್ತು ದಪ್ಪವಾಗಿ ಮುದ್ದೆಗಟ್ಟಿದ ಮಾಂಸಭಾಗವು ಸ್ತನಗಳೂ ಆಗಿ ತೋರುವುವು. ಇದನ್ನು ವಿಮರ್ಶಿಸಿದರೆ ವಿಲಾಸವತಿಯಾಗಿ ರತಿಭೋಗಕ್ಕೆ ಕಾರಣಳಾಗಿರುವ ನಾರಿಯು ನರಕವಲ್ಲದೆ ಮತ್ತೇನು?

೧೯. ನೆಲದ ಮೇಲೆ ವಾಹನವು, ವಾಹನದಲ್ಲಿ ದೇಹವು, ಅಂತಹ ದೇಹದ ನಡುವೆ ಮತ್ತೊಬ್ಬ ಪುರುಷನು ಸ್ವಾಮಿಯಾಗಿರುವನು. ಈ ಪರಂಪರೆಯಲ್ಲಿ ದೇಹದಲ್ಲಿ ಮಾತ್ರ ಗಾಢವಾದ ಮಮತೆಯು ಬೆಳೆದಿದೆ. ನೆಲದಲ್ಲಿ ಅಂತಹ ಮಮತೆಯು ಇಲ್ಲ. ಇದೊಂದು ಹೆಚ್ಚಿನ ಮೋಹಪಾಶವಾಗಿದೆ.

೨೦. ಪುತ್ರನೆ! ನೀನಾದರೊ ಧರ್ಮ-ಅಧರ್ಮ ಇವೆರಡನ್ನು ಬಿಡು. ಮತ್ತು ಸತ್ಯ-ಅನೃತಗಳನ್ನು ತ್ಯಜಿಸು. ಹಾಗು ಯಾವ ವಿವೇಕರೂಪವಾದ ಜ್ಞಾನವೃತ್ತಿಯಿಂದ ಈ ವಿಭಾಗಗಳನ್ನು ದೂರಮಾಡುವೆಯೊ ಅದನ್ನು ತ್ಯಜಿಸಿ ಶಾಂತನಾಗಿರು.

ವರ್ಧಮಾನಂ ಸುತಂ ಸಾ ತು ರಾಜಪತ್ನೀ ದಿನೇ ದಿನೇ ।
ತಮುಲ್ಲಾಪಾದಿನಾ ಬೋಧಮನಯನ್ನಿರ್ಮಲಾತ್ಮಕಮ್ ||೨೧||

ಯಥಾ ಯಥಾ ಬಲಂ ಲೇಭೇ ಯಥಾ ಲೇಭೇ ಮತಿಂ ಪಿತಃ ।
ತಥಾ ತಥಾತ್ಮಬೋಧಂ ಚ ಸೋಽವಾಪನ್ಮಾತೃಭಾಷಿತೈಃ ||೨೨||

ಇತ್ಥಂ ತಯಾ ಸ ತನಯೋ ಜನ್ಮಪ್ರಭೃತಿ ಬೋಧಿತಃ ।
ಚಕಾರ ನ ಮತಿಂ ಪ್ರಾಜ್ಞೋ ಗಾರ್ಹಸ್ಥ್ಯಂ ಪ್ರತಿ ನಿರ್ಮಮಃ||೨೩||

ದ್ವಿತೀಯೋಽಸ್ಯಾಃ ಸುತೋ ಜಜ್ಞೇ ತಸ್ಯ ನಾಮಾಕರೋತ್ಪಿತಾ ।
ಸುಬಾಹುರಯಮಿತ್ಯುಕ್ತೇ ಸಾ ಜಹಾಸ ಮದಾಲಸಾ ||೨೪||

---

೨೧. ರಾಜಮಹಿಷಿಯಾದ ಮದಾಲಸೆಯು ಪ್ರತಿದಿನದಲ್ಲಿಯೂ ಕ್ರಮವಾಗಿ ವೃದ್ಧಿಹೊಂದುತ್ತಿದ್ದ ಬಾಲಕನನ್ನು ಹೀಗೆ ಮುದ್ದಿನಿಂದ ಮಾತ-ನಾಡಿಸುವ ನೆಪದಿಂದ ಬಾಲಕನಿಗೆ ಪರಿಶುದ್ಧವಾದ ಜ್ಞಾನೋದಯವಾಗುವಂತೆ ಮಾಡಿದಳು.

೨೨. ತಂದೆಯೆ! ಆ ಬಾಲಕನು ಬಲವನ್ನು ಕ್ರಮವಾಗಿ ಹೇಗೆ ಹೊಂದುತ್ತ ಬಂದನೊ; ಹಾಗೆ ವಿವೇಕವನ್ನೂ ಹೊಂದಿದನು. ಹಾಗೆಯೆ ಜನನಿಯ ಭಾಷಣಗಳಿಂದ ಆತ್ಮತತ್ತ್ವಜ್ಞಾನವನ್ನೂ ಪಡೆದನು.

೨೩. ಹೀಗೆ ವಿಕ್ರಾಂತನೆಂಬ ಆ ಪುತ್ರನು ಹುಟ್ಟಿದ ಮೊದಲುಗೊಂಡು ಜನನಿಯಿಂದ ಬೋಧಿಸಲ್ಪಟ್ಟ ಪರಮಾರ್ಥತತ್ತ್ವವನ್ನು ಅರಿತವನೂ ಮತ್ತು ಮಮತ್ವದಿಂದ ಶೂನ್ಯನೂ ಆಗಿ ಗೃಹಸ್ಥಾಶ್ರಮಿಯಾಗಿರಲು ಸಂಕಲ್ಪವಿಲ್ಲದವ-ನಾದನು.

೨೪. ಕಾಲಕ್ರಮದಲ್ಲಿ ಮದಾಲಸೆಯಲ್ಲಿ ಎರಡನೆಯ ಪುತ್ರನು ಜನಿಸಿದನು. ತಂದೆಯು ಅವನಿಗೆ ಸುಬಾಹು ಎಂದು ನಾಮಕರಣ ಮಾಡಿದನು. ಆ ನಾಮಾಂಕವನ್ನಿಟ್ಟ ಕೂಡಲೆ ಮದಾಲಸೆಯು ಹಾಸ್ಯಮಾಡಿದಳು.

ತಮುಷ್ಯೇವಂ ಯಥಾಪೂರ್ವಂ ಬಾಲಮುಲ್ಲಾಪವಾದಿನೀ ।
ಪ್ರಾಹ ಬಾಲ್ಯಾತ್ಸ ಚ ಪ್ರಾಪ ತಥಾ ಬೋಧಂ ಮಹಾಮತಿಃ ॥೨೫॥

ತೃತೀಯಂ ತನಯಂ ಜಾತಂ ತಂ ರಾಜಾ ಶತ್ರುಮರ್ದನಮ್ ।
ಯದಾಹ ತೇನ ಸಾ ಸುಭ್ರೂರ್ಜಹಾಸಾತಿಚಿರಂ ಪುನಃ ॥೨೬॥

ತಥೈವ ಸೋಽಪಿ ತನ್ವಙ್ಗ್ಯಾ ಬಾಲತ್ವಾದೇವ ಬೋಧಿತಃ ।
ಕ್ರಿಯಾಶ್ಚಕಾರ ನಿಷ್ಕಾಮಾ ನ ಕಿಂಚಿತ್ಫಲಕಾರಣಮ್ ॥೨೭॥

ಚತುರ್ಥಸ್ಯ ಸುತಸ್ಯಾಥ ಚಿಕೀರ್ಷುರ್ನಾಮ ಭೂಪತಿಃ ।
ದದರ್ಶ ತಾಂ ಶುಭಾಚಾರಾಮೀಷದ್ಧಾಸಾಂ ಮದಾಲಸಾಮ್ ॥೨೮॥

---

೨೫. ಆಗ ಮದಾಲಸೆಯು ಜ್ಯೇಷ್ಠಪುತ್ರನಿಗೆ ಉಪದೇಶಿಸಿದಂತೆ ಎರಡನೆಯ ಮಗನಿಗೂ ಮಾತನಾಡಿಸುವ ಪ್ರಸಂಗದಲ್ಲಿ ಬಾಲ್ಯ ಮೊದಲುಗೊಂಡು ತತ್ತ್ವವನ್ನು ಉಪದೇಶಿಸಿದಳು. ಮಹಾಪ್ರತಿಭಾವಂತನಾದ ಆ ಪುತ್ರನು ಹಾಗೆಯೆ ಆತ್ಮಬೋಧೆಯನ್ನು ಹೊಂದಿದನು.

೨೬. ಮತ್ತೆ ಕೆಲವು ಕಾಲಾನಂತರದಲ್ಲಿ ಮೂರನೆಯವನಾಗಿ ಜನಿಸಿದ ಮತ್ತೊಬ್ಬ ಪುತ್ರನಿಗೆ ರಾಜನು ಶತ್ರುಮರ್ದನನೆಂದು ಹೆಸರನ್ನಿಟ್ಟನು. ಆಗ ಸುಂದರಿಯಾದ ರಾಜಮಹಿಷಿಯು ಮತ್ತೆ ಬಹಳ ಹೊತ್ತು ನಕ್ಕು ಹಾಸ್ಯ ಮಾಡಿದಳು.

೨೭. ಮತ್ತು ಶತ್ರುಮರ್ದನನೆಂಬ ಆ ಕುಮಾರನು ಬಾಲ್ಯಾವಸ್ಥೆ-ಯಿಂದಲೆ ಜನನಿಯಾದ ಮದಾಲಸೆಯಿಂದ ತತ್ತ್ವಜ್ಞಾನವನ್ನು ಹೊಂದಿದನು. ತಾಯಿಯು ಯಾವುದೊಂದೂ ಫಲಾಭಿಸಂಧಿಯಿಲ್ಲದೆ ನಿಷ್ಕಾಮಳಾಗಿದ್ದುಕೊಂಡು ಆಯಾಯ ತನ್ನ ಕರ್ತವ್ಯಗಳನ್ನು ಮಾಡಿದಳು.

೨೮. ಹಾಗೆಯೆ ಮತ್ತೊಮ್ಮೆ ಜನಿಸಿದ ನಾಲ್ಕನೆಯ ಪುತ್ರನಿಗೆ ನಾಮಕರಣವನ್ನು ಮಾಡುವ ಸಂಕಲ್ಪವುಳ್ಳ ಋತಧ್ವಜರಾಜನು ಮಂಗಳ-ಕರವಾದ ಆಚಾರವುಳ್ಳವಳೂ, ಸ್ವಲ್ಪ ನಗುಮುಖದಿಂದ ಕೂಡಿದವಳೂ ಆದ ಮದಾಲಸೆಯನ್ನು ನೋಡಿದನು.

ತಾವಮಾಹ ರಾಜಾ ಹಸತೀಂ ಕಿಂಚಿತ್ಕೌತೂಹಲಾನ್ವಿತಃ ।
ಕ್ರಿಯಮಾಣೇऽಸಕೃನ್ನಾಮ್ನಿ ಕಥ್ಯತಾಂ ಹಾಸ್ಯಕಾರಣಮ್ ॥೨೯॥

ವಿಕ್ರಾನ್ತಶ್ಚ ಸುಬಾಹುಶ್ಚ ಯಥಾನ್ಯಃ ಶತ್ರುಮರ್ದನಃ ।
ಶೋಭನಾನೀತಿ ನಾಮಾನಿ ತಾನಿ ಮನ್ಯೇ ಕೃತಾನಿ ವೈ ॥೩೦॥

ಯೋಗ್ಯಾನಿ ಕ್ಷತ್ರಬನ್ಧೂನಾಂ ಶೌರ್ಯಾಟೋಪಯುತಾನಿ ಚ ॥೩೧॥

ಅಸನ್ತ್ಯೇತಾನಿ ವೈ ಭದ್ರೇ ಯದಿ ತೇ ಮನಸಿ ಸ್ಥಿತಮ್ ।
ತದಸ್ಯ ಕ್ರಿಯತಾಂ ನಾಮ ಚತುರ್ಥಸ್ಯ ಸುತಸ್ಯ ಮೇ ॥೩೨॥

---

೨೯. ರಾಜನು ಹಾಗೆ ನಗುತ್ತಲಿದ್ದ ಮದಾಲಸೆಯನ್ನು ನೋಡಿ ಸ್ವಲ್ಪ ಕುತೂಹಲದಿಂದ ಕೂಡಿದವನಾಗಿ ಮದಾಲಸೆಗೆ ಹೇಳಿದನು. ನಾಮಕರಣವನ್ನು ಮಾಡುವಾಗ ಎಲ್ಲ ಮತ್ತೆ ಮತ್ತೆ ನೀನು ಹಾಸ್ಯಮಾಡುತ್ತ ನಗಲು ಕಾರಣವೇನು ? ಹೇಳು.

೩೦. ಈ ಹಿಂದೆ ಮೂರು ಮಂದಿ ಪುತ್ರರಿಗೆ ಕ್ರಮವಾಗಿ ವಿಕ್ರಾಂತ, ಸುಬಾಹು ಮತ್ತು ಶತ್ರುಮರ್ದನ ಎಂದು ನಾಮಾಂಕನವನ್ನು ಮಾಡಿರುವೆನು. ಆ ಹೆಸರುಗಳು ಮಂಗಳಕರವಾದುವೆಂದು ತಿಳಿದು ನನ್ನಿಂದ ಇಡಲ್ಪಟ್ಟವೆ.

೩೧. ಆ ಮೂರು ಹೆಸರುಗಳು ಶೌರ್ಯ ಮತ್ತು ಆತ್ಮಾಭಿಮಾನ ಗುಣಗಳನ್ನು ಸೂಚಿಸುವ ಅರ್ಥವುಳ್ಳದ್ದಾಗಿವೆ. ಅಂತಹ ಹೆಸರುಗಳು ಕ್ಷತ್ರಿಯ ಜಾತಿಯಲ್ಲಿ ಜನಿಸಿದ ಕುಮಾರರಿಗೆ ಯೋಗ್ಯವಾಗಿ ಶೋಭಿಸುವುವು.

೩೨. ಮಂಗಳಮೂರ್ತಿಯೆ! ಅಂತಹ ಹೆಸರು ನಿನಗೆ ಅಸಮಂಜಸವಾದುದೆಂದು ನಿನ್ನ ಮನಸ್ಸಿಗೆ ತೋರಿದ್ದರೆ ಈ ನನ್ನ ನಾಲ್ಕನೆಯ ಪುತ್ರನಿಗೆ ಸಾಧುವಾದ ಒಂದು ಹೆಸರನ್ನು ನೀನೇ ಇಡುವವಳಾಗು.

ಮದಾಲಸೋವಾಚ :—

ಮಯಾಜ್ಞಾ ಭವತಃ ಕಾರ್ಯಾ ಮಹಾರಾಜ ಯಥಾತ್ಥ ಮಾಮ್ ।
ತಥಾ ನಾಮ ಕರಿಷ್ಯಾಮಿ ಚತುರ್ಥಸ್ಯ ಸುತಸ್ಯ ತೇ ॥೩೩॥

ಅಲರ್ಕ ಇತಿ ಧರ್ಮಜ್ಞಃ ಖ್ಯಾತಿಂ ಲೋಕೇ ಗಮಿಷ್ಯತಿ ।
ಕನೀಯಾನೇಷ ತೇ ಪುತ್ರೋ ಮತಿಮಾಂಶ್ಚ ಭವಿಷ್ಯತಿ ॥೩೪॥

ಪುತ್ರ ಉವಾಚ :—

ತಚ್ಛ್ರುತ್ವಾ ನಾಮ ಪುತ್ರಸ್ಯ ಕೃತಂ ಮಾತ್ರಾ ಮಹೀಪತಿಃ ।
ಅಲರ್ಕ ಇತ್ಯಸಮ್ಬದ್ಧಂ ಪ್ರಹಸ್ಯೇದಮಥಾಬ್ರವೀತ್ ॥೩೫॥

ಭವತ್ಯಾ ಯದಿದಂ ನಾಮ ಮತ್ಪುತ್ರಸ್ಯ ಕೃತಂ ಶುಭೇ ।
ಕಿಮಿದೃಶಮಸಮ್ಬದ್ಧಮರ್ಥಃ ಕೋಽಸ್ಯ ಮದಾಲಸೇ ॥೩೬॥

ಮದಾಲಸೆಯು ಹೀಗೆಂದಳು :—

೩೩. ಮಹಾರಾಜನೆ ! ನೀನು ನನಗೆ ಏನು ಹೇಳಿರುವೆಯೊ ; ಆ ನಿನ್ನ ಆಜ್ಞೆಯು ನನಗೆ ಮುಖ್ಯಕರ್ತವ್ಯವಾಗಿರುವುದು. ಹಾಗೆಯೆ ನಿನ್ನ ನಾಲ್ಕನೆಯ ಈ ಪುತ್ರನಿಗೆ ನಾನು ನಾಮಕರಣವನ್ನು ಮಾಡುವೆನು.

೩೪. ಈ ನಿನ್ನ ಕಿರಿಯ ಪುತ್ರನು ಮುಂದೆ ಧರ್ಮಜ್ಞನಾಗಿ ಅಲರ್ಕ ಎಂಬ ಹೆಸರಿನಿಂದ ಲೋಕದಲ್ಲಿ ಖ್ಯಾತಿಯನ್ನು ಗಳಿಸುವನು. ಮತ್ತು ಈ ಪುತ್ರನು ಉತ್ತಮವಾದ ವಿವೇಕವುಳ್ಳವನಾಗುತ್ತಾನೆ.

ಪುತ್ರನಿಂತೆಂದನು :—

೩೫. ತರುವಾಯ ಜನನಿಯು ಪುತ್ರನಿಗೆ ಇಟ್ಟಿದ್ದ " ಅಲರ್ಕ " ಎಂಬ ನಾಮಧೇಯವನ್ನು ಅಸಂಬದ್ಧವಾದುದೆಂದು ತಿಳಿದು ರಾಜನು ನಕ್ಕು ಹೇಳಿ-ದನು.

೩೬. ಮಂಗಳಕರಳೆ ! ನೀನು ಪುತ್ರನಿಗೆ ಅಲರ್ಕ ಎಂಬ ಹೆಸರನ್ನು ಇಟ್ಟಿರುವೆಯಷ್ಟೆ. ಮದಾಲಸೆಯೆ ! ಇಂತಹ ಅಸಂಬದ್ಧವಾದ ಹೆಸರನ್ನು ನೀನು ಈ ಮಗುವಿಗೆ ಇಟ್ಟಿರುವೆಯಾ ? ಇದಕ್ಕೆ ಅರ್ಥವೇನಿದೆ ?

ಮದಾಲಸೋವಾಚ :—

ಕಲ್ಪನೇಯಂ ಮಹಾರಾಜ ಕೃತಾ ಸಾ ವ್ಯಾವಹಾರಿಕೀ ।
ತ್ವತ್ಕೃತಾನಾಂ ತಥಾ ನಾಮ್ನಾಂ ಶೃಣು ಭೂಪ ನಿರರ್ಥತಾಮ್ ॥೩೭॥

ವದನ್ತಿ ಪುರುಷಾಃ ಪ್ರಾಜ್ಞಾ ವ್ಯಾಪಿನಂ ಪುರುಷಂ ಸತಃ ।
ಕ್ರಾನ್ತಿಶ್ಚ ಗತಿರುದ್ದಿಷ್ಟಾ ದೇಶಾದ್ದೇಶಾನ್ತರಂ ತು ಯಾ ॥೩೮॥

ಸರ್ವಗೋ ನ ಪ್ರಯಾತೀಹ ವ್ಯಾಪೀ ದೇಹೇಶ್ವರೋ ಯತಃ ।
ತತೋ ವಿಕ್ರಾನ್ತಸಂಜ್ಞೇಯಂ ಮತಾ ಮಮ ನಿರರ್ಥಿಕಾ ॥೩೯॥

ಸುಬಾಹುರಿತಿ ಯಾ ಸಂಜ್ಞಾ ಕೃತಾನ್ಯಸ್ಯ ಸುತಸ್ಯ ತೇ ।
ನಿರರ್ಥಾ ಸಾಪ್ಯಮೂರ್ತಸ್ಯ ಪುರುಷಸ್ಯ ಮಹೀಪತೇ ॥೪೦॥

ಮದಾಲಸೆಯು ಹೀಗೆ ನುಡಿದಳು :—

೩೭. ಮಹಾರಾಜನೆ ! ನಾಮಕರಣವೆಂಬುದು ವ್ಯವಹಾರಕ್ಕೆ ಉಪಯೋಗವಾಗುವಂತಹ ಒಂದು ಕಲ್ಪನೆಯು ಮಾತ್ರವಾಗಿದೆ. ಭೂಪತಿಯೆ ! ಹಾಗೆ ನೀನು ಇಟ್ಟಿರುವ ಹೆಸರುಗಳ ನಿರರ್ಥಕತೆಯನ್ನೂ ಕಲ್ಪನಾಮಾತ್ರ ವೆಂಬುದನ್ನೂ ತೋರಿಸುವೆನು.

೩೮. ಪ್ರಾಜ್ಞರಾದ ಮಾನವರು ಸತ್ಯಸ್ವರೂಪನಾದ ಪುರುಷನು ವ್ಯಾಪಕನಾಗಿರುವನೆಂದು ಹೇಳುವರು. ಒಂದು ಸ್ಥಳವನ್ನು ಬಿಟ್ಟು ಇನ್ನೊಂದು ಸ್ಥಳಕ್ಕೆ ಹೋಗುವುದನ್ನು ಕ್ರಾಂತಿಕ್ರಿಯೆ ಎಂದು ಹೇಳುವರು.

೩೯. ಯಾವ ಕಾರಣದಿಂದ ಈ ದೇಹಪಂಜರಕ್ಕೆ ಈಶ್ವರನೂ, ಸರ್ವವ್ಯಾಪಕನೂ ಆದ ಆತ್ಮನು ಗಮನಕ್ರಿಯೆಯನ್ನು ಹೊಂದಲಾರನೊ ; ಆ ಕಾರಣದಿಂದ ಗಮನಕ್ರಿಯೆಯನ್ನು ಬೋಧಿಸುವ ವಿಕ್ರಾಂತ ಎಂಬ ಹೆಸರು ನಿರರ್ಥಕವಾದುದೆಂದು ನನ್ನ ಮತವು.

೪೦. ಮಹಾರಾಜನೆ ! ನಿನ್ನ ಎರಡನೆಯ ಪುತ್ರನಿಗೆ ನಿನ್ನಿಂದ ಸುಬಾಹು ಎಂಬ ಸಂಜ್ಞೆಯು ಇಡಲ್ಪಟ್ಟಿದೆ. ನಿರಾಕಾರನಾಗಿರುವ ಪುರುಷನಿಗೆ ಶೌರ್ಯದಿಂದ ತುಂಬಿದ ಬಾಹುವುಳ್ಳವನೆಂಬ ಆಕಾರವನ್ನು ತೋರಿಸುವ ಹೆಸರು ನಿರರ್ಥಕವು.

ಪುತ್ರಸ್ಯ ಯತ್ಕೃತಂ ನಾಮ ತೃತೀಯಸ್ಯಾರಿಮರ್ದನಃ ।
ಮನ್ಯೇ ತಚ್ಚಾಪ್ಯಸಮ್ಬದ್ಧಂ ಶೃಣು ಚಾಪ್ಯತ್ರ ಕಾರಣಮ್ ॥೪೧॥

ಏಕ ಏವ ಶರೀರೇಷು ಸರ್ವೇಷು ಪುರುಷೋ ಯದಾ ।
ತದಾಸ್ಯ ರಾಜನ್ ಕಃ ಶತ್ರುಃ ಕೋ ವಾ ಮಿತ್ರಮಿಹೇಷ್ಯತೇ ॥೪೨॥

ಭೂತೈರ್ಭೂತಾನಿ ಮರ್ದ್ಯನ್ತೇ ಅಮೂರ್ತೋ ಮರ್ದ್ಯತೇ ಕಥಮ್ ।
ಕ್ರೋಧಾದೀನಾಂ ಪೃಥಗ್ಭಾವಾತ್ಕಲ್ಪನೇಯಂ ನಿರರ್ಥಿಕಾ ॥೪೩॥

ಯದಿ ಸಂವ್ಯವಹಾರಾರ್ಥಮಸನ್ನಾಮ ಪ್ರಕಲ್ಪ್ಯತೇ ।
ನಾಮ್ನಿ ಕಸ್ಮಾದಲರ್ಕಾಖ್ಯೇ ನೈರರ್ಥ್ಯಂ ಭವತೋ ಮತಮ್ ॥೪೪॥

---

೪೧. ಹಾಗೆಯೆ ನಿನ್ನ ಮೂರನೆಯ ಪುತ್ರನಿಗೆ ಶತ್ರುಮರ್ದನ ಎಂಬ ಹೆಸರನ್ನು ನೀನು ಇಟ್ಟಿದ್ದೀಯೆ. ಆ ಹೆಸರು ಕೂಡ ಅಸಂಬದ್ಧವಾದುದು. ಅದಕ್ಕೆ ಕಾರಣವನ್ನು ಹೇಳುವೆನು. ಅದನ್ನು ಕೇಳು.

೪೨. ಎಲ್ಲ ದೇಹಗಳಲ್ಲಿಯೂ ಇರುವ ಪುರುಷನು ಒಬ್ಬನೇ ಆಗಿರುವನು. ರಾಜನೆ! ಹಾಗಿದ್ದ ಮೇಲೆ ಅಂತಹ ಪುರುಷನಿಗೆ ಶತ್ರುವು ಯಾರಿರುವನು? ಹಾಗು ಯಾರನ್ನು ಮಿತ್ರನೆಂದು ಹೇಳಲಾಗುವುದು?

೪೩. ಭೂತಗಳಲ್ಲಿ ಕೆಲವು ಭೂತಗಳಿಂದ ಇನ್ನು ಕೆಲವು ಮರ್ದಿಸಲ್ಪಡುವುವು. ನಿರಾಕಾರನಾದ ಆತ್ಮನು ಮರ್ದಿಸಲ್ಪಡುವುದೆಂತು? ಮರ್ದನಮಾಡಲು ನಿಮಿತ್ತವಾದ ಕ್ರೋಧ-ಅಸೂಯಾ ಮುಂತಾದುವುಗಳು ನಿರ್ಗುಣನಾದ ಪುರುಷನಲ್ಲಿಲ್ಲ. ಆದ್ದರಿಂದ ಆಯಾಯ ಸಂಜ್ಞೆಗಳ ಕಲ್ಪನೆಯು ನಿರರ್ಥಕವಾದುದು.

೪೪. ಹೀಗಿದ್ದರೂ ವ್ಯವಹಾರಕ್ಕೋಸ್ಕರ ಯಾವುದಾದರೊಂದು ನಿರರ್ಥಕವಾದ ಹೆಸರನ್ನು ಇಡುವುದಾದರೆ ಅಲರ್ಕ ಎಂದು ನಾನು ಇಟ್ಟಿರುವ ಹೆಸರಿನಲ್ಲಿ ಮಾತ್ರ ನಿನಗೆ ನಿರರ್ಥಕವಾದುದೆಂಬ ಭಾವನೆಯು ಏಕೆ ಉಂಟಾಯಿತು?

ಏವಮುಕ್ತಸ್ತಯಾ ಸಾಧು ಮಹಿಷ್ಯಾ ಸ ಮಹೀಪತಿಃ ।
ತಥೇತ್ಯಾಹ ಮಹಾಬುದ್ಧಿರ್ದಯಿತಾಂ ತಥ್ಯವಾದಿನೀಮ್ ॥೪೫॥

ತಂ ಚಾಪಿ ಸಾ ಸುತಂ ಸುಭ್ರೂರ್ಯಥಾ ಪೂರ್ವಸುತಾಂಸ್ತಥಾ ।
ಪ್ರಾಹಾವಬೋಧಜನನಂ ತಾಮುವಾಚ ಸ ಪಾರ್ಥಿವಃ ॥೪೬॥

ಕರೋಷಿ ಕಿಮಿದಂ ಮೂಢೇ ಮಮಾಭಾವಾಯ ಸನ್ತತೇಃ ।
ದುಷ್ಟಾವಬೋಧದಾನೇನ ಯಥಾ ಪೂರ್ವಸುತೇಷು ಮೇ ॥೪೭॥

ಯದಿ ತೇ ಮತ್ಪ್ರಿಯಂ ಕಾರ್ಯಮನುಗ್ರಾಹ್ಯಂ ವಚೋ ಮಮ ।
ತದೇನಂ ತನಯಂ ಮಾರ್ಗೇ ಪ್ರವೃತ್ತೇಃ ಸನ್ನಿಯೋಜಯ ॥೪೮॥

---

೪೫. ಹೀಗೆ ಪಟ್ಟಮಹಿಷಿಯಾದ ಮದಾಲಸೆಯಿಂದ ತಾತ್ತ್ವಿಕವಾಗಿ ಹೇಳಲ್ಪಟ್ಟಿರುವ, ಮಹಾಬುದ್ಧಿಯಾದ ಋತಧ್ವಜರಾಜನು ಅದನ್ನು ಒಪ್ಪಿಕೊಂಡು ತತ್ತ್ವವನ್ನು ಹೇಳಿದ ಮದಾಲಸೆಗೆ " ಹಾಗೇ ಆಗಲಿ " ಎಂದು ಹೇಳಿದನು.

೪೬. ಆಗ ಸುಂದರಿಯಾದ ಮದಾಲಸೆಯು ಹಿರಿಯ ಮಕ್ಕಳಿಗೆ ಉಪದೇಶಿಸಿದಂತೆ ಅಲರ್ಕನೆಂಬ ನಾಲ್ಕನೆಯ ಮಗನಿಗೆ ತತ್ತ್ವಜ್ಞಾನೋದಯವಾಗುವಂತೆ ಮಾತನಾಡುತ್ತ ಬಂದಳು. ಆಗ ರಾಜನು ಮದಾಲಸೆಗೆ ಹೀಗೆ ಹೇಳಿದನು.

೪೭. ಮೂಢಳೆ! ನನ್ನ ವಂಶಸಂತತಿಯು ಮುಂದೆ ಲೋಪವಾಗುವ ಹಾಗೆ ಇದೇಕೆ ಮಾಡುತ್ತಿದ್ದೀಯೆ? ನನ್ನ ಹಿರಿಯ ಮಕ್ಕಳಿಗೆ ದುಷ್ಟವಾದ ಉಪದೇಶವನ್ನು ಮಾಡಿದಹಾಗೆ ಇವನಿಗೂ ಹಾಗೆ ಉಪದೇಶಮಾಡಲು ತೊಡಗಿರುವೆ.

೪೮. ನೀನು ನನಗೆ ಪ್ರಿಯವಾದ ಕಾರ್ಯವನ್ನು ಮಾಡುವೆಯಾದರೆ, ಹಾಗು ನನ್ನ ವಚನವು ಆದರಂತೆ ವರ್ತಿಸಿ ನಿನ್ನ ಅನುಗ್ರಹಕ್ಕೆ ಪಾತ್ರವಾಗುವುದಾದರೆ ಆಗ ಈ ಪುತ್ರನನ್ನು ಪ್ರವೃತ್ತಿಮಾರ್ಗಪರನನ್ನಾಗಿ ಮಾಡು.

ಕರ್ಮಮಾರ್ಗಃ ಸಮುಚ್ಛೇದಂ ನೈವ ದೇವಿ ಗಮಿಷ್ಯತಿ ।
ಪಿತೃಪಿಣ್ಡನಿವೃತ್ತಿಶ್ಚ ನೈವ ಸಾಧ್ವಿ ಭವಿಷ್ಯತಿ ॥೪೯॥

ಪಿತರೋ ದೇವಲೋಕಸ್ಥಾಸ್ತಥಾ ತಿರ್ಯಕ್ತ್ವಮಾಗತಾಃ ।
ತದ್ವನ್ಮನುಷ್ಯತಾಂ ಯಾತಾ ಭೂತವರ್ಗೇಷು ಯೇ ಸ್ಥಿತಾಃ ॥೫೦॥

ಸಪುಣ್ಯಾನಸಪುಣ್ಯಾಂಶ್ಚ ಕ್ಷುತ್ಕ್ಷಾಮಾಂಸ್ತೃಟ್ಪರಿಪ್ಲುತಾನ್ ।
ಪಿಣ್ಡೋದಕಪ್ರದಾನೇನ ನರಃ ಕರ್ಮಣ್ಯವಸ್ಥಿತಃ ॥೫೧॥

ಸದಾಪ್ಯಾಯಯತೇ ಸುಭ್ರೂಸ್ತದ್ವದ್ದೇವಾತಿಥೀನಪಿ ॥೫೨॥

---

೪೯. ಪಟ್ಟದರಸಿಯೆ! ಇವನಾದರೂ ಪ್ರವೃತ್ತಿಮಾರ್ಗಪರನಾಗುವುದರಿಂದ ಕರ್ಮಮಾರ್ಗವು ನಾಶಹೊಂದದಂತೆ ಆಗುವುದು. ಮತ್ತು ಪತಿವ್ರತೆಯೆ! ಪೂರ್ವಿಕರಾದ ಪಿತೃಗಳಿಗೆ ಶ್ರಾದ್ಧಕರ್ಮದಲ್ಲಿ ಪಿಂಡದಾನಕ್ಕೆ ಲೋಪವು ಸಂಭವಿಸುವುದಿಲ್ಲ.

೫೦. ತಾನು ಮಾಡಿದ ಕರ್ಮಾನುಸಾರವಾಗಿ ದೇವಲೋಕದಲ್ಲಿ ಸುಖವನ್ನು ಭುಂಜಿಸುತ್ತಿರುವವರೂ, ಮೂಕಪ್ರಾಣಿಜನ್ಮವನ್ನು ಹೊಂದಿದವರೂ, ಮನುಷ್ಯಜನ್ಮವನ್ನು ಹೊಂದಿದವರೂ ಮತ್ತು ಇತರ ಭೂತವರ್ಗದಲ್ಲಿ ಜನ್ಮಾಂತರವನ್ನು ಹೊಂದಿದವರೂ ಆದ ಪಿತೃಗಳು ಪಿಂಡ-ಉದಕಗಳ ದಾನವನ್ನು ಬಯಸುತ್ತಿರುವರು.

೫೧. ಪುಣ್ಯವಂತರಾದ ಅಥವಾ ಪುಣ್ಯವಂತರಲ್ಲದ, ಹಸಿವಿನಿಂದ ಬಡವಾಗಿರುವ ಮತ್ತು ನೀರಡಿಕೆಯಿಂದ ಬಾಧಿಸಲ್ಪಟ್ಟ ಪಿತೃಗಳನ್ನು ಕರ್ಮಮಾರ್ಗದಲ್ಲಿ ತತ್ಪರನಾದ ಮಾನವನು ಪಿಂಡ-ಉದಕಗಳನ್ನು ಕೊಟ್ಟು ತೃಪ್ತಿಪಡಿಸುವನು.

೫೨. ಸುಂದರಿಯಾದ ಮದಾಲಸೆಯೆ! ಕರ್ಮಾನುಷ್ಠಾನಪರನಾದ ಮಾನವನು ಶ್ರದ್ಧೆಯಿಂದ ಪಿತೃಕರ್ಮವನ್ನು ನಡೆಸುತ್ತ ಪಿತೃಗಳನ್ನೂ ಹಾಗು ಪೂಜಾಸತ್ಕಾರಗಳಿಂದ ದೇವತೆ-ಅತಿಥಿಗಳನ್ನೂ ಸಂತೋಷಪಡಿಸುವನು.

ದೇವೈರ್ಮನುಷ್ಯೈಃ ಪಿತೃಭಿಃ ಪ್ರೇತೈರ್ಭೂತೈಃ ಸಗುಹ್ಯಕೈಃ ।
ವಯೋಭಿಃ ಕ್ರಿಮಿಭಿಃ ಕೀಟೈರ್ನರ ಏವೋಪಜೀವ್ಯತೇ ||೫೩||

ತಸ್ಮಾತ್ತನ್ವಙ್ಗಿ ಮೇ ಪುತ್ರಂ ಯತ್ಕಾರ್ಯಂ ಕ್ಷತ್ರಯೋನಿಭಿಃ ।
ಐಹಿಕಾಮುಷ್ಮಿಕಾಯಾಲಂ ತತ್ಕರ್ಮ ಪ್ರತಿಪಾದಯ ||೫೪||

ತೇನೈವಮುಕ್ತಾ ಸಾ ಸಾಧ್ವೀ ವರನಾರೀ ಮದಾಲಸಾ ।
ಅಲರ್ಕಂ ನಾಮ ತನಯಂ ಪ್ರೋವಾಚೋಲ್ಲಾಪವಾದಿನೀ ||೫೫||

ಪುತ್ರ ವರ್ಧಸ್ವ ಮೇ ಭರ್ತುರ್ಮನೋ ನನ್ದಯ ಕರ್ಮಭಿಃ ||೫೬||

---

೫೩. ದೇವತೆಗಳಿಂದಲೂ, ಮನುಷ್ಯರಿಂದಲೂ, ಪಿತೃಗಳಿಂದಲೂ, ಪ್ರೇತಗಳಿಂದಲೂ, ಭೂತಗಳಿಂದಲೂ, ಗುಹ್ಯಕರೆಂಬ ದೇವಜಾತಿಯಿಂದಲೂ, ಪಕ್ಷಿಗಳಿಂದಲೂ ಕ್ರಿಮಿಗಳಿಂದಲೂ ಮತ್ತು ಕೀಟಗಳಿಂದಲೂ ಪಂಚಮಹಾ-ಯಜ್ಞಾನುಷ್ಠಾನದಲ್ಲಿ ಆಸಕ್ತಿಯುಳ್ಳ ಮಾನವನು ಉಪಜೀವಿಸಲ್ಪಡುವನು.

೫೪. ಕೃಶಾಂಗಿಯಾದ ಮದಾಲಸೆಯೆ! ಆದುದರಿಂದ ಕ್ಷತ್ರಿಯನಾಗಿ ಜನಿಸಿದವನಿಗೆ ಐಹಿಕ-ಆಮುಷ್ಮಿಕ ಫಲಗಳ ಸಮೃದ್ಧಿಯನ್ನು ಹೊಂದಲು ಪೂರ್ಣಸಾಧನವಾಗಿರುವ ಕರ್ತವ್ಯವೇನಿದೆಯೊ; ಆ ಕರ್ಮವನ್ನು ಈ ಪುತ್ರನಿಗೆ ಉಪದೇಶಿಸು.

೫೫. ಋತಧ್ವಜರಾಜನಿಂದ ಈ ರೀತಿಯಾಗಿ ಹೇಳಲ್ಪಟ್ಟಿರುವ ಪತಿವ್ರತೆಯೂ ನಾರೀಮಣಿಯೂ ಆದ ಮದಾಲಸೆಯು ಅಲರ್ಕ ಎಂಬ ನಾಮಾಂಕಿತನಾದ ಆ ಕಿರಿಯ ಮಗನನ್ನು ಮುದ್ದಿನಿಂದ ಮಾತನಾಡಿಸಿ ಹೀಗೆ ಹೇಳಿದಳು.

೫೬. ಚಿರಾಯುವಾದ ಪುತ್ರನೆ! ವಿಹಿತವಾದ ಕರ್ಮಗಳನ್ನು ಆಚ-ರಿಸುತ್ತಲಿದ್ದು ನನ್ನ ಸ್ವಾಮಿಯ ಮನಸ್ಸನ್ನು ಸಂತೋಷಪಡಿಸುತ್ತ ಚಿರಕಾಲ ಬಾಳುವವನಾಗು.

ಐಹಿಕಾಮುಷ್ಮಿಕಫಲಂ ತತ್ಸಮ್ಯಕ್ಪರಿಪಾಲಯ ।
ಮಿತ್ರಾಣಾಮುಪಕಾರಾಯ ದುರ್ಹೃದಾಂ ನಾಶನಾಯ ಚ ॥೫೭॥

ಧನ್ಯೋಽಸಿ ರೇ ಯೋ ವಸುಧಾಮಶತ್ರು-
ರೇಕಶ್ಚಿರಂ ಪಾಲಯಿತಾಸಿ ಪುತ್ರ ।
ತತ್ಪಾಲನಾದಿನ್ದ್ರಸಮೋಪಭೋಗ್ಯಂ
ಧರ್ಮ್ಯಂ ಫಲಂ ಪ್ರಾಪ್ಸ್ಯಸಿ ಚಾಮರತ್ವಮ್ ॥೫೮॥

ಧರಾಮರಾನ್ಪರ್ವಸು ತರ್ಪಯೇಥಾಃ
ಸಮೀಹಿತಂ ಬನ್ಧುಷು ಪೂರಯೇಥಾಃ ।
ಹಿತಂ ಪರಸ್ಮೈ ಹೃದಿ ಚಿನ್ತಯೇಥಾ
ಮನಃ ಪರಸ್ತ್ರೀಷು ನಿವರ್ತಯೇಥಾಃ ॥೫೯॥

---

೫೭. ಮತ್ತು ನಿನ್ನ ಮಿತ್ರವರ್ಗಕ್ಕೆ ಉಪಕಾರಮಾಡುವುದಕ್ಕೂ ಶತ್ರು-ಜನರನ್ನು ನಾಶಮಾಡುವುದಕ್ಕೂ ಸಾಧನವಾದ, ಕ್ಷತ್ರಿಯ ಕುಮಾರನಿಗೆ ಉಚಿತವಾದ, ಮತ್ತು ಐಹಿಕ-ಆಮುಷ್ಮಿಕ ಫಲಗಳನ್ನು ಕೊಡುವ ಕರ್ಮಾನುಷ್ಠಾನ-ವನ್ನು ಪಾಲಿಸು.

೫೮. ಪುತ್ರನೆ! ಯಾವ ನೀನು ಶತ್ರುಕಂಟಕವನ್ನು ಉದ್ಧರಿಸಿ ಭೂಮಿಯನ್ನು ಚಿರಕಾಲ ರಕ್ಷಿಸುವವನಾಗುತ್ತೀಯೊ; ಅಂತಹ ನೀನು ಧನ್ಯನು. ರಾಜ್ಯಪಾಲನದಿಂದ ಇಂದ್ರನಿಗೆ ಸಮಾನವಾಗಿ ಭುಂಜಿಸುವಂತಹುದೂ, ಧರ್ಮ-ದಿಂದ ಲಭ್ಯವೂ ಆದ ಫಲವನ್ನೂ ಮತ್ತು ದೇವತ್ವವನ್ನೂ ಹೊಂದುತ್ತೀಯೆ.

೫೯. ನೀನು ಧರ್ಮಾನುಷ್ಠಾನದಲ್ಲಿ ಅಭಿರುಚಿಯುಳ್ಳವನಾಗಿ ಪರ್ವ-ಕಾಲಗಳಲ್ಲಿ ಭೂಮಿದೇವರೆನಿಸಿದ ವಿಪ್ರರನ್ನು ತೃಪ್ತಿಗೊಳಿಸು. ಬಂಧುಜನರ ಇಷ್ಟವನ್ನು ಪೂರ್ಣಮಾಡು. ಮನಸ್ಸಿನಲ್ಲಿ ಪರರ ಹಿತವನ್ನು ಚಿಂತಿಸು. ಮತ್ತು ಪರಸ್ತ್ರೀವ್ಯಾಮೋಹದಿಂದ ಮನಸ್ಸನ್ನು ದೂರಮಾಡು.

ಸದಾ ಮುರಾರಿಂ ಹೃದಿ ಚಿನ್ತಯೇಥಾ-
ಸ್ತದ್ಧ್ಯಾನತೋಽನ್ತಃ ಷಡರೀಞ್ಜಯೇಥಾಃ ।
ಮಾಯಾಂ ಪ್ರಬೋಧೇನ ನಿವಾರಯೇಥಾ
ಹ್ಯನಿತ್ಯತಾಮೇವ ವಿಚಿನ್ತಯೇಥಾಃ ॥೬೦॥

ಅರ್ಥಾಗಮಾಯ ಕ್ಷಿತಿಪಾಞ್ಜಯೇಥಾ
ಯಶೋಽರ್ಜನಾಯಾರ್ಥಮಪಿ ವ್ಯಯೇಥಾಃ ।
ಪರಾಪವಾದಶ್ರವಣಾದ್ಬಿಭೀಥಾ
ವಿಪತ್ಸಮುದ್ರಾಜ್ಜನಮುದ್ಧರೇಥಾಃ ॥೬೧॥

ಯಜ್ಞೈರನೇಕೈರ್ವಿಬುಧಾನಜಸ್ರ-
ಮನ್ನೈರ್ದ್ವಿಜಾನ್ಪ್ರೀಣಯ ಸಂಶ್ರಿತಾಂಶ್ಚ ।
ಸ್ತ್ರಿಯಶ್ಚ ಕಾಮ್ಯೈರತುಲ್ಯೈಶ್ಚಿರಾಯ
ಯುದ್ಧೈಶ್ಚಾರೀಂಸ್ತೋಷಯಿತಾಸಿ ವೀರ ॥೬೨॥

---

೬೦. ವಿಷ್ಣು ಪರಮಾತ್ಮನನ್ನು ಹೃದಯದಲ್ಲಿ ಸಂತತವಾಗಿ ಧ್ಯಾನಿಸು. ವಿಷ್ಣು ಧ್ಯಾನದಿಂದ ಅಂತಃಕರಣದಲ್ಲಿದ್ದ ಕಾಮ-ಮುಂತಾದ ಆರು ಅಂತಃಶತ್ರುಗಳನ್ನು ಗೆಲ್ಲು. ತತ್ತ್ವಪ್ರಬೋಧದಿಂದ ಮಾಯೆಯನ್ನು ಕಳೆದುಕೊ. ಮತ್ತು ಪ್ರಾಪಂಚಿಕ ವಿಷಯ ಭೋಗದಲ್ಲಿ ಅನಿತ್ಯತೆಯನ್ನು ಭಾವಿಸು.

೬೧. ಐಶ್ವರ್ಯವನ್ನು ಆರ್ಜಿಸಲು ಶತ್ರುರಾಜರನ್ನು ಗೆಲ್ಲು. ಕೀರ್ತಿಯನ್ನು ಗಳಿಸಲು ಆರ್ಜಿಸಿದ ಐಶ್ವರ್ಯವನ್ನು ಸಾಧುರೀತಿಯಲ್ಲಿ ವಿನಿಯೋಗಮಾಡು. ಪರಾಪವಾದವನ್ನು ಶ್ರವಣಮಾಡುವಂತಹ ಪ್ರಸಂಗಕ್ಕೆ ಭಯಪಡು. ಮತ್ತು ದುಃಖಸಾಗರದಿಂದ ಜನರನ್ನು ಉದ್ಧಾರಮಾಡು.

೬೨. ವೀರ ಪುತ್ರನೆ! ನಿರಂತರವಾಗಿ ಮಾಡಲ್ಪಡುವ ಅನೇಕ ಯಜ್ಞಾನುಷ್ಠಾನದಿಂದ ದೇವತೆಗಳನ್ನು ತೃಪ್ತಿಪಡಿಸು. ಅನ್ನದಾನದಿಂದ ಆಶ್ರಿತವರ್ಗ, ವಿಪ್ರಶ್ರೇಣಿಗಳನ್ನು ಪ್ರೀತಿಗೊಳಿಸು. ನಿರುಪಮವಾದ ಕಾಮಸುಖಭೋಗದಿಂದ ನಾರಿಯರನ್ನು ರಂಜನಮಾಡು. ಮತ್ತು ರಣರಂಗದಲ್ಲಿ ವಿಕ್ರಮದಿಂದ ಹೋರಾಡಿ ಶತ್ರುಗಳನ್ನು ಮೆಚ್ಚಿಸು.

ಬಾಲೋ ಮನೋ ನನ್ದಯ ಬಾನ್ಧವಾನಾಂ
ಗುರೋಸ್ತಥಾಜ್ಞಾಕರಣೈಃ ಕುಮಾರಃ ।
ಸ್ತ್ರೀಣಾಂ ಯುವಾ ಸತ್ಕುಲಭೂಷಣಾನಾಂ
ವೃದ್ಧೋ ವನೇ ವತ್ಸ ವನೇಚರಾಣಾಮ್ ॥೬೩॥

ರಾಜ್ಯಂ ಕುರ್ವನ್ಸುಹೃದೋ ನನ್ದಯೇಥಾಃ
ಸಾಧೂನ್ರಕ್ಷಂಸ್ತಾತ ಯಜ್ಞೈರ್ಯಜೇಥಾಃ ।
ದುಷ್ಟಾನ್ನಿಘ್ನನ್ವೈರಿಣಶ್ಚಾಜಿಮಧ್ಯೇ
ಗೋವಿಪ್ರಾರ್ಥೇ ವತ್ಸ ಮೃತ್ಯುಂ ಭಜೇಥಾಃ ॥೬೪॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಪ್ರವೃತ್ತಿಮಾರ್ಗಾನುಶಾಸನಂ
ನಾಮ ತ್ರಯೋವಿಂಶೋಽಧ್ಯಾಯಃ

---

೬೩. ನೀನು ಬಾಲ್ಯಾವಸ್ಥೆಯಲ್ಲಿ ಲೀಲೆಗಳಿಂದ ಬಂಧುಗಳ ಮನಸ್ಸನ್ನೂ, ಕುಮಾರಾವಸ್ಥೆಯಲ್ಲಿ ಗುರು ಆಜ್ಞೆಯನ್ನು ನೆರವೇರಿಸುವುದರಿಂದ ಗುರುವಿನ ಮನಸ್ಸನ್ನೂ, ತಾರುಣ್ಯದಲ್ಲಿ ವಿಲಾಸವರ್ತನೆಯಿಂದ ಕುಲಕ್ಕೆ ಅಲಂಕಾರಪ್ರಾಯರಾದ ಸ್ತ್ರೀಯರ ಮನಸ್ಸನ್ನೂ ಮತ್ತು ಮುಪ್ಪಿನಲ್ಲಿ ಅಹಿಂಸಾವೃತ್ತಿಯಿಂದ ವನವಾಸಿಗಳ ಮನಸ್ಸನ್ನೂ ಸಂತೋಷಗೊಳಿಸು.

೬೪. ಪುತ್ರನೆ! ರಾಜ್ಯವನ್ನು ಶಾಸನಮಾಡುತ್ತ ಮಿತ್ರರನ್ನು ಸಂತೋಷಗೊಳಿಸು. ಸಾಧುಗಳನ್ನು ರಕ್ಷಿಸುತ್ತ ಅನೇಕ ಯಜ್ಞಗಳನ್ನು ಆಚರಿಸು. ರಣರಂಗಕ್ಕೆ ಇಳಿದು ಯುದ್ಧಮಾಡಿ ವೈರವನ್ನು ತೋರಿಸುವ ಶತ್ರುಗಳನ್ನು ಸಂಹಾರಮಾಡು. ಮತ್ತು ಗೋ-ಬ್ರಾಹ್ಮಣರ ರಕ್ಷಣೆಗಾಗಿ ಅಂತಕಾಲದಲ್ಲಿ ಮೃತ್ಯುವನ್ನು ಹೊಂದು.

ಮಾರ್ಕಂಡೇಯ ಮಹಾಪುರಾಣದಲ್ಲಿ ಇಪ್ಪತ್ತಮೂರನೆಯ ಅಧ್ಯಾಯವು
ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಚತುರ್ವಿಂಶೋಽಧ್ಯಾಯಃ

(ರಾಜಧರ್ಮಾನುಶಾಸನಮ್)

ಪುತ್ರ ಉವಾಚ :—

ಏವಮುಲ್ಲಾಪ್ಯಮಾನಸ್ತು ಸ ತು ಮಾತ್ರಾ ದಿನೇ ದಿನೇ ।
ವವೃಧೇ ವಯಸಾ ಬಾಲೋ ಬುದ್ಧ್ಯಾ ಚಾಲರ್ಕಸಂಜ್ಞಿತಃ ॥೧॥

ಸ ಕೌಮಾರಕಮಾಸಾದ್ಯ ಋತಧ್ವಜಸುತಸ್ತದಾ ।
ಕೃತೋಪನಯನಃ ಪ್ರಾಜ್ಞಃ ಪ್ರಣಿಪತ್ಯಾಹ ಮಾತರಮ್ ॥೨॥

ಇಪ್ಪತ್ತನಾಲ್ಕನೆಯ ಅಧ್ಯಾಯ

ಪುತ್ರನು ಹೀಗೆ ಹೇಳಿದನು :—

೧. ಅಲರ್ಕನೆಂಬ ಸಂಜ್ಞೆಯಿಂದ ಅಂಕಿತನಾದ ಆ ಬಾಲಕನು ಪ್ರತಿದಿನವೂ ಜನನಿಯಿಂದ ಈ ಬಗೆಯಿಂದ ಉಪದೇಶಿಸಲ್ಪಡುತ್ತ ಕ್ರಮವಾಗಿ ಮುಂದಿನ ವಯಸ್ಸಿನಿಂದ ವೃದ್ಧಿ ಹೊಂದಿದನು.

೨. ಋತಧ್ವಜನ ಪುತ್ರನಾದ ಅಲರ್ಕನು ಕುಮಾರಾವಸ್ಥೆಯನ್ನು ಹೊಂದಿ ಆಗ ಉಪನಯನ ಸಂಸ್ಕಾರದಿಂದ ಸಂಸ್ಕೃತನೂ, ಪ್ರಜ್ಞಾವಂತನೂ ಆಗಿ ನಮಸ್ಕಾರಮಾಡಿ ತಾಯಿಯನ್ನು ಕೇಳಿಕೊಂಡನು.

ಮಯಾ ಯದತ್ರ ಕರ್ತವ್ಯಮೈಹಿಕಾಮುಷ್ಮಿಕಾಯ ವೈ ।
ಸುಖಾಯ ವದ ತತ್ಸರ್ವಂ ಪ್ರಶ್ರಯಾವನತಸ್ಯ ಮೇ ॥೩॥

ಮಮಾರ್ಥಂ ಚೈವ ಧರ್ಮಾರ್ಥಂ ಪ್ರಜಾನಾಂ ಚೈವ ಯದ್ಧಿತಮ್ ।
ಶ್ರೇಯಸೇ ಯಚ್ಚ ತತ್ಸರ್ವಂ ಪ್ರಜಾರಞ್ಜನಮಾದಿತಃ ॥೪॥

ಮದಾಲಸೋವಾಚ :—

ವತ್ಸ ರಾಜ್ಯಾಭಿಷಿಕ್ತೇನ ಪ್ರಜಾರಞ್ಜನಮಾದಿತಃ
ಕರ್ತವ್ಯಮವಿರೋಧೇನ ಸ್ವಧರ್ಮಶ್ಚ ಮಹೀಭೃತಾಮ್ ॥೫॥

ವ್ಯಸನಾನಿ ಪರಿತ್ಯಜ್ಯ ಸತ್ಯಮೂಲಹರಾಣಿ ವೈ ।
ಆತ್ಮಾ ರಿಪುಭ್ಯಃ ಸಂರಕ್ಷ್ಯೋ ಬಹಿರ್ಮನ್ತ್ರವಿನಿರ್ಗಮಾತ್ ॥೬॥

---

೩. ಜನನಿಯೆ! ಐಹಿಕ-ಪಾರಲೌಕಿಕ ಸುಖಗಳನ್ನು ಹೊಂದುವುದಕ್ಕೆ ನನಗೆ ಕರ್ತವ್ಯವು ಏನಿರುವುದೊ; ಅದನ್ನು ವಿನಯದಿಂದ ನಮ್ರನಾಗಿ ಕೇಳುತ್ತಿದ್ದ ನನಗೆ ಸಮಗ್ರವಾಗಿ ಉಪದೇಶಿಸು.

೪. ನನಗೆ ಅರ್ಥಾರ್ಜನೆ, ಧರ್ಮಾನುಷ್ಠಾನ ಮತ್ತು ಪ್ರಜೆಗಳ ಹಿತಪ್ರಾಪ್ತಿಗಳು ದೊರೆಯುವಂತೆಯೂ ಅದರಿಂದ ನಾನು ಶ್ರೇಯೋಭಾಗಿಯಾಗುವಂತೆಯೂ ಪ್ರಜಾರಂಜನೆಯ ಕ್ರಮವನ್ನು ಮೊದಲಿನಿಂದ ಉಪದೇಶಮಾಡು.

ಮದಾಲಸೆಯು ಹೇಳಿದಳು :—

೫. ಪುತ್ರನೆ! ರಾಜ್ಯ ಸಿಹ್ಮಾಸನದಲ್ಲಿ ಪಟ್ಟಾಭಿಷಿಕ್ತನಾದವನು ಕ್ಷತ್ರಿಯ ಧರ್ಮವನ್ನು ಆಚರಿಸುತ್ತ ಧರ್ಮಕ್ಕೆ ವಿರೋಧವಿಲ್ಲದಹಾಗೆ ಮೊದಲಿನಿಂದಲೂ ವರ್ತಿಸಿ ಪ್ರಜಾರಂಜನವನ್ನು ಮಾಡಬೇಕು.

೬. ಸತ್ಯವೆಂಬ ಮೂಲಧರ್ಮವನ್ನು ಭಂಗಗೊಳಿಸುವ ಮದ್ಯಪಾನಾದಿ ವ್ಯಸನಗಳನ್ನು ವರ್ಜಿಸಬೇಕು. ಮತ್ತು ಮಂತ್ರಾಲೋಚನೆಯು ಹೊರಬೀಳದ ಹಾಗೆ ಮಾಡಿ ಶತ್ರುಭಯದಿಂದ ಆತ್ಮವನ್ನು ರಕ್ಷಿಸಿಕೊಳ್ಳಬೇಕು.

ದುಷ್ಟಾದುಷ್ಟಾಂಶ್ಚ ಜಾನೀಯಾದಮಾತ್ಯಾನರಿದೋಷತಃ ।
ಅಷ್ಟಧಾ ನಾಶಮಾಪ್ನೋತಿ ಸ್ವಚಕ್ರಾತ್ಸ್ಯನ್ದನಾದ್ಯಥಾ ॥೭॥

ತಥಾ ರಾಜಾಪ್ಯಸನ್ದಿಗ್ಧಂ ಬಹಿರ್ಮನ್ತ್ರವಿನಿರ್ಗಮಾತ್ ।
ಚರೈಶ್ಚರಾಸ್ತಥಾ ಶತ್ರೋರನ್ವೇಷ್ಟವ್ಯಾಃ ಪ್ರಯತ್ನತಃ ॥೮॥

ವಿಶ್ವಾಸೋ ನ ತು ಕರ್ತವ್ಯೋ ರಾಜ್ಞಾ ಮಿತ್ರಾಪ್ತಬನ್ಧುಷು ।
ಕಾರ್ಯಯೋಗಾದಮಿತ್ರೇಷು ವಿಶ್ವಸೀತ ನರಾಧಿಪಃ ॥೯॥

ಸ್ಥಾನವೃದ್ಧಿಕ್ಷಯಜ್ಞೇನ ಷಾಡ್ಗುಣ್ಯವಿದಿತಾತ್ಮನಾ ।
ಭವಿತವ್ಯಂ ನರೇನ್ದ್ರೇಣ ನ ಕಾಮವಶವರ್ತಿನಾ ॥೧೦॥

---

೭. ರಾಜನು ತನ್ನ ಮಂತ್ರಿವರ್ಗದಲ್ಲಿ ಶತ್ರುಗಳ ಕಪಟದೋಷಕ್ಕೆ ಸಿಲುಕಿ ದುಷ್ಟರಾದವರು ಮತ್ತು ದುಷ್ಟರಾಗದವರು ಯಾರೆಂಬುದನ್ನು ವಿವೇಚಿಸಬೇಕು. ಅಜಾಗರೂಕನು ರಥದಿಂದ ಅಪಾಯಹೊಂದುವಂತೆ ಮಿತಿಯಿಲ್ಲದೆ ಮಾತನಾಡುವ ಮುಖದಿಂದ ಮಂತ್ರಾಲೋಚನೆಯ ರಹಸ್ಯವು ಭಿನ್ನವಾಗಿ ರಾಜನು ಅಪಾಯಹೊಂದುವನು.

೮. ಮಂತ್ರರಹಸ್ಯವು ಬಹಿರಂಗವಾಗುವುದರಿಂದ ರಾಜನು ನಿಸ್ಸಂದೇಹ-ವಾಗಿ ನಾಶಹೊಂದುವನು. ಹಾಗು ತನ್ನ ಗೂಢಚಾರರಿಂದ ಶತ್ರುಗಳ ಗೂಢಚಾರರನ್ನು ಪತ್ತೆಮಾಡಬೇಕು.

೯. ರಾಜನು ಮಿತ್ರರಲ್ಲಿಯೂ, ಆಪ್ತರಲ್ಲಿಯೂ ಮತ್ತು ಬಂಧುಗಳಲ್ಲಿಯೂ ನಂಬಿಕೆಯನ್ನು ಇಡಬಾರದು. ಮತ್ತು ನೃಪತಿಯು ಕಾರ್ಯವು ಒದಗಿರಲು ಅದರ ಸಾಧನೆಗೆ ಶತ್ರುಗಳಲ್ಲಿಯೂ ವಿಶ್ವಾಸವನ್ನು ತೋರಿಸಬೇಕು.

೧೦. ನರೇಂದ್ರನು ರಾಜ್ಯತಂತ್ರವನ್ನು ಅನುವರ್ತಿಸಿ ಸ್ಥಾನ-ವೃದ್ಧಿ-ಕ್ಷಯಗಳೆಂಬ ತ್ರಿವರ್ಗವನ್ನೂ ಸಂಧಿ ವಿಗ್ರಹ-ಯಾನ-ಆಸನ-ದ್ವೈಧ-ಆಶ್ರಯ-ಗಳೆಂಬ ಷಡ್ಗುಣಗಳನ್ನೂ ತಿಳಿಯಬೇಕು. ಕಾಮವಶನಾಗಿರಬಾರದು.

ಪ್ರಾಗಾತ್ಮಮನ್ತ್ರಿಣಶ್ಚೈವ ತತೋ ಭೃತ್ಯಾ ಮಹೀಭೃತಾ ।
ಜ್ಞೇಯಾಶ್ಚಾನನ್ತರಂ ಪೌರಾ ವಿರುಧ್ಯೇತ ತತೋಽರಿಭಿಃ ॥೧೧॥

ಯಸ್ತ್ವೇತಾನವಿಜಿತ್ಯೈವ ವೈರಿಣೋ ವಿಜಿಗೀಷತೇ ।
ಸೋಽಜಿತಾತ್ಮಾ ಜಿತಾಮಾತ್ಯಃ ಶತ್ರುವರ್ಗೇಣ ಬಾಧ್ಯತೇ ॥೧೨॥

ತಸ್ಮಾತ್ಕಾಮಾದಯಃ ಪೂರ್ವಂ ಜೇಯಾಃ ಪುತ್ರ ಮಹೀಭೃತಾ ।
ತಜ್ಜಯೇ ಹಿ ಜಯೋ ರಾಜ್ಞೋ ರಾಜಾ ನಶ್ಯತಿ ತೈರ್ಜಿತಃ ॥೧೩॥

ಕಾಮಃ ಕ್ರೋಧಶ್ಚ ಲೋಭಶ್ಚ ಮದೋ ಮಾನಸ್ತಥೈವ ಚ ।
ಹರ್ಷಶ್ಚ ಶತ್ರವೋ ಹ್ಯೇತೇ ನಾಶಾಯ ಕುಮಹೀಭೃತಾಮ್ ॥೧೪॥

ಕಾಮಪ್ರಸಕ್ತಮಾತ್ಮಾನಂ ಸ್ಮೃತ್ವಾ ಪಾಣ್ಡುಂ ನಿಪಾತಿತಮ್ ।
ನಿವರ್ತಯೇತ್ತಥಾ ಕ್ರೋಧಾದನುಹ್ರಾದಂ ಹತಾತ್ಮಜಮ್ ॥೧೫॥

---

೧೧. ರಾಜನು ಮೊದಲು ಆತ್ಮವನ್ನೂ, ಮಂತ್ರಿಗಳನ್ನೂ, ಸೇವಕರನ್ನೂ ಕ್ರಮವಾಗಿ ಜಯಿಸಿ ಪೌರಜನರು ಸ್ವಾಮಿಭಕ್ತರಾಗಿರುವುದನ್ನು ತಿಳಿದು ಅನಂತರ ಶತ್ರುಗಳ ಸಂಗಡ ವಿರೋಧಿಸಬೇಕು.

೧೨. ಯಾವ ರಾಜನು ಆತ್ಮ-ಮಂತ್ರಿ ಮುಂತಾದುವನ್ನು ವಶಮಾಡಿಕೊಳ್ಳದೆ ಶತ್ರುಗಳನ್ನು ಗೆಲ್ಲಲು ಆಶಿಸುವನೊ; ಅವನು ಆತ್ಮನಿಗ್ರಹ-ಮಂತ್ರಿಗಳ ಆನುಕೂಲ್ಯವಿಲ್ಲದವನಾಗಿ ಶತ್ರುವರ್ಗದಿಂದ ಬಾಧಿಸಲ್ಪಡುವನು.

೧೩. ಪುತ್ರನೆ! ಆದ್ದರಿಂದ ರಾಜ್ಯವಾಳುವವನು ಮೊದಲು ಕಾಮ ಮುಂತಾದ ಅಂತಃಶತ್ರುಗಳನ್ನು ನಿಗ್ರಹಿಸಿದರೆ ರಾಜನಿಗೆ ಬಾಹ್ಯ ಶತ್ರುಜಯವು ಲಭಿಸುವುದು. ಅಂತಃಶತ್ರುಗಳಿಗೆ ವಶನಾದ ರಾಜನು ತಾನೇ ನಾಶಹೊಂದುವನು.

೧೪. ಕಾಮ-ಕ್ರೋಧ-ಲೋಭ-ಮದ-ಮಾನ ಮತ್ತು ಹರ್ಷ ಎಂಬ ಆರು ಅಂತಃಶತ್ರುಗಳು ಸ್ವೇಚ್ಛೆಯಾಗಿ ವರ್ತಿಸುವ ದುಷ್ಟರಾಜರನ್ನು ನಾಶಗೊಳಿಸುವುವು.

೧೫. ಪಾಂಡುಮಹಾರಾಜನು ಕಾಮಕ್ಕೆ ವಶನಾಗಿ ಹತನಾದುದನ್ನೂ ಅನುಹ್ರಾದನೆಂಬುವನು ಕ್ರೋಧಕ್ಕೆ ವಶನಾಗಿ ಪುತ್ರವಿಯೋಗವನ್ನು ಹೊಂದಿ ಅಪಾಯಭಾಗಿಯಾದುದನ್ನೂ ಸ್ಮರಿಸಿಕೊಂಡು ಕಾಮ-ಕ್ರೋಧಗಳನ್ನು ನಿಗ್ರಹಿಸಬೇಕು.

ಹತಮೈಲಂ ತಥಾ ಲೋಭಾನ್ಮದಾದ್ವೇನಂ ದ್ವಿಜೈರ್ಹತಮ್ ।
ಮಾನಾದನಾಯುಷಃ ಪುತ್ರಂ ಹತಂ ಹರ್ಷಾತ್ಪುರಞ್ಜಯಮ್ ॥೧೬॥

ಏಭಿರ್ಜಿತೈರ್ಜಿತಂ ಸರ್ವಂ ಮರುತ್ತೇನ ಮಹಾತ್ಮನಾ ।
ಸ್ಮೃತ್ವಾ ವಿವರ್ಜಯೇದೇತಾನ್ ಷಡ್ದೋಷಾಂಶ್ಚ ಮಹೀಪತಿಃ ॥೧೭॥

ಕಾಕಕೋಕಿಲಭೃಙ್ಗಾಣಾಂ ಬಕವ್ಯಾಲಶಿಖಣ್ಡಿನಾಮ್ ।
ಹಂಸಕುಕ್ಕುಟಲೋಹಾನಾಂ ಶಿಕ್ಷೇತ ಚರಿತಂ ನೃಪಃ ॥೧೮॥

ಕೌಶಿಕಸ್ಯ ಕ್ರಿಯಾಂ ಕುರ್ಯಾದ್ವಿಪಕ್ಷೇ ಮನುಜೇಶ್ವರಃ ।
ಚೇಷ್ಟಾಂ ಪಿಪೀಲಿಕಾನಾಂ ಚ ಕಾಲೇ ಭೂಪಃ ಪ್ರದರ್ಶಯೇತ್॥೧೯॥

---

೧೬. ಹಾಗು ಐಲರಾಜನು ಲೋಭದಿಂದ ಹತನಾದನು. ವೇನಮಹಾರಾಜನು ಮದದಿಂದ ದ್ವಿಜರಿಂದ ಹತನಾದನು. ಅನಾಯುರಾಜನ ಪುತ್ರನು ಮಾನದಿಂದ ವಧಹೊಂದಿದನು. ಮತ್ತು ಪುರಂಜಯನು ಹರ್ಷೋದ್ರೇಕದಿಂದ ಮೃತ್ಯುಹೊಂದಿದನು.

೧೭. ಮರುತ್ತನೆಂಬ ಮಹಾತ್ಮನಾದ ರಾಜನು ಕಾಮ-ಕ್ರೋಧಾದಿಗಳನ್ನು ಗೆದ್ದಿದ್ದರಿಂದ ಜಗತ್ತನ್ನೆ ಗೆದ್ದು ವಶಪಡಿಸಿಕೊಂಡನು. ರಾಜನು ಇದನ್ನು ಸ್ಮರಿಸಿಕೊಂಡು ಈ ಆರು ದೋಷಗಳನ್ನು ನಿಗ್ರಹಿಸಬೇಕು.

೧೮. ಕಾಗೆ, ಕೋಗಿಲೆ, ದುಂಬಿ, ಬಕಪಕ್ಷಿ, ಸರ್ಪ, ನವಿಲು, ಹಂಸ, ಕೋಳಿ ಮತ್ತು ಲೋಹಗಳ ಚರಿತವನ್ನು ರಾಜನು ಕಲಿಯಬೇಕು. ಐಕಮತ್ಯ, ಸಕಾಲದಲ್ಲಿ ಕಲಾಪ್ರದರ್ಶನ, ಸಂಗ್ರಹ, ಧ್ಯಾನ, ಶತ್ರುದ್ವೇಷ, ಮಿತ್ರಪ್ರೇಮ, ಗುಣದೋಷವಿವೇಚನೆ, ಪ್ರಬೋಧ, ನಿರ್ವಿಕಾರತ್ವ ಗುಣಗಳನ್ನು ರಾಜನು ಕಲಿಯಬೇಕು.

೧೯. ನರಪತಿಯೆನಿಸಿದವನು ಶತ್ರುವಿನಲ್ಲಿ ಗೂಬೆಯಂತೆ ಸರ್ವಸ್ವವನ್ನೂ ನಾಶಮಾಡಲು ಯತ್ನಿಸಬೇಕು. ಮತ್ತು ಭೂಪತಿಯು ಇರುವೆಯಂತೆ ಸಂತತವಾಗಿ ಉದ್ಯಮವನ್ನು ಮಾಡುತ್ತಿರಬೇಕು.

ಜ್ಞೇಯಾಗ್ನಿವಿಸ್ಫುಲಿಙ್ಗಾನಾಂ ಬೀಜಚೇಷ್ಟಾ ಚ ಶಾಲ್ಮಲೇಃ ।
ಚನ್ದ್ರಸೂರ್ಯಸ್ವರೂಪಂ ಚ ನೀತ್ಯರ್ಥೇ ಪೃಥಿವೀಕ್ಷಿತಾ ॥೨೦॥

ಬನ್ಧಕೀಪದ್ಮಶರಭಶೂಲಿಕಾಗುರ್ವಿಣೀಸ್ತನಾತ್ ॥೨೧॥

ಏವಂ ಸಾಮ್ನಾ ಚ ಭೇದೇನ ಪ್ರದಾನೇನ ಚ ಪಾರ್ಥಿವಃ ।
ದಣ್ಡೇನ ಚ ಪ್ರಕುರ್ವೀತ ನೀತ್ಯರ್ಥಂ ಪೃಥಿವೀಕ್ಷಿತಾ ॥೨೨॥

ಪ್ರಜ್ಞಾ ನೃಪೇಣ ವಾದೇಯಾ ತಥಾ ಚಣ್ಡಾಲಯೋಷಿತಃ ॥೨೩॥

---

೨೦. ರಾಜನು ಬೆಂಕಿಕಿಡಿಯಂತೆ ವರ್ತಿಸಿ ಆಯಾಯ ಕಾಲದಲ್ಲಿ ಸೂಕ್ಷ್ಮರೂಪದಿಂದ ಬೃಹದ್ರೂಪವನ್ನು ತಾಳಿ ಉರಿಯುವಂತೆ ಆಗಬೇಕು. ಶಾಲ್ಮಲಿ ಮರದ ಬೀಜದಂತೆ ವರ್ತಿಸಿ ಗೂಢವಾಗಿ ವಿಸ್ತರಿಸಬೇಕು. ಮತ್ತು ಚಂದ್ರ-ಸೂರ್ಯರಂತೆ ವರ್ತಿಸಬೇಕು. ಹೀಗೆ ಅನೇಕ ವ್ಯವಹಾರಗಳನ್ನು ತಿಳಿದು ನೀತಿವಂತನಾಗಿರಬೇಕು.

೨೧. ರಾಜನು ವೇಶ್ಯೆಯಂತೆ ಸ್ವಾರ್ಥದೃಷ್ಟಿ, ತಾವರೆಯಂತೆ ರಂಜನೆ, ಶರಭದಂತೆ ವಿಕ್ರಮ, ಶೂಲದಂತೆ ಭೀಷಣತ್ವ ಮತ್ತು ಗರ್ಭಿಣಿಯ ಸ್ತನದಂತೆ ಮಾನೋನ್ನತಿ—ಈ ಗುಣಗಳನ್ನು ಹೊಂದಿರಬೇಕು-

೨೨. ಭೂಪತಿಯು ಹೀಗೆ ಕಾಲೋಚಿತವಾದ ಸಾಮೋಪಾಯ, ಭೇದ, ದಾನ ಮತ್ತು ದಂಡೋಪಾಯ—ಎಂಬ ನಾಲ್ಕು ಉಪಾಯಗಳಿಂದ ನೀತಿಶಾಸ್ತ್ರವನ್ನು ಅನುಸರಿಸಿ ರಾಜ್ಯಭಾರವನ್ನು ಮಾಡಬೇಕು.

೨೩. ಮತ್ತು ರಾಜನು ವಿವೇಕವಂತನಾಗಲು ಸಮಯದಲ್ಲಿ ಚಂಡಾಲಸ್ತ್ರೀಯರಿಂದಲೂ ಕೂಡ ಯುಕ್ತಿಯುಕ್ತವಾದ ವಚನವನ್ನು ಪರಿಗ್ರಹಿಸಬೇಕು. ಚಂಡಾಲಸ್ತ್ರೀಯೆಂದು ತಿರಸ್ಕರಿಸದೆ ಅವಳಲ್ಲಿರುವ ಗುಣಗಳನ್ನು ಆದರದಿಂದ ಸಂಗ್ರಹಿಸಬೇಕು.

ಶಕ್ರಾರ್ಕಯಮಸೋಮಾನಾಂ ತದ್ವದ್ವಾಯೋರ್ಮಹೀಪತಿಃ ।
ರೂಪಾಣಿ ಪಞ್ಚ ಕುರ್ವೀತ ಮಹೀಪಾಲನಕರ್ಮಣಿ ॥೨೪॥

ಯಥೇನ್ದ್ರಶ್ಚತುರೋ ಮಾಸಾನ್ವಾರ್ಯೋಘೇಣೈವ ಭೂತಲಮ್ ।
ಆಪ್ಯಾಯಯೇತ್ತಥಾ ಲೋಕಾನ್ಪರಿಚಾರ್ಯೈರ್ಮಹೀಪತಿಃ ॥೨೫॥

ಮಾಸಾನಷ್ಟೌ ಯಥಾ ಸೂರ್ಯಸ್ತೋಯಂ ಹರತಿ ರಶ್ಮಿಭಿಃ ।
ಸೂಕ್ಷ್ಮೇಣೈವಾಭ್ಯುಪಾಯೇನ ತಥಾ ಶುಲ್ಕಾದಿನಾ ನೃಪಃ ॥೨೬॥

ಯಥಾ ಯಮಃ ಪ್ರಿಯದ್ವೇಷ್ಯೌ ಪ್ರಾಪ್ತೇ ಕಾಲೇ ನಿಯಚ್ಛತಿ ।
ತಥಾ ಪ್ರಿಯಾಪ್ರಿಯೇ ರಾಜಾ ದುಷ್ಟಾದುಷ್ಟೇ ಸಮೋ ಭವೇತ್ ॥೨೭॥

---

೨೪. ರಾಜ್ಯವನ್ನಾಳುವ ರಾಜನು ರಾಜ್ಯಪರಿಪಾಲನೆಯಲ್ಲಿ ಇಂದ್ರ-ಸೂರ್ಯ-ಯಮ-ಚಂದ್ರ ಮತ್ತು ವಾಯು—ಇವರಲ್ಲಿರುವ ರೂಪ-ಕರ್ಮವನ್ನು ಆಚರಿಸಬೇಕು. ಲೋಕಪಾಲಕರಲ್ಲಿ ಅಸಾಧಾರಣವಾಗಿರುವ ಆಯಾಯ ಅಂಶಗಳು ರಾಜ್ಯಪಾಲನಕ್ಕೆ ಅಂಗವಾಗುವುವು.

೨೫. ಇಂದ್ರನು ಮಳೆಗಾಲದ ನಾಲ್ಕು ಮಾಸಗಳಲ್ಲಿ ಮಳೆಯ ರೂಪದಿಂದ ಜಲಧಾರೆಗಳನ್ನು ಸುರಿಸಿ ಭೂಮಿಯನ್ನು ತೃಪ್ತಿಗೊಳಿಸುವನು. ಅದರಂತೆ ರಾಜನು ಧನ-ಧಾನ್ಯ ಮುಂತಾದ ಉಪಚಾರವಸ್ತುಗಳನ್ನು ಸುರಿಸಿ ಪ್ರಜೆಗಳನ್ನು ತೃಪ್ತಿಗೊಳಿಸಬೇಕು.

೨೬. ಸೂರ್ಯನು ಎಂಟು ಮಾಸಗಳಲ್ಲಿ ತನ್ನ ಉಷ್ಣರಶ್ಮಿಗಳಿಂದ ತಪಿಸಿ ನೆಲದಲ್ಲಿರುವ ಜಲಾಂಶವನ್ನು ಹೀರಿಕೊಳ್ಳುವನು. ಅದರಂತೆ ರಾಜನು ರಾಜಶುಲ್ಕ ಮುಂತಾದ ಸೂಕ್ಷ್ಮ ಉಪಾಯದಿಂದ ಧನಿಕರಿಂದ ಧನರಾಶಿಯನ್ನು ತೆಗೆದುಕೊಳ್ಳಬೇಕು.

೨೭. ಯಮಧರ್ಮರಾಜನು ಆಪ್ತ ಅಥವಾ ಶತ್ರು—ಇವರಲ್ಲಿ ಮೃತ್ಯುಕಾಲವು ಒದಗಿದಾಗ ಪ್ರೀತಿ-ದ್ವೇಷಗಳನ್ನು ತೋರಿಸದೆ ಕರ್ಮಾನುರೂಪವಾದ ಫಲಗಳನ್ನು ಕೊಡುವನು. ಹಾಗೆ ರಾಜನು ತನ್ನ ಆಪ್ತ-ಅನಾಪ್ತಜನರಲ್ಲಿ ಅವರವರ ದೋಷ-ಗುಣಗಳಿಗೆ ತಕ್ಕಂತೆ ಸಮವಾಗಿ ವರ್ತಿಸಬೇಕು.

ಪೂರ್ಣೇನ್ದುಮಾಲೋಕ್ಯ ಯಥಾ ಪ್ರೀತಿಮಾಞ್ಜಾಯತೇ ನರಃ ।
ಏವಂ ಯತ್ರ ಪ್ರಜಾಃ ಸರ್ವಾ ನಿರ್ವೃತಾಸ್ತಚ್ಛಶಿವ್ರತಮ್ ॥೨೮॥

ಮಾರುತಸ್ಸರ್ವಭೂತೇಷು ನಿಗೂಢಶ್ಚರತೇ ಯಥಾ ।
ಏವಂ ಚರೇನ್ನೃಪಶ್ಚಾರೈಃ ಪೌರಾಮಾತ್ಯಾರಿಬನ್ಧುಷು ॥೨೯॥

ನ ಲೋಭಾರ್ಥೈರ್ನ ಕಾಮಾರ್ಥೈರ್ನಾರ್ಥಾರ್ಥೈರ್ಯಸ್ಯ ಮಾನಸಮ್ ।
ಪದಾರ್ಥೈಃ ಕೃಷ್ಯತೇ ಧರ್ಮಾತ್ಸ ರಾಜಾ ಸ್ವರ್ಗಮೃಚ್ಛತಿ ॥೩೦॥

ಉತ್ಪಥಗ್ರಾಹಿಣೋ ಮೂಢಾನ್ ಸ್ವಧರ್ಮಾಚ್ಚಲಿತಾನ್ನರಾನ್ ।
ಯಃ ಕರೋತಿ ನಿಜೇ ಧರ್ಮೇ ಸ ರಾಜಾ ಸ್ವರ್ಗಮೃಚ್ಛತಿ ॥೩೧॥

---

೨೮. ಮಾನವನು ಹದಿನಾರು ಕಲೆಗಳಿಂದ ಪೂರ್ಣವಾದ ಚಂದ್ರಬಿಂಬವನ್ನು ನೋಡಿ ಹೇಗೆ ಆನಂದವನ್ನು ಅನುಭವಿಸುವನೊ; ಹಾಗೆ ಯಾವ ರಾಜನನ್ನು ನೋಡಿ ಆನಂದವುಂಟಾಗುವುದೊ; ಅದೇ ರಾಜನಲ್ಲಿರಬೇಕಾದ ಚಂದ್ರನ ವ್ರತವು.

೨೯. ವಾಯುದೇವನು ಸರ್ವಪ್ರಾಣಿಗಳಲ್ಲಿ ಗೂಢರೂಪದಿಂದ ಸಂಚರಿಸುವನು. ಪ್ರತಿಯೊಂದು ಪ್ರಾಣಿಯ ಜಠರದಲ್ಲಿ ವಾಯು ಸಂಚಾರವಿದ್ದೇ ಇದೆ. ಹಾಗೆ ರಾಜನು ಗೂಢಚಾರರ ಮೂಲಕ ಮಂತ್ರಿ-ಪುರಜನ-ಬಂಧು ಮತ್ತು ಶತ್ರು--ಇವರಲ್ಲಿ ಪ್ರವೇಶಮಾಡಬೇಕು.

೩೦. ಲೋಭವನ್ನುಂಟುಮಾಡುವ, ಕಾಮಸುಖಕ್ಕೆ ಸಾಧನವಾದ, ಅರ್ಥಸಂಗ್ರಹವನ್ನು ಮಾಡುವ ಪದಾರ್ಥಗಳಿಂದ ಯಾವ ರಾಜನ ಮಾನಸವು ಸೆಳೆಯಲ್ಪಡುವುದಿಲ್ಲವೊ; ಕಾಮ-ಕ್ರೋಧಾದಿಗಳಿಗೆ ವಶನಾಗದಿರುವ ಆ ರಾಜನು ಸ್ವರ್ಗಸುಖವನ್ನು ಹೊಂದುವನು.

೩೧. ಸ್ವಧರ್ಮದಿಂದ ಚಲಿಸಿದವರೂ ಮತ್ತು ಉನ್ಮಾರ್ಗವನ್ನು ಹಿಡಿದವರೂ ಆಗ ಮೂಢ ಪ್ರಜೆಗಳನ್ನು ಸ್ವಧರ್ಮದಲ್ಲಿ ಆಸಕ್ತರನ್ನಾಗಿ ಮಾಡುವ ರಾಜನು ಸ್ವರ್ಗಸುಖವನ್ನು ಅನುಭವಿಸುವನು.

ವರ್ಣಧರ್ಮಾ ನ ಸೀದನ್ತಿ ಯಸ್ಯ ರಾಷ್ಟ್ರೇ ತಥಾಶ್ರಮಾಃ ।
ರಾಜ್ಞಸ್ತಸ್ಯ ಸುಖಂ ತಾತ ಪರತ್ರೇಹ ಚ ಶಾಶ್ವತಮ್ ॥೩೨॥

ಏತದ್ರಾಜ್ಞಃ ಪರಂ ಕೃತ್ಯಂ ತಥಾ ತದ್ವೃದ್ಧಿಕಾರಣಮ್ ।
ಸ್ವಧರ್ಮೇ ಸ್ಥಾಪನಂ ನೄಣಾಂ ಚಾಲ್ಯತೇ ನ ಕುಬುದ್ಧಿಭಿಃ ॥೩೩॥

ಪಾಲನೇನೈವ ಭೂತಾನಾಂ ಕೃತಕೃತ್ಯೋ ಮಹೀಪತಿಃ ।
ಸಮ್ಯಕ್ಪಾಲಯಿತಾ ಭಾಗಂ ಧರ್ಮಸ್ಯಾಪ್ನೋತಿ ವೈ ಯತಃ ॥೩೪॥

ಏವಮಾಚರತೇ ರಾಜಾ ಚಾತುರ್ವರ್ಣ್ಯಸ್ಯ ರಕ್ಷಣಮ್ ।
ಸ ಸುಖೀ ವಿಹರತ್ಯೇಷ ಶಕ್ರಸ್ಯೈತಿ ಸಲೋಕತಾಮ್ ॥೩೫॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಮದಾಲಸೋಪಾಖ್ಯಾನೇ
ಚತುರ್ವಿಂಶೋಽಧ್ಯಾಯಃ

---

೩೨. ಪುತ್ರನೆ! ಯಾವ ರಾಜನ ರಾಷ್ಟ್ರದಲ್ಲಿ ವರ್ಣಧರ್ಮಗಳು ಲೋಪವಾಗುವುದಿಲ್ಲವೊ; ಮತ್ತು ಆಶ್ರಮಧರ್ಮಗಳು ಚ್ಯುತಿಹೊಂದುವುದಿಲ್ಲವೊ; ಆ ರಾಜನಿಗೆ ಇಹ-ಪರ-ಲೋಕಗಳಲ್ಲಿ ಶಾಶ್ವತವಾದ ಸುಖವು ಉಂಟಾಗುವುದು.

೩೩. ಮಾನವರನ್ನು ಸ್ವಸ್ವಧರ್ಮದಲ್ಲಿ ವರ್ತಿಸುವಂತೆ ಮಾಡುವುದು ರಾಜನಿಗೆ ಮುಖ್ಯವಾದ ಕರ್ತವ್ಯವು. ಮತ್ತು ಇದೇ ರಾಜನ ಅಭಿವೃದ್ಧಿಗೆ ಕಾರಣವು. ದುಷ್ಟಬುದ್ಧಿಯುಳ್ಳವರಾಗಿ ಸ್ವಧರ್ಮಪ್ರವೃತ್ತಿಯನ್ನು ದೂಷಿಸ-ಬಾರದು.

೩೪. ಯಾವ ಕಾರಣದಿಂದ ಚನ್ನಾಗಿ ರಾಜ್ಯವನ್ನು ಪಾಲಿಸುತ್ತಿದ್ದ ರಾಜನು ಪ್ರಜೆಗಳು ಧರ್ಮಾನುಷ್ಠಾನದಿಂದ ಗಳಿಸುವ ಪುಣ್ಯದಲ್ಲಿ ಭಾಗವನ್ನು ಹೊಂದುವನೊ; ಆ ಕಾರಣದಿಂದ ರಾಜನು ಪ್ರಜೆಗಳ ಪಾಲನೆಯಿಂದ ಕೃತಕೃತ್ಯನಾಗುವನು.

೩೫. ರಾಜನು ಈ ವಿಧವಾಗಿ ಬ್ರಹ್ಮ-ಕ್ಷತ್ರ-ವೈಶ್ಯ-ಶೂದ್ರರೆಂಬ ಚಾತುರ್ವರ್ಣ್ಯವನ್ನು ರಕ್ಷಿಸಿ ಇಹಲೋಕದಲ್ಲಿ ಸೌಖ್ಯದಿಂದಿದ್ದು ಪರಲೋಕದಲ್ಲಿ ಇಂದ್ರನ ಲೋಕಕ್ಕೆ ಹೋಗಿ ಭೋಗಗಳನ್ನು ಭುಂಜಿಸುವನು.

ಮಾರ್ಕಂಡೇಯ ಮಹಾಪುರಾಣದಲ್ಲಿ ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಷಡ್ವಿಂಶೋಽಧ್ಯಾಯಃ

(ವರ್ಣಾಶ್ರಮಧರ್ಮನಿರೂಪಣಮ್)

ಪುತ್ರ ಉವಾಚ :—

ತನ್ಮಾತುರ್ವಚನಂ ಶ್ರುತ್ವಾ ಸೋಽಲರ್ಕೋ ಮಾತರಂ ಪುನಃ |
ಪಪ್ರಚ್ಛ ವರ್ಣಧರ್ಮಾಂಶ್ಚ ಧರ್ಮಾನ್ಯೇ ಚಾಶ್ರಮೇಷು ಚ ||೧||

ಅಲರ್ಕ ಉವಾಚ :—

ಕಥಿತೋಽಯಂ ಮಹಾಭಾಗೇ ರಾಜ್ಯತನ್ತ್ರಾಶ್ರಿತಸ್ತ್ವಯಾ |
ಮಮ ಧರ್ಮೋಽಹಮಿಚ್ಛಾಮಿ ಶ್ರೋತುಂ ವರ್ಣಾಶ್ರಮಾತ್ಮಕಮ್ ||೨||

ಇಪ್ಪತ್ತೈದನೆಯ ಅಧ್ಯಾಯ

ಪುತ್ರನು ಹೀಗೆ ಹೇಳಿದನು :—

೧. ಅಲರ್ಕನೆಂಬ ಕುಮಾರನು ತಾಯಿಯ ಉಪದೇಶರೂಪವಾದ ವಚನವನ್ನು ಕೇಳಿ ಮತ್ತೆ ವರ್ಣಗಳಿಗೆ ಸಂಬಂಧಿಸಿದ ಧರ್ಮಗಳನ್ನೂ ಆಶ್ರಮಗಳಲ್ಲಿ ಆಚರಿಸಬೇಕಾದ ಧರ್ಮಗಳನ್ನೂ ಹೇಳುವಂತೆ ತಾಯಿಯನ್ನು ಪ್ರಶ್ನಿಸಿದನು.

ಅಲರ್ಕನು ಹೇಳಿದನು :—

ಮಹಾಮಹಿಮಳಾದ ಜನನಿಯೆ! ರಾಜ್ಯತಂತ್ರವನ್ನು ಸಂಬಂಧಿಸಿದ ನನ್ನ ಕರ್ತವ್ಯವಿಧಾನವು ನಿನ್ನಿಂದ ಉಪದೇಶಿಸಲ್ಪಟ್ಟಿತು. ಈಗ ಆಯಾಯ ವರ್ಣ-ಆಶ್ರಮಗಳಲ್ಲಿ ಆಚರಿಸಬೇಕಾದ ಧರ್ಮವನ್ನು ತಿಳಿಯಲು ಆಶಿಸುವೆನು.

ಮದಾಲಸೋವಾಚ :—

ದಾನಮಧ್ಯಯನಂ ಯಜ್ಞೋ ಬ್ರಾಹ್ಮಣಸ್ಯ ತ್ರಿಧೋದಿತಃ ।
ಧರ್ಮೋ ನಾನ್ಯಶ್ಚತುರ್ಥೋಽಸ್ತಿ ಧರ್ಮಸ್ತಸ್ಯಾಪದಂ ವಿನಾ ॥೩॥

ಯಾಜನಾಧ್ಯಾಪನೇ ಶುದ್ಧಸ್ತಥಾ ಪುತ್ರ ಪ್ರತಿಗ್ರಹಃ ।
ಏತತ್ಸಮ್ಯಕ್ಸಮಾಖ್ಯಾತಂ ತ್ರಿತಯಂ ಚಾಸ್ಯ ಜೀವಿಕಾ ॥೪॥

ದಾನಮಧ್ಯಯನಂ ಯಜ್ಞಾಃ ಕ್ಷತ್ರಿಯಸ್ಯಾಪ್ಯಯಂ ತ್ರಿಧಾ ।
ಧರ್ಮಃ ಪ್ರೋಕ್ತಃ ಕ್ಷಿತೇ ರಕ್ಷಾ ಶಸ್ತ್ರಾಜೀವಶ್ಚ ಜೀವಿಕಾ ॥೫॥

ದಾನಮಧ್ಯಯನಂ ಯಜ್ಞೋ ವೈಶ್ಯಸ್ಯಾಪಿ ತ್ರಿಧೈವ ಸಃ ।
ವಾಣಿಜ್ಯಂ ಪಾಶುಪಾಲ್ಯಂ ಚ ಕೃಷಿಶ್ಚೈವಾಸ್ಯ ಜೀವಿಕಾ ॥೬॥

ಮದಾಲಸೆಯು ಹೇಳಿದಳು :—

೩. ವಿಪ್ರನಿಗೆ ದಾನಮಾಡುವುದು, ವೇದಾಧ್ಯಯನವನ್ನು ಮಾಡುವುದು ಮತ್ತು ಯಜ್ಞಾಚರಣೆ ಹೀಗೆ ಮೂರು ವಿಧವಾದ ಧರ್ಮವು ವಿಧಿಸಲ್ಪಟ್ಟಿದೆ. ಈ ಮೂರು ಧರ್ಮಗಳನ್ನು ಬಿಟ್ಟರೆ ವಿಪ್ರನಿಗೆ ಆಪತ್ಕಾಲದ ಹೊರತು ನಾಲ್ಕನೆಯ ಕರ್ತವ್ಯಧರ್ಮವು ಇಲ್ಲ.

೪. ಪುತ್ರನೆ! ಯಾಗಮಾಡಿಸುವುದು, ಅಧ್ಯಯನ ಮಾಡಿಸುವುದು ಮತ್ತು ಶುದ್ಧವಾದ ಪ್ರತಿಗ್ರಹ—ಇವುಗಳು ವಿಪ್ರನಿಗೆ ಜೀವನೋಪಾಯವೆಂದು ಧರ್ಮಶಾಸ್ತ್ರಗಳಲ್ಲಿ ಸ್ಫುಟವಾಗಿ ಪ್ರತಿಪಾದಿಸಲ್ಪಟ್ಟಿರುವುದು.

೫. ಕ್ಷತ್ರಿಯನಿಗೂ ದಾನಮಾಡುವುದು, ವೇದಾಧ್ಯಯನ ಮಾಡುವುದು ಮತ್ತು ಯಜ್ಞಾಚರಣೆ—ಇವು ಮೂರು ಧರ್ಮಗಳು ಸಮಾನವಾದುವು. ಭೂಮಿಯನ್ನು ರಕ್ಷಿಸುವುದು, ಶಸ್ತ್ರಧಾರಣ ಎಂಬ ಧರ್ಮವು ಕ್ಷತ್ರಿಯನ ಜೀವನೋಪಾಯವೆಂದು ಗಣಿಸಲ್ಪಟ್ಟಿದೆ.

೬. ವೈಶ್ಯನಿಗೂ ಹಿಂದೆ ಹೇಳಿರುವಂತೆ ದಾನ-ಅಧ್ಯಯನ ಮತ್ತು ಯಜ್ಞ, ಇವು ಮೂರು ಧರ್ಮಗಳು ಸಮಾನವಾಗಿವೆ. ವ್ಯಾಪಾರ, ಪಶುಪಾಲನ ಮತ್ತು ಕೃಷಿಕರ್ಮ--ಇವು ವೈಶ್ಯನಿಗೆ ಧರ್ಮವೆನಿಸಿದ ಜೀವನೋಪಾಯಗಳಾಗಿವೆ.

ದಾನಂ ಯಜ್ಞೋಽಥ ಶುಶ್ರೂಷಾ ದ್ವಿಜಾತೀನಾಂ ತ್ರಿಧಾ ಮಯಾ।
ವ್ಯಾಖ್ಯಾತಃ ಶೂದ್ರಧರ್ಮೋಽಪಿ ಜೀವಿಕಾ ಕಾರುಕರ್ಮಜಾ ॥೭॥

ತದ್ವದ್ದ್ವಿಜಾತಿಶುಶ್ರೂಷಾ ಪೋಷಣಂ ಕ್ರಯವಿಕ್ರಯೈಃ।
ವರ್ಣಧರ್ಮಾಸ್ತ್ವಿಮೇ ಪ್ರೋಕ್ತಾಃ ಶ್ರೂಯತಾಮಾಶ್ರಮಾಶ್ರಯಾಃ ॥೮॥

ಸ್ವವರ್ಣಧರ್ಮಾತ್ಸಂಸಿದ್ಧಿಂ ನರಃ ಪ್ರಾಪ್ನೋತಿ ನ ಚ್ಯುತಃ।
ಪ್ರಯಾತಿ ನರಕಂ ಪ್ರೇತ್ಯ ಪ್ರತಿಷಿದ್ಧನಿಷೇವಣಾತ್ ॥೯॥

ಯಾವತ್ತು ನೋಪನಯನಂ ಕ್ರಿಯತೇ ವೈ ದ್ವಿಜನ್ಮನಃ।
ಕಾಮಚೇಷ್ಟೋಕ್ತಿಭಕ್ಷಸ್ತು ತಾವದ್ಭವತಿ ಪುತ್ರಕ ॥೧೦॥

---

೭. ದಾನ-ಯಜ್ಞ ಮತ್ತು ದ್ವಿಜರೆನಿಸಿದ ತ್ರೈವರ್ಣಿಕರ ಶುಶ್ರೂಷೆ-ಎಂಬ ಈ ಮೂರುವಿಧವಾದ ಶೂದ್ರಧರ್ಮವು ನನ್ನಿಂದ ನಿನಗೆ ಬೋಧಿಸಲ್ಪಟ್ಟಿದೆ. ಹಾಗು ಶೂದ್ರನಿಗೆ ಶಿಲ್ಪಕರ್ಮವು ಜೀವಿಕೆಯಾಗಿರುವುದು.

೮. ಹಾಗು ಶೂದ್ರನು ದ್ವಿಜರನ್ನು ಸೇವೆಮಾಡುತ್ತ ಕ್ರಯ-ವಿಕ್ರಯಾದಿ ವ್ಯವಹಾರದಿಂದ ಪೋಷಣವನ್ನು ಹೊಂದುವನು. ಹೀಗೆ ಆಯಾಯ ವರ್ಣಗಳ ಧರ್ಮಗಳು ನಿನಗೆ ಹೇಳಲ್ಪಟ್ಟುವು. ಮುಂದೆ ಆಶ್ರಮ ಧರ್ಮವನ್ನು ಕೇಳು.

೯. ಮನುಷ್ಯನು ತನ್ನ ವರ್ಣಧರ್ಮದ ಅನುಷ್ಠಾನದಿಂದ ಸಿದ್ಧಿಯನ್ನು ಹೊಂದುವನು. ಧರ್ಮಭ್ರಷ್ಟನಿಗೆ ಸದ್ಗತಿಲಾಭವು ಇಲ್ಲ. ನಿಷಿದ್ಧಕರ್ಮವನ್ನು ಆಚರಿಸುವುದರಿಂದ ಮಾನವನು ಮರಣಾನಂತರದಲ್ಲಿ ನರಕಯಾತನೆಯನ್ನು ಅನುಭವಿಸುತ್ತಾನೆ.

೧೦. ಪುತ್ರನೆ! ತ್ರೈವರ್ಣಿಕರ ಜಾತಿಯಲ್ಲಿ ಜನಿಸಿದವನಿಗೆ ಎಷ್ಟು ಕಾಲದ ವರೆಗೆ ಉಪನಯನ ಸಂಸ್ಕಾರವು ನಡೆಯುವುದಿಲ್ಲವೊ; ಅದುವರೆಗೆ ಅವನು ತನ್ನ ಇಷ್ಟಬಂದಂತೆ ನಡೆ-ನುಡಿ-ಆಹಾರಗಳನ್ನು ಸೇವಿಸುವನು.

ಕೃತೋಪನಯನಃ ಸಮ್ಯಗ್ಬ್ರಹ್ಮಚಾರೀ ಗುರೋರ್ಗೃಹೇ ।
ವಸೇತ ತತ್ರ ಧರ್ಮೋಽಸ್ಯ ಕಥ್ಯತೇ ತನ್ನಿಬೋಧ ಮೇ ॥೧೧॥

ಸ್ವಾಧ್ಯಾಯೋಽಥಾಗ್ನಿಶುಶ್ರೂಷಾ ಸ್ನಾನಂ ಭಿಕ್ಷಾಟನಂ ತಥಾ ।
ಗುರೋರ್ನಿವೇದ್ಯ ತಚ್ಚಾದ್ಯಮನುಜ್ಞಾತೇನ ಸರ್ವದಾ ॥೧೨॥

ಗುರೋಃ ಕರ್ಮಾಣಿ ಸೋದ್ಯೋಗಃ ಸಮ್ಯಕ್ಪ್ರೀತ್ಯುಪಪಾದಕಃ ।
ತೇನಾಹೂತಃ ಪಠೇಚ್ಚೈವ ತತ್ಪರೋ ನಾನ್ಯಮಾನಸಃ ॥೧೩॥

ಏಕಂ ದ್ವೌ ಸಕಲಾನ್ವಾಪಿ ವೇದಾನ್ಪ್ರಾಪ್ಯ ಗುರೋರ್ಮುಖಾತ್ ।
ಅನುಜ್ಞಾತೋ ವರಾನ್ದತ್ವಾ ದಕ್ಷಿಣಾಂ ಗುರವೇ ತತಃ ॥೧೪॥

---

೧೧. ಯಥಾವಿಧಿಯಾಗಿ ಉಪನಯನ ಸಂಸ್ಕಾರವನ್ನು ಹೊಂದಿದ ಬ್ರಹ್ಮಚಾರಿಯು ಗುರು ಗೃಹದಲ್ಲಿ ವಾಸಮಾಡಬೇಕು. ಗುರುಕುಲದಲ್ಲಿ ವಾಸಿಸುತ್ತಿದ್ದ ಬ್ರಹ್ಮಚಾರಿಯು ಮಾಡಬೇಕಾದ ಧರ್ಮಗಳನ್ನು ಹೇಳುವೆನು. ಕೇಳು.

೧೨. ಸ್ನಾನ, ಅಗ್ನಿಕಾರ್ಯ ಮತ್ತು ವೇದಾಧ್ಯಯನ ಇವುಗಳನ್ನು ನಿಯಮದಿಂದ ಆಚರಿಸಬೇಕು. ಹಾಗು ಭಿಕ್ಷಾಟನ ಮಾಡಿ ಆರ್ಜಿಸಿದ ಅನ್ನವನ್ನು ಗುರುವಿಗೆ ಒಪ್ಪಿಸಿ ಗುರುವಿನ ಅನುಮತಿ ಪಡೆದು ಯಾವಾಗಲೂ ಆ ಭಿಕ್ಷಾನ್ನವನ್ನು ಭುಂಜಿಸಬೇಕು.

೧೩. ಗುರುವಿನ ಸೇವಾಕರ್ಮದಲ್ಲಿ ಉದ್ಯಮಿಯಾಗಿರಬೇಕು. ಗುರುವಿಗೆ ಪ್ರೀತಿಯನ್ನು ಉಂಟುಮಾಡುವಂತೆ ವರ್ತಿಸಬೇಕು. ಮತ್ತು ಗುರುವಿನಿಂದ ಕರೆಯಲ್ಪಟ್ಟ ಸಮಯದಲ್ಲಿ ಗುರುಸನ್ನಿಧಿಗೆ ಹೋಗಿ ತತ್ಪರತೆಯಿಂದ ಕೂಡಿ ಬೇರೆ ವಿಷಯಗಳಲ್ಲಿ ಮನಸ್ಸನ್ನು ಇಡದೆ ವೇದವನ್ನು ಪಠಿಸಬೇಕು.

೧೪. ಗುರುಕುಲದಲ್ಲಿದ್ದ ಬ್ರಹ್ಮಚಾರಿಯು ಗುರುಮುಖದಿಂದ ಒಂದು ವೇದ, ಎರಡು ವೇದ ಅಥವಾ ಎಲ್ಲ ವೇದಗಳನ್ನು ಶಕ್ತ್ಯನುಸಾರವಾಗಿ ಕಲಿತು, ಗುರುವಿಗೆ ಇಷ್ಟವಾದ ದ್ರವ್ಯವನ್ನು ಗುರುದಕ್ಷಿಣೆಯಾಗಿ ಒಪ್ಪಿಸಿ ಅನುಮತಿ ಪಡೆದು ಅಲ್ಲಿಂದ ಹಿಂತಿರುಗಬೇಕು.

ಗಾರ್ಹಸ್ಥ್ಯಶ್ರಮಕಾಮುಸ್ತು ಗೃಹಸ್ಥಾಶ್ರಮಮಾವಸೇತ್ ।
ವಾನಪ್ರಸ್ಥಾಶ್ರಮಂ ವಾಪಿ ಚತುರ್ಥಂ ವೇಚ್ಛಯಾತ್ಮನಃ ॥೧೫॥

ತಥೈವ ವಾ ಗುರೋರ್ಗೇಹೇ ದ್ವಿಜೋ ನಿಷ್ಠಾಮವಾಪ್ನುಯಾತ್ ।
ಗುರೋರಭಾವೇ ತತ್ಪುತ್ರೇ ತಚ್ಛಿಷ್ಯೇ ತತ್ಸುತಂ ವಿನಾ ॥೧೬॥

ಶುಶ್ರೂಷುರ್ನಿರಭಿಮಾನೋ ಬ್ರಹ್ಮಚರ್ಯಾಶ್ರಮಂ ವಸೇತ್ ।
ಉಪಾವೃತ್ತಸ್ತತಸ್ತಸ್ಮಾದ್ಗೃಹಸ್ಥಾಶ್ರಮಕಾಮ್ಯಯಾ ॥೧೭॥

ತತೋಽಸಮಾನರ್ಷಿಕುಲಾಂ ತುಲ್ಯಾಂ ಭಾರ್ಯಾಮರೋಗಿಣೀಮ್।
ಉದ್ವಹೇನ್ನ್ಯಾಯತೋಽವ್ಯಂಗಾಂ ಗೃಹಸ್ಥಾಶ್ರಮಕಾರಣಾತ್ ॥೧೮॥

---

೧೫. ಬ್ರಹ್ಮಚರ್ಯಾಶ್ರಮವು ಮುಗಿದ ಬಳಿಕ ಗೃಹಸ್ಥಾಶ್ರಮದಲ್ಲಿ ಇಷ್ಟವುಳ್ಳವನಾದರೆ ಗೃಹಸ್ಥಾಶ್ರಮವನ್ನು ಸ್ವೀಕರಿಸಿ ಆ ಧರ್ಮಗಳನ್ನು ಪಾಲಿಸಬೇಕು. ಅಥವಾ ತನ್ನ ಇಷ್ಟದಂತೆ ಗೃಹಸ್ಥಾಶ್ರಮವನ್ನು ಬಿಟ್ಟು ವಾನಪ್ರಸ್ಥಾಶ್ರಮವನ್ನೂ, ಸನ್ಯಾಸಾಶ್ರಮವನ್ನೂ ಸ್ವೀಕರಿಸಬಹುದು.

೧೬. ಅಥವಾ ಬ್ರಹ್ಮಚಾರಿಯು ತನ್ನ ಧರ್ಮಗಳನ್ನು ಆಚರಿಸುತ್ತ ಗುರುಕುಲದಲ್ಲಿ ನೈಷ್ಠಿಕನಾಗಿ ವಾಸಮಾಡಬಹುದು. ಗುರುಕುಲದಲ್ಲಿ ನೈಷ್ಠಿಕ-ನಾಗಿರುವವನು ಗುರುವು ಇಲ್ಲದಿದ್ದರೆ ಗುರುಪುತ್ರನಲ್ಲಿಯೂ, ಅವನು ಇಲ್ಲದಿದ್ದರೆ ಗುರುಶಿಷ್ಯನಲ್ಲಿಯೂ ಸೇವೆಮಾಡಿಕೊಂಡಿರಬೇಕು.

೧೭. ಆಗ ಅಭಿಮಾನವಿಲ್ಲದವನಾಗಿ ಗುರು-ಗುರುಪುತ್ರ-ಅಥವಾ ಶಿಷ್ಯರಲ್ಲಿ ಸೇವೆಮಾಡುತ್ತ ಬ್ರಹ್ಮಚರ್ಯಾಶ್ರಮದಿಂದ ವರ್ತಿಸಬೇಕು. ಗೃಹಸ್ಥಾಶ್ರಮದ ಕಾಮನೆಯಿಂದಿರುವವನು ಗುರುಕುಲದಿಂದ ಸಮಾವರ್ತವನ್ನು ಹೊಂದುವನು.

೧೮. ತರುವಾಯ ಬೇರೆಯಾದ ಗೋತ್ರ-ಪ್ರವರಗಳಲ್ಲಿ ಜನಿಸಿದವಳೂ, ಅನುರೂಪಳೂ, ರೋಗವಿಲ್ಲದವಳೂ ಮತ್ತು ಊನಾಂಗಿಯಲ್ಲದವಳೂ ಆದ ಕನ್ಯೆಯನ್ನು ಗೃಹಸ್ಥಾಶ್ರಮಧರ್ಮದ ಇಷ್ಟವುಳ್ಳವನು ಪಾಣಿಗ್ರಹಣ ಮಾಡಿಕೊಳ್ಳಬೇಕು.

ಸ್ವಕರ್ಮಣಾ ಧನಂ ಲಬ್ಧ್ವಾ ಪಿತೃದೇವಾತಿಥೀಂಸ್ತಥಾ ।
ಸಮ್ಯಕ್ಸಮ್ಪ್ರೀಣಯೇದ್ಭಕ್ತ್ಯಾ ಪೋಷಯೇಚ್ಚಾಶ್ರಿತಾಂಸ್ತಥಾ ॥೧೯॥

ಭೃತ್ಯಾತ್ಮಜಾಙ್ಗಾಮಯೋಽಥ ದೀನಾರ್ಥಿಪತಿತಾನಪಿ ।
ಯಥಾಶಕ್ತ್ಯನ್ನದಾನೇನ ವಯಾಂಸಿ ಪಶವಸ್ತಥಾ ॥೨೦॥

ಏಷ ಧರ್ಮೋ ಗೃಹಸ್ಥಸ್ಯ ಋತಾವಭಿಗಮಸ್ತಥಾ ।
ಪಞ್ಚಯಜ್ಞವಿಧಾನಂ ತು ಯಥಾಶಕ್ತಿ ನ ಹಾಪಯೇತ್ ॥೨೧॥

ಪಿತೃದೇವಾತಿಥಿಜ್ಞಾತಿಭುಕ್ತಶೇಷಂ ಸ್ವಯಂ ನರಃ ।
ಭುಞ್ಜೀತ ಚ ಸಮಂ ಭೃತ್ಯೈರ್ಯಥಾವಿಭವಮಾತ್ಮನಃ ॥೨೨॥

---

೧೯. ತನಗೆ ವಿಹಿತವಾದ ಧನಾರ್ಜನದ ಉಪಾಯದಿಂದ ಧನವನ್ನು ಸಂಪಾದಿಸಿ ಭಕ್ತಿಯಿಂದ ಪಿತೃ-ದೇವ-ಅತಿಥಿಗಳನ್ನು ಸತ್ಕರಿಸಿ ಪ್ರೀತಿಗೊಳಿಸಬೇಕು. ಮತ್ತು ಆಶ್ರಿತ ವರ್ಗವನ್ನು ಪ್ರೇಮದಿಂದ ಪೋಷಿಸಬೇಕು.

೨೦. ಸೇವಕ, ಪುತ್ರ, ಕನ್ಯೆ, ದೀನ, ಅರ್ಥಿ ಮತ್ತು ಪತಿತ ಇವರನ್ನು ಯಥಾಶಕ್ತಿಯಾಗಿ ಅವರಿಗೆ ಸಂತೋಷವನ್ನುಂಟುಮಾಡುವಂತೆ ಅನ್ನದಾನ ಮಾಡಿ ರಕ್ಷಿಸಬೇಕು. ಹಾಗು ಪಶು-ಪಕ್ಷಿಗಳನ್ನೂ ಅನ್ನವಿಟ್ಟು ಪೋಷಿಸಬೇಕು.

೨೧. ಇದೆಲ್ಲವೂ ಗೃಹಸ್ಥಾಶ್ರಮಿಯ ಧರ್ಮವಾಗಿರುವುದು. ಮತ್ತು ಋತುಸಮಯದಲ್ಲಿ ಪತ್ನೀಸಂಗ, ಪಂಚಮಹಾಯಜ್ಞಗಳ ಅನುಷ್ಠಾನ— ಇವುಗಳನ್ನು ಯಥಾಶಕ್ತಿಯಾಗಿ ಆಚರಿಸಬೇಕು. ಈ ಧರ್ಮತ್ಯಾಗವು ಪಾಪಕರವಾದುದು.

೨೨. ಗೃಹಸ್ಥನು ತನ್ನ ಸಂಪತ್ತಿನ ವಿಭವವನ್ನು ಅನುಸರಿಸಿ ಸಿದ್ಧಗೊಳಿಸಿದ ಅನ್ನದಿಂದ ಮೊದಲು ಪಿತೃ-ದೇವ-ಅತಿಥಿ-ಜ್ಞಾತಿ ವರ್ಗವನ್ನು ಸಂತೋಷಪಡಿಸಿ ಮಿಕ್ಕ ಅನ್ನವನ್ನು ತಾನು ತನ್ನ ಪೋಷ್ಯವರ್ಗದ ಸಂಗಡ ಭುಂಜಿಸಬೇಕು.

ಏಷ ತೂದ್ದೇಶತಃ ಪ್ರೋಕ್ತೋ ಗೃಹಸ್ಥಸ್ಯಾಶ್ರಮೋ ಮಯಾ ।
ವಾನಪ್ರಸ್ಥಸ್ಯ ಧರ್ಮಂ ತೇ ಕಥಯಾಮ್ಯವಧಾರ್ಯತಾಮ್ ॥೨೩॥

ಅಪತ್ಯಸನ್ತತಿಂ ದೃಷ್ಟ್ವಾ ಪ್ರಾಜ್ಞೋ ದೇಹಸ್ಯ ಚಾನತಿಮ್ ।
ವಾನಪ್ರಸ್ಥಾಶ್ರಮಂ ಗಚ್ಛೇದಾತ್ಮನಃ ಶುದ್ಧಿಕಾರಣಾತ್ ॥೨೪॥

ತತ್ರಾರಣ್ಯೋಪಭೋಗಶ್ಚ ತಪೋಭಿಶ್ಚಾತ್ಮಕರ್ಷಣಮ್ ।
ಭೂಮೌ ಶಯ್ಯಾ ಬ್ರಹ್ಮಚರ್ಯಂ ಪಿತೃದೇವಾತಿಥಿಕ್ರಿಯಾಃ ॥೨೫॥

ಹೋಮಸ್ತ್ರಿಷವಣಂ ಸ್ನಾನಂ ಜಟಾವಲ್ಕಲಧಾರಣಮ್ ।
ಮೌನಾದಿಕರಣಂ ಚೈವ ವನ್ಯಸ್ನೇಹನಿಷೇವಣಮ್ ॥೨೬॥

---

೨೩. ಪುತ್ರನೆ! ನಾನು ನಿನಗೆ ಹೀಗೆ ಗೃಹಸ್ಥಾಶ್ರಮಧರ್ಮವನ್ನು ಸಂಕ್ಷೇಪವಾಗಿ ಹೇಳಿರುವೆನು. ಮುಂದೆ ವಾನಪ್ರಸ್ಥಾಶ್ರಮಧರ್ಮವನ್ನು ಉಪದೇಶಿಸುವೆನು, ಗಮನವಿಟ್ಟು ಕೇಳುವವನಾಗು.

೨೪. ಗೃಹಸ್ಥಾಶ್ರಮಿಯು ಆ ಆಶ್ರಮಧರ್ಮದಿಂದ ಕೃತಕೃತ್ಯನಾಗಿ ಪುತ್ರಸಂತತಿಯನ್ನೂ ಮತ್ತು ತನ್ನ ದೇಹದ ಜೀರ್ಣತೆಯನ್ನೂ ಕಂಡು ಆತ್ಮವನ್ನು ಶುದ್ಧಿಗೊಳಿಸುವುದಕ್ಕೋಸ್ಕರ ವಾನಪ್ರಸ್ಥಾಶ್ರಮಧರ್ಮವನ್ನು ಆಚರಿಸಬೇಕು.

೨೫. ವಾನಪ್ರಸ್ಥಾಶ್ರಮಿಯ ಕರ್ತವ್ಯಧರ್ಮಗಳಲ್ಲಿ ಗಡ್ಡೆ-ಗೆಣಸುಗಳ ಆಹಾರ, ತಪಸ್ಸನ್ನು ಮಾಡಿ ಅದರಿಂದ ಕಾಯಶೋಷಣೆ, ಭೂಮಿಯಲ್ಲಿ ಶಯನ, ಬ್ರಹ್ಮಚರ್ಯ ಮತ್ತು ಪಿತೃದೇವತೆ—ಅತಿಥಿಸತ್ಕಾರಗಳು ಮುಖ್ಯವಾದುವು.

೨೬. ಹಾಗು ಸಾಯಂಕಾಲ-ಪ್ರಾತಃಕಾಲಗಳಲ್ಲಿ ಹೋಮ, ತ್ರಿಷವಣ ಸ್ನಾನ, ಜಟಾ-ನಾರುಬಟ್ಟೆಗಳನ್ನು ಧರಿಸುವುದು, ಮೌನಾಚರಣ ಮತ್ತು ಕಾಡಿನಲ್ಲಿರುವ ತೈಲಾದಿಗಳ ಸೇವನೆ—ಇವುಗಳು ವಾನಪ್ರಸ್ಥಾಶ್ರಮಿಯ ಕರ್ತವ್ಯಗಳಾಗಿವೆ.

ಇತ್ಯೇಷ ಪಾಪಶುದ್ಧ್ಯರ್ಥಮಾತ್ಮನಶ್ಚೋಪಕಾರಕಃ ।
ವಾನಪ್ರಸ್ಥಾಶ್ರಮಸ್ತಸ್ಮಾದ್ಭಿಕ್ಷೋಸ್ತು ಚರಮೋಽಪರಃ ॥೨೭॥

ಚತುರ್ಥಸ್ಯ ಸ್ವರೂಪಂ ತು ಶ್ರೂಯತಾಮಾಶ್ರಮಸ್ಯ ಯತ್ ।
ಯಶ್ಚ ಧರ್ಮೋಽಸ್ಯ ಧರ್ಮಜ್ಞೈಃ ಪ್ರೋಕ್ತಸ್ತಾತ ಮಹಾತ್ಮಭಿಃ ॥೨೮॥

ಸರ್ವಸಙ್ಗಪರಿತ್ಯಾಗೋ ಬ್ರಹ್ಮಚರ್ಯಮಕೋಪತಾ ।
ಜಿತೇನ್ದ್ರಿಯತ್ವಮಾವಾಸೇ ನೈಕಸ್ಮಿನ್ವಸತಿಶ್ಚಿರಮ್ ॥೨೯॥

ಅನಾರಮ್ಭಸ್ತಥಾಹಾರೇ ಭಿಕ್ಷಾನ್ನಂ ಚೈಕಕಾಲಿಕಮ್ ।
ಆತ್ಮಜ್ಞಾನಾವಬೋಧಂ ಚ ತಥಾ ಚಾತ್ಮಾವಲೋಕನಮ್ ॥೩೦॥

---

೨೭. ಈ ವಾನಪ್ರಸ್ಥಾಶ್ರಮಧರ್ಮಗಳ ಅನುಷ್ಠಾನವು ಅನೇಕ ಜನ್ಮಾರ್ಜಿತವಾದ ಪಾಪಗಳನ್ನು ಕಳೆದು ಆತ್ಮನಲ್ಲಿ ಉತ್ತಮ ಸಂಸ್ಕಾರವನ್ನು ಉಂಟುಮಾಡುವುದು. ಈ ಆಶ್ರಮದ ಮುಂದೆ ಉತ್ತಮವಾದ ಸನ್ಯಾಸಾಶ್ರಮವು ಮತ್ತೊಂದಾಗಿದೆ.

೨೮. ಪುತ್ರನೆ ! ನಾಲ್ಕನೆಯದಾದ ಸನ್ಯಾಸಾಶ್ರಮದ ಸ್ವರೂಪವನ್ನು ಕೇಳು. ಹಾಗು ಮಹಾತ್ಮರಾದ ಧರ್ಮವೇತ್ತರಿಂದ ಸನ್ಯಾಸಿಗೆ ಕರ್ತವ್ಯವಾಗಿ ನಿರ್ದೇಶಿಸಿಲ್ಪಟ್ಟ ಧರ್ಮಗಳನ್ನು ಕೇಳು.

೨೯. ಸರ್ವಸಂಗವನ್ನು ತ್ಯಜಿಸುವುದು, ಬ್ರಹ್ಮಚರ್ಯವ್ರತ, ಕೋಪವಿಲ್ಲದಂತೆ ಶಾಂತತೆಯಿಂದ ಇರುವುದು, ಇಂದ್ರಿಯನಿಗ್ರಹ ಮತ್ತು ಚಿರಕಾಲ ಒಂದು ಕಡೆಯಲ್ಲಿ ವಸತಿಯನ್ನು ಮಾಡದಿರುವುದು ಇವು ಸನ್ಯಾಸಧರ್ಮಗಳಲ್ಲಿ ಸೇರಿವೆ.

೩೦. ತನ್ನ ಆಹಾರವನ್ನು ತಾನು ಸಜ್ಜುಗೊಳಿಸದಿರುವುದು, ಒಂದೇ ಸಮಯದಲ್ಲಿ ಭಿಕ್ಷಾಟನಮಾಡಿ ಭಿಕ್ಷಾನ್ನವನ್ನು ಭುಂಜಿಸುವುದು, ಅನುಭವ ಪರ್ಯವಸಾನವಾಗುವಂತೆ ಆತ್ಮಜ್ಞಾನನಿಷ್ಠೆ, ಮತ್ತು ಜ್ಞಾನಪರಿಪಾಕದಿಂದ ಆತ್ಮಸಾಕ್ಷಾತ್ಕಾರ—ಇವುಗಳು ಸನ್ಯಾಸಧರ್ಮವೆಂದು ಗಣಿಸಲ್ಪಟ್ಟವೆ.

ಚತುರ್ಥೋ ಹ್ಯಾಶ್ರಮೋ ಧರ್ಮೋ ಮಯಾಯಂ ತೇ ನಿವೇದಿತಃ ।
ಸಾಮಾನ್ಯಮನ್ಯವರ್ಣಾನಾಮಾಶ್ರಮಾಣಾಂ ಚ ಮೇ ಶೃಣು ॥೩೧॥

ಸತ್ಯಂ ಶೌಚಮಹಿಂಸಾ ಚ ಅನಸೂಯಾ ತಥಾ ಕ್ಷಮಾ ।
ಆನೃಶಂಸ್ಯಮಕಾರ್ಪಣ್ಯಂ ಸಂತೋಷಶ್ಚಾಷ್ಟಮೋ ಗುಣಃ ॥೩೨॥

ಏತೇ ಸಂಕ್ಷೇಪತಃ ಪ್ರೋಕ್ತಾ ಧರ್ಮಾ ವರ್ಣಾಶ್ರಮೇಷು ಚ ।
ಏತೇಷು ನಿತ್ಯಧರ್ಮೇಷು ನಿತ್ಯಂ ತಿಷ್ಠೇತ್ಸಮನ್ತತಃ ॥೩೩॥

ಸ ಯಾತಿ ಬ್ರಹ್ಮಲೋಕಂ ಹಿ ಯಾವದಿನ್ದ್ರಾಶ್ಚತುರ್ದಶ ॥೩೪॥

---

೩೧. ಹೀಗೆ ನಾಲ್ಕನೆಯದಾದ ಸನ್ಯಾಸಾಶ್ರಮಕ್ಕೆ ಅಂಗವಾದ ಧರ್ಮಗಳನ್ನು ನಿನಗೆ ಉಪದೇಶಿಸಿರುವೆನು. ಇನ್ನು ಮುಂದೆ ಇತರ ವರ್ಣಗಳಿಗೂ ಆಶ್ರಮಗಳಿಗೂ ಅಂಗವಾದ ಸಾಮಾನ್ಯ ಧರ್ಮಗಳನ್ನು ಹೇಳುವೆನು. ಅವು-ಗಳನ್ನು ಕೇಳು.

೩೨. ಸತ್ಯವಚನ, ಶೌಚಾನುಷ್ಠಾನ, ಅಹಿಂಸೆ, ಅಸೂಯೆಪಡದಿರು-ವುದು, ತಾಳ್ಮೆ, ಕ್ರೂರಸ್ವಭಾವವಿಲ್ಲದ ಸೌಮ್ಯತೆ, ಲೋಭಮಾಡದಿರುವುದು, ಮತ್ತು ಸಂತೋಷ ಈ ಎಂಟು ಗುಣಗಳು ಸರ್ವವರ್ಣಿಗಳಿಗೂ ಆಶ್ರಮಿಗಳಿಗೂ ಸಾಮಾನ್ಯವಾದುವುಗಳು.

೩೩. ಹೀಗೆ ಆಯಾಯ ವರ್ಣ ಮತ್ತು ಆಶ್ರಮಗಳಲ್ಲಿ ಆಚರಿಸಬೇಕಾದ ಧರ್ಮಗಳು ನನ್ನಿಂದ ಸಂಕ್ಷೇಪವಾಗಿ ಹೇಳಲ್ಪಟ್ಟಿವೆ. ಇವುಗಳಲ್ಲಿ ನಿತ್ಯಧರ್ಮ-ಗಳಲ್ಲಿ ಎಲ್ಲ ಕಾಲದೇಶಗಳಲ್ಲಿಯೂ ಜಾಗರೂಕನಾಗಿರಬೇಕು.

೩೪. ಹೀಗೆ ಸ್ವಲ್ಪವೂ ಲೋಪವಿಲ್ಲದಹಾಗೆ ತನ್ನ ವರ್ಣ-ಆಶ್ರಮ-ಧರ್ಮಗಳಲ್ಲಿಯೂ ಸಾಮಾನ್ಯಗುಣಗಳಲ್ಲಿಯೂ ಮತ್ತು ನಿತ್ಯಧರ್ಮಗಳಲ್ಲಿಯೂ ತತ್ಪರನಾದ ಮಾನವನು ಹದಿನಾಲ್ಕು ಮಂದಿಯ ಇಂದ್ರಾಧಿಕಾರವು ಕಳೆಯುವಷ್ಟು ದೀರ್ಘಕಾಲ ಬ್ರಹ್ಮಲೋಕ ಸುಖವನ್ನು ಹೊಂದುವನು.

ಯಶ್ಚೋಲ್ಲಙ್ಘ್ಯ ಸ್ವಕಂ ಧರ್ಮಂ ಸ್ವವರ್ಣಾಶ್ರಮಸಂಜ್ಞಿತಮ್ ।
ನರೋಽನ್ಯಥಾ ಪ್ರವರ್ತೇತ ಸ ದಣ್ಡ್ಯೋ ಭೂಭೃತೋ ಭವೇತ್ ॥೩೫॥

ಯೇ ಚ ಸ್ವಧರ್ಮಸನ್ತ್ಯಾಗಾತ್ಪಾಪಂ ಕುರ್ವನ್ತಿ ಮಾನವಾಃ ।
ಉಪೇಕ್ಷಿತಸ್ತಾನ್ನೃಪತೇರಿಷ್ಟಾಪೂರ್ತಂ ಪ್ರಯಾತ್ಯಧಃ ॥೩೬॥

ತಸ್ಮಾದ್ರಾಜ್ಞಾ ಪ್ರಯತ್ನೇನ ಸರ್ವೇ ವರ್ಣಾಃ ಸ್ವಧರ್ಮತಃ ।
ಪ್ರವರ್ತನ್ತೇಽನ್ಯಥಾ ದಣ್ಡ್ಯಾಃ ಸ್ಥಾಪ್ಯಾಶ್ಚೈವ ಸ್ವಕರ್ಮಸು ॥೩೭॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಮದಾಲಸಾನುಶಾಸನಂ ನಾಮ ಪಞ್ಚವಿಂಶೋಽಧ್ಯಾಯಃ

---

೩೫. ಯಾವ ಮಾನವನು ತನಗೆ ವಿಹಿತವಾದ ವರ್ಣಧರ್ಮ-ಆಶ್ರಮ-ಧರ್ಮಗಳನ್ನು ಉಲ್ಲಂಘಿಸಿ ಬೇರೆ ಉನ್ಮಾರ್ಗದಲ್ಲಿ ವರ್ತಿಸುವನೊ; ಅವನು ರಾಜನಿಗೆ ಶಿಕ್ಷಾರ್ಹನಾಗುವನು.

೩೬. ಯಾವ ಮಾನವರು ಧರ್ಮದಲ್ಲಿ ಶ್ರದ್ಧೆಯನ್ನು ತ್ಯಜಿಸಿ ಪಾಪಕರ್ಮವನ್ನು ಮಾಡುವರೊ; ಅವರನ್ನು ಶಿಕ್ಷಿಸದೆ ಉಪೇಕ್ಷೆಮಾಡಿದ ರಾಜನಿಗೆ ತಾನು ಮಾಡಿದ ಇಷ್ಟ-ಪೂರ್ತಗಳೆಂಬ ಸತ್ಕರ್ಮಪುಣ್ಯವು ಕ್ಷಯಿಸು-ವುದು.

೩೭. ಆದುದರಿಂದ ರಾಜನು ಪ್ರಯತ್ನದಿಂದ ಎಲ್ಲರನ್ನೂ ಅವರವರ ವರ್ಣ-ಆಶ್ರಮಧರ್ಮಗಳಲ್ಲಿರುವಂತೆ ಮಾಡಬೇಕು. ಉಲ್ಲಂಘಿಸಿ ಹೋದವರನ್ನು ಶಿಕ್ಷಿಸಿ ಸ್ವಕರ್ಮತತ್ಪರರನ್ನಾಗಿ ಮಾಡಬೇಕು. ಹಾಗೆ ಮಾಡುವುದು ರಾಜ-ಧರ್ಮವು.

ಮಾರ್ಕಂಡೇಯ ಮಹಾಪುರಾಣದಲ್ಲಿ ಇಪ್ಪತ್ತೈದನೆಯ ಅಧ್ಯಾಯವು ಮುಗಿದುದು

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಷಡ್ತ್ರಿಂಶೋಽಧ್ಯಾಯಃ

(ಗೃಹಸ್ಥಾಶ್ರಮಧರ್ಮನಿರೂಪಣಮ್)

ಅಲರ್ಕ ಉವಾಚ :—

ಯತ್ಕಾರ್ಯಂ ಪುರುಷೇಣೇಹ ಗಾರ್ಹಸ್ಥ್ಯಮನುವರ್ತತಾ ।
ಬನ್ಧಶ್ಚ ಸ್ಯಾದಕರಣೇ ಕ್ರಿಯಾಯಾಂ ಯಸ್ಯ ಚೋಚ್ಛ್ರಿತಿಃ ॥೧॥

ಉಪಕಾರಾಯ ಯನ್ನೄಣಾಂ ಯಚ್ಚ ವರ್ಜ್ಯಂ ಗೃಹೇ ಸತಾಮ್ ।
ಯಥಾ ಚ ಕ್ರಿಯತೇ ತನ್ಮೇ ಯಥಾವತ್ಪೃಚ್ಛತೇ ವದ ॥೨॥

ಇಪ್ಪತ್ತಾರನೆಯ ಅಧ್ಯಾಯ

ಅಲರ್ಕನು ಹೇಳಿದನು :—

೧. ಜನನಿಯೆ ! ಗೃಹಸ್ಥಾಶ್ರಮದಲ್ಲಿರುವವನು ಯಾವ ಯಾವ ಕರ್ತವ್ಯಗಳನ್ನು ಮಾಡಬೇಕೊ; ಯಾವುದನ್ನು ಮಾಡದಿದ್ದರೆ ಪಾತಕವುಂಟಾಗುವುದೊ ; ಯಾವುದನ್ನು ಮಾಡಿದರೆ ಅಭ್ಯುದಯವುಂಟಾದೀತೊ ; ಆ ಧರ್ಮಗಳನ್ನು ಹೇಳು.

೨. ಗೃಹಸ್ಥಾಶ್ರಮದಲ್ಲಿರುವ ಮಾನವರಿಗೆ ಶ್ರೇಯಸ್ಸಿನ ರೂಪವಾದ ಉಪಕಾರವನ್ನು ಮಾಡುವುದು ಯಾವುದಿದೆಯೊ, ವರ್ಜನೀಯವಾದುದಿದೆಯೊ ; ಮತ್ತು ಕರ್ತವ್ಯವನ್ನು ಯಾವ ವಿಧಾನದಿಂದ ಆಚರಿಸಬೇಕೊ ಇದೆಲ್ಲವನ್ನೂ ಕೇಳುತ್ತಿದ್ದ ನನಗೆ ವಿವರಿಸು.

ಮದಾಲಸೋವಾಚ :—

ವತ್ಸ ಗಾರ್ಹಸ್ಥ್ಯಮಾಸ್ಥಾಯ ನರಃ ಸರ್ವಮಿದಂ ಜಗತ್ ।
ಪುಷ್ಣಾತಿ ತೇನ ಲೋಕಾಂಶ್ಚ ಸ ಜಯತ್ಯಭಿವಾಞ್ಛಿತಾನ್ ॥೩॥

ಪಿತರೋ ಮುನಯೋ ದೇವಾ ಭೂತಾನಿ ಮನುಜಾಸ್ತಥಾ ।
ಕೃಮಿಕೀಟಪತಙ್ಗಾಶ್ಚ ವಯಾಂಸಿ ಪಶವೋಽಸುರಾಃ ॥೪॥

ಗೃಹಸ್ಥಮುಪಜೀವನ್ತಿ ತತಸ್ತೃಪ್ತಿಂ ಪ್ರಯಾನ್ತಿ ಚ ।
ಮುಖಂ ಚಾಸ್ಯ ನಿರೀಕ್ಷನ್ತೇ ಅಪಿ ನೋ ದಾಸ್ಯತೀತಿ ವೈ ॥೫॥

ಸರ್ವಸ್ಯಾಧಾರಭೂತೇಯಂ ವತ್ಸ ಧೇನುಸ್ತ್ರಯೀಮಯೀ ।
ಯಸ್ಯಾಂ ಪ್ರತಿಷ್ಠಿತಂ ವಿಶ್ವಂ ವಿಶ್ವಹೇತುಶ್ಚ ಯಾ ಮತಾ ॥೬॥

ಮದಾಲಸೆಯು ಹೇಳಿದಳು :—

೩. ವತ್ಸನೆ! ಗೃಹಸ್ಥಾಶ್ರಮವನ್ನು ಕೈಗೊಂಡಿರುವ ನರನು ಸಮಸ್ತ ಜಗತ್ತನ್ನು ಪೋಷಿಸುವನು. ಅಂತಹ ಪುಣ್ಯದಿಂದ ತನ್ನ ಇಷ್ಟವಾದ ಲೋಕಗಳನ್ನು ಗೆದ್ದು ಸುಖವನ್ನು ಅನುಭವಿಸುತ್ತಾನೆ.

೪. ಪುತ್ರನೆ! ಜಗತ್ತಿನಲ್ಲಿರುವ ಪ್ರಾಣಿವರ್ಗದಲ್ಲಿ ಪಿತೃ, ಮುನಿ, ದೇವತೆ, ಭೂತ, ಮಾನವ, ಕ್ರಿಮಿ, ಕೀಟ, ಪಕ್ಷಿ, ಪತಂಗ, ಪಶು ಮತ್ತು ಅಸುರ— ಇಷ್ಟು ಬಗೆಯ ಪ್ರಾಣಿಗಳು ಗೃಹಸ್ಥಾಶ್ರಮದಲ್ಲಿರುವ ಮಾನವನನ್ನು ಉಪಜೀವಿಸುವರು.

೫. ಹಿಂದೆ ಹೇಳಿದ ಎಲ್ಲ ಜಾತಿಯ ಪ್ರಾಣಿವರ್ಗವು "ಈ ಗೃಹಸ್ಥನು ನಮಗೆ ಏನಾದರೂ ಕೊಡುವನೆ" ಎಂದು ಭಾವಿಸಿ ಆತನ ಮುಖವನ್ನು ನಿರೀಕ್ಷಿಸುತ್ತಿದ್ದು ಗೃಹಸ್ಥನನ್ನು ಉಪಜೀವಿಸಿಕೊಂಡಿರುವುದು. ಮತ್ತು ಅವನಿಂದ ತೃಪ್ತಿಸುಖಗಳನ್ನು ಹೊಂದುವುದು.

೬. ಪುತ್ರನೆ! ಎಲ್ಲ ಧರ್ಮಸಂಪ್ರದಾಯಗಳಿಗೆ ಆಧಾರವಾದ ಮೂರು ವೇದಗಳೆಂಬುದು ಒಂದು ಗೋಮಾತೆಯು. ವಿಶ್ವಕ್ಕೆ ಕಾರಣವೆಂದು ಸಮ್ಮತವಾದ ವೇದ ಗೋವಿನಲ್ಲಿ ವಿಶ್ವವು ನೆಲೆಸಿರುವುದು.

ಋಕ್ಪೃಷ್ಠಾ ಸೌ ಯಜುರ್ಮಧ್ಯಾ ಸಾಮವಕ್ತ್ರಶಿರೋಧರಾ ।
ಇಷ್ಟಾಪೂರ್ತವಿಷಾಣಾ ಚ ಸಾಧುಸೂಕ್ತತನೂರುಹಾ ॥೭॥

ಶಾನ್ತಿಪುಷ್ಟಿಶಕೃನ್ಮೂತ್ರಾ ವರ್ಣಪಾದಪ್ರತಿಷ್ಠಿತಾ ।
ಆಜೀವ್ಯಮಾನಾ ಜಗತಾಂ ಸಾಕ್ಷಯಾ ನಾಪಚೀಯತೇ ॥೮॥

ಸ್ವಾಹಾಕಾರಃ ಸ್ವಧಾಕಾರೋ ವಷಟ್ಕಾರಶ್ಚ ಪುತ್ರಕ ।
ಹನ್ತಕಾರಸ್ತಥೈವಾನ್ಯಸ್ತಸ್ಯಾಃ ಸ್ತನಚತುಷ್ಟಯಮ್ ॥೯॥

ಸ್ವಾಹಾಕಾರಂ ಸ್ತನಂ ದೇವಾಃ ಪಿತರಶ್ಚ ಸ್ವಧಾಮಯಮ್ ।
ಮುನಯಶ್ಚ ವಷಟ್ಕಾರಂ ದೇವಭೂತಸುರೇತರಾಃ ॥೧೦॥

---

೭. ವೇದಗಳೆಂಬ ಗೋಮಾತೆಯು ಋಙ್ಮಂತ್ರಗಳೆಂಬ ಪೃಷ್ಠಭಾಗ, ಯಜುರ್ಮಂತ್ರಗಳೆಂಬ ಮಧ್ಯಭಾಗ, ಸಾಮವೇದವೆಂಬ ಮುಖ-ಕಂಠಗಳು, ಇಷ್ಟ-ಪೂರ್ತಕರ್ಮಗಳೆಂಬ ಕೊಂಬು ಮತ್ತು ಸೂಕ್ತಭಾಗವೆಂಬ ರೋಮ-ಗಳಿಂದ ಕೂಡಿರುವುದು.

೮. ಅಲ್ಲಲ್ಲಿ ವಿಹಿತವಾದ ಶಾಂತಿ-ಪುಷ್ಟಿ ಕರ್ಮಗಳೆಂಬ ಗೋಮೂತ್ರ-ಗೋಮಯಗಳಿಂದಲೂ, ವರ್ಣಗಳೆಂಬ ಪಾದಗಳಿಂದಲೂ ಕೂಡಿ ಪ್ರತಿಷ್ಠಿತ-ವಾದ ವೇದ ಧೇನುವು ಜಗತ್ತಿಗೆ ಉಪಜೀವ್ಯವಾಗಿದೆ. ಅದು ತಾನು ಅಕ್ಷಯ-ವಾದುದರಿಂದ ನಾಶಹೊಂದುವುದಿಲ್ಲ.

೯. "ಸ್ವಾಹಾ" ಮಂತ್ರದಿಂದ ಕೂಡಿದ ಹೋಮ, "ಸ್ವಧಾ" ಮಂತ್ರದಿಂದ ಕೂಡಿದ ಪಿತೃಕರ್ಮ, "ವಷಟ್" ಮಂತ್ರದಿಂದ ಕೂಡಿದ ಯಜ್ಞ, ಮತ್ತು "ಹಂತ" ಮಂತ್ರದಿಂದ ಕೂಡಿದ ಅತಿಥಿ ಸತ್ಕಾರಗಳು ಆ ವೇದಗೋಮಾತೆಗೆ ನಾಲ್ಕು ಸ್ತನಗಳಾಗಿವೆ.

೧೦. ದೇವತೆಗಳು ಸ್ವಾಹಾಕಾರವೆಂಬ ಸ್ತನವನ್ನೂ, ಪಿತೃಗಳು ಸ್ವಧಾಕಾರವೆಂಬ ಸ್ತನವನ್ನೂ ಮತ್ತು ಮುನಿ-ದೇವ-ಭೂತ-ಯಕ್ಷ-ರಾಕ್ಷಸರು ವಷಟ್ಕಾರ ಸ್ತನವನ್ನೂ ಸಂತತವಾಗಿ ಪಾನಮಾಡುವರು.

ಹನ್ತಕಾರಂ ಮನುಷ್ಯಾಶ್ಚ ಪಿಬನ್ತಿ ಸತತಂ ಸ್ತನಮ್ ।
ಏವಮಾಪ್ಯಾಯಯತ್ಯೇಷಾ ದೇವಾದೀನಖಿಲಾಂಸ್ತ್ರಯೀ ॥೧೧॥

ಏತದ್ವತ್ಸಚತುಷ್ಕಂ ತು ನರಃ ಸ್ತನಚತುಷ್ಟಯೇ ।
ನ ನಿಯುಜ್ಯಾದ್ಯಥಾಕಾಲಂ ತೇನ ಸ್ಯುಸ್ತೇ ವಿಮಾನಿತಾಃ ॥೧೨॥

ದೇವಾದೀನಖಿಲಾನ್ಯೇಷು ಸನ್ತರ್ಪಯತಿ ಮಾನವಃ ।
ತೇಷಾಮುಚ್ಛೇದಕರ್ತಾ ಯಃ ಪುರುಷೋಽತ್ಯನ್ತಪಾಪಕೃತ್ ॥೧೩॥

ಸ ತಮಸ್ಯನ್ಧತಾಮಿಸ್ರೇ ತಾಮಿಸ್ರೇ ಚ ನಿಮಜ್ಜತಿ ॥೧೪॥

ಯಸ್ತ್ವೇತಾಂ ಮಾನವೋ ಧೇನುಂ ಸ್ವೈರ್ವತ್ಸೈರಮರಾದಿಭಿಃ ।
ಪ್ರಾಪಯತ್ಯುಚಿತೇ ಕಾಲೇ ಸ ಸ್ವರ್ಗಾಯೋಪಪದ್ಯತೆ ॥೧೫॥

---

೧೧. ಹಾಗೆಯೆ ಅತಿಥಿಗಳಾಗಿ ಬಂದ ಮನುಜರು ಹಂತಕಾರವೆಂಬ ನಾಲ್ಕನೆಯ ಸ್ತನವನ್ನು ಪಾನಮಾಡುವರು. ಈ ವಿಧವಾಗಿ ವೇದಗಳೆಂಬ ಧೇನುವು ದೇವ-ಮೊದಲಾದವರ ವರ್ಗವನ್ನು ಪ್ರೀತಿಗೊಳಿಸುವುದು.

೧೨. ಯಾವ ಮನುಷ್ಯನು ವೇದ ಧೇನುವಿನ ಬಳಿಗೆ ಆಯಾಯ ಸಮಯದಲ್ಲಿ ದೇವ-ಪಿತೃ-ಮುನಿ-ಅತಿಥಿಗಳೆಂಬ ಕರುಗಳನ್ನು ನಿಯೋಜಿಸುವುದಿಲ್ಲವೊ ಅವನಿಂದ ದೇವಾದಿಗಳು ಅವಮಾನಗೊಳಿಸಲ್ಪಟ್ಟಂತೆ ಆಗುವರು.

೧೩. ಮಾನವನು ಯಾವ ಕರ್ಮಗಳಲ್ಲಿ ದೇವ-ಪಿತೃ-ಅತಿಥಿ-ಮುನಿಗಳನ್ನು ತೃಪ್ತಿಗೊಳಿಸಬೇಕೊ; ಅಂತಹ ಕರ್ಮಗಳಿಗೆ ಭಂಗವನ್ನು ತಂದವನು ಅತ್ಯಂತ ಪಾಪಭಾಗಿಯಾಗುವನು. ದೇವಾದಿಗಳ ತೃಪ್ತಿಯನ್ನು ಭಂಗಗೊಳಿಸುವುದು ಮಹಾಪಾತಕವು.

೧೪. ಅಂತಹ ಪಾಪಿಯು ತಾನು ಮಾಡಿರುವ ಪಾಪಕರ್ಮದ ನಿಮಿತ್ತವಾಗಿ ಹಿಂದೆ ಹೇಳಿರುವ ತಮ, ತಾಮಿಸ್ರ, ಅಂಧತಾಮಿಸ್ರ ಮುಂತಾದ ಅನೇಕ ನರಕಗಳಲ್ಲಿ ಕ್ರಮವಾಗಿ ಯಾತನೆಯನ್ನು ಅನುಭವಿಸುವನು.

೧೫. ಯಾವ ಪುಣ್ಯವಂತನು ಉಚಿತಕಾಲಗಳಲ್ಲಿ ವೇದವೆಂಬ ಧೇನುವನ್ನು ದೇವತೆ ಮುಂತಾದ ತನ್ನ ಕರುಗಳೊಡನೆ ಸೇರುವಂತೆ ಮಾಡುವನೊ; ಅವನು ಪುಣ್ಯಪ್ರಭಾವದಿಂದ ಸ್ವರ್ಗಸುಖವನ್ನು ಹೊಂದುವನು.

ತಸ್ಮಾತ್ಪುತ್ರ ಮನುಷ್ಯೇಣ ದೇವರ್ಷಿಪಿತೃಮಾನವಾಃ ।
ಭೂತಾನಿ ಚಾನುದಿವಸಂ ಪೋಷ್ಯಾಣಿ ಸ್ವತನುರ್ಯಥಾ ॥೧೬॥

ತಸ್ಮಾತ್ ಸ್ನಾತಃ ಶುಚಿರ್ಭೂತ್ವಾ ದೇವರ್ಷಿಪಿತೃತರ್ಪಣಮ್ ।
ಪ್ರಜಾಪತೇಸ್ತಥೈವಾದ್ಭಿಃ ಕಾಲೇ ಕುರ್ಯಾತ್ಸಮಾಹಿತಃ ॥೧೭॥

ಸುಮನೋಗನ್ಧಧೂಪೈಶ್ಚ ದೇವಾನಭ್ಯರ್ಚ್ಯ ಮಾನವಃ ।
ತತೋಽಗ್ನೇಸ್ತರ್ಪಣಂ ಕುರ್ಯಾದ್ದದ್ಯಾಚ್ಚ ಬಲಿಮಿತ್ಯಥ ॥೧೮॥

ಬ್ರಹ್ಮಣೇ ಗೃಹಮಧ್ಯೇ ತು ವಿಶ್ವೇದೇವೇಭ್ಯ ಏವ ಚ ।
ಧನ್ವನ್ತರಿಂ ಸಮುದ್ದಿಶ್ಯ ಪ್ರಾಗುದೀಚ್ಯಾಂ ಬಲಿಂ ಕ್ಷಿಪೇತ್ ॥೧೯॥

---

೧೬. ಪುತ್ರನೆ! ಆದುದರಿಂದ ಮನುಷ್ಯನು ತನ್ನ ದೇಹವನ್ನು ಆದರದಿಂದ ರಕ್ಷಿಸಿಕೊಂಡಂತೆ ಪ್ರತಿದಿನವೂ ದೇವ-ಋಷಿ-ಪಿತೃ-ಮನುಷ್ಯ ಮತ್ತು ಭೂತಗಳನ್ನು ಪೋಷಿಸಬೇಕು. ಅವರಿಗೆ ತೃಪ್ತಿಯನ್ನು ಕೊಡುವ ಕರ್ಮವನ್ನು ಆಚರಿಸಬೇಕು.

೧೭. ಈ ಕರ್ಮಾಚರಣೆಯನ್ನು ಅವಶ್ಯವಾಗಿ ನಡೆಸಬೇಕಾದುದರಿಂದ ಸ್ನಾನಮಾಡಿಕೊಂಡು ಶುಚಿಯಾಗಿ ದೇವ-ಋಷಿ-ಪಿತೃ ಮತ್ತು ಪ್ರಜಾಪತಿ ಈ ದೇವತೆಗಳಿಗೆ ಆಯಾಯ ಕಾಲವಲ್ಲಿ ಶ್ರದ್ಧಾಪೂರ್ವಕವಾಗಿ ನೀರಿನಿಂದ ತರ್ಪಣ-ವನ್ನು ಕೊಡಬೇಕು.

೧೮. ಮತ್ತು ಮಾನವನು ದೇವತೆಗಳನ್ನು ಪುಷ್ಪ-ಗಂಧ ಧೂಪ ಮುಂತಾದ ಉಪಚಾರಗಳಿಂದ ಪೂಜಿಸಬೇಕು. ತರುವಾಯ ಹೋಮದಿಂದ ಅಗ್ನಿದೇವನಿಗೆ ತೃಪ್ತಿಯನ್ನು ಸಂಪಾದಿಸಿ ಬಲಿದಾನವನ್ನು ಮಾಡಬೇಕು.

೧೯. ಬಲಿದಾನವನ್ನು ಅರ್ಪಿಸುವ ಸ್ಥಳವನ್ನು ಹೀಗೆ ಅರಿಯಬೇಕು. ಮನೆಯ ಮಧ್ಯಭಾಗದಲ್ಲಿ ಬ್ರಹ್ಮದೇವನಿಗೂ ವಿಶ್ವದೇವತೆಗಳಿಗೂ ಬಲಿಯನ್ನು ಕೊಡಬೇಕು. ಮತ್ತು ಪೂರ್ವ-ಪಶ್ಚಿಮ ದಿಕ್ಕುಗಳ ಮಧ್ಯವಾದ ಈಶಾನ್ಯ ದಿಕ್ಕಿನಲ್ಲಿ ಧನ್ವಂತರಿದೇವತೆಯನ್ನು ಸ್ಮರಿಸಿಕೊಂಡು ಬಲಿಯನ್ನು ನೀಡಬೇಕು

ಪ್ರಾಚ್ಯಾಂ ಶಕ್ರಾಯ ಯಾಮ್ಯಾಯಾಂ ಯಮಾಯ ಬಲಿಮಾಹ-
ರೇತ್ ।
ಪ್ರತೀಚ್ಯಾಂ ವರುಣಾಯಾಥ ಸೋಮಾಯೋತ್ತರತೋ ಬಲಿಮ್
॥೨೦॥
ದದ್ಯಾದ್ಧಾತ್ರೇ ವಿಧಾತ್ರೇ ಚ ಬಲಿಂ ದ್ವಾರೇ ಗೃಹಸ್ಯ ಚ ।
ಅರ್ಯಮ್ಣೇಽಥ ಬಹಿರ್ದದ್ಯಾದ್ಗೃಹೇಭ್ಯಶ್ಚ ಸಮನ್ತತಃ ॥೨೧॥

ನಕ್ತಞ್ಚರೇಭ್ಯೋ ಭೂತೇಭ್ಯೋ ಬಲಿಮಾಕಾಶತೋ ಹರೇತ್ ।
ಪಿತೄಣಾಂ ನಿರ್ವಪೇಚ್ಚೈವ ದಕ್ಷಿಣಾಭಿಮುಖಃ ಸ್ಥಿತಃ ॥೨೨॥

ಗೃಹಸ್ಥಸ್ತತ್ಪರೋ ಭೂತ್ವಾ ಸುಸಮಾಹಿತಮಾನಸಃ ॥೨೩॥

ತತಸ್ತೋಯಮುಪಾದಾಯ ತೇಷಾಮಾಚಮನಾಯ ವೈ ।
ಸ್ಥಾನೇಷು ನಿಕ್ಷಿಪೇತ್ಪ್ರಾಜ್ಞಸ್ತಾಸ್ತಾ ಉದ್ದಿಶ್ಯ ದೇವತಾಃ ॥೨೪॥

---

೨೦. ಹಾಗು ಪೂರ್ವದಿಕ್ಕಿನಲ್ಲಿ ಇಂದ್ರನಿಗೂ, ದಕ್ಷಿಣ ದಿಕ್ಕಿನಲ್ಲಿ ಯಮಧರ್ಮರಾಜನಿಗೂ, ಪಶ್ಚಿಮ ದಿಕ್ಕಿನಲ್ಲಿ ವರುಣನಿಗೂ ಮತ್ತು ಉತ್ತರ ದಿಕ್ಕಿನಲ್ಲಿ ಸೋಮದೇವತೆಗೂ ಬಲಿಯನ್ನು ಅರ್ಪಿಸಬೇಕು.

೨೧. ಮತ್ತು ಗೃಹದ ದ್ವಾರಭೂಮಿಯಲ್ಲಿ ಧಾತ-ವಿಧಾತ ಎಂಬ ದೇವತೆಗಳನ್ನು ಉದ್ದೇಶಮಾಡಿ ಬಲಿದಾನಮಾಡಬೇಕು. ಮನೆಯ ಹೊರ-ಭಾಗದಲ್ಲಿ ಸುತ್ತಲೂ ಅರ್ಯಮದೇವತೆಗೆ ಬಲಿಯನ್ನು ಅರ್ಪಿಸಬೇಕು.

೨೨. ರಾತ್ರಿಂಚರಗಳಾದ ಭೂತಗಳಿಗೆಂದು ಉದ್ದೇಶಮಾಡಿ ಬಲಿಯ ಅನ್ನವನ್ನು ಆಕಾಶದಲ್ಲಿ ಎಸೆಯಬೇಕು. ಮತ್ತು ದಕ್ಷಿಣ ದಿಕ್ಕಿಗೆ ಅಭಿಮುಖನಾಗಿ ಕುಳಿತುಕೊಂಡು ಪಿತೃಗಳಿಗೆ ಹವಿರ್ಭಾಗವನ್ನು ಕೊಡಬೇಕು.

೨೩. ಗೃಹಸ್ಥಾಶ್ರಮಧರ್ಮವನ್ನು ಆಚರಿಸುವವನು ಬಲಿದಾನ ಮತ್ತು ಪಿತೃಗಳಿಗೆ ನಿರ್ವಾಪ ಮಾಡುವ ಕರ್ಮಗಳಲ್ಲಿ ಸಮಾಧಾನವಾದ ಮನಸ್ಸುಳ್ಳವನೂ ತತ್ಪರತೆಯುಳ್ಳವನೂ ಆಗಿರಬೇಕು.

೨೪. ಹೀಗೆ ಆಯಾಯ ಸ್ಥಳಗಳಲ್ಲಿ ಬಲಿದಾನವನ್ನು ಮಾಡಿ ಆ ದೇವತೆಗಳ ಆಚಮನ (ಜಲಪಾನ) ಕ್ಕೋಸ್ಕರ ಪ್ರಾಜ್ಞನಾದ ಗೃಹಸ್ಥನು ಜಲವನ್ನು ತೆಗೆದುಕೊಂಡು ದೇವತೆಗಳನ್ನು ಉದ್ದೇಶಿಸಿ ಅರ್ಪಿಸಬೇಕು.

ಏವಂ ಗೃಹಬಲಿಂ ಕೃತ್ವಾ ಗೃಹೇ ಗೃಹಮತಿಃ ಶುಚಿಃ ।
ಆಪ್ಯಾಯನಾಯ ಭೂತಾನಾಂ ಕುರ್ಯಾದುತ್ಸರ್ಗಮಾದರಾತ್
॥೨೫॥

ಶ್ವಭ್ಯಶ್ಚ ಶ್ವಪಚೇಭ್ಯಶ್ಚ ವಯೋಭ್ಯಶ್ಚಾವಪೇದ್ಭುವಿ ।
ವೈಶ್ವದೇವಂ ಹಿ ನಾಮೈತತ್ಸಾಯಂ ಪ್ರಾತರುದಾಹೃತಮ್ ॥೨೬॥

ಆಚಮ್ಯ ಚ ತತಃ ಕುರ್ಯಾತ್ಪ್ರಾಜ್ಞೋ ದ್ವಾರಾವಲೋಕನಮ್ ।
ಮುಹೂರ್ತಸ್ಯಾಷ್ಟಮಂ ಭಾಗಮುದೀಕ್ಷ್ಯೋ ಹ್ಯತಿಥಿರ್ಭವೇತ್॥೨೭॥

ಅತಿಥಿಂ ತತ್ರ ಸಮ್ಪ್ರಾಪ್ತಮನ್ನಾದ್ಯೇನೋದಕೇನ ಚ ।
ಸಂಪೂಜಯೇದ್ಯಥಾಶಕ್ತಿ ಗನ್ಧಪುಷ್ಪಾದಿಭಿಸ್ತಥಾ ॥೨೮॥

---

೨೫. ಪವಿತ್ರನೂ, ಗೃಹಸ್ಥಾಶ್ರಮಧರ್ಮದಲ್ಲಿ ಶ್ರದ್ಧಾವಂತನೂ ಆದ ಮಾನವನು ಗೃಹದಲ್ಲಿ ಹೀಗೆ ಗೃಹಬಲಿಯನ್ನು ಮಾಡಿ ಭೂತಗಳನ್ನು ತೃಪ್ತಿಗೊಳಿಸಲು ಹೊರಭಾಗದಲ್ಲಿ ಆದರದಿಂದ ಅನ್ನದ ದಾನವನ್ನು ಮಾಡಬೇಕು.

೨೬. ನಾಯಿ, ಚಂಡಾಲ, ಪತಿತ ಮತ್ತು ಪಕ್ಷಿ ಇವುಗಳಿಗೆಂದು ಉದ್ದೇಶಮಾಡುತ್ತ ಅನ್ನವನ್ನು ನೆಲದಲ್ಲಿ ಇಡಬೇಕು. ಈ ಕರ್ಮಕ್ಕೆ ವೈಶ್ವದೇವವೆಂದು ಹೆಸರು. ಇದು ಸಾಯಂಕಾಲ-ಪ್ರಾತಃಕಾಲ ಈ ಎರಡು ವೇಳೆಗಳಲ್ಲಿಯೂ ಕರ್ತವ್ಯವಾಗಿದೆ.

೨೭. ತರುವಾಯ ಜ್ಞಾನಿಯಾದ ಗೃಹಸ್ಥನು ಆಚಮನಮಾಡಿ ಬಾಗಿಲ ಬಳಿಯಲ್ಲಿ ನಿಂತು ಅತಿಥಿಯನ್ನು ನಿರೀಕ್ಷಿಸಬೇಕು. ಒಂದು ಮುಹೂರ್ತದ ಎಂಟನೆಯ ಒಂದುಭಾಗದಷ್ಟು ಸಮಯದ ವರೆಗೆ ನಿಂತು ಅತಿಥಿಯನ್ನು ನಿರೀಕ್ಷಿಸಬೇಕು.

೨೮. ಆಗ ಅಲ್ಲಿಗೆ ಬಂದಿರುವ ಅತಿಥಿಯನ್ನು ಗಂಧ, ಪುಷ್ಪ ಮುಂತಾದುವುಗಳಿಂದ ಪೂಜಿಸಿ ಯಥಾಶಕ್ತಿಯಾಗಿ ಅನ್ನ-ಉದಕಗಳನ್ನು ನೀಡಿ ಸತ್ಕಾರ ಮಾಡಬೇಕು.

ನ ಮಿತ್ರಮತಿಥಿಂ ಕುರ್ಯಾನ್ನೈಕಗ್ರಾಮನಿವಾಸಿನಮ್ ।
ಅಜ್ಞಾತಕುಲನಾಮಾನಂ ತತ್ಕಾಲಸಮುಪಸ್ಥಿತಮ್ ॥೨೯॥

ಬುಭುಕ್ಷುಮಾಗತಂ ಶ್ರಾನ್ತಂ ಯಾಚಮಾನಮಕಿಂಚನಮ್ ।
ಬ್ರಾಹ್ಮಣಂ ಪ್ರಾಹುರತಿಥಿಂ ಸ ಪೂಜ್ಯಃ ಶಕ್ತಿತೋ ಬುಧೈಃ ॥೩೦॥

ನ ಪೃಚ್ಛೇದ್ಗೋತ್ರಚರಣಂ ಸ್ವಾಧ್ಯಾಯಂ ಚಾಪಿ ಪಣ್ಡಿತಃ ।
ಶೋಭನಾಶೋಭನಾಕಾರಂ ತಂ ಮನ್ಯೇತ ಪ್ರಜಾಪತಿಮ್ ॥೩೧॥

ಅನಿತ್ಯಂ ಹಿ ಸ್ಥಿತೋ ಯಸ್ಮಾತ್ತಸ್ಮಾದತಿಥಿರುಚ್ಯತೇ ।
ತಸ್ಮಿಂಸ್ತೃಪ್ತೇ ನೃಯಜ್ಞೋತ್ಥಾದೃಣಾನ್ಮುಚ್ಯೇದ್ಗೃಹಾಶ್ರಮೀ ॥೩೨॥

---

೨೯. ಮಿತ್ರನನ್ನೂ, ಒಂದೇ ಗ್ರಾಮದಲ್ಲಿ ವಾಸಮಾಡುವವನನ್ನೂ ಅತಿಥಿಸತ್ಕಾರಕ್ಕೆ ಯೋಗ್ಯನೆಂದು ಭಾವಿಸಬಾರದು. ಅತಿಥಿಯನ್ನು ನಿರೀಕ್ಷಿಸುತ್ತಿದ್ದ ಸಮಯದಲ್ಲಿ ಬಂದಿರುವ, ಗೋತ್ರ-ನಾಮಧೇಯಗಳನ್ನು ತಿಳಿಯದಿರುವ ಬ್ರಾಹ್ಮಣನು ಅತಿಥಿಯಾಗಲು ಅರ್ಹನು.

೩೦. ಹಸಿದುಕೊಂಡಿರುವವನೂ, ಆಯಾಸಗೊಂಡವನೂ, ಅನ್ನವನ್ನು ಯಾಚಿಸುವವನೂ ಮತ್ತು ದರಿದ್ರನೂ ಆದ ಬ್ರಾಹ್ಮಣನನ್ನು ಅತಿಥಿಯೆಂದು ಪ್ರಾಜ್ಞರು ಹೇಳುವರು. ಜ್ಞಾನಿಯಾದ ಗೃಹಸ್ಥನು ಅಂತಹ ಅತಿಥಿಯನ್ನು ಯಥಾಶಕ್ತಿಯಾಗಿ ಪೂಜಿಸಬೇಕು.

೩೧. ಕರ್ಮಜ್ಞಾನವುಳ್ಳ ಗೃಹಸ್ಥನು ಅತಿಥಿಯಾಗಿ ಬಂದವನಲ್ಲಿ ಗೋತ್ರ-ಪ್ರವರ-ವೇದಶಾಖೆಗಳನ್ನು ಪ್ರಶ್ನಿಸಬಾರದು. ಹಾಗೆ ಬಂದ ಅತಿಥಿಯು ಸುಂದರಾಕಾರನೊ, ಅಸುಂದರಾಕಾರನೊ, ಹೇಗಿದ್ದರೂ ಅವನನ್ನು ಪ್ರಜಾಪತಿ ದೇವತೆಯಂತೆ ಭಾವಿಸಬೇಕು.

೩೨. ಅನಿರೀಕ್ಷಿತವಾದ ಸ್ಥಿತಿಯುಳ್ಳವನಾದ್ದರಿಂದ ಆ ವ್ಯಕ್ತಿಯನ್ನು ಅತಿಥಿಯೆಂದು ಕರೆಯುತ್ತಾರೆ. ಅವನು ಸತ್ಕಾರದಿಂದ ತೃಪ್ತಿಹೊಂದಿದರೆ ಆಗ ಗೃಹಸ್ಥನು ಮನುಷ್ಯ ಯಜ್ಞದಿಂದ ಪರಿಹಾರ್ಯವಾದ ಋಣದಿಂದ ಮುಕ್ತನಾಗುವನು.

ತಸ್ಮಾದತ್ತ್ವಾ ತು ಯೋ ಭುಙ್ಕ್ತೇ ಸ್ವಯಂ ಕಿಲ್ಬಿಷಭುಙ್ನರಃ ।
ಸ ಪಾಪಂ ಕೇವಲಂ ಭುಙ್ಕ್ತೇ ಪುರೀಷಂ ಚಾನ್ಯಜನ್ಮನಿ ॥೩೩॥

ಅತಿಥಿರ್ಯಸ್ಯ ಭಗ್ನಾಶೋ ಗೃಹಾತ್ಪ್ರತಿನಿವರ್ತತೇ ।
ಸ ದತ್ತ್ವಾ ದುಷ್ಕೃತಂ ತಸ್ಮೈ ಪುಣ್ಯಮಾದಾಯ ಗಚ್ಛತಿ ॥೩೪॥

ಅಪ್ಯಮ್ಬುಶಾಕದಾನೇನ ಯಚ್ಚಾಪ್ಯಶ್ನಾತಿ ಸ ಸ್ವಯಮ್ ।
ಪೂಜಯೇತ ನರಃ ಶಕ್ತ್ಯಾ ತೇನೈವಾತಿಥಿಮಾದರಾತ್ ॥೩೫॥

ಕುರ್ಯಾಚ್ಚಾಹರಹಃ ಶ್ರಾದ್ಧಮನ್ನಾದ್ಯೇನೋದಕೇನ ಚ ।
ಪಿತೄನುದ್ದಿಶ್ಯ ವಿಪ್ರಾಂಶ್ಚ ಭೋಜಯೇದ್ವಿಪ್ರಮೇವ ವಾ ॥೩೬॥

---

೩೩. ಯಾವ ಮಾನವನು ಅತಿಥಿಗೆ ಅನ್ನದಾನವನ್ನು ಮಾಡದೆ ತಾನು ಮಾತ್ರ ಭುಂಜಿಸುವನೊ, ಅವನು ಪಾಪಫಲವನ್ನು ಭುಂಜಿಸುತ್ತಾನೆ. ಅಂತಹ ಅಧಮನು ಪಾಪಭಾಗಿಯಾಗಿ ಜನ್ಮಾಂತರದಲ್ಲಿ ಮಲಮೂತ್ರಗಳನ್ನು ಭುಂಜಿ-ಸುವನು.

೩೪. ಯಾವ ಗೃಹಸ್ಥನ ಮನೆಯಲ್ಲಿ ಸತ್ಕಾರವನ್ನು ಹೊಂದದೆ ಅತಿಥಿಯು ನಿರಾಶನಾಗಿ ಹಿಂತಿರುಗುವನೊ, ಅವನು ತನ್ನ ಪಾಪವನ್ನು ಆ ಗೃಹಸ್ಥನಿಗೆ ಕೊಟ್ಟು ಆ ಗೃಹಸ್ಥನ ಪುಣ್ಯವನ್ನು ತಾನು ಗಳಿಸಿಕೊಂಡು ಹೋಗುವನು.

೩೫. ಮಾನವನು ನೀರು-ಕಾಯಿಪಲ್ಯಗಳನ್ನು ಕೊಟ್ಟು ಅಥವಾ ತಾನು ಏನನ್ನು ಭುಂಜಿಸುವನೊ ಅದನ್ನು ಕೊಟ್ಟು ಯಥಾಶಕ್ತಿಯಾಗಿ ಅಲ್ಪಮಾತ್ರ ದ್ರವ್ಯದಿಂದಲಾದರೂ ಅತಿಥಿಯನ್ನು ಆದರದಿಂದ ಪೂಜಿಸಬೇಕು.

೩೬. ಮತ್ತು ಪ್ರತಿದಿನವೂ ಅನ್ನ-ಉದಕ ಮುಂತಾದುವುಗಳನ್ನು ಅರ್ಪಿಸಿ ಪಿತೃತೃಪ್ತಿಗೋಸ್ಕರ ಶ್ರಾದ್ಧಕರ್ಮವನ್ನು ಆಚರಿಸಬೇಕು. ಪಿತೃ-ದೇವತೆಗಳನ್ನು ಉದ್ದೇಶಮಾಡಿ ಅನೇಕ ಮಂದಿ ಬ್ರಾಹ್ಮಣರನ್ನು ಅಥವಾ ಒಬ್ಬ ಬ್ರಾಹ್ಮಣನನ್ನಾದರೂ ಭೋಜನಮಾಡಿಸಬೇಕು.

ಅನ್ನಸ್ಯಾಗ್ರಂ ತದುದ್ಧೃತ್ಯ ಬ್ರಾಹ್ಮಣಾಯೋಪಪಾದಯೇತ್ ।
ಭಿಕ್ಷಾಂ ಚ ಯಾಚಿತಾಂ ದದ್ಯಾತ್ಪರಿವ್ರಾಡ್ಬ್ರಹ್ಮಚಾರಿಣಾಮ್ ॥೩೭॥

ಗ್ರಾಸಪ್ರಮಾಣಾ ಭಿಕ್ಷಾ ಸ್ಯಾದಗ್ರಂ ಗ್ರಾಸಚತುಷ್ಟಯಮ್ ।
ಅಗ್ರಂ ಚತುರ್ಗುಣಂ ಪ್ರಾಹುರ್ಹನ್ತಕಾರಂ ದ್ವಿಜೋತ್ತಮಾಃ ॥೩೮॥

ಭೋಜನಂ ಹನ್ತಕಾರಂ ವಾ ಅಗ್ರಂ ಭಿಕ್ಷಾಮಥಾಪಿ ವಾ ।
ಅದತ್ತ್ವಾ ತು ನ ಭೋಕ್ತವ್ಯಂ ಯಥಾವಿಭವಮಾತ್ಮನಃ ॥೩೯॥

ಪೂಜಯಿತ್ವಾತಿಥೀನಿಷ್ಟಾನ್ ಜ್ಞಾತೀನ್ಬನ್ಧೂಂಸ್ತಥಾರ್ಥಿನಃ ।
ವಿಕಲಾನ್ಬಾಲವೃದ್ಧಾಂಶ್ಚ ಭೋಜಯೇಚ್ಚಾತುರಾಂಸ್ತಥಾ ॥೪೦॥

---

೩೭. ಅನ್ನದಲ್ಲಿ ಅಗ್ರ ಪರಿಮಾಣದ ಭಾಗವನ್ನು ತೆಗೆದುಕೊಂಡು ಬ್ರಾಹ್ಮಣನಿಗೆ ಅರ್ಪಣಮಾಡಬೇಕು. ಮತ್ತು ಸನ್ನ್ಯಾಸಿ-ಬ್ರಹ್ಮಚಾರಿಗಳು ಯಾಚಿಸಿದ ಭಿಕ್ಷೆಯನ್ನು ಅವರಿಗೆ ನೀಡಬೇಕು.

೩೮. ಒಂದು ಗ್ರಾಸದ ಪರಿಮಾಣದಲ್ಲಿ ನೀಡುವ ಅನ್ನವು ಭಿಕ್ಷೆಯು. ನಾಲ್ಕು ಗ್ರಾಸಗಳ ಪರಿಮಾಣದ ಅನ್ನವನ್ನು ಅಗ್ರವೆನ್ನುವರು. ಅಂತಹ ಅಗ್ರವು ಚತುರ್ಗುಣವಾದರೆ ಹದಿನಾರು ಗ್ರಾಸಗಳಷ್ಟು ಭಾಗವನ್ನು ದ್ವಿಜೋತ್ತಮರು ಹಂತಕಾರವೆಂದು ಕರೆಯುವರು.

೩೯. ಹೀಗಿರಲು ಪ್ರತಿಯೊಬ್ಬ ಗೃಹಸ್ಥನು ಭೋಜನ, ಹಂತಕಾರ, ಅಗ್ರ, ಭಿಕ್ಷೆಗಳಲ್ಲಿ ತನ್ನ ಶಕ್ತಿಗೆ ಅನುಸಾರವಾಗಿ ಯಾವುದನ್ನಾದರೂ ಅರ್ಥಿಗಳಿಗೆ ಅರ್ಪಿಸಬೇಕು. ಏನನ್ನೂ ಕೊಡದೆ ತಾನು ಭುಂಜಿಸಬಾರದು.

೪೦. ಅತಿಥಿಗಳಿಗೆ ಪೂಜೆಮಾಡಿ ತರುವಾಯ ತನ್ನ ಇಷ್ಟ ಜ್ಞಾತಿ-ಬಂಧುವರ್ಗಕ್ಕೆ ಭೋಜನಮಾಡಿಸಬೇಕು. ಮತ್ತು ಭಿಕ್ಷುಕರು, ಅಂಗಹೀನರು, ಬಾಲಕರು, ವೃದ್ಧರು, ರೋಗಿಗಳು—ಇಂತಹ ಅಶಕ್ತರಿಗೆ ಅನ್ನವನ್ನು ನೀಡ-ಬೇಕು.

ವಾಞ್ಛತೇ ಕ್ಷುತ್ಪರೀತಾತ್ಮಾ ಯಚ್ಚಾನ್ಯೋಽನ್ನಮಕಿಞ್ಚನಃ |
ಕುಟುಮ್ಬಿನಾ ಭೋಜನೀಯಃ ಸ್ವಸಮಂ ವಿಭವೇ ಸತಿ ||೪೧||

ಶ್ರೀಮನ್ತಂ ಜ್ಞಾತಿಮಾಸಾದ್ಯ ಯೋ ಜ್ಞಾತಿರವಸೀದತಿ |
ಸೀದತಾ ಯತ್ಕೃತಂ ತೇನ ತತ್ಪಾಪಂ ಸ ಸಮಶ್ನುತೇ ||೪೨||

ಸಾಯಂ ಚೈಷ ವಿಧಿಃ ಕಾರ್ಯಃ ಪೂರ್ವೋಕ್ತಂ ತತ್ರ ಚಾತಿಥಿಮ್ |
ಪೂಜಯೇಚ್ಚ ಯಥಾಶಕ್ತಿ ಶಯನಾಸನಭೋಜನೈಃ ||೪೩||

ಏವಮುದ್ವಹತಸ್ತಾತ ಗಾರ್ಹಸ್ಥ್ಯಂ ಭಾರಮಾಸ್ಥಿತಮ್ |
ಸ್ಕನ್ಧೇ ವಿಧಾತಾ ದೇವಾಶ್ಚ ಪಿತರಶ್ಚ ಮಹರ್ಷಯಃ ||೪೪||

---

೪೧. ತಡೆಯಲಾಗದ ಹಸಿವಿನಿಂದ ಪೀಡಿತನಾದ ದರಿದ್ರನು ಬಂದು ಅನ್ನವನ್ನು ಯಾಚಿಸಿದರೆ ಶ್ರೀಮಂತನಾದ ಗೃಹಸ್ಥನು ಅವನನ್ನು ತನ್ನ ಜೊತೆ-ಯಲ್ಲಿ ತನ್ನಂತೆಯೆ ಭೋಜನಮಾಡಿಸಬೇಕು.

೪೨. ಯಾವ ನರನು ತನ್ನ ಜ್ಞಾತಿವರ್ಗದಲ್ಲಿ ಶ್ರೀಮಂತಾದವನು ಇದ್ದರೂ ಅವನಿಂದ ತನಗೆ ಉಪಕಾರವಿಲ್ಲದೆ ವ್ಯಥೆಗೊಳ್ಳುವನೊ, ಆ ದರಿದ್ರ ಜ್ಞಾತಿಯು ಮಾಡಿದ ಪಾಪಗಳನ್ನು ಶ್ರೀಮಂತನು ಹೊಂದಿ ದುಃಖಿಯಾಗುವನು.

೪೩. ಹೀಗೆ ಹಿಂದೆ ಹೇಳಿರುವ ವೈಶ್ವದೇವ-ಅತಿಥಿಸತ್ಕಾರಗಳನ್ನು ಸಾಯಂಕಾಲದಲ್ಲಿಯೂ ಆಚರಿಸಬೇಕು. ಸಾಯಂಕಾಲದಲ್ಲಿ ಬಂದಿರುವ ಅತಿಥಿ-ಯನ್ನು ಯಥಾಶಕ್ತಿ ಶಯನ-ಆಸನ-ಭೋಜನಗಳಿಂದ ಪೂಜಿಸಬೇಕು.

೪೪. ಪುತ್ರನೆ! ಹೀಗೆ ಗೃಹಸ್ಥಾಶ್ರಮ ಧರ್ಮಾನುಷ್ಠಾನವೆಂಬ ಮಹತ್ತಾದ ಭಾರವನ್ನು ಹೆಗಲಿನಲ್ಲಿ ಹೊತ್ತುಕೊಂಡಿರುವ ಸದ್ಗೃಹಸ್ಥನಲ್ಲಿ ಪ್ರಜಾಪತಿದೇವತೆ-ಪಿತೃ-ಮಹರ್ಷಿ ಮತ್ತು ಇತರ ದೇವತೆಗಳು ಎಲ್ಲರೂ ಪ್ರಸನ್ನರಾಗುವರು.

ಶ್ರೇಯೋಽಭಿವರ್ಷಿಣಃ ಸರ್ವೇ ಭವನ್ತ್ಯತಿಥಿಬಾನ್ಧವಾಃ ।
ಪಶುಪಕ್ಷಿಮೃಗಾಸ್ತೃಪ್ತಾ ಯೇ ಚಾನ್ಯೇ ಸೂಕ್ಷ್ಮಕೀಟಕಾಃ ॥೪೫॥

ಗಾಥಾಶ್ಚಾತ್ರ ಮಹಾಭಾಗ ಸ್ವಯಮತ್ರಿರಗಾಯತ ।
ತಾಃ ಶೃಣುಷ್ವ ಮಹಾಭಾಗ ಗೃಹಸ್ಥಾಶ್ರಮಸಂಸ್ಥಿತಾಃ ॥೪೬॥

ದೇವಾನ್ಪಿತೄಂಶ್ಚಾತಿಥೀಂಶ್ಚ ತದ್ವತ್ಸಮ್ಪೂಜ್ಯ ಬಾನ್ಧವಾನ್ ।
ಜಾಮಯಶ್ಚ ಗುರೂಂಶ್ಚೈವ ಗೃಹಸ್ಥೋ ವಿಭವೇ ಸತಿ ॥೪೭॥

ಶ್ವಭ್ಯಶ್ಚ ಶ್ವಪಚೇಭ್ಯಶ್ಚ ವಯೋಭ್ಯಶ್ಚಾವಪೇದ್ಭುವಿ ।
ವೈಶ್ವದೇವಂ ಹಿ ನಾಮೈತತ್ಕುರ್ಯಾತ್ಸಾಯಂ ತಥಾ ದಿನೇ ॥೪೮॥

---

೪೫. ಗೃಹಸ್ಥನಿಂದ ಉಪಕಾರ ಹೊಂದಿರುವ ಅತಿಥಿ, ಬಂಧುಗಳು ಮಾತ್ರವಲ್ಲದೆ ಪಶು-ಪಕ್ಷಿ-ಮೃಗಗಳೂ ಇತರವಾದ ಕ್ರಿಮಿ-ಕೀಟ ಮೊದಲಾದ ಸೂಕ್ಷ್ಮಜಂತುಗಳೂ ಕೂಡ ಆ ಪುಣ್ಯಾತ್ಮನಾದ ಗೃಹಸ್ಥನಲ್ಲಿ ಶ್ರೇಯಸ್ಸನ್ನು ಹಾರೈಸುವುವು.

೪೬. ಮಹಾಭಾಗ್ಯಶಾಲಿಯೆ ! ಗೃಹಸ್ಥಾಶ್ರಮದ ಮಹತ್ತ್ವ ವಿಷಯದಲ್ಲಿ ಅತ್ರಿಮುನಿಯು ತಾನೇ ಗಾಥಾಶ್ಲೋಕಗಳನ್ನು ಹಾಡಿರುವನು. ಸುಕೃತಿಯಾದ ಪುತ್ರನೆ ! ಗೃಹಸ್ಥಾಶ್ರಮಗಳಿಗೆ ಸಂಬಂಧಿಸಿದ ಆ ಗಾಥಾಶ್ಲೋಕಗಳನ್ನು ಕೇಳು.

೪೭. ಗೃಹಸ್ಥನು ತನ್ನ ಶಕ್ತಿ-ಸಂಪತ್ತುಗಳನ್ನು ಅನುಸರಿಸಿ ದೇವ-ಪಿತೃ-ಅತಿಥಿ-ಗುರು-ಜ್ಞಾತಿ-ಬಾಂಧವರನ್ನು ಉಪಚರಿಸುವನು. ಹೀಗೆ ಎಲ್ಲರಿಗೂ ಉಪಕಾರವನ್ನು ಮಾಡುವಂತಹ ಉತ್ತಮವಾದ ಗೃಹಸ್ಥಾಶ್ರಮವು ಪವಿತ್ರವಾದುದು.

೪೮. ಗೃಹಸ್ಥನು ನಾಯಿ, ಚಂಡಾಲ, ಪತಿತ, ಪಕ್ಷಿಗಳಿಗೋಸ್ಕರ ನೆಲದಲ್ಲಿ ಅನ್ನವನ್ನು ಬೀರಬೇಕು. ಇದು ವೈಶ್ವದೇವಕ್ಕೆ ಅಂಗವಾದ ಕರ್ಮವು. ವೈಶ್ವದೇವವನ್ನು ಹಗಲು-ರಾತ್ರಿ ಎರಡು ವೇಳೆಗಳಲ್ಲಿ ಮಾಡಬೇಕು.

ಮಾಂಸಮನ್ನಂ ತಥಾ ಶಾಕಂ ಗೃಹೇ ಯಚ್ಚೋಪಸಾಧಿತಮ್ ।
ನ ಚ ತತ್ ಸ್ವಯಮಶ್ನೀಯಾದ್ವಿಧಿವದ್ಯನ್ನ ನಿರ್ವಪೇತ್ ॥೪೯॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಮದಾಲಸೋಪಾಖ್ಯಾನೇ ಷಡ್ವಿಂಶೋಽಧ್ಯಾಯಃ

---

೪೯. ಗೃಹಸ್ಥನು ತನ್ನ ಮನೆಯಲ್ಲಿ ಸಂಪಾದಿಸುವ ಭೋಜ್ಯವಸ್ತುಗಳಲ್ಲಿ ಮಾಂಸ-ಅನ್ನ-ಶಾಕವಸ್ತುಗಳು ಯಾವುವಿದ್ದರೂ ಅವುಗಳನ್ನು ಯಥಾವಿಧಿಯಾಗಿ ದೇವತೆ ಅತಿಥಿ ಮುಂತಾದವರಲ್ಲಿ ವಿನಿಯೋಗಿಸದೆ ತಾನು ಮಾತ್ರ ಭುಂಜಿಸಬಾರದು.

ಮಾರ್ಕಂಡೇಯ ಮಹಾಪುರಾಣದಲ್ಲಿ ಇಪ್ಪತ್ತಾರನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಸಪ್ತವಿಂಶೋಽಧ್ಯಾಯಃ

(ನಿತ್ಯ-ನೈಮಿತ್ತಿಕಶ್ರಾದ್ಧನಿರೂಪಣಮ್)

ಮದಾಲಸೋವಾಚ :—

ನಿತ್ಯಂ ನೈಮಿತ್ತಿಕಂ ಚೈವ ನಿತ್ಯನೈಮಿತ್ತಿಕಂ ತಥಾ ।
ಗೃಹಸ್ಥಸ್ಯ ತ್ರಿಧಾ ಕರ್ಮ ತನ್ನಿಶಾಮಯ ಪುತ್ರಕ ॥೧॥

ಪಞ್ಚಯಜ್ಞಾಶ್ರಿತಂ ನಿತ್ಯಂ ಯದೇತತ್ಕಥಿತಂ ತವ ।
ನೈಮಿತ್ತಿಕಂ ತಥಾ ಚಾನ್ಯತ್ಪುತ್ರಜನ್ಮಕ್ರಿಯಾದಿಕಮ್ ॥೨॥

ಇಪ್ಪತ್ತೇಳನೆಯ ಅಧ್ಯಾಯ

ಮದಾಲಸೆಯು ಹೀಗೆ ಹೇಳಿದಳು :—

೧. ಪುತ್ರನೆ! ಗೃಹಸ್ಥಾಶ್ರಮಿಗೆ ನಿತ್ಯ-ನೈಮಿತ್ತಿಕ ಮತ್ತು ನಿತ್ಯನೈಮಿತ್ತಿಕ ಎಂಬ ಮೂರು ವಿಧವಾದ ಕರ್ಮಗಳು ಕರ್ತವ್ಯವಾಗಿ ವಿಹಿತ-ವಾಗಿವೆ. ಅವುಗಳನ್ನು ಹೇಳುವೆನು, ಕೇಳು.

೨. ಹಿಂದೆ ಹೇಳಿರುವ ಬ್ರಹ್ಮ-ದೇವ-ಪಿತೃ-ಭೂತ-ಮನುಷ್ಯರನ್ನು ತೃಪ್ತಿಪಡಿಸುವಂತಹ ಪಂಚಯಜ್ಞಗಳು ನಿತ್ಯಕರ್ಮದಲ್ಲಿ ಸೇರಿವೆ. ಹಾಗು ಪುತ್ರಜನ್ಮ ಮುಂತಾದ ಪ್ರಸಂಗದಲ್ಲಿ ಮಾಡುವ ಜಾತಕರ್ಮ ಮುಂತಾದ ಸಂಸ್ಕಾರ ಕರ್ಮಗಳು ನೈಮಿತ್ತಿಕ ಕರ್ಮಗಳೆಂದು ಅರಿಯಬೇಕು.

ನಿತ್ಯನೈಮಿತ್ತಿಕಂ ಜ್ಞೇಯಂ ಪರ್ವಶ್ರಾದ್ಧಾದಿ ಪಣ್ಡಿತೈಃ ।
ತತ್ರ ನೈಮಿತ್ತಿಕಂ ವಕ್ಷ್ಯೇ ಶ್ರಾದ್ಧಮಾಭ್ಯುದಯಂ ತವ ||೩||

ಪುತ್ರಜನ್ಮನಿ ಯತ್ಕಾರ್ಯಂ ಜಾತಕರ್ಮಸಮಂ ನರೈಃ ।
ವಿವಾಹಾದೌ ಚ ಕರ್ತವ್ಯಂ ಸರ್ವಂ ಸಮ್ಯಕ್ಕ್ರಮೋದಿತಮ್ ||೪||

ಪಿತರಶ್ಚಾತ್ರ ಸಮ್ಪೂಜ್ಯಾಃ ಖ್ಯಾತಾ ನಾನ್ದೀಮುಖಾಸ್ತು ಯೇ ।
ಪಿಣ್ಡಾಂಶ್ಚ ದಧಿಸಮ್ಮಿಶ್ರಾನ್ದದ್ಯಾದ್ಯವಸಮನ್ವಿತಾನ್ ||೫||

ಉದಙ್ಮುಖಃ ಪ್ರಾಙ್ಮುಖೋ ವಾ ಯಜಮಾನಃ ಸಮಾಹಿತಃ ।
ವೈಶ್ವದೇವವಿಹೀನಂ ತತ್ಕೇಚಿದಿಚ್ಛನ್ತಿ ಮಾನವಾಃ ||೬||

---

೩. ಪರ್ವಶ್ರಾದ್ಧ ಮುಂತಾದ ಶ್ರಾದ್ಧವಿಧಾನವನ್ನು ಪಂಡಿತರು ನಿತ್ಯನೈಮಿತ್ತಿಕ ಕರ್ಮವೆಂದು ಹೇಳುವರು. ಅವುಗಳಲ್ಲಿ ಅಭ್ಯುದಯಕ್ಕಾಗಿ ಮಾಡುವ ನೈಮಿತ್ತಿಕ ಶ್ರಾದ್ಧವಿಧಾನವನ್ನು ನಿನಗೆ ಹೇಳುವೆನು.

೪. ಆಚಾರವಂತರಾದ ಮಾನವರು ಪುತ್ರನು ಹುಟ್ಟಿರುವಾಗ ಮಾಡುವ ಜಾತಕರ್ಮ ಮುಂತಾದ ಸಂಸ್ಕಾರ ಮತ್ತು ವಿವಾಹಾದಿ ಕರ್ಮ ಇವುಗಳಿಗೆ ಅಂಗವಾಗಿ ಅಭ್ಯುದಯಶ್ರಾದ್ಧವನ್ನು ಯಥಾವಿಧಿಯಾಗಿ ಕ್ರಮದಿಂದ ಆಚರಿಸಬೇಕು.

೫. ಮತ್ತು ಅಭ್ಯುದಯಕರ್ಮದಲ್ಲಿ ನಾಂದೀಶಬ್ದ ಸಹಿತವಾಗಿ ಪಿತೃಶಬ್ದವನ್ನು ಉಚ್ಚರಿಸುತ್ತ ನಾಂದೀಮುಖ ಪಿತೃಗಳಿಗೆ ಪೂಜೆಮಾಡಬೇಕು. ಮೊಸರು-ಯವಾಕ್ಷತೆಗಳಿಂದ ಕೂಡಿದ ಪಿಂಡಗಳನ್ನು ಅರ್ಪಿಸಬೇಕು.

೬. ಅಭ್ಯುದಯಕರ್ಮದಲ್ಲಿ ಯಜಮಾನನು ಉತ್ತರ ಅಥವಾ ಪೂರ್ವ-ದಿಕ್ಕಿಗೆ ಅಭಿಮುಖನಾಗಿ ಶಾಂತಚಿತ್ತನಾಗಿ ಕುಳಿತುಕೊಳ್ಳಬೇಕು. ಕೆಲವರು ಅಭ್ಯುದಯಶ್ರಾದ್ಧಕರ್ಮದಲ್ಲಿ ವಿಶ್ವೇದೇವ ದೇವತಾಪೂಜೆಯು ಇಲ್ಲವೆಂದು ಹೇಳುವರು.

ಯುಗ್ಮಾಶ್ಚಾತ್ರ ದ್ವಿಜಾಃ ಕಾರ್ಯಾಸ್ತೇ ಪೂಜ್ಯಾಶ್ಚ ಪ್ರದಕ್ಷಿಣಮ್ ।
ಏತನ್ನೈಮಿತ್ತಿಕಂ ವೃದ್ಧಾ ತಥಾನ್ಯಚ್ಚೌರ್ಧ್ವದೇಹಿಕಮ್ ॥೭॥

ಮೃತಾಹನಿ ತು ಕರ್ತವ್ಯಮೇಕೋದ್ದಿಷ್ಟಂ ಶೃಣುಷ್ವ ತತ್ ।
ದೈವಹೀನಂ ತಥೈಕಾರ್ಘ್ಯಂ ತಥೈವೈಕಪವಿತ್ರಕಮ್ ॥೮॥

ಆವಾಹನಂ ನ ಕರ್ತವ್ಯಮಗ್ನೌಕರಣವರ್ಜಿತಮ್ ।
ಪ್ರೇತಸ್ಯ ಪಿಣ್ಡಮೇಕಂ ಚ ದದ್ಯಾದುಚ್ಛಿಷ್ಟಸನ್ನಿಧೌ ॥೯॥

ತಿಲೋದಕಂ ಚಾಪಸವ್ಯಂ ತನ್ನಾಮಸ್ಮರಣಾನ್ವಿತಮ್ ।
ಅಕ್ಷಯ್ಯಮಮುಕಸ್ಯೇತಿ ಸ್ಥಾನೇ ವಿಪ್ರವಿಸರ್ಜನೇ ॥೧೦॥

---

೭. ಈ ನಾಂದೀಶ್ರಾದ್ಧದಲ್ಲಿ ಸಮಸಂಖ್ಯೆಯ ಬ್ರಾಹ್ಮಣರನ್ನು ಪ್ರದಕ್ಷಿಣಾಕಾರವಾದ ವಿಧಾನದಿಂದ ಪೂಜಿಸಬೇಕು. ಹೀಗೆ ಮಾಡುವ ಶ್ರಾದ್ಧ-ಕರ್ಮವು ವೃದ್ಧಿನಿಮಿತ್ತವಾಗಿ ವಿಹಿತವಾದುದರಿಂದ ನೈಮಿತ್ತಿಕವೆನಿಸುವುದು. ಹಾಗು ಮರಣಾನಂತರದಲ್ಲಿ ಮೃತನನ್ನು ಉದ್ದೇಶಿಸಿ ಮಾಡುವ ಶ್ರಾದ್ಧಕರ್ಮವು ಮತ್ತೊಂದು ನೈಮಿತ್ತಿಕಕರ್ಮವಾಗಿದೆ.

೮. ಮಾನವನು ಮೃತ್ಯುಹೊಂದಿರುವ ಸಮಯದಲ್ಲಿ ಪುತ್ರ ಮುಂತಾದ ಕರ್ಮದ ಅಧಿಕಾರಿಗಳು ಮಾಡುವ ಏಕೋದ್ದಿಷ್ಟಶ್ರಾದ್ಧದ ವಿಧಾನವನ್ನು ಕೇಳು. ಆ ಶ್ರಾದ್ಧದಲ್ಲಿ ದೈವಸ್ಥಾನದಲ್ಲಿ ಪೂಜೆಯಿಲ್ಲ. ಒಂದು ಅರ್ಘ್ಯ, ಒಂದು ಪವಿತ್ರ-ಗಳು ಮಾತ್ರ ಏಕೋದ್ದಿಷ್ಟಶ್ರಾದ್ಧಕ್ಕೆ ಅಂಗವಾಗುವುವು.

೯. ಮತ್ತು ಏಕೋದ್ದಿಷ್ಟಶ್ರಾದ್ಧದಲ್ಲಿ ಪ್ರೇತದ ಆವಾಹನವಿಲ್ಲ. ಅಗ್ನೌಕರಣವೆಂಬ ಹೋಮವಿಲ್ಲ. ಹಾಗು ಉಚ್ಛಿಷ್ಟದ ಸಮೀಪದಲ್ಲಿ ಪ್ರೇತವನ್ನು ಉದ್ದೇಶಮಾಡಿ ಒಂದು ಪಿಂಡವನ್ನು ಮಾತ್ರ ಇಡಬೇಕು.

೧೦. ಮತ್ತು ಪ್ರೇತದ ಹೆಸರನ್ನು ಸ್ಮರಿಸಿ "ಈ ಹೆಸರಿನ ಪ್ರೇತಕ್ಕೆ ಅಕ್ಷಯ ತೃಪ್ತಿಯಾಗಲಿ" ಎಂದು ಕೀರ್ತನ ಮಾಡುತ್ತ ತಿಲೋದಕವನ್ನು ಅಪಸವ್ಯದಿಂದ ಅರ್ಪಿಸಬೇಕು. ಯಜ್ಞೋಪವೀತವು ಅಪಸವ್ಯವಾಗಿ ಧರಿಸಲ್ಪ-ಟ್ಟಿರಬೇಕು.

ಅಭಿರಮ್ಯತಾಮಿತಿ ಬ್ರೂಯಾದ್ಬ್ರೂಯುಸ್ತೇಽಭಿರತಾಃ ಸ್ಮ ಹ ।
ಪ್ರತಿಮಾಸಂ ಭವೇದೇತತ್ಕಾರ್ಯಮಾವತ್ಸರಾನ್ನರೈಃ ॥೧೧॥

ಅಥ ಸಂವತ್ಸರೇ ಪೂರ್ಣೇ ಯದಾ ವಾ ಕ್ರಿಯತೇ ನರೈಃ ।
ಸಪಿಣ್ಡೀಕರಣಂ ಕಾರ್ಯಂ ತಸ್ಯಾಪಿ ವಿಧಿರುಚ್ಯತೇ ॥೧೨॥

ತಚ್ಚಾಪಿ ದೈವರಹಿತಮೇಕಾರ್ಘ್ಯೈಕಪವಿತ್ರಕಮ್ ।
ನೈವಾಗ್ನೌಕರಣಂ ತತ್ರ ತಚ್ಚಾವಾಹನವರ್ಜಿತಮ್ ॥೧೩॥

ಅಪಸವ್ಯಂ ಚ ತತ್ರಾಪಿ ಭೋಜಯೇದಯುಜೋ ದ್ವಿಜಾನ್ ॥೧೪॥

ವಿಶೇಷಸ್ತತ್ರ ಚಾನ್ಯೋಽಸ್ತಿ ಪ್ರತಿಮಾಸಂ ಕ್ರಿಯಾಧಿಕಃ ।
ತಂ ಕಥ್ಯಮಾನಮೇಕಾಗ್ರೋ ವದನ್ತ್ಯ ಮೇ ನಿಶಾಮಯ ॥೧೫॥

---

೧೧. ಕಡೆಯಲ್ಲಿ ವಿಪ್ರರನ್ನು ವಿಸರ್ಜಿಸಿ ಕಳುಹಿಸುವಾಗ "ಅಭಿರಮ್ಯತಾಂ" ಎಂಬ ಸಂಕೇತಶಬ್ದದಿಂದ ವಿಸರ್ಜಿಸಬೇಕು. ವಿಸರ್ಜಿಸಲ್ಪಟ್ಟ ವಿಪ್ರರು "ಅಭಿರತಾಃ ಸ್ಮ ಹ" ಎಂಬ ಸಂಕೇತದಿಂದ ಉತ್ತರವನ್ನು ಹೇಳಬೇಕು. ಈ ಏಕೋದ್ದಿಷ್ಟಶ್ರಾದ್ಧವನ್ನು ಮರಣಾನಂತರ ಒಂದು ವರ್ಷ ಪೂರ್ತಿಯಾಗುವವರೆಗೂ ಪ್ರತಿಮಾಸದಲ್ಲಿ ಮಾಡಬೇಕು.

೧೨. ಒಂದು ಸಂವತ್ಸರವು ಪೂರ್ತಿಯಾದ ನಂತರದಲ್ಲಿ ಅಥವಾ ವಿಹಿತವಾದ ಇತರ ಸಮಯಗಳಲ್ಲಿ ಸಪಿಂಡೀಕರಣವೆಂಬ ಕರ್ಮವನ್ನು ಮಾಡಬೇಕು. ಆ ಕರ್ಮದ ವಿಧಾನವನ್ನು ಹೇಳುವೆನು.

೧೩. ಏಕೋದ್ದಿಷ್ಟ ಶ್ರಾದ್ಧದಲ್ಲಿ ಹೇಗೊ ಹಾಗೆಯೆ ಸಪಿಂಡೀಕರಣ ಶ್ರಾದ್ಧದಲ್ಲಿಯೂ ದೇವಾರ್ಚನೆಯ ಅಭಾವ, ಒಂದು ಅರ್ಘ್ಯ, ಒಂದು ಪವಿತ್ರಗಳು ಸಮಾನವಾದುವು ಮತ್ತು ಅಗ್ನೌಕರಣ ಪ್ರೇತಾವಾಹನಗಳು ಇಲ್ಲ.

೧೪. ಹಾಗು ಸಾಮಾನ್ಯವಾಗಿ ಏಕೋದ್ದಿಷ್ಟ, ಸಪಿಂಡೀಕರಣಗಳಲ್ಲಿ ಯಜ್ಞೋಪವೀತವನ್ನು ಅಪಸವ್ಯವಾಗಿ ಧರಿಸಿ ಅಪ್ರದಕ್ಷಿಣೆಯಿಂದ ಕರ್ಮವನ್ನು ಮಾಡಬೇಕು. ವಿಷಮಸಂಖ್ಯೆಯ ವಿಪ್ರರಿಗೆ ಭೋಜನಮಾಡಿಸಬೇಕು.

೧೫. ಪ್ರತಿಯೊಂದು ಮಾಸದಲ್ಲಿ ಮಾಡುವ ಏಕೋದ್ದಿಷ್ಟಶ್ರಾದ್ಧಕ್ಕಿಂತಲೂ ಸಪಿಂಡೀಕರಣಶ್ರಾದ್ಧದಲ್ಲಿ ಒಂದು ವಿಶೇಷವು ಕರ್ತವ್ಯವಾಗಿದೆ. ನಾನು ಹೇಳುವ ಆ ವಿಶೇಷವಿಧಿಯನ್ನು ಏಕಾಗ್ರತೆಯ ಮನಸ್ಸುಳ್ಳವನಾಗಿ ಕೇಳು.

ತಿಲಗನ್ಧೋದಕೈರ್ಯುಕ್ತಂ ಕುರ್ಯಾತ್ಪಾತ್ರಚತುಷ್ಟಯಮ್ ।
ಕುರ್ಯಾತ್ಪಿತ್ರ್ಯಾಣಾಂ ತ್ರಿತಯಮೇಕಂ ಪ್ರೇತಸ್ಯ ಪುತ್ರಕ ॥೧೬॥

ಪಾತ್ರತ್ರಯೇ ಪ್ರೇತಪಾತ್ರಮರ್ಘ್ಯಂ ಚೈವ ಪ್ರಸೇಚಯೇತ್ ।
ಯೇ ಸಮಾನಾನಾ ಇತಿ ಜಪನ್ಪೂರ್ವವಚ್ಛೇಷಮಾಚರೇತ್ ॥೧೭॥

ಸ್ತ್ರೀಣಾಮಪ್ಯೇವಮೇವೈತದೇಕೋದ್ದಿಷ್ಟಮುದಾಹೃತಮ್ ।
ಸಪಿಣ್ಡೀಕರಣಂ ತಾಸಾಂ ಪುತ್ರಾಭಾವೇ ನ ವಿದ್ಯತೇ ॥೧೮॥

ಪ್ರತಿಸಂವತ್ಸರಂ ಕಾರ್ಯಮೇಕೋದ್ದಿಷ್ಟಂ ನರೈಃ ಸ್ತ್ರಿಯಾಃ ।
ಮೃತಾಹನಿ ಯಥಾನ್ಯಾಯಂ ನೃಣಾಂ ಯದ್ವದಿಹೋದಿತಮ್ ॥೧೯॥

---

೧೬. ಪುತ್ರನೆ! ಎಳ್ಳು, ಗಂಧಗಳನ್ನು ಹಾಕಿ ನೀರನ್ನು ತುಂಬಿದ ನಾಲ್ಕು ಅರ್ಘ್ಯಪಾತ್ರಗಳನ್ನು ಸಜ್ಜುಗೊಳಿಸಬೇಕು. ಅವುಗಳಲ್ಲಿ ಪಿತೃವರ್ಗದಲ್ಲಿ ಸೇರಿದ ವ್ಯಕ್ತಿಗಳ ಉದ್ದೇಶದಿಂದ ಮೂರು ಪಾತ್ರಗಳಿಗೂ ಪ್ರೇತದ ಉದ್ದೇಶದಿಂದ ಒಂದು ಪಾತ್ರಕ್ಕೂ ವಿನಿಯೋಗವಾಗುವುದು.

೧೭. ಪ್ರೇತಪಾತ್ರದಲ್ಲಿರುವ ಅರ್ಘ್ಯೋದಕವನ್ನು "ಯೇ ಸಮಾನಾನಾಃ" ಎಂಬ ಮಂತ್ರವನ್ನು ಜಪಿಸುತ್ತ ಪಿತೃಗಳ ಮೂರು ಪಾತ್ರಗಳಲ್ಲಿ ಸೇಚನ ಮಾಡಬೇಕು. ಉಳಿದ ಪ್ರಯೋಗವನ್ನು ಹಿಂದೆ ಹೇಳಿದ ಕ್ರಮದಂತೆ ಮಾಡಬೇಕು.

೧೮. ಸ್ತ್ರೀಯರಿಗೂ ಕೂಡ ಹಿಂದೆ ಹೇಳಿರುವ ವಿಧಾನದಿಂದ ಏಕೋದ್ದಿಷ್ಟಶ್ರಾದ್ಧವು ಕರ್ತವ್ಯವಾಗಿ ವಿಹಿತವಾಗಿದೆ- ಪುತ್ರಸಂತತಿಯಿಲ್ಲದಿದ್ದರೆ ಸ್ತ್ರೀಯರಿಗೆ ಸಪಿಂಡೀಕರಣವೆಂಬ ಶ್ರಾದ್ಧವನ್ನು ಆಚರಿಸಬೇಕಾದುದಿಲ್ಲ.

೧೯. ಇಲ್ಲಿ ಪುರುಷರಿಗೆ ಏಕೋದ್ದಿಷ್ಟಶ್ರಾದ್ಧವು ಯಾವ ವಿಧಾನದಿಂದ ಕರ್ತವ್ಯವಾಗಿ ವಿಧಿಸಲ್ಪಟ್ಟಿರುವುದೊ ; ಅದೇ ಕ್ರಮದಿಂದ ಸ್ತ್ರೀಯರಿಗೆ ಪುರುಷರು ಪ್ರತಿಯೊಂದು ವರ್ಷದಲ್ಲಿಯೂ ಮೃತದಿವಸದಲ್ಲಿ ಏಕೋದ್ದಿಷ್ಟಶ್ರಾದ್ಧವನ್ನು ಮಾಡಬೇಕು.

ಪುತ್ರಾಭಾವೇ ಸಪಿಣ್ಡಾಸ್ತು ತದಭಾವೇ ಸಹೋದಕಾಃ ।
ಮಾತುಃ ಸಪಿಣ್ಡಾ ಯೇ ಚ ಸ್ಯುರ್ಯೇಽನ್ಯೇ ಮಾತುಃ ಸಹೋದಕಾಃ ॥೨೦॥

ಕುರ್ಯುರೇವಂ ವಿಧಿಂ ಸಮ್ಯಗಪುತ್ರಸ್ಯ ಸುತಾಸುತಃ ।
ಕುರ್ಯುರ್ಮಾತಾಮಹಾಯೈವಂ ಪುತ್ರಿಕಾತನಯಾಸ್ತಥಾ ॥೨೧॥

ದ್ವ್ಯಾಮುಷ್ಯಾಯಣಸಂಜ್ಞಾಸ್ತು ಮಾತಾಮಹಪಿತಾಮಹಾನ್ ।
ಪೂಜಯೇಯುರ್ಯಥಾನ್ಯಾಯಂ ಶ್ರಾದ್ಧೈರ್ನೈಮಿತ್ತಿಕೈರಪಿ ॥೨೨॥

ಸರ್ವಾಭಾವೇ ಸ್ತ್ರಿಯಃ ಕುರ್ಯುಃ ಸ್ವಭರ್ತ್ರೂಣಾಮಮನ್ತ್ರಕಮ್ ।
ತದಭಾವೇ ಚ ನೃಪತಿಃ ಕಾರಯೇತ್ಸ್ವಕುಟುಮ್ಬಿನಾ ॥೨೩॥

---

೨೦. ಶ್ರಾದ್ಧಕರ್ಮಾಚರಣೆಗೆ ಪುತ್ರನು ಮುಖ್ಯಾಧಿಕಾರಿಯಾಗಿರುವನು. ಪುತ್ರನು ಇಲ್ಲದಿದ್ದರೆ ಸಪಿಂಡರಲ್ಲಿ, ಸಪಿಂಡರೂ ಇಲ್ಲದಿದ್ದರೆ ಸಮಾನೋದಕರಲ್ಲಿ ಯಾರಾದರೂ ಶ್ರಾದ್ಧವನ್ನಾಚರಿಸಬೇಕು. ಕಡೆಗೆ ಮಾತೃಸಪಿಂಡರು ಅಥವಾ ಮಾತೃವಿನ ಸಹೋದಕರಾದರೂ ಶ್ರಾದ್ಧಾಧಿಕಾರವನ್ನು ಹೊಂದುವರು.

೨೧. ಪುತ್ರಸಂತತಿಯಿಲ್ಲದವನಿಗೆ ಸಪಿಂಡ-ಸಹೋದಕರು ಸರಿಯಾಗಿ ಈ ವಿಧಾನವನ್ನು ಆಚರಿಸಬೇಕು. ಮತ್ತು ಮಗಳ ಮಗನು ಪುತ್ರನಿಲ್ಲದವನಿಗೆ ಕರ್ಮಾಧಿಕಾರಿಯಾಗುವನು. ಹಾಗೆಯೆ ಮಗಳ ಪುತ್ರರು ಮಾತಾಮಹನಿಗೆ ಶ್ರಾದ್ಧವಿಧಾನವನ್ನು ನೆರವೇರಿಸಬೇಕು.

೨೨. ದ್ವ್ಯಾಮುಷ್ಯಾಯಣ ಎಂಬ ಸಂಜ್ಞೆಯನ್ನು ಹೊಂದಿರುವವರು ಮಾತಾಮಹನನ್ನೂ, ಪಿತಾಮಹನನ್ನೂ ಯಥಾಶಾಸ್ತ್ರೀಯವಾಗಿ ನೈಮಿತ್ತಿಕ ಶ್ರಾದ್ಧವನ್ನು ಆಚರಿಸಿ ಪೂಜಿಸಬೇಕು. ಕನ್ಯಾದಾನಕ್ಕೆ ಮುಂಚೆ "ಕನ್ಯೆಯಲ್ಲಿ ಹುಟ್ಟುವ ಪುತ್ರನು ಉಭಯ ಕುಲಗಳಿಗೆ ಉದ್ಧಾರಕನೆಂದು" ಸಂಕೇತವಾಗಿದ್ದು ಆಕೆಯಲ್ಲಿ ಹುಟ್ಟುವವನು ದ್ವ್ಯಾಮುಷ್ಯಾಯಣ ಎಂದು ಕರೆಯಲ್ಪಡುವನು.

೨೩. ಮೃತನಾದವನ ಕರ್ಮವನ್ನು ಆಚರಿಸಲು ಯಾವ ಕರ್ತೃ ಅಧಿಕಾರಿಯೂ ಇಲ್ಲದಿದ್ದರೆ ಪತಿಯ ಕರ್ಮವನ್ನು ಪತ್ನಿಯು ಮಂತ್ರೋಚ್ಚಾರವಿಲ್ಲದಂತೆ ಮಾಡಬೇಕು. ಆಕೆಯು ಇಲ್ಲದಿದ್ದರೆ ರಾಜನು ತನ್ನ ಪೋಷ್ಯಪ್ರಜೆಗಳಲ್ಲಿ ಯಾರಾದರೊಬ್ಬನಿಂದ ಮಾಡಿಸಬೇಕು.

ತಜ್ಜಾತೀಯೈರ್ನರೈಃ ಸಮ್ಯಗ್ದಾಹಾದ್ಯಾಃ ಸಕಲಾಃ ಕ್ರಿಯಾಃ ।
ಸರ್ವೇಷಾಮೇವ ವರ್ಣಾನಾಂ ಬಾನ್ಧವೋ ನೃಪತಿರ್ಯತಃ ॥೨೪॥

ಏತಾಸ್ತೇ ಕಥಿತಾ ವತ್ಸ ನಿತ್ಯಾ ನೈಮಿತ್ತಿಕಾಃ ಕ್ರಿಯಾಃ ।
ಕ್ರಿಯಾಂ ಶ್ರಾದ್ಧಾಶ್ರಯಾಮನ್ಯಾಂ ನಿತ್ಯನೈಮಿತ್ತಿಕೀಂ ಶೃಣು ॥೨೫॥

ದರ್ಶಸ್ತತ್ರ ನಿಮಿತ್ತಂ ವೈ ಕಾಲಶ್ಚನ್ದ್ರಕ್ಷಯಾತ್ಮಕಃ ।
ನಿತ್ಯತಾಂ ನಿಯತಃ ಕಾಲಸ್ತಸ್ಯ ಸಂಸೂಚಯತ್ಯಥ ॥೨೬॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ನೈಮಿತ್ತಿಕಾದಿ-
ಶ್ರಾದ್ಧಕಲ್ಪನಿರೂಪಣಂ ನಾಮ ಸಪ್ತವಿಂಶೋಽಧ್ಯಾಯಃ

---

೨೪. ಮರಣಹೊಂದಿದ ವ್ಯಕ್ತಿಯ ಜಾತಿಗೆ ಸೇರಿದವನಿಂದ ರಾಜನು ದಾಹ ಮುಂತಾದ ಕ್ರಿಯೆಗಳನ್ನು ಮಾಡಿಸಬೇಕು. ರಾಜನು ಸರ್ವ ವರ್ಣಗಳಿಗೂ ಬಂಧುವೆನಿಸಿಕೊಂಡಿರುವನು. ಆದುದರಿಂದ ಅನಾಥಸಂಸ್ಕಾರವು ರಾಜನಿಂದ ನಡೆಯುವುದು.

೨೫. ಪುತ್ರನೆ! ನಿನಗೆ ಇದುವರೆಗೆ ಅನೇಕ ನಿತ್ಯನೈಮಿತ್ತಿಕ ಕ್ರಿಯೆಗಳನ್ನು ಹೇಳಿರುವೆನು. ಇನ್ನು ಮುಂದೆ ಶ್ರಾದ್ಧಕರ್ಮದಲ್ಲಿ ಸೇರಿರುವ ನಿತ್ಯ-ನೈಮಿತ್ತಿಕ ಕ್ರಿಯಾವಿಭಾಗವನ್ನು ಹೇಳುವೆನು ಕೇಳು.

೨೬. ದರ್ಶಕಾಲದಲ್ಲಿ ಮಾಡುವ ಶ್ರಾದ್ಧಕರ್ಮವನ್ನು ನಿತ್ಯನೈಮಿತ್ತಿಕ-ವೆನ್ನಬಹುದು. ಚಂದ್ರನ ಕ್ಷಯದಿಂದ ಕೂಡಿದ ದರ್ಶವೆಂಬ ಸಮಯವು ನಿಮಿತ್ತವಾದುದರಿಂದ ನೈಮಿತ್ತಿಕವಾಗುವುದು. ಹಾಗೆಯೆ ಆ ನಿಮಿತ್ತವು ಗೊತ್ತಾದ ಸಮಯದಲ್ಲಿ ಪ್ರಸಕ್ತವಾಗುವುದರಿಂದ ಆ ಕರ್ಮಕ್ಕೆ ನಿತ್ಯತೆಯನ್ನು ಸೂಚಿಸುವುದು.

ಮಾರ್ಕಂಡೇಯ ಮಹಾಪುರಾಣದಲ್ಲಿ ಇಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಅಷ್ಟಾವಿಂಶೋಽಧ್ಯಾಯಃ

(ಶ್ರಾದ್ಧಕಲ್ಪನಿರೂಪಣಮ್)

ಮದಾಲಸೋವಾಚ :—

ಸಪಿಣ್ಡೀಕರಣಾದೂರ್ಧ್ವಂ ಪಿತುರ್ಯಃ ಪ್ರಪಿತಾಮಹಃ ।
ಸುತಲೇಪಭುಜೋ ಯಾತಿ ಪ್ರಲುಪ್ತಪಿತೃಪಿಣ್ಡಕಃ ॥೧॥

ತೇಷಾಮನ್ಯಶ್ಚತುರ್ಥೋ ಯಃ ಪುತ್ರ ಲೇಪಭುಜಾನ್ನಭುಕ್ ।
ಸೋಽಪಿ ಸಮ್ಬನ್ಧತೋ ಹೀನಮುಪಭೋಗಂ ಪ್ರಪದ್ಯತೇ ॥೨॥

ಇಪ್ಪತ್ತೆಂಟನೆಯ ಅಧ್ಯಾಯ

ಮದಾಲಸೆಯು ಇಂತೆಂದಳು :—

೧. ಸಪಿಂಡೀಕರಣ ಶ್ರಾದ್ಧವಾದ ನಂತರ ತಂದೆಯ ಪ್ರಪಿತಾಮಹ (ಮುತ್ತಾತ) ನು ಪಿತೃಪಿಂಡಲೋಪವುಳ್ಳವನಾಗಿ ಪುತ್ರನು ಕೊಡುವ ಲೇಪೋದಕಕ್ಕೆ ಮಾತ್ರ ಪಾತ್ರನಾಗಿರುವನು.

೨. ಅದುವರೆಗೆ ಪುತ್ರನು ಅರ್ಪಿಸುವ ಲೇಪೋದಕಕ್ಕೆ ಭಾಜನನಾಗಿದ್ದ ಪ್ರಪಿತಾಮಹನಿಂದ ನಾಲ್ಕನೆಯವನು ಆಗ ಮತ್ತಷ್ಟು ಸಂಬಂಧದಿಂದ ದೂರವಾಗಿ ನ್ಯೂನವಾದ ಉಪಭೋಗವನ್ನು ಹೊಂದುವನು.

ಪಿತಾ ಪಿತಾಮಹಶ್ಚೈವ ತಥೈವ ಪ್ರಪಿತಾಮಹಃ ।
ಪಿಣ್ಡಸಮ್ಬನ್ಧಿನೋ ಹ್ಯೇತೇ ವಿಜ್ಞೇಯಾಃ ಪುರುಷಾಸ್ತ್ರಯಃ ॥೩॥

ಲೇಪಸಮ್ಬನ್ಧಿನಶ್ಚಾನ್ಯೇ ಪಿತಾಮಹಪಿತಾಮಹಾತ್ ।
ಪ್ರಭೃತ್ಯುಕ್ತಾಸ್ತ್ರಯಸ್ತೇಷಾಂ ಯಜಮಾನಶ್ಚ ಸಪ್ತಮಃ ॥೪॥

ಇತ್ಯೇಷ ಮುನಿಭಿಃ ಪ್ರೋಕ್ತಃ ಸಮ್ಬನ್ಧಃ ಸಾಪ್ತಪೌರುಷಃ ।
ಯಜಮಾನಾತ್ಪ್ರಭೃತ್ಯೂರ್ಧ್ವಮನುಲೇಪಭುಜಸ್ತಥಾ ॥೫॥

ತತೋಽನ್ಯೇ ಪೂರ್ವಜಾಃ ಸ್ವರ್ಗೇ ಯೇ ಚಾನ್ಯೇ ನರಕೌಕಸಃ ।
ಯೇ ಚ ತಿರ್ಯಕ್ತ್ವಮಾಪನ್ನಾ ಯೇ ಚ ಭೂತಾದಿಸಂಸ್ಥಿತಾಃ ॥೬॥

---

೩. ಕರ್ಮಾಧಿಕಾರಿಯಾದ ಪುತ್ರನಿಗೆ ತಂದೆ, ಪಿತಾಮಹ ಮತ್ತು ಪ್ರಪಿತಾಮಹ ಈ ಮೂರು ಮಂದಿಯು ಪಿಂಡದಾನಕ್ಕೆ ಅರ್ಹರಾದವರಾದ್ದರಿಂದ ಪಿಂಡಸಂಬಂಧಿಯಾದವರೆಂದು ತಿಳಿಯಬೇಕು.

೪. ತನ್ನ ಪಿತಾಮಹನ ಪಿತಾಮಹನು ಮೊದಲುಗೊಂಡು ಹಿಂದಿನ ಮೂರು ಮಂದಿಯನ್ನು ಲೇಪಭಾಜನರೆಂದು ತಿಳಿಯಬೇಕು. ಹೀಗೆ ಪಿತೃ ಮೊದಲಾದವರು ಮೂರು ಮಂದಿ ಪಿಂಡಸಂಬಂಧಿಗಳೂ ಅವರ ಹಿಂದಿನ ಮೂರು ಮಂದಿ ಲೇಪಭಾಜನರೂ ಆಗಿ ಏಳನೆಯವನು ಯಜಮಾನನೆನಿಸಿಕೊಳ್ಳುವನು.

೫. ಹೀಗೆ ಏಳು ಮಂದಿಯ ಕ್ರಮಪರಂಪರೆಯನ್ನು ಸಪ್ತಪುರುಷ ಸಂಬಂಧವೆಂದು ಮುನಿಗಳು ಕರೆಯುವರು. ಯಜಮಾನನು ಮೊದಲುಗೊಂಡು ಹಿಂದಿನ ಪಿತೃವರ್ಗದವರು ಅನುಲೇಪಭಾಜನರಾಗುವರು.

೬. ಪಿಂಡ-ಲೇಪ-ಅನುಲೇಪಗಳಿಗೆ ಅರ್ಹರಾದ ಪಿತೃಗಳಿಗಿಂತಲೂ ಪೂರ್ವಜರಲ್ಲಿ ಸ್ವರ್ಗ ಅಥವಾ ನರಕಗಳಲ್ಲಿ ಇರುವವರು, ಮೂಕಪ್ರಾಣಿಜನ್ಮವನ್ನು ಹೊಂದಿದವರು ಮತ್ತು ಭೂತಾದಿ ಸ್ವರೂಪದಿಂದಿರುವವರು ಇವರನ್ನು ಗೃಹಸ್ಥನು ತೃಪ್ತಿಪಡಿಸುವನು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಅಷ್ಟಾವಿಂಶೋಽಧ್ಯಾಯಃ

(ಶ್ರಾದ್ಧಕಲ್ಪನಿರೂಪಣಮ್)

ಮದಾಲಸೋವಾಚ :—

ಸಪಿಣ್ಡೀಕರಣಾದೂರ್ಧ್ವಂ ಪಿತುರ್ಯಃ ಪ್ರಪಿತಾಮಹಃ ।
ಸುತಲೇಪಭುಜೋ ಯಾತಿ ಪ್ರಲುಪ್ತಪಿತೃಪಿಣ್ಡಕಃ ॥೧॥

ತೇಷಾಮನ್ಯಶ್ಚತುರ್ಥೋ ಯಃ ಪುತ್ರ ಲೇಪಭುಜಾನ್ನಭುಕ್ ।
ಸೋಽಪಿ ಸಮ್ಬನ್ಧತೋ ಹೀನಮುಪಭೋಗಂ ಪ್ರಪದ್ಯತೇ ॥೨॥

ಇಪ್ಪತ್ತೆಂಟನೆಯ ಅಧ್ಯಾಯ

ಮದಾಲಸೆಯು ಇಂತೆಂದಳು :—

೧. ಸಪಿಂಡೀಕರಣ ಶ್ರಾದ್ಧವಾದ ನಂತರ ತಂದೆಯ ಪ್ರಪಿತಾಮಹ (ಮುತ್ತಾತ) ನು ಪಿತೃಪಿಂಡಲೋಪವುಳ್ಳವನಾಗಿ ಪುತ್ರನು ಕೊಡುವ ಲೇಪೋದಕಕ್ಕೆ ಮಾತ್ರ ಪಾತ್ರನಾಗಿರುವನು.

೨. ಅದುವರೆಗೆ ಪುತ್ರನು ಅರ್ಪಿಸುವ ಲೇಪೋದಕಕ್ಕೆ ಭಾಜನನಾಗಿದ್ದ ಪ್ರಪಿತಾಮಹನಿಂದ ನಾಲ್ಕನೆಯವನು ಆಗ ಮತ್ತಷ್ಟು ಸಂಬಂಧದಿಂದ ದೂರವಾಗಿ ನ್ಯೂನವಾದ ಉಪಭೋಗವನ್ನು ಹೊಂದುವನು.

ಉದ್ಧೃತೇಷ್ವಥ ಪಿಣ್ಡೇಷು ಯಾಶ್ಚಾನ್ನಕಣಿಕಾ ಭುವಿ ।
ತಾಭಿರಾಪ್ಯಾಯನಂ ತೇಷಾಂ ಯೇ ತಿರ್ಯಕ್ತ್ವಂ ಕುಲೇ ಗತಾಃ ॥೧೧॥

ಯೇ ವಾದಗ್ಧಾಃ ಕುಲೇ ಬಾಲಾಃ ಕ್ರಿಯಾಯೋಗ್ಯಾ ಹ್ಯಸಂಸ್ಕೃತಾಃ ।
ವಿಪನ್ನಾಸ್ತೇಽನ್ನವಿಕಿರಸಮ್ಮಾರ್ಜನಜಲಾಶಿನಃ ॥೧೨॥

ಭುಕ್ತ್ವಾ ಚಾಚಾಮತಾಂ ಯಚ್ಚ ಜಲಂ ಯಚ್ಚಾಙ್ಘ್ರಿಶೋಧನೇ ।
ಬ್ರಾಹ್ಮಣಾನಾಂ ತಥೈವಾನ್ಯೇ ತೇನ ತೃಪ್ತಿಂ ಪ್ರಯಾನ್ತಿ ವೈ ॥೧೩॥

ಪಿಶಾಚತ್ವಮನುಪ್ರಾಪ್ತಾಃ ಕೃಮಿಕೀಟತ್ವಮೇವ ಯೇ ॥೧೪॥

ಏವಂ ಯೋ ಯಜಮಾನಶ್ಚ ಯಚ್ಚ ತೇಷಾಂ ದ್ವಿಜನ್ಮನಾಮ್ ।
ಕಶ್ಚಿಜ್ಜಲಾನ್ನವಿಕ್ಷೇಪಃ ಶುಚಿರುಚ್ಛಿಷ್ಟ ಏವ ವಾ ॥೧೫॥

---

೧೧. ಪಿಂಡಗಳನ್ನು ಪಿಂಡಸ್ಥಾನದಿಂದ ಉದ್ಧಾರ ಮಾಡಿದ ಮೇಲೆ ನೆಲದಲ್ಲಿ ಬಿದ್ದಿರುವ ಅನ್ನದ ಕಣಗಳಿಂದ ಆ ಗೃಹಸ್ಥನ ವಂಶಕ್ಕೆ ಸೇರಿದ, ಮೂಕಪ್ರಾಣಿಜನ್ಮವನ್ನು ಹೊಂದಿದ ಪೂರ್ವಜರಿಗೆ ತೃಪ್ತಿಯುಂಟಾಗುವುದು.

೧೨. ತನ್ನ ಕುಲದಲ್ಲಿ ಜನಿಸಿದ್ದು ಮೃತಿಹೊಂದಿದ ದಹನ ಸಂಸ್ಕಾರವಿಲ್ಲದ ಬಾಲಕರು ಮತ್ತು ಸಂಸ್ಕಾರಕ್ಕೆ ಯೋಗ್ಯರಾಗಿದ್ದರೂ ಸಂಸ್ಕಾರವಿಲ್ಲದವರೂ ಆದ ಪೂರ್ವಜರು ವಿಕಿರಾನ್ನ, ಸಮ್ಮಾರ್ಜನ ಜಲದಿಂದ ತೃಪ್ತಿಪಡುವರು.

೧೩. ಬ್ರಾಹ್ಮಣರು ಭೋಜನಾನಂತರದಲ್ಲಿ ಆಚಮನಮಾಡುತ್ತಿರುವಾಗಲೂ ಮತ್ತು ಬ್ರಾಹ್ಮಣರ ಪಾದಪ್ರಕ್ಷಾಲನ ಮಾಡುತ್ತಿರುವಾಗಲೂ ಬೀಳುವ ಜಲಬಿಂದುಗಳಿಂದ ಇತರರು ತೃಪ್ತಿಯನ್ನು ಹೊಂದುವರು.

೧೪. ಗೃಹಸ್ಥನ ವಂಶದಲ್ಲಿ ಮರಣಹೊಂದಿರುವ ಪೂರ್ವಿಕರು ಪಿಶಾಚಾದಿ ಜನ್ಮ ಅಥವಾ ಕೃಮಿ-ಕೀಟಾದಿ ಜನ್ಮವನ್ನು ಹೊಂದಿದ್ದರೆ ಅವರು ಆಚಮನ-ಪಾದಕ್ಷಾಲನಗಳ ಜಲಬಿಂದುಗಳಿಂದ ತೃಪ್ತರಾಗುವರು.

೧೫. ಹೀಗೆ ಶ್ರಾದ್ಧಕರ್ಮಾನುಷ್ಠಾನದ ಸಮಯದಲ್ಲಿ ಯಜಮಾನನಿಂದ ಮತ್ತು ನಿಮಂತ್ರಿತರಾದ ಬ್ರಾಹ್ಮಣರಿಂದ ಶುಚಿ ಅಥವಾ ಉಚ್ಛಿಷ್ಟರೂಪವಾಗಿ ಜಲಬಿಂದು ಅನ್ನಕಣಗಳು ಎಷ್ಟೋ ನೆಲದಲ್ಲಿ ಬೀಳುವುದುಂಟು.

ತೇನ ತೇನ ಕುಲೇ ತತ್ರ ತತ್ತದ್ಭೋಜ್ಯೇನ್ಯನ್ತರಂ ಗತಾಃ ।
ಪ್ರಯಾನ್ತ್ಯಾಪ್ಯಾಯನಂ ವತ್ಸ ಸಮ್ಯಕ್ ಶ್ರಾದ್ಧಕ್ರಿಯಾವತಾಮ್ ॥೧೬॥

ಅನ್ಯಾಯೋಪಾರ್ಜಿತೈರ್ವಿತ್ತೈರ್ಯಚ್ಛ್ರಾದ್ಧಂ ಕ್ರಿಯತೇ ನರೈಃ ।
ತೃಪ್ಯನ್ತೇ ತೇನ ಚಾಣ್ಡಾಲಪುಲ್ಕಸಾದ್ಯಾಸು ಯೋನಿಷು ॥೧೭॥

ಏವಮಾಪ್ಯಾಯನಂ ವತ್ಸ ಬಹೂನಾಮಪಿ ಬಾನ್ಧವೈಃ ।
ಶ್ರಾದ್ಧಂ ಕುರ್ವದ್ಭಿರನ್ನಾಮ್ಬುಶಾಕೈರಪಿ ಹಿ ಜಾಯತೇ ॥೧೮॥

ತಸ್ಮಾಚ್ಛ್ರಾದ್ಧಂ ನರೋ ಭಕ್ತ್ಯಾ ಶಾಕೈರಪಿ ಯಥಾವಿಧಿ ।
ಕುರ್ವೀತ ಕುರ್ವತಃ ಶ್ರಾದ್ಧಂ ಕುಲೇ ಕಶ್ಚಿನ್ನ ಸೀದತಿ ॥೧೯॥

---

೧೬. ಪುತ್ರನೆ ! ಒಂದು ವಂಶದಲ್ಲಿ ಜನಿಸಿದ್ದು ಮರಣಹೊಂದಿದ ಬಳಿಕ ಕರ್ಮಾಧೀನವಾಗಿ ಬರುವ ಹಲವಾರು ಜನ್ಮವನ್ನು ಹೊಂದಿರುವ ಪೂರ್ವಜರು ಶ್ರಾದ್ಧಕರ್ಮಾನುಷ್ಠಾನಪರನಾಗಿರುವ ಆ ವಂಶದ ಗೃಹಸ್ಥನಿಂದ ದೊರಕಿದ ಶ್ರಾದ್ಧಾಂಗವಾದ ಜಲ-ಅನ್ನ ವಿಕ್ಷೇಪಗಳಿಂದ ತೃಪ್ತರಾಗುವರು.

೧೭. ಮಾನವರಿಂದ ಅನ್ಯಾಯವಾಗಿ ಆರ್ಜಿಸಲ್ಪಟ್ಟ ಅಶುದ್ಧವಾದ ದ್ರವ್ಯದಿಂದ ಯಾವ ಶ್ರಾದ್ಧಕರ್ಮವು ಆಚರಿಸಲ್ಪಡುವುದೊ; ಅಂತಹ ಶ್ರಾದ್ಧದ ಅನ್ನೋದಕಗಳಿಂದ ಹೊಲೆಯ-ಮಾದಿಗ ಮುಂತಾದ ಜಾತಿಯಲ್ಲಿ ಜನಿಸಿದವರು ತೃಪ್ತಿಹೊಂದುವರು.

೧೮. ಪುತ್ರನೆ ! ಹೀಗೆ ಯಥಾವಿಧಿಯಾಗಿ ಶ್ರಾದ್ಧವನ್ನು ಮಾಡುತ್ತಿದ್ದ ಬಾಂಧವರಿಂದ ಅರ್ಪಿಸಲ್ಪಟ್ಟ ಅನ್ನ-ಜಲ-ಶಾಕದ್ರವ್ಯಗಳಿಂದ ಕೂಡ ವಿವಿಧವಾದ ಜನ್ಮವೆತ್ತಿರುವ ಅನೇಕ ಪೂರ್ವಜರಿಗೆ ತೃಪ್ತಿಯುಂಟಾಗುವುದು.

೧೯. ಆದುದರಿಂದ ಮಾನವನು ಭಕ್ತಿಯಿಂದ ಕೂಡಿದವನಾಗಿ ಶಾಕ-ದ್ರವ್ಯದಿಂದಾದರೂ ಯಥಾವಿಧಿಯಾಗಿ ಶ್ರಾದ್ಧಕರ್ಮವನ್ನು ಆಚರಿಸಬೇಕು. ಹಾಗೆ ಶ್ರಾದ್ಧವನ್ನು ಆಚರಿಸುವ ಗೃಹಸ್ಥನ ವಂಶದಲ್ಲಿ ಯಾರೊಬ್ಬನೂ ದುರ್ಗತಿಯನ್ನು ಹೊಂದುವುದಿಲ್ಲ.

ತಸ್ಯ ಕಾಲಾನಹಂ ವಕ್ಷ್ಯೇ ನಿತ್ಯನೈಮಿತ್ತಿಕಾತ್ಮಕಾನ್ ।
ವಿಧಿನಾ ಯೇನ ಚ ನರೈಃ ಕ್ರಿಯತೇ ತನ್ನಿಬೋಧ ಮೇ ॥೨೦॥

ಕಾರ್ಯಂ ಶ್ರಾದ್ಧಮಮಾವಾಸ್ಯಾಂ ಮಾಸಿ ಮಾಸ್ಯುಡುಪಕ್ಷಯೇ ।
ತಥಾಷ್ಟಕಾಸ್ವಪ್ಯವಶ್ಯಮಿಷ್ಟಕಾಲಾನ್ನಿಬೋಧ ಮೇ ॥೨೧॥

ವಿಶಿಷ್ಟಬ್ರಾಹ್ಮಣಪ್ರಾಪ್ತೌ ಸೂರ್ಯೇನ್ದುಗ್ರಹಣೇಽಯನೇ ।
ವಿಷುವದ್ರವಿಸಂಕ್ರಾನ್ತಿವ್ಯತೀಪಾತೇಷು ಪುತ್ರಕ ॥೨೨॥

ಶ್ರಾದ್ಧಾರ್ಹದ್ರವ್ಯಸಂಪತ್ತೌ ತಥಾ ದುಸ್ಸ್ವಪ್ನದರ್ಶನೇ ।
ಜನ್ಮರ್ಕ್ಷಗ್ರಹಪೀಡಾಸು ಶ್ರಾದ್ಧಂ ಕುರ್ವೀತ ಚೇಚ್ಛಯಾ ॥೨೩॥

---

೨೦. ನಿತ್ಯ-ನೈಮಿತ್ತಿಕರೂಪವಾದ ಆ ಶ್ರಾದ್ಧಕರ್ಮಗಳನ್ನು ಮಾಡಬೇಕಾದ ಕಾಲಗಳನ್ನು ನಾನು ಹೇಳುವೆನು. ಮತ್ತು ಯಾವ ವಿಧಾನದಿಂದ ಅವುಗಳನ್ನು ಆಚರಿಸಬೇಕೊ; ಆ ವಿಧಾನವನ್ನೂ ಹೇಳುವೆನು. ಶ್ರಾದ್ಧಕಾಲವಿಧಾನಗಳನ್ನು ಕೇಳು.

೨೧. ಚಂದ್ರನು ಕ್ಷಯಿಸುವ ತಿಥಿಯಾದ, ಪ್ರತಿಯೊಂದು ಮಾಸದ ಅಮಾವಾಸ್ಯಾ ತಿಥಿಯಲ್ಲಿ ಶ್ರಾದ್ಧವನ್ನು ಮಾಡಬೇಕು. ಹಾಗೆಯೆ ಅಷ್ಟಕಾತಿಥಿಗಳಲ್ಲಿಯೂ ಅವಶ್ಯವಾಗಿ ಶ್ರಾದ್ಧವನ್ನು ಆಚರಿಸಬೇಕು. ಇದಲ್ಲದೆ ಕಾಮ್ಯ, ಶ್ರಾದ್ಧಪ್ರಯೋಗಗಳ ಕಾಲವನ್ನು ತಿಳಿದುಕೊ.

೨೨. ಪುತ್ರನೆ! ಅಪೂರ್ವವಾಗಿ ಶ್ರೋತ್ರಿಯರಾದ ಬ್ರಾಹ್ಮಣರ ಲಾಭ, ಸೂರ್ಯಗ್ರಹಣ, ಚಂದ್ರಗ್ರಹಣ, ದಕ್ಷಿಣ-ಉತ್ತರಾಯಣ, ವಿಷುವಕಾಲ, ಸೂರ್ಯಸಂಕ್ರಮಣ ಮತ್ತು ವ್ಯತೀಪಾತಕಾಲಗಳನ್ನು ಶ್ರಾದ್ಧಾರ್ಹವಾದ ಪುಣ್ಯಕಾಲವೆಂದು ತಿಳಿಯಬೇಕು.

೨೩. ಶ್ರಾದ್ಧಕ್ಕೆ ಅರ್ಹವಾದ ಅಪೂರ್ವದ್ರವ್ಯಗಳ ಪ್ರಾಪ್ತಿ, ದುಸ್ವಪ್ನಗಳನ್ನು ಕಾಣುವುದು, ಜನ್ಮನಕ್ಷತ್ರ, ಮತ್ತು ಗ್ರಹಪೀಡಾ ಮುಂತಾದ ನಿಮಿತ್ತಗಳಲ್ಲಿ ತನ್ನ ಇಷ್ಟದಂತೆ ಕಾಮ್ಯವಾದ ಶ್ರಾದ್ಧವನ್ನು ಮಾಡಬೇಕು.

ವಿಶಿಷ್ಟಃ ಶ್ರೋತ್ರಿಯೋ ಯೋಗೀ ವೇದವಿಜ್ಜ್ಯೇಷ್ಠಸಾಮಗಃ ।
ತ್ರಿಣಾಚಿಕೇತಃ ಶ್ರುತವಾನ್ವಿಹಿತವ್ರತಕಾರಕಃ ॥೨೪॥

ತ್ರಿಣಾಚಿಕೇತಸ್ತ್ರಿಮಧುಸ್ತ್ರಿಸುಪರ್ಣಃ ಷಡಙ್ಗವಿತ್ ।
ದೌಹಿತ್ರಋತ್ವಿಗ್ಜಾಮಾತಾ ಸ್ವಸ್ರೀಯಃ ಶ್ವಶುರಸ್ತಥಾ ॥೨೫॥

ಪಞ್ಚಾಗ್ನಿಕರ್ಮನಿಷ್ಠಶ್ಚ ತಪೋನಿಷ್ಠೋಽಥ ಮಾತುಲಃ ।
ಮಾತಾಪಿತೃಪರಾಶ್ಚೈವ ಶಿಷ್ಯಸಮ್ಬನ್ಧಿಬಾನ್ಧವಾಃ ॥೨೬॥

ಏತೇ ದ್ವಿಜೋತ್ತಮಾಃ ಶ್ರಾದ್ಧೇ ಸಮಸ್ತಾಃ ಕೇಚನ ಕ್ಷಮಾಃ ॥೨೭॥

---

೨೪. ಉತ್ತಮವಾದ ಆಚಾರವಂತನೂ, ಶ್ರೋತ್ರಿಯನೂ, ಯೋಗಿಯೂ, ವೇದವೇತ್ತನೂ, ಜ್ಯೇಷ್ಠಸಾಮವನ್ನು ಪಠಿಸಿದವನೂ, ನಾಚಿಕೇತ-ಮಂತ್ರಜ್ಞಾನವುಳ್ಳವನೂ, ವೇದ-ಶಾಸ್ತ್ರಾಭ್ಯಾಸ ಮಾಡಿದವನೂ ಮತ್ತು ವಿಹಿತ-ವ್ರತವನ್ನು ಮಾಡುವವನೂ ಆದ ವಿಪ್ರನು ಶ್ರಾದ್ಧಕ್ಕೆ ಅರ್ಹನಾದವನು.

೨೫. ನಾಚಿಕೇತ ವಿಧಾನವನ್ನು ಅರಿತವನು, ಮಧುಮಂತ್ರವನ್ನು ಅಭ್ಯಾಸಮಾಡಿದವನು, ತ್ರಿಸುಪರ್ಣವೇತ್ತನು, ಷಡಂಗಗಳನ್ನು ತಿಳಿದವನು, ದೌಹಿತ್ರ, ಋತ್ವಿಜ, ಅಳಿಯ, ಸೋದರಳಿಯ ಮತ್ತು ಮಾವ ಇವರು ಶ್ರಾದ್ಧದಲ್ಲಿ ನಿಮಂತ್ರಿಸಲು ಅರ್ಹರಾಗಿರುವರು.

೨೬. ಪಂಚಾಗ್ನಿಗಳಲ್ಲಿ ವಿಹಿತವಾದ ಕರ್ಮದಲ್ಲಿ ತತ್ಪರನು, ತಪಸ್ವಿ, ಸೋದರಮಾವ, ಮಾತಾ-ಪಿತೃಗಳಿಗೆ ಸಮ್ಮತರು, ಶಿಷ್ಯ ಮತ್ತು ಸಂಬಂಧವನ್ನು ಹೊಂದಿದ ಬಂಧುಗಳು ಶ್ರಾದ್ಧಕರ್ಮದಲ್ಲಿ ಪೂಜಾರ್ಹರಾದ ಬ್ರಾಹ್ಮಣರಾಗಿರು-ವರು.

೨೭. ಹಿಂದೆ ಹೇಳಿದ ದ್ವಿಜೋತ್ತಮರಲ್ಲಿ ಸಮಸ್ತಗುಣಗಳಿಂದ ಕೂಡಿ-ದವರು ಅಥವಾ ಕೆಲವು ಮಾತ್ರ ಗುಣಗಳಿದ್ದರೂ ನಿಷಿದ್ಧರಲ್ಲದವರು ಶ್ರಾದ್ಧಕ್ಕೆ ನಿಮಂತ್ರಣಮಾಡಲು ಅರ್ಹರಾಗಿರುವರು.

ಅವಕೀರ್ಣೀ ತಥಾ ರೋಗೀ ನ್ಯೂನಾಙ್ಗಸ್ತ್ವಧಿಕಾಙ್ಗಕಃ ।
ಪೌನರ್ಭವಸ್ತಥಾ ಕಾಣಃ ಕುಣ್ಡೋ ಗೋಲೋಽಥ ಪುತ್ರಕ ॥೨೮॥

ಮಿತ್ರಧ್ರುಕ್ಕುನಖೀ ಕುಷ್ಠೀ ಶ್ಯಾವದನ್ತೋ ನಿರಾಕೃತಿಃ ।
ಅಭಿಶಸ್ತಸ್ತಥಾ ಸ್ತೇಯಃ ಪಿಶುನಃ ಸೋಮವಿಕ್ರಯಿಃ ॥೨೯॥

ಕನ್ಯಾದೂಷಯಿತಾ ವೈದ್ಯೋ ಗುರುಪಿತ್ರೋಸ್ತಥೋಜ್ಝಕಃ ।
ಭೃತಕಾಧ್ಯಾಪಕೋ ಮಿತ್ರಂ ಪರದುಷ್ಟಾಪತಿಸ್ತಥಾ ॥೩೦॥

ವೇದೋಜ್ಝಶ್ಚಾಗ್ನಿಸನ್ತ್ಯಾಗೀ ವೃಷಲಾಪತ್ಯದೂಷಿತಃ ।
ತಥಾನ್ಯೇ ಚ ವಿಕರ್ಮಸ್ಥಾ ವರ್ಜ್ಯಾಃ ಪಿತ್ರ್ಯೇಷು ವೈ ದ್ವಿಜಾಃ ॥೩೧॥

---

೨೮. ಪುತ್ರನೆ! ಬ್ರಹ್ಮಚಾರಿವ್ರತದಿಂದ ಭ್ರಷ್ಟನಾದವನು, ರೋಗಿ, ಊನಾಂಗಿ, ಅಧಿಕಾಂಗಿ, ಪುನರ್ವಿವಾಹವಾದ ಸ್ತ್ರೀಯಲ್ಲಿ ಜನಿಸಿದವನು, ಕುರುಡ ಮತ್ತು ವ್ಯಭಿಚಾರದಿಂದ ಹುಟ್ಟಿದ ಕುಂಡ-ಗೋಲಕರು—ಇವರು ಶ್ರಾದ್ಧಕ್ಕೆ ಅನರ್ಹರಾದವರೆಂದು ತಿಳಿಯಬೇಕು.

೨೯. ಮಿತ್ರದ್ರೋಹಿ, ಉಗುರುರೋಗವುಳ್ಳವನು, ಕುಷ್ಠರೋಗಿ, ದಂತರೋಗಿ, ಬಹಿಷ್ಕೃತನು, ಅಪವಾದಗ್ರಸ್ತನು, ಚೋರ, ಚಾಡಿಗಾರ, ಮತ್ತು ಸೋಮವನ್ನು ವಿಕ್ರಯಿಸಿದವನು—ಇವರು ಶ್ರಾದ್ಧಾನರ್ಹರೆಂದು ತಿಳಿಯ-ಬೇಕು.

೩೦. ಕನ್ಯೆಯಲ್ಲಿ ಅತ್ಯಾಚಾರ ನಡೆಸಿದವನು, ಗುರು-ಪಿತೃಗಳನ್ನು ತ್ಯಜಿಸಿದವನು, ವೇತನವನ್ನು ತೆಗೆದುಕೊಂಡು ವೇದವನ್ನು ಕಲಿಸುವವನು, ಮಿತ್ರ ಮತ್ತು ದುಷ್ಟಳಾದ ಭಾರ್ಯೆಯ ಪತಿ—ಇವರು ಶ್ರಾದ್ಧಸತ್ಕಾರಕ್ಕೆ ಪಾತ್ರರಾದವರಲ್ಲ.

೩೧. ವೇದವನ್ನು ತ್ಯಜಿಸಿದವನು, ಅಗ್ನಿಯನ್ನು ವಿಸರ್ಜಿಸಿದವನು, ಶೂದ್ರಪುತ್ರರಿಂದ ದೂಷಿಸಲ್ಪಟ್ಟವನು ಮತ್ತು ನಿಷಿದ್ಧಕರ್ಮವನ್ನು ಆಚರಿಸಿ ಜೀವಿಸುತ್ತಿರುವವನು—ಇವರು ಪಿತೃಕರ್ಮದಲ್ಲಿ ವರ್ಜಿಸಲ್ಪಡಬೇಕಾದವರು.

ನಿಮನ್ತ್ರಯೇತ ಪೂರ್ವೇದ್ಯುಃ ಪೂರ್ವೋಕ್ತಾನ್ದ್ವಿಜಸತ್ತಮಾನ್ ।
ದೈವೇ ನಿಯೋಗೇ ಪಿತ್ರ್ಯೇ ಚ ತಾಂಸ್ತಥೈವೋಪಕಲ್ಪಯೇತ್ ॥೩೨॥

ತೈಶ್ಚ ಸಂಯಮಿಭಿರ್ಭಾವ್ಯಂ ಯಶ್ಚ ಶ್ರಾದ್ಧಂ ಕರಿಷ್ಯತಿ ॥೩೩॥

ಶ್ರಾದ್ಧಂ ದತ್ವಾ ಚ ಭುಕ್ತ್ವಾ ಚ ಮೈಥುನಂ ಯೋಽನುಗಚ್ಛತಿ ।
ಪಿತರಸ್ತು ತಯೋರ್ಮಾಸಂ ತಸ್ಮಿನ್ ರೇತಸಿ ಶೇರತೇ ॥೩೪॥

ಗತ್ವಾ ಚ ಯೋಷಿತಂ ಶ್ರಾದ್ಧೇ ಯೋ ಭುಙ್ಕ್ತೇ ಯಸ್ತು ಗಚ್ಛತಿ ।
ರೇತೋಮೂತ್ರಕೃತಾಹಾರಾಸ್ತಂ ಮಾಸಂ ಪಿತರಸ್ತಯೋಃ ॥೩೫॥

ತಸ್ಮಾತ್ತು ಪ್ರಥಮಂ ಕಾರ್ಯಂ ಪ್ರಾಜ್ಞೇನೋಪನಿಮನ್ತ್ರಣಮ್ ।
ಅಪ್ರಾಪ್ತೌ ತದ್ದಿನೇ ಚಾಪಿ ವರ್ಜ್ಯಾ ಯೋಷಿತ್ಪ್ರಸಙ್ಗಿನಃ ॥೩೬॥

---

೩೨. ಶ್ರಾದ್ಧ ಮಾಡುವವನು ಹಿಂದಿನ ದಿನದಲ್ಲಿ ಶ್ರೇಷ್ಠರಾದ ದ್ವಿಜೋತ್ತಮರಿಗೆ ದೈವ-ಪಿತೃಸ್ಥಾನಗಳನ್ನು ನಿರ್ದೇಶಿಸಿ ನಿಮಂತ್ರಣಮಾಡಿ ಅದರಂತೆ ಶ್ರಾದ್ಧ ಸಮಯದಲ್ಲಿ ಅವರವರನ್ನು ಆಯಾಯ ಸ್ಥಾನದಲ್ಲಿ ಪೂಜಿಸಬೇಕು.

೩೩. ಶ್ರಾದ್ಧದಲ್ಲಿ ನಿಮಂತ್ರಿತರಾದ ದ್ವಿಜರು ಮತ್ತು ಶ್ರಾದ್ಧಕರ್ತೃವು ನಿಮಂತ್ರಣ ಮಾಡಿದ ಮೊದಲುಗೊಂಡು ಜಿತೇಂದ್ರಿಯರಾಗಿ ಇರಬೇಕು. ಸ್ತ್ರೀಸಂಗವನ್ನು ಮಾಡಬಾರದು.

೩೪. ಶ್ರಾದ್ಧವನ್ನು ಮಾಡಿದವನಾಗಲಿ, ಶ್ರಾದ್ಧಾನ್ನವನ್ನು ಭುಂಜಿಸಿದವನಾಗಲಿ ಸ್ತ್ರೀಸಂಗವನ್ನು ಮಾಡಿದರೆ ಶ್ರಾದ್ಧಕರ್ತೃ-ಭೋಕ್ತೃಗಳ ಪಿತೃಗಳು ಒಂದು ಮಾಸ ಪೂರ್ತಿಯಾಗಿ ರೇತಸ್ಸಿನಲ್ಲಿ ಬೀಳುವರು.

೩೫. ಶ್ರಾದ್ಧವನ್ನು ಮಾಡಿದವನು ಮತ್ತು ಶ್ರಾದ್ಧಾನ್ನವನ್ನು ಭುಂಜಿಸಿದವನು ಸ್ತ್ರೀಸಂಗವನ್ನು ಮಾಡಿದರೆ ಅವರ ಪಿತೃಗಳು ಒಂದು ಮಾಸ ಪೂರ್ತಿಯಾಗಿ ರೇತಸ್ಸು-ಮೂತ್ರಗಳನ್ನು ಆಹಾರವಾಗಿ ಭುಂಜಿಸುವರು.

೩೬. ಆದುದರಿಂದ ಪ್ರಾಜ್ಞನಾದ ಗೃಹಸ್ಥನು ಸ್ತ್ರೀಚಾಪಲವಿಲ್ಲದ ದ್ವಿಜರನ್ನು ಮೊದಲು ನಿಮಂತ್ರಿಸಬೇಕು. ಒಂದುವೇಳೆ ಹಿಂದಿನ ದಿನ ಲಭಿಸದಿದ್ದರೆ ಶ್ರಾದ್ಧದಿನದಲ್ಲಿಯಾದರೂ ನಿಮಂತ್ರಣ ಮಾಡಬೇಕು. ಸ್ತ್ರೀವ್ಯಾಮೋಹವುಳ್ಳವರನ್ನು ವರ್ಜಿಸಬೇಕು.

ಭಿಕ್ಷಾರ್ಥಮಾಗತಾನ್ವಾಪಿ ಕಾಲೇ ಸಂಯಮಿನೋ ಯತೀನ್ ।
ಭೋಜಯೇತ್ಪ್ರಣಿಪಾತಾದ್ಯೈಃ ಪ್ರಸಾದ್ಯ ಯತಮಾನಸಃ ॥೩೭॥

ಯಥೈವ ಶುಕ್ಲಪಕ್ಷಾದ್ವೈ ಪಿತೄಣಾಮಸಿತಃ ಪ್ರಿಯಃ ।
ತಥಾಪರಾಹ್ಣಃ ಪೂರ್ವಾಹ್ಣಾತ್ಪಿತೄಣಾಮತಿರಿಚ್ಯತೇ ॥೩೮॥

ಸಂಪೂಜ್ಯ ಸ್ವಾಗತೇನೈತಾನಭ್ಯುಪೇತಾನ್ಗೃಹೇ ದ್ವಿಜಾನ್ ।
ಪವಿತ್ರಪಾಣಿರಾಚಾನ್ತಾನಾಸನೇಷೂಪವೇಶಯೇತ್ ॥೩೯॥

ಪಿತೄಣಾಮಯುಜಃ ಕಾಮಂ ಯುಗ್ಮಾನ್ದೈವೇ ದ್ವಿಜೋತ್ತಮಾನ್ ।
ಏಕೈಕಂ ವಾ ಪಿತೄಣಾಂ ಚ ದೇವಾನಾಂ ಚ ಸ್ವಶಕ್ತಿತಃ ॥೪೦॥

---

೩೭. ಕಾಲಕ್ಕೆ ಸರಿಯಾಗಿ ಭಿಕ್ಷೆಗೋಸ್ಕರ ಬಂದಿರುವ, ಇಂದ್ರಿಯ ಸಂಯಮದಿಂದ ಕೂಡಿದ ಯತಿಗಳನ್ನಾದರೂ ಪವಿತ್ರವಾದ ಹೃದಯವುಳ್ಳ ಗೃಹಸ್ಥನು ನಮಸ್ಕಾರ ಮುಂತಾದವುಗಳಿಂದ ಉಪಚರಿಸಿ ಭೋಜನಮಾಡಿಸಬೇಕು.

೩೮. ಪಿತೃಕರ್ಮಗಳಲ್ಲಿ ಪಿತೃಗಳಿಗೆ ಶುಕ್ಲಪಕ್ಷಕ್ಕಿಂತಲೂ ಕೃಷ್ಣಪಕ್ಷವು ಬಲು ಪ್ರಿಯವಾದುದು. ಅದರಂತೆ ಅಪರಾಹ್ಣಸಮಯಕ್ಕಿಂತಲೂ ಪೂರ್ವಾಹ್ಣವು ಪಿತೃಗಳಿಗೆ ಬಹಳ ಉತ್ತಮವಾದುದು.

೩೯: ಪವಿತ್ರವನ್ನು ಕೈಯ್ಯಲ್ಲಿ ಧರಿಸಿರುವ ಶ್ರಾದ್ಧಕರ್ತೃವಾದ ಗೃಹಸ್ಥನು ಮನೆಗೆ ಬಂದಿರುವ ದ್ವಿಜರನ್ನು ಸ್ವಾಗತವಚನದಿಂದ ಗೌರವಿಸಿ ಅವರು ಆಚಮನಮಾಡಿದ ತರುವಾಯ ಅವರನ್ನು ಆಯಾಯ ಪೀಠಗಳಲ್ಲಿ ಕುಳ್ಳಿರಿಸಬೇಕು.

೪೦. ಶ್ರಾದ್ಧದಲ್ಲಿ ಪಿತೃಸ್ಥಾನ ಮತ್ತು ದೇವಸ್ಥಾನವೆಂದು ಎರಡು ಸ್ಥಾನಗಳನ್ನು ಕಲ್ಪಿಸಬೇಕು. ಪಿತೃಸ್ಥಾನದಲ್ಲಿ ವಿಷಮಸಂಖ್ಯೆಯ ಬ್ರಾಹ್ಮಣರನ್ನೂ ದೇವಸ್ಥಾನದಲ್ಲಿ ಸಮಸಂಖ್ಯೆಯ ಬ್ರಾಹ್ಮಣರನ್ನೂ ತನ್ನ ಇಷ್ಟ ಶಕ್ತಿಗಳಿದ್ದಷ್ಟು ಪೂಜಿಸಬೇಕು. ಅಥವಾ ಎರಡು ಸ್ಥಾನಗಳಲ್ಲಿ ಒಬ್ಬೊಬ್ಬರನ್ನಾದರೂ ಪೂಜಿಸಬೇಕು.

ತಥಾ ಮಾತಾಮಹಾನಾಂ ಚ ತುಲ್ಯಂ ವಾ ವೈಶ್ವದೇವಿಕಮ್ ।
ಪೃಥಕ್ತಯೋಸ್ತಥಾ ಚಾನ್ಯೇ ಕೇಚಿದಿಚ್ಛನ್ತಿ ಮಾನವಾಃ ॥೪೧॥

ಪ್ರಾಙ್ಮುಖಾನ್ದೈವಸಂಕಲ್ಪಾನ್ಪಿತ್ರ್ಯಾನ್ಕುರ್ಯಾದುದಙ್ಮುಖಾನ್ ।
ತಥಾ ಮಾತಾಮಹಾನಾಂ ಚ ವಿಧಿರುಕ್ತೋ ಮನೀಷಿಭಿಃ ॥೪೨॥

ವಿಷ್ಟರಾರ್ಥೇ ಕುಶಾನ್ದತ್ತ್ವಾ ಸಂಪೂಜ್ಯಾರ್ಘ್ಯಾದಿನಾ ತತಃ ।
ಪವಿತ್ರಕಾಣಿ ದತ್ತ್ವಾ ವೈ ತೇಭ್ಯೋಽನುಜ್ಞಾಮವಾಪ್ಯ ಚ ॥೪೩॥

ಕುರ್ಯಾದಾವಾಹನಂ ಪ್ರಾಜ್ಞೋ ದೇವಾನಾಂ ಮನ್ತ್ರತೋ ದ್ವಿಜಃ ।
ಯವಾಮ್ಭೋಭಿಸ್ತತಶ್ಚಾರ್ಘ್ಯಂ ದತ್ತ್ವಾ ವೈ ವೈಶ್ವದೇವಿಕಮ್ ॥೪೪॥

---

೪೧. ಹಾಗೆಯೆ ಮಾತಾಮಹ—ಮುಂತಾದ ಮಾತೃವರ್ಗದ ಪಿತೃಸ್ಥಾನದಲ್ಲಿ ವಿಷಮಸಂಖ್ಯೆಯ ದ್ವಿಜರನ್ನು ಪೂಜಿಸಬೇಕು. ಪಿತೃ-ಮಾತೃವರ್ಗಗಳಿಗೆ ವಿಶ್ವೇದೇವಸ್ಥಾನದಲ್ಲಿ ಒಬ್ಬ ದ್ವಿಜನು ತುಲ್ಯನಾಗಿರಬಹುದು. ಕೆಲವರು ಮಾನವರು ಮಾತ್ರ ಎರಡು ಸ್ಥಾನಗಳಿಗೆ ಪ್ರತ್ಯೇಕ ದ್ವಿಜರು ಇರಬೇಕೆನ್ನುವರು.

೪೨. ಶ್ರಾದ್ಧಕರ್ಮದ ಪ್ರಾರಂಭದಲ್ಲಿ ದೇವಸ್ಥಾನದಲ್ಲಿ ನಿಮಂತ್ರಣಮಾಡಿದ ದ್ವಿಜರನ್ನು ಪೂರ್ವಾಭಿಮುಖರನ್ನಾಗಿ, ಪಿತೃಸ್ಥಾನದ ದ್ವಿಜರನ್ನು ಉತ್ತರಾಭಿಮುಖರನ್ನಾಗಿ ಮತ್ತು ಮಾತಾಮಹಸ್ಥಾನದ ದ್ವಿಜರನ್ನು ಉತ್ತರಾಭಿಮುಖರನ್ನಾಗಿ ಕುಳ್ಳಿರಿಸಬೇಕು. ಈ ವಿಧಿಯು ಪ್ರಾಜ್ಞರಿಂದ ಹೇಳಲ್ಪಟ್ಟಿರುವುದು.

೪೩. ಅಸನದಲ್ಲಿ ಕುಳಿತುಕೊಂಡ ದ್ವಿಜರನ್ನು ಪೂಜಿಸುವಾಗ ವಿಷ್ಟರಾಸನಕ್ಕೋಸ್ಕರ ದರ್ಭಗಳನ್ನು ಕೊಡಬೇಕು. ಅರ್ಘ್ಯ ಮುಂತಾದುವುಗಳನ್ನು ಅರ್ಪಿಸಬೇಕು. ಪವಿತ್ರಗಳನ್ನು ಕೊಡಬೇಕು. ಅನಂತರ ಆವಾಹನಮಾಡಲು ದ್ವಿಜರಿಂದ ಅನುಮತಿಯನ್ನು ಪಡೆಯಬೇಕು.

೪೪. ಶ್ರಾದ್ಧ ಕರ್ತೃವಾದ ಯಜಮಾನನು ಮಂತ್ರೋಚ್ಚಾರಣ ಮಾಡುತ್ತ ದೇವತೆಗಳ ಆವಾಹನವನ್ನು ಮಾಡಬೇಕು. ಮತ್ತು ವಿಶ್ವೇದೇವ ಸ್ಥಾನದ ದ್ವಿಜನಿಗೆ ಯವಾಕ್ಷತಜಲಗಳಿಂದ ಅರ್ಘ್ಯವನ್ನು ಕೊಡಬೇಕು.

ಗನ್ಧಮಾಲ್ಯಾದಿಧೂಪಂ ಚ ದತ್ತ್ವಾ ಸಮ್ಯಕ್ಸದೀಪಕಮ್ ।
ಅಪಸವ್ಯಂ ಪಿತೃಣಾಂ ಚ ಸರ್ವಮೇವೋಪಕಲ್ಪಯೇತ್ ॥೪೫॥

ದರ್ಭಾಂಶ್ಚ ದ್ವಿಗುಣಾನ್ದತ್ತ್ವಾ ತೇಭ್ಯೋಽನುಜ್ಞಾಮವಾಪ್ಯ ಚ ।
ಮನ್ತ್ರಪೂರ್ವಂ ಪಿತೃಣಾಂ ಚ ಕುರ್ಯಾದಾವಾಹನಂ ಬುಧಃ ॥೪೬॥

ಅಪಸವ್ಯಂ ತಥೈವಾರ್ಘ್ಯಂ ಯವಾರ್ಥೇ ಚ ತಥಾ ತಿಲೈಃ ।
ನಿಷ್ಪಾದಯೇನ್ಮಹಾಭಾಗ ಪಿತೃಣಾಂ ಪ್ರೀಣನೇ ರತಃ ॥೪೭॥

ಅಗ್ನೌಕಾರ್ಯಮನುಜ್ಞಾತಃ ಕುರುಷ್ವೇತಿ ತತೋ ದ್ವಿಜೈಃ ।
ಜುಹುಯಾದ್ವ್ಯಞ್ಜನಕ್ಷಾರವರ್ಜಮನ್ನಂ ಯಥಾವಿಧಿ ॥೪೮॥

---

೪೫. ಅನಂತರ ಗಂಧ-ಮಾಲ್ಯ-ಧೂಪ-ದೀಪ ಎಂಬ ಉಪಚಾರಗಳನ್ನು ಅರ್ಪಿಸಿ ಯಥಾವಿಧಿಯಾಗಿ ಪೂಜೆಮಾಡಬೇಕು. ಪಿತೃಗಳಿಗೆ ಮಾಡುವ ಪೂಜಾ ವಿಧಾನವನ್ನು ಅಪಸವ್ಯವಾಗಿಯೆ ನೆರವೇರಿಸಬೇಕು.

೪೬. ತರುವಾಯ ಪಿತೃಸ್ಥಾನದಲ್ಲಿರುವ ದ್ವಿಜರಿಗೆ ವಿಷ್ಟರ ಆಸನ-ಪವಿತ್ರಗಳಿಗೆ ದ್ವಿಗುಣವಾದ ದರ್ಭಗಳನ್ನು ಕೊಟ್ಟು ಅವರಿಂದ ಅನುಮತಿಯನ್ನು ತೆಗೆದುಕೊಂಡು ಮಂತ್ರಪೂರ್ವಕವಾಗಿ ಪಿತೃಗಳ ಆವಾಹನವನ್ನು ಮಾಡಬೇಕು.

೪೭. ಮಹಾಭಾಗ್ಯಶಾಲಿಯೆ! ಪಿತೃಗಳನ್ನು ಪ್ರೀತಿಪಡಿಸಲು ಆಸಕ್ತಿ ಹೊಂದಿರುವ ಶ್ರಾದ್ಧಕರ್ಮಕರ್ತೃವು ಅಪಸವ್ಯವಾಗಿ, ಯವಾಕ್ಷತಗಳಿಗೆ ಬದಲು ತಿಲಾಕ್ಷತಗಳಿಂದ ಸಹಿತವಾಗಿ ಅರ್ಘ್ಯದಾನವನ್ನು ಮಾಡಬೇಕು.

೪೮. ಪಿತೃಪೂಜೆಯನ್ನು ಮುಗಿಸಿದನಂತರ ದ್ವಿಜರಿಂದ "ಕುರುಷ್ವ" ಎಂಬ ವಚನದಿಂದ ಅನುಜ್ಞೆ ಪಡೆದವನಾಗಿ ಅಗ್ನೌಕರಣಕರ್ಮವನ್ನು ಮಾಡಬೇಕು. ಶಾಕವ್ಯಂಜನಲವಣಗಳನ್ನು ಮಿಶ್ರಮಾಡದೆ ಶುದ್ಧವಾದ ಅನ್ನವನ್ನು ಯಥಾವಿಧಿಯಾಗಿ ಹೋಮಮಾಡಬೇಕು.

ಅಗ್ನಯೇ ಕವ್ಯವಾಹನಾಯ ಸ್ವಾಹೇತಿ ಪ್ರಥಮಾಹುತಿಃ ।
ಸೋಮಾಯ ವೈ ಪಿತೃಮತೇ ಸ್ವಾಹೇತ್ಯನ್ಯಾ ತಥಾ ಭವೇತ್ ॥೪೯॥

ಯಮಾಯ ಪ್ರೇತಪತಯೇ ಸ್ವಾಹೇತಿ ತೃತೀಯಾಹುತಿಃ ।
ಹುತಾವಶಿಷ್ಟಂ ದದ್ಯಾಚ್ಚ ಭಾಜನೇಷು ದ್ವಿಜನ್ಮನಾಮ್ ॥೫೦॥

ಭಾಜನಾಲಮ್ಭನಂ ಕೃತ್ವಾ ದತ್ತ್ವಾ ಚಾನ್ನಂ ಯಥಾವಿಧಿ ।
ಯಥಾಸುಖಂ ಜುಷಧ್ವಂ ಭೋರಿತಿ ವಾಚ್ಯಮನಿಷ್ಠುರಮ್ ॥೫೧॥

ಭುಞ್ಜೀರಂಶ್ಚ ತತಸ್ತೇಽಪಿ ತಚ್ಚಿತ್ತಾ ಮೌನಿನಃ ಸುಖಮ್ ।
ಯದ್ಯದಿಷ್ಟತಮಂ ತೇಷಾಂ ತತ್ತದನ್ನಮಸತ್ವರಮ್ ॥೫೨॥

---

೪೯. ಅಗ್ನೌಕರಣ ಹೋಮದಲ್ಲಿ ಅರ್ಪಿಸಬೇಕಾದ ಆಹುತಿಗಳು ಮೂರಾಗಿವೆ. ಮೊದಲನೆಯ ಆಹುತಿಯನ್ನು "ಅಗ್ನಯೇ ಕವ್ಯವಾಹನಾಯ ಸ್ವಾಹಾ" ಎಂಬ ಮಂತ್ರವನ್ನು ಪಠಿಸುತ್ತ ಹೋಮಮಾಡಬೇಕು. ಹಾಗೆ ಎರಡನೆಯ ಆಹುತಿಯನ್ನು "ಸೋಮಾಯ ಪಿತೃಮತೇ ಸ್ವಾಹಾ" ಎಂಬ ಮಂತ್ರವನ್ನು ಹೇಳಿ ತ್ಯಾಗಮಾಡಬೇಕು,

೫೦. "ಯಮಾಯ ಪ್ರೇತಪತಯೇ ಸ್ವಾಹಾ" ಎಂಬ ಮಂತ್ರವನ್ನು ಹೇಳಿ ಮೂರನೆಯ ಆಹುತಿಯನ್ನು ಹೋಮಮಾಡಬೇಕು. ಕವ್ಯವಾಹನ ಅಗ್ನಿ, ಪಿತೃಮತ್ ಸೋಮ, ಪ್ರೇತಪತಿ ಯಮ ಎಂಬ ಮೂರು ದೇವತೆಗಳಿಗೆ ಕವ್ಯ ಹವಿಸ್ಸನ್ನು ಅರ್ಪಿಸುತ್ತೇನೆ ಎಂದು ಆ ಮಂತ್ರಗಳು ಅರ್ಥವನ್ನು ಪ್ರತಿಪಾದಿಸುತ್ತವೆ. ಅಗ್ನೌಕರಣಹೋಮಮಾಡಿ ಮಿಕ್ಕ ಅನ್ನವನ್ನು ಬ್ರಾಹ್ಮಣರ ಭೋಜನ ಪಾತ್ರಗಳಲ್ಲಿ ಇರಿಸಬೇಕು.

೫೧. ಭೋಜನ ಪಾತ್ರಗಳಲ್ಲಿ ಯಥಾವಿಧಿಯಾಗಿ ಸೋಪಸ್ಕರವಾದ ಅನ್ನವನ್ನು ಬಡಿಸಿ ಪರಿಷೇಚನ-ಪಾತ್ರಸ್ಪರ್ಶಾದಿಗಳನ್ನು ಮಾಡಿ ಅನಂತರದಲ್ಲಿ ದ್ವಿಜರನ್ನು ಕುರಿತು ಯಥಾಸುಖವಾಗಿ ಭೋಜನಮಾಡಬೇಕೆಂದು ಸೌಮ್ಯ-ವಚನದಿಂದ ಕೇಳಿಕೊಳ್ಳಬೇಕು.

೫೨. ದ್ವಿಜರು ಶ್ರಾದ್ಧಕರ್ಮದಲ್ಲಿ ಚಿತ್ತವುಳ್ಳವರೂ, ಮೌನವುಳ್ಳವರೂ ಆಗಿ ತಮಗೆ ತೃಪ್ತಿಯಾಗುವಂತೆ ಭೋಜನಮಾಡಬೇಕು. ಭೋಜನ ಮಾಡುತ್ತಿದ್ದ ದ್ವಿಜರಿಗೆ ಯಾವುದು ಇಷ್ಟವೊ ಆ ಅನ್ನ ಉಪಸ್ಕರಗಳನ್ನು ಸಾವಕಾಶ-ವಾಗಿ ಬಡಿಸಬೇಕು.

ಅಕ್ರುಧ್ಯಂಶ್ಚ ನರೋ ದದ್ಯಾತ್ಸಂಸ್ತವೇನ ಪ್ರಲೋಭಯೇತ್ ।
ರಕ್ಷೋಘ್ನಾಂಶ್ಚ ಜಪೇನ್ಮನ್ತ್ರಾಂಸ್ತಿಲೈಶ್ಚ ವಿಕಿರೇನ್ಮಹೀಮ್ ॥೫೩॥

ಸಿದ್ಧಾರ್ಥಕೈಶ್ಚ ರಕ್ಷಾರ್ಥಂ ಶ್ರಾದ್ಧಂ ಹಿ ಪ್ರಚುರಚ್ಛಲಮ್ ।
ಪೃಷ್ಟೈಸ್ತೃಪ್ತೈಶ್ಚ ತೃಪ್ತಾಃ ಸ್ಥ ತೃಪ್ತಾಃ ಸ್ಮ ಇತಿ ವಾದಿಭಿಃ ॥೫೪॥

ಅನುಜ್ಞಾತೋ ನರಸ್ತ್ವನ್ನಂ ವಿಕಿರೇದ್ಭುವಿ ಸರ್ವತಃ ।
ತದ್ವದಾಚಮನಾರ್ಥಾಯ ದದ್ಯಾದಮ್ಭಃ ಸಕೃತ್ಸಕೃತ್ ॥೫೫॥

ಅನುಜ್ಞಾಂ ಚ ತತಃ ಪ್ರಾಪ್ಯ ಯತವಾಕ್ಕಾಯಮಾನಸಃ ।
ಸತಿಲೇನ ತತೋಽನ್ನೇನ ಪಿಣ್ಡಾನ್ ಸರ್ವೇಣ ಪುತ್ರಕ ॥೫೬॥

---

೫೩. ಮತ್ತು ಯಜಮಾನನು ದ್ವಿಜರನ್ನು ಆದರದಿಂದ ಸ್ತುತಿಮಾಡಿ ಆಯಾಯ ಅನ್ನ-ಉಪಸ್ಕಾರಗಳಲ್ಲಿ ರುಚಿ ಹುಟ್ಟಿಸಿ ಕೋಪಮಾಡಿಕೊಳ್ಳದೆ ಬಡಿಸುತ್ತಿರಬೇಕು. ರಾಕ್ಷೋಘ್ನಮಂತ್ರಗಳನ್ನು ಪಠಿಸಬೇಕು. ಹಾಗು ಶ್ರಾದ್ಧ-ಭೂಮಿಯಲ್ಲಿ ಎಳ್ಳನ್ನು ಚೆಲ್ಲಬೇಕು.

೫೪. ಮತ್ತು ಸಾಸುವೆ ಕಾಳನ್ನು ಚೆಲ್ಲಿ ಶ್ರಾದ್ಧಕರ್ಮಕ್ಕೆ ರಕ್ಷೆಯನ್ನು ಮಾಡಬೇಕು. ಶ್ರಾದ್ಧವೆಂಬುದು ಬಹಳ ವಿಘ್ನ-ಛಲಗಳಿಂದ ಕೂಡಿರುವುದು. ಭೋಜನಮಾಡಿ ದ್ವಿಜರು ತೃಪ್ತಿಹೊಂದಿದಮೇಲೆ "ತೃಪ್ತರಾಗಿರಿ" ಎಂದು ಹೇಳಿ "ತೃಪ್ತರಾದೆವು" ಎಂದು ದ್ವಿಜರ ಉತ್ತರವನ್ನು ಹೊಂದಬೇಕು.

೫೫. ತರುವಾಯ ದ್ವಿಜರಿಂದ ಅನುಜ್ಞೆಯನ್ನು ಹೊಂದಿದ ಯಜಮಾನನು ನೆಲದಲ್ಲಿ ಸುತ್ತಲೂ ಅನ್ನವಿಕಿರಣವನ್ನು ಮಾಡಬೇಕು. ಹಾಗು ಆಚಮನಕ್ಕೋಸ್ಕರ ಒಂದೊಂದು ಸಲ ನೀರನ್ನು ಕೊಡಬೇಕು.

೫೬. ಪುತ್ರನೆ! ಅನಂತರ ದ್ವಿಜರಿಂದ ಅನುಮತಿಯನ್ನು ಪಡೆದು ವಾಕ್-ಕಾಯ-ಮಾನಸವೆಂಬ ತ್ರಿಕರಣಗಳನ್ನು ಸ್ಥಿರಪಡಿಸಿಕೊಂಡು ಮಿಕ್ಕ ಎಲ್ಲ ಅನ್ನದಿಂದ ಪಿಂಡಗಳನ್ನು ಮಾಡಬೇಕು.

ಪಿತೄನುದ್ದಿಶ್ಯ ದರ್ಭೇಷು ದದ್ಯಾದುಚ್ಛಿಷ್ಟಸನ್ನಿಧೌ ।
ಪಿತೃತೀರ್ಥೇನ ತೋಯಂ ಚ ದದ್ಯಾತ್ತೇಭ್ಯಃ ಸಮಾಹಿತಃ ॥೫೭॥

ಪಿತೄನ್ಸಂಚಿನ್ತ್ಯ ತದ್ಭಕ್ತ್ಯಾ ಯಜಮಾನೋ ನೃಪಾತ್ಮಜ ।
ತದ್ವನ್ಮಾತಾಮಹಾನಾಂ ಚ ದದ್ಯಾತ್ಪಿಣ್ಡಾನ್ಯಥಾವಿಧಿ ॥೫೮॥

ಗನ್ಧಮಾಲ್ಯಾದಿಸಂಯುಕ್ತಾನ್ದದ್ಯಾದಾಚಮನಂ ತತಃ ।
ದತ್ತ್ವಾ ಚ ದಕ್ಷಿಣಾಂ ಶಕ್ತ್ಯಾ ಸುಸ್ವಧಾಸ್ತ್ವಿತಿ ತಾನ್ವದೇತ್ ॥೫೯॥

ತೈಶ್ಚ ತುಷ್ಟೈಸ್ತಥೇತ್ಯುಕ್ತ್ವಾ ವಾಚಯೇದ್ವೈಶ್ವದೇವಿಕಾನ್ ।
ಪ್ರೀಯನ್ತಾ ಮಿತಿ ಭದ್ರಂ ವೋ ವಿಶ್ವೇ ದೇವಾ ಇತೀರಯೇತ್ ॥೬೦॥

---

೫೭. ಉಚ್ಛಿಷ್ಟ ಭೋಜನಪಾತ್ರಗಳ ಹತ್ತಿರ ಪಿತೃಗಳನ್ನು ಉದ್ದೇಶ-ಮಾಡಿಕೊಂಡು ಪಿಂಡಗಳನ್ನು ದರ್ಭಗಳಲ್ಲಿ ಇರಿಸಬೇಕು. ಮತ್ತು ಶಾಂತಚಿತ್ತ-ನಾಗಿ ಪಿಂಡಗಳ ಮೇಲೆ ಪಿತೃತೀರ್ಥದಿಂದ ಪಿತೃಗಳಿಗೆ ಜಲವನ್ನು ಅರ್ಪಿಸಬೇಕು.

೫೮. ರಾಜಕುಮಾರನೆ! ಯಜಮಾನನು ಭಕ್ತಿಯಿಂದ ಕೂಡಿ ಪಿತೃಗಳನ್ನು ಸ್ಮರಿಸಿಕೊಂಡು ಪಿಂಡದಾನವನ್ನು ಮಾಡಬೇಕು. ಹಾಗೆಯೆ ಶಾಸ್ತ್ರೋಕ್ತ ವಿಧಾನದಂತೆ ಮಾತಾಮಹರಿಗೆ ಪಿಂಡಗಳನ್ನು ಅರ್ಪಿಸಬೇಕು.

೫೯. ಹೀಗೆ ಪಿಂಡದಾನ ಮತ್ತು ಪಿಂಡಾರ್ಚನಗಳನ್ನು ಮಾಡಿ ಗಂಧ-ಮಾಲ್ಯ ಮುಂತಾದ ಉಪಚಾರವನ್ನೂ ಆಚಮನವನ್ನೂ ಕೊಟ್ಟು ದ್ವಿಜರಿಗೆ ಶಕ್ತ್ಯನುಸಾರವಾಗಿ ದಕ್ಷಿಣೆಯನ್ನು ಅರ್ಪಿಸಿ "ಸುಸ್ವಧಾಸ್ತು" ಎಂದು ಉಚ್ಚರಿಸುತ್ತ ಶ್ರಾದ್ಧದ ಸಂಪೂರ್ಣತೆಯಾಗಲಿ ಎಂದು ಕೇಳಿಕೊಳ್ಳ-ಬೇಕು.

೬೦. ಸಂತುಷ್ಟರಾದ ದ್ವಿಜರು "ಹಾಗೆ ಆಗಲಿ" ಎಂದು ಪ್ರತ್ಯುತ್ತರ-ವನ್ನು ಹೇಳಿದ ಬಳಿಕ ವಿಶ್ವೇದೇವಸ್ಥಾನದ ದ್ವಿಜರಲ್ಲಿಯೂ ಹಾಗೆಯೆ ಪ್ರಾರ್ಥಿಸಿ ಅವರಿಂದಲೂ ತೃಪ್ತಿಯ ಉತ್ತರವನ್ನು ಹೊಂದಬೇಕು. ಮತ್ತು ವಿಶ್ವೇದೇವ ದ್ವಿಜರನ್ನು ನೋಡಿ "ವಿಶ್ವೇದೇವರು ಪ್ರೀತಿಹೊಂದಲಿ, ನಿಮಗೆ ಮಂಗಳವಾಗಲಿ" ಎಂದು ಕೇಳಿಕೊಳ್ಳಬೇಕು.

ತಥೇತಿ ಚೋಕ್ತೇ ತೈರ್ವಿಪ್ರೈಃ ಪ್ರಾರ್ಥನೀಯಾಸ್ತದಾಶಿಷಃ ।
ವಿಸರ್ಜಯೇತ್ಪ್ರಿಯಾಣ್ಯುಕ್ತ್ವಾ ಪ್ರಣಿಪತ್ಯ ಚ ಭಕ್ತಿತಃ ||೬೧||

ಆದ್ವಾರಮನುಗಚ್ಛೇಚ್ಚ ಆಗಚ್ಛೇಚ್ಚಾನುಮೋದಿತಃ ।
ತತೋ ನಿತ್ಯಕ್ರಿಯಾಂ ಕುರ್ಯಾದ್ಭೋಜಯೇಚ್ಚ ತಥಾತಿಥೀನ್||೬೨||

ನಿತ್ಯಕ್ರಿಯಾಂ ಪಿತೃಣಾಂ ಚ ಕೇಚಿದಿಚ್ಛನ್ತಿ ಸತ್ತಮಾಃ ।
ನ ಪಿತೃಣಾಂ ತಥೈವಾನ್ಯೇ ಶೇಷಂ ಪೂರ್ವವದಾಚರೇತ್ ||೬೩||

ಪೃಥಕ್ಪಾಕೇನ ಚೇತ್ಯನ್ಯೇ ಕೇಚಿತ್ಪೂರ್ವಂ ಚ ಪೂರ್ವವತ್ ।
ತತಸ್ತದನ್ನಂ ಭುಞ್ಜೀತ ಸಹ ಭೃತ್ಯಾದಿಭಿರ್ನರಃ ||೬೪||

---

೬೧. ಆ ವಿಪ್ರರು "ಹಾಗೆ ಆಗಲಿ" ಎಂದು ಪ್ರತ್ಯುತ್ತರವನ್ನು ನುಡಿದ ಮೇಲೆ ವಿಪ್ರರ ಸನ್ನಿಧಿಯಲ್ಲಿ ನಿಂತು ಅವರಿಂದ ಆಶೀರ್ವಚನವನ್ನು ಪಡೆಯಬೇಕು. ಅನಂತರದಲ್ಲಿ ಪ್ರಿಯವಾದ ಮಾತುಗಳನ್ನು ಆಡುತ್ತ ಭಕ್ತಿಯಿಂದ ನಮಸ್ಕರಿಸಿ ಅವರನ್ನು ವಿಸರ್ಜಿಸಬೇಕು.

೬೨. ದ್ವಿಜರನ್ನು ಮನೆಯ ಮುಂಭಾಗದ ಬಾಗಿಲಿನವರೆಗೆ ಹಿಂಬಾಲಿಸಿಕೊಂಡು ಬಂದು ವಿಸರ್ಜಿಸಿ ಸಂತೋಷಪಟ್ಟ ಯಜಮಾನನು ಮತ್ತೆ ಹಿಂದಕ್ಕೆ ಹೋಗಿ ನಿತ್ಯಕರ್ಮವನ್ನು ಮಾಡಿಕೊಂಡು ಅತಿಥಿಗಳಿಗೆ ಭೋಜನವನ್ನು ಮಾಡಿಸಬೇಕು.

೬೩. ಶ್ರಾದ್ಧ ದಿನದಲ್ಲಿ ಶ್ರಾದ್ಧ ಕರ್ಮವು ಮುಗಿದ ಮೇಲೆ ಇತರ ನಿತ್ಯಕರ್ಮಗಳ ಜೊತೆಗೆ ಪಿತೃದೇವತಾ ಸಂಬಂಧಿಯಾದ ನಿತ್ಯಕರ್ಮವನ್ನೂ ಮಾಡಬೇಕೆಂದು ಕೆಲವರು ಆಸ್ತಿಕರು ಹೇಳುವರು. ಮತ್ತೆ ಕೆಲವರು ಆ ದಿನ ಪಿತೃ ಕರ್ಮವನ್ನು ಬೇರೆಯಾಗಿ ಮಾಡಬೇಕಾಗಿಲ್ಲವೆಂದು ಹೇಳುವರು. ಮಿಕ್ಕ ಕರ್ತವ್ಯವನ್ನು ಮೊದಲು ಹೇಳಿದಂತೆ ಮಾಡಬೇಕು.

೬೪. ಶ್ರಾದ್ಧಾಂಗವಾದ ಪಾಕವನ್ನು ಬಿಟ್ಟು ಬೇರೆಯಾದ ಪಾಕದಿಂದ ಮಹಾಯಜ್ಞಗಳನ್ನು ಮಾಡಬೇಕೆಂಬುದು ಕೆಲವರ ಮತವಾಗಿದೆ. ಒಂದೇ ಪಾಕದಿಂದ ಮಾಡಬಹುದೆಂಬುದು ಮತ್ತೆ ಕೆಲವರ ಮತವಾಗಿದೆ. ತರುವಾಯ ಯಜಮಾನನು ಭೃತ್ಯಜನ ಮುಂತಾದವರ ಕೂಡ ಅನ್ನವನ್ನು ಭುಂಜಿಸಬೇಕು.

ಏವಂ ಕುರ್ವೀತ ಧರ್ಮಜ್ಞಃ ಶ್ರಾದ್ಧಂ ಪಿತ್ರ್ಯಂ ಸಮಾಹಿತಃ ।
ಯಥಾವದ್ದ್ವಿಜಮುಖ್ಯಾನಾಂ ಪರಿತೋಷೋಽಭಿಜಾಯತೇ ॥೬೫॥

ತ್ರೀಣಿ ಶ್ರಾದ್ಧೇ ಪವಿತ್ರಾಣಿ ದೌಹಿತ್ರಂ ಕುತುಪಸ್ತಿಲಾಃ ।
ವರ್ಜ್ಯಾಣಿ ಚಾಹುರ್ವಿಪ್ರೈಶ್ಚ ಕೋಪೋಽಧ್ವಗಮನಂ ತ್ವರಾ ॥೬೬॥

ರಾಜತಂ ಚ ತಥಾ ಪಾತ್ರಂ ಶಸ್ತಂ ಶ್ರಾದ್ಧೇಷು ಪುತ್ರಕ ।
ರಜತಸ್ಯ ತಥಾ ಕಾರ್ಯಂ ದರ್ಶನಂ ದಾನಮೇವ ವಾ ॥೬೭॥

ರಾಜತೇ ಹಿ ಸ್ವಧಾ ದುಗ್ಧಾ ಪಿತೃಭಿಃ ಶ್ರೂಯತೇ ಮಹೀ ।
ತಸ್ಮಾತ್ಪಿತೄಣಾಂ ರಜತಮಭೀಷ್ಟಂ ಪ್ರೀತಿವರ್ಧನಮ್ ॥೬೮॥

ಇತಿ ಶ್ರೀಮಾರ್ಕಣ್ಡೇಯ ಮಹಾಪುರಾಣೇ ಶ್ರಾದ್ಧಕಲ್ಪೇ ನಾಮ
ಏಕೋನತ್ರಿಂಶೋಽಧ್ಯಾಯಃ

---

೬೫. ಧರ್ಮವೇತ್ತನಾದ ಯಜಮಾನನು ಪಿತೃಗಳನ್ನು ತೃಪ್ತಿಪಡಿಸುವ ಶ್ರಾದ್ಧವಿಧಿಯನ್ನು ಹೀಗೆ ಸಮಾಧಾನಚಿತ್ತವುಳ್ಳವನಾಗಿ ಮಾಡಬೇಕು. ಮುಖ್ಯವಾಗಿ ದ್ವಿಜೋತ್ತಮರಿಗೆ ಸಂತೋಷವಾಗುವಂತೆ ನಡೆದುಕೊಳ್ಳಬೇಕು.

೬೬. ಶ್ರಾದ್ಧಕರ್ಮದಲ್ಲಿ ಮಗಳ ಮಗನು, ಕುತುಪಕಾಲ ಮತ್ತು ತಿಲಧಾನ್ಯ—ಈ ಮೂರು ಉಪಕರಣಗಳು ಬಹಳ ಪವಿತ್ರವಾದುವು. ಶ್ರಾದ್ಧದಲ್ಲಿ ನಿಮಂತ್ರಿತರಾದ ದ್ವಿಜರು ಕೋಪ, ತ್ವರೆ ಮತ್ತು ಮಾರ್ಗನಡೆಯುವುದು—ಇವು ಮೂರನ್ನು ಬಿಡಬೇಕು.

೬೭. ಪುತ್ರನೆ! ಶ್ರಾದ್ಧದಲ್ಲಿ ಬೆಳ್ಳಿಯ ಪಾತ್ರೆಯು ಬಹಳ ಉತ್ತಮವಾದುದು. ಆದ್ದರಿಂದ ಶ್ರಾದ್ಧದಲ್ಲಿ ರಜತಪಾತ್ರೆಯ ದರ್ಶನ, ದಾನಗಳನ್ನು ಯಥಾಶಕ್ತಿಯಾಗಿ ಮಾಡಬೇಕು.

೬೮. ಪೃಥು ಚಕ್ರವರ್ತಿಯ ರಾಜ್ಯಭಾರಸಮಯದಲ್ಲಿ ಗೋರೂಪದಿಂದಿರುವ ಭೂಮಿಯಿಂದ ರಜತಪಾತ್ರದಲ್ಲಿ ಪಿತೃಗಳ ಸ್ವಧಾನ್ನವು ಕರೆಯಲ್ಪಟ್ಟಿರುವುದು. ಆದ್ದರಿಂದ ಪಿತೃಗಳಿಗೆ ರಜತ ಪಾತ್ರವು ತುಂಬ ಇಷ್ಟವೂ ಪ್ರೀತಿಯನ್ನು ಹೆಚ್ಚಿಸುವುದೂ ಆಗಿದೆ.

ಮಾರ್ಕಂಡೇಯ ಮಹಾಪುರಾಣದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯವು
ಮುಗಿದುದು

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಏಕೋನತ್ರಿಂಶೋಽಧ್ಯಾಯಃ

(ಶ್ರಾದ್ಧೇ ವರ್ಜ್ಯಾವರ್ಜ್ಯನಿರೂಪಣಮ್)

ಮದಾಲಸೋವಾಚ :—

ಅತಃ ಪರಂ ಶೃಣುಷ್ವೇಮಂ ಪುತ್ರ ಭಕ್ತ್ಯಾ ಯದಾಹೃತಮ್ ।
ಪಿತೄಣಾಂ ಪ್ರೀತಯೇ ಯದ್ಯದ್ವರ್ಜ್ಯಂ ವಾ ಪ್ರೀತಿಕಾರಕಮ್ ॥೧॥

ಮಾಸಂ ತೃಪ್ತಿಃ ಪಿತೄಣಾಂ ಚ ಹವಿಷ್ಯಾನ್ನೇನ ಜಾಯತೇ ।
ಮಾಸದ್ವಯಂ ಮತ್ಸ್ಯಮಾಂಸೈಸ್ತೃಪ್ತಿಂ ಯಾನ್ತಿ ಪಿತಾಮಹಾಃ ॥೨॥

ಇಪ್ಪತ್ತೊಂಭತ್ತನೆಯ ಅಧ್ಯಾಯ

ಮದಾಲಸೆಯು ಇಂತೆಂದಳು :—

೧. ಪುತ್ರನೆ! ಭಕ್ತಿಯಿಂದ ತರಲ್ಪಟ್ಟ ಯಾವ ಉಪಕರಣವು ಪಿತೃಗಳಿಗೆ ಪ್ರೀತಿಯನ್ನು ಕೊಡುವುದೊ; ಯಾವುದನ್ನು ಬಿಡುವುದು ಪಿತೃಗಳಿಗೆ ಪ್ರೀತಿಯನ್ನು ಉಂಟುಮಾಡುವುದೊ; ಅಂತಹ ವರ್ಜ್ಯ-ಅವರ್ಜ್ಯಗಳನ್ನು ಇನ್ನು ಮುಂದೆ ಕೇಳು.

೨ ಪಿತೃಗಳಿಗೆ ಹವಿಷ್ಯರೂಪವಾದ ಅನ್ನವನ್ನು ಕೊಡುವುದರಿಂದ ಒಂದು ಮಾಸ ಪೂರ್ತಿಯಾಗಿ ತೃಪ್ತಿಯುಂಟಾಗುವುದು. ಮತ್ಸ್ಯಮಾಂಸದಿಂದ ಪಿತಾಮಹರು ಎರಡು ಮಾಸಗಳವರೆಗೆ ತೃಪ್ತಿಹೊಂದಿರುವರು.

ತ್ರೀನ್ ಮಾಸಾನ್ ಹಾರಿಣಂ ಮಾಂಸಂ ವಿಜ್ಞೇಯಂ ಪಿತೃತೃಪ್ತಯೇ ।
ಪುಷ್ಣಾತಿ ಚತುರೋ ಮಾಸಾನ್ಶಶಸ್ಯ ಪಿಶಿತಂ ಪಿತೄನ್ ॥೩॥

ಶಾಕುನಂ ಪಞ್ಚ ವೈ ಮಾಸಾನ್ ಷಣ್ಮಾಸಾನ್ಸೂಕರಾಮಿಷಮ್ ।
ಛಾಗಲಂ ಸಪ್ತ ವೈ ಮಾಸಾನೈಣೇಯಂ ಚಾಷ್ಟಮಾಸಿಕೀಮ್ ॥೪॥

ಕರೋತಿ ತೃಪ್ತಿಂ ನವ ವೈ ರುರೋರ್ಮಾಂಸಂ ನ ಸಂಶಯಃ ।
ಗವಯಸ್ಯಾಮಿಷಂ ತೃಪ್ತಿಂ ಕರೋತಿ ದಶಮಾಸಿಕೀಮ್ ॥೫॥

ತಥೈಕಾದಶಮಾಸಾಂಸ್ತು ಔರಭ್ರಂ ಪಿತೃತೃಪ್ತಿದಮ್ ।
ಸಂವತ್ಸರಂ ತಥಾ ಗವ್ಯಂ ಪಯಃ ಪಾಯಸಮೇವ ವಾ ॥೬॥

---

೩. ಜಿಂಕೆಯ ಮಾಂಸವು ಪಿತೃಗಳಿಗೆ ಮೂರು ತಿಂಗಳವರೆಗೆ ತೃಪ್ತಿ-ಕೊಡುವುದೆಂದು ತಿಳಿಯಬೇಕು. ಹಾಗು ಮೊಲದ ಮಾಂಸವು ನಾಲ್ಕು ಮಾಸಗಳವರೆಗೆ ಪಿತೃಗಳನ್ನು ತೃಪ್ತಿಯಿಂದ ಪೋಷಿಸುತ್ತದೆ.

೪. ಮತ್ತು ಪಕ್ಷಿಯ ಮಾಂಸವು ಐದು ಮಾಸಪೂರ್ತಿಯಾಗಿಯೂ, ವರಾಹ ಮಾಂಸವು ಆರು ಮಾಸಗಳು ಪೂರ್ತಿಯಾಗಿಯೂ, ಆಡಿನ ಮಾಂಸವು ಏಳು ಮಾಸಗಳು ಪೂರ್ತಿಯಾಗಿಯೂ ಹಾಗು ಏಣವೆಂಬ ಮೃಗಮಾಂಸವು ಎಂಟು ಮಾಸಗಳು ಪೂರ್ತಿಯಾಗಿಯೂ ಪಿತೃತೃಪ್ತಿಯನ್ನು ಉಂಟುಮಾಡುವುದು.

೫. ರುರು ಎಂಬ ಜಿಂಕೆಯ ಮಾಂಸವು ಒಂಭತ್ತು ತಿಂಗಳವರೆಗೆ ತೃಪ್ತಿಯನ್ನು ಮಾಡುವುದು. ಹಾಗು ಗವಯಮೃಗದ ಮಾಂಸವು ಹತ್ತು ತಿಂಗಳ ವರೆಗೆ ಪಿತೃಗಳಿಗೆ ತೃಪ್ತಿಯನ್ನು ಉಂಟುಮಾಡುವುದು. ಇದರಲ್ಲಿ ಸಂಶಯವಿಲ್ಲ.

೬. ಹಾಗೆಯೆ ಟಗರಿನ ಮಾಂಸವು ಹನ್ನೊಂದು ಮಾಸಗಳು ಪೂರ್ತಿಯಾಗಿ ತೃಪ್ತಿಯನ್ನು ಕೊಡುವುದು. ಮತ್ತು ಹಸುವಿನ ಹಾಲು ಅಥವಾ ಗೋಕ್ಷೀರದ ಪಾಯಸವು ಪಿತೃಗಳಿಗೆ ಒಂದು ಸಂವತ್ಸರ ಪೂರ್ತಿಯಾಗಿ ತೃಪ್ತಿಯನ್ನು ಉಂಟುಮಾಡುವುದು.

ವಾರ್ಧ್ರೀಣಸಾಮಿಷಂ ಲೋಹಂ ಕಾಲಶಾಕಂ ತಥಾ ಮಧು ।
ದೌಹಿತ್ರಾಮಿಷಮನ್ಯಚ್ಚ ದತ್ತಮಾತ್ಮಕುಲೋದ್ಭವೈಃ ||೭||

ಅನನ್ತಾಂ ವೈ ಪ್ರಯಚ್ಛನ್ತಿ ತೃಪ್ತಿಂ ಗೌರೀಸುತಸ್ತಥಾ ।
ಪಿತ್ರೄಣಾಂ ನಾತ್ರ ಸನ್ದೇಹೋ ಗಯಾಶ್ರಾದ್ಧಂ ಚ ಪುತ್ರಕ ||೮||

ರಾಜಶ್ಯಾಮಾಕಶ್ಯಾಮಾಕೌ ತದ್ವಚ್ಚೈವ ಪ್ರಶಾತಿಕಾ ।
ನೀವಾರಾಃ ಪೌಷ್ಕರಾಶ್ಚೈವ ವನ್ಯಾನಿ ಪಿತೃತೃಪ್ತಯೇ ||೯||

ಯವವ್ರೀಹಿಸಗೋಧೂಮತಿಲಮುದ್ಗಾಃ ಸಸರ್ಷಪಾಃ ।
ಪ್ರಿಯಙ್ಗವಃ ಕೋದ್ರವಾಶ್ಚ ನಿಷ್ಪಾವಾಶ್ಚಾತಿಶೋಭನಾಃ ||೧೦||

---

೭. ವಾರ್ಧ್ರೀಣಸವೆಂದು ಕರೆಯಲ್ಪಡುವ ಟಗರುಮೃಗದ ಮಾಂಸ, ಕಾಲಾಗರುಗಂಧ, ಆಯಾಯಕಾಲದ ಶಾಕವಸ್ತು, ಮಧು, ದೌಹಿತ್ರ ಮತ್ತು ಮಾಂಸಗಳನ್ನು ತನ್ನ ವಂಶದಲ್ಲಿ ಜನಿಸಿದ ಪುತ್ರರು ಅರ್ಪಿಸುವುದು ಪಿತೃಪ್ರೀತಿಯನ್ನು ಕೊಡುವುದು.

೮. ಪುತ್ರನೆ ! ಹಿಂದೆ ಹೇಳಿದ ವಾರ್ಧ್ರೀಣಸ ಮಾಂಸ ಮೊದಲಾದುವು ಪಿತೃಗಳಿಗೆ ಅನಂತವಾದ ತೃಪ್ತಿಯನ್ನು ಕೊಡುವುವು. ಹಾಗು ಎಂಟು ವರ್ಷದಲ್ಲಿ ವಿವಾಹಿತಳಾದ ಸ್ತ್ರೀಯಲ್ಲಿ ಜನಿಸಿದವನು, ಗಯಾಶ್ರಾದ್ಧ ಇವುಗಳಲ್ಲಿ ಪಿತೃಗಳಿಗೆ ತುಂಬ ತೃಪ್ತಿಯಾಗುವುದು. ಈ ವಿಷಯದಲ್ಲಿ ಸಂಹೇಹವಿಲ್ಲ.

೯. ಸಾಮೆಕಾಳು, ರಾಜಶ್ಯಾಮಾಕ, ನವಣೆ, ಪ್ರಶಾತಿಕವೆಂಬ ಧಾನ್ಯ ಮತ್ತು ತಾವರೆಬೀಜ ಮುಂತಾದ ವನದಲ್ಲಿ ಬೆಳೆಯುವ ವಸ್ತುಗಳು ಅತಿಶಯವಾಗಿ ಪಿತೃತೃಪ್ತಿಯನ್ನು ಕೊಡುವುವು.

೧೦. ಜವೆ, ಭತ್ತ, ಗೋಧಿ, ಎಳ್ಳು, ಹೆಸರು, ಸಾಸುವೆ, ಜೀರಿಗೆ, ನವಣೆ ಮತ್ತು ಅವರೆ ಇವು ಶ್ರಾದ್ಧಕರ್ಮದಲ್ಲಿ ವಿನಿಯೋಗಿಸಲು ಉತ್ತಮವಾದ ವಸ್ತುಗಳಾಗಿವೆ.

ವರ್ಜ್ಯಾ ಮರ್ಕಟಿಕಾಃ ಶ್ರಾದ್ಧೇ ರಾಜಮಾಷಾಸ್ತಥಾಣವಃ ।
ವಿಪ್ರೂಷಿಕಾ ಮಸೂರಾಶ್ಚ ಶ್ರಾದ್ಧಕರ್ಮಣಿ ಗರ್ಹಿತಾಃ ॥೧೧॥

ಲಶುನಂ ಗೃಞ್ಜನಂ ಚೈವ ಪಲಾಣ್ಡುಃ ಪಿಣ್ಡಮೂಲಕಮ್ ।
ಕರಮ್ಭಂ ಯಾನಿ ಚಾನ್ಯಾನಿ ಹೀನಾನಿ ರಸವರ್ಣತಃ ॥೧೨॥

ಗಾನ್ಧಾರಿಕಮಲಾಬೂನಿ ಲವಣಾನ್ಯೂಷರಾಣಿ ಚ ।
ಆರಕ್ತಾ ಯೇ ಚ ನಿರ್ಯಾಸಾಃ ಪ್ರತ್ಯಕ್ಷಲವಣಾನಿ ಚ ॥೧೩॥

ವರ್ಜಯೇತ್ತಾನಿ ವೈ ಶ್ರಾದ್ಧೇ ಯಚ್ಚ ವಾಚಾ ನ ಶಸ್ಯತೇ ॥೧೪॥

ಯಚ್ಚಾಪ್ಯುತ್ಕೋಚತಃ ಪ್ರಾಪ್ತಂ ಪತಿತಾದ್ಯದುಪಾರ್ಜಿತಮ್ ।
ಅನ್ಯಾಯಕನ್ಯಾಶುಲ್ಕೋತ್ಥಂ ದ್ರವ್ಯಂ ಚಾತ್ರ ವಿಗರ್ಹಿತಮ್ ॥೧೫॥

---

೧೧. ಹಾಗೆ ಕಡಲೆ, ತೊಗರಿ, ಅಣುವೆಂಬ ಒಂದು ಜಾತಿಯ ಗಂಧದ ಭತ್ತ, ಮೆಣಸಿನಕಾಯಿ ಮುಂತಾದುವುಗಳು ಶ್ರಾದ್ಧದಲ್ಲಿ ನಿಷಿದ್ಧವಾಗಿವೆ. ಅವುಗಳನ್ನು ಉಪಯೋಗಿಸಬಾರದು.

೧೨. ಹಾಗು ನೀರುಳ್ಳಿ, ಬೆಳ್ಳುಳ್ಳಿ, ಮೂಲಂಗಿ, ಪಿಂಡಮೂಲ, ಮೊಸರಿನಿಂದ ಪರಿಷ್ಕರಿಸಿದ ಹಿಟ್ಟು ಮತ್ತು ರಸ ಅಥವಾ ಬಣ್ಣಗಳಲ್ಲಿ ಹೀನವಾಗಿ ಕಾಣುವ ವಸ್ತುಗಳು ಶ್ರಾದ್ಧಕರ್ಮಕ್ಕೆ ಅರ್ಹವಾದುವಲ್ಲ.

೧೩. ತಾವರೆಯ ಗಡ್ಡೆ-ನಾಳಗಳು, ಸೋರೆಕಾಯಿ, ಮರುಭೂಮಿಯ ನಾನಾಜಾತಿಯ ಲವಣಗಳು, ಕೆಂಪಾಗಿ ಹರಿದು ಬಂದು ಗಟ್ಟಿಯಾದ ವಸ್ತು ಸಮುದ್ರನೀರಿನಿಂದ ಮಾಡುವ ಪ್ರತ್ಯಕ್ಷಲವಣ ಇವುಗಳು ಶ್ರಾದ್ಧಕ್ಕೆ ನಿಷೇಧಿಸಲ್ಪಟ್ಟವೆ.

೧೪. ಹೀಗೆ ಅನೇಕವಾದ ಸಂಭಾರವಸ್ತುಗಳು ನಿಷೇಧಿಸಲ್ಪಟ್ಟವೆ. ಯಾವ ವಸ್ತುಗಳು ನಾಮ-ವರ್ಣ-ರಸಗಳಿಂದ ಜುಗುಪ್ಸೆಯನ್ನುಂಟುಮಾಡುತ್ತವೆಯೊ ಅವೆಲ್ಲವೂ ಶ್ರಾದ್ಧಕರ್ಮಕ್ಕೆ ನಿಷಿದ್ಧವೆಂದು ಅರಿಯಬೇಕು.

೧೫. ಮತ್ತು ಮತ್ತೊಬ್ಬನಿಂದ ಲಂಚವಾಗಿ ತೆಗೆದುಕೊಂಡ ದ್ರವ್ಯ, ಪತಿತನಿಂದ ತೆಗೆದುಕೊಂಡಿರುವ ದ್ರವ್ಯ ಹಾಗು ಅನ್ಯಾಯ-ಕನ್ಯಾವಿಕ್ರಯಗಳಿಂದ ಲಭಿಸಿರುವ ದ್ರವ್ಯ—ಈ ಮೂರು ವಿಧದ ದ್ರವ್ಯಗಳು ಶ್ರಾದ್ಧದಲ್ಲಿ ನಿಂದ್ಯವಾದುವುಗಳು.

ದುರ್ಗನ್ಧಿ ಫೇನಿಲಂ ಚಾಮ್ಬು ತಥೈವಾಲ್ಪತರೋದಕಮ್ ।
ನ ಲಭೇದ್ಯತ್ರ ಗೌಸ್ತೃಪ್ತಿಂ ನಕ್ತಂ ಯಚ್ಚಾಪ್ಯುಪಾಹೃತಮ್ ॥೧೬॥

ಯನ್ನ ಸರ್ವಾಪಚೋತ್ಸೃಷ್ಟಂ ಯಚ್ಚಾಭೋಜ್ಯನಿಪಾನಜಮ್ ।
ತದ್ವರ್ಜ್ಯಂ ಸಲಿಲಂ ತಾತ ಸದೈವ ಪಿತೃಕರ್ಮಣಿ ॥೧೭॥

ಮಾರ್ಗಮಾವಿಕಮೌಷ್ಟ್ರೀ ಚ ಸರ್ವಮೇಕಶಫಂ ಚ ಯತ್ ।
ಮಾಹಿಷಂ ಚಾಮರಂ ಚೈವ ಧೇನ್ವಾ ಗೋಶ್ಚಾಪ್ಯನಿರ್ದಶಮ್ ॥೧೮॥

ಪಿತ್ರರ್ಥಂ ಮೇ ಪ್ರಯಚ್ಛಸ್ವೇತ್ಯುಕ್ತ್ವಾ ಯಚ್ಚಾಪ್ಯುಪಾಹೃತಮ್ ।
ವರ್ಜನೀಯಂ ಸದಾ ಸದ್ಭಿ ಸ್ತತ್ಪಯಃ ಶ್ರಾದ್ಧಕರ್ಮಣಿ ॥೧೯॥

---

೧೬. ಶ್ರಾದ್ಧ ಕರ್ಮಕ್ಕೆ ಉಪಯೋಗಿಸುವ ನೀರಿನಲ್ಲಿ ದುರ್ವಾಸನೆಯುಳ್ಳದ್ದು, ನೊರೆಗಟ್ಟಿರುವುದು, ಗೋವಿಗೆ ತೃಪ್ತಿಯನ್ನುಂಟುಮಾಡಲು ಸಾಕಾದಷ್ಟು ನೀರಿಲ್ಲದ ಜಲಾಶಯದ ಸ್ವಲ್ಪ ನೀರು ಮತ್ತು ರಾತ್ರಿಯಲ್ಲಿ ಸಂಗ್ರಹಿಸಿಟ್ಟಿರುವುದು—ಇವು ಶ್ರಾದ್ಧಕ್ಕೆ ಅರ್ಹವಾಗಿಲ್ಲ.

೧೭. ಮತ್ತು ವಿಧಿ-ನಿಷೇಧವಿಲ್ಲದೆ ಎಲ್ಲವನ್ನೂ ಬೇಯಿಸುವವನು ಸಂಗ್ರಹಿಸಿದ ನೀರು, ಅಭೋಜ್ಯವಾದ ಕೊಳಕು ನೀರು—ಇಂತಹ ನೀರನ್ನು ಯಾವಾಗಲೂ ಪಿತೃಕರ್ಮದಲ್ಲಿ ವರ್ಜಿಸಬೇಕು.

೧೮. ಜಿಂಕೆ, ಕುರಿ, ಒಂಟೆ, ಒಂದು ಗೊರಸಿನ ಎಲ್ಲ ಜಾತಿಯ ಪ್ರಾಣಿ, ಎಮ್ಮೆ, ಚಮರಮೃಗ—ಈ ಪ್ರಾಣಿಗಳ ಹಾಲನ್ನು ವರ್ಜಿಸಬೇಕು. ಮತ್ತು ಈದ ಹಸುವಿಗೆ ಹತ್ತು ದಿನಗಳು ಕಳೆಯುವುದಕ್ಕೆ ಮೊದಲು ಆ ಹಸುವಿನ ಹಾಲು ನಿಷಿದ್ಧವಾದುದು.

೧೯. ಮತ್ತು ಪಿತೃಕಾರ್ಯಕ್ಕೆ ಕೊಟ್ಟು ಸಹಾಯ ಮಾಡಬೇಕೆಂದು ಬೇಡಿ ತಂದಿರುವ ಹಾಲನ್ನು ಶ್ರಾದ್ಧಕರ್ಮದಲ್ಲಿ ಆಚಾರವಂತರಾದ ಗೃಹಸ್ಥರು ಯಾವಾಗಲೂ ವರ್ಜನಮಾಡಬೇಕು.

ವರ್ಜ್ಯಾ ಜನ್ತುಮತೀ ರೂಕ್ಷಾ ಕ್ಷಿತಿಃ ಪ್ಲುಷ್ಟಾ ತಥಾಗ್ನಿನಾ ।
ಅನಿಷ್ಟಾ ದುಷ್ಟಶಬ್ದೋಗ್ರಾ ದುರ್ಗನ್ಧಾ ಶ್ರಾದ್ಧಕರ್ಮಣಿ ॥೨೦॥

ಕುಲಾಪಮಾನಕಾಃ ಶ್ರಾದ್ಧೇ ವ್ಯಾಯುಜ್ಯ ಕುಲಹಿಂಸಕಾಃ ।
ಕುಲಾಧಮೋ ಬ್ರಹ್ಮಹಾ ಚ ತಥಾ ವೈ ರೋಗಿಣೋಽನ್ತ್ಯಜಾಃ॥೨೧॥

ನಗ್ನಾಃ ಪಾತಕಿನಶ್ಚೈವ ಘ್ನನ್ತಿ ದೃಷ್ಟ್ಯಾ ಪ್ರತಿಕ್ರಿಯಾಮ್ ।
ಅಪುಮಾನಪವಿದ್ಧಶ್ಚ ಕುಕ್ಕುಟೋ ಗ್ರಾಮಸೂಕರಃ ॥೨೨॥

ಶ್ವಾ ಚೈವ ಹನ್ತಿ ಶ್ರಾದ್ಧಾನಿ ಯಾತುಧಾನಾಶ್ಚ ದರ್ಶನಾತ್ ॥೨೩॥

ತಸ್ಮಾತ್ಸುಸಂವೃತೋ ದದ್ಯಾತ್ತಿಲೈಶ್ಚ ವಿಕಿರೇನ್ಮಹೀಮ್ ।
ಏವಂ ರಕ್ಷಾ ಭವೇಚ್ಛ್ರಾದ್ಧೇ ಕೃತಾ ತಾತೋಭಯೋರಪಿ ॥೨೪॥

---

೨೦. ಸಣ್ಣ ಪುಟ್ಟ ಜಂತುಗಳಿಂದ ಕೂಡಿರುವುದು, ಒರಟಾಗಿರುವುದು, ಬೆಂಕಿಯಿಂದ ಸುಟ್ಟುಹೋಗಿರುವುದು, ಮನಸ್ಸಿಗೆ ಇಷ್ಟವಾಗದಿರುವುದು, ಕ್ರೂರ-ಶಬ್ದವುಳ್ಳದ್ದು, ಉಗ್ರವಾದುದು ಮತ್ತು ದುರ್ವಾಸನೆಯಿಂದ ಕೂಡಿರುವ ನೆಲವು ಶ್ರಾದ್ಧಕರ್ಮದಲ್ಲಿ ವರ್ಜಿಸಲ್ಪಡಬೇಕು.

೨೧. ಕುಲಕ್ಕೆ ಅಪಮಾನವನ್ನು ಉಂಟುಮಾಡುವವರು, ಏನಾದರೂ ಕಿರುಕುಳವನ್ನು ಕೊಟ್ಟು ಕುಲಕ್ಕೆ ಹಿಂಸೆ ಮಾಡುವವರು, ಕುಲಾಧಮರು, ಬ್ರಹ್ಮಹತ್ಯೆ ಮಾಡಿದವರು, ಮತ್ತು ರೋಗಿ ಅಥವಾ ಅಂತ್ಯಜರು ನೋಡಿದರೆ ಶ್ರಾದ್ಧಕರ್ಮವು ಕೆಟ್ಟುಹೋಗುವುದು.

೨೨. ನಗ್ನ, ಪಾತಕಿ, ಅಪುಮಾನ್, ಅಪವಿದ್ಧ, ಕುಕ್ಕುಟ, ಗ್ರಾಮ-ಸೂಕರ ಇವರ ದರ್ಶನದಿಂದ ಪಿತೃಗಳ ಶಾದ್ಧಕ್ರಿಯೆಯು ಕೆಟ್ಟು ಹೋಗುವುದು. ನಗ್ನ-ಪಾತಕಿ ಮುಂತಾದುವು ಮುಂದೆ ವಿವರಿಸುವ ಆಯಾಯ ಪಾಪಿಗಳ ಸಂಕೇತ ಪದಗಳಾಗಿವೆ.

೨೩. ಹಾಗು ನಾಯಿ, ರಾಕ್ಷಸರ ದೃಷ್ಟಿಬೀಳುವುದರಿಂದ ಶ್ರಾದ್ಧ ಕರ್ಮಕ್ಕೆ ಲೋಪವುಂಟಾಗುವುದು. ಆದ್ದರಿಂದ ಯಾವುದೊಂದು ಅಪಘಾತದ ನಿಮಿತ್ತವಿಲ್ಲದಂತೆ ಜಾಗರೂಕತೆಯಿಂದ ಶ್ರಾದ್ಧವನ್ನು ಆಚರಿಸಬೇಕು.

೨೪. ಶ್ರಾದ್ಧವನ್ನು ಭಂಗಪಡಿಸುವ ಅನೇಕ ನಿಮಿತ್ತಗಳಿರುವುದರಿಂದ ಸುರಕ್ಷಿತನಾಗಿ ಎಳ್ಳನ್ನು ಚಲ್ಲಿ ನೆಲವನ್ನು ಪವಿತ್ರವನ್ನಾಗಿ ಮಾಡಬೇಕು. ಹಾಗೆ ಮಾಡುವುದರಿಂದ ಶ್ರಾದ್ಧಕರ್ತೃ-ಭೋಕ್ತೃಗಳಿಬ್ಬರಿಗೂ ರಕ್ಷೆಯಾಗುವುದು.

ಶಾವಸೂತಕಿಸಂಸ್ಪೃಷ್ಟಂ ದೀರ್ಘರೋಗಿಭಿರೇವ ಚ ।
ಪತಿತೈರ್ಮಲಿನೈಶ್ಚೈವ ಪುಷ್ಣಾತಿ ನ ಪಿತಾಮಹಾನ್ ॥೨೫॥

ವರ್ಜನೀಯಂ ತಥಾ ಶ್ರಾದ್ಧೇ ಸದೋದಕ್ಯಾದಿದರ್ಶನಮ್ ।
ಚಣ್ಡಶೌಣ್ಡಸಮಾಭಾಷಾ ಯಜಮಾನೇನ ಚಾದರಾತ್ ॥೨೬॥

ಕೇಶಕೀಟಾವಪನ್ನಂ ಚ ತಥಾ ಶ್ವಭಿರವೇಕ್ಷಿತಮ್ ।
ಪೂತಿ ಪರ್ಯುಷಿತಂ ಚೈವ ವಾರ್ತಾಕ್ಯಭಿಷವಾಂಸ್ತಥಾ ॥೨೭॥

ವರ್ಜನೀಯಾ ಹಿ ವೈ ಶ್ರಾದ್ಧೇ ತಥಾ ವಸ್ತ್ರಾನಲಾಹತಮ್ ॥೨೮॥

---

೨೫. ಶವಾನುಗಮನದ ಆಶೌಚವುಳ್ಳವನು, ದೀರ್ಘವಾದ ರೋಗದಿಂದ ಗ್ರಸ್ತನಾದವನು, ಪತಿತನು ಮತ್ತು ಮಲಿನ ಇವರು ಸ್ಪರ್ಶಮಾಡಿದ ಉಪಕರಣಗಳಿಂದ ಮಾಡುವ ಶ್ರಾದ್ಧವು ಪಿತೃಗಳಿಗೆ ತೃಪ್ತಿಯನ್ನು ಕೊಡುವುದಿಲ್ಲ.

೨೬. ಮತ್ತು ಶ್ರಾದ್ಧವನ್ನು ಆಚರಿಸುವ ಯಜಮಾನನು ಶ್ರಾದ್ಧಸಮಯದಲ್ಲಿ ರಜಸ್ವಲೆಯ ದರ್ಶನವನ್ನು ಮಾಡಬಾರದು. ಹಾಗು ಕೋಪಗೊಂಡವನು, ಮದವೇರಿದವನು ಇವರ ಸಂಗಡ ಸಂಭಾಷಣೆಯನ್ನು ಮಾಡಬಾರದು.

೨೭. ಕೂದಲು, ಹುಳು ಬಿದ್ದು ಕೆಟ್ಟಿರುವುದು, ನಾಯಿ ಮುಟ್ಟಿನೋಡಿರುವುದು, ದುರ್ಗಂಧ ಹುಟ್ಟಿರುವುದು, ತಂಗಳು, ಬದನೇಕಾಯಿ ಮುಂತಾದುವುಗಳಿಂದ ಮಾಡಿದ ವಸ್ತು ಮತ್ತು ಹಿಂಡಿ ತಯಾರಿಸಿದ ಮದ್ಯ— ಇವುಗಳನ್ನು ಶ್ರಾದ್ಧದಲ್ಲಿ ಉಪಯೋಗಿಸಬಾರದು.

೨೮. ಬೆಂಕಿ ತಗುಲಿ ಸುಟ್ಟುಹೋದ ವಸ್ತ್ರಭಾಗವನ್ನು ಶ್ರಾದ್ಧದಲ್ಲಿ ವರ್ಜಿಸಬೇಕು. ಶ್ರಾದ್ಧಕರ್ತೃವು ಹರಿದುಹೋಗಿ ಹೊಲಿಸಿದ, ಮತ್ತು ಸುಟ್ಟು ಕೆಟ್ಟಿರುವ ವಸ್ತ್ರಗಳನ್ನು ಧರಿಸಬಾರದು.

ಶ್ರದ್ಧಯಾ ಪರಯಾ ದತ್ತಂ ಪಿತೃಣಾಂ ನಾಮಗೋತ್ರತಃ ।
ಯದಾಹಾರಾಶ್ಚ ತೇ ಜಾತಾಸ್ತದಾಹಾರತ್ವಮೇತಿ ತತ್ ॥೨೯॥

ತಸ್ಮಾಚ್ಛ್ರದ್ಧಾಯುತಂ ಪಾತ್ರೇ ಯಚ್ಚ ತ್ವಂ ಪಿತೃಕರ್ಮಣಿ ।
ತಥಾ ತಚ್ಚೈವ ದಾತವ್ಯಂ ಪಿತೃಣಾಂ ತೃಪ್ತಿಮಿಚ್ಛತಾ ॥೩೦॥

ಯೋಗಿನಶ್ಚ ಸದಾ ಶ್ರಾದ್ಧೇ ಭೋಜನೀಯಾ ವಿಪಶ್ಚಿತಾ ।
ಯೋಗಾಧಾರಾ ಹಿ ಪಿತರಸ್ತಸ್ಮಾತ್ತಾನ್ಭೋಜಯೇತ್ಸದಾ ॥೩೧॥

ಬ್ರಾಹ್ಮಣಾನಾಂ ಸಹಸ್ರಸ್ಯ ಯೋಗೀ ತ್ವಗ್ರಾಸನೀ ಯದಿ ।
ಯಜಮಾನಂ ಚ ಭೋಕ್ತೄಂಶ್ಚ ನೌರಿವಾಮ್ಭಸಿ ತಾರಯೇತ್ ॥೩೨॥

---

೨೯. ಶ್ರಾದ್ಧಕರ್ಮವನ್ನು ಆಚರಿಸುವವನು ಅತಿಶಯವಾದ ಶ್ರದ್ಧೆಯಿಂದ ಕೂಡಿ ಪಿತೃಗಳ ನಾಮ-ಗೋತ್ರಗಳನ್ನು ಉಚ್ಚರಿಸಿ ಕೊಟ್ಟಿರುವ ಅನ್ನವು ಪಿತೃಗಳು ಯಾವುದೇ ಜನ್ಮವನ್ನು ಎತ್ತಿದ್ದರೂ ಅವರು ಭುಂಜಿಸುವ ಆಹಾರದ ರೂಪವನ್ನು ಹೊಂದುತ್ತದೆ.

೩೦. ಪುತ್ರನೆ! ಆದುದರಿಂದ ನೀನು ಪಿತೃಕರ್ಮಾಚರಣೆಯಲ್ಲಿ ಸತ್ಪಾತ್ರದಲ್ಲಿ ಶ್ರದ್ಧೆಯಿಂದ ಕೂಡಿ ಅನ್ನವನ್ನು ದಾನಮಾಡು. ಪಿತೃಗಳಿಗೆ ತೃಪ್ತಿಯನ್ನು ಬಯಸುವವನು ವಿಹಿತವಾದ ಅನ್ನವನ್ನು ಶ್ರದ್ಧೆಯಿಂದ ಅರ್ಪಿಸಬೇಕು.

೩೧. ಜ್ಞಾನಿಯಾದ ಪಿತೃಕರ್ಮಾಧಿಕಾರಿಯು ಯಾವಾಗಲೂ ಶ್ರಾದ್ಧದಲ್ಲಿ ಯೋಗಿಗಳನ್ನು ನಿಮಂತ್ರಿಸಿ ಭೋಜನಮಾಡಿಸಬೇಕು. ಪಿತೃಗಳು ಯೋಗಾಧಾರದಿಂದ ತಮ್ಮ ಪದದಲ್ಲಿ ಸ್ಥಿತಿಯನ್ನು ಹೊಂದಿರುವರು. ಆದುದರಿಂದ ಯಾವಾಗಲೂ ಯೋಗಿಗಳಿಗೆ ಭೋಜನಮಾಡಿಸಬೇಕು.

೩೨. ಸಹಸ್ರಾರು ಮಂದಿ ಬ್ರಾಹ್ಮಣರ ಪಂಕ್ತಿಯಲ್ಲಿ ಯೋಗಿಯಾದ ಮಹಾತ್ಮನೊಬ್ಬನು ಅಗ್ರಾಸನದಲ್ಲಿ ಮಂಡಿಸುವುದಾದರೆ ಅವನು ಯಜಮಾನ ಮತ್ತು ಇತರ ಭೋಕ್ತೃಜನರನ್ನು ದೋಣಿಯು ನೀರಿನಿಂದ ಪಾರುಮಾಡುವಂತೆ ಉದ್ಧರಿಸುವನು.

ಪಿತೃಗಾಥಾಸ್ತಥೈವಾತ್ರ ಶ್ರೂಯನ್ತೇ ಬ್ರಹ್ಮವಾದಿಭಿಃ ।
ಯಾ ಗೀತಾಃ ಪಿತೃಭಿಃ ಪೂರ್ವಮೈಲಸ್ಯಾಸನ್ಮಹೀಪತೇಃ ॥೩೩॥

ಕದಾ ನಃ ಸನ್ತತಾವಗ್ರ್ಯಃ ಕಸ್ಯಚಿದ್ಭವಿತಾ ಸುತಃ ।
ಯೋ ಯೋಗಿಭುಕ್ತಶೇಷಾನ್ನೈರ್ಭುವಿ ಪಿಣ್ಡಂ ಪ್ರದಾಸ್ಯತಿ ॥೩೪॥

ಗಯಾಯಾಮಥವಾ ಪಿಣ್ಡಂ ಖಡ್ಗಮಾಂಸಂ ಮಹಾಹವಿಃ ।
ಕಾಲಶಾಕಂ ತಿಲಾಢ್ಯಂ ವಾ ಕೃಸರಂ ಮಾಸತೃಪ್ತಯೇ ॥೩೫॥

ವೈಶ್ವದೇವ್ಯಂ ಚ ಸೌಮ್ಯಂ ಚ ಖಡ್ಗಮಾಂಸಂ ಪರಂ ಹವಿಃ ।
ವಿಷಾಣವರ್ಜಖಡ್ಗಾಪ್ತ್ಯಾಮಾಸೂರ್ಯಾನ್ನಾಶಯಾಮಹೇ ॥೩೬॥

---

೩೩. ಪೂರ್ವಕಾಲದಲ್ಲಿ ಐಲಪುರೂರವ ರಾಜನ ಬ್ರಹ್ಮವಾದಿಗಳಾದ ಪಿತೃಗಳಿಂದ ಶ್ರಾದ್ಧಕರ್ಮದ ಮಹತ್ವವನ್ನು ವಿವರಿಸುವ ಹಾಗೆ ಶ್ರಾದ್ಧ-ಕರ್ತೃವಾದ ಪುತ್ರನ ಉತ್ಪತ್ತಿಯ ವಿಷಯದಲ್ಲಿ ಅನೇಕ ಗಾಥಾ ಶ್ಲೋಕಗಳು ಗಾನಮಾಡಲ್ಪಟ್ಟಿವೆ. ಅಂತಹ ಗಾಥಾಶ್ಲೋಕಗಳನ್ನು ಕೇಳುತ್ತಿರುವೆವು.

೩೪. ನಮ್ಮ ವಂಶಾವಳಿಯಲ್ಲಿ ಯಾರಾದರೊಬ್ಬನಿಗೆ ಉತ್ತಮವಾದ ಆಚಾರವಂತ ಪುತ್ರನು ಎಂದು ಜನಿಸುವನು? ಯಾವ ಪುತ್ರನು ಯೋಗಿಗಳಿಗೆ ಭೋಜನಮಾಡಿಸಿ ಮಿಕ್ಕ ಅನ್ನದಿಂದ ನೆಲದಲ್ಲಿ ನಮಗೆ ಪಿಂಡವನ್ನು ಕೊಡುವನೊ; ಅಂತಹ ಪುತ್ರನು ಜನಿಸುವನೆ!

೩೫. ಮತ್ತು ಪುತ್ರನು ಖಡ್ಗಮೃಗದ ಮಾಂಸದಿಂದ ಮಾಡಿದ ಮಹಾ ಹವಿಸ್ಸನ್ನೂ, ಎಳ್ಳಿನಿಂದ ಮಾಡಿದ ಹಾಗಲಕಾಯಿ ವ್ಯಂಜನವನ್ನೂ, ಕೃಸರಾನ್ನ-ವನ್ನೂ ಅಥವಾ ಗಯಾಕ್ಷೇತ್ರದಲ್ಲಿ ಶ್ರಾದ್ಧಾನ್ನವನ್ನೂ ನೀಡಿ ನಮಗೆ ಮಾಸಕಾಲ-ವಾದರೂ ತೃಪ್ತಿಯನ್ನುಂಟುಮಾಡುವನೆ!

೩೬. ಮತ್ತು ವಿಶ್ವೇದೇವ-ಸೋಮದೇವತೆಗಳಿಗೆ ತೃಪ್ತಿಯನ್ನು ಕೊಡುವ ಖಡ್ಗಮೃಗದ ಮಾಂಸರೂಪವಾದ ಮಹಾಹವಿಸ್ಸನ್ನು ನಮಗೆ ಅರ್ಪಿಸುವನೆ! ಕೊಂಬುಗಳು ಹುಟ್ಟದಿರುವ ಖಡ್ಗಮೃಗದ ಮಾಂಸ ಹವಿಸ್ಸಿನಿಂದ ಆಚಂದ್ರಾರ್ಕ-ವಾಗಿ ನಾವು ಭೋಜನತೃಪ್ತಿಯನ್ನು ಅವಿಚ್ಛಿನ್ನವಾಗಿ ಹೊಂದುವೆವೆ!

ತಥಾ ವರ್ಷತ್ರಯೋದಶ್ಯಾಂ ಮಘಾಸು ಚ ಯಥಾವಿಧಿ ।
ಮಧುಸರ್ಪಿಃಸಮಾಯುಕ್ತಂ ಪಾಯಸಂ ದಕ್ಷಿಣಾಯನೇ ॥೩೭॥

ತಸ್ಮಾತ್ಸಮ್ಪೂಜಯೇದ್ಭಕ್ತ್ಯಾ ಸ್ವಪಿತೄನ್ಯತಮಾನಸಃ ।
ಕಾಮಾನಭೀಪ್ಸನ್ ಸಕಲಾನ್ಪಾಪಾಚ್ಚಾತ್ಮವಿಮೋಚನಮ್ ॥೩೮॥

ವಸೂನ್ರುದ್ರಾಂಸ್ತಥಾದಿತ್ಯಾನ್ನಕ್ಷತ್ರಗ್ರಹತಾರಕಾಃ ।
ಪ್ರೀಣಯನ್ತಿ ಮನುಷ್ಯಾಣಾಂ ಪಿತರಃ ಶ್ರಾದ್ಧತರ್ಪಿತಾಃ ॥೩೯॥

ಆಯುಃ ಪ್ರಜಾಂ ಧನಂ ವಿದ್ಯಾಂ ಸ್ವರ್ಗಂ ಮೋಕ್ಷಂ ಸುಖಾನಿ ಚ ।
ಪ್ರಯಚ್ಛನ್ತಿ ತಥಾ ರಾಜ್ಯಂ ಪಿತರಃ ಶ್ರಾದ್ಧತರ್ಪಿತಾಃ ॥೪೦॥

---

೩೭. ಹಾಗು ದಕ್ಷಿಣಾಯನ ಸಮಯದಲ್ಲಿ ವರ್ಷಾಕಾಲದ ತ್ರಯೋದಶಿಯಲ್ಲಿಯೂ ಮಘಾನಕ್ಷತ್ರಗಳಲ್ಲಿಯೂ ಯಥಾವಿಧಿಯಾಗಿ ಮಧು ಘೃತಗಳಿಂದ ಮಿಶ್ರಣಮಾಡಿರುವ ಪಾಯಸವನ್ನು ನಮಗೆ ಅರ್ಪಿಸಿ ಪೂಜಿಸುವನೆ! ಎಂದು ಕೋರಿ ಶ್ಲೋಕಗಳು ಪಠಿಸ್ಪಟ್ಟಿವೆ.

೩೮. ಆದುದರಿಂದ ಕರ್ಮಾಧಿಕಾರಿಯು ಮನೋನಿಗ್ರಹವುಳ್ಳವನಾಗಿ ಭಕ್ತಿಯಿಂದ ತನ್ನ ಪಿತೃಗಳನ್ನು ಶ್ರಾದ್ಧಕರ್ಮವನ್ನು ಆಚರಿಸಿ ಪೂಜಿಸಬೇಕು. ಅದರಿಂದ ಶ್ರಾದ್ಧವನ್ನು ಮಾಡಿದವನು ತನ್ನ ಸಕಲ ಇಷ್ಟಾರ್ಥಗಳನ್ನು ಹೊಂದುವನು. ಮತ್ತು ತನ್ನ ಆತ್ಮವನ್ನು ಪಾಪಗಳಿಂದ ಬಿಡುಗಡೆ ಮಾಡಿಕೊಳ್ಳುವನು.

೩೯. ಮಾನವರಲ್ಲಿ ಪುತ್ರನು ಕೊಟ್ಟಿರುವ ಶ್ರಾದ್ಧಾನ್ನದಿಂದ ತೃಪ್ತಿಹೊಂದಿದ ಪಿತೃಗಳು ಅಷ್ಟವಸು, ರುದ್ರ, ಆದಿತ್ಯ, ನಕ್ಷತ್ರ, ಗ್ರಹ ಮತ್ತು ತಾರಕೆಗಳನ್ನು ತೃಪ್ತಿಪಡಿಸುವರು. ಅದರಿಂದ ಶ್ರಾದ್ಧಕರ್ತೃವು ವಸು ಮುಂತಾದ ದೇವತಾಪ್ರಸಾದಕ್ಕೆ ಪಾತ್ರನಾಗುವನು.

೪೦. ಶ್ರಾದ್ಧಾನ್ನದಿಂದ ತೃಪ್ತಿಹೊಂದಿದ ಪಿತೃಗಳು ಪುತ್ರನಲ್ಲಿ ಪ್ರಸನ್ನರಾಗಿ ಆಯುಷ್ಯ, ಪ್ರಜೆ, ಧನ, ವಿದ್ಯೆ, ಸ್ವರ್ಗ, ಮೋಕ್ಷ, ವೈಷಯಿಕಸುಖ ಹಾಗು ರಾಜ್ಯ ಇವುಗಳು ಲಭಿಸುವಂತೆ ಅನುಗ್ರಹಿಸುವರು.

ಏತತ್ತೇ ಕಥಿತಂ ಪುತ್ರ ಶ್ರಾದ್ಧಕರ್ಮ ಯಥೋದಿತಮ್ ।
ಕಾಮ್ಯಾನಾಂ ಶ್ರೂಯತಾಂ ವತ್ಸ ಶ್ರಾದ್ಧಾನಾಂ ತಿಥಿಕೀರ್ತನಮ್ ॥೪೧॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಶ್ರಾದ್ಧಕಲ್ಪೇ ನಾಮ ಏಕೋನತ್ರಿಂಶೋಽಧ್ಯಾಯಃ

---

೪೧. ಪುತ್ರನೆ! ಇದುವರೆಗೆ ಶಾಸ್ತ್ರವಿಹಿತವಾದ ಶ್ರಾದ್ಧಕರ್ಮವಿಧಾನವನ್ನು ನಿನಗೆ ಹೇಳಿರುವೆನು. ಮುಂದೆ ಆಯಾಯ ಕಾಮನೆಯಿಂದ ಮಾಡಬೇಕಾದ ಕಾಮ್ಯಶ್ರಾದ್ಧಗಳಿಗೆ ವಿಹಿತವಾದ ತಿಥಿಗಳನ್ನು ಹೇಳುವೆನು. ಅದನ್ನು ಕೇಳು.

ಮಾರ್ಕಣ್ಡೇಯ ಮಹಾಪುರಾಣದಲ್ಲಿ ಇಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ತ್ರಿಂಶೋಽಧ್ಯಾಯಃ

(ಶ್ರಾದ್ಧಕಲ್ಪೇ ಕಾಮ್ಯತಿಥಿ-ನಕ್ಷತ್ರನಿರೂಪಣಮ್)

ಮದಾಲಸೋವಾಚ :—

ಪ್ರತಿಪದ್ಧನಲಾಭಾಯ ದ್ವಿತೀಯಾ ದ್ವಿಪದಪ್ರದಾ ।
ವರಾರ್ಥಿನೀ ತೃತೀಯಾ ತು ಚತುರ್ಥೀ ಶತ್ರುನಾಶಿನೀ ॥೧॥

ಶ್ರಿಯಂ ಪ್ರಾಪ್ನೋತಿ ಪಞ್ಚಮ್ಯಾಂ ಷಷ್ಠ್ಯಾಂ ಪೂಜ್ಯೋ ಭವೇನ್ನರಃ ।
ರಾಜಾಧಿಪತ್ಯಂ ಸಪ್ತಮ್ಯಾಮಷ್ಟಮ್ಯಾಂ ವೃದ್ಧಿಮುತ್ತಮಾಮ್ ॥೨॥

ಮೂವತ್ತನೆಯ ಅಧ್ಯಾಯ

ಮದಾಲಸೆಯು ಇಂತೆಂದಳು :—

೧. ಕಾಮ್ಯಶ್ರಾದ್ಧಗಳನ್ನು ಮಾಡುವವನು ಶ್ರಾದ್ಧಮಾಡಿರುವ ತಿಥಿಯು ಪ್ರತಿಪತ್ತಿಥಿಯಾದರೆ ಅದು ಧನವನ್ನು ಕೊಡುವುದು. ದ್ವಿತೀಯಾ ತಿಥಿಯು ದ್ವಿಪಾದವುಳ್ಳ ಪರಿವಾರವನ್ನು ಹೆಚ್ಚಿಸುವುದು. ತೃತೀಯಾ ತಿಥಿಯು ಕನ್ಯೆಗೆ ವರನನ್ನು ಕೊಡುವುದು ಮತ್ತು ಚತುರ್ಥಿಯು ಶತ್ರುಗಳನ್ನು ನಾಶಮಾಡುವುದು.

೨. ಪಂಚಮೀ ತಿಥಿಯಲ್ಲಿ ಶ್ರಾದ್ಧವನ್ನು ಆಚರಿಸಿದವನು ಸಂಪತ್ತಿಯನ್ನು ಹೊಂದುವನು. ಷಷ್ಠಿಯಲ್ಲಿ ಮಾಡಿದವನು ಪೂಜ್ಯನಾಗುವನು. ಸಪ್ತಮಿಯಲ್ಲಿ ರಾಜಾಧಿಪತ್ಯವನ್ನು ಹೊಂದುವನು. ಮತ್ತು ಅಷ್ಟಮೀತಿಥಿಯಲ್ಲಿ ಉತ್ತಮವಾದ ವೃದ್ಧಿಯನ್ನು ಹೊಂದುವನು.

ಸ್ತ್ರಿಯೋ ನವಮ್ಯಾಂ ಪ್ರಾಪ್ನೋತಿ ದಶಮ್ಯಾಂ ಪೂರ್ಣಕಾಮತಾಮ್ ।
ವೇದಾಂಸ್ತಥಾಪ್ನುಯಾತ್ಸರ್ವಾನೇಕಾದಶ್ಯಾಂ ಕ್ರಿಯಾಪರಃ ॥೩॥

ದ್ವಾದಶ್ಯಾಂ ಜಯಲಾಭಂ ಚ ಪ್ರಾಪ್ನೋತಿ ಪಿತೃಪೂಜಕಃ ।
ಪ್ರಜಾಂ ಬುದ್ಧಿಂ ಪಶೂನ್ವೃದ್ಧಿಂ ಸ್ವಾತನ್ತ್ರ್ಯಂ ಪುಷ್ಟಿಮುತ್ತಮಾಮ್ ॥೪॥

ದೀರ್ಘಮಾಯುಸ್ತಥೈಶ್ವರ್ಯಂ ಕುರ್ವಾಣಸ್ತು ತ್ರಯೋದಶೀಮ್ ।
ಅವಾಪ್ನೋತಿ ನ ಸನ್ದೇಹೋ ಶ್ರಾದ್ಧಂ ಶ್ರದ್ಧಾಪರೋ ನರಃ ॥೫॥

ಯಥಾಸಮ್ಭಾವಿತಾನ್ನೇನ ಶ್ರದ್ಧಾಸಮ್ಪತ್ಸಮನ್ವಿತಃ ॥೬॥

---

೩. ನವಮಿತಿಥಿಯಲ್ಲಿ ಶ್ರಾದ್ಧಮಾಡುವುದರಿಂದ ಸುಂದರಿಯರಾದ ಸ್ತ್ರೀಯರನ್ನು ಹೊಂದುವನು. ದಶಮಿಯಲ್ಲಿ ಸಮಸ್ತ ಕಾಮಪರಿಪೂರ್ಣತೆಯನ್ನು ಹೊಂದುವನು. ಹಾಗು ಏಕಾದಶೀ ತಿಥಿಯಲ್ಲಿ ಶ್ರಾದ್ಧಕರ್ಮಾನುಷ್ಠಾನಪರನು ಸಕಲ ವೇದವಿದ್ಯೆಯನ್ನು ಹೊಂದುತ್ತಾನೆ.

೪. ದ್ವಾದಶೀ ತಿಥಿಯಲ್ಲಿ ಶ್ರಾದ್ಧವನ್ನು ಆಚರಿಸಿ ಪಿತೃಗಳನ್ನು ಪೂಜಿಸಿದವನು ಜಯಲಾಭ, ಪ್ರಜೆ, ಬುದ್ಧಿ, ಪಶು, ವೃದ್ಧಿ, ಸ್ವಾತಂತ್ರ್ಯ ಮತ್ತು ಸರ್ವೋತ್ತಮವಾದ ಪುಷ್ಟಿ—ಈ ಫಲಗಳನ್ನು ಹೊಂದುತ್ತಾನೆ.

೫- ತ್ರಯೋದಶೀ ತಿಥಿಯಲ್ಲಿ ಶ್ರಾದ್ಧಾನುಷ್ಠಾನದಿಂದ ಪಿತೃಗಳ ಪೂಜೆಯನ್ನು ಮಾಡಿದ, ಶ್ರದ್ಧೆಯಿಂದ ಕೂಡಿದ ಮಾನವನು ದೀರ್ಘವಾದ ಆಯುಷ್ಯವನ್ನೂ ಮತ್ತು ಐಶ್ವರ್ಯವನ್ನೂ ಹೊಂದುವನು. ಇದರಲ್ಲಿ ಸಂಶಯವಿಲ್ಲ.

೬. ಈ ಕಾಮ್ಯಶ್ರಾದ್ಧವನ್ನು ಆಚರಿಸುವ ಯಜಮಾನನು ಅತಿಶಯವಾದ ಶ್ರದ್ಧೆಯೆಂಬ ಧನದಿಂದ ಕೂಡಿರಬೇಕು. ಎಷ್ಟುಮಾತ್ರ ಅನ್ನ ಅಥವಾ ಇತರ ಉಪಕರಣಗಳು ಒದಗಿದರೆ ಅಷ್ಟುಮಾತ್ರದಿಂದ ಶ್ರಾದ್ಧವನ್ನು ಮಾಡಬೇಕು.

ವಿಕೃತ್ಯಾ ಪಿತರೋ ಯಸ್ಯ ಮೃತಾಃ ಶಸ್ತ್ರೇಣ ವಾ ಹತಾಃ ।
ತೇನ ಕಾರ್ಯಂ ಚತುರ್ದಶ್ಯಾಂ ತೇಷಾಂ ತೃಪ್ತಿಮಭೀಪ್ಸತಾ ॥೭॥

ಶ್ರಾದ್ಧಂ ಕುರ್ವನ್ನಮಾವಾಸ್ಯಾಂ ಯತ್ನೇನ ಪುರುಷಃ ಶುಚಿಃ ।
ಸರ್ವಾನ್ಕಾಮಾನವಾಪ್ನೋತಿ ಸ್ವರ್ಗಂ ಚಾನನ್ತ್ಯಮಶ್ನುತೇ ॥೮॥

ಕೃತ್ತಿಕಾಸು ಪಿತೄನರ್ಚನ್ ಸ್ವರ್ಗಮಾಪ್ನೋತಿ ಮಾನವಃ ।
ಅಪತ್ಯಕಾಮೋ ರೋಹಿಣ್ಯಾಂ ಸೌಮ್ಯೇ ತೇಜಸ್ವಿತಾಂ ಲಭೇತ್ ॥೯॥

ಶೌರ್ಯಮಾರ್ದ್ರಾಸು ಚಾಪ್ನೋತಿ ಕ್ಷೇತ್ರಾದಿ ಚ ಪುನರ್ವಸೌ ।
ಪುಷ್ಟಿಂ ಪುಷ್ಯೇ ಸದಾಭ್ಯರ್ಚ್ಯ ಆಶ್ಲೇಷಾಸು ವರಾನ್ ಸುತಾನ್ ॥೧೦॥

---

೭. ಯಾವ ಮಾನವನ ಪಿತೃಗಳು ವಿಕಾರಮಾಡುವ ನಿಮಿತ್ತಗಳಿಂದಾಗಲಿ ಅಥವಾ ಶಸ್ತ್ರಪೀಡೆಯಿಂದಾಗಲಿ ಮರಣಹೊಂದಿರುವರೊ; ಅಂತಹ ಪಿತೃಗಳನ್ನು ತೃಪ್ತಿಪಡಿಸಲು ಬಯಸುವ ಪುತ್ರನು ಚತುರ್ದಶೀತಿಥಿಯಲ್ಲಿ ಶ್ರಾದ್ಧವನ್ನು ಮಾಡಬೇಕು.

೮. ಪುರುಷನು ಶುಚಿಯಾಗಿ ಅಮಾವಾಸ್ಯಾತಿಥಿಯಲ್ಲಿ ಯತ್ನ ಪೂರ್ವಕವಾಗಿ ಶ್ರಾದ್ಧವನ್ನು ಆಚರಿಸಿದರೆ ಅವನು ಆಶಿಸುವ ಸಮಸ್ತ ಇಷ್ಟಾರ್ಥಗಳನ್ನು ಹೊಂದುವನು ಮತ್ತು ಮರಣಾನಂತರದಲ್ಲಿ ಅಕ್ಷಯವಾದ ಸ್ವರ್ಗಸುಖವನ್ನು ಅನುಭವಿಸುತ್ತಾನೆ.

೯. ಕೃತ್ತಿಕಾನಕ್ಷತ್ರದಲ್ಲಿ ಪಿತೃಗಳನ್ನು ಶ್ರಾದ್ಧಾಚರಣೆಯಿಂದ ಸತ್ಕರಿಸಿದ ಮಾನವನು ಸ್ವರ್ಗಸುಖವನ್ನು ಹೊಂದುವನು. ಮತ್ತು ರೋಹಿಣಿ ನಕ್ಷತ್ರದಲ್ಲಿ ಶ್ರಾದ್ಧಮಾಡಿ ಸಂತತಿಯನ್ನೂ, ಮೃಗಶಿರಾನಕ್ಷತ್ರದಲ್ಲಿ ಶ್ರಾದ್ಧಮಾಡಿ ತೇಜಸ್ವಿತೆಯನ್ನೂ ಹೊಂದುವನು.

೧೦. ಆರ್ದ್ರಾನಕ್ಷತ್ರದಲ್ಲಿ ಶ್ರಾದ್ಧವನ್ನು ಮಾಡುವುದರಿಂದ ಶೌರ್ಯವನ್ನೂ, ಪುನರ್ವಸು ನಕ್ಷತ್ರದಲ್ಲಿ ಶ್ರಾದ್ಧದಿಂದ ಗದ್ದೆ-ಹೊಲ ಮುಂತಾದುವನ್ನೂ, ಪುಷ್ಯನಕ್ಷತ್ರದಲ್ಲಿ ಪಿತೃಪೂಜೆಯಿಂದ ಪುಷ್ಟಿಯನ್ನೂ ಮತ್ತು ಆಶ್ಲೇಷಾ ನಕ್ಷತ್ರದಲ್ಲಿ ಶ್ರಾದ್ಧಾನುಷ್ಠಾನದಿಂದ ಸತ್ಸಂತತಿಯನ್ನೂ ಹೊಂದುತ್ತಾನೆ.

ಮಘಾಸು ಸ್ವಜನಶ್ರೈಷ್ಠ್ಯಂ ಸೌಭಾಗ್ಯಂ ಫಾಲ್ಗುನೀಷು ಚ ।
ಪ್ರದಾನಶೀಲೋ ಭವತಿ ಸಾಪತ್ಯಶ್ಚೋತ್ತರಾಸು ವೈ ॥೧೧॥

ಪ್ರಯಾತಿ ಶ್ರೇಷ್ಠತಾಂ ಸತ್ಸು ಹಸ್ತೇ ಶ್ರಾದ್ಧಪ್ರದೋ ನರಃ ।
ರೂಪಯುಕ್ತಃ ಸುಚಿತ್ರಾಸು ತಥಾಪತ್ಯಾನ್ಯವಾಪ್ನುಯಾತ್ ॥೧೨॥

ವಾಣಿಜ್ಯಲಾಭದಾ ಸ್ವಾತಿರ್ವಿಶಾಖಾ ಪುತ್ರಕಾಮದಾ ।
ಕುರ್ವನ್ತಶ್ಚಾನುರಾಧಾಸು ಲಭನ್ತೇ ಚಕ್ರವರ್ತಿತಾಮ್ ॥೧೩॥

ಆಧಿಪತ್ಯಂ ಚ ಜ್ಯೇಷ್ಠಾಸು ಮೂಲೇ ಚಾರೋಗ್ಯಮುತ್ತಮಮ್ ।
ಆಷಾಢಾಸು ಯಶಃಪ್ರಾಪ್ತಿರುತ್ತರಾಸು ವಿಶೋಕತಾಮ್ ॥೧೪॥

---

೧೧. ಮಘಾನಕ್ಷತ್ರದಲ್ಲಿ ಶ್ರಾದ್ಧಾಚರಣೆಯಿಂದ ಸ್ವಜನರ ಗುಂಪಿನಲ್ಲಿ ಶ್ರೇಷ್ಠತೆಯನ್ನೂ, ಹುಬ್ಬಾನಕ್ಷತ್ರದಲ್ಲಿ ಸೌಭಾಗ್ಯವನ್ನೂ ಹೊಂದುವನು. ಮತ್ತು ಉತ್ತರಾನಕ್ಷತ್ರದಲ್ಲಿ ಶ್ರಾದ್ಧವನ್ನು ಮಾಡುವುದರಿಂದ ಶ್ರಾದ್ಧಕರ್ತೃವು ವಿತರಣದ ಶೀಲವುಳ್ಳವನೂ, ಸಂತತಿಯುಳ್ಳವನೂ ಆಗುತ್ತಾನೆ.

೧೨. ಹಸ್ತ ನಕ್ಷತ್ರದಲ್ಲಿ ಪಿತೃಗಳಿಗೆ ಶ್ರಾದ್ಧಾನ್ನವನ್ನು ಕೊಟ್ಟ ಮಾನವನು ಸಾಧುಜನರಲ್ಲಿ ಶ್ರೇಷ್ಠತೆಯನ್ನು ಹೊಂದುವನು. ಚಿತ್ರಾನಕ್ಷತ್ರದಲ್ಲಿ ಶ್ರಾದ್ಧಮಾಡಿದವನು ಸೌಂದರ್ಯದಿಂದ ಕೂಡಿದವನೂ ಮತ್ತು ಸತ್ಸಂತಾನವುಳ್ಳವನೂ ಆಗುತ್ತಾನೆ.

೧೩. ಶ್ರಾದ್ಧಕರ್ಮವನ್ನು ಮಾಡಿದ ನಕ್ಷತ್ರವು ಸ್ವಾತಿಯಾದರೆ ವ್ಯಾಪಾರದಲ್ಲಿ ಲಾಭವನ್ನು ಕೊಡುವುದು. ವಿಶಾಖಾನಕ್ಷತ್ರವು ಪುತ್ರಫಲವನ್ನು ಕೊಡುವುದು. ಮತ್ತು ಅನೂರಾಧಾನಕ್ಷತ್ರದಲ್ಲಿ ಶ್ರಾದ್ಧವನ್ನು ಮಾಡುವವರು ಚಕ್ರವರ್ತಿಪದವೆಂಬ ಮಹತ್ತಾದ ಫಲವನ್ನು ಹೊಂದುವರು.

೧೪. ಜ್ಯೇಷ್ಠಾನಕ್ಷತ್ರದಲ್ಲಿ ಶ್ರಾದ್ಧಮಾಡುವವನು ಆಧಿಪತ್ಯವನ್ನೂ, ಮೂಲನಕ್ಷತ್ರದಲ್ಲಿ ಶ್ರಾದ್ಧಮಾಡಿದವನು ಉತ್ತಮವಾದ ಆರೋಗ್ಯವನ್ನೂ, ಪೂರ್ವಾಷಾಢಾನಕ್ಷತ್ರದಲ್ಲಿ ಶ್ರಾದ್ಧಮಾಡಿದವನು ಕೀರ್ತಿಯನ್ನೂ ಮತ್ತು ಉತ್ತರಾಷಾಢಾನಕ್ಷತ್ರದಲ್ಲಿ ಶ್ರಾದ್ಧವನ್ನು ಮಾಡುವವನು ಶೋಕವಿಲ್ಲದಿರುವಿಕೆಯನ್ನೂ ಹೊಂದುವರು.

ಶ್ರವಣೇನ ಶುಭಾಂಲ್ಲೋಕಾನ್ಧನಿಷ್ಠಾಸು ಧನಂ ಮಹತ್ ।
ವೇದವಿದ್ಯಾ ಚಾಭಿಜಿತಿ ಭಿಷಕ್ಸಿದ್ಧಿಂ ಚ ವಾರುಣೇ ॥೧೫॥

ಅಜಾವಿಕಂ ಪ್ರೋಷ್ಠಪದೇ ವಿದ್ಯಾ ಗಾವಸ್ತಥೋತ್ತರೇ ।
ರೇವತೀಷು ತಥಾ ಕುಪ್ಯಮಶ್ವಿನೀಷು ತುರಙ್ಗಮಾನ್ ॥೧೬॥

ಶ್ರಾದ್ಧಂ ಕುರ್ವಂಸ್ತಥಾಪ್ನೋತಿ ಭರಣೀಷ್ವಾಯುರುತ್ತಮಮ್ ।
ತಸ್ಮಾತ್ಕಾಮ್ಯಾನಿ ಕುರ್ವೀತ ಋಕ್ಷೇಷ್ವೇತೇಷು ತತ್ತ್ವವಿತ್ ॥೧೭॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಮದಾಲಸೋಪಾಖ್ಯಾನೇ
ಶ್ರಾದ್ಧಕಲ್ಪೋ ನಾಮ ತ್ರಿಂಶೋಽಧ್ಯಾಯಃ

---

೧೫. ಶ್ರವಣನಕ್ಷತ್ರದಲ್ಲಿ ಶ್ರಾದ್ಧಾನುಷ್ಠಾನದಿಂದ ಶುಭಲೋಕಗಳನ್ನೂ, ಧನಿಷ್ಠಾನಕ್ಷತ್ರದಲ್ಲಿ ಶ್ರಾದ್ಧದಿಂದ ಮಹತ್ತಾದ ಧನವನ್ನೂ, ಅಭಿಜಿತ್‌ನಕ್ಷತ್ರದಲ್ಲಿ ಶ್ರಾದ್ಧದಿಂದ ವೇದವಿದ್ಯೆಯನ್ನೂ ಮತ್ತು ಶತತಾರಾನಕ್ಷತ್ರದಲ್ಲಿ ಶ್ರಾದ್ಧದಿಂದ ವೈದ್ಯಸಿದ್ಧಿಯನ್ನೂ ಹೊಂದುವರು.

೧೬. ಪೂರ್ವಾಭಾದಾ ನಕ್ಷತ್ರದಲ್ಲಿ ಮಾಡಿದ ಶ್ರಾದ್ಧದಿಂದ ಆಡು-ಕುರಿಗಳ ಸಮೃದ್ಧಿಯನ್ನೂ ಉತ್ತರಾಭಾದ್ರಾ ನಕ್ಷತ್ರದಲ್ಲಿ ಮಾಡಿದ ಶ್ರಾದ್ಧದಿಂದ ವಿದ್ಯೆ-ಗೋಧನವನ್ನೂ ರೇವತೀ ನಕ್ಷತ್ರದಲ್ಲಿ ಶ್ರಾದ್ಧದಿಂದ ಅಶ್ವಸಂಪತ್ತನ್ನೂ ಹೊಂದುವನು.

೧೭. ಭರಣೀ ನಕ್ಷತ್ರದಲ್ಲಿ ಶ್ರಾದ್ಧವನ್ನು ಆಚರಿಸುವವನು ಉತ್ತಮ-ವಾದ ಆಯುಷ್ಯವನ್ನು ಹೊಂದುತ್ತಾನೆ. ಹೀಗೆ ವಿಧವಿಧವಾದ ಫಲಗಳನ್ನು ಕೊಡುವ ಕಾಮ್ಯಶ್ರಾದ್ಧಗಳನ್ನು ಕರ್ಮತತ್ತ್ವಜ್ಞಾನಿಯು ಆಯಾಯ ತಿಥಿ-ನಕ್ಷತ್ರಗಳಲ್ಲಿ ಯಥಾವಿಧಿಯಾಗಿ ಮಾಡಬೇಕು.

ಮಾರ್ಕಂಡೇಯ ಮಹಾಪುರಾಣದಲ್ಲಿ ಮೂವತ್ತನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಏಕತ್ರಿಂಶೋಽಧ್ಯಾಯಃ

(ಸದಾಚಾರ ನಿರೂಪಣಮ್)

ಮದಾಲಸೋವಾಚ :—

ಏವಂ ಪುತ್ರ ಗೃಹಸ್ಥೇನ ದೇವತಾಃ ಪಿತರಸ್ತಥಾ ।
ಸಮ್ಪೂಜ್ಯಾ ಹವ್ಯಕವ್ಯಾಭ್ಯಾಮನ್ನೇನಾತಿಥಿಬಾನ್ಧವಾಃ ॥೧॥

ಭೂತಾನಿ ಭೃತ್ಯಾ ವಿಕಲಾಃ ಪಶುಪಕ್ಷಿಪಿಪೀಲಿಕಾಃ ।
ಭಿಕ್ಷವೋ ಯಾಚಮಾನಾಸ್ತು ಯೇ ಚಾನ್ಯೇ ವಸತಾ ಗೃಹೇ ॥೨॥

ಮೂವತ್ತೊಂದನೆಯ ಅಧ್ಯಾಯ

ಮದಾಲಸೆಯು ಇಂತೆಂದಳು :—

೧. ಪುತ್ರನೆ! ಹಿಂದೆ ಹೇಳಿರುವ ವಿಧಾನದಿಂದ ಗೃಹಸ್ಥಾಶ್ರಮಿಯಾದ ಮಾನವನು ಆಯಾಯ ಕರ್ಮಾಚರಣೆಯಿಂದ ಹವ್ಯ-ಕವ್ಯ-ಅನ್ನಗಳನ್ನು ಕೊಡುತ್ತ ದೇವತೆ-ಪಿತೃ-ಅತಿಥಿ-ಬಾಂಧವರನ್ನು ಪೂಜಿಸಿ ತೃಪ್ತಿಪಡಿಸಬೇಕು.

೨. ಹಾಗು ಗೃಹಸ್ಥಾಶ್ರಮಧರ್ಮವನ್ನು ಆಚರಿಸುತ್ತಿರುವವನು ತಾನು ಆಚರಿಸುವ ಕರ್ಮಗಳಿಂದ ಭೂತ, ಪೋಷ್ಯವರ್ಗ, ದೀನಾನಾಥಜನ, ಪಶು, ಪಕ್ಷಿ, ಇರುವೆ, ಸನ್ಯಾಸಿ ಮತ್ತು ಯಾಚಕರಾಗಿ ಬರುವವರು--ಇಷ್ಟು ಪ್ರಾಣಿಗಳನ್ನು ತೃಪ್ತಿಪಡಿಸಬೇಕು-

ಸದಾಚಾರವತಾ ತಾತ ಸಾಧುನಾ ಗೃಹಮೇಧಿನಾ ।
ಪಾಪಂ ಭುಜ್ಯತೇ ಸಮುಲ್ಲಙ್ಘ್ಯ ನಿತ್ಯನೈಮಿತ್ತಿಕೀಃ ಕ್ರಿಯಾಃ ॥೩॥

ಅಲರ್ಕ ಉವಾಚ :—

ಕಥಿತಂ ಮೇ ತ್ವಯಾ ಮಾತರ್ನಿತ್ಯಂ ನೈಮಿತ್ತಿಕಂ ಚ ಯತ್ ।
ನಿತ್ಯನೈಮಿತ್ತಿಕಂ ಚೈವ ತ್ರಿವಿಧಂ ಕರ್ಮ ಪೌರುಷಮ್ ॥೪॥

ಸದಾಚಾರಮಹಂ ಶ್ರೋತುಮಿಚ್ಛಾಮಿ ಕುಲನನ್ದಿನಿ ।
ಯಂ ಕುರ್ವನ್ ಸುಖಮಾಪ್ನೋತಿ ಪರತ್ರೇಹ ಚ ಮಾನವಃ ॥೫॥

ಮದಾಲಸೋವಾಚ :—

ಗೃಹಸ್ಥೇನ ಸದಾ ಕಾರ್ಯಮಾಚಾರಪರಿಪಾಲನಮ್ ।
ನ ಹ್ಯಾಚಾರವಿಹೀನಸ್ಯ ಸುಖಮತ್ರ ಪರತ್ರ ವಾ ॥೬॥

---

೩. ಪುತ್ರನೆ! ಆಚಾರವಂತನಾಗಿ ಸಾಧುವೆನಿಸಿದ ಗೃಹಸ್ಥಾಶ್ರಮಿಯು ಅನೇಕ ಪ್ರಾಣಿಗಳನ್ನು ತೃಪ್ತಿಪಡಿಸುವ ಕರ್ಮಗಳನ್ನು ಬಿಡಲಾಗದು. ಅಂತಹ ನಿತ್ಯ-ನೈಮಿತ್ತಿಕಕರ್ಮಗಳನ್ನು ಉಲ್ಲಂಘಿಸಿದವನು ಪಾಪವನ್ನು ಹೊಂದುವನು.

ಅಲರ್ಕನು ಹೇಳಿದನು :—

೪. ಜನನಿಯೆ! ನನಗೆ ನಿನ್ನಿಂದ ಇದುವರೆಗೆ ನಿತ್ಯ, ನೈಮಿತ್ತಿಕ ಮತ್ತು ನಿತ್ಯನೈಮಿತ್ತಿಕ—ಈ ಮೂರು ಬಗೆಯ ಕರ್ಮಗಳು ಸಂಗ್ರಹವಾಗಿ ಹೇಳಲ್ಪಟ್ಟುವು. ಇವು ಗೃಹಮೇಧಿಯಾದ ಪುರುಷನು ಮಾಡುವ ಕರ್ಮಗಳೆಂದು ತಿಳಿಯಿತು.

೫. ವಂಶವನ್ನು ಸಂತೋಷಪಡಿಸುವವಳೆ! ಜನನಿಯೆ! ಮಾನವನು ಯಾವ ಆಚಾರವನ್ನು ತಪ್ಪದೆ ನಡೆಸಿ ಇಹಲೋಕ-ಪರಲೋಕಗಳಲ್ಲಿ ಸುಖವನ್ನು ಹೊಂದುವನೊ ;• ಹಾಗೆ ಸುಖಸಾಧನವಾದ ಸದಾಚಾರವನ್ನು ನಾನು ಕೇಳಲು ಕುತೂಹಲವುಳ್ಳವನಾಗಿರುವೆನು.

ಮದಾಲಸೆಯು ಹೇಳಿದಳು :—

೬. ಗೃಹಸ್ಥಾಶ್ರಮಕ್ಕೆ ಸೇರಿದವನು ಯಾವಾಗಲೂ ತನ್ನ ಆಚಾರದ ಪರಿಪಾಲನವನ್ನು ಅವಶ್ಯವಾಗಿ ಮಾಡಬೇಕು. ಆಚಾರವನ್ನು ಉಲ್ಲಂಘಿಸಿದ ಮಾನವನಿಗೆ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖವು ದೊರೆಯು-ವುದಿಲ್ಲ.

ಯಜ್ಞದಾನತಪಾಂಸೀಹ ಪುರುಷಸ್ಯ ನ ಭೂತಯೇ ।
ಭವನ್ತಿ ಯಃ ಸದಾಚಾರಂ ಸಮುಲ್ಲಙ್ಘ್ಯ ಪ್ರವರ್ತತೇ ॥೭॥

ದುರಾಚಾರೋ ಹಿ ಪುರುಷೋ ನೇಹಾಯುರ್ವಿನ್ದತೇ ಮಹತ್ ।
ಕಾರ್ಯೋ ಯತ್ನಃ ಸದಾಚಾರೇ ಆಚಾರೋ ಹನ್ತ್ಯಲಕ್ಷಣಮ್ ॥೮॥

ತಸ್ಯ ಸ್ವರೂಪಂ ವಕ್ಷ್ಯಾಮಿ ಸದಾಚಾರಸ್ಯ ಪುತ್ರಕ ।
ಸಮಾಹಿತಮನಾಃ ಶ್ರುತ್ವಾ ತಥೈವ ಪರಿಪಾಲಯ ॥೯॥

ತ್ರಿವರ್ಗಸಾಧನೇ ಯತ್ನಃ ಕರ್ತವ್ಯೋ ಗೃಹಮೇಧಿನಾ ।
ತತ್ಸಂಸಿದ್ಧೌ ಗೃಹಸ್ಥಸ್ಯ ಸಿದ್ಧಿರತ್ರ ಪರತ್ರ ಚ ॥೧೦॥

---

೭. ಯಾವ ಮಾನವನು ಸದಾಚಾರವನ್ನು ಉಲ್ಲಂಘಿಸಿ ಪ್ರವರ್ತಿಸುವನೊ; ಅವನು ಮಾಡುವ ಯಜ್ಞ-ದಾನ-ತಪಸ್ಸು ಮುಂತಾದ ಪುಣ್ಯಕರ್ಮಗಳು ಅವನಿಗೆ ಫಲಸಮೃದ್ಧಿಯನ್ನು ಕೊಡುವುದಿಲ್ಲ.

೮. ಇಹಲೋಕದಲ್ಲಿ ಕೆಟ್ಟ ಆಚಾರದಿಂದ ಇರುವ ಪುರುಷನು ದೀರ್ಘವಾದ ಆಯುಷ್ಯವನ್ನು ಹೊಂದುವುದಿಲ್ಲ. ಆದುದರಿಂದ ಸದಾಚಾರವನ್ನು ಅನುವರ್ತಿಸುವುದರಲ್ಲಿ ಯತ್ನವನ್ನು ಮಾಡಬೇಕು. ಆಚಾರವು ಇತರವಿಧವಾದ ದೋಷಗಳನ್ನು ನಾಶಮಾಡುವುದು.

೯. ಪುತ್ರನೆ! ಅಂತಹ ಸದಾಚಾರದ ಸ್ವರೂಪವನ್ನು ನಾನು ನಿನಗೆ ಹೇಳುವೆನು. ನೀನು ಅದನ್ನು ಸಾವಧಾನವಾದ ಮನಸ್ಸುಳ್ಳವನಾಗಿ ಶ್ರವಣಮಾಡಿ ಅದರಂತೆಯೆ ಆಚಾರವನ್ನು ಪರಿಪಾಲನಮಾಡು.

೧೦. ಗೃಹಸ್ಥಾಶ್ರಮಧರ್ಮವನ್ನು ಕೈಗೊಂಡಿರುವ ಮಾನವನಿಂದ ಧರ್ಮ-ಅರ್ಥ-ಕಾಮ ಎಂಬ ತ್ರಿವರ್ಗವನ್ನು ಸಾಧಿಸುವುದರಲ್ಲಿ ಯತ್ನಮಾಡಲ್ಪಡಬೇಕು. ತ್ರಿವರ್ಗವಿಷಯದಲ್ಲಿ ಯತ್ನವು ಸಾರ್ಥಕವಾದರೆ ಗೃಹಸ್ಥನಿಗೆ ಇಹ-ಪರಲೋಕಗಳ ಫಲವು ಸಿದ್ಧಿಯಾಗುವುದು.

ಪಾದೇನಾರ್ಥಸ್ಯ ಪಾರತ್ರ್ಯಂ ಕುರ್ಯಾತ್ಸಞ್ಚಯಮಾತ್ಮವಾನ್ ।
ಅರ್ಥೇನ ಚಾತ್ಮಭರಣಂ ನಿತ್ಯನೈಮಿತ್ತಿಕಾನ್ವಿತಮ್ ॥೧೧॥

ಪಾದಂ ಚಾತ್ಮಾರ್ಥಮಾಯಸ್ಯ ಮೂಲಭೂತಂ ವಿವರ್ಧಯೇತ್ ।
ಏವಮಾಚರತಃ ಪುತ್ರ ಅರ್ಥಃ ಸಾಫಲ್ಯಮೃಚ್ಛತಿ ॥೧೨॥

ತದ್ವತ್ಪಾಪನಿಷೇಧಾರ್ಥಂ ಧರ್ಮಃ ಕಾರ್ಯೋ ವಿಪಶ್ಚಿತಾ ।
ಪರತ್ರಾರ್ಥಂ ತಥಾ ಚಾನ್ಯಃ ಕಾಮ್ಯೋಽತ್ರೈವ ಫಲಪ್ರದಃ ॥೧೩॥

ಪ್ರತ್ಯವಾಯಭಯಾತ್ಕಾಮ್ಯಸ್ತಥಾನ್ಯಶ್ಚಾವಿರೋಧವಾನ್ ।
ದ್ವಿಧಾ ಕಾಮೋ ನಿಗದಿತಸ್ತ್ರಿವರ್ಗಸ್ಯಾವಿರೋಧತಃ ॥೧೪॥

---

೧೧. ಮಾನವನು ಪ್ರಮಾದವಿಲ್ಲದವನಾಗಿ ತಾನು ಸಂಪಾದಿಸಿದ ಧನದಲ್ಲಿ ಕಾಲುಭಾಗವನ್ನು ಪರರಲ್ಲಿ ವಿನಿಯೋಗವನ್ನು ಮಾಡಬೇಕು. ಮತ್ತು ಅರ್ಧಭಾಗವನ್ನು ನಿತ್ಯನೈಮಿತ್ತಿಕ ಕರ್ಮಾನುಷ್ಠಾನ ಆತ್ಮಭರಣಗಳಿಗೆ ಉಪಯೋಗಿಸಬೇಕು.

೧೨. ಪುತ್ರನೆ! ಕಡೆಗೆ ಉಳಿದಿರುವ ಕಾಲುಭಾಗ ಧನವನ್ನು ಯತ್ನ-ಪೂರ್ವಕವಾಗಿ ರಕ್ಷಿಸಿ ಮೂಲಧನವನ್ನಾಗಿ ವೃದ್ಧಿಮಾಡಬೇಕು. ಈ ರೀತಿಯಾಗಿ ಅರ್ಥವನ್ನು ವಿನಿಯೋಗಿಸುವವನು ಆರ್ಜಿಸಿದ ಅರ್ಥವು ಸಫಲವಾಗುವುದು.

೧೩. ಹಾಗು ಜ್ಞಾನಿಯಾದ ಗೃಹಸ್ಥನು ಪಾಪಪರಿಹಾರಕ್ಕೋಸ್ಕರ ಧರ್ಮವನ್ನು ಮಾಡಬೇಕು. ಪರಲೋಕದಲ್ಲಿ ಸದ್ಗತಿಲಾಭಕ್ಕೋಸ್ಕರವೂ ವಿಹಿತವಾದ ಧರ್ಮವನ್ನು ಆಚರಿಸಬೇಕು. ಕಾಮ್ಯಕರ್ಮರೂಪವಾದ ಧರ್ಮವು ಐಹಿಕವಾದ ಫಲವನ್ನು ಕೊಡುವುದು.

೧೪. ಕಾಮಪುರುಷಾರ್ಥವು ಧರ್ಮ-ಅರ್ಥ-ಕಾಮಗಳೆಂದು ಗಣಿಸಲ್ಪಟ್ಟ ತ್ರಿವರ್ಗಕ್ಕೆ ವಿರೋಧವಿಲ್ಲದ ಹಾಗೆ ಎರಡು ವಿಧವಾಗಿ ಹೇಳಲ್ಪಟ್ಟಿದೆ. ಒಂದು ಪ್ರತ್ಯವಾಯಪರಿಹಾರಕ್ಕೋಸ್ಕರ ಋತುಕಾಲದಲ್ಲಿ ಮಾಡುವ ಸ್ವಸ್ತ್ರೀಸಂಗ-ರೂಪವಾಗಿದೆ. ಮತ್ತೊಂದು ಶಾಸ್ತ್ರನಿಷೇಧವಿಲ್ಲದ ಭೋಗರೂಪವಾದುದು.

ಪರಸ್ಪರಾನುಬನ್ಧಾಂಶ್ಚ ಸರ್ವಾನೇತಾನ್ವಿಚಿನ್ತಯೇತ್ ।
ವಿಪರೀತಾನುಬನ್ಧಾಂಶ್ಚ ಧರ್ಮಾದೀಂಸ್ತಾಞ್ಛೃಣುಷ್ವ ಮೇ ॥೧೫॥

ಧರ್ಮೋ ಧರ್ಮಾನುಬನ್ಧಾರ್ಥೋ ಧರ್ಮೋ ನಾತ್ಮಾರ್ಥಬಾಧಕಃ ।
ಉಭಾಭ್ಯಾಂ ಚ ದ್ವಿಧಾ ಕಾಮಸ್ತೇನ ತೌ ಚ ದ್ವಿಧಾ ಪುನಃ ॥೧೬॥

ಬ್ರಾಹ್ಮೇ ಮುಹೂರ್ತೇ ಬುಧ್ಯೇತ ಧರ್ಮಾರ್ಥೌ ಚಾನುಚಿನ್ತಯೇತ್ ।
ಕಾಯಕ್ಲೇಶಾಂಶ್ಚ ತನ್ಮೂಲಾನ್ವೇದತತ್ತ್ವಾರ್ಥಮೇವ ಚ ॥೧೭॥

ಉತ್ಥಾಯಾವಶ್ಯಕಂ ಕೃತ್ವಾ ಕೃತಶೌಚಃ ಸಮಾಹಿತಃ ।
ಸಮುತ್ಥಾಯ ತಥಾಚಮ್ಯ ಪ್ರಾಙ್ಮುಖೋ ನಿಯತಃ ಶುಚಿಃ ॥೧೮॥

---

೧೫. ಧರ್ಮ-ಅರ್ಥ-ಕಾಮಗಳಲ್ಲಿ ಪ್ರತಿಯೊಂದು ಪುರುಷಾರ್ಥವು ಪರಸ್ಪರ ಅನುಬಂಧವನ್ನು ಹೊಂದಿರುವುದು. ಹಾಗು ವಿರೋಧಾನುಬಂಧವನ್ನು ಹೊಂದಿರುವುದೂ ಉಂಟು. ಹಾಗೆ ಪರಸ್ಪರ ಅನುಬಂಧ-ವಿರೋಧಾನುಬಂಧವುಳ್ಳ ಧರ್ಮಗಳನ್ನು ಕೇಳು.

೧೬. ಒಂದು ಧರ್ಮವು ಮತ್ತೊಂದು ಧರ್ಮಕ್ಕೆ ದ್ವಾರವಾಗುವುದು. ಮತ್ತು ತಾನು ಅರ್ಥಪುರುಷಾರ್ಥಕ್ಕೆ ಬಾಧಕವಾಗಿರುವುದಿಲ್ಲ. ಇದರಿಂದ ಆತ್ಮಾನುಬಂಧ-ಪರಸ್ಪರಾನುಬಂಧವನ್ನು ತಿಳಿಯಬಹುದು. ಧರ್ಮವು ಅರ್ಥ-ಕಾಮಗಳಿಗೆ ವಿರೋಧಭಾವವನ್ನು ತಾಳಿದರೆ ಆಗ ವಿರೋಧಾನುಸಂಬಂಧ-ವಾಗುವುದು. ಹೀಗೆ ಅರ್ಥ-ಕಾಮಗಳಿಗೂ ಇಂತಹ ಅನುಬಂಧಗಳನ್ನು ತಿಳಿಯಬೇಕು.

೧೭. ಗೃಹಸ್ಥಾಶ್ರಮಿಯು ಬ್ರಾಹ್ಮಮುಹೂರ್ತದಲ್ಲಿ ಎಚ್ಚರವನ್ನು ಹೊಂದಿ ಧರ್ಮ-ಅರ್ಥಗಳನ್ನು ಸ್ಮರಿಸಿಕೊಳ್ಳಬೇಕು. ಮತ್ತು ಧರ್ಮ-ಅರ್ಥಗಳ ನಿಮಿತ್ತವಾಗಿ ಒದಗುವ ಕಾಯಕ್ಲೇಶಗಳನ್ನೂ ವೇದದ ಪ್ರತಿಪಾದ್ಯತತ್ತ್ವವಾದ ಪರಮಾತ್ಮನನ್ನೂ ಧ್ಯಾನಿಸಬೇಕು.

೧೮. ಪ್ರಾತಃಕಾಲದಲ್ಲಿ ದೇವತಾಸ್ಮರಣವನ್ನು ಮಾಡಿ ಹಾಸಿಗೆಯಿಂದ ಎದ್ದು ಆವಶ್ಯಕ ಕರ್ಮವನ್ನು ಮುಗಿಸಿಕೊಂಡು, ಶೌಚಕರ್ಮವನ್ನು ಆಚರಿಸಿ, ಶಾಂತಚಿತ್ತನಾಗಿ ಎದ್ದು ಪವಿತ್ರನೂ, ಜಿತೇಂದ್ರಿಯನೂ ಆಗಿ ಸಂಧ್ಯಾವಂದನೆಗೆ ಪೂರ್ವದಿಕ್ಕಿಗೆ ಅಭಿಮುಖನಾಗಿ ಕುಳಿತುಕೊಳ್ಳಬೇಕು.

ಪೂರ್ವಾಂ ಸನ್ಧ್ಯಾಂ ಸನಕ್ಷತ್ರಾಂ ಪಶ್ಚಿಮಾಂ ಸದಿವಾಕರಾಮ್ ।
ಉಪಾಸೀತ ಯಥಾನ್ಯಾಯಂ ನೈನಾಂ ಜಹ್ಯಾದನಾಪದಿ ॥೧೯॥

ಅಸತ್ಪ್ರಲಾಪಮನೃತಂ ವಾಕ್ಪಾರುಷ್ಯಂ ಚ ವರ್ಜಯೇತ್ ।
ಅಸಚ್ಛಾಸ್ತ್ರಮಸದ್ವಾದಮಸತ್ಸೇವಾಂ ಚ ಪುತ್ರಕ ॥೨೦॥

ಸಾಯಂ ಪ್ರಾತಸ್ತಥಾ ಹೋಮಂ ಕುರ್ವೀತ ನಿಯತಾತ್ಮವಾನ್ ।
ನೋದಯಾಸ್ತಮಯೇ ಬಿಮ್ಬಮುದೀಕ್ಷೇತ ವಿವಸ್ವತಃ ॥೨೧॥

ಕೇಶಪ್ರಸಾಧನಾದರ್ಶದರ್ಶನಂ ದನ್ತಧಾವನಮ್ ।
ಪೂರ್ವಾಹ್ಣ ಏವ ಕುರ್ವೀತ ದೇವತಾನಾಂ ಚ ತರ್ಪಣಮ್ ॥೨೨॥

---

೧೯. ಸೂರ್ಯನು ಉದಯಿಸುವುದಕ್ಕೆ ಮುಂಚಿತವಾಗಿ ನಕ್ಷತ್ರಗಳು ಕಾಣಿಸುತ್ತಿರುವಾಗ ಪ್ರಾತಃಸಂಧ್ಯಾವಂದನೆಯನ್ನೂ, ಸೂರ್ಯನು ಅಸ್ತಮಯ-ಹೊಂದುವುದಕ್ಕೆ ಮುಂಚಿತವಾಗಿ ಸೂರ್ಯಬಿಂಬವು ಕಾಣುತ್ತಿರುವಾಗ ಸಾಯಂ-ಸಂಧ್ಯಾವಂದನೆಯನ್ನೂ ಯಥಾವಿಧಿಯಾಗಿ ಮಾಡಬೇಕು. ಆಪತ್ಕಾಲದ ಹೊರತು ಯಾವಾಗಲೂ ಸಂಧ್ಯಾವಂದನವನ್ನು ಬಿಡಬಾಗದು.

೨೦. ಪುತ್ರನೆ! ಶ್ರೇಯೋರ್ಥಿಯಾದ ಗೃಹಸ್ಥನು ಕೆಟ್ಟವಿಷಯದಲ್ಲಿ ಸಂಭಾಷಣೆ, ಅನೃತವಚನ, ಮತ್ತು ಕಠಿನವಾದ ಮಾತು ಇವುಗಳನ್ನು ಬಿಡಬೇಕು. ಹಾಗು ಅಸತ್ತಾದ ಶಾಸ್ತ್ರವ್ಯಾಸಂಗ, ಕೆಟ್ಟ ವಾದ, ದುಷ್ಟಜನರ ಸೇವೆಯನ್ನು ತ್ಯಜಿಸಬೇಕು.

೨೧. ಪವಿತ್ರವಾದ ಮನಸ್ಸು ಮತ್ತು ಇಂದ್ರಿಯಗಳಿಂದ ಕೂಡಿದವನಾಗಿ ಸಾಯಂಕಾಲ ಪ್ರಾತಃಕಾಲಗಳಲ್ಲಿ ಔಪಾಸನ-ಅಗ್ನಿ ಹೋತ್ರ ಹೋಮಗಳನ್ನು ಮಾಡಬೇಕು. ಮತ್ತು ಉದಯ-ಅಸ್ತಮಯ ಸಮಯಗಳಲ್ಲಿ ಸೂರ್ಯನ ಬಿಂಬವನ್ನು ನೋಡಬಾರದು.

೨೨. ಕೇಶಸಂಸ್ಕಾರ, ಕನ್ನಡಿಯನ್ನು ನೋಡುವುದು ಮತ್ತು ದಂತಧಾವನ ಇವುಗಳನ್ನು ಪೂರ್ವಾಹ್ಣಸಮಯದಲ್ಲಿಯೇ ಮಾಡಬೇಕು. ಹಾಗು ದೇವತೆಗಳ ತೃಪ್ತಿಗೋಸ್ಕರ ಮಾಡುವ ಕಾರ್ಯವನ್ನು ಪೂರ್ವಾಹ್ಣದಲ್ಲಿ ನೆರವೇರಿಸಬೇಕು.

ಗ್ರಾಮಾವಸಥತೀರ್ಥಾನಾಂ ಕ್ಷೇತ್ರಾಣಾಂ ಚೈವ ವರ್ತ್ಮನಿ ।
ನ ಮೂತ್ರಮನುತಿಷ್ಠೇತ ನ ಕೃಷ್ಟೇ ನ ಚ ಗೋವ್ರಜೇ ॥೨೩॥

ನಗ್ನಾಂ ಪರಸ್ತ್ರಿಯಂ ನೇಕ್ಷೇನ್ನ ಪಶ್ಯೇದಾತ್ಮನಃ ಶಕೃತ್ ।
ಉದಕ್ಯಾದರ್ಶನಂ ಸ್ಪರ್ಶೋ ವರ್ಜ್ಯಂ ಸಮ್ಭಾಷಣಂ ತಥಾ ॥೨೪॥

ನಾಪ್ಸು ಮೂತ್ರಂ ಪುರೀಷಂ ವಾ ನಿಷ್ಠೀವಂ ನ ಸಮಾಚರೇತ್ ।
ನಾಧಿತಿಷ್ಠೇಚ್ಛಕೃನ್ಮೂತ್ರಂ ಕೇಶಭಸ್ಮಕಪಾಲಿಕಾಃ ॥೨೫॥

ತುಷಾಙ್ಗಾರಾಸ್ಥಿಚೂರ್ಣಾನಿ ರಜೋವಸ್ತ್ರಾಣಿ ಕಾನಿಚಿತ್ ।
ನಾಧಿತಿಷ್ಠೇತ್ತಥಾ ಪ್ರಾಜ್ಞಃ ಪಥಿ ಪತ್ರಾಣಿ ವಾ ಭುವಿ ॥೨೬॥

---

೨೩. ಮೂತ್ರವಿಸರ್ಜನ ಮಾಡುವಾಗ ಗ್ರಾಮ, ಮನೆ, ತೀರ್ಥಗಳು, ಕ್ಷೇತ್ರಗಳು, ವ್ಯವಸಾಯಕ್ಕೋಸ್ಕರವಾಗಿ ಉತ್ತಿರುವ ಭೂಮಿ ಮತ್ತು ಗೋಶಾಲೆ ಈ ಸ್ಥಳಗಳಲ್ಲಿ ಮೂತ್ರವಿಸರ್ಜನೆಯನ್ನು ಮಾಡಬಾರದು.

೨೪. ವಸ್ತ್ರರಹಿತಳಾದ ಸ್ತ್ರೀಯನ್ನೂ, ಪರನಾರಿಯನ್ನೂ ನೋಡ-ಬಾರದು. ತನ್ನ ಮಲವನ್ನು ಕೂಡ ತಾನು ನೋಡಬಾರದು. ಮತ್ತು ರಜಸ್ವಲೆಯಾದ ನಾರಿಯ ದರ್ಶನ, ಸ್ಪರ್ಶನ ಹಾಗು ಸಂಭಾಷಣೆಗಳನ್ನು ಮಾಡಬಾರದು.

೨೫. ನೀರಿನಲ್ಲಿ ಮಲ-ಮೂತ್ರಗಳನ್ನು ವಿಸರ್ಜನಮಾಡಬಾರದು. ಮತ್ತು ನೀರಿನಲ್ಲಿ ಉಗುಳಬಾರದು. ಮಲ-ಮೂತ್ರ-ಕೂದಲು-ಬೂದಿ-ಕಪಾಲ ಮುಂತಾದುವುಗಳಿಂದ ಅಶುಚಿಯಾದ ಸ್ಥಳವನ್ನು ಸೇವಿಸಬಾರದು.

೨೬. ಹೊಟ್ಟಿನಬೆಂಕಿ, ಎಲುಬು-ಮೂಳೆ, ಚೂರ್ಣ, ಧೂಳಿ, ವಸ್ತ್ರ ಮತ್ತು ಎಂಜಲು ಎಲೆ ಮುಂತಾದುವು ನೆಲದಲ್ಲಿ ಬಿದ್ದಿರುವಾಗ ಪ್ರಾಜ್ಞನಾದವನು ಅಂತಹ ನೆಲವನ್ನು ಸೇವಿಸಬಾರದು ಮತ್ತು ಅವುಗಳನ್ನು ಹಾದು ನಡೆಯ-ಬಾರದು.

ಪಿತೃದೇವಮನುಷ್ಯಾಣಾಂ ಭೂತಾನಾಂ ಚ ತಥಾರ್ಚನಮ್ ।
ಕೃತ್ವಾ ವಿಭವತಃ ಪಶ್ಚಾದ್ಗೃಹಸ್ಥೋ ಭೋಕ್ತುಮರ್ಹತಿ ॥೨೭॥

ಉದಙ್ಮುಖಃ ಪ್ರಾಙ್ಮುಖೋ ವಾ ಸ್ವಾಚಾನ್ತೋ ವಾಗ್ಯತಃ ಶುಚಿಃ ।
ಭುಞ್ಜೀತಾನ್ನಂ ಚ ತಚ್ಚಿತ್ತೋ ಹ್ಯನ್ತರ್ಜಾನುಃ ಸದಾ ನರಃ ॥೨೮॥

ಉಪಘಾತಮೃತೇ ದೋಷಂ ನಾನ್ನಸ್ಯೋದೀರಯೇದ್ಬುಧಃ ।
ಪ್ರತ್ಯಕ್ಷಂ ಲವಣಂ ವರ್ಜ್ಯಮನ್ನಮತ್ಯುಷ್ಣಮೇವ ಚ ॥೨೯॥

ನ ಗಚ್ಛನ್ನೈವ ತಿಷ್ಠನ್ವೈ ವಿಣ್ಮೂತ್ರೋತ್ಸರ್ಗಮಾಚರನ್ ।
ಕುರ್ವೀತ ನೈವ ಚಾಚಾಮೇ ನ್ನ ಕಿಂ ಚಿದಪಿ ಭಕ್ಷಯೇತ್ ॥೩೦॥

---

೨೭. ಗೃಹಸ್ಥಾಶ್ರಮಿಯಾದ ಮಾನವನು ತನ್ನ ಶಕ್ತಿ-ಸಂಪತ್ತುಗಳನ್ನು ಅನುಸರಿಸಿ ಪಿತೃ-ದೇವತೆ-ಮನುಷ್ಯರ ಮತ್ತು ಭೂತಗಳ ಅರ್ಚನೆಯನ್ನು ಮಾಡಿ ಅವುಗಳನ್ನು ತೃಪ್ತಿಪಡಿಸಿ ಅನಂತರ ಭೋಜನಮಾಡಬೇಕು.

೨೮. ಭೋಜನ ಸಮಯದಲ್ಲಿ ಮಾನವನು ಪೂರ್ವ ಅಥವಾ ಪಶ್ಚಿಮ ದಿಕ್ಕಿಗೆ ಅಭಿಮುಖನಾಗಿ ಕುಳಿತವನೂ, ಆಚಮನದಿಂದ ಪವಿತ್ರನೂ, ವಾಙ್ನಿಯಮವುಳ್ಳವನೂ, ಮತ್ತು ಮಂಡಿಯೊಳಭಾಗದಲ್ಲಿ ಕೈಗಳುಳ್ಳವನೂ ಆಗಿ ಊಟಮಾಡಬೇಕು.

೨೯. ಜ್ಞಾನಿಯಾದವನು ಕ್ರಿಮಿ-ಕೀಟ ಮುಂತಾದ ಒಂದು ಉಪಘಾತದ ಹೊರತು ಇನ್ನಾವ ವಿಧದಿಂದಲೂ ಅನ್ನದಲ್ಲಿ ದೋಷವನ್ನು ಹೇಳಬಾರದು. ಪ್ರತ್ಯಕ್ಷವಾಗಿ ಲವಣವನ್ನು ಉಪಯೋಗಿಸಬಾರದು. ಮತ್ತು ಬಹಳ ಬಿಸಿಯಾದ ಅನ್ನವನ್ನು ಭುಂಜಿಸಬಾರದು.

೩೦. ಮಲ-ಮೂತ್ರಗಳನ್ನು ವಿಸರ್ಜಿಸುವವನು ನಡೆಯುತ್ತ ಅಥವಾ ನಿಂತುಕೊಂಡು ವಿಸರ್ಜನ ಮಾಡಬಾರದು. ಮತ್ತು ಆಚಮನ-ನೀರನ್ನು ಕುಡಿಯುವುದು ಹಾಗು ಭಕ್ಷಣಗಳನ್ನು ನಡೆಯುವಾಗಲೂ ನಿಂತುಕೊಂಡಿರುವಾಗಲೂ ಮಾಡಬಾರದು.

ಉಚ್ಛಿಷ್ಟೋ ನಾಲಪೇತ್ಕಿಂಚಿತ್ಸ್ವಾಧ್ಯಾಯಂ ಚ ವಿವರ್ಜಯೇತ್ ।
ಗಾಂ ಬ್ರಾಹ್ಮಣಂ ತಥಾ ಚಾಗ್ನಿಂ ಸ್ವಮೂರ್ಧಾನಂ ಚ ನ ಸ್ಪೃಶೇತ್ ॥೩೧॥

ನ ಚ ಪಶ್ಯೇದ್ರವಿಂ ನೇನ್ದುಂ ನ ನಕ್ಷತ್ರಾಣಿ ಕಾಮತಃ ।
ಭಿನ್ನಾಸನಂ ತಥಾ ಶಯ್ಯಾಂ ಭಾಜನಂ ಚ ವಿವರ್ಜಯೇತ್ ॥೩೨॥

ಗುರೂಣಾಮಾಸನಂ ದೇಯಮುಭ್ಯುತ್ಥಾನಾದಿ ಸತ್ಕೃತಮ್ ।
ಅನುಕೂಲಂ ತಥಾಲಾಪಮಭಿವಾದನಪೂರ್ವಕಮ್ ॥೩೩॥

ತಥಾನುಗಮನಂ ಕುರ್ಯಾತ್ಪ್ರತಿಕೂಲಂ ನ ಸಂಲಪೇತ್ ।
ನೈಕವಸ್ತ್ರಶ್ಚ ಭುಞ್ಜೀತ ನ ಕುರ್ಯಾದ್ದೇವತಾರ್ಚನಮ್ ॥೩೪॥

---

೩೧. ಉಚ್ಛಿಷ್ಟನಾಗಿರುವಾಗ ಒಂದು ಮಾತನ್ನೂ ಆಡಬಾರದು. ವೇದಾಧ್ಯಯನವನ್ನು ಉಚ್ಛಿಷ್ಟನಾಗಿರುವ ಸಮಯದಲ್ಲಿ ಮಾಡಬಾರದು. ಮತ್ತು ಆ ಸಮಯದಲ್ಲಿ ಗೋವು, ಬ್ರಾಹ್ಮಣ, ಅಗ್ನಿ ಇವುಗಳನ್ನೂ ತನ್ನ ತಲೆಯನ್ನೂ ಸ್ಪರ್ಶಿಸಬಾರದು.

೩೨. ಹಾಗು ಉಚ್ಛಿಷ್ಟದಶೆಯಲ್ಲಿ ತಾನು ಇಷ್ಟಹೊಂದಿ ಸೂರ್ಯ-ಚಂದ್ರ-ನಕ್ಷತ್ರಗಳನ್ನು ನೋಡಬಾರದು. ತಾನಾಗಿ ಕಂಡರೆ ಪಾಪವಿಲ್ಲ. ಭಿನ್ನವಾದ ಆಸನ, ಶಯನ, ಮತ್ತು ಉಪಯೋಗಿಸುವ ಪಾತ್ರ-ಇವುಗಳನ್ನು ಉಪಯೋಗಿಸಕೂಡದು.

೩೩. ಗುರುವು ಬಂದರೆ ಎದ್ದು ನಿಂತು, ಎದುರುಗೊಂಡು, ಸತ್ಕಾರವನ್ನು ತೋರಿಸಿ ಗುರುವಿಗೆ ಆಸನವನ್ನು ಕೊಡಬೇಕು. ಮತ್ತು ಗುರುವಿಗೆ ಅಭಿವಾದನ-ಪೂರ್ವಕವಾಗಿ ವಂದನೆಮಾಡಿ ಪ್ರೀತಿಕರವಾದ ಸಂಭಾಷಣೆಯನ್ನು ಮಾಡಬೇಕು.

೩೪. ಹಾಗು ಗುರುವು ಹೊರಟರೆ ಸ್ವಲ್ಪವಾದರೂ ಹಿಂಬಾಲಿಸಿ ನಡೆಯಬೇಕು. ಯಾವಾಗಲೂ ಗುರುವಿಗೆ ಪ್ರತಿಕೂಲವಾಗಿ ಮಾತನಾಡಲಾಗದು. ಒಂಟಿ ಬಟ್ಟೆಯನ್ನು ಧರಿಸಿಕೊಂಡಿರುವಾಗ ಭೋಜನ-ದೇವತಾರ್ಚನಗಳನ್ನು ಮಾಡಬಾರದು.

ನ ಗರ್ಹಯೇದ್ದ್ವಿಜಾನ್ನಾಗ್ನೌ ಮೇಹಂ ಕುರ್ವೀತ ಬುದ್ಧಿಮಾನ್ ।
ನ ಸ್ನಾಯೀತ ನರೋ ನಗ್ನೋ ನ ಶಯೀತ ಕದಾಚನ ॥೩೫॥

ನ ಪಾಣಿಭ್ಯಾಮುಭಾಭ್ಯಾಂ ಚ ಕಣ್ಡೂಯೇತ ಶಿರಸ್ತಥಾ ।
ನ ಚಾಭೀಕ್ಷ್ಣಂ ಶಿರಃಸ್ನಾನಂ ಕಾರ್ಯಂ ನಿಷ್ಕಾರಣಂ ನರೈಃ ॥೩೬॥

ಶಿರಃಸ್ನಾತಶ್ಚ ತೈಲೇನ ನಾಙ್ಗಂ ಕಿಂಚಿದಪಿ ಸ್ಪೃಶೇತ್ ।
ಅನಧ್ಯಾಯೇಷು ಸರ್ವೇಷು ಸ್ವಾಧ್ಯಾಯಂ ಚ ವಿವರ್ಜಯೇತ್॥೩೭॥

ಬ್ರಾಹ್ಮಣಾನಲಗೋಸೂರ್ಯಾನ್ನ ಮೇಹೇತ ಕದಾಚನ ।
ಉದಙ್ಮುಖೋ ದಿವಾ ರಾತ್ರಾವುತ್ಸರ್ಗಂ ದಕ್ಷಿಣಾಮುಖಃ ॥೩೮॥

---

೩೫. ಆಚಾರ-ಜ್ಞಾನವಂತನಾದ ಗೃಹಸ್ಥನು ದ್ವಿಜರನ್ನು ನಿಂದಿಸ-ಬಾರದು. ಅಗ್ನಿಕುಂಡದಲ್ಲಿ ಮಲ-ಮೂತ್ರಗಳನ್ನು ವಿಸರ್ಜಿಸಬಾರದು. ವಸ್ತ್ರವನ್ನು ಧರಿಸದೆ ನಗ್ನನಾಗಿ ಯಾವಾಗಲೂ ಊಟಮಾಡಬಾರದು. ಮತ್ತು ನಗ್ನನಾಗಿ ಶಯನ ಮಾಡಬಾರದು.

೩೬. ಮತ್ತು ಎರಡೂ ಕೈಗಳಿಂದ ಯಾವಾಗಲೂ ಶಿರವನ್ನು ನವೆ ಹೋಗಲಾಡಿಸಲು ಉಜ್ಜಿಕೊಳ್ಳಬಾರದು. ಮಾನವರು ಕಾರಣವಿಲ್ಲದೆ ಮತ್ತೆ ಮತ್ತೆ ಶಿರಃಸ್ನಾನವನ್ನು ಮಾಡಬಾರದು. ಶಿರಃ ಸ್ನಾನಕ್ಕೆ ಏನಾದರೂ ನಿಮಿತ್ತ-ವಿದ್ದರೆ ಮಾಡಬೇಕು.

೩೭. ಅಭ್ಯಂಜನ ಸ್ನಾನ ಮಾಡುವಾಗ ಎಣ್ಣೆಯನ್ನು ಹಚ್ಚಿಕೊಂಡಿ-ರುವ ಸಮಯದಲ್ಲಿ ಒಂದು ಅವಯವವನ್ನೂ ಮುಟ್ಟಿಕೊಳ್ಳಬಾರದು. ಅಧ್ಯ-ಯನಕ್ಕೆ ನಿಷೇಧವಾಗಿರುವ ತಿಥಿಗಳಲ್ಲಿ ವೇದಾಧ್ಯಯನವನ್ನು ಮಾಡಬಾರದು.

೩೮. ಯಾವಾಗಲೂ ಬ್ರಾಹ್ಮಣ-ಅಗ್ನಿ-ಗೋವು-ಸೂರ್ಯ—ಇವರಿಗೆ ಅಭಿಮುಖನಾಗಿದ್ದು ಮಲ-ಮೂತ್ರ ವಿಸರ್ಜನೆಯನ್ನು ಮಾಡಬಾರದು. ಹಗಲು ಹೊತ್ತಿನಲ್ಲಿ ಉತ್ತರದಿಕ್ಕಿಗೆ ತಿರುಗಿಕೊಂಡವನೂ, ರಾತ್ರಿ ಹೊತ್ತಿನಲ್ಲಿ ದಕ್ಷಿಣಕ್ಕೆ ತಿರುಗಿಕೊಂಡವನೂ ಆಗಿ ವಿಸರ್ಜನೆ ಮಾಡಬೇಕು.

ಆಬಾಧಾಸು ಯಥಾಕಾಮಂ ಕುರ್ಯಾನ್ಮೂತ್ರಪುರೀಷಯೋಃ ।
ದುಷ್ಕೃತಂ ನ ಗುರೋರ್ಬ್ರೂಯಾತ್ಕ್ರುದ್ಧಂ ಚೈನಂ ಪ್ರಸಾದಯೇತ್ ॥೩೯॥

ಪರೀವಾದಂ ನ ಶೃಣುಯಾದನ್ಯೇಷಾಮಪಿ ಕುರ್ವತಾಮ್ ।
ಪನ್ಥಾ ದೇಯೋ ಬ್ರಾಹ್ಮಣಾನಾಂ ರಾಜ್ಞೋ ದುಃಖಾತುರಸ್ಯ ಚ ॥೪೦॥

ವಿದ್ಯಾಧಿಕಸ್ಯ ಗುರ್ವಿಣ್ಯಾ ಭಾರಾರ್ತಸ್ಯ ಯವೀಯಸಃ ।
ಮೂಕಾನ್ಧಬಧಿರಾಣಾಂ ಚ ಮತ್ತಸ್ಯೋನ್ಮತ್ತಕಸ್ಯ ಚ ॥೪೧॥

ಪುಂಶ್ಚಲ್ಯಾ ಕೃತವೈರಸ್ಯ ಬಾಲಸ್ಯ ಪತಿತಸ್ಯ ಚ ।
ದೇವಾಲಯಂ ಚೈತ್ಯತರುಂ ತಥೈವ ಚ ಚತುಷ್ಪಥಮ್ ॥೪೨॥

---

೩೯. ಮಲ-ಮೂತ್ರ ವಿಸರ್ಜನೆಯ ಪೀಡೆಯುಂಟಾದಾಗ ಹಿಂದೆ ಹೇಳಿದ ದಿಕ್ಕುಗಳ ನಿಯಮವನ್ನು ಪಾಲಿಸಲಾಗದ ಸಂದರ್ಭದಲ್ಲಿ ಇಷ್ಟಾನುಸಾರವಾಗಿ ವಿಸರ್ಜನ ಮಾಡಬಹುದು. ಗುರುವಿನ ವಿಷಯದಲ್ಲಿ ಪಾಪಗಳನ್ನು ಹೇಳಬಾರದು. ಕೋಪಬಂದಾಗ ಗುರುವನ್ನು ಸಮಾಧಾನ ಮಾಡಬೇಕು.

೪೦. ಬೇರೊಬ್ಬರು ತನ್ನ ಗುರುವನ್ನು ನಿಂದಿಸುತ್ತಿರುವಾಗ ಆ ಗುರು ನಿಂದೆಯನ್ನು ತಾನು ಕೇಳಬಾರದು. ದಾರಿ ನಡೆಯುವಾಗ ಬ್ರಾಹ್ಮಣ, ರಾಜ, ಅಥವಾ ಕಷ್ಟಪಡುತ್ತಿರುವವನು—ಇವರಿಗೆ ದಾರಿಯನ್ನು ಬಿಟ್ಟು ತಾನು ಪಾರ್ಶ್ವದಿಂದ ನಡೆಯಬೇಕು.

೪೧. ತನಗಿಂತಲೂ ಅಧಿಕ ವಿದ್ಯಾವಂತನು, ಗರ್ಭಿಣಿಯಾದ ಸ್ತ್ರೀ, ಭಾರವನ್ನು ಹೊತ್ತಿರುವವನು, ಚಿಕ್ಕವನು, ಮೂಗ, ಕುರುಡ, ಕಿವುಡ, ಮದ್ಯಪಾನ ಮೊದಲಾದುದರಿಂದ ಮದವೇರಿದವನು ಮತ್ತು ಹುಚ್ಚು ಹಿಡಿದವನು—ಇವರಿಗೆ ಮಾರ್ಗವನ್ನು ಬಿಟ್ಟು ನಡೆಯಬೇಕು.

೪೨. ಮತ್ತು ವ್ಯಭಿಚಾರಿಣಿಯಾದ ಸ್ತ್ರೀ, ವೈರವನ್ನು ಸಾಧಿಸುವವನು, ಬಾಲಕ ಮತ್ತು ಪತಿತ—ಇವರಿಗೆ ದಾರಿಯನ್ನು ಬಟ್ಟು ನಡೆಯಬೇಕು. ದಾರಿಯನ್ನು ನಡೆಯುವಾಗ ಮಧ್ಯದಲ್ಲಿ ಸಿಕ್ಕುವ ದೇವಾಲಯ, ನಾಲ್ಕು ದಾರಿಗಳು ಸೇರುವ ಚೌಕಗಳು ಮತ್ತು ಅಲ್ಲಲ್ಲಿರುವ ದೊಡ್ಡ ಸಂಕೇತದ ವೃಕ್ಷ—ಇವುಗಳನ್ನು ಬಲಕ್ಕೆ ಬಿಟ್ಟು ಪ್ರದಕ್ಷಿಣಾಕಾರವಾಗಿ ನಡೆಯಬೇಕು.

ವಿದ್ಯಾಧಿಕಂ ಗುರುಂ ಚೈವ ಬುಧಃ ಕುರ್ಯಾತ್ಪ್ರದಕ್ಷಿಣಮ್ ।
ಉಪಾನದ್ವಸ್ತ್ರಮಾಲ್ಯಾದಿ ಧೃತಮನ್ಯೈರ್ನ ಧಾರಯೇತ್ ॥೪೩॥

ಉಪವೀತಮಲಙ್ಕಾರಂ ಕರಕಂ ಚೈವ ವರ್ಜಯೇತ್ ।
ಪ್ರಶಸ್ತಾನಿ ಚ ಕರ್ಮಾಣಿ ಕುರ್ವಾಣಾ ದೀರ್ಘಜೀವಿನಃ ॥೪೪॥

ಚತುರ್ದಶ್ಯಾಂ ತಥಾಷ್ಟಮ್ಯಾಂ ಪಞ್ಚದಶ್ಯಾಂ ಚ ಪರ್ವಸು ।
ತೈಲಾಭ್ಯಙ್ಗಂ ತಥಾ ಭೋಗಂ ಯೋಷಿತಶ್ಚ ವಿವರ್ಜಯೇತ್ ॥೪೫॥

ನ ಕ್ಷಿಪ್ತಪಾದಜಙ್ಘಶ್ಚ ಪ್ರಾಜ್ಞಸ್ತಿಷ್ಠೇತ್ಕದಾಚನ ।
ನ ಚಾಪಿ ವಿಕ್ಷಿಪೇತ್ಪಾದೌ ಪಾದಂ ಪಾದೇನ ನಾಕ್ರಮೇತ್ ॥೪೬॥

---

೪೩. ಹಾಗು ಅಧಿಕ ವಿದ್ಯಾವಂತನು, ಗುರು—ಇವರನ್ನು ಜ್ಞಾನಿಯಾದ ಗೃಹಸ್ಥನು ಪ್ರದಕ್ಷಿಣ ಮಾಡಬೇಕು. ಇತರರು ಧರಿಸಿರುವ ಪಾದರಕ್ಷೆ, ವಸ್ತ್ರ, ಮಾಲ್ಯ ಮುಂತಾದುವುಗಳನ್ನು ಉಪಯೋಗಿಸಬಾರದು.

೪೪. ವಿಹಿತವಾದ ಮತ್ತು ಮಂಗಳಕರವಾದ ಆಚಾರವನ್ನು ನಡೆಸುತ್ತ ದೀರ್ಘಾಯುಷ್ಯವನ್ನು ಹೊಂದಲು ಬಯಸುವವರು ಪರರು ಧರಿಸಿದ ಯಜ್ಞೋಪವೀತ, ಅಲಂಕಾರ, ಕಮಂಡಲು ಮುಂತಾದ ಜಲಪಾತ್ರ—ಇವುಗಳನ್ನು ಉಪಯೋಗಿಸಬಾರದು.

೪೫. ಹಾಗು ದೀರ್ಘಾಯುಷ್ಯವನ್ನು ಅಪೇಕ್ಷಿಸುವವರು ಚತುರ್ದಶೀ-ಅಷ್ಟಮೀ-ಪೂರ್ಣಿಮಾ ಮತ್ತು ಪರ್ವತಿಥಿ—ಇವುಗಳಲ್ಲಿ ತೈಲಾಭ್ಯಂಜನ, ಸ್ತ್ರೀ ಸಂಭೋಗಗಳನ್ನು ವರ್ಜಿಸಬೇಕು.

೪೬. ಪ್ರಾಜ್ಞನಾದ ಗೃಹಸ್ಥನು ಕಾಲು, ಮೊಣಕಾಲುಗಳನ್ನು ಚಾಚಿಕೊಂಡು ಯಾವಾಗಲೂ ನಿಂತಿರಬಾರದು. ಮತ್ತು ಒಂದು ಹೆಜ್ಜೆಯಿಂದ ಮತ್ತೊಂದು ಹೆಜ್ಜೆಯನ್ನು ತುಳಿಯಬಾರದು.

ಮರ್ಮಾಭಿಘಾತಮಾಕ್ರೋಶಂ ಪೈಶುನ್ಯಂ ಚ ವಿವರ್ಜಯೇತ್ ।
ದಮ್ಭಾಭಿಮಾನತೈಕ್ಷ್ಣ್ಯಾನಿ ನ ಕುರ್ವೀತ ವಿಚಕ್ಷಣಃ ॥೪೭॥

ಮೂರ್ಖೋನ್ಮತ್ತವ್ಯಸನಿನೋ ವಿರೂಪಾನ್ಮಾಯಿನಸ್ತಥಾ ।
ನ್ಯೂನಾಙ್ಗಾಂಶ್ಚಾಧಿಕಾಙ್ಗಾಂಶ್ಚ ನೋಪಹಾಸೇನ ದೂಷಯೇತ್ ॥೪೮॥
ಪರಸ್ಯ ದಣ್ಡಂ ನೋದ್ಯಚ್ಛೇಚ್ಛಿಕ್ಷಾರ್ಥಂ ಪುತ್ರಶಿಷ್ಯಯೋಃ ॥೪೯॥

ತದ್ವನ್ನೋಪವಿಶೇತ್ಪ್ರಾಜ್ಞಃ ಪಾದೇನಾಕ್ರಮ್ಯ ಚಾಸನಮ್ ।
ಸಂಯಾವಂ ಕೃಸರಂ ಮಾಂಸಂ ನಾತ್ಮಾರ್ಥಮುಪಸಾಧಯೇತ್॥೫೦॥

---

೪೭. ಜ್ಞಾನವಂತನಾದ ಗೃಹಸ್ಥನು ಮರ್ಮಭೇದಕವಾದ ನಿಂದಾ ಮಾತುಗಳನ್ನೂ ಚಾಡಿ ಮಾತುಗಳನ್ನೂ ಆಡಬಾರದು. ಮತ್ತು ಅಹಂಕಾರ, ಅಭಿಮಾನ, ಕ್ರೂರತನಗಳನ್ನು ಯಾವಾಗಲೂ ತೋರಿಸದೆ ಸೌಮ್ಯನಾಗಿ ವರ್ತಿಸಬೇಕು.

೪೮. ಮೂರ್ಖ, ಉನ್ಮತ್ತ, ವ್ಯಸನಿ, ಕುರೂಪಿ, ಕಪಟಿ, ನ್ಯೂನಾಂಗಿ ಮತ್ತು ಅಧಿಕಾಂಗಿ—ಇವರನ್ನು ಕಂಡಾಗ ಇವರ ದೋಷಗಳನ್ನು ಉದ್ಘಾಟನ ಮಾಡಿ ಹಾಸ್ಯದಿಂದ ಮನಸ್ಸಿಗೆ ನೋವನ್ನು ಉಂಟುಮಾಡಬಾರದು.

೪೯. ಇನ್ನೊಬ್ಬನನ್ನು ಹೊಡೆಯುವ ಹಾಗೆ ಕೋಲನ್ನು ಎತ್ತಿ ತೋರಿಸಿ ಭಯಪಡಿಸಬಾರದು. ಪುತ್ರ ಮತ್ತು ಶಿಷ್ಯ ಜನರನ್ನು ಮಾತ್ರ ಶಿಕ್ಷಣಕ್ಕೋಸ್ಕರ ಕೋಲನ್ನು ಎತ್ತಿ ತೋರಿಸಿ ಹೆದರಿಸಬಹುದು.

೫೦. ಪ್ರಾಜ್ಞನಾದ ಗೃಹಸ್ಥನು ಕಾಲಿನಿಂದ ತನ್ನ ಆಸನವನ್ನು ಎಳೆದುಕೊಳ್ಳಬಾರದು. ಕಡುಬು, ಮುಂತಾದ ಭಕ್ಷ್ಯ, ಕೃಸರಾನ್ನ, ಮಾಂಸ—ಇವುಗಳನ್ನು ತಾನು ಮಾತ್ರ ಭುಂಜಿಸುವುದಕ್ಕೆ ಸಿದ್ಧಗೊಳಿಸಬಾರದು.

ಸಾಯಂ ಪ್ರಾತಶ್ಚ ಭೋಕ್ತವ್ಯಂ ಕೃತ್ವಾ ಚಾತಿಥಿಪೂಜನಮ್ ।
ಉದಙ್ಮುಖಃ ಪ್ರಾಙ್ಮುಖೋ ವಾ ವಾಗ್ಯತೋ ದನ್ತಧಾವನಮ್॥೫೧॥

ಕುರ್ವೀತ ಸತತಂ ವತ್ಸ ವರ್ಜಯೇದ್ವರ್ಜ್ಯವೀರುಧಃ ।
ನೋದಕ್ಶಿರಾಃ ಸ್ವಪೇಜ್ಜಾತು ನ ಚ ಪ್ರತ್ಯಕ್ಶಿರಾ ನರಃ ॥೫೨॥

ಶಿರಸ್ಯಗಸ್ತ್ಯಮಾಸ್ಥಾಯ ಶಯೀತಾಥ ಪುರನ್ದರಮ್ ।
ನ ತು ಗನ್ಧವತೀಷ್ವಪ್ಸು ಸ್ನಾಯೀತ ನ ತಥಾ ನಿಶಿ ॥೫೩॥

ಉಪರಾಗೇ ಪರಂ ಸ್ನಾನಮೃತೇ ದಿನಮುದಾಹೃತಮ್ ।
ಅಪಮೃಜ್ಯಾನ್ನ ಚಾಸ್ನಾತೋ ಗಾತ್ರಾಣ್ಯಮ್ಬರ ಪಾಣಿಭಿಃ ॥೫೪॥

---

೫೧. ಅತಿಥಿಗಳ ಪೂಜೆಯನ್ನು ನೆರವೇರಿಸಿ ಸಾಯಂಕಾಲ, ಪ್ರಾತಃಕಾಲ—ಈ ಎರಡು ವೇಳೆಗಳಲ್ಲಿ ಭೋಜನ ಮಾಡಬೇಕು. ಉತ್ತರ ಅಥವಾ ದಕ್ಷಿಣ ದಿಕ್ಕುಗಳಿಗೆ ಅಭಿಮುಖನಾಗಿ ದಂತಧಾವನವನ್ನು ಮಾಡಬೇಕು.

೫೨. ಪುತ್ರನೆ! ದಂತ ಧಾವನಕ್ಕೆ ನಿಷಿದ್ಧವಾದ ಗಿಡ-ಬಳ್ಳಿಗಳ ಕಡ್ಡಿಗಳನ್ನು ವರ್ಜಿಸಬೇಕು. ಮತ್ತು ಮಾನವನು ಉತ್ತರ-ಪಶ್ಚಿಮ ದಿಕ್ಕುಗಳ ಕಡೆಗೆ ತಲೆಯನ್ನು ಇಟ್ಟುಕೊಂಡು ನಿದ್ರೆಮಾಡಬಾರದು.

೫೩. ದಕ್ಷಿಣಕ್ಕೆ ತಲೆಯನ್ನು ಇಟ್ಟುಕೊಂಡರೆ ಅಗಸ್ತ್ಯಮುನಿಯನ್ನು, ಪೂರ್ವಕ್ಕೆ ತಲೆಯನ್ನು ಇಟ್ಟುಕೊಂಡರೆ ಇಂದ್ರನನ್ನು ತಲೆಯಭಾಗದಲ್ಲಿ ಇಟ್ಟುಕೊಂಡಂತೆ ಆಗುವುದು. ಹಾಗೆಯೆ ನಿದ್ರೆ ಮಾಡಬೇಕು. ಸುಗಂಧವಾದ ನೀರಿನಿಂದ ಸ್ನಾನಮಾಡಬಾರದು. ಮತ್ತು ರಾತ್ರಿವೇಳೆಯಲ್ಲಿ ಸ್ನಾನವನ್ನು ಮಾಡಬಾರದು.

೫೪. ಹಗಲು ಹೊತ್ತನ್ನು ಬಿಟ್ಟು ಬೇರೆ ಸಮಯದಲ್ಲಿ ಸ್ನಾನಮಾಡುವುದಾದರೆ ಗ್ರಹಣನಿಮಿತ್ತದಿಂದ ಮಾಡುವ ಸ್ನಾನ ಮಾತ್ರವೇ ವಿಹಿತವಾಗಿರುವುದು. ಸ್ನಾನ ಮಾಡದಿರುವಾಗ ಬಟ್ಟೆ ಮತ್ತು ಕೈ ಇವುಗಳಿಂದ ದೇಹವನ್ನು ಉಜ್ಜಿಕೊಳ್ಳಬಾರದು.

ನ ಚಾಪಿ ಧೂನಯೇತ್ಕೇಶಾನ್ವಾಸಸೀ ನ ಚ ಧೂನಯೇತ್ ।
ನಾನುಲೇಪನಮಾದದ್ಯಾದಸ್ನಾತಃ ಕರ್ಹಿಚಿದ್ಬುಧಃ ||೫೫||

ನ ಚಾಪಿ ರಕ್ತವಾಸಾಃ ಸ್ಯಾಚ್ಚಿತ್ರಾಸಿತಧರೋಽಪಿ ವಾ ।
ನ ಚ ಕುರ್ಯಾದ್ವಿಪರ್ಯಾಸಂ ವಾಸಸೋರ್ನಾಪಿ ಭೂಷಣೇ ||೫೬||

ವರ್ಜ್ಯಂ ಚ ವಿದಶಂ ವಸ್ತ್ರಮತ್ಯನ್ತೋಪಹತಂ ಚ ಯತ್ ||೫೭||

ಕೇಶಕೀಟಾವಪನ್ನಂ ಚ ಕ್ಷುಣ್ಣಂ ಶ್ವಭಿರವೇಕ್ಷಿತಮ್ ।
ಅವಲೀಢಾವಪನ್ನಂ ಚ ಸಾರೋದ್ಧರಣದೂಷಿತಮ್ ||೫೮||

---

೫೫. ಕೂದಲನ್ನು ಯಾವಾಗಲೂ ಕೊಡವಿಕೊಳ್ಳಬಾರದು. ಹಾಗು ಬಟ್ಟೆಯನ್ನು ಕೊಡವಬಾರದು. ಸ್ನಾನಮಾಡಿಕೊಳ್ಳದ ಸಮಯದಲ್ಲಿ ಯಾವಾಗಲೂ ಜ್ಞಾನಿಯಾದ ಗೃಹಸ್ಥನು ಸುಗಂಧದ್ರವ್ಯವನ್ನು ಲೇಪನ ಮಾಡಿಕೊಳ್ಳಬಾರದು.

೫೬. ಕೆಂಪು ವಸ್ತ್ರವನ್ನು ಧರಿಸಬಾರದು. ಹಾಗು ಚಿತ್ರ ಬಣ್ಣದ ವಸ್ತ್ರ, ಕಪ್ಪು ವಸ್ತ್ರಗಳನ್ನು ಉಪಯೋಗಿಸಬಾರದು. ಮತ್ತೊಬ್ಬನಿಂದ ಉಪಯೋಗಿಸಲ್ಪಟ್ಟ ಬಟ್ಟೆ ಅಥವಾ ಅಲಂಕಾರಗಳನ್ನು ಬದಲಾಯಿಸಿಕೊಂಡು ಅದನ್ನು ಉಪಯೋಗಿಸಬಾರದು.

೫೭. ಯಾವ ವಸ್ತ್ರವು ಸೆರಗು ಇಲ್ಲದಂತಾಗಿರುವುದೊ ; ಅಥವಾ ಬಹಳ ಕೆಟ್ಟುಹೋಗಿರುವುದೊ ; ಅಂತಹ ಬಟ್ಟೆಯನ್ನು ವರ್ಜಿಸಬೇಕು.

೫೮. ಕೂದಲು, ಕೃಮಿ-ಕೀಟಗಳಿಂದ ಕೆಟ್ಟುಹೋದದ್ದು, ನಾಯಿಯಿಂದ ಮೂಸಿ ನೋಡಲ್ಪಟ್ಟಿರುವುದು, ನೆಕ್ಕಿ ಇಟ್ಟಿರುವುದು. ರುಚಿ ಕೆಟ್ಟಿರುವುದು ಮತ್ತು ಸಾರಾಂಶವನ್ನು ಬೇರ್ಪಡಿಸಿ ಮಿಕ್ಕಿರುವುದು—ಈ ವಿಧವಾದ ಅನ್ನವನ್ನು ವರ್ಜಿಸಬೇಕು.

ಪೃಷ್ಠಮಾಂಸಂ ವೃಥಾಮಾಂಸಂ ವರ್ಜ್ಯಮಾಂಸಂ ಚ ಪುತ್ರಕ ।
ನ ಭಕ್ಷಯೀತ ಸತತಂ ಪ್ರತ್ಯಕ್ಷಲವಣಾನಿ ಚ ॥೫೯॥

ವರ್ಜ್ಯಂ ಚಿರೋಷಿತಂ ಪುತ್ರ ಭಕ್ತಂ ಪರ್ಯುಷಿತಂ ಚ ಯತ್॥೬೦॥

ಪಿಷ್ಟಶಾಕೇಕ್ಷುಪಯಸಾಂ ವಿಕಾರಾ ನೃಪನನ್ದನ ।
ತಥಾ ಮಾಂಸವಿಕಾರಾಶ್ಚ ತೇ ಚ ವರ್ಜ್ಯಾಶ್ಚಿರೋಷಿತಾಃ ॥೬೧॥

ಉದಯಾಸ್ತಮನೇ ಭಾನೋಃ ಶಯನಂ ಚ ವಿವರ್ಜಯೇತ್ ॥೬೨॥

---

೫೯. ಪುತ್ರನೆ! ಪೃಷ್ಠಭಾಗದ ಮಾಂಸ, ನಿಸ್ಸಾರವಾದ ಮಾಂಸ, ಶಾಸ್ತ್ರವಿಷಿದ್ಧವಾದ ಮಾಂಸಗಳನ್ನು ಯಾವಾಗಲೂ ಭುಂಜಿಸಬಾರದು. ಹಾಗು ಪ್ರತ್ಯಕ್ಷವಾಗಿ ಲವಣವನ್ನು ಉಪಯೋಗಿಸಬಾರದು. ಸಿದ್ಧವಾದ ಅಡಿಗೆಯಲ್ಲಿ ಉಪ್ಪನ್ನು ಸೇರಿಸಿಕೊಳ್ಳುವುದು ಪ್ರತ್ಯಕ್ಷಲವಣದ ಉಪಯೋಗವೆಂದು ಭಾವಿಸ ಬೇಕು. ಅದು ನಿಷೇಧಿಸಲ್ಪಟ್ಟದೆ.

೬೦. ಪುತ್ರನೆ! ಯಾವುದೇ ಆಹಾರವಾದರೂ ಬಹಳ ಕಾಲವು ಕಳೆ-ದಿರುವುದಾದರೆ ಅದು ಉಪಯೋಗಕ್ಕೆ ಅರ್ಹವಾಗುವುದಿಲ್ಲ. ಹಾಗು ತಂಗಳು ಅನ್ನವನ್ನು ವರ್ಜಿಸಬೇಕು.

೬೧. ರಾಜಕುಮಾರನೆ! ಹಿಟ್ಟು, ಶಾಕ, ಕಬ್ಬು, ಹಾಲು—ಇವು-ಗಳಿಂದ ತಯಾರಿಸಿದ ವಿಕಾರ ವಸ್ತುಗಳನ್ನು ಸೇವಿಸಬಾರದು. ಹಾಗು ಬಹಳ ಹೊತ್ತು ಕಳೆದ ಮಾಂಸದ ವಿಕಾರರೂಪವಾದ ವಸ್ತುಗಳನ್ನು ವರ್ಜಿಸಬೇಕು.

೬೨. ಸೂರ್ಯನು ಉದಯಿಸುತ್ತಿರುವ ಹೊತ್ತಿನಲ್ಲಿಯೂ ಹಾಗು ಅಸ್ತಮಯವನ್ನು ಹೊಂದುತ್ತಿರುವ ಹೊತ್ತಿನಲ್ಲಿಯೂ ಶಯನವನ್ನು ವರ್ಜಿಸ-ಬೇಕು. ಸೂರ್ಯೋದಯದ ಸಮಯದಲ್ಲಿ ನಿದ್ರಿಸುವವನು "ಅಭ್ಯುದಿತ" ಎಂದೂ ಅಸ್ತಮಯ ಸಮಯದಲ್ಲಿ ನಿದ್ರಿಸುವವನು ಅಭಿನಿರ್ಮುಕ್ತ ಎಂದೂ ಕರೆಯಲ್ಪಡು-ವರು. ಆ ಸಮಯಗಳಲ್ಲಿ ನಿದ್ರೆಮಾಡುವುದು ನಿಷಿದ್ಧವಾಗಿದೆ.

ನಾಸ್ನಾತೋ ನೈವ ಸಂವಿಷ್ಟೋ ನ ಚೈವಾನ್ಯಮನಾ ನರಃ ।
ನ ಚೈವ ಶಯನೇ ನೋರ್ವ್ಯಾಮುಪವಿಷ್ಟೋ ನ ಶಬ್ದವತ್ ॥೬೩॥

ನ ಚೈಕವಸ್ತ್ರೋ ನ ವದನ್ ಪ್ರೇಕ್ಷತಾಮಪ್ರದಾಯ ಚ ।
ಭುಞ್ಜೀತ ಪುರುಷಃ ಸ್ನಾತಃ ಸಾಯಂ ಪ್ರಾತರ್ಯಥಾವಿಧಿ ॥೬೪॥

ಪರದಾರಾ ನ ಗನ್ತವ್ಯಾಃ ಪುರುಷೇಣ ವಿಪಶ್ಚಿತಾ ।
ಇಷ್ಟಾಪೂರ್ತಾಯುಷಾಂ ಹನ್ತ್ರೀ ಪರದಾರಗತಿರ್ನೃಣಾಮ್ ॥೬೫॥

ನ ಹೀದೃಶಮನಾಯುಷ್ಯಂ ಲೋಕೇ ಕಿಂಚನ ವಿದ್ಯತೇ ।
ಯಾದೃಶಂ ಪುರುಷಸ್ಯೇಹ ಪರದಾರಾಭಿಮರ್ಶನಮ್ ॥೬೬॥

---

೬೩. ಸ್ನಾನವಿಲ್ಲದವನೂ, ಮಲಗಿಕೊಂಡಿರುವವನೂ, ಬೇರೊಂದು ಕಡೆಯಲ್ಲಿ ಮನಸ್ಸುಳ್ಳವನೂ, ಹಾಸಿಗೆ ಅಥವಾ ನೆಲದಲ್ಲಿ ಕುಳಿತುಕೊಂಡವನೂ ಆದ ಮಾನವನು ಆ ಸಮಯದಲ್ಲಿ ಭುಂಜಿಸಬಾರದು. ಮತ್ತು ಶಬ್ದ ಕೇಳಿಸುವ ಹಾಗೆ ಊಟಮಾಡಬಾರದು.

೬೪. ಒಂದು ವಸ್ತ್ರವನ್ನು ಮಾತ್ರ ಧರಿಸಿಕೊಂಡವನೂ, ಮಾತನಾಡುವವನೂ ಆಗಿ ಆಹಾರವನ್ನು ಸೇವಿಸಬಾರದು. ಬೇರೊಬ್ಬರು ನೋಡುತ್ತಿರುವಾಗ ಅವರಿಗೆ ಕೊಡದೆ ತಾನೊಬ್ಬನು ಭುಂಜಿಸಕೂಡದು. ಸ್ನಾನಮಾಡಿ ಪವಿತ್ರನಾಗಿ ಸಾಯಂಪ್ರಾತಃಕಾಲಗಳಲ್ಲಿ ಯಥಾವಿಧಿಯಾಗಿ ಊಟಮಾಡಬೇಕು.

೬೫. ಜ್ಞಾನಿಯಾದ ಪುರುಷನು ಪರಸ್ತ್ರೀಸಂಗವನ್ನು ಎಂದಿಗೂ ಮಾಡಬಾರದು. ಮಾನವರಿಗೆ ಪರಸ್ತ್ರೀಸಂಗವೆಂಬುದು ಇಷ್ಟ-ಪೂರ್ತವೆಂಬ ಹೆಚ್ಚಿನ ಪುಣ್ಯಕರ್ಮವನ್ನು ನಾಶಗೊಳಿಸುವುದಲ್ಲದೆ ಆಯುಷ್ಯವನ್ನು ಕ್ಷಯಗೊಳಿಸುವುದು

೬೬. ಪುರುಷನಿಗೆ ಪರಸ್ತ್ರೀಸಂಗವೆಂಬುದು ಎಷ್ಟರಮಟ್ಟಿಗೆ ಆಯುಷ್ಯಕ್ಕೆ ಭಂಗವನ್ನು ಉಂಟುಮಾಡುವುದೊ ; ಅಷ್ಟು ಆಯುಷ್ಯಘಾತಕವು ಲೋಕದಲ್ಲಿ ಬೇರೆ ಯಾವುದೂ ಇಲ್ಲ.

ದೇವಾರ್ಚನಾಗ್ನಿಕಾರ್ಯಾಣಿ ತಥಾ ಗುರ್ವಭಿವಾದನಮ್ ।
ಕುರ್ವೀತ ಸಮ್ಯಗಾಚಮ್ಯ ತದ್ವದನ್ನಭುಜಿಕ್ರಿಯಾಮ್ ॥೬೭॥

ಅಫೇನಾಭಿರಗನ್ಧಾಭಿರದ್ಭಿರಚ್ಛಾಭಿರಾದರಾತ್ ।
ಆಚಾಮೇತ್ಪುತ್ರ ಪುಣ್ಯಾಭಿಃ ಪ್ರಾಙ್ಮುಖೋ ವಾಪ್ಯುದಙ್ಮುಖಃ॥೬೮॥

ಅನ್ತರ್ಜಲಾದಾವಸಥಾದ್ವಲ್ಮೀಕಾನ್ಮೂಷಿಕಸ್ಥಲಾತ್ ।
ಕೃತಶೌಚಾವಶಿಷ್ಟಾಚ್ಚ ವರ್ಜಯೇತ್ಪಞ್ಚ ವೈ ಮೃದಃ ॥೬೯॥

ಪ್ರಕ್ಷಾಲ್ಯ ಹಸ್ತೌ ಪಾದೌ ಚ ಸಮಭ್ಯುಕ್ಷ್ಯ ಸಮಾಹಿತಃ ।
ಅನ್ತರ್ಜಾನುಸ್ತಥಾಚಾಮೇತ್ತ್ರಿಶ್ಚತುರ್ವಾ ಪಿಬೇದಪಃ ॥೭೦॥

---

೬೭. ಮೊದಲು ಯಥಾವಿಧಿಯಾಗಿ ಆಚಮನಮಾಡಿ ಅದರಿಂದ ಶುಚಿತ್ವವನ್ನು ಹೊಂದಿ ದೇವಾರ್ಚನ, ಅಗ್ನಿಕಾರ್ಯ, ಗುರುವಂದನಗಳನ್ನು ಮಾಡಬೇಕು. ಅದರಂತೆ ಭೋಜನದ ಪ್ರಾರಂಭದಲ್ಲಿ ಆಚಮನಮಾಡಬೇಕು.

೬೮. ಪುತ್ರನೆ! ಪೂರ್ವದಿಕ್ಕಿಗಾಗಲಿ, ಉತ್ತರಕ್ಕಾಗಲಿ ಅಭಿಮುಖನಾಗಿ ಕುಳಿತುಕೊಂಡು ನೊರೆಯಿಲ್ಲದ, ವಾಸನೆಯಿಲ್ಲದ, ನಿರ್ಮಲವಾದ ಮತ್ತು ಪವಿತ್ರವಾದ ನೀರಿನಿಂದ ಆದರಪೂರ್ವಕವಾಗಿ ಆಚಮನವನ್ನು ಮಾಡಬೇಕು.

೬೯. ಶೌಚಾನುಷ್ಠಾನಕ್ಕೆ ಮೃತ್ತಿಕೆಯನ್ನು ಉಪಯೋಗಿಸಬೇಕು. ಅವುಗಳಲ್ಲಿ ನೀರಿನ ಒಳಗಿರುವುದು, ಮನೆಯ ಒಳಗಿರುವುದು, ಹುತ್ತದಲ್ಲಿರುವುದು, ಇಲಿಯ ಬಿಲದಲ್ಲಿರುವುದು ಮತ್ತು ಶೌಚಕ್ಕೆ ಉಪಯೋಗಿಸಿ ಮಿಕ್ಕಿರುವುದು-- ಈ ಐದು ಮೃತ್ತಿಕೆಗಳನ್ನು ತ್ಯಜಿಸಬೇಕು.

೭೦. ಪುರುಷನು ಶಾಂತಚಿತ್ತನಾಗಿ ಕೈ-ಕಾಲುಗಳನ್ನು ಚನ್ನಾಗಿ ತೊಳೆದುಕೊಂಡು ಮತ್ತೆ ಪ್ರೋಕ್ಷಿಸಿಕೊಂಡು ಮುಂಡಿಯೊಳಭಾಗದಲ್ಲಿ ಕೈಗಳನ್ನು ಇಟ್ಟುಕೊಂಡು ಆಚಮನಮಾಡಬೇಕು. ಆಚಮನಕ್ಕೆ ಅಂಗವಾಗಿ ಮೂರುಸಲ ಅಥವಾ ನಾಲ್ಕುಸಲ ನೀರನ್ನು ಸೇವಿಸಬೇಕು.

ಪರಿಮೃಜ್ಯ ದ್ವಿರಾಸ್ಯಾನ್ತಂ ಖಾನಿ ಮೂರ್ಧಾನಮೇವ ಚ ।
ಸಮ್ಯಗಾಚಮ್ಯ ತೋಯೇನ ಕ್ರಿಯಾಂ ಕುರ್ವೀತ ವೈ ಶುಚಿಃ ॥೨೧॥

ದೇವತಾನಾಮೃಷೀಣಾಂ ಚ ಪಿತೃಣಾಂ ಚೈವ ಯತ್ನತಃ ।
ಸಮಾಹಿತಮನಾ ಭೂತ್ವಾ ಕುರ್ವೀತ ಸತತಂ ನರಃ ॥೨೨॥

ಕ್ಷುತ್ವಾ ನಿಷ್ಠೀವ್ಯ ವಾಸಶ್ಚ ಪರಿಧಾಯಾಚಮೇದ್ಬುಧಃ ॥೨೩॥

ಕ್ಷುತೇಽವಲೀಢೇ ವಾನ್ತೇ ಚ ತಥಾ ನಿಷ್ಠೀವನಾದಿಷು ।
ಕುರ್ಯಾದಾಚಮನಂ ಸ್ಪರ್ಶಂ ಗೋಪೃಷ್ಠಸ್ಯಾರ್ಕದರ್ಶನಮ್॥೨೪॥

ಕುರ್ವೀತಾಲಮ್ಭನಂ ಚಾಪಿ ದಕ್ಷಿಣಶ್ರವಣಸ್ಯ ವೈ ।
ಯಥಾವಿಭವತೋ ಹ್ಯೇತತ್ಪೂರ್ವಾಭಾವೇ ತತಃ ಪರಮ್ ॥೨೫॥

---

೨೧. ಹೀಗೆ ಆಚಮನಮಾಡಿ ಎರಡುಸಲ ಮುಖವನ್ನು ಒರೆಸಿಕೊಂಡು ಕಣ್ಣು-ಕಿವಿ ಮೂಗು ಇವುಗಳನ್ನು ಸ್ಪರ್ಶಮಾಡಿ ತಲೆಯನ್ನು ಸ್ಪರ್ಶಿಸಬೇಕು. ಯಥಾವಿಧಿಯಾಗಿ ಆಚಮನವನ್ನು ಮಾಡಿದ ಪುರುಷನು ಮಾತ್ರ ಶುಚಿಯಾಗುವುದರಿಂದ ಅವನು ವಿಹಿತಕರ್ಮಾನುಷ್ಠಾನಕ್ಕೆ ಅರ್ಹನಾಗುವನು.

೨೨. ಗೃಹಸ್ಥಾಶ್ರಮಿಯಾದ ಮಾನವನು ಯಾವಾಗಲೂ ಏಕಾಗ್ರತೆಯಿಂದ ಕೂಡಿ ಸಮಾಧಾನವಾದ ಮನಸ್ಸುಳ್ಳವನಾಗಿ ದೇವತಾ-ಪಿತೃ-ಋಷಿಗಳನ್ನು ತೃಪ್ತಿಪಡಿಸುವ ವಿಹಿತಕರ್ಮಗಳನ್ನು ಯತ್ನಪೂರ್ವಕವಾಗಿ ಆಚರಿಸಬೇಕು.

೨೩. ವಿದ್ವಾಂಸನಾದ ಪುರುಷನು ಸೀನುಬಂದ ಸಮಯದಲ್ಲಿ, ಉಗುಳನ್ನು ಹೊರಗಡೆ ಉಗುಳಿದ ಸಮಯದಲ್ಲಿ ಮತ್ತು ಬಟ್ಟೆಯನ್ನು ಧರಿಸಿಕೊಂಡ ಕೂಡಲೆ ಆಚಮನವನ್ನು ಮಾಡಬೇಕು.

೨೪. ಸೀನುವುದು, ಕಡಿಯುವುದು, ವಮನಮಾಡುವುದು ಮತ್ತು ಎಂಜಲನ್ನು ಉಗುಳುವುದು—ಈ ಪ್ರಸಂಗಗಳಲ್ಲಿ ಶುದ್ಧಿಗೋಸ್ಕರ ಆಚಮನ-ಗೋವಿನ ಬೆನ್ನಿನ ಸ್ಪರ್ಶ ಮತ್ತು ಸೂರ್ಯದರ್ಶನಗಳನ್ನು ಮಾಡಬೇಕು.

೨೫. ಮತ್ತು ಬಲಭಾಗದ ಕಿವಿಯ ಸ್ಪರ್ಶವನ್ನು ಮಾಡಿಕೊಳ್ಳಬೇಕು. ಆಚಮನ-ಗೋಸ್ಪರ್ಶ ಮುಂತಾದುವುಗಳಲ್ಲಿ ಕ್ರಮವಾಗಿ ಮೊದಲನೆಯದಕ್ಕೆ ಅವಕಾಶವಿಲ್ಲದಿರುವಾಗ ಯಥಾಶಕ್ತಿಯಾಗಿ ಎರಡನೆಯದನ್ನು ಮಾಡಬೇಕಾದುದು.

ಅವಿದ್ಯಮಾನೇ ಪೂರ್ವೋಕ್ತೇ ಉತ್ತರಪ್ರಾಪ್ತಿರಿಷ್ಯತೇ ।
ನ ಕುರ್ಯಾದ್ದನ್ತಸಂಘರ್ಷಂ ನಾತ್ಮನೋ ದೇಹತಾಡನಮ್ ॥೭೬॥

ಸ್ವಪ್ನಾಧ್ಯಾಪನಭೋಜ್ಯಾನಿ ಸ್ವಾಧ್ಯಾಯಂ ಚ ವಿವರ್ಜಯೇತ್ ।
ಸನ್ಧ್ಯಯಾಂ ಮೈಥುನಂ ಚಾಪಿ ತಥಾ ಪ್ರಸ್ಥಾನಮೇವ ಚ ॥೭೭॥

ಪೂರ್ವಾಹ್ಣೇ ತಾತ ದೇವಾನಾಂ ಮನುಷ್ಯಾಣಾಂ ಚ ಮಧ್ಯಮೇ ।
ಭಕ್ತ್ಯಾ ತಥಾಪರಾಹ್ಣೇ ಚ ಕುರ್ವೀತ ಪಿತೃಪೂಜನಮ್ ॥೭೮॥

ಶಿರಃಸ್ನಾತಶ್ಚ ಕುರ್ವೀತ ದೈವಂ ಪೈತ್ರ್ಯಮಥಾಪಿ ವಾ ।
ಪ್ರಾಙ್ಮುಖೋದಙ್ಮುಖೋ ವಾಪಿ ಶ್ಮಶ್ರುಕರ್ಮ ಚ ಕಾರಯೇತ್ ॥೭೯॥

---

೭೬. ಮೊದಲು ಹೇಳಿರುವ ಶುದ್ಧಿನಿಮಿತ್ತಕ್ಕೆ ಅನುಷ್ಠಾನವು ಸಂಭವಿಸುವಂತಿದ್ದರೆ ಅದನ್ನು ಮಾಡಬೇಕು. ಇಲ್ಲದಿದ್ದರೆ ಎರಡನೆಯ ನಿಮಿತ್ತವು ಆಚರಣಾರ್ಹವಾಗುವುದು. ನಿಮಿತ್ತವಿಲ್ಲದೆ ಹಲ್ಲುಗಳನ್ನು ಕಡಿಯುವುದು, ತನ್ನ ದೇಹವನ್ನು ತಾನು ಹೊಡೆದುಕೊಳ್ಳುವುದು—ಇವುಗಳನ್ನು ಬಿಡಬೇಕು.

೭೭. ಸಂಧ್ಯಾಸಮಯದಲ್ಲಿ ನಿದ್ರಿಸುವುದು, ವೇದವನ್ನು ಕಲಿಸುವುದು, ಭೋಜನ, ವೇದಾಧ್ಯಯನ, ಸ್ತ್ರೀಸಂಗ ಮತ್ತು ಪರಸ್ಥಳಕ್ಕೆ ಪ್ರಯಾಣ—ಇವುಗಳನ್ನು ಮಾಡಕೂಡದು.

೭೮. ಪುತ್ರನೆ! ದೇವತೆಗಳ ಅರ್ಚನೆಯನ್ನು ಪೂರ್ವಾಹ್ಣದಲ್ಲಿ ಮಾಡಬೇಕು. ಮನುಷ್ಯರ ಅರ್ಚನೆಯನ್ನು ಮಧ್ಯಾಹ್ನದಲ್ಲಿ ಮಾಡಬೇಕು. ಮತ್ತು ಪಿತೃಗಳ ಅರ್ಚನೆಯನ್ನು ಭಕ್ತಿಯಿಂದ ಅಪರಾಹ್ಣಸಮಯದಲ್ಲಿ ಮಾಡಬೇಕು.

೭೯. ದೇವತೆಗಳ ಅರ್ಚನೆಯನ್ನೂ ಮತ್ತು ಪಿತೃಕರ್ಮವನ್ನೂ ತಲೆಯ ಮೇಲೆ ಸ್ನಾನಮಾಡಿಕೊಂಡು ಶುಚಿಯಾಗಿ ಮಾಡಬೇಕು. ಪೂರ್ವದಿಕ್ಕಿಗಾಗಲಿ ಉತ್ತರದಿಕ್ಕಿಗಾಗಲಿ ಅಭಿಮುಖನಾಗಿ ಕುಳಿತುಕೊಂಡು ಕ್ಷೌರಕರ್ಮವನ್ನು ಮಾಡಿಸಬೇಕು.

ವ್ಯಙ್ಗಾಂ ವಿವರ್ಜಯೇತ್ಕನ್ಯಾಮಕುಲಾಂ ಚಾಪಿ ರೋಗಿಣೀಮ್ ।
ವಿಕೃತಾಂ ಪಿಙ್ಗಲಾಂ ಚೈವ ವಾಚಾಲಾಂ ಸರ್ವದೂಷಿತಾಮ್ ॥೮೦॥

ಅವ್ಯಙ್ಗಾಙ್ಗೀಂ ಸೌಮ್ಯನಾಮ್ನೀಂ ಸರ್ವಲಕ್ಷಣಲಕ್ಷಿತಾಮ್ ।
ತಾದೃಶೀಮುದ್ವಹೇತ್ಕನ್ಯಾಂ ಶ್ರೇಯಸ್ಕಾಮೋ ನರಃ ಸದಾ ॥೮೧॥

ಉದ್ವಹೇತ್ಪಿತೃಮಾತೃಭ್ಯಃ ಸಪ್ತಮೀಂ ಪಞ್ಚಮೀಂ ತಥಾ ।
ರಕ್ಷೇದ್ದಾರಾಂಸ್ತ್ಯಜೇದೀರ್ಷ್ಯಾಂ ದಿವಾ ಚ ಸ್ವಪ್ನಮೈಥುನೇ ॥೮೨॥

ಪರೋಪತಾಪಕಂ ಕರ್ಮ ಜನ್ತುಪೀಡಾಂ ಚ ವರ್ಜಯೇತ್ ।
ಉದಕ್ಯಾಃ ಸರ್ವವರ್ಣಾನಾಂ ವರ್ಜ್ಯಾ ರಾತ್ರಿಚತುಷ್ಟಯಮ್ ॥೮೩॥

---

೮೦. ಗೃಹಸ್ಥನು ಕನ್ಯಾಪಾಣಿಗ್ರಹಣ ಸಮಯದಲ್ಲಿ ಮುಂದೆ ಹೇಳುವ ದೋಷಗಳಿರುವವಳನ್ನು ವರ್ಜಿಸಬೇಕು. ಊನಾಂಗಿ, ದುಷ್ಕುಲದಲ್ಲಿ ಜನಿಸಿದವಳು, ರೋಗಿಣೀ, ವಿಕಾರವುಳ್ಳವಳು, ಪಿಂಗಲವರ್ಣವುಳ್ಳವಳು, ಬಹಳ ಮಾತನಾಡುವವಳು ಮತ್ತು ಎಲ್ಲರಿಂದಲೂ ದೂಷಿಸಲ್ಪಟ್ಟವಳು—ಇಂತಹ ಕನ್ಯೆಯನ್ನು ವರ್ಜಿಸಬೇಕು.

೮೧. ಶ್ರೇಯಸ್ಸನ್ನು ಅಪೇಕ್ಷಿಸುವ ಮಾನವನು ಯಾವಾಗಲೂ ಊನಾಂಗಿಯಲ್ಲದವಳು, ಸೌಮ್ಯವಾದ ನಾಮಾಂಕನವುಳ್ಳವಳು ಮತ್ತು ಎಲ್ಲ ಸುಲಕ್ಷಣಗಳಿಂದ ಕೂಡಿದವಳು—ಇಂತಹ ಕನ್ಯೆಯನ್ನು ಮಾತ್ರ ಪಾಣಿಗ್ರಹಣಮಾಡಿಕೊಳ್ಳಬೇಕು.

೮೨. ಪಿತೃವರ್ಗದಿಂದ ಏಳನೆಯವಳೂ ಮಾತೃಪಕ್ಷದಿಂದ ಐದನೆಯವಳೂ ಆದ ಕನ್ಯೆಯನ್ನು ಮದುವೆಯಾಗಬಹುದು. ಅದಕ್ಕಿಂತಲೂ ಸಮೀಪಿಸಿದವಳನ್ನು ಮದುವೆಯಾಗಬಾರದು. ಅಂತಹ ಪತ್ನಿಯನ್ನು ರಕ್ಷಿಸಬೇಕು. ಮತ್ತು ಆಕೆಯಲ್ಲಿ ಈರ್ಷ್ಯೆಯನ್ನೂ, ದಿವಾಸ್ವಪ್ನ-ಮೈಥುನಗಳನ್ನೂ ವರ್ಜಿಸಬೇಕು.

೮೩. ಪರರಿಗೆ ಸಂಕಟವನ್ನುಂಟುಮಾಡುವ ಕರ್ಮವನ್ನೂ ಪ್ರಾಣಿಹಿಂಸೆಯನ್ನೂ ಬಿಡಬೇಕು. ಎಲ್ಲ ವರ್ಣಗಳಲ್ಲಿಯೂ ರಜಸ್ವಲೆಯರಾದ ಸ್ತ್ರೀಯರಲ್ಲಿ ನಾಲ್ಕು ದಿನಗಳವರೆಗೆ ಸಂಗವನ್ನು ವರ್ಜಿಸಬೇಕು.

ಸ್ತ್ರೀಜನ್ಮಪರಿಹಾರಾರ್ಥಂ ಪಞ್ಚಮೀಮಪಿ ವರ್ಜಯೇತ್ ।
ತತಃ ಷಷ್ಠ್ಯಾಂ ವ್ರಜೇದ್ರಾತ್ರ್ಯಾಂ ಶ್ರೇಷ್ಠಾ ಯುಗ್ಮಾಃ ಸುಪುತ್ರಕ ॥೮೪॥

ಪರ್ವಾಣಿ ವರ್ಜಯೇನ್ನಿತ್ಯಮೃತುಕಾಲೇಽಪಿ ಯೋಷಿತಃ ।
ತಸ್ಮಾನ್ನಿತ್ಯಂ ನರೋ ಗಚ್ಛೇಚ್ಛೇಷಯುಗ್ಮಾಸು ಪುತ್ರಕ ॥೮೫॥

ಯುಗ್ಮಾಸು ಪುತ್ರಾ ಜಾಯನ್ತೇ ಸ್ತ್ರಿಯೋಽಯುಗ್ಮಾಸು ರಾತ್ರಿಷು ।
ತಸ್ಮಾದ್ಯುಗ್ಮಾಸು ಪುತ್ರಾರ್ಥೀ ಸಂವಿಶೇತ ಸದಾ ನರಃ ॥೮೬॥

ವಿಧರ್ಮಿಣೋಽಹ್ನಿ ಪೂರ್ವಾಹ್ಣೇ ಸನ್ಧ್ಯಾಕಾಲೇ ಚ ಷಣ್ಢಕಾಃ॥೮೭॥

---

೮೪. ಪುತ್ರನೆ! ಋತುಸ್ನಾತಳಾದ ಸ್ತ್ರೀಯಲ್ಲಿ ಕೂಡ ಐದನೆಯ ದಿನದಲ್ಲಿ ಸಂಗಮಾಡಿದರೆ ಸ್ತ್ರೀಪ್ರಜೆಯು ಹುಟ್ಟುವದಾದುದರಿಂದ ಸ್ತ್ರೀಪ್ರಜೆ-ಯನ್ನು ಪರಿಹರಿಸಲು ಐದನೆಯ ದಿನದಲ್ಲಿಯೂ ಸಂಗವನ್ನು ಮಾಡಬಾರದು. ಆಮೇಲೆ ಆರನೆಯ ದಿನ ಮೊದಲುಗೊಂಡು ಸಮಸಂಖ್ಯೆಯ ರಾತ್ರಿಗಳಲ್ಲಿ ಸಂಗಮಾಡಬೇಕು.

೮೫. ಪುತ್ರನೆ! ಋತುಕಾಲವಾಗಿದ್ದರೂ ಕೂಡ ಸ್ತ್ರೀಸಂಗಮಾಡು-ವುದಕ್ಕೆ ಪರ್ವದಿನಗಳನ್ನು ಯಾವಾಗಲೂ ಬಿಡಬೇಕು. ಆದ್ದರಿಂದ ಪುರುಷನು ಯಾವಾಗಲೂ ನಿಷಿದ್ಧವಾದ ದಿನಗಳನ್ನು ಬಿಟ್ಟು ಉಳಿದ ಯುಗ್ಮದಿನಗಳಲ್ಲಿ ಮಾತ್ರ ಸ್ತ್ರೀಭೋಗವನ್ನು ಅನುಭವಿಸಬೇಕು.

೮೬. ಋತುಸಮಯದ ರಾತ್ರಿಗಳಲ್ಲಿ ಯುಗ್ಮರಾತ್ರಿಗಳಲ್ಲಿ ಸಂಗಮಾಡು-ವುದರಿಂದ ಪುತ್ರರು ಜನಿಸುವರು. ಹಾಗು ವಿಷಮಸಂಖ್ಯೆಯ ರಾತ್ರಿಗಳಲ್ಲಿ ಸಂಗಮಾಡುವುದರಿಂದ ಕನ್ಯೆಯರು ಜನಿಸುವರು. ಆದ್ದರಿಂದ ಪುತ್ರಾರ್ಥಿಯಾದ ಪುರುಷನು ಯಾವಾಗಲೂ ಯುಗ್ಮರಾತ್ರಿಗಳಲ್ಲಿ ಮಾತ್ರ ಸಂಗಸುಖವನ್ನು ಅನುಭವಿಸಬೇಕು.

೮೭. ನಿಷಿದ್ಧವಾದ ಪೂರ್ವಾಹ್ಣ-ಸಂಧ್ಯಾಕಾಲ ಮುಂತಾದ ಸಮಯ-ಗಳಲ್ಲಿ ಸ್ತ್ರೀಸಂಗಮಾಡುವುದರಿಂದ ದುಷ್ಟಪ್ರಜೆಯು ಜನಿಸುವುದು. ಪೂರ್ವಾಹ್ಣ-ದಲ್ಲಿ ಸಂಗದಿಂದ ಪರಧರ್ಮಾವಲಂಬಿಯಾಗುವವರೂ, ಸಂಧ್ಯಾಕಾಲದಲ್ಲಿ ಸಂಗದಿಂದ ಷಂಢಪುತ್ರರೂ ಹುಟ್ಟುತ್ತಾರೆ.

ಕ್ಷುರಕರ್ಮಣಿ ವಾನ್ತೇ ಚ ಸ್ತ್ರೀಸಂಭೋಗೇ ಚ ಪುತ್ರಕ ।
ಸ್ನಾಯೀತ ಚೈಲವಾನ್ ಪ್ರಾಜ್ಞಃ ಕಟಭೂಮಿಮುಪೇತ್ಯ ಚ ॥೮೮॥

ದೇವವೇದದ್ವಿಜಾತೀನಾಂ ಸಾಧುಸಭ್ಯಮಹಾತ್ಮನಾಮ್ ।
ಗುರೋಃ ಪತಿವ್ರತಾನಾಂ ಚ ತಥಾ ಯಜ್ವಿತಪಸ್ವಿನಾಮ್ ॥೮೯॥

ಪರೀವಾದಂ ನ ಕುರ್ವೀತ ಪರಿಹಾಸಂ ಚ ಪುತ್ರಕ ।
ಕುರ್ವತಾಮವಿನೀತಾನಾಂ ನ ಶ್ರೋತವ್ಯಂ ಕಥಂ ಚನ ॥೯೦॥

ದೇವಪಿತ್ರ್ಯಾತಿಥೇಯಾಶ್ಚ ಕ್ರಿಯಾಃ ಕುರ್ವೀತ ವೈ ಬುಧಃ ।
ಸ್ವಾಧ್ಯಾಯಂ ಚಾಪಿ ಕುರ್ವೀತ ಯಥಾಶಕ್ತ್ಯಾ ಹ್ಯತನ್ದ್ರಿತಃ ॥೯೧॥

---

೮೮. ಪುತ್ರನೆ! ಕ್ಷೌರಕರ್ಮವನ್ನು ಮಾಡಿಸಿಕೊಂಡಿರುವಾಗಲೂ, ವಮನಮಾಡಿದಾಗಲೂ ಮತ್ತು ಸ್ತ್ರೀಯೊಡನೆ ರಮಿಸಿದಾಗಲೂ ಪ್ರಾಜ್ಞ ಮಾನವನು ಬೇರೊಂದು ಶುದ್ಧವಾದ ಸ್ಥಳಕ್ಕೆ ಬಂದು ಉಟ್ಟಿರುವ ವಸ್ತ್ರದೊಡನೆ ಹಾಗೆಯೆ ಸ್ನಾನಮಾಡಬೇಕು.

೮೯. ದೇವತೆ, ವೇದ, ದ್ವಿಜ, ಸಾಧುಜನ, ಸಭಾರ್ಹಜನ, ಮಹಾತ್ಮ, ಗುರು, ಪತಿವ್ರತಾಸ್ತ್ರೀ, ಯಾಗಮಾಡಿದವನು ಮತ್ತು ತಪಸ್ವಿ ಇವರು ಮಾನ್ಯರಾದ ವ್ಯಕ್ತಿಗಳಾದುದರಿಂದ ಇವರ ನಿಂದೆಯನ್ನು ಯಾವಾಗಲೂ ಮಾಡಬಾರದು.

೯೦. ಪುತ್ರನೆ! ಹಿಂದೆ ಹೇಳಿರುವ ಪೂಜ್ಯವ್ಯಕ್ತಿಗಳ ನಿಂದೆಯನ್ನೂ ಅಥವಾ ಪರಿಹಾಸವನ್ನೂ ಯಾವಾಗಲೂ ಮಾಡಬಾರದು. ಮತ್ತು ಬೇರೊಬ್ಬ ಅವಿನೀತನಾದ ಮೂರ್ಖನು ನಿಂದಿಸುತ್ತಿರುವುದನ್ನು ಕೇಳುತ್ತಲೂ ಇರಬಾರದು.

೯೧. ಪ್ರಾಜ್ಞನಾದ ಗೃಹಸ್ಥನು ದೇವತೆ-ಪಿತೃ-ಅತಿಥಿಗಳನ್ನು ತೃಪ್ತಿಪಡಿಸುವ ಕರ್ಮಾನುಷ್ಠಾನವನ್ನು ತಪ್ಪದೆ ಆಚರಿಸಬೇಕು. ಮತ್ತು ಆಲಸ್ಯವಿಲ್ಲದವನಾಗಿ ಯಥಾಶಕ್ತಿಯಾಗಿ ವೇದಾಧ್ಯಯನವನ್ನು ಮಾಡಬೇಕು.

ನೋತ್ಕೃಷ್ಟಶಯ್ಯಾಸನಯೋರ್ನಾಪಕೃಷ್ಟಸ್ಯ ಚಾರುಹೇತ್ ।
ನ ಚಾಮಙ್ಗಲ್ಯವೇಷಃ ಸ್ಯಾನ್ನ ಚಾಮಙ್ಗಲ್ಯವಾಗ್ಭವೇತ್ ॥೯೨॥

ಧವಲಾಮ್ಬರಸಂವೀತಃ ಸಿತಪುಷ್ಪವಿಭೂಷಿತಃ ॥೯೩॥

ನೋದ್ಧತೋನ್ಮತ್ತಮೂಢೈಶ್ಚ ನಾವಿನೀತೈಶ್ಚ ಪಣ್ಡಿತಃ ।
ಗಚ್ಛೇನ್ಮೈತ್ರೀಂ ನ ಚಾಶೀಲೈರ್ನ ಚ ಚೌರ್ಯಾದಿದೂಷಿತೈಃ ॥೯೪॥

ನ ಚಾತಿವ್ಯಯಶೀಲೈಶ್ಚ ನ ಲುಬ್ಧೈರ್ನಾಪಿ ವೈರಿಭಿಃ ।
ನಾನೃತಕೈಸ್ತಥಾ ಕ್ರೂರೈಃ ಸಹಾಸೀತ ಕದಾಚನ ॥೯೫॥

---

೯೨. ತನಗಿಂತಲೂ ಶ್ರೇಷ್ಠನೆನಿಸಿದವನ ಶಯನ-ಆಸನಗಳನ್ನು ತಾನು ಉಪಯೋಗಿಸಬಾರದು. ಹಾಗು ತನಗಿಂತಲೂ ಹೀನನ ಶಯನ-ಆಸನಗಳನ್ನು ವರ್ಜಿಸಬೇಕು. ಯಾವಾಗಲೂ ಅಮಂಗಲಕರವಾದ ವೇಷ, ಅಂತಹ ಮಾತು-ಗಳನ್ನು ಬಿಡಬೇಕು.

೯೩. ಸೌಮ್ಯವೂ, ನಿರಾಡಂಬರವೂ ಆದ ವೇಷ-ಭಾಷೆಗಳನ್ನು ಹೊಂದಿರಬೇಕು. ಬೆಳ್ಳಗಿರುವ ವಸ್ತ್ರಗಳನ್ನು ಧರಿಸಿಕೊಳ್ಳಬೇಕು ಮತ್ತು ಬೆಳ್ಳಗಿರುವ ಪುಷ್ಪ-ಮಾಲ್ಯಗಳನ್ನು ಉಪಯೋಗಿಸಿ ಅಲಂಕಾರಮಾಡಿಕೊಳ್ಳಬೇಕು.

೯೪. ಕೊಬ್ಬಿಹೋದವನು, ಉನ್ಮಾದಹಿಡಿದವನು, ಮೂಢ, ಸಾಧು-ಶೀಲವಿಲ್ಲದವನು, ಮತ್ತು ಕಳ್ಳತನ ಮುಂತಾದ ಕೆಟ್ಟ ಅಭ್ಯಾಸವುಳ್ಳವನು— ಇಂತಹ ಜನರ ಸಂಗಡ ಪ್ರಾಜ್ಞನು ಯಾವಾಗಲೂ ಸ್ನೇಹವನ್ನು ಮಾಡಿಕೊಳ್ಳ-ಬಾರದು.

೯೫. ಮಿತಿಯಿಲ್ಲದಂತೆ ವ್ಯಯಮಾಡುವ ಶೀಲವುಳ್ಳವನು, ಲೋಭಿ, ವೈರಿಜನ, ಯಾವಾಗಲೂ ಸುಳ್ಳುಮಾತುಗಳನ್ನು ಆಡುವವನು ಮತ್ತು ಕ್ರೂರಜನ ಇವರೊಡನೆ ಯಾವಾಗಲೂ ಸಹವಾಸವನ್ನು ಮಾಡಬಾರದು.

ನ ಬನ್ಧಕೀಭಿರ್ನ ನ ನ್ಯೂನೈರ್ಬನ್ಧಕೀಪತಿಭಿಸ್ತಥಾ ।
ಸಾರ್ಧಂ ನ ಬಲಿಭಿಃ ಕುರ್ಯಾನ್ನ ಚ ನ್ಯೂನೈರ್ನ ನಿನ್ದಿತೈಃ ॥೯೬॥

ನ ಸರ್ವಶಙ್ಕಿಭಿರ್ನಿತ್ಯಂ ನ ಚ ದೈವಪರೈರ್ನರೈಃ ॥೯೭॥

ಕುರ್ವೀತ ಸಾಧುಭಿರ್ಮೈತ್ರೀಂ ಸದಾಚಾರಾವಲಮ್ಬಿಭಿಃ ।
ಪ್ರಾಜ್ಞೈರಪಿಶುನೈಃ ಶಕ್ತೈಃ ಕರ್ಮಣ್ಯುದ್ಯೋಗಭಾಗಿಭಿಃ ॥೯೮॥

ವೇದವಿದ್ಯಾವ್ರತಸ್ನಾತೈಃ ಸಹಾಸೀತ ಸದಾ ಬುಧಃ ।
ಸುಹೃದ್ದೀಕ್ಷಿತಭೂಪಾಲಸ್ನಾತಕಶ್ವಶುರೈಃ ಸಹ ॥೯೯॥

---

೯೬. ವೇಶ್ಯಾಸ್ತ್ರೀ, ವೇಶ್ಯೆಯ ಸಂಗವುಳ್ಳವನು ಮತ್ತು ಬಲುಹೀನಜನ ಇವರ ಸಂಗಡ ಕುಳಿತುಕೊಳ್ಳಬಾರದು. ಮತ್ತು ತನಗಿಂತಲೂ ಬಲಿಷ್ಠರು, ನ್ಯೂನರು ಹಾಗು ನಿಂದಾಸ್ಪದಜನರು—ಇವರ ಸಹವಾಸವನ್ನು ದೂರಮಾಡಬೇಕು.

೯೭. ಎಲ್ಲ ವಿಷಯಗಳಲ್ಲಿಯೂ ಸಂದೇಹಪಡುವ ಮನಸ್ಸುಳ್ಳವರು ಮತ್ತು ದೈವಮಾತ್ರವನ್ನು ನಂಬಿ ಉದ್ಯಮವನ್ನು ಬಿಡುವ ಸೋಮಾರಿಯಾದ ಜನರು—ಇವರೊಡನೆ ಸಂಗವನ್ನು ಬೆಳಸಬಾರದು.

೯೮. ಸಾಧುಜನ, ಸದಾಚಾರದಲ್ಲಿ ತತ್ಪರ, ಪ್ರಾಜ್ಞ, ಚಾಡಿ-—ಮುಂತಾದ ದೋಷರಹಿತ, ಶಕ್ತಿವಂತ ಮತ್ತು ಯಾವಾಗಲೂ ಕಾರ್ಯಮಾಡುವ ಉತ್ಸಾಹಪೂರ್ಣ—ಇಂತಹವರೊಡನೆ ಮೈತ್ರಿಯನ್ನು ಮಾಡಬೇಕು ಉತ್ತಮರ ಮೈತ್ರಿಯು ತನಗೆ ಶ್ರೇಯಸ್ಕರವಾಗುವುದು.

೯೯. ಜ್ಞಾನಿಯಾದ ಗೃಹಸ್ಥನು ಗುರುಕುಲದಲ್ಲಿ ವೇದವಿದ್ಯೆಯನ್ನು ಅಧ್ಯಯನಮಾಡಿ ಸಮಾವರ್ತನವನ್ನು ಹೊಂದಿರುವವನು, ಸ್ನಾತಕ, ಸುಹೃತ್, ಶ್ವಶುರ, ದೀಕ್ಷಿತ ಮತ್ತು ರಾಜರೊಡನೆ ಸೇರಿಕೊಂಡಿರುವುದು ಅವನಿಗೆ ಶ್ರೇಯಸ್ಕರವಾಗುವುದು.

ಋತ್ವಿಗಾದೀನ್ ಷಡರ್ಘಾರ್ಹಾನರ್ಚಯೇಚ್ಚ ಗೃಹಾಗತಾನ್ ।
ಯಥಾವಿಭವತಃ ಪುತ್ರ ದ್ವಿಜಾನ್ಸಂವತ್ಸರೋಷಿತಾನ್ ॥೧೦೦॥

ಅರ್ಚಯೇನ್ಮಧುಪರ್ಕೇಣ ಯಥಾಕಾಲಮತನ್ದ್ರಿತಃ ।
ತಿಷ್ಠೇಚ್ಚ ಶಾಸನೇ ತೇಷಾಂ ಶ್ರೇಯಸ್ಕಾಮೋ ದ್ವಿಜೋತ್ತಮಃ॥೧೦೧॥

ನ ಚ ತಾನ್ವಿವದೇದ್ಧೀಮಾನಾಕ್ರುಷ್ಟಶ್ಚಾಪಿ ತೈಃ ಸದಾ ॥೧೦೨॥

ಸಮ್ಯಗ್ಗೃಹಾರ್ಚನಂ ಕೃತ್ವಾ ಯಥಾಸ್ಥಾನಮನುಕ್ರಮಾತ್ ।
ಸಮ್ಪೂಜಯೇತ್ತತೋ ವಹ್ನಿಂ ದದ್ಯಾಚ್ಚೈವಾಹುತೀಃ ಕ್ರಮಾತ್
॥೧೦೩॥

---

೧೦೦. ಪುತ್ರನೆ! ಋತ್ವಿಜ, ಆಚಾರ್ಯ, ಶ್ವಶುರ, ಪಿತೃವ್ಯ, ಮಾತುಲ ಮತ್ತು ರಾಜ ಇವರು ಯಾವಾಗಲೂ ಪೂಜಾರ್ಹರಾಗಿರುವರು. ದ್ವಿಜರು ಒಂದು ಸಂವತ್ಸರದ ಮೇಲೆ ಅತಿಥಿಯಾಗಿ ಬಂದರೆ ತನ್ನ ಶಕ್ತ್ಯನುಸಾರವಾಗಿ ಗೃಹಸ್ಥನು ಅವರನ್ನು ಪೂಜಿಸಬೇಕು.

೧೦೧. ಶ್ರೇಯಸ್ಸನ್ನು ಬಯಸುವವನೂ ಮತ್ತು ಆಚಾರವಂತನೂ ಆದ ಗೃಹಸ್ಥನು ಋತ್ವಿಜ ಮುಂತಾದ ಅತಿಥಿಗಳಿಗೆ ಮಧುಪರ್ಕಪೂರ್ವಕವಾಗಿ ಆಯಾಯ ಸಮಯಗಳಲ್ಲಿ ಪೂಜೆಮಾಡಿ ಆಲಸ್ಯವಿಲ್ಲದೆ ಅವರ ಶಾಸನದಂತೆ ವರ್ತಿಸಿಕೊಂಡಿರಬೇಕು.

೧೦೨. ಹೀಗೆ ಮಾನ್ಯರಾದ ಅತಿಥಿಗಳನ್ನು ಸತ್ಕರಿಸುತ್ತಿರುವ ಸಮಯದಲ್ಲಿ ಒಂದು ವೇಳೆ ಅವರಿಂದ ನಿಂದಿಸಲ್ಪಟ್ಟರೂ ತಾನು ಯಾವಾಗಲೂ ಅವರೊಡನೆ ವಿವಾದವನ್ನು ಮಾಡಬಾರದು.

೧೦೩. ಈ ರೀತಿಯಾಗಿ ಅತಿಥಿಸತ್ಕಾರವನ್ನು ಮಾಡಿ ಆಯಾಯ ಸ್ಥಾನಗಳಲ್ಲಿ ಮಾಡುವ ವಿಧಿಯಂತೆ ಕ್ರಮವಾಗಿ ವಾಸ್ತುಪೂಜೆಯನ್ನು ಮಾಡಿ ಅಗ್ನಿಯನ್ನು ಪ್ರಜ್ವಲನಮಾಡಿ ಪೂಜಿಸಿ ಕ್ರಮವಾಗಿ ಮುಂದೆ ಹೇಳುವಂಥ ಆಹುತಿಗಳನ್ನು ಹೋಮಮಾಡಬೇಕು.

ಪ್ರಥಮಾಂ ಬ್ರಹ್ಮಣೇ ದದ್ಯಾತ್ಪ್ರಜಾನಾಂ ಪತಯೇ ತತಃ ।
ತೃತೀಯಾಂ ಚೈವ ಗುಹ್ಯೇಭ್ಯಃ ಕಶ್ಯಪಾಯ ತಥಾಪರಾಮ್ ॥೧೦೪॥

ತತೋಽನುಮತಯೇ ದತ್ತ್ವಾ ದದ್ಯಾದ್ಗೃಹಬಲಿಂ ತತಃ ।
ಪೂರ್ವಂ ಖ್ಯಾತೋ ಮಯಾ ಯಸ್ತೇ ನಿತ್ಯಕರ್ಮಕ್ರಿಯಾವಿಧಿಃ ॥೧೦೫॥

ವೈಶ್ವದೇವಂ ತತಃ ಕುರ್ಯಾದ್ಬಲಯಸ್ತತ್ರ ಮೇ ಶೃಣು ।
ಯಥಾಸ್ಥಾನವಿಭಾಗಂ ತು ದೇವಾನುದ್ದಿಶ್ಯ ವೈ ಪೃಥಕ್ ॥೧೦೬॥

ಪರ್ಜನ್ಯಾದ್ಭ್ಯೋ ಧರಿತ್ರ್ಯೈ ಚ ದದ್ಯಾಚ್ಚ ಮಣಿಕೇ ತ್ರಯಮ್ ।
ತತೋ ಧಾತುರ್ವಿಧಾತುಶ್ಚ ದದ್ಯಾದ್ದ್ವಾರೇ ಗೃಹಸ್ಯ ತು ॥೧೦೭॥

---

೧೦೪. ಆಗ ಅಗ್ನಿಯಲ್ಲಿ ನಾಲ್ಕು ಆಹುತಿಗಳನ್ನು ಕ್ರಮವಾಗಿ ಆಯಾಯ ಮಂತ್ರಗಳನ್ನು ಉಚ್ಚರಿಸಿ ಹೋಮಮಾಡಬೇಕು. ಬ್ರಹ್ಮದೇವತೆಗೆ ಮೊದಲನೆಯ ಆಹುತಿಯನ್ನೂ, ಪ್ರಜಾಪತಿದೇವತೆಗೆ ಎರಡನೆಯ ಆಹುತಿ-ಯನ್ನೂ, ಗುಹ್ಯದೇವತೆಗೆ ಮೂರನೆಯ ಆಹುತಿಯನ್ನೂ ಮತ್ತು ಕಶ್ಯಪದೇವತೆಗೆ ನಾಲ್ಕನೆಯ ಆಹುತಿಯನ್ನೂ ಹೋಮಮಾಡಬೇಕು.

೧೦೫. ತರುವಾಯ ಅನುಮತಿ ಎಂಬ ದೇವತೆಗೆ ಒಂದು ಆಹುತಿ-ಯನ್ನು ಅರ್ಪಿಸಬೇಕು. ಹೀಗೆ ಹೋಮಮಾಡಿ ಅನಂತರ ಗೃಹಬಲಿಯನ್ನು ಕೊಡಬೇಕು. ಹಿಂದೆ ನನ್ನಿಂದ ನಿನಗೆ ನಿತ್ಯಕರ್ಮಾನುಷ್ಠಾನದ ವಿಧಿಯು ಹೇಗೆ ಹೇಳಲ್ಪಟ್ಟಿರುವುದೊ; ಅದರಂತೆ ಎಲ್ಲವನ್ನೂ ಮಾಡಬೇಕು.

೧೦೬. ಅನಂತರ ವೈಶ್ವದೇವಕರ್ಮವನ್ನು ಮಾಡಬೇಕು. ಆ ವೈಶ್ವ-ದೇವಕರ್ಮದಲ್ಲಿ ಅನೇಕ ಬಲಿದಾನಗಳನ್ನು ಮಾಡಬೇಕು. ದೇವತೆಗಳನ್ನು ಪ್ರತ್ಯೇಕವಾಗಿ ಉದ್ದೇಶಿಸಿ ಆಯಾಯ ಸ್ಥಾನಗಳಲ್ಲಿ ಬಲಿಯ ಅನ್ನವನ್ನು ಇಡಬೇಕು. ಹಾಗೆ ಸ್ಥಾನಗಳ ವಿಭಾಗವನ್ನು ಹೇಳುವೆನು, ಕೇಳು.

೧೦೭. ಗೃಹದ ಮಧ್ಯಸ್ಥಾನದಲ್ಲಿ ಪರ್ಜನ್ಯದೇವತೆ, ಅಬ್ದೇವತೆ ಮತ್ತು ಧರಿತ್ರೀದೇವತೆ ಈ ದೇವತೆಗಳಿಗೆ ಮೂರು ಆಹುತಿಗಳನ್ನು ಅರ್ಪಿಸ-ಬೇಕು. ಗೃಹದ್ವಾರದಲ್ಲಿ ಧಾತೃ–ವಿಧಾತೃ ಎಂಬ ಎರಡು ದೇವತೆಗಳಿಗೆ ಬಲಿಯನ್ನು ನೀಡಬೇಕು.

ವಾಯವೇ ಚ ಪ್ರತಿದಿಶಂ ದಿಗ್ಭ್ಯಃ ಪ್ರಾಚ್ಯಾದಿತಃ ಕ್ರಮಾತ್ ||೧೦೮||

ಬ್ರಹ್ಮಣೇ ಚಾನ್ತರಿಕ್ಷಾಯ ಸೂರ್ಯಾಯ ಚ ಯಥಾಕ್ರಮಮ್ ।
ವಿಶ್ವೇಭ್ಯಶ್ಚೈವ ದೇವೇಭ್ಯೋ ವಿಶ್ವಭೂತೇಭ್ಯ ಏವ ಚ ||೧೦೯||

ಉಷಸೇ ಭೂತಪತಯೇ ದದ್ಯಾಚ್ಚೋತ್ತರತಸ್ತತಃ ।
ಸ್ವಧಾ ನಮ ಇತೀತ್ಯುಕ್ತ್ವಾ ಪಿತೃಭ್ಯಶ್ಚಾಪಿ ದಕ್ಷಿಣೇ ||೧೧೦||

ಕೃತ್ವಾಪಸವ್ಯಂ ವಾಯವ್ಯಾಂ ಯಕ್ಷ್ಮೈತತ್ತೇತಿ ಭಾಜನಾತ್ ।
ಅನ್ನಾವಶೇಷಮಿಚ್ಛನ್ವೈ ತೋಯಂ ದದ್ಯಾದ್ಯಥಾವಿಧಿ ||೧೧೧||

---

೧೦೮. ಮತ್ತು ಗೃಹದ್ವಾರದಲ್ಲಿ ವಾಯುದೇವತೆಗೆ ಉದ್ದೇಶಮಾಡಿ ಬಲಿಯನ್ನು ಅರ್ಪಿಸಬೇಕು. ದಿಗ್ದೇವತೆಗಳಿಗೆ ಪೂರ್ವದಿಕ್ಕಿನಿಂದ ಪ್ರಾರಂಭಿಸಿ ಕ್ರಮವಾಗಿ ಪ್ರತಿಯೊಂದು ದಿಕ್ಕುಗಳಲ್ಲಿಯೂ ಬಲಿಯನ್ನು ಇಡಬೇಕು.

೧೦೯. ತರುವಾಯ ಬ್ರಹ್ಮ, ಅಂತರಿಕ್ಷ, ಸೂರ್ಯ, ವಿಶ್ವೇದೇವ ಮತ್ತು ವಿಶ್ವಭೂತ ದೇವತೆಗಳನ್ನು ಆಯಾಯ ನಾಮಮಂತ್ರಗಳ ಮೂಲಕವಾಗಿ ಉದ್ದೇಶಿಸಿ ಗೃಹಮಂಡಲದ ಉತ್ತರದಿಕ್ಕಿನಲ್ಲಿ ಬಲಿಯನ್ನು ಅರ್ಪಿಸಬೇಕು.

೧೧೦. ಹಾಗೆ ಉತ್ತರದಲ್ಲಿ ಉಷೋದೇವತೆ, ಭೂತಪತಿ ದೇವತೆಗಳಿಗೆ ಬಲಿಯನ್ನು ಇಡಬೇಕು. ಮತ್ತು ದಕ್ಷಿಣದಿಕ್ಕಿನಲ್ಲಿ ಪಿತೃಗಳಿಗೆ " ಸ್ವಧಾ ನಮಃ " ಎಂಬ ಮಂತ್ರವನ್ನು ಉಚ್ಚರಿಸಿ ಉದ್ದೇಶಪೂರ್ವಕವಾಗಿ ಬಲಿಯನ್ನು ಅರ್ಪಿಸಬೇಕು.

೧೧೧. ಪಿತೃಬಲಿಯನ್ನು ಅಪಸವ್ಯವಾಗಿ ಕೊಟ್ಟು ಮತ್ತೆ ಪಾತ್ರೆಯಲ್ಲಿದ್ದ ಅನ್ನವನ್ನು ತೆಗೆದುಕೊಂಡು " ಯಕ್ಷ್ಮೈತತ್ತೇ " ಎಂದು ನಿರ್ದೇಶಿಸುತ್ತ ವಾಯವ್ಯದಿಕ್ಕಿನಲ್ಲಿ ಇರಿಸಬೇಕು. ಮತ್ತು ಅನ್ನದ ಶೇಷವನ್ನು ನಿರೀಕ್ಷಿಸಿಟ್ಟು ಬಲಿಯ ಅನ್ನದ ಮೇಲೆ ನೀರನ್ನು ಯಥಾವಿಧಿಯಾಗಿ ಬಿಡಬೇಕು,

ತತೋಽನ್ನಾಗ್ರಂ ಸಮುದ್ಧೃತ್ಯ ಹನ್ತಕಾರೋಪಕಲ್ಪನಮ್ ।
ಯಥಾವಿಧಿ ಯಥಾನ್ಯಾಯಂ ಬ್ರಾಹ್ಮಣಾಯೋಪಪಾದಯೇತ್ ॥೧೧೨॥

ಕುರ್ಯಾತ್ಕರ್ಮಾಣಿ ತೀರ್ಥೇನ ಸ್ವೇನ ಸ್ವೇನ ಯಥಾವಿಧಿ ।
ದೇವಾದೀನಾಂ ತಥಾ ಕುರ್ಯಾದ್ಬ್ರಾಹ್ಮೇಣಾಚಮನಕ್ರಿಯಾಮ್ ॥೧೧೩॥

ಅಙ್ಗುಷ್ಠೋತ್ತರತೋ ರೇಖಾ ಪಾಣೇರ್ಯಾ ದಕ್ಷಿಣಸ್ಯ ತು ।
ಏತದ್ಬ್ರಾಹ್ಮಮಿತಿ ಖ್ಯಾತಂ ತೀರ್ಥಮಾಚಮನಾಯ ವೈ ॥೧೧೪॥

ತರ್ಜನ್ಯಙ್ಗುಷ್ಠಯೋರನ್ತಃ ಪೈತ್ರಂ ತೀರ್ಥಮುದಾಹೃತಮ್ ।
ಪಿತೄಣಾಂ ತೇನ ತೋಯಾದಿ ದದ್ಯಾನ್ನಾನ್ದೀಮುಖಾದೃತೇ ॥೧೧೫॥

---

೧೧೨. ತರುವಾಯ ಶಾಸ್ತ್ರವಿಧಿಯನ್ನು ಅನುಸರಿಸಿ ಮನುಷ್ಯಯಜ್ಞಕ್ಕೋಸ್ಕರ ಅನ್ನದ ಗ್ರಾಸವನ್ನು ತೆಗೆದುಕೊಂಡು "ಹನ್ತ" ಶಬ್ದವನ್ನು ಉಚ್ಚರಿಸಿ ನ್ಯಾಯವನ್ನು ಅನುವರ್ತಿಸಿ ಬ್ರಾಹ್ಮಣನಿಗೆ ನೀಡಬೇಕು.

೧೧೩. ದೇವ-ಪಿತೃ ಮುಂತಾದವರನ್ನು ಉದ್ದೇಶಿಸಿ ಮಾಡುವ ಕರ್ಮಗಳನ್ನು ದೈವ ಮುಂತಾದ ಆಯಾಯ ತೀರ್ಥಗಳಿಂದ ಯಥಾವಿಧಿಯಾಗಿ ಮಾಡಬೇಕು. ದೇವತೆಗಳಿಗೆ ದೈವ ತೀರ್ಥದಿಂದ ಆಚಮನದಾನವನ್ನು ಮಾಡಬೇಕು.

೧೧೪. ಬಲಗೈಯ್ಯಲ್ಲಿರುವ ಅಂಗುಷ್ಠಬೆರಳಿನ ಉತ್ತರದಲ್ಲಿ ಯಾವ ರೇಖೆಯು ಕಾಣಿಸುವುದೊ ; ಅದು ಬ್ರಾಹ್ಮತೀರ್ಥವೆಂದು ಕರೆಯಲ್ಪಟ್ಟಿರುವುದು. ಅದು ಆಚಮನೀಯದಾನಕ್ಕೆ ಉಪಯೋಗವಾಗುವುದು.

೧೧೫. ಅಂಗುಷ್ಠ-ತರ್ಜನೀ ಎಂಬ ಎರಡು ಬೆರಳುಗಳ ನಡುಭಾಗವು ಪಿತೃತೀರ್ಥವೆಂದು ಹೇಳಲ್ಪಟ್ಟಿದೆ. ನಾಂದೀಮುಖ ಪಿತೃಗಳ ಹೊರತು ಎಲ್ಲ ಪಿತೃದೇವತೆಗಳಿಗೆ ಆ ತೀರ್ಥದಿಂದ ಜಲ ಮುಂತಾದುದನ್ನು ಕೊಡಬೇಕು.

ಅಙ್ಗುಲ್ಯಗ್ರೇ ತಥಾ ದೈವಂ ತೇನ ದಿವ್ಯಕ್ರಿಯಾವಿಧಿಃ ।
ತೀರ್ಥಂ ಕನಿಷ್ಠಿಕಾಮೂಲೇ ಕಾಯಂ ತೇನ ಪ್ರಜಾಪತೇಃ ॥೧೧೬॥

ಏವಮೇಭಿಃ ಸದಾ ತೀರ್ಥೈರ್ದೇವಾನಾಂ ಪಿತೃಭಿಃ ಸಹ ।
ಸದಾ ಕಾರ್ಯಾಣಿ ಕುರ್ವೀತ ನಾನ್ಯತೀರ್ಥೇನ ಕರ್ಹಿಚಿತ್ ॥೧೧೭॥

ಬ್ರಾಹ್ಮೇಣಾಚಮನಂ ಶಸ್ತಂ ಪಿತ್ರ್ಯಂ ಪೈತ್ರೇಣ ಸರ್ವದಾ ।
ದೇವತೀರ್ಥೇನ ದೇವಾನಾಂ ಪ್ರಾಜಾಪತ್ಯಂ ನಿಜೇನ ಚ ॥೧೧೮॥

ನಾನ್ದೀಮುಖಾನಾಂ ಕುರ್ವೀತ ಪ್ರಾಜ್ಞಃ ಪಿಣ್ಡೋದಕಕ್ರಿಯಾಮ್ ।
ಪ್ರಾಜಾಪತ್ಯೇನ ತೀರ್ಥೇನ ಯಚ್ಚ ಕಿಂಚಿತ್ಪ್ರಜಾಪತೇಃ ॥೧೧೯॥

---

೧೧೬. ಬೆರಳುಗಳ ಅಗ್ರಭಾಗದಲ್ಲಿರುವುದು ದೈವತೀರ್ಥವೆನಿಸುವುದು. ಆ ತೀರ್ಥದಿಂದ ದೇವತಾ ಕರ್ಮಾನುಷ್ಠಾನವು ವಿಧಿಸಲ್ಪಟ್ಟಿದೆ. ಕಿರಬೆರಳಿನ ಮೂಲದಲ್ಲಿ ಕಾಯತೀರ್ಥವೆಂಬ ತೀರ್ಥವಿರುವುದು. ಆ ತೀರ್ಥದಿಂದ ಪ್ರಜಾಪತಿ ದೇವತಾ ಕರ್ಮವನ್ನು ಆಚರಿಸಬೇಕು.

೧೧೭. ಹೀಗೆ ಅವರವರಿಗೆ ವಿಹಿತವಾದ ತೀರ್ಥಗಳಿಂದ ಯಾವಾಗಲೂ ದೇವತೆ-ಪಿತೃಗಳನ್ನು ತೃಪ್ತಿಪಡಿಸುವ ಆಯಾಯ ಕರ್ಮಗಳನ್ನು ಆಚರಿಸಬೇಕು. ಅವರಿಗೆ ವಿಹಿತವಲ್ಲದ ಬೇರೆ ತೀರ್ಥದಿಂದ ಕರ್ಮವನ್ನು ಆಚರಿಸಬಾರದು.

೧೧೮. ಬ್ರಾಹ್ಮಕರ್ಮದಲ್ಲಿ ಬ್ರಾಹ್ಮ ತೀರ್ಥವು ಪ್ರಶಸ್ತವಾದುದು. ದೈವಕರ್ಮದಲ್ಲಿ ದೈವತೀರ್ಥವು ಪ್ರಶಸ್ತವಾದುದು. ಮತ್ತು ಪ್ರಾಜಾಪತ್ಯ ಕರ್ಮದಲ್ಲಿ ಕಾಯ ತೀರ್ಥವು ಪ್ರಶಸ್ತವಾದುದು.

೧೧೯. ಪ್ರಾಜ್ಞನು ಅಭ್ಯುದಯ ಶ್ರಾದ್ಧದಲ್ಲಿ ನಾಂದೀಮುಖ ಪಿತೃಗಳಿಗೆ ಪ್ರಾಜಾಪತ್ಯತೀರ್ಥದಿಂದ ಪಿಂಡ-ಉದಕದಾನಗಳನ್ನು ಮಾಡಬೇಕು. ಮತ್ತು ಪ್ರಜಾಪತಿದೇವತೆಗೆ ಸಂಬಂಧಿಸಿದ ಎಲ್ಲ ಕರ್ಮಗಳನ್ನು ಪ್ರಾಜಾಪತ್ಯ ತೀರ್ಥದಿಂದ ಮಾಡಬೇಕು.

ಯುಗಪಜ್ಜಲಮಗ್ನಿಂ ಚ ಬಿಭೃಯಾನ್ನ ವಿಚಕ್ಷಣಃ ।
ಗುರುದೇವಾನ್ಪ್ರತಿ ತಥಾ ನ ಚ ಪಾದೌ ಪ್ರಸಾರಯೇತ್ ॥೧೨೦॥

ನಾಚಕ್ಷೀತ ಧಯನ್ತೀಂ ಗಾಂ ಜಲಂ ನಾಞ್ಜಲಿನಾ ಪಿಬೇತ್ ॥೧೨೧॥

ಶೌಚಕಾಲೇಷು ಸರ್ವೇಷು ಗುರುಷ್ವಲ್ಪೇಷು ವಾ ಪುನಃ ।
ನ ವಿಲಮ್ಬೇತ ಶೌಚಾರ್ಥಂ ನ ಮುಖೇನಾನಲಂ ಧಮೇತ್ ॥೧೨೨॥

ತತ್ರ ಪುತ್ರ ನ ವಸ್ತವ್ಯಂ ಯತ್ರ ನಾಸ್ತಿ ಚತುಷ್ಟಯಮ್ ।
ಋಣಪ್ರದಾತಾ ವೈದ್ಯಶ್ಚ ಶ್ರೋತ್ರಿಯಃ ಸಜಲಾ ನದೀ ॥೧೨೩॥

---

೧೨೦. ಪ್ರಾಜ್ಞನಾದ ಮಾನವನು ನೀರು-ಬೆಂಕಿ ಇವೆರಡನ್ನು ಒಟ್ಟಿಗೆ ಹಿಡಿದುಕೊಳ್ಳಬಾರದು. ಗುರು-ದೇವತೆಗಳಿಗೆ ಎದುರಾಗಿ ತಾನು ಕಾಲುಗಳನ್ನು ಯಾವಾಗಲೂ ಚಾಚಿಕೊಂಡು ಇರಬಾರದು.

೧೨೧. ಹಸುವು ತನ್ನ ಕರುವಿಗೆ ಹಾಲನ್ನು ಕುಡಿಸುತ್ತಿದ್ದರೆ ಅದನ್ನು ತಿಳಿಸಬಾರದು. ಮತ್ತು ನೀರಡಿಕೆಯಾದಲ್ಲಿ ತನ್ನ ಬೊಗಸೆಯಿಂದ ನೀರನ್ನು ಕುಡಿಯಬಾರದು. ಒಂದು ಪಾತ್ರೆಯಿಂದ ನೀರನ್ನು ಕುಡಿಯುವುದು ವಿಹಿತ ವಾದುದು.

೧೨೨. ಶೌಚಾನುಷ್ಠಾನಕ್ಕೆ ನಿಮಿತ್ತಗಳು ಒದಗಿದಾಗ ಆ ನಿಮಿತ್ತವು ಸಣ್ಣದಾಗಿರಲಿ, ದೊಡ್ಡದಾಗಿರಲಿ, ಹೇಗಿದ್ದರೂ ಶೌಚಾನುಷ್ಠಾನವನ್ನು ಮಾಡಲು ವಿಲಂಬ ಮಾಡಬಾರದು. ಮತ್ತು ಬೆಂಕಿಯನ್ನು ಬಾಯಿಯಿಂದ ಉರಿಸಬಾರದು.

೧೨೩. ಪುತ್ರನೆ! ಸಾಲವನ್ನು ಕೊಡುವವನು, ವೈದ್ಯ, ಶ್ರೋತ್ರಿಯ ನಾದ ವಿಪ್ರನು ಮತ್ತು ನೀರಿನಿಂದ ಕೂಡಿದ ಜೀವನದಿ—ಈ ನಾಲ್ಕು ಸಾಧನಗಳು ಯಾವ ಪ್ರದೇಶದಲ್ಲಿ ಇಲ್ಲವೊ ಆ ಸ್ಥಳದಲ್ಲಿ ವಾಸಮಾಡಬಾರದು.

ಜಿತಾಮಿತ್ರೋ ನೃಪೋ ಯತ್ರ ಬಲವಾನ್ಧರ್ಮತತ್ಪರಃ ।
ತತ್ರ ನಿತ್ಯಂ ವಸೇತ್ಪ್ರಾಜ್ಞಃ ಕುತಃ ಕುನೃಪತಃ ಸುಖಮ್ ॥೧೨೪॥

ಯತ್ರಾಪ್ರಧೃಷ್ಯೋ ನೃಪತಿರ್ಯತ್ರ ಸಸ್ಯವತೀ ಮಹೀ ।
ಪೌರಾಃ ಸುಸಂಯತಾ ಯತ್ರ ಸತತಂ ನ್ಯಾಯವರ್ತಿನಃ ॥೧೨೫॥

ಯತ್ರಾಮತ್ಸರಿಣೋ ಲೋಕಾಸ್ತತ್ರ ವಾಸಃ ಸುಖೋದಯಃ ॥೧೨೬॥

ಯಸ್ಮಿನ್ಕೃಷೀವಲಾ ರಾಷ್ಟ್ರೇ ಪ್ರಾಯಶೋ ನಾತಿಭೋಗಿನಃ ।
ಯತ್ರೌಷಧಾನ್ಯಶೇಷಾಣಿ ವಸೇತ್ತತ್ರ ವಿಚಕ್ಷಣಃ ॥೧೨೭॥

---

೧೨೪. ಶತ್ರುಗಳನ್ನು ಗೆದ್ದವನೂ, ಬಲಿಷ್ಠನೂ ಮತ್ತು ಧರ್ಮಪರನೂ ಆದ ರಾಜನು ಎಲ್ಲಿ ವಾಸಮಾಡುವನೊ ; ಪ್ರಾಜ್ಞನಾದ ಮಾನವನು ಯಾವಾಗಲೂ ಆ ಸ್ಥಳದಲ್ಲಿ ವಾಸಮಾಡಬೇಕು. ದುಷ್ಟರಾಜನಿದ್ದರೆ ಸುಖವೆಲ್ಲಿಯದು ?

೧೨೫. ಯಾವ ಸ್ಥಳದಲ್ಲಿ ಎದುರಿಸಲಾಗದಂತಹ ಬಲಿಷ್ಠನಾದ ರಾಜನು, ಸಸ್ಯಪರಿಪೂರ್ಣವಾದ ಭೂಮಿ ಮತ್ತು ನಿಯಮಗಳನ್ನು ಪಾಲಿಸಿ ನ್ಯಾಯವಂತೆ ನಡೆಯುವ ಪ್ರಜೆ— ಇವರು ಇರುವರೊ ಅಂತಹ ಶ್ರೇಷ್ಠಪ್ರದೇಶವು ವಾಸಕ್ಕೆ ಅರ್ಹವಾದುದು.

೧೨೬. ರಾಜ ಅಥವಾ ಪ್ರಜೆ ಯಾರೇ ಆಗಲಿ ಮಾತ್ಸರ್ಯವಿಲ್ಲದಂತೆ ಪರಸ್ಪರ ವರ್ತನೆಯು ಅವರಿಗೆ ಶ್ರೇಯಸ್ಕರವು. ಹಾಗೆ ಯಾವ ಸ್ಥಳದಲ್ಲಿ ಮಾತ್ಸರ್ಯವಿಲ್ಲದಂತೆ ಇರುವರೊ ; ಅಲ್ಲಿ ವಾಸಮಾಡುವುದು ಸುಖವನ್ನು ಕೊಡುವುದು.

೧೨೭. ಯಾವ ರಾಷ್ಟ್ರದಲ್ಲಿ ರೈತಾಪಿ ಜನರು ಪ್ರಾಯಕವಾಗಿ ಅತಿ ಭೋಗವನ್ನು ಆಶಿಸದೆ ಕಷ್ಟಪ್ರಿಯರಾಗಿರುವರೊ ; ಯಾವ ಸ್ಥಳದಲ್ಲಿ ಎಲ್ಲ ವಿಧವಾದ ಗಿಡಮೂಲಿಕೆ-ಸಸ್ಯವರ್ಗವು ಇರುವುದೊ ; ಅಲ್ಲಿ ಪ್ರಾಜ್ಞನು ವಾಸಮಾಡಬೇಕು.

ತತ್ರ ಪುತ್ರ ನ ವಸ್ತವ್ಯಂ ಯತ್ರೈತತ್ತ್ರಿತಯಂ ಸದಾ ।
ಜಿಗೀಷುಃ ಕೃತವೈರಶ್ಚ ಜನಶ್ಚ ಸತತೋತ್ಸವಃ ॥೧೨೮॥

ವಸೇನ್ನಿತ್ಯಂ ಸುಶೀಲೇಷು ಸಹವಾಸಿಷು ಪಣ್ಡಿತಃ ।
ಇತ್ಯೇತತ್ಕಥಿತಂ ಪುತ್ರ ಮಯಾ ತೇ ಹಿತಕಾಮ್ಯಯಾ ॥೧೨೯॥

ಇತಿ ಶ್ರೀ ಮಾರ್ಕಂಡೇಯ ಮಹಾಪುರಾಣೇ ಅಲರ್ಕಾನುಶಾಸನೇ ಸದಾಚಾರವರ್ಣನಂ ನಾಮ ಏಕತ್ರಿಂಶೋಽಧ್ಯಾಯಃ

---

೧೨೮. ಪುತ್ರನೆ ! ಅಕ್ಕ-ಪಕ್ಕದವರನ್ನು ಗೆಲ್ಲಬೇಕೆಂಬ ಸ್ಪರ್ಧೆಯುಳ್ಳವನು, ಹಿಂದಿನಿಂದ ವೈರವನ್ನು ಹೊಂದಿದವನು ಮತ್ತು ಯಾವಾಗಲೂ ಉತ್ಸವವನ್ನು ನಡೆಸುವ ಆಕಾಂಕ್ಷೆಯುಳ್ಳವನು—ಈ ಮೂರು ಮಂದಿ ಇರುವ ಎಡೆಯಲ್ಲಿ ಯಾವಾಗಲೂ ವಾಸಮಾಡಬಾರದು.

೧೨೯. ಪಂಡಿತನಾದ ಗೃಹಸ್ಥನು ಉತ್ತಮವಾದ ಶೀಲ ಸಂಪತ್ತಿಯುಳ್ಳ ಸಹವಾಸಿಗಳ ಜೊತೆಗೆ ಯಾವಾಗಲೂ ವಾಸಮಾಡಬೇಕು. ಪುತ್ರನೆ ! ನಿನಗೆ ಹಿತವಾಗುವ ಕೋರಿಕೆಯಿಂದ ನನ್ನಿಂದ ಈ ಎಲ್ಲ ವರ್ತನೆಯು ಉಪದೇಶಿಸಲ್ಪಟ್ಟಿದೆ.

ಮಾರ್ಕಂಡೇಯ ಮಹಾಪುರಾಣದಲ್ಲಿ ಮೂವತ್ತೊಂದನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ದ್ವಾತ್ರಿಂಶೋಽಧ್ಯಾಯಃ

(ವರ್ಜ್ಯಾವರ್ಜ್ಯ ಪ್ರತಿಪಾದನಮ್)

ಮದಾಲಸೋವಾಚ :—

ಅತಃ ಪರಂ ಶೃಣುಷ್ವ ತ್ವಂ ವರ್ಜ್ಯಾವರ್ಜ್ಯಪ್ರತಿಕ್ರಿಯಾಮ್ ||೧||

ಭೋಜ್ಯಮನ್ನಂ ಪರ್ಯುಷಿತಂ ಸ್ನೇಹಾಕ್ತಂ ಚಿರಸಮ್ಭೃತಮ್ ।
ಅಸ್ನೇಹಾಶ್ಚಾಪಿ ಗೋಧೂಮಯವಗೋರಸವಿಕ್ರಿಯಾಃ ||೨||

ಮೂವತ್ತೆರಡನೆಯ ಅಧ್ಯಾಯ

ಮದಾಲಸೆಯು ಇಂತೆಂದಳು :—

೧. ಪುತ್ರನೆ ! ಸದಾಚಾರವಿಧಾನವನ್ನು ಇದುವರೆಗೆ ನಾನು ವಿವರಿಸಿರುವೆನು. ಇನ್ನು ಮುಂದೆ ವರ್ಜ್ಯ-ಅವರ್ಜ್ಯಗಳಾದ ಕ್ರಿಯೆಗಳನ್ನು ವಿಂಗಡಿಸಿ ಹೇಳುವೆನು. ಅವನ್ನು ಕೇಳು.

೨. ಸಿದ್ಧಗೊಳಿಸಿ ಹೆಚ್ಚು ಹೊತ್ತು ಕಳೆದಿರುವುದು, ಆದ್ದರಿಂದ ತಂಗಳಿನಂತೆ ಆದ ಭಕ್ಷ್ಯವನ್ನು ಸ್ನೇಹ(ಎಣ್ಣೆ-ತುಪ್ಪ) ವಸ್ತುಗಳಿಂದ ನೆನೆಸಿ ಭುಂಜಿಸಬಹುದು. ಮತ್ತು ಜವೆ, ಗೋಧಿ, ಹಾಲು-ಮೊಸರು ಇವುಗಳಿಂದ ಮಾಡಿರುವ ತಿಂಡಿಯ ಪದಾರ್ಥಗಳನ್ನು ಸ್ನೇಹಪದಾರ್ಥಮಿಶ್ರಣವಿಲ್ಲದಿದ್ದರೂ ಭುಂಜಿಸಬಹುದು.

ಶಶಕಃ ಕಚ್ಛಪೋ ಗೋಧಾ ಶ್ವಾವಿತ್ಖಡ್ಗೋಽಥ ಪುತ್ರಕ ।
ಭಕ್ಷ್ಯಾ ಹ್ಯೇತೇ ತಥಾ ವರ್ಜ್ಯೌ ಗ್ರಾಮಸೂಕರಕುಕ್ಕುಟೌ ॥೩॥

ಪಿತೃದೇವಾದಿಶೇಷಂ ಚ ಶ್ರಾದ್ಧೇ ಬ್ರಾಹ್ಮಣಕಾಮ್ಯಯಾ ।
ಪ್ರೋಕ್ಷಿತಂ ಚೌಷಧಾರ್ಥಂ ಚ ಖಾದನ್ಮಾಂಸಂ ನ ದುಷ್ಯತಿ ॥೪॥

ಶಙ್ಖಾಶ್ಮಸ್ವರ್ಣರೂಪ್ಯಾಣಾಂ ರಜ್ಜೂನಾಮಥ ವಾಸಸಾಮ್ ।
ಶಾಕಮೂಲಫಲಾನಾಂ ಚ ತಥಾ ವಿದಲಚರ್ಮಣಾಮ್ ॥೫॥

ಮಣಿವಜ್ರಪ್ರವಾಲಾನಾಂ ತಥಾ ಮುಕ್ತಾಫಲಸ್ಯ ಚ ।
ಗಾತ್ರಾಣಾಂ ಚ ಮನುಷ್ಯಾಣಾಮಮ್ಬುನಾ ಶೌಚಮಿಷ್ಯತೇ ॥೬॥

---

೩. ಪುತ್ರನೆ! ಮೊಲ, ಆಮೆ, ಉಡ, ಮುಳ್ಳುಹಂದಿ, ಖಡ್ಗಮೃಗ—ಈ ಐದು ಜಾತಿಯ ಪ್ರಾಣಿಗಳ ಮಾಂಸವು ಭಕ್ಷಣಕ್ಕೆ ಅರ್ಹವಾದುದು. ಗ್ರಾಮದ ಹಂದಿ, ಕೋಳಿ ಇವು ಭಕ್ಷಣಕ್ಕೆ ಅರ್ಹವಾಗಿಲ್ಲ. ಮೊಲ ಮುಂತಾದುವು "ಪಂಚನಖ"ಗಳೆಂದು ಗಣಿಸಲ್ಪಟ್ಟಿವೆ. ಇವು ಹೆಜ್ಜೆಯಲ್ಲಿ ಐದು ಉಗುರು-ಗಳಿಂದ ಕೂಡಿರುವುವು.

೪. ಹಾಗು ಪಿತೃ-ದೇವತೆಗಳಿಗೆ ನಿವೇದನ ಮಾಡಿ ಮಿಕ್ಕಿರುವ ಪ್ರಸಾದ ರೂಪವಾದುದು, ಶ್ರಾದ್ಧಕರ್ಮದಲ್ಲಿ ಬ್ರಾಹ್ಮಣರಿಗೆ ಅರ್ಪಿಸಲು ಪ್ರೋಕ್ಷಿಸಿರುವುದು, ಈ ಮಾಂಸವನ್ನು ತಿಂದವನು ಮಾಂಸಭಕ್ಷಣದ ದೋಷಕ್ಕೆ ಭಾಗಿಯಾಗುವುದಿಲ್ಲ. ಮತ್ತು ಔಷಧರೂಪವಾಗಿ ಮಾಂಸಸೇವನೆಯು ದೋಷವಾದುದಲ್ಲ.

೫. ಅಶುಚಿಯಾದ ವಸ್ತುಗಳನ್ನು ಶುದ್ಧಿಮಾಡುವ ಬಗೆಗಳನ್ನು ಈ ರೀತಿಯಾಗಿ ತಿಳಿಯಬೇಕು. ಶಂಖ, ಕಲ್ಲು, ಚಿನ್ನ, ಬೆಳ್ಳಿ, ನಾರು, ಬಟ್ಟೆ, ಗಡ್ಡೆ, ಗೆಣಸು, ಹಣ್ಣು, ಬಿದುರು ಮತ್ತು ಚರ್ಮ—ಇವು ಅಶುಚಿಯಾಗಿದ್ದರೆ ನೀರಿನಿಂದ ಇವುಗಳನ್ನು ಶುಚಿಯನ್ನಾಗಿ ಮಾಡಬೇಕು.

೬. ಮಣಿ, ವಜ್ರ, ಹವಳ, ಮುತ್ತು ಮನುಷ್ಯರ ದೇಹ--ಇವುಗಳಿಗೆ ನೀರಿನಿಂದ ಶುದ್ಧಿಯಾಗುವುದು. ಅಶುಚಿಯಾದ ಈ ವಸ್ತುಗಳನ್ನು ನೀರಿನಲ್ಲಿ ತೊಳೆದು ಶುದ್ಧಿಮಾಡಬೇಕು.

ಪಾತ್ರಾಣಾಂ ಚಮಸಾನಾಂ ಚ ವಾರಿಣಾ ಶುದ್ಧಿರಿಷ್ಯತೇ ॥೭॥

ತಾಮ್ರಾಯಃಕಾಂಸ್ಯರೈತ್ಯಾನಾಂ ತ್ರಪುಷಃ ಸೀಸಕಸ್ಯ ಚ ।
ಶೌಚಂ ಯಥಾರ್ಹಂ ಕರ್ತವ್ಯಂ ಕ್ಷಾರಾಮ್ಲೋದಕವಾರಿಣಾ ॥೮॥

ತಥಾಯಸಾನಾಂ ತೋಯೇನ ಗ್ರಾವ್ಣಃ ಸಂಘರ್ಷಣೇನ ಚ ।
ಸಸ್ನೇಹಾನಾಂ ಚ ಭಾಣ್ಡಾನಾಂ ಶುದ್ಧಿರುಷ್ಣೇನ ವಾರಿಣಾ ॥೯॥

ಶೂರ್ಪಧಾನ್ಯಾಜಿನಾನಾಂ ಚ ಮುಸಲೋಲೂಖಸ್ಯ ಚ ।
ಸಂಹತಾನಾಂ ಚ ವಸ್ತ್ರಾಣಾಂ ಪ್ರೋಕ್ಷಣಾತ್ಸಂಚಯಸ್ಯ ಚ ॥೧೦॥

ವಲ್ಕಲಾನಾಮಶೇಷಾಣಾ ಮಮ್ಬುಮೃಚ್ಛೌಚಮಿಷ್ಯತೇ ।
ತೃಣಕಾಷ್ಠೌಷಧೀನಾಂ ಚ ಪ್ರೋಕ್ಷಣಾಚ್ಛುದ್ಧಿರಿಷ್ಯತೇ ॥೧೧॥

---

೭. ಹಾಗು ಅನೇಕ ಬಗೆಯ ಪಾತ್ರಗಳಿಗೂ, ಸೌಟು-ಉದ್ಧರಣೆ ಅಥವಾ ಕುಡಿಯುವ ಪಾತ್ರಗಳಿಗೂ ನೀರಿನಿಂದ ತೊಳೆದು ಶುದ್ಧಿಯನ್ನು ಮಾಡಿ-ಕೊಳ್ಳಬೇಕು.

೮. ತಾಮ್ರ, ಹಿತ್ತಾಳೆ, ಕಬ್ಬಿಣ, ಉಕ್ಕು, ಸೀಸ—ಇವುಗಳಿಂದ ಮಾಡಿರುವ ಪಾತ್ರೆಗಳಿಗೆ ಉಪ್ಪು-ಹುಳಿಯ ನೀರಿನಿಂದ ತೊಳೆದು ಶಾಸ್ತ್ರೀಯ ವಿಧಾನದಿಂದ ಶುದ್ಧಿಯಾಗುವುದು.

೯. ಹಾಗು ಲೋಹಮಯವಾದ ವಸ್ತುಗಳಿಗೆ ನೀರಿನಿಂದಲೂ ಕಲ್ಲಿನ ಪದಾರ್ಥಗಳಿಗೆ ಉಜ್ಜುವುದರಿಂದಲೂ ಶುದ್ಧಿಯಾಗುವುದು. ಜಿಡ್ಡಿನಿಂದ ಕೂಡಿದ ಪಾತ್ರಗಳನ್ನು ಬಿಸಿಯಾದ ನೀರಿನಿಂದ ತೊಳೆದರೆ ಶುದ್ಧಿಯಾಗುವುದು.

೧೦. ಮೊರ, ಧಾನ್ಯ, ಚರ್ಮ, ಒನಿಕೆ, ಒರಳುಕಲ್ಲು, ಜೋಡಿಸಿಟ್ಟ ಬಟ್ಟೆ ಮತ್ತು ವಸ್ತುಗಳ ರಾಶಿ ಇವುಗಳನ್ನು ನೀರು ಪ್ರೋಕ್ಷಣ ಮಾಡಿ ಶುದ್ಧಿ-ಮಾಡಿಕೊಳ್ಳಬೇಕು.

೧೧. ಎಲ್ಲ ವಿಧದ ನಾರು-ತೊಗಟೆ ಇವುಗಳಿಗೆ ಮಣ್ಣು-ನೀರುಗಳನ್ನು ಹಾಕಿ ತೊಳೆದರೆ ಶುದ್ಧಿಯಾಗುವುದು. ಹುಲ್ಲು ಸೌದೆ, ಔಷಧ ವಸ್ತುಗಳಿಗೆ ನೀರನ್ನು ಪ್ರೋಕ್ಷಣ ಮಾಡಿದರೆ ಶುದ್ಧಿಯಾಗುವುದು.

ಆವಿಕಾನಾಂ ಸಮಸ್ತಾನಾಂ ಕೇಶಾನಾಂ ಚಾಪಿ ಮೇಧ್ಯತಾ ।
ಸಿದ್ಧಾರ್ಥಕಾನಾಂ ಕಲ್ಕೇನ ತಿಲಕಲ್ಕೇನ ವಾ ಪುನಃ ||೧೨||

ಸಾಮ್ಬುನಾ ತಾತ ಭವತಿ ಉಪಘಾತವತಾಂ ಸದಾ ।
ತಥಾ ಕಾರ್ಪಾಸಿಕಾನಾಂ ಚ ವಿಶುದ್ಧಿರ್ಜಲಭಸ್ಮನಾ ||೧೩||

ನಾಗದನ್ತಾಸ್ಥಿಶೃಙ್ಗಾಣಾಂ ತಕ್ಷಣಾಚ್ಛುದ್ಧಿರಿಷ್ಯತೇ ।
ಪುನಃ ಪಾಕೇನ ಭಾಣ್ಡಾನಾಂ ಪಾರ್ಥಿವಾನಾಂ ಚ ಮೇಧ್ಯತಾ ||೧೪||

ಶುಚಿರ್ಭೈಕ್ಷಂ ಕಾರುಹಸ್ತೈಃ ಪಣ್ಯಂ ಯಚ್ಚ ಪ್ರಸಾರಿತಮ್ ।
ಯೋಷಿನ್ಮುಖಂ ಬಾಲಮುಖಮಾತ್ಮವೃದ್ಧಮುಖಂ ತಥಾ ||೧೫||

---

೧೨. ಬಗೆ ಬಗೆಯ ಕಂಬಳಿಗಳು ಮತ್ತು ಚಮರೀಮೃಗದ ಕೂದಲು ಮುಂತಾದ ವಸ್ತುಗಳು ಅಶುಚಿಯಾಗಿದ್ದರೆ ಅವುಗಳನ್ನು ಶುದ್ಧಿಮಾಡಲು ಸಾಸುವೆಯ ಪುಡಿ ಅಥವಾ ಎಳ್ಳುಕಾಳಿನ ಪುಡಿಯನ್ನು ಸೀಗೆಪುಡಿಯಂತೆ ಉಪಯೋಗಿಸಬೇಕು.

೧೩. ತಿಲಕಲ್ಕ ಮುಂತಾದುದನ್ನು ಉಪಯೋಗಿಸಿ ನೀರಿನಿಂದ ತೊಳೆದು ಕೆಟ್ಟುಹೋಗಿದ್ದ ಕಂಬಳಿ ಮುಂತಾದುವುಗಳನ್ನು ಶುದ್ಧಿಮಾಡಬೇಕು. ಹತ್ತಿಯಿಂದ ಮಾಡಿರುವ ವಸ್ತುಗಳಿಗೆ ನೀರು-ಬೂದಿಗಳನ್ನು ಹಾಕುವುದರಿಂದ ಶುದ್ಧಿಯಾಗುವುದು.

೧೪. ಆನೆಯ ದಂತ, ಎಲುಬು, ಕೊಂಬುಗಳಿಂದ ಮಾಡಿರುವ ವಸ್ತುಗಳನ್ನು ಕೆತ್ತುವುದು ಕೊರೆಯುವುದು ಈ ವಿಧಾನದಿಂದ ಶುದ್ಧಿಮಾಡಬೇಕು. ಮಣ್ಣಿನ ಪಾತ್ರೆಗಳನ್ನು ಮತ್ತೆ ಬೆಂಕಿಯಲ್ಲಿಟ್ಟು ಸುಟ್ಟರೆ ಶುಚಿಯಾಗುವುವು.

೧೫. ಭಿಕ್ಷಾನ್ನ, ಅಗಸ ಮುಂತಾದವರ ಕೈಯಿಂದ ಬಂದಿರುವುದು, ಅಂಗಡಿಯಲ್ಲಿ ಇಟ್ಟಿರುವುದು, ಸ್ತ್ರೀಮುಖ, ಬಾಲಕನ ಮುಖ, ವೃದ್ಧನ ಮುಖ, ಮತ್ತು ತನ್ನ ಮುಖಗಳು ಯಾವಾಗಲೂ ಶುಚಿಯಾದುವೆಂದು ಭಾವಿಸಬೇಕು.

ರಥ್ಯಾಗತಮವಿಜ್ಞಾತಂ ದಾಸವರ್ಗಾದಿನಾ ಹೃತಮ್ ||೧೬||

ವಾಕ್ಪ್ರಶಸ್ತಂ ಚಿರಾತೀತಮನೇಕಾನ್ತರಿತಂ ಲಘು |
ಅತಿಪ್ರಭೂತಂ ಬಾಲಂ ಚ ವೃದ್ಧಾತುರವಿಚೇಷ್ಟಿತಮ್ ||೧೭||

ಕರ್ಮಾನ್ತಾಙ್ಗಾರಶಾಲಾಶ್ಚ ಸ್ತನನ್ಧಯಸುತಾಃ ಸ್ತ್ರಿಯಃ |
ಅಭ್ಯಸ್ಯ ಚ ತಥಾ ವಾಚಃ ಸ್ರವನ್ತ್ಯೋಽನನ್ಧಬುದ್ಬುದಾಃ ||೧೮||

ಭೂಮಿರ್ವಿಶುದ್ಧ್ಯತೇ ಕಾಲಾದ್ದಾಹಮಾರ್ಜನಗೋಕ್ರಮೈಃ |
ಲೇಪಾದುಲ್ಲೇಖನಾತ್ಸೇಕಾದ್ವೇಶ್ಮ ಸಂಮಾರ್ಜನಾರ್ಚನಾತ್ ||೧೯||

---

೧೬. ಬೀದಿಯಲ್ಲಿ ಬಿದ್ದಿರುವ ಅಶುಚಿವಸ್ತುವು ತಿಳಿಯದಹಾಗಿದ್ದರೆ ಅದು ಅಶುಚಿಯಲ್ಲ. ಹಾಗು ಆಳು ಮುಂತಾದವರಿಂದ ತರಿಸಿರುವ ವಸ್ತುವು ಅಶುಚಿಯಾಗುವುದಿಲ್ಲ.

೧೭. ಧರ್ಮಾತ್ಮರ ಮಾತಿನಿಂದ ಪ್ರಶಂಸೆಮಾಡಲ್ಪಟ್ಟಿರುವುದು, ಬಹುಕಾಲ ಕಳೆದುದು, ಅನೇಕ ವಸ್ತುಗಳ ವ್ಯವಧಾನವುಳ್ಳದ್ದು, ಸೂಕ್ಷ್ಮವಾದುದು, ಬಲು ದೊಡ್ಡದು ಮತ್ತು ಬಾಲ-ವೃದ್ಧ-ಅಶಕ್ತರ ಸ್ಪರ್ಶನಾದಿ ಚೇಷ್ಟೆಗಳು ಇವು ಅಶುಚಿಯಲ್ಲ.

೧೮. ಅಕ್ಕಸಾಲೆ ಮುಂತಾದವರು ಕೆಲಸಮಾಡುವ ಸ್ಥಳ, ಇಜ್ಜಲು ಮಾಡುವ ಸ್ಥಳ ಮುಂತಾದುವುಗಳು, ಎಳೆಮಕ್ಕಳುಗಳಿಂದ ಕೂಡಿದ ಸ್ತ್ರೀಯರು, ಅಭ್ಯಾಸಾವಸ್ಥೆಯಲ್ಲಿ ಆಡುವ ವಚನಗಳು ಮತ್ತು ನೊರೆ-ಗುಳ್ಳೆಗಳಿಲ್ಲದ ಜೀವ-ನದಿ—ಇವುಗಳು ಶುಚಿಯಾಗಿರುವುವು.

೧೯. ಅಶುಚಿಯಾಗಿರುವ ನೆಲವು ಕೆಲವು ಕಾಲ ಉಪಯೋಗಿಸದಿರುವುದು, ಸುಡುವುದು, ಸಾರಿಸುವುದು ಮತ್ತು ಗೋವುಗಳನ್ನು ನಡೆಸುವುದು, ಇವುಗಳಿಂದ ಶುದ್ಧಿಯಾಗುವುದು. ಹಾಗು ಅಶುಚಿಯಾಗಿರುವ ಮನೆಯ ನೆಲವು ಕೆತ್ತುವುದು, ಸಾರಿಸುವುದು, ಗುಡಿಸುವುದು, ನೆನೆಸುವುದು, ಪೂಜಿಸುವುದು—ಈ ವಿಧಾನಗಳಿಂದ ಶುಚಿಯಾಗುವುದು.

ಕೇಶಕೀಟಾವಪನ್ನೇಽನ್ನೇ ಗೋಘ್ರಾತೇ ಮಕ್ಷಿಕಾನ್ವಿತೇ ।
ಮೃದಮ್ಬುಭಸ್ಮನಾ ತಾತ ಪ್ರೋಕ್ಷಿತವ್ಯಂ ವಿಶುದ್ಧಯೇ ॥೨೦॥

ಔದುಮ್ಬರಾಣಾಮಮ್ಲೇನ ಕ್ಷಾರೇಣ ತ್ರಪುಸೀಸಯೋಃ ।
ಭಸ್ಮಾಮ್ಬುಭಿಶ್ಚ ಕಾಂಸ್ಯಾನಾಂ ಶುದ್ಧಿಃ ಪ್ಲಾವೋ ದ್ರವಸ್ಯ ಚ ॥೨೧॥

ಅಮೇಧ್ಯಾಕ್ತಸ್ಯ ಮೃತ್ತೋಯೈರ್ಗನ್ಧಾಪಹರಣೇನ ಚ ।
ಅನ್ಯೇಷಾಂ ಚೈವ ತದ್ದ್ರವ್ಯೈರ್ವರ್ಣಗನ್ಧಾಪಹಾರತಃ ॥೨೨॥

ಚಣ್ಡಾಲೈರನ್ತ್ಯಜೈಶ್ಚೈವ ಮ್ಲೇಚ್ಛೈರಸ್ಪೃಶ್ಯಜಾತಿಭಿಃ ।
ಸ್ಪೃಷ್ಟಮಕ್ಷಾಲಿತಂ ಧಾನ್ಯಮನರ್ಹಂ ಸರ್ವಕರ್ಮಣಿ ॥೨೩॥

---

೨೦. ಕೂದಲು-ಹುಳುಗಳು ಬಿದ್ದು ಕೆಟ್ಟುಹೋಗಿರುವುದು, ಹಸುವು ಮೂಸಿಟ್ಟಿರುವುದು, ನೊಣ ಕುಳಿತಿರುವುದು—ಇಂತಹ ಅನ್ನವನ್ನು ಶುದ್ಧಿ-ಮಾಡುವುದಕ್ಕಾಗಿ ಮೃತ್ತಿಕೆ-ಭಸ್ಮಗಳಿಂದ ಕೂಡಿದ ನೀರನ್ನು ಪ್ರೋಕ್ಷಿಸಬೇಕು.

೨೧. ತಾಮ್ರಪಾತ್ರಗಳಿಗೆ ಹುಳಿ-ನೀರಿನಿಂದ ಶುದ್ಧಿಯಾಗುವುದು, ತವರ-ಸೀಸದ ಪಾತ್ರಗಳಿಗೆ ಉಪ್ಪುನೀರಿನಿಂದ ಶುದ್ಧಿಯುಂಟಾಗುವುದು, ಕಂಚಿನ ಪಾತ್ರಗಳಿಗೆ ಬೂದಿ-ನೀರಿನಿಂದ ಶುದ್ಧಿಯಾಗುವುದು, ಮತ್ತು ದ್ರವವಸ್ತುವನ್ನು ಕರಗಿಸಿ ಹರಿಸುವುದರಿಂದ ಶುದ್ಧಿಯುಂಟಾಗುವುದು.

೨೨. ಮಲ-ಮೂತ್ರಗಳಿಂದ ಸ್ಪರ್ಶವಾದ ಪಾತ್ರಗಳನ್ನು ಮಣ್ಣು-ನೀರಿನಿಂದ ತೊಳೆದು ವಾಸನೆಯನ್ನು ಹೋಗಲಾಡಿಸುವುದರಿಂದ ಶುಚಿಯಾಗು-ವುವು. ಇತರ ನಿಮಿತ್ತಗಳಿಂದ ಕೆಟ್ಟು ಅಶುಚಿಯಾದುವುಗಳನ್ನು ಕೆಟ್ಟ ಬಣ್ಣ-ವಾಸನೆಗಳು ಹೋಗುವಹಾಗೆ ಮಣ್ಣು-ನೀರುಗಳಿಂದ ತೊಳೆದರೆ ಶುಚಿ-ಯಾಗುವುವು.

೨೩. ಚಂಡಾಲ-ಅಂತ್ಯಜ-ಮ್ಲೇಚ್ಛಜನರಿಂದಲೂ ಮತ್ತು ಅಸ್ಪೃಶ್ಯರಾದ ಇತರ ಜನರಿಂದಲೂ ಸ್ಪರ್ಶಿಸಲ್ಪಟ್ಟಿರುವ ಧಾನ್ಯವು ತೊಳೆದು ಶುಚಿಯನ್ನಾಗಿ ಮಾಡುವವರೆಗೂ ಯಾವ ಕರ್ಮದಲ್ಲಿಯೂ ಉಪಯೋಗಕ್ಕೆ ಅರ್ಹವಾಗುವುದಿಲ್ಲ.

ದ್ರೋಣಾದಧಸ್ತು ಯದ್ಧಾನ್ಯಂ ತಸ್ಯಾಯಂ ವಿಧಿರುಚ್ಯತೇ ।
ದ್ರೋಣಾದೂರ್ಧ್ವಂ ತು ಯದ್ಧಾನ್ಯಂ ಪ್ರೋಕ್ಷಣಾದೇವ ಶುದ್ಧ್ಯತಿ ॥೨೪॥
ರಥ್ಯಾಸು ಪತಿತಂ ಧಾನ್ಯಂ ದೃಷ್ಟ್ವಾ ಯತ್ನೇನ ವನ್ದಯೇತ್ ।
ಉದ್ಧೃತ್ಯ ಮೂರ್ಧ್ನಾ ಚಾದದ್ಯಾಲ್ಲಕ್ಷ್ಮೀರ್ನಶ್ಯತಿ ಚಾನ್ಯಥಾ ॥೨೫॥

ಶುಚಿಗೋತೃಪ್ತಿಕೃತ್ತೋಯಂ ಪ್ರಕೃತಿಸ್ಥಂ ಮಹೀಗತಮ್ ॥೨೬॥

ತಥಾ ಮಾಂಸಂ ಚ ಚಣ್ಡಾಲಕ್ರವ್ಯಾದಾದಿನಿಪಾತಿತಮ್ ।
ರಥ್ಯಾಗತಂ ಚ ಚೇಲಾದಿ ತಾತ ವಾತಾಚ್ಛುಚಿ ಸ್ಮೃತಮ್ ॥೨೭॥

---

೨೪. ಒಂದು ನಾಗಳದ ಅಳತೆಗಿಂತಲೂ ಕಡಿಮೆಯಾಗಿರುವ ಧಾನ್ಯವು ಚಂಡಾಲಾದಿಗಳ ಸ್ಪರ್ಶದಿಂದ ಅಶುಚಿಯಾದರೆ ಶುದ್ಧಿಪಡಿಸಲು ಅದನ್ನು ತೊಳೆಯಬೇಕೆಂದು ಹೇಳಲ್ಪಟ್ಟಿದೆ. ನಾಗಳದ ಅಳತೆಗಿಂತಲೂ ಹೆಚ್ಚಿನ ಧಾನ್ಯವು ನೀರನ್ನು ಪ್ರೋಕ್ಷಿಸುವುದರಿಂದಲೆ ಶುಚಿಯಾಗುವುದು.

೨೫. ಬೀದಿಯಲ್ಲಿ ಬಿದ್ದಿರುವ ಧಾನ್ಯವನ್ನು ಕಂಡಾಗ ಅದನ್ನು ಗೌರವ ಭಾವನೆಯಿಂದ ಯತ್ನಪೂರ್ವಕವಾಗಿ ವಂದಿಸಬೇಕು. ಮತ್ತು ಅದನ್ನು ಎತ್ತಿ ತನ್ನ ತಲೆಯಲ್ಲಿ ಇಟ್ಟುಕೊಳ್ಳಬೇಕು. ಹಾಗೆ ಗೌರವಿಸದಿದ್ದರೆ ಲಕ್ಷ್ಮಿಯು ಬಿಟ್ಟು ಹೊರಟುಹೋಗುವಳು.

೨೬. ಭೂಮಿಯಲ್ಲಿ ಜಲಾಶಯ ಮುಂತಾದುವುಗಳಲ್ಲಿ ಸ್ವಾಭಾವಿಕವಾಗಿ ತುಂಬಿಕೊಂಡಿರುವ, ಹಸುವು ಕುಡಿದು ತೃಪ್ತಿಹೊಂದಲು ಸಾಕಾದಷ್ಟು ಪರಿಮಾಣದ ನೀರು ಶುದ್ಧವಾದುದೆಂದು ತಿಳಿಯಬೇಕು.

೨೭. ಚಂಡಾಲ ಅಥವಾ ಮಾಂಸವನ್ನು ತಿನ್ನುವ ಪಕ್ಷಿ-ರಾಕ್ಷಸರಿಂದ ನೆಲದಲ್ಲಿ ಹಾಕಲ್ಪಟ್ಟ ಮಾಂಸವು ಶುಚಿಯಾದುದು. ಪುತ್ರನೆ! ಬೀದಿಯಲ್ಲಿ ಬಿದ್ದಿರುವ ಬಟ್ಟೆ ಮುಂತಾದುದು ಗಾಳಿಯಿಂದ ಶುಚಿಯಾಗುವುದೆಂದು ಶಾಸ್ತ್ರಜ್ಞರಿಂದ ಹೇಳಲ್ಪಟ್ಟಿದೆ.

ಗಜೋಽಗ್ನಿರಶ್ವೋ ಗೌಶ್ಛಾಯಾ ರಶ್ಮಯಃ ಪವನೋ ಮಹೀ ।
ವಿಪ್ರುಷೋ ಮಕ್ಷಿಕಾದ್ಯಾಶ್ಚ ದುಷ್ಟಸಂಗಾದದೋಷಿಣಃ ॥೨೮॥

ಅಜಾಶ್ವೌ ಮುಖತೋ ಮೇಧ್ಯಾ ನ ಗೋರ್ವತ್ಸಸ್ಯ ಚಾನನಮ್ ।
ಮಾತುಃ ಪ್ರಸ್ರವಣಂ ಮೇಧ್ಯಂ ಶಕುನಿಃ ಫಲಪಾತನೇ ॥೨೯॥

ಆಸನಂ ಶಯನಂ ಯಾನಂ ನಾವಃ ಪಥಿ ತೃಣಾನಿ ಚ ।
ಸೋಮಸೂರ್ಯಾಂಶುಪವನೈಃ ಶುಧ್ಯಂತ್ಯೇತಾನಿ ಪಣ್ಯವತ್ ॥೩೦॥

ರಥ್ಯಾಪ್ರಸರ್ಪಣೇ ಸ್ನಾನೇ ಕ್ಷುತಪಾನಾನ್ನಕರ್ಮಸು ।
ಆಚಾಮೇತ ಯಥಾನ್ಯಾಯಂ ವಾಸೋ ವಿಪರಿಧಾಯ ಚ ॥೩೧॥

---

೨೮. ಆನೆ, ಅಗ್ನಿ, ಕುದುರೆ, ಗೋವು, ಛಾಯೆ, ರಶ್ಮಿ, ಗಾಳಿ, ಭೂಮಿ, ಹನಿ ಮತ್ತು ನೊಣ ಮುಂತಾದುವುಗಳು ಅಶುಚಿ ವಸ್ತುಸ್ಪರ್ಶದಿಂದ ತಾನು ಅಶುಚಿಯಾಗುವುದಿಲ್ಲ.

೨೯. ಆಡು, ಕುದುರೆ—ಇವುಗಳ ಮುಖಭಾಗವು ಪವಿತ್ರವಾದುದು. ಗೋವಿನ ಮುಂಭಾಗವು ಮಂಗಳಕರವಾದುದಲ್ಲ. ಕರುವಿನ ಮುಖವು ಶುಚಿಯಾದುದು. ಜನನಿಯ ಸ್ತನ್ಯೋದ್ಗಾರವು ಶುಚಿಯಾದುದು. ಮತ್ತು ಹಕ್ಕಿಯಿಂದ ಕೆಡುಹಲ್ಪಟ್ಟ ಫಲವು ಶುಚಿಯಾಗಿರುವುದು.

೩೦. ಪೀಠ, ಶಯನ, ವಾಹನ, ದೋಣಿ, ಮಾರ್ಗ, ಹುಲ್ಲುಕಡ್ಡಿ ಇವು ಅಶುಚಿಯಾದರೂ ಚಂದ್ರ-ಸೂರ್ಯರ ಕಿರಣಗಳಿಂದಲೂ ಮತ್ತು ಗಾಳಿ ಬೀಸುವುದರಿಂದಲೂ ಪಾವನವಾಗುವುವು. ಚಂದ್ರ-ಸೂರ್ಯ-ಗಾಳಿ ಇವು ಪಾವನ ಮಾಡುವ ವಸ್ತುಗಳೆಂದು ಅರಿಯಬೇಕು.

೩೧. ದಾರಿ ನಡೆದು ಬಂದುದು, ಸ್ನಾನ, ಸೀನುವುದು, ಭೋಜನ, ಪಾನೀಯಸೇವನೆ, ಈ ನಿಮಿತ್ತಗಳಲ್ಲಿ ಯಥಾವಿಧಿಯಾಗಿ ಆಚಮನ ಮಾಡಬೇಕು. ಹಾಗು ಬಟ್ಟೆಯನ್ನು ಉಟ್ಟುಕೊಂಡ ಕೂಡಲೆ ಆಚಮನವನ್ನು ಮಾಡಬೇಕು.

ಸ್ಪೃಷ್ಟಾನಾಮಪ್ಯಸಂಸ್ಪೃಶ್ಯೈರ್ವಿರಥ್ಯಾಕರ್ದಮಾಮ್ಭಸಾಮ್ ।
ಪಕ್ವೇಷ್ಟರಚಿತಾನಾಂ ಚ ಮೇಧ್ಯತಾ ವಾಯುಸಂಗಮಾತ್ ॥೩೨॥

ಪ್ರಭೂತೋಪಹತಾದನ್ನಾದಗ್ರಮುದ್ಧೃತ್ಯ ಸನ್ತ್ಯಜೇತ್ ।
ಶೇಷಸ್ಯ ಪ್ರೋಕ್ಷಣಂ ಕುರ್ಯಾದಾಚಮ್ಯಾದ್ಭಿಸ್ತಥಾ ಮೃದಾ ॥೩೩॥

ಉಪವಾಸಸ್ತ್ರಿರಾತ್ರಂ ತು ದುಷ್ಟಭಕ್ಷ್ಯಾಶಿನೋ ಭವೇತ್ ।
ಅಜ್ಞಾತೇ ಜ್ಞಾನಪೂರ್ವಂ ತು ತದ್ದೋಷೋಪಶಮೇನ ತು ॥೩೪॥

ಉದಕ್ಯಾಶ್ವಶೃಗಾಲಾದೀನ್ಸೂತಿಕಾನ್ತ್ಯಾವಸಾಯಿನಃ ।
ಸ್ಪೃಷ್ಟ್ವಾ ಸ್ನಾಯೀತ ಶೌಚಾರ್ಥಂ ತಥೈವ ಮೃತಹಾರಿಣಃ ॥೩೫॥

---

೩೨. ಸ್ಪರ್ಶಿಸಲು ಅನರ್ಹರಾಗಿರುವವರು ಸ್ಪರ್ಶಿಸಿದ ಬೀದಿ, ಕೆಸರು, ನೀರು, ಅಥವಾ ಪಕ್ವವಾದ ಇಟ್ಟಿಗೆಗಳಿಂದ ಮಾಡಿದ ಕಟ್ಟೆ ಮುಂತಾದುವುಗಳು ಅಶುಚಿಯಾಗಿದ್ದರೂ ಗಾಳಿ ಬೀಸುವುದರಿಂದ ಅವು ಪವಿತ್ರವೆಂದು ಭಾವಿಸಬೇಕು.

೩೩. ಅನ್ನದ ರಾಶಿಯಲ್ಲಿ ಹೆಚ್ಚು ಉಪಘಾತವಾದರೆ ಆ ಅಗ್ರಭಾಗವನ್ನು ತೆಗೆದು ಹಾಕಬೇಕು. ತರುವಾಯ ತಾನು ಆಚಮನಮಾಡಿ ಮೃತ್ತಿಕೆನೀರಿನಿಂದ ಉಳಿದ ಭಾಗಕ್ಕೆ ಪ್ರೋಕ್ಷಣ ಮಾಡಬೇಕು. ಅದರಿಂದ ಅನ್ನವು ಶುಚಿಯಾಗುವುದು.

೩೪. ತಿಳಿಯದೆ ನಿಷಿದ್ಧವಾದ ಭಕ್ಷ್ಯವನ್ನು ಭಕ್ಷಿಸಿದವನಿಗೆ ಮೂರು ದಿನ ಉಪವಾಸ ಮಾಡಿದ್ದರಿಂದ ಶುಚಿತ್ವವು ಲಭಿಸುವುದು. ಜ್ಞಾನಪೂರ್ವಕವಾಗಿ ಅಭಕ್ಷ್ಯವನ್ನು ಭಕ್ಷಿಸಿದವನಿಗೆ ಅದನ್ನು ಹೊರಗೆಡಹುವುದರಿಂದ ಶುಚಿತ್ವವುಂಟಾಗುವುದು.

೩೫. ರಜಸ್ವಲೆಯಾದ ಸ್ತ್ರೀ,ನಾಯಿ-ನರಿ ಮುಂತಾದ ಹೀನಪ್ರಾಣಿಗಳು, ಬಾಣಂತಿ, ಊರಿನ ಹೊರಗೆ ವಾಸಿಸುವ ಚಂಡಾಲ ಮುಂತಾದ ಅಸ್ಪೃಶ್ಯ ಮತ್ತು ಶವವನ್ನು ಹೊತ್ತವನು—ಇವರನ್ನು ಸ್ಪರ್ಶಮಾಡಿದವನು ಶುದ್ಧಿಗೋಸ್ಕರ ಸ್ನಾನಮಾಡಬೇಕು.

ನಾರಂ ಸ್ಪೃಷ್ಟ್ವಾಸ್ಥಿ ಸಸ್ನೇಹಂ ಸ್ನಾತಃ ಶುದ್ಧ್ಯತಿ ಮಾನವಃ ।
ಆಚಮ್ಯೈವ ತು ನಿಸ್ನೇಹಂ ಗಾಮಾಲಭ್ಯಾರ್ಕಮೀಕ್ಷ್ಯ ವಾ ॥೩೬॥

ನ ಲಙ್ಘಯೇತ್ತಥೈವಾಸೃಕ್‌ಷ್ಠೀವನೋದ್ವರ್ತನಾನಿ ಚ ।
ನೋದ್ಯಾನಾದೌ ವಿಕಾಲೇಷು ಪ್ರಾಜ್ಞಸ್ತಿಷ್ಠೇತ್ಕದಾಚನ ॥೩೭॥

ನ ಚಾಲಪೇಜ್ಜನದ್ವಿಷ್ಟಾಂ ವೀರಹೀನಾಂ ತಥಾ ಸ್ತ್ರಿಯಮ್ ।
ಗೃಹಾದುಚ್ಛಿಷ್ಟವಿಣ್ಮೂತ್ರಪಾದಾಮ್ಭಾಂಸಿ ಕ್ಷಿಪೇದ್ಬಹಿಃ ॥೩೮॥

ಪಞ್ಚ ಪಿಣ್ಡಾನನುದ್ಧೃತ್ಯ ನ ಸ್ನಾಯಾತ್ಪರವಾರಿಣಾ ।
ಸ್ನಾಯೀತ ದೇವಖಾತೇಷು ಗಙ್ಗಾಹ್ರದಸರಿತ್ಸು ಚ ॥೩೯॥

---

೩೬. ಮನುಷ್ಯನ ಹಸಿಯಾದ ಅಸ್ಥಿಯನ್ನು ಸ್ಪರ್ಶಮಾಡಿ ಅಶುಚಿಯಾದ ಮಾನವನು ಸ್ನಾನಮಾಡಿ ಶುದ್ಧನಾಗುವನು. ಒಣಗಿ ಸ್ನೇಹವಸ್ತುವಿಲ್ಲದಂತಾದ ಅಸ್ಥಿಯನ್ನು ಸ್ಪರ್ಶಿಸಿದವನು ಆಚಮನಮಾಡಿದ್ದರಿಂದಲೇ ಶುದ್ಧಿಯನ್ನು ಹೊಂದುವನು. ಅಥವಾ ಗೋವಿನ ಸ್ಪರ್ಶ ಸೂರ್ಯನ ದರ್ಶನಗಳಿಂದಲೂ ಶುದ್ಧನಾಗುವನು.

೩೭. ಮಾನವನು ನಡೆಯುವಾಗ ರಕ್ತ, ಉಗುಳಿರುವ ಎಂಜಲು, ಉಪಯೋಗಿಸಿ ಎಸೆದಿರುವ ಮಾಲ್ಯ-ಗಂಧ ಮುಂತಾದುವು—ಇವುಗಳನ್ನು ದಾಟ-ಬಾರದು ಮತ್ತು ಪ್ರಾಜ್ಞನು ಉದ್ಯಾನ ಮುಂತಾದ ಸ್ಥಳಗಳಲ್ಲಿ ಅನುಚಿತ ಕಾಲದಲ್ಲಿ ಯಾವಾಗಲೂ ನಿಲ್ಲಬಾರದು.

೩೮. ಜನರ ದ್ವೇಷಕ್ಕೆ ಪಾತ್ರಳಾದವಳೂ ಮತ್ತು ಪತಿಹೀನಳೂ ಆದ ಸ್ತ್ರೀಯೊಡನೆ ಸಂಭಾಷಣ ಮಾಡಬಾರದು. ಹಾಗು ಎಂಜಲು, ಮಲ, ಮೂತ್ರ, ಕಾಲುತೊಳೆದ ನೀರು ಇವುಗಳನ್ನು ಮನೆಯೊಳಗಿನಿಂದ ಹೊರಕ್ಕೆ ದೂರದಲ್ಲಿ ಹಾಕಬೇಕು.

೩೯. ಪರರಿಗೆ ಸೇರಿದ ಭಾವಿ, ಕೊಳಗಳಲ್ಲಿ ಮೊದಲು ಮಣ್ಣಿನ ಐದು ಮುದ್ದೆಗಳನ್ನು ಎತ್ತಿಹಾಕದೆ ಸ್ನಾನಮಾಡಬಾರದು. ಪ್ರಕೃತಿದೇವಿಯಿಂದ ಸಿದ್ಧವಾದ ದೊಡ್ಡ ಜಲಾಶಯ, ಗಂಗಾನದೀ, ದೊಡ್ಡ ಮಡು ಮತ್ತು ಇತರ ನದಿಗಳಲ್ಲಿ ಸ್ನಾನಮಾಡಬೇಕು.

ದೇವತಾಪಿತೃಸಚ್ಛಾಸ್ತ್ರಯಜ್ಞಮನ್ತ್ರಾದಿನಿನ್ದಕೈಃ ।
ಕೃತ್ವಾ ತು ಸ್ಪರ್ಶನಾಲಾಪಂ ಶುದ್ಧ್ಯೇತಾರ್ಕಾವಲೋಕನಾತ್ ॥೪೦॥

ಅವಲೋಕ್ಯ ತಥೋದಕ್ಯಾಮನ್ತ್ಯಜಂ ಪತಿತಂ ಶವಮ್ ।
ವಿಧರ್ಮಿಸೂತಿಕಾಷಣ್ಢವಿವಸ್ತ್ರಾನ್ತ್ಯಾವಸಾಯಿನಃ ॥೪೧॥

ಮೃತನಿರ್ಯಾತಕಾಶ್ಚೈವ ಪರದಾರರತಾಶ್ಚ ಯೇ ।
ಏತದೇವ ಹಿ ಕರ್ತವ್ಯಂ ಪ್ರಾಜ್ಞೈಃ ಶೋಧನಮಾತ್ಮನಃ ॥೪೨॥

ಅಭೋಜ್ಯಸೂತಿಕಾಷಣ್ಢಮಾರ್ಜಾರಾಖುಶ್ವಕುಕ್ಕುಟಾನ್ ।
ಪತಿತಾವಿದ್ಧಚಣ್ಡಾಲಮೃತಹಾರಾಂಶ್ಚ ಧರ್ಮವಿತ್ ॥೪೩॥

---

೪೦. ದೇವತೆ, ಪಿತೃ, ಉತ್ತಮವಾದ ಶಾಸ್ತ್ರಗ್ರಂಥ, ಯಜ್ಞ, ಮಂತ್ರ ಮುಂತಾದುವುಗಳನ್ನು ನಿಂದಿಸುವ ನಾಸ್ತಿಕರ ಸಂಗಡ ಸಂಭಾಷಣೆ-ಸ್ಪರ್ಶಗಳನ್ನು ಮಾಡಬಾರದು. ಅದನ್ನು ಮಾಡಿದವನು ಸೂರ್ಯಬಿಂಬವನ್ನು ನೋಡಿ ಶುದ್ಧಿಹೊಂದುವನು.

೪೧. ಮತ್ತು ರಜಸ್ವಲೆಯಾದ ನಾರಿ, ಚಂಡಾಲ, ಪತಿತ, ಶವ, ವಿರುದ್ಧಧರ್ಮಾವಲಂಬಿ, ಪ್ರಸವಿಸಿದ ಸ್ತ್ರೀ, ಷಣ್ಢ, ವಸ್ತ್ರಧಾರಣವಿಲ್ಲದವನು, ಮಾದಿಗ ಮುಂತಾದವರನ್ನು ನೋಡಿದ್ದರಿಂದ ಉಂಟಾಗುವ ಅಶುಚಿತ್ವವು ಸೂರ್ಯದರ್ಶನದಿಂದ ಪರಿಹಾರವಾಗುವುದು.

೪೨. ಮತ್ತು ಮರಣಹೊಂದಿದವರ ಶವವನ್ನು ಎತ್ತಿಕೊಂಡು ಹೋದವನು, ಪರಸ್ತ್ರೀಸಂಗಮಾಡಿದವನು ಇವರ ಸಂಗಡ ಸ್ಪರ್ಶ ಅಥವಾ ಸಂಭಾಷಣೆಯನ್ನು ಹೊಂದಿದ ಮಾನವನು ತನ್ನ ಶುದ್ಧಿಗೆ ಸೂರ್ಯದರ್ಶನ-ವೆಂಬ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು.

೪೩. ಭೋಜನ ವ್ಯವಹಾರಕ್ಕೆ ಅನರ್ಹನಾದವನು, ಸೂತಿಕಾ, ಷಂಢ, ಮಾರ್ಜಾರ, ಆಖು, ಶ್ವ, ಕುಕ್ಕುಟ, ಪತಿತ, ಅಪವಿದ್ಧ, ಚಂಡಾಲ ಮತ್ತು ಶವವಾಹಕ ಇವರ ಸ್ಪರ್ಶ-ಸಂಭಾಷಣಗಳನ್ನು ಮಾಡಿದ ಧರ್ಮಜ್ಞನಾದ ಮಾನವನು ಸೂರ್ಯದರ್ಶನವನ್ನು ಮಾಡಿ ಶುದ್ಧನಾಗುವನು. ಸೂತಿಕಾ ಮುಂತಾದ ಸಂಕೇತಶಬ್ದಗಳಿಗೆ ಮುಂದೆ ವಿವರಣೆಯು ಮೂಲಗ್ರಂಥದಲ್ಲಿರುವುದು.

ಸಂಸ್ಪೃಶ್ಯ ಶುಧ್ಯತೇ ಸ್ನಾನಾದುದಕ್ಯಾಗ್ರಾಮಸೂಕರೌ ।
ತದ್ವಚ್ಚ ಸೂತಿಕಾಶೌಚದೂಷಿತೌ ಪುರುಷಾವಪಿ ॥೪೪॥

ಅತಃ ಪರಂ ಶೃಣುಷ್ವ ತ್ವಂ ಸ್ತ್ರೀಧರ್ಮಾನ್ನನು ವಿಸ್ತರಾತ್ ॥೪೫॥

ಉದುಮ್ಬರೇ ವಸೇನ್ನಿತ್ಯಂ ಭವಾನೀ ಸರ್ವದೇವತಾ ।
ತತಃ ಸಾ ಪ್ರತ್ಯಹಂ ಪೂಜ್ಯಾ ಗನ್ಧಪುಷ್ಪಾಕ್ಷತಾದಿಭಿಃ ॥೪೬॥

ಅಶೂನ್ಯಾ ದೇಹಲೀ ಕಾರ್ಯಾ ಪ್ರಾತಃಕಾಲೇ ವಿಶೇಷತಃ ।
ಯಸ್ಯ ಶೂನ್ಯಾ ಭವೇತ್ಸಾ ತು ಶೂನ್ಯಂ ತಸ್ಯ ಕುಲಂ ಭವೇತ್ ॥೪೭॥

---

೪೪. ರಜಸ್ವಲೆಯಾದ ನಾರಿಯನ್ನೂ ಗ್ರಾಮದ ಹಂದಿಯನ್ನೂ ಮುಟ್ಟಿದವನು ಸ್ನಾನಮಾಡುವುದರಿಂದ ಶುಚಿಯಾಗುವನು. ಮತ್ತು ಜನನಾ-ಶೌಚ-ಮರಣಾಶೌಚಗಳಿಂದ ಅಶುಚಿಯಾದವರನ್ನು ಸ್ಪರ್ಶಮಾಡಿದವನೂ ಕೂಡ ಸ್ನಾನದಿಂದ ಪವಿತ್ರನಾಗುವನು.

೪೫. ಅಲರ್ಕನೆ! ಗೃಹಸ್ಥನ ಸತಿಯು ಆಚರಿಸಬೇಕಾದ ವಿಶೇಷ ಧರ್ಮಗಳು ಕೆಲವು ಇವೆ. ಅಂತಹ ಸ್ತ್ರೀಧರ್ಮಗಳನ್ನು ವಿಸ್ತಾರವಾಗಿ ಹೇಳು-ವೆನು. ಅದನ್ನು ಕೇಳು.

೪೬. ಸಮಸ್ತ ದೇವತಾಸ್ವರೂಪಿಣಿಯಾದ ಭವಾನೀದೇವಿಯು ಅತ್ತಿಯ ಗಿಡದಲ್ಲಿ ಯಾವಾಗಲೂ ವಾಸಮಾಡುವಳು. ಆದ್ದರಿಂದ ಗಂಧ-ಅಕ್ಷತ-ಪುಷ್ಪ ಮುಂತಾದ ಉಪಚಾರಗಳಿಂದ ಉದುಂಬುರ ವೃಕ್ಷವನ್ನು ಪ್ರತಿದಿನವೂ ಪೂಜಿಸ-ಬೇಕು.

೪೭. ಮುಂದುಗಡೆಯ ಬಾಗಿಲಿನ ಹೊಸ್ತಿಲನ್ನು ಯಾವಾಗಲೂ ರಂಗೋಲಿ ಮುಂತಾದುವುಗಳಿಂದ ಅಶೂನ್ಯವನ್ನಾಗಿ ಮಾಡಬೇಕು. ಪ್ರಾತಃಕಾಲ-ದಲ್ಲಿ ವಿಶೇಷವಾಗಿ ಅಶೂನ್ಯವಾಗಿರುವಂತೆ ಮಾಡಬೇಕು. ಯಾವ ಗೃಹಸ್ಥನ ದೇಹಲಿಯು ಶೂನ್ಯವಾಗಿರುವುದೊ ; ಅವನ ಕುಲವು ಶೂನ್ಯವಾಗುವುದು.

ಪಾದಸ್ಯ ಸ್ಪರ್ಶನಂ ತತ್ರ ಅಸಮ್ಪೂಜ್ಯ ಚ ಲಙ್ಘನಮ್ ।
ಕುರ್ವನ್ನರಕಮಾಪ್ನೋತಿ ತಸ್ಮಾತ್ತತ್ಪರಿವರ್ಜಯೇತ್ ॥೪೮॥

ಪ್ರಾತಃಕಾಲೇ ಸ್ತ್ರಿಯಾ ಕಾರ್ಯಂ ಗೋಮಯೇನಾನುಲೇಪನಮ್ ।
ಪ್ರತ್ಯಹಂ ಸದನೇ ತಸ್ಮಾನ್ನೈವ ದುಃಖಾನಿ ಪಶ್ಯತಿ ॥೪೯॥

ಸ್ಪೃಶನ್ತಿ ರಶ್ಮಯೋ ಯಸ್ಯ ಗೃಹಂ ಸಮ್ಮಾರ್ಜನಾದೃತೇ ।
ಭವನ್ತಿ ವಿಮುಖಾಸ್ತಸ್ಯ ಪಿತರೋ ದೇವಮಾತರಃ ॥೫೦॥

ನಿಶಾಯಾಃ ಪಶ್ಚಿಮೇ ಯಾಮೇ ಧಾನ್ಯಸಂಸ್ಕರಣಾದಿಕಮ್ ।
ಕುರುತೇ ಯಾ ತು ಮೋಹೇನ ವನ್ಧ್ಯಾ ಜನ್ಮನಿ ಜನ್ಮನಿ ॥೫೧॥

---

೪೮. ಅಂತಹ ಹೊಸ್ತಿಲನ್ನು ಕಾಲಿನಿಂದ ತುಳಿಯುವುದು ಮತ್ತು ಅದನ್ನು ವಂದಿಸದೆ ದಾಟುವುದು ಮುಂತಾದುವನ್ನು ಮಾಡಿದ ಮಾನವನು ನರಕಯಾತನೆಯನ್ನು ಹೊಂದುವನು. ಆದ್ದರಿಂದ ಅಂತಹ ಪಾಪಕರ್ಮವನ್ನು ಬಿಡಬೇಕು.

೪೯. ಗೃಹಿಣಿಯು ಪ್ರಾತಃಕಾಲದಲ್ಲಿ ಪ್ರತಿದಿನವೂ ಮನೆಯೊಳಗೆ ಗೋಮಯ ಮುಂತಾದುದರಿಂದ ನೆಲವನ್ನು ಸಾರಿಸಿ ಶುದ್ಧಿಮಾಡಬೇಕು. ಹಾಗೆ ಮನೆಯನ್ನು ಶುಚಿಯಾಗಿ ಮಾಡುವುದರಿಂದ ಯಾವ ದುಃಖಗಳನ್ನೂ ಅವಳು ಹೊಂದುವುದಿಲ್ಲ.

೫೦. ಯಾವ ಗೃಹಸ್ಥನ ಮನೆಯಲ್ಲಿ ಪ್ರಾತಃಕಾಲ ಗುಡಿಸಿ-ಸಾರಿಸಿ ಮಾಡುವ ಸಂಮಾರ್ಜನವಿಲ್ಲದಿರುವ ಹಾಗೆ ಸೂರ್ಯನ ರಶ್ಮಿಗಳು ಬೀಳುತ್ತವೆಯೊ; ಅಂತಹ ಮನೆಗೆ ಬಂದ ದೇವತೆ-ಪಿತೃ-ಮಾತೃದೇವತೆಗಳು ನಿರಾಶೆಯಿಂದ ಹಿಮ್ಮುಖರಾಗಿ ಹೋಗುವರು.

೫೧. ರಾತ್ರಿಯ ಕಡೆಯ ಯಾಮದಲ್ಲಿ ಯಾವ ಗೃಹಿಣಿಯು ಅಜ್ಞಾನದಿಂದ ಧಾನ್ಯಗಳ ಸಂಸ್ಕಾರವನ್ನು ಮಾಡುವಳೊ; ಆಕೆಯು ಮುಂದಿನ ಜನ್ಮಜನ್ಮಾಂತರಗಳಲ್ಲಿ ಬಂಜೆಯಾಗಿ ಜನಿಸುವಳು. ಆದ್ದರಿಂದ ಬೆಳಗಿನ ಝಾವದಲ್ಲಿ ಧಾನ್ಯಸಂಸ್ಕಾರವನ್ನು ಮಾಡಬಾರದು.

ಸನ್ಧ್ಯಾಕಾಲೇ ತು ಸಮ್ಪ್ರಾಪ್ತೇ ಮಾರ್ಜನಂ ನ ಕರೋತಿ ಯಾ ।
ಭರ್ತೃಹೀನಾ ಭವೇತ್ಸಾ ತು ನಿಃಸ್ವಾ ಜನ್ಮನಿ ಜನ್ಮನಿ ॥೫೨॥

ಅಕೃತಸ್ವಸ್ತಿಕಾಂ ಯಾ ತು ಕಾಮಲಿಪ್ತಾಂ ಚ ಮೇದಿನೀಮ್ ।
ತಸ್ಯಾಃ ಸ್ತ್ರಿಯಾ ವಿನಶ್ಯನ್ತಿ ವಿತ್ತಮಾಯುರ್ಯಶಸ್ತಥಾ ॥೫೩॥

ಮಾರ್ಜನೀ ಚುಲ್ಲಿಕಾಷ್ಠೀವದ್ದೃಷದಶ್ಚೋಪಲಂ ತಥಾ ।
ನಾಕ್ರಮೇದಙ್ಘ್ರಿಣಾ ಜಾತು ಪುತ್ರದಾರಧನಕ್ಷಯಾತ್ ॥೫೪॥

ಉಲೂಖಲಂ ಚ ಮುಸಲಂ ತಥಾ ಚೈವ ತು ಘರ್ಷಣಮ್ ।
ಪದಾಕ್ರಮಣಾತ್ಪಾಪೀಯಾನ್ನಾಪ್ನೋತ್ಯೇವೋತ್ತಮಾಂ ಗತಿಮ್ ॥೫೫॥

---

೫೨. ಯಾವ ಗೃಹಿಣಿಯು ಸಂಧ್ಯಾಕಾಲವು ಪ್ರಾಪ್ತವಾಗಿದ್ದರೂ ಮನೆಯಲ್ಲಿ ಮಾರ್ಜನಸಂಸ್ಕಾರವನ್ನು ಮಾಡುವುದಿಲ್ಲವೊ; ಆಕೆಯು ಪತಿಯನ್ನು ಕಳೆದುಕೊಂಡವಳಾಗಿ ಮುಂದಿನ ಪ್ರತಿ ಜನ್ಮದಲ್ಲಿಯೂ ದರಿದ್ರಳಾಗಿ ಜನಿಸುವಳು.

೫೩. ಯಾವ ಗೃಹಿಣಿಯು ತನ್ನ ಇಷ್ಟದಂತೆ ಚನ್ನಾಗಿ ಸಾರಿಸಿ-ಸಮ್ಮಾರ್ಜನ ಮಾಡಿದ ನೆಲದಲ್ಲಿ ಸ್ವಸ್ತಿಕ ಮುಂತಾದ ರಂಗೋಲಿಯ ಶುಭ-ಚಿಹ್ನೆಗಳಿಂದ ಅಲಂಕಾರಮಾಡುವುದಿಲ್ಲವೊ; ಆ ಸ್ತ್ರೀಯ ಧನ-ಆಯುಷ್ಯ-ಕೀರ್ತಿಗಳು ನಾಶವಾಗುತ್ತವೆ.

೫೪. ಕಸಪರಕೆ, ಒಲೆ, ಅಗ್ಗಿಷ್ಟಿಕೆ, ರುಬ್ಬುವ ಕಲ್ಲು, ರುಬ್ಬುಗುಂಡು–ಇವುಗಳನ್ನು ಕಾಲಿನಿಂದ ದಾಟಿ ನಡೆಯುವುದು ಪತ್ನೀ-ಪುತ್ರ-ಧನ ಮುಂತಾದುದನ್ನು ನಾಶಮಾಡುವುದು, ಆದ್ದರಿಂದ ಇವುಗಳನ್ನು ದಾಟಿ ನಡೆಯಬಾರದು.

೫೫. ಹಾಗು ಒರಳುಕಲ್ಲು, ಒನಿಕೆ ಮತ್ತು ಬೀಸುವಕಲ್ಲು ಇವುಗಳನ್ನು ಹೆಜ್ಜೆಯಿಂದ ಲಂಘಿಸಿ ನಡೆದರೆ ಆ ಮಾನವನು ಪಾಪಿಯಾಗುವನು ಮತ್ತು ಎಂದಿಗೂ ಉತ್ತಮಗತಿಯನ್ನು ಹೊಂದುವುದಿಲ್ಲ. ಆದ್ದರಿಂದ ಇವುಗಳನ್ನು ಲಂಘಿಸಬಾರದು,

ಭಿನ್ನಾಸನಂ ಯೋಗಪಟ್ಟಂ ತಥೈವ ಮೃಗಚರ್ಮ ಚ ।
ಕೃಷ್ಣಾವಿಕಂ ತಥಾ ತಾತ ವರ್ಜಯೇತ್ಪುತ್ರವಾನ್ಗೃಹೀ ॥೫೬॥

ದಕ್ಷಿಣಾಭಿಮುಖೋ ಯಸ್ತು ವಿದಿಕ್ಸಂಮುಖ ಏವ ಚ ।
ಕೇಶಾನ್ಸಂಸ್ಕುರುತೇ ಮರ್ತ್ಯೋ ಧನನಾಶಂ ಚ ವಿನ್ದತಿ ॥೫೭॥

ಅನೂಢಸ್ತು ನ ಕುರ್ವೀತ ಭುಕ್ತ್ವಾ ದನ್ತವಿಶೋಧನಮ್ ।
ಪಾದುಕಾರೋಹಣಂ ಚೈವ ತಿಲೈಶ್ಚಾಪಿ ಸ ತರ್ಪಣಮ್ ॥೫೮॥

ನ ಜೀವತ್ಪಿತೃಕಃ ಕುರ್ಯಾದಧಃಕಕ್ಷ್ಯೋತ್ತರೀಯಕಮ್ ।
ದರ್ಶಶ್ರಾದ್ಧಂ ನ ಕುರ್ವೀತ ದರ್ಶಸ್ನಾನಂ ಕಥಂಚನ ॥೫೯॥

---

೫೬. ಪುತ್ರನೆ! ಪುತ್ರಸಂತತಿಯುಳ್ಳ ಗೃಹಸ್ಥನು ಭಿನ್ನವಾದ ಆಸನ, ಯೋಗಪಟ್ಟ, ಕೃಷ್ಣಾಜಿನಧಾರಣ ಮತ್ತು ಕಪ್ಪುಕಂಬಳಿ—ಇವುಗಳನ್ನು ಉಪಯೋಗಿಸಬಾರದು.

೫೭. ದಕ್ಷಿಣದಿಕ್ಕಿಗೆ ಅಭಿಮುಖನೂ ಅಥವಾ ಯಾವುದಾದರೊಂದು ಮೂಲೆದಿಕ್ಕಿಗೆ ಅಭಿಮುಖನೂ ಆಗಿ ಯಾವ ಮಾನವನು ಕೇಶಸಂಸ್ಕಾರವನ್ನು ಮಾಡುವನೊ; ಅವನು ಐಶ್ವರ್ಯನಾಶವನ್ನು ಹೊಂದುವನು.

೫೮. ವಿವಾಹಸಂಸ್ಕಾರದಿಂದ ಸಂಸ್ಕೃತನಲ್ಲದ ಮಾನವನು ಭೋಜನಾನಂತರದಲ್ಲಿ ದಂತಗಳ ಶೋಧನವನ್ನು ಮಾಡಬಾರದು. ಮತ್ತು ಪಾದುಕೆಯನ್ನು ಆರೋಹಣಮಾಡಬಾರದು. ಹಾಗು ತಿಲಮಿಶ್ರವಾದ ಜಲದಿಂದ ತರ್ಪಣವನ್ನು ಕೊಡಬಾರದು.

೫೯. ತಂದೆಯು ಜೀವಂತನಾಗಿರುವಂತಹ ಗೃಹಸ್ಥನು ಕಂಕಳು-ಪ್ರದೇಶದ ಕೆಳಭಾಗದಿಂದ ಧರಿಸುವ ಉತ್ತರೀಯದ ಧಾರಣವನ್ನು ಮಾಡ-ಬಾರದು. ಮತ್ತು ದರ್ಶಕಾಲದ ನಿಮಿತ್ತವಾಗಿ ಸ್ನಾನವನ್ನೂ ದರ್ಶಶ್ರಾದ್ಧ-ವನ್ನೂ ಆಚರಿಸಬಾರದು.

ಪಾದುಕಾರೋಹಣಂ ಚೈವ ಯೋಗಪಟ್ಟಕಮೇವ ಚ ।
ನ ಜೀವತ್ಪಿತೃಕಃ ಕುರ್ಯಾದ್ಗಯಾಶ್ರಾದ್ಧಂ ತಥೈವ ಚ ॥೬೦॥

ದೀಪಭಾಣ್ಡಮಯೀ ಛಾಯಾ ವಿಭೀತಕಕುರಣ್ಟಜಾ ।
ವರ್ಜನೀಯಾ ಸದಾ ಪುತ್ರ ಯದಿ ಜೀವಿತುಮಿಚ್ಛಸಿ ॥೬೧॥

ಅಧೋವಸ್ತ್ರೇಣ ಯೋ ವಾಯುಂ ಕುರುತೇ ಶಿರಸಿ ದ್ವಿಜ ।
ಸ್ಥಾಲೇನ ಚರ್ಮಶೂರ್ಪಾಭ್ಯಾಂ ಸುಕೃತಂ ತಸ್ಯ ನಶ್ಯತಿ ॥೬೨॥

ಅಲರ್ಕ ಉವಾಚ :—

ಭವತ್ಯಾ ಕೀರ್ತಿತಾಭೋಜ್ಯಾ ಯ ಏತೇ ಸೂತಿಕಾದಯಃ ।
ಅಮೀಷಾಂ ಶ್ರೋತುಮಿಚ್ಛಾಮಿ ತತ್ತ್ವತೋ ಲಕ್ಷಣಾನಿಹ ॥೬೩॥

---

೬೦. ಮತ್ತು ಜೀವತ್ಪಿತೃಕನಾದ ಮನುಷ್ಯನು ಪಾದುಕೆಯಲ್ಲಿ ಆರೋಹಣಮಾಡಬಾರದು. ಯೋಗಪಟ್ಟವನ್ನು ಧರಿಸಬಾರದು. ಮತ್ತು ಪಿತೃವರ್ಗವನ್ನು ಉದ್ದೇಶಿಸಿ ಗಯಾಶ್ರಾದ್ಧವನ್ನು ಮಾಡಬಾರದು.

೬೧. ಪುತ್ರನೆ! ದೀಪಸ್ತಂಭದ ಛಾಯೆ, ತಾರೇಗಿಡದ ನೆಳಲು, ಮತ್ತು ಮುಳ್ಳುಗೋರಂಟೆ ಗಿಡದ ನೆಳಲು—ಇವುಗಳು ಪ್ರಾಣಹಾನಿಯನ್ನು ಉಂಟುಮಾಡುವುವು. ಆದ್ದರಿಂದ ನೀನು ಜೀವಂತನಾಗಿ ಇರಲು ಇಚ್ಛಿಸುವುದಾದರೆ ಅವುಗಳನ್ನು ವರ್ಜಿಸಬೇಕು.

೬೨. ಪುತ್ರನೆ! ಉಟ್ಟಿರುವ ಕೆಳಗಣ ವಸ್ತ್ರದಿಂದ ಯಾವ ಮಾನವನು ತಲೆಗೆ ಗಾಳಿಯನ್ನು ಬೀಸಿಕೊಳ್ಳುವನೊ; ಅಥವಾ ಆಸನ, ಮೊರ, ಚರ್ಮಗಳಿಂದ ಬೀಸಿಕೊಳ್ಳುವನೊ; ಅವನ ಸುಕೃತವೆಲ್ಲವೂ ನಾಶವಾಗುವುದು.

ಅಲರ್ಕನು ಹೀಗೆ ಹೇಳಿದನು :—

೬೩. ಜನನಿಯೆ! ಸೂತಿಕಾ-ಷಣ್ಢ ಮುಂತಾದವರು ಅಭೋಜ್ಯರೆಂದು ನಿನ್ನಿಂದ ಹೇಳಲ್ಪಟ್ಟಿದೆ. ಸೂತಿಕಾ-ಷಣ್ಢ ಮುಂತಾದವರ ನೈಜಲಕ್ಷಣಗಳನ್ನು ನಿನ್ನಿಂದ ಕೇಳಲು ಕುತೂಹಲವುಳ್ಳವನಾಗಿದ್ದೇನೆ.

ಮದಾಲಸೋವಾಚ :—

ಬ್ರಾಹ್ಮಣೀ ಬ್ರಾಹ್ಮಣಸ್ಯೇಹ ಯಾವರೋಧತ್ವಮಾಗತಾ ।
ತಾವುಭೌ ಸೂತಿಕೇತ್ಯುಕ್ತೌ ತಯೋರನ್ನಂ ವಿಗರ್ಹಿತಮ್ ॥೬೪॥

ನ ಜುಹೋತ್ಯುಚಿತೇ ಕಾಲೇ ನಾಶ್ನಾತಿ ನ ದದಾತಿ ಚ ।
ಪಿತೃದೇವಾರ್ಚನಾದ್ಧೀನಃ ಷಣ್ಢಃ ಸ ಪರಿಗೀಯತೇ ॥೬೫॥

ದಮ್ಭಾರ್ಥೀ ಯಜತೇ ಯಶ್ಚ ತಪ್ಯತೇ ಚ ತಪಸ್ತಥಾ ।
ನ ಪರಾರ್ಥಮಿಹೇತ್ಯುಕ್ತಃ ಸ ಮಾರ್ಜಾರಃ ಸ್ಮೃತೋ ಬುಧೈಃ॥೬೬॥

ವಿಭವೇ ಸತಿ ನೈವಾತ್ತಿ ನ ದದಾತಿ ಜುಹೋತಿ ಚ ।
ತಮಾಹುರಾಖುಸ್ತಸ್ಯಾನ್ನಂ ಭುಕ್ತ್ವಾ ಕೃಚ್ಛ್ರೇಣ ಶುದ್ಧ್ಯತಿ ॥೬೭॥

ಮದಾಲಸೆಯು ಇಂತೆಂದಳು :—

೬೪. ವಿಪ್ರಪತ್ನಿಯು ಬ್ರಾಹ್ಮಣಜಾತಿಯ ಪರಪುರುಷನ ಸಂಗವನ್ನು ಮಾಡಿದರೆ ಆ ಸ್ತ್ರೀಪುರುಷರು ಇಬ್ಬರೂ " ಸೂತಿಕಾ " ಎಂದು ಧಾರ್ಮಿಕರಿಂದ ಕರೆಯಲ್ಪಡುವರು. ಅವರು ಕೊಡುವ ಅನ್ನವು ನಿಂದ್ಯವಾದ್ದರಿಂದ ಭೋಜನಾರ್ಹವಲ್ಲ.

೬೫. ಯಾವ ಮನುಷ್ಯನು ಹೋಮಮಾಡಬೇಕಾದ ಕಾಲದಲ್ಲಿ ಹೋಮಮಾಡುವುದಿಲ್ಲವೊ; ತಾನು ಭುಂಜಿಸುವುದಿಲ್ಲವೊ; ಮತ್ತು ಪರರಿಗೆ ದಾನಮಾಡುವುದಿಲ್ಲವೊ; ಹಾಗು ಪಿತೃ-ದೇವತಾರ್ಚನದಿಂದ ಹೀನನಾಗಿರುವನೊ ; ಅವನು " ಷಂಢ " ಎಂದು ಕರೆಯಲ್ಪಡುವನು.

೬೬. ಯಾವ ಮಾನವನು ತನ್ನ ಮಹತ್ವವನ್ನು ತೋರ್ಪಡಿಸಿಕೊಳ್ಳುವುದಕ್ಕೋಸ್ಕರ ಯಾಗ ಮತ್ತು ತಪಸ್ಸುಗಳನ್ನು ಮಾಡುವನೊ ; ಮತ್ತು ಯಾವ ಮಾನವನ ಸರ್ವಸ್ವವೂ ಸ್ವಾರ್ಥಮಾತ್ರಕ್ಕೆ ಉಪಯೋಗವಾಗುವುದೊ ; ಅಂತಹವನು ವಿದ್ವಾಂಸರಿಂದ " ಮಾರ್ಜಾರ " ಎಂದು ಕರೆಯಲ್ಪಡುವನು.

೬೭. ಮತ್ತು ದಾನ-ಹೋಮ-ಭೋಗಗಳಿಗೆ ಸಾಕಾದಷ್ಟು ಐಶ್ವರ್ಯವಿದ್ದರೂ ಕೂಡ ಯಾವನು ದಾನ-ಹೋಮ-ಭೋಗಗಳನ್ನು ಮಾಡುವುದಿಲ್ಲವೊ ; ಅವನನ್ನು " ಆಖು " ಎಂದು ಕರೆಯುವರು. ಅಂತಹ ಪಾಪಿಯ ಅನ್ನವನ್ನು ಭುಂಜಿಸಿದವನು ಕೃಚ್ಛ್ರಪ್ರಾಯಶ್ಚಿತ್ತದಿಂದ ಶುದ್ಧನಾಗುವನು.

ಸಭಾಗತಾನಾಂ ಮರ್ತ್ಯಾನಾಂ ಪಕ್ಷಪಾತಂ ಸಮಾಶ್ರಯೇತ್ ।
ತಮಾಹುಃ ಕುಕ್ಕುಟಂ ದೇವಾಸ್ತಸ್ಯಾಪ್ಯನ್ನಂ ವಿಗರ್ಹಿತಮ್ ॥೬೮॥

ಸ್ವಧರ್ಮಂ ಯಃ ಸಮುಚ್ಛಿದ್ಯ ಪರಧರ್ಮಂ ಸಮಾಶ್ರಯೇತ್ ।
ಅನಾಪದಿ ಸ ವಿದ್ವದ್ಭಿಃ ಪತಿತಃ ಪರಿಕೀರ್ತಿತಃ ॥೬೯॥

ದೇವತ್ಯಾಗೀ ಗುರುತ್ಯಾಗೀ ಗುರುಪತ್ನ್ಯುಜ್ಝಕಸ್ತಥಾ ।
ಗೋಬ್ರಾಹ್ಮಣಸ್ತ್ರೀವಧಕೃದಪವಿದ್ಧಃ ಪ್ರಚಕ್ಷತೇ ॥೭೦॥

ಯೇಷಾಂ ಕುಲೇ ನ ವೇದೋಽಸ್ತಿ ನ ಶಾಸ್ತ್ರಂ ನೈವ ಚ ವ್ರತಮ್ ।
ತೇ ನಗ್ನಾಃ ಕೀರ್ತಿತಾಃ ಸದ್ಭಿಸ್ತೇಷಾಮನ್ನಂ ವಿಗರ್ಹಿತಮ್ ॥೭೧॥

---

೬೮. ಒಂದು ಗುಂಪಿನಲ್ಲಿ ಸೇರಿದ ಮಾನವರ ವಿಷಯದಲ್ಲಿ ಯಾವನು ಪಕ್ಷಪಾತವನ್ನು ತೋರಿಸುವನೊ; ದೇವತೆಗಳು ಅಂತಹ ಮಾನವನನ್ನು "ಕುಕ್ಕುಟ" ಎಂದು ಕರೆಯುವರು. ಅವನ ಅನ್ನವು ನಿಂದ್ಯವಾದುದರಿಂದ ಭೋಜನಕ್ಕೆ ಅರ್ಹವಾದುದಲ್ಲ.

೬೯. ಯಾವ ಮನುಜನು ಆಪತ್ಕಾಲ ಒದಗದಿದ್ದರೂ ಸ್ವೇಚ್ಛೆಯಿಂದ ಸ್ವಧರ್ಮವನ್ನು ಬಿಟ್ಟು ಪರಧರ್ಮವನ್ನು ಸೇವಿಸುವನೊ; ವಿದ್ವಾಂಸರು ಅಂತಹ ಪರಧರ್ಮಾವಲಂಬಿಯನ್ನು "ಪತಿತ" ಎಂದು ವ್ಯವಹರಿಸುತ್ತಾರೆ.

೭೦. ಹಾಗು ಯಾವ ಮಾನವನು ವಿಹಿತವಾದ ಅರ್ಚನವನ್ನು ಮಾಡದೆ ದೇವತೆಯನ್ನು ತ್ಯಜಿಸುವನೊ; ಕರ್ತವ್ಯವಾದ ಶುಶ್ರೂಷೆಯನ್ನು ಮಾಡದೆ ಗುರು-ಪತ್ನಿಯರನ್ನು ತ್ಯಜಿಸುವನೊ; ಮತ್ತು ಗೋವು-ಬ್ರಾಹ್ಮಣ-ಸ್ತ್ರೀಯರ ಹತ್ಯಾಪಾತಕವನ್ನು ಮಾಡುವನೊ; ಅವನು "ಅಪವಿದ್ಧ" ಎಂದು ಹೇಳಲ್ಪಟ್ಟಿರುವನು.

೭೧. ಯಾವ ಮಾನವರ ವಂಶದಲ್ಲಿ ವೇದಾಧ್ಯಯನವಿಲ್ಲವೊ; ಶಾಸ್ತ್ರ-ಪಠನವು ದೂರವಾಗಿದೆಯೊ; ಅಥವಾ ಆಯಾಯ ವ್ರತಾನುಷ್ಠಾನವು ಲೋಪಹೊಂದಿರುವುದೊ; ಸಾಧುಗಳು ಅಂತಹವರನ್ನು "ನಗ್ನ" ಎಂದು ಕೀರ್ತಿಸಿರುವರು. ಅವರ ಅನ್ನವು ಅಭೋಜ್ಯವಾದುದು.

ಆಶಾಕರ್ತುಸ್ತ್ವದಾತಾ ಚ ದಾತುಶ್ಚ ಪ್ರತಿಷೇಧಕಃ ।
ಶರಣಾಗತಂ ಯಸ್ತ್ಯಜತಿ ಸ ಚಣ್ಡಾಲೋ ನರಾಧಮಃ ॥೭೨॥

ಯೋ ಬಾನ್ಧವೈಃ ಪರಿತ್ಯಕ್ತಃ ಸಾಧುಭಿರ್ಬ್ರಾಹ್ಮಣೈರಪಿ ।
ಕುಣ್ಡಾಶೀ ಯಶ್ಚ ತಸ್ಯಾನ್ನಂ ಭುಕ್ತ್ವಾ ಚಾನ್ದ್ರಾಯಣಂ ಚರೇತ್ ॥೭೩॥

ಯೋ ನಿತ್ಯಕರ್ಮಣೋ ಹಾನಿಂ ಕುರ್ಯಾನ್ನೈಮಿತ್ತಿಕಸ್ಯ ಚ ।
ಭುಕ್ತ್ವಾನ್ನಂ ತಸ್ಯ ಶುದ್ಧ್ಯೈ ಚ ತ್ರಿರಾತ್ರೋಪೋಷಿತೋ ನರಃ॥೭೪॥

ಯಸ್ಯ ಚಾನುದಿನಂ ಹಾನಿರ್ಗೃಹೇ ನಿತ್ಯಸ್ಯ ಕರ್ಮಣಃ ।
ಯಶ್ಚ ಬ್ರಾಹ್ಮಣಸನ್ತ್ಯಕ್ತಃ ಕಿಲ್ಬಿಷೀ ಸ ನರಾಧಮಃ ॥೭೫॥

---

೭೨. ದಾನಮಾಡುವ ಶಕ್ತಿಯನ್ನು ಹೊಂದಿರುವ ಯಾವ ಮಾನವನು ಆಶೆಯನ್ನು ತೋರಿಸಿದ ಅರ್ಥಿಗೆ ದಾನಮಾಡುವುದಿಲ್ಲವೊ ; ಮತ್ತೊಬ್ಬನು ದಾನಮಾಡುವುದನ್ನು ನಿಷೇಧಿಸುವನೊ ; ಮತ್ತು ಶರಣಾಗತನನ್ನು ರಕ್ಷಿಸದೆ ಬಿಡುವನೊ ; ಅವನು ನರಾಧಮನಾದ ಚಂಡಾಲನೆನಿಸಿರುವನು.

೭೩. ಯಾವ ಮನುಜನು ಬಂಧುಜನ, ಸಾಧು-ಸಂತರು ಮತ್ತು ಬ್ರಾಹ್ಮಣರಿಂದ ತ್ಯಜಿಸಲ್ಪಟ್ಟಿರುವನೊ ; ಮತ್ತು ಯಾವ ಮನುಜನು ಕುಂಡ-ಗೋಲಕರ ಅನ್ನವನ್ನು ಭುಂಜಿಸುವನೋ ; ಅವರ ಅನ್ನವನ್ನು ಭುಂಜಿಸಿದವನು ಪಾಪಪರಿಹಾರಕ್ಕೋಸ್ಕರ ಚಾಂದ್ರಾಯಣ ಪ್ರಾಯಶ್ಚಿತ್ತವನ್ನು ಆಚರಿಸಬೇಕು.

೭೪. ಯಾವನು ತನಗೆ ವಿಹಿತವಾದ ನಿತ್ಯಕರ್ಮ-ನೈಮಿತ್ತಿಕ ಕರ್ಮ-ಗಳನ್ನು ತ್ಯಜಿಸುವನೊ ; ಅಂತಹ ಪಾತಕಿಯ ಅನ್ನವನ್ನು ಭುಂಜಿಸಿದವನು ಆ ಪಾಪ ಶುದ್ಧಿಗೋಸ್ಕರ ಮೂರು ದಿನಗಳು ಪೂರ್ತಿಯಾಗಿ ಉಪವಾಸಮಾಡಬೇಕು.

೭೫. ಯಾವ ಗೃಹಸ್ಥನ ಮನೆಯಲ್ಲಿ ಪ್ರತಿದಿನವೂ ನಿತ್ಯಕರ್ಮಾನು-ಷ್ಠಾನಕ್ಕೆ ಲೋಪವಿರುವುದೊ ; ಯಾವ ಗೃಹಸ್ಥನು ಬ್ರಾಹ್ಮಣರಿಂದ ತ್ಯಜಿಸಲ್ಪ-ಟ್ಟಿರುವನೊ ; ಅವನು ಪಾತಕಿಯಾದ ನರಾಧಮನೆಂದು ಅರಿಯಬೇಕು.

ನಿತ್ಯಸ್ಯ ಕರ್ಮಣೋ ಹಾನಿಂ ನ ಕುರ್ವೀತ ಕದಾಚನ ।
ತಸ್ಯ ತ್ವಕರಣೇ ಬನ್ಧಃ ಕೇವಲಂ ಮೃತಜನ್ಮಸು ॥೭೬॥

ದಶಾಹಂ ಬ್ರಾಹ್ಮಣಸ್ತಿಷ್ಠೇದ್ದಾನಹೋಮಾದಿವರ್ಜಿತಃ ।
ಕ್ಷತ್ರಿಯೋ ದ್ವಾದಶಾಹಂ ಚ ವೈಶ್ಯೋ ಮಾಸಾರ್ಧಮೇವ ಚ ॥೭೭॥

ಶೂದ್ರಸ್ತು ಮಾಸಮಾಸೀತ ನಿತ್ಯಕರ್ಮವಿಧಿಚ್ಯುತಃ ॥೭೮॥
ಪಾದಕೃಚ್ಛ್ರಂ ತತಃ ಕೃತ್ವಾ ಗಾಂ ದತ್ತ್ವಾ ಶುದ್ಧಿಮಾಪ್ನುಯಾತ್ ॥೭೯॥
ತತಃ ಪರಂ ನಿಜಂ ಕರ್ಮ ಕುರ್ಯುಃ ಸರ್ವೇ ಯಥೋದಿತಮ್ ॥೮೦॥

---

೭೬. ಮಾನವನು ತನಗೆ ವಿಹಿತವಾದ ನಿತ್ಯಕರ್ಮಗಳ ಅನುಷ್ಠಾನವನ್ನು ಯಾವಾಗಲೂ ತ್ಯಜಿಸಿಬಾರದು. ನಿತ್ಯಕರ್ಮತ್ಯಾಗದಿಂದ ಜನ್ಮ-ಮರಣಗಳೆಂಬ ಸಂಸಾರದುಃಖಬಂಧವು ಶಾಶ್ವತವಾಗಿರುವುದು.

೭೭. ಆದರೆ ಜನನ-ಮರಣಗಳ ಆಶೌಚಸಮಯದಲ್ಲಿ ಮಾತ್ರ ದಾನ-ಹೋಮ ಮುಂತಾದ ನಿತ್ಯಕರ್ಮಗಳನ್ನು ಬಿಟ್ಟು ಬ್ರಾಹ್ಮಣನು ಹತ್ತುದಿನಗಳ-ವರೆಗೂ, ಕ್ಷತ್ರಿಯನು ಹನ್ನೆರಡು ದಿನಗಳ ವರೆಗೂ ಮತ್ತು ವೈಶ್ಯನು ಹದಿನೈದು ದಿನಗಳ ವರೆಗೂ ಇರಬೇಕು.

೭೮. ಶೂದ್ರನು ಜಾತಾಶೌಚ-ಮೃತಾಶೌಚ ಸಮಯಗಳಲ್ಲಿ ತನ್ನ ನಿತ್ಯಕರ್ಮಗಳನ್ನು ಬಿಟ್ಟು ಒಂದು ಮಾಸ ಪೂರ್ತಿಯಾಗಿ ಇರಬೇಕು. ಹೀಗೆ ಅವರವರಿಗೆ ವಿಹಿತವಾದ ಆಶೌಚದಿನಗಳನ್ನು ಬಿಟ್ಟು ಮಿಕ್ಕ ದಿನಗಳಲ್ಲಿ ನಿತ್ಯ-ನೈಮಿತ್ತಿಕ ಕರ್ಮಗಳನ್ನು ತ್ಯಜಿಸಬಾರದು.

೭೯. ರೋಗದಿಂದ ಅಥವಾ ಇನ್ನಾವುದೊ ಗೃಹಕೃತ್ಯದ ಪ್ರಸಂಗದಿಂದ ನಿತ್ಯಕರ್ಮಾನುಷ್ಠಾನದಿಂದ ಶೂನ್ಯನಾದ ಮಾನವನು ಪಾದಕೃಚ್ಛ್ರಪ್ರಾಯ-ಶ್ಚಿತ್ತವನ್ನು ಮಾಡಿ ಒಂದು ಗೋವನ್ನು ದಾನಮಾಡಿ ಪಾಪದಿಂದ ಮುಕ್ತ-ನಾಗುವನು.

೮೦. ರೋಗ ಮುಂತಾದ ಪ್ರಸಂಗದಿಂದ ನಿತ್ಯ-ನೈಮಿತ್ತಿಕ ಕರ್ಮವನ್ನು ತ್ಯಜಿಸಿದವರು ಪ್ರಾಯಶ್ಚಿತ್ತದಿಂದ ಶುದ್ಧರಾಗಿ ಮುಂದೆ ಯಥಾವಿಧಿಯಾಗಿ ತಮ್ಮ ಕರ್ಮಾನುಷ್ಠಾನದಲ್ಲಿ ತತ್ಪರರಾಗಬೇಕು.

ಪ್ರೇತಾಯ ಸಲಿಲಂ ದೇಯಂ ಬಹಿರ್ಗೇಹಾಚ್ಚ ಗೋತ್ರಿಕೈಃ ।
ಪ್ರಥಮೇಽಹ್ನಿ ತೃತೀಯೇ ವಾ ಸಪ್ತಮೇ ನವಮೇ ತಥಾ ॥೮೧॥

ಭಸ್ಮಾಸ್ಥಿಚಯನಂ ಕಾರ್ಯಂ ಚತುರ್ಥೇ ಗೋತ್ರಿಕೈರ್ದಿನೇ ।
ಊರ್ಧ್ವಂ ಸಞ್ಚಯನಾತ್ತೇಷಾಮಙ್ಗಸ್ಪರ್ಶೋ ವಿಧೀಯತೇ ॥೮೨॥

ಸೋದಕೈಸ್ತು ಕ್ರಿಯಾಃ ಸರ್ವಾಃ ಕಾರ್ಯಾಃ ಸಞ್ಚಯನಾತ್ಪರಮ್ ।
ಸ್ಪರ್ಶ ಏವ ಸಪಿಣ್ಡಾನಾಂ ಮೃತಾಹನಿ ತಥೋಭಯೋಃ ॥೮೩॥

ವೃಕ್ಷಾಹಿಗೋದಂಷ್ಟ್ರಿಶಸ್ತ್ರತೋಯೋದ್ಬನ್ಧನವಹ್ನಿಷು ।
ವಿಷಪ್ರಪಾತಾದಿಮೃತೇ ಪ್ರಾಯೋನಾಶಕಯೋರಪಿ ॥೮೪॥

---

೮೧. ಮರಣಹೊಂದಿದ ಜಂತುವಿಗೆ ಅವನ ಗೋತ್ರದಲ್ಲಿ ಜನಿಸಿದ ಕರ್ಮಾಧಿಕಾರಿಗಳು ಮನೆಯ ಹೊರಗೆ ಮೊದಲನೆಯ ದಿನ, ಮೂರನೆಯ ದಿನ, ಏಳನೆಯ ದಿನ ಅಥವಾ ಒಂಭತ್ತನೆಯ ದಿನದಲ್ಲಿ ಜಲಾಂಜಲಿಯನ್ನು ಕೊಡಬೇಕು.

೮೨. ಮೃತ್ಯುವನ್ನು ಹೊಂದಿರುವ ಮನುಷ್ಯನ ದಹನವಾದ ಎಡೆಯಲ್ಲಿ ಕರ್ಮಾಧಿಕಾರಿಗಳು ನಾಲ್ಕನೆಯ ದಿನದಲ್ಲಿ ಭಸ್ಮ-ಅಸ್ಥಿಗಳನ್ನು ಒಟ್ಟುಗೂಡಿಸಬೇಕು. ಅಸ್ಥಿಸಂಚಯನವಾದ ತರುವಾಯ ಗೋತ್ರದ ಜನರಲ್ಲಿ ಪರಸ್ಪರವಾಗಿ ಅಂಗಸ್ಪರ್ಶವು ದುಷ್ಟವಲ್ಲವೆಂದು ಹೇಳಲ್ಪಟ್ಟಿದೆ.

೮೩. ಅಗ್ನಿಸಂಚಯನಾನಂತರದಲ್ಲಿ ಸೋದಕರಾದ ಬಂಧುಗಳು ಔರ್ಧ್ವದೇಹಿಕವಾದ ಎಲ್ಲ ಕ್ರಿಯೆಗಳನ್ನು ನೆರವೇರಿಸಬೇಕು. ಮೃತದಿನದಲ್ಲಿ ಸಪಿಂಡ-ಸೋದಕರು ಮಾಡುವ ಕರ್ತವ್ಯವು ಸ್ಪರ್ಶಮಾತ್ರವೇ ಹೊರತು ಇನ್ನಾವ ಕ್ರಿಯೆಯೂ ಇಲ್ಲ.

೮೪. ವೃಕ್ಷ, ಸರ್ಪ, ಗೋವು, ಹುಲಿ-ಸಿಂಹ ಮುಂತಾದ ಕೋರೆಹಲ್ಲಿನ ಪ್ರಾಣಿ, ಶಸ್ತ್ರ, ಜಲ, ನೇಣುಹಾಕಿಕೊಳ್ಳುವುದು, ಅಗ್ನಿ, ವಿಷ, ಎತ್ತರದಿಂದ ಬೀಳುವುದು, ಪ್ರಾಯೋಪವೇಶ ಮತ್ತು ಉಪವಾಸ—ಈ ನಿಮಿತ್ತಗಳಿಂದ ಮೃತರಾದವರ ವಿಷಯದಲ್ಲಿ ಸಪಿಂಡ-ಸೋದಕರಿಗೆ ಸದ್ಯಃ ಶೌಚವು ಹೇಳಲ್ಪಟ್ಟಿದೆ.

ಬಾಲೇ ದೇಶಾನ್ತರಸ್ಥೇ ಚ ತಥಾ ಪ್ರವ್ರಜಿತೇ ಮೃತೇ ।
ಸದ್ಯಃ ಶೌಚಮಥಾನ್ಯೈಶ್ಚ ತ್ರ್ಯಹಮುಕ್ತಮಶೌಚಕಮ್ ॥೮೫॥

ನೈವೋರ್ಧ್ವದೈಹಿಕಂ ಕಾರ್ಯಂ ನ ಚ ಕಾರ್ಯೋದಕಕ್ರಿಯಾ ।
ಗರ್ಭಸ್ರಾವೇ ತದೇವೋಕ್ತಂ ಪೂರ್ಣಕಾಲೇನ ಶುದ್ಧ್ಯತಿ ॥೮೬॥

ಬ್ರಾಹ್ಮಣಾನಾಮಹೋರಾತ್ರಂ ಕ್ಷತ್ರಿಯಾಣಾಂ ದಿನತ್ರಯಮ್ ।
ಷಡ್ರಾತ್ರಮಪಿ ವೈಶ್ಯಾನಾಂ ಶೂದ್ರಾಣಾಂ ದ್ವಾದಶಾಹ್ನಿಕಮ್ ॥೮೭॥

ಸಪಿಣ್ಡಾನಾಂ ಸಪಿಣ್ಡಸ್ತು ಮೃತೇಽನ್ಯಸ್ಮಿನ್ಮೃತೋ ಯದಿ ।
ಪೂರ್ವಾಶೌಚಸಮಾಖ್ಯಾತೈಃ ಕಾರ್ಯಾ ತಸ್ಯ ದಿನೈಃ ಕ್ರಿಯಾ ॥೮೮॥

---

೮೫. ಹಾಗು ಬಾಲ, ದೇಶಾಂತರಪ್ರವಾಸಿ ಮತ್ತು ಸನ್ಯಾಸಿ—ಇವರು ಮೃತರಾದರೆ ಸದ್ಯಃ ಶೌಚವೆಂದು ಕೆಲವರಿಂದ ಹೇಳಲ್ಪಟ್ಟಿರುವುದು. ಮತ್ತೆ ಕೆಲವರು ಮೂರುದಿನಗಳು ಕಳೆದ ಮೇಲೆ ಶೌಚವುಂಟಾಗುವುದೆಂದು ಹೇಳುವರು.

೮೬. ಹಾಗೆ ಅಪಮೃತ್ಯು-ದುರ್ಮರಣಗಳನ್ನು ಹೊಂದಿದವರಿಗೆ ಔರ್ಧ್ವದೇಹಿಕಕ್ರಿಯೆಯನ್ನೂ ಉದಕಾಂಜಲಿದಾನವನ್ನೂ ಮಾಡಬಾರದು. ಗರ್ಭಸ್ರಾವಹೊಂದಿದ ಜಂತುವಿಗೂ ಯಾವ ಕ್ರಿಯೆಯೂ ಇಲ್ಲ. ಆಶೌಚವು ಮಾತ್ರ ತನ್ನ ಅವಧಿ ದಿನಗಳವರೆಗೆ ಇದ್ದು ಅನಂತರ ಶುದ್ಧಿಯುಂಟಾಗುವುದು.

೮೭. ಗರ್ಭಸ್ರಾವ ಮುಂತಾದ ನಿಮಿತ್ತಗಳಲ್ಲಿ ಬ್ರಾಹ್ಮಣರಿಗೆ ಒಂದು ದಿನವೂ, ಕ್ಷತ್ರಿಯರಿಗೆ ಮೂರು ದಿನಗಳೂ ವೈಶ್ಯನಿಗೆ ಆರು ದಿನಗಳೂ ಮತ್ತು ಶೂದ್ರನಿಗೆ ಹನ್ನೆರಡು ದಿನಗಳೂ ಆಶೌಚವಿರುವುದು. ಆ ದಿನಗಳು ಪೂರ್ಣವಾದ ಬಳಿಕ ಶುದ್ಧರಾಗುವರು.

೮೮. ಸಪಿಂಡರಲ್ಲಿ ಒಂದು ಮೃತಾಶೌಚವಿರುವಾಗ ಮತ್ತೊಬ್ಬನು ಸಪಿಂಡನು ಮರಣಹೊಂದಿದರೆ ಮೊದಲಿನ ಆಶೌಚದ ದಿನಗಣನೆಯಂತೆ ಅಯಾಯ ದಿನಗಳಲ್ಲಿ ನಡೆಯುವ ಕ್ರಿಯೆಯನ್ನು ಮಾಡಬೇಕು.

ಏಷ ಏವ ವಿಧಿರ್ದೃಷ್ಟೋ ಜನ್ಯನ್ಯಪಿ ಹಿ ಸೂತಕೇ ।
ಸಪಿಣ್ಡಾನಾಂ ಸಪಿಣ್ಡೇಷು ಯಥಾವತ್ಸೋದಕೇಷು ಚ ॥೮೯॥

ಜಾತೇ ಪುತ್ರೇ ಪಿತುಃ ಸ್ನಾನಂ ಸಚೈಲಂ ತು ವಿಧೀಯತೇ ।
ಮೃತೇ ಹಿ ಸರ್ವಬನ್ಧೂನಾಮಿತ್ಯಾಹ ಭಗವಾನ್ಭೃಗುಃ ॥೯೦॥

ತತ್ರಾಪಿ ಯದಿ ಚಾನ್ಯಸ್ಮಿಞ್ಜಾತೇ ಜಾಯೇತ ಚಾಪರಃ ।
ತತ್ರಾಪಿ ಶುದ್ಧಿರುದ್ದಿಷ್ಟಾ ಪೂರ್ವಜನ್ಮವತೋ ದಿನೈಃ ॥೯೧॥

ದಶದ್ವಾದಶಮಾಸಾರ್ಧಮಾಸಸಂಖ್ಯೈರ್ದಿನೈರ್ಗತೈಃ ।
ಸ್ವಾಃ ಸ್ವಾಃ ಕರ್ಮಕ್ರಿಯಾಃ ಕುರ್ಯುಃ ಸರ್ವೇ ವರ್ಣಾ ಯಥಾವಿಧಿ ॥೯೨॥

---

೮೯. ಆಶೌಚಾನುಷ್ಠಾನದ ವಿಧಿಯು ಜನನನಿಮಿತ್ತದಲ್ಲಿಯೂ ಇದೇ ರೀತಿಯಾಗಿ ಪ್ರಾಜ್ಞರಿಂದ ಹೇಳಲ್ಪಟ್ಟಿದೆ. ಸಪಿಂಡ-ಸೋದಕಬಂಧುಗಳಲ್ಲಿ ಎಲ್ಲರಲ್ಲಿಯೂ ಜನ್ಮ-ಮರಣಾಶೌಚಗಳ ದಿನಗಣನೆಯು ಒಂದೇ ವಿಧವಾಗಿದೆ.

೯೦. ಪುತ್ರನು ಜನಿಸಿದಾಗ ತಂದೆಗೆ ಮಾತ್ರ ಧರಿಸಿರುವ ವಸ್ತ್ರಸಮೇತ-ವಾಗಿ ಮಾಡುವ ಸಚೇಲ ಸ್ನಾನವು ವಿಹಿತವಾಗಿರುವುದು. ಮೃತನಾಗಿರುವ ವೇಳೆ-ಯಲ್ಲಿ ಸಮಸ್ತ ಬಂಧುಗಳಿಗೂ ಸಚೇಲಸ್ನಾನವು ಕರ್ತವ್ಯವೆಂದು ಪೂಜ್ಯನಾದ ಭೃಗುಮುನಿಯು ಹೇಳಿರುವನು.

೯೧. ಜಾತಾಶೌಚದ ಪ್ರಸಂಗದಲ್ಲಿಯೂ ಒಂದು ಮಗುವು ಹುಟ್ಟಿ ಆ ಜಾತಾಶೌಚವು ಇರುವಾಗ ಮತ್ತೊಂದು ಮಗುವು ಜನಿಸಿದರೆ ಮೊದಲಿನ ಜಾತಾ-ಶೌಚದ ದಿನಗಳ ಗಣನೆಯಿಂದಲೆ ಮುಂದಿನ ಜಾತಾಶೌಚದಿಂದಲೂ ಶುದ್ಧಿಯು ಉಂಟಾಗುವುದು.

೯೨. ಎಲ್ಲ ವರ್ಣದ ಜನರು ತಮಗೆ ವಿಹಿತವಾಗಿರುವಂತೆ ಹತ್ತು, ಹನ್ನೆರಡು, ಹದಿನೈದು ಮತ್ತು ಮೂವತ್ತು ದಿನಗಳ ಅವಧಿಯ ಆಶೌಚ ದಿನಗಳನ್ನು ಕಳೆದು ಯಥಾವಿಧಿಯಾಗಿ ತಮ್ಮ ತಮ್ಮ ಕರ್ತವ್ಯವಾದ ಕರ್ಮ-ಗಳನ್ನು ಆಚರಿಸಬೇಕು.

ಪ್ರೇತ ಮುದ್ದಿಶ್ಯ ಕರ್ತವ್ಯಮೇಕೋದ್ದಿಷ್ಟಂ ತತಃ ಪರಮ್ ।
ಸಪಿಣ್ಡೀಕರಣಂ ಚೈವ ಕಾರ್ಯಮಾವತ್ಸರಾನ್ನರೈಃ ॥೯೩॥

ತತಃ ಪಿತೃತ್ವಮಾಪನ್ನೇ ದರ್ಶಪೂರ್ಣಾದಿಭಿಸ್ತ್ರಿಭಿಃ ।
ಪ್ರೀಣಯಂಸ್ತಸ್ಯ ಕರ್ತವ್ಯಂ ಯಥಾಶ್ರುತಿನಿದರ್ಶನಮ್ ॥೯೪॥

ದಾನಾನಿ ಚೈವ ದೇಯಾನಿ ಬ್ರಾಹ್ಮಣೇಭ್ಯೋ ಮನೀಷಿಭಿಃ ॥೯೫॥

ಯದ್ಯದಿಷ್ಟತಮಂ ಲೋಕೇ ಯಚ್ಚಾಸ್ಯ ದಯಿತಂ ಗೃಹೇ ।
ತತ್ತದ್ಗುಣವತೇ ದೇಯಂ ತದೇವಾಕ್ಷಯಮಿಚ್ಛತಾ ॥೯೬॥

---

೯೩. ತರುವಾಯ ಮರಣಹೊಂದಿರುವ ಪ್ರೇತಜಂತುವನ್ನು ಉದ್ದೇಶಮಾಡಿ ಏಕೋದ್ದಿಷ್ಟವೆಂಬ ಶ್ರಾದ್ಧವನ್ನು ಮಾಡಬೇಕು. ಹಾಗು ಕರ್ಮಾಧಿಕಾರಿಗಳಾದ ಮಾನವರು ಒಂದು ವರ್ಷದ ಒಳಗಾಗಿ ಸಪಿಂಡೀಕರಣ ಶ್ರಾದ್ಧವನ್ನು ಮಾಡಬೇಕು.

೯೪. ಅನಂತರ ಪ್ರೇತಕ್ಕೆ ಪಿತೃತ್ವವು ಬಂದಂತೆ ಆಗುವುದರಿಂದ ಮುಂದೆ ಆಬ್ದಿಕ, ಪಾರ್ವಣ, ದರ್ಶಶ್ರಾದ್ಧಗಳಿಂದ ಪಿತೃಗಳಿಗೆ ತೃಪ್ತಿಯನ್ನು ಉಂಟುಮಾಡಬೇಕು. ಮತ್ತು ವೇದದಲ್ಲಿ ಹೇಳಿರುವಂತೆ ಪಿಂಡಪಿತೃಯಜ್ಞಾದಿಗಳನ್ನು ಆಚರಿಸಬೇಕು.

೯೫. ಪ್ರೇತಸಂಸ್ಕಾರವನ್ನು ಮಾಡುವ ಸಮಯದಲ್ಲಿ ಪ್ರೇತತೃಪ್ತಿಯನ್ನು ಬಯಸಿ ಜ್ಞಾನಿಯಾದ ಅಧಿಕಾರಿಯು ಬ್ರಾಹ್ಮಣರಿಗೆ ಅನೇಕ ದಾನಗಳನ್ನು ಕೊಡಬೇಕು. ಕರ್ತೃವು ಶ್ರದ್ಧೆಯಿಂದ ಕೂಡಿ ಸತ್ಪಾತ್ರದಲ್ಲಿ ಮಾಡುವ ದಾನವು ಅನಂತ ತೃಪ್ತಿಯನ್ನು ಕೊಡುವುದು.

೯೬. ಮರಣಹೊಂದಿದ ಮಾನವನಿಗೆ ಲೋಕದಲ್ಲಿ ಯಾವುದು ಇಷ್ಟವಾಗಿದ್ದಿತೊ ; ಮತ್ತು ಮನೆಯಲ್ಲಿ ಅವನಿಗೆ ಯಾವುದರಲ್ಲಿ ಪ್ರೀತಿಯಿದ್ದಿತೊ ; ಅದನ್ನು ಗುಣವಂತನಾದ ಸತ್ಪಾತ್ರನಲ್ಲಿ ದಾನಮಾಡಬೇಕು. ಅದರಿಂದ ಪಿತೃವಿಗೆ ಅಕ್ಷಯವಾದ ತೃಪ್ತಿಯುಂಟಾಗುವುದು.

ಪ್ರೇತಂ ಪ್ರೇತಂ ಸಮುದ್ದಿಶ್ಯ ಭೂಮಿಧೇನ್ವಾದಿಕಂ ಸ್ವಕಮ್
ದದ್ಯಾದ್ಯೇನಾಸ್ಯ ಸಮ್ಪ್ರೀತಾಃ ಪಿತರಃ ಸನ್ತಿ ಪುತ್ರಕ । ॥೯೭॥

ಪೂರ್ಣೈಸ್ತು ದಿವಸೈಃ ಸ್ಪೃಷ್ಟ್ವಾ ಸಲಿಲಂ ವಾಹನಾಯುಧಮ್
ಪ್ರತೋದದಣ್ಡೌ ಚ ತಥಾ ಸಮ್ಯಗ್ವರ್ಣಾಃ ಕೃತಕ್ರಿಯಾಃ ॥೯೮॥

ಸ್ವವರ್ಣಧರ್ಮನಿರ್ದಿಷ್ಟಮುಪಾದಾನಂ ತಥಾ ಕ್ರಿಯಾಃ
ಕುರ್ಯುಃ ಸಮಸ್ತಾಃ ಶುಚಯಃ ಪರತ್ರೇಹ ಚ ಭೂತಿದಾಃ ॥೯೯॥

ಅಧ್ಯೇತವ್ಯಾ ತ್ರಯೀ ನಿತ್ಯಂ ಭವಿತವ್ಯಂ ವಿಪಶ್ಚಿತಾ ।
ಧರ್ಮತೋ ಧನಮಾಹಾರ್ಯಂ ಯಷ್ಟವ್ಯಂ ಚಾಪಿ ಯತ್ನತಃ
॥೧೦೦॥

---

೯೭. ಪುತ್ರನೆ! ಭೂಮಿ, ಹಸು ಮುಂತಾದ ವಸ್ತುಗಳನ್ನು ಮತ್ತೆ ಮತ್ತೆ ಪ್ರೇತವನ್ನು ಉದ್ದೇಶಿಸಿ ದಾನಮಾಡಬೇಕು. ಹಾಗೆ ಅನೇಕ ವಿಧವಾದ ದಾನಗಳನ್ನು ಕೊಡುವುದರಿಂದ ಪಿತೃಗಳು ಹೆಚ್ಚಾದ ತೃಪ್ತಿಯನ್ನು ಹೊಂದುವರು.

೯೮. ಪಿತೃಕ್ರಿಯೆಯನ್ನು ಮಾಡಬೇಕಾದ ದಿನಗಳು ಪೂರ್ತಿಯಾಗಿ ಕಳೆದ ಮೇಲೆ ಜಲ, ವಾಹನ, ಆಯುಧ, ಚಾಟಿ, ದಂಡ ಮುಂತಾದುವುಗಳನ್ನು ಸ್ಪರ್ಶಿಸಬೇಕು. ಇದು ಕ್ಷತ್ರಿಯರಿಗೆ ಮಂಗಲಸ್ವೀಕಾರ ಕರ್ಮವಾಗುವುದು. ಹೀಗೆ ಪ್ರತಿಯೊಂದು ವರ್ಣದವರು ತಮ್ಮ ವಿಧಿಯಂತೆ ಕ್ರಿಯೆಯನ್ನು ಪೂರ್ತಿಗೊಳಿಸಬೇಕು.

೯೯. ಪ್ರತಿಯೊಬ್ಬ ಮಾನವನು ತನ್ನ ವರ್ಣ-ಧರ್ಮಗಳಿಗೆ ಅನುಗುಣವಾಗಿ ನಿರ್ದೇಶಿಸಲ್ಪಟ್ಟಿರುವ ಉಪಕರಣಗಳನ್ನು ಉಪಯೋಗಿಸಿ ಆಯಾಯ ಕ್ರಿಯೆಗಳನ್ನು ಆಚರಿಸಬೇಕು. ಹಾಗೆ ಪವಿತ್ರವಾಗಿರುವ ಎಲ್ಲ ಆಚಾರಗಳು ಇಹ-ಪರಲೋಕಗಳಲ್ಲಿ ಸಂಪತ್ತನ್ನು ಕೊಡುವುವು.

೧೦೦. ಗೃಹಸ್ಥ ಮಾನವನು ಮೂರು ವೇದಗಳನ್ನು ತಪ್ಪದೇ ಅಧ್ಯಯನ ಮಾಡಬೇಕು. ವಿಚಾರಪೂರ್ವಕವಾಗಿ ಜ್ಞಾನವನ್ನು ಆರ್ಜಿಸಿ ಜ್ಞಾನಿಯಾಗಬೇಕು. ಧರ್ಮಮಾರ್ಗದಿಂದ ಧನವನ್ನು ಸಂಪಾದಿಸಬೇಕು. ಮತ್ತು ಯತ್ನಪೂರ್ವಕವಾಗಿ ಯಾಗಾದಿ ಧರ್ಮಗಳನ್ನು ಆಚರಿಸಬೇಕು.

ಯಚ್ಚಾಪಿ ಕುರ್ವತೋ ನಾತ್ಮಾ ಜುಗುಪ್ಸಾಮೇತಿ ಪುತ್ರಕ ।
ತತ್ಕರ್ತವ್ಯಮಶಙ್ಕೇನ ಯನ್ನ ಗೋಪ್ಯಂ ಮಹಾಜನೇ ॥೧೦೧॥

ಏವಮಾಚರತೋ ವತ್ಸ ಪುರುಷಸ್ಯ ಗೃಹೇ ಸತಃ
ಧರ್ಮಾರ್ಥಕಾಮಸಂಪ್ರಾಪ್ತ್ಯಾ ಪರತ್ರೇಹ ಚ ಶೋಭನಮ್॥೧೦೨॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಅಲರ್ಕಾನುಶಾಸನೇ ಧರ್ಮಾಧರ್ಮನಿರೂಪಣಂ ನಾಮ ದ್ವಾತ್ರಿಂಶೋಽಧ್ಯಾಯಃ

---

೧೦೧. ಪುತ್ರನೆ! ಯಾವ ಕರ್ಮವನ್ನು ಆಚರಿಸುವುದರಿಂದ ಆತ್ಮವು ಜುಗುಪ್ಸೆಗೆ ಎಡೆಯಾಗಲಾರದೊ; ಅಂತಹ ಕರ್ಮವನ್ನು ಯಾವ ಶಂಕೆಯನ್ನೂ ಇಟ್ಟುಕೊಳ್ಳದೆ ನಿರ್ಭಯವಾಗಿ ಮಾಡಬೇಕು. ಮತ್ತು ತಾನು ಮಾಡಿರುವ ಕರ್ಮವನ್ನು ಮಹಾಜನರ ಎದುರಿನಲ್ಲಿ ಬಚ್ಚಿಡಬೇಕಾದುದಾಗಿ ಇರಬಾರದು.

೧೦೨. ಪುತ್ರನೆ! ಇಲ್ಲಿ ಹೇಳಿರುವ ವಿಧಿಯಂತೆ ಆಯಾಯ ಕರ್ಮಗಳನ್ನು ಆಚರಿಸುತ್ತಲಿರುವ, ಗೃಹಸ್ಥಾಶ್ರಮವನ್ನು ಕೈಗೊಂಡಿರುವ ಪುರುಷನಿಗೆ ಧರ್ಮ-ಅರ್ಥ-ಕಾಮಗಳೆಂಬ ತ್ರಿವರ್ಗವು ಸಿದ್ಧಿಸುವುದರಿಂದ ಇಹ-ಪರಲೋಕಗಳಲ್ಲಿ ಕಲ್ಯಾಣವುಂಟಾಗುವುದು.

ಮಾರ್ಕಂಡೇಯ ಮಹಾಪುರಾಣದಲ್ಲಿ ಮೂವತ್ತೆರಡನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ತ್ರಯೋವಿಂಶೋಽಧ್ಯಾಯಃ

(ಋತಧ್ವಜ-ಮದಾಲಸಯೋಃ ವನಪ್ರವೇಶಃ)

ಜಡ ಉವಾಚ :—

ಸ ಏವಮನುಶಿಷ್ಟಃ ಸನ್ಮಾತ್ರಾ ಸಂಪ್ರಾಪ್ಯ ಯೌವನಮ್ ।
ಋತಧ್ವಜಸುತಶ್ಚಕ್ರೇ ಸಮ್ಯಗ್ದಾರಪರಿಗ್ರಹಮ್ ॥೧॥

ಪುತ್ರಾಂಶ್ಚೋತ್ಪಾದಯಾಮಾಸ ಯಜ್ಞೈಶ್ಚಾಪ್ಯಯಜದ್ವಿಭುಃ ।
ಪಿತುಶ್ಚ ಸರ್ವಕಾಲೇಷು ಚಕಾರಾಜ್ಞಾನುಪಾಲನಮ್ ॥೨॥

ಮೂವತ್ತಮೂರನೆಯ ಅಧ್ಯಾಯ

ಜಡಪುತ್ರನಿಂತೆಂದನು :—

೧. ಋತಧ್ವಜನ ಪುತ್ರನಾದ ಅಲರ್ಕನು ತಾಯಿಯಿಂದ ಈ ವಿಧವಾಗಿ ಉಪದೇಶಿಸಲ್ಪಟ್ಟವನಾದನು. ಮತ್ತು ಕ್ರಮವಾಗಿ ತಾರುಣ್ಯವಯಸ್ಸನ್ನು ಹೊಂದಿ ಯಥಾವಿಧಿಯಾಗಿ ಭಾರ್ಯಾಪಾಣಿಗ್ರಹಣವನ್ನು ಮಾಡಿದನು.

೨. ತರುವಾಯ ಗೃಹಸ್ಥಧರ್ಮಗಳನ್ನು ಆಚರಿಸುವವನಾಗಿ ಅನೇಕ ಯಜ್ಞಗಳನ್ನು ಮಾಡಿದನು. ಪುತ್ರಸಂತತಿಯನ್ನು ಹೊಂದಿದನು. ಮತ್ತು ಎಲ್ಲ ಸಮಯಗಳಲ್ಲಿಯೂ ತಂದೆಯ ಆಜ್ಞಾವಚನದಂತೆ ನಡೆದುಕೊಂಡು ಆಜ್ಞೆಯನ್ನು ಪಾಲಿಸಿದನು.

ತತಃ ಕಾಲೇನ ಮಹತಾ ಸಂಪ್ರಾಪ್ಯ ಚರಮಂ ವಯಃ ।
ಚಕ್ರೇಽಭಿಷೇಕಂ ಪುತ್ರಸ್ಯ ತಸ್ಯ ರಾಜ್ಯೇ ಋತಧ್ವಜಃ ॥೩॥

ಭಾರ್ಯಯಾ ಸಹ ಧರ್ಮಾತ್ಮಾ ಯಿಯಾಸುಸ್ತಪಸೇ ವನಮ್ ।
ಅವತೀರ್ಣೋ ಮಹೀರಕ್ಷೋ ಮಹಾಭಾಗೋ ಮಹೀಪತಿಃ ॥೪॥

ಮದಾಲಸಾ ಚ ತನಯಂ ಪ್ರಾಹೇದಂ ಪಶ್ಚಿಮಂ ವಚಃ ।
ಕಾಮೋಪಭೋಗಸಂಸರ್ಗಪ್ರಹಾಣಾಯ ಸುತಸ್ಯ ವೈ ॥೫॥

ಮದಾಲಸೋವಾಚ :—

ಯದಾ ದುಃಖಮಸಹ್ಯಂ ತೇ ಪ್ರಿಯಬನ್ಧುವಿಯೋಗಜಮ್ ।
ಶತ್ರುಬಾಧೋದ್ಭವಂ ವಾಪಿ ವಿತ್ತನಾಶಾತ್ಮಸಂಭವಮ್ ॥೬॥

---

೩. ಕೆಲವು ಕಾಲವು ಕಳೆಯಲಾಗಿ ಋತಧ್ವಜನು ವಾರ್ಧಕ್ಯ ವಯಸ್ಸನ್ನು ಹೊಂದಿ ಮುಪ್ಪಿನ ಚಿಹ್ನಗಳಿಂದ ಆವರಿಸಲ್ಪಟ್ಟವನಾಗಿ ಆ ಅಲರ್ಕನೆಂಬ ಪುತ್ರನಿಗೆ ಪಟ್ಟಾಭಿಷೇಕವನ್ನು ಮಾಡಿ ರಾಜ್ಯಭಾರವನ್ನು ಅವನಿಗೆ ಒಪ್ಪಿಸಿದನು.

೪. ಧರ್ಮಾತ್ಮನೂ, ಭೂಮಿಯನ್ನು ಪಾಲಿಸಿದವನೂ, ಮತ್ತು ಮಹಾಭಾಗ್ಯಶಾಲಿಯೂ ಆದ ಋತಧ್ವಜರಾಜನು ತಪಶ್ಚರ್ಯೆಗೋಸ್ಕರ ವನವಾಸವನ್ನು ಮಾಡಲು ಬಯಸಿದವನಾಗಿ ಭಾರ್ಯೆಯೊಂದಿಗೆ ಅರಣ್ಯಕ್ಕೆ ಹೊರಟನು.

೫. ಆ ಸಮಯದಲ್ಲಿ ಮದಾಲಸೆಯು ಅಲರ್ಕನಿಗೆ ಕಾಮೋಪಭೋಗದ ವ್ಯಸನವುಂಟಾಗದ ಹಾಗೆ ರಾಜ್ಯಭಾರನಿರ್ವಹಣಕ್ಕೆ ಯೋಗ್ಯನಾದ ಪುತ್ರನನ್ನು ಕುರಿತು ಕಟ್ಟಕಡೆಯ ವಚನಗಳಿಂದ ಉಪದೇಶ ಮಾಡಿದಳು.

ಮದಾಲಸೆಯು ಹೀಗೆ ಹೇಳಿದಳು :—

೬. ಪುತ್ರನೆ ! ನೀನು ರಾಜ್ಯವನ್ನಾಳುತ್ತಿರಲು ನಿನಗೆ ಆಪ್ತಬಂಧುಗಳ ವಿಯೋಗದಿಂದ ಸಂಭವಿಸುವುದಾಗಲಿ, ಶತ್ರುಗಳ ಬಾಧೆಯಿಂದ ಉಂಟಾಗುವುದಾಗಲಿ ಅಥವಾ ಧನದ ನಾಶದಿಂದ ಜನಿಸುವುದಾಗಲಿ ಆದ ದುಃಖವು ಒಂದು ಸಮಯದಲ್ಲಿ ಬಂದರೂ ಬರಬಹುದು.

ಭವೇತ್ತತ್ಕುರ್ವತೋ ರಾಜ್ಯಂ ಗೃಹಧರ್ಮಾವಲಮ್ಬಿನಃ ।
ದುಃಖಾಯತನಭೂತೋ ಹಿ ಮಮತ್ವಾಲಮ್ಬನೋ ಗೃಹೀ ॥೭॥

ತದಾಸ್ಮಾತ್ಪುತ್ರ ನಿಷ್ಕೃಷ್ಯ ಮದ್ದತ್ತಾದಙ್ಗುಲೀಯಕಾತ್ ।
ವಾಚ್ಯಂ ತೇ ಶಾಸನಂ ಪಟ್ಟೇ ಸೂಕ್ಷ್ಮಾಕ್ಷರನಿವೇಶಿತಮ್ ॥೮॥

ಜಡ ಉವಾಚ :—

ಇತ್ಯುಕ್ತ್ವಾ ಪ್ರದದೌ ತಸ್ಮೈ ಸೌವರ್ಣಂ ಸಾಙ್ಗುಲೀಯಕಮ್ ।
ಆಶಿಷಶ್ಚಾಪಿ ಯಾ ಯೋಗ್ಯಾಃ ಪುರುಷಸ್ಯ ಗೃಹೇ ಸತಃ ॥೯॥

ತತಃ ಕುವಲಯಾಶ್ವೋಽಸೌ ಸಾ ಚ ದೇವೀ ಮದಾಲಸಾ ।
ಪುತ್ರಾಯ ದತ್ವಾ ತದ್ರಾಜ್ಯಂ ತಪಸೇ ಕಾನನಂ ಗತೌ ॥೧೦॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಮದಾಲಸೋಪಾಖ್ಯಾನಂ
ನಾಮ ತ್ರಯಸ್ತ್ರಿಂಶೋಽಧ್ಯಾಯಃ

---

೭. ಗೃಹಸ್ಥನಿಗೆ ವಿಹಿತವಾದ ಧರ್ಮಗಳನ್ನು ಆಚರಿಸುತ್ತಿದ್ದು, ಹಾಗು ರಾಜ್ಯಭಾರವನ್ನು ನಿರ್ವಹಿಸುತ್ತಿದ್ದ ನಿನಗೆ ಇಂತಹ ದುಃಖವು ಸಂಭವಿಸುವುದು ನಿರೀಕ್ಷಿಸಲು ಅರ್ಹವಾಗಿದೆ. ಮಮತೆಗೆ ಆಶ್ರಯನಾಗಿರುವ ಗೃಹಸ್ಥಮಾನವನು ದುಃಖಕ್ಕೆ ತವರುಮನೆಯಂತೆ ಇರುವನು.

೮. ಪುತ್ರನೆ! ಅಂತಹ ದುಃಖಪ್ರಸಂಗದಲ್ಲಿ ಪಟ್ಟವಸ್ತ್ರದಲ್ಲಿ ಸೂಕ್ಷ್ಮ-ವಾದ ಅಕ್ಷರಗಳಿಂದ ಬರೆಯಲ್ಪಟ್ಟ ಮತ್ತು ನಿನಗೆ ಹಿತವನ್ನು ಶಾಸನಮಾಡುವ ಉಪದೇಶವಚನವನ್ನು ನಾನು ಕೊಟ್ಟಿರುವ ಈ ಉಂಗುರದಿಂದ ತೆಗೆದು ಓದಿಕೊಳ್ಳಬೇಕು.

೯. ಮದಾಲಸೆಯು ಹೀಗೆಂದು ಹೇಳಿ ಆ ಅಲರ್ಕಪುತ್ರನಿಗೆ ಸುವರ್ಣ-ಮಯವಾದ ಒಂದು ಉಂಗುರವನ್ನು ಕೊಟ್ಟಳು. ಮತ್ತು ಗೃಹಸ್ಥಧರ್ಮದಲ್ಲಿದ್ದ ಪುರುಷನಿಗೆ ಯೋಗ್ಯವಾದ ಅನೇಕ ಆಶೀರ್ವಾದಗಳನ್ನು ಮಾಡಿದಳು.

೧೦. ತರುವಾಯ ಕುವಲಯಾಶ್ವರಾಜನೂ ಅವನ ಧರ್ಮಪತ್ನಿಯಾದ ಮದಾಲಸೆಯೂ ಸಮಸ್ತ ರಾಜ್ಯವೈಭವವನ್ನು ಪುತ್ರನಲ್ಲಿ ಒಪ್ಪಿಸಿ ತಪಶ್ಚರ್ಯೆ-ಯಿಂದ ಆತ್ಮನನ್ನು ಪವಿತ್ರವನ್ನಾಗಿ ಮಾಡಲು ಅರಣ್ಯಕ್ಕೆ ತೆರಳಿದರು.

ಮಾರ್ಕಂಡೇಯ ಪುರಾಣದಲ್ಲಿ ಮೂವತ್ತಮೂರನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಚತುಸ್ತ್ರಿಂಶೋಽಧ್ಯಾಯಃ

ಜಡ ಉವಾಚ :—

ಸೋಽಪ್ಯಲರ್ಕೋ ಯಥಾನ್ಯಾಯಂ ಪುತ್ರವನ್ಮುದಿತಾಃ ಪ್ರಜಾಃ ।
ಪಾಲಯಾಮಾಸ ಧರ್ಮಾತ್ಮಾ ಸ್ವೇ ಸ್ವೇ ಕರ್ಮಣ್ಯವಸ್ಥಿತಾಃ ॥೧॥

ದುಷ್ಟೇಷು ದಣ್ಡಶಿಷ್ಟೇಷು ಸಮ್ಯಕ್ಚ ಪರಿಪಾಲನಮ್ ।
ಕುರ್ವನ್ಪರಾಂ ಮುದಂ ಲೇಭೇ ಇಯಾಜ ಚ ಮಹಾಮಖೈಃ ॥೨॥

ಮೂವತ್ತನಾಲ್ಕನೆಯ ಅಧ್ಯಾಯ

ಜಡಪುತ್ರನು ಇಂತೆಂದನು :—

೧. ತರುವಾಯ ಧರ್ಮಾತ್ಮನಾದ ಆ ಅಲರ್ಕನು ತಮ್ಮ ತಮ್ಮ ಧರ್ಮಾನುಷ್ಠಾನದಲ್ಲಿ ನಿರತರಾದ ಮತ್ತು ಸಂತುಷ್ಟರಾದ ಪ್ರಜೆಗಳನ್ನು ರಾಜನೀತಿಯನ್ನು ಅನುಸರಿಸಿ ಪುತ್ರರಂತೆ ಪ್ರೇಮದಿಂದ ಪಾಲಿಸಿದನು.

೨. ಮತ್ತು ಅಲರ್ಕನು ಪ್ರಜೆಗಳಲ್ಲಿ ದುಷ್ಟರಾದವರನ್ನು ಶಿಕ್ಷೆಯಿಂದ ಸನ್ಮಾರ್ಗಕ್ಕೆ ತಂದು ಅವರನ್ನು ಪಾಲಿಸುತ್ತಿದ್ದನು. ಹಾಗು ಶಿಷ್ಟಜನರನ್ನು ರಕ್ಷಿಸುತ್ತಿದ್ದನು. ದೊಡ್ಡ ದೊಡ್ಡ ಅನೇಕ ಯಜ್ಞಗಳನ್ನು ಆಚರಿಸಿದನು. ಹೀಗೆ ಕರ್ತವ್ಯಭಾರವನ್ನು ನೆರವೇರಿಸುತ್ತ ಹೆಚ್ಚಿನ ಸಂತೋಷವನ್ನು ಅನುಭವಿಸಿದನು.

ಅಜಾಯನ್ತ ಸುತಾಶ್ಚಾಸ್ಯ ಮಹಾಬಲ-ಪರಾಕ್ರಮಾಃ ।
ಧರ್ಮಾತ್ಮಾನೋ ಮಹಾತ್ಮಾನೋ ವಿಮಾರ್ಗಪರಿಪನ್ಥಿನಃ ॥೩॥

ಚಕಾರ ಸೋಽರ್ಥಂ ಧರ್ಮೇಣ ಧರ್ಮಮರ್ಥೇನ ವಾ ಪುನಃ ।
ತಯೋಶ್ಚೈವಾವಿರೋಧೇನ ಬುಭುಜೇ ವಿಷಯಾನಪಿ ॥೪॥

ಏವಂ ಬಹೂನಿ ವರ್ಷಾಣಿ ತಸ್ಯ ಪಾಲಯತೋ ಮಹೀಮ್ ।
ಧರ್ಮಾರ್ಥಕಾಮಸಕ್ತಸ್ಯ ಜಗ್ಮುರೇಕಮಹರ್ಯಥಾ ॥೫॥

ವೈರಾಗ್ಯಂ ನಾಸ್ಯ ಸಞ್ಜಜ್ಞೇ ಭುಞ್ಜತೋ ವಿಷಯಾನ್ಪ್ರಿಯಾನ್ ।
ನ ಚಾಪ್ಯಲಮಭೂತ್ತಸ್ಯ ಧರ್ಮಾರ್ಥೋಪಾರ್ಜನಂ ಪ್ರತಿ ॥೬॥

---

೩. ಹೀಗೆ ರಾಜ್ಯವಾಳುತ್ತಿರುವ ಅಲರ್ಕನಿಗೆ ಅನೇಕ ಮಂದಿ ಪುತ್ರರು ಜನಿಸಿದರು. ಆ ಪುತ್ರರೆಲ್ಲರೂ, ಹೆಚ್ಚಾದ ಬಲ-ಪರಾಕ್ರಮಗಳಿಂದ ಕೂಡಿದವರೂ, ಧರ್ಮಾವಲಂಬಿಗಳೂ ಮಾಹಾತ್ಮ್ಯವನ್ನು ಹೊಂದಿದವರೂ ಮತ್ತು ಅಧರ್ಮ-ಮಾರ್ಗವನ್ನು ತಡೆಗಟ್ಟುವವರೂ ಆಗಿದ್ದರು.

೪. ಅಲರ್ಕರಾಜನು ಧರ್ಮಮಾರ್ಗದಿಂದ ಧನವನ್ನು ಸಂಪಾದಿಸಿದನು. ಆ ಧನವನ್ನು ವ್ಯಯಮಾಡಿ ಧರ್ಮವನ್ನು ಆಚರಿಸಿದನು. ಹೀಗೆ ಧರ್ಮ-ಅರ್ಥಗಳಿಗೆ ವಿರೋಧವಿಲ್ಲದ ಹಾಗೆ ವರ್ತಿಸಿ ವಿಷಯಸುಖವನ್ನು ಅನುಭವಿ-ಸಿದನು.

೫. ಹೀಗೆ ಅಲರ್ಕಮಹಾರಾಜನು ಧರ್ಮ-ಅರ್ಥ-ಕಾಮಗಳಲ್ಲಿ ಅವಿರೋಧದಿಂದ ನಡೆದುಕೊಂಡು ಅನೇಕ ವರ್ಷಗಳ ದೀರ್ಘಕಾಲದ ವರೆಗೆ ರಾಜ್ಯವನ್ನು ಪಾಲಿಸುತ್ತಿದ್ದರೂ ಆ ದೀರ್ಘಕಾಲವು ಒಂದು ದಿನವು ಕಳೆದಹಾಗೆ ಕಳೆದುಹೋಯಿತು.

೬. ಪ್ರಿಯವಾದ ವಿಷಯಗಳನ್ನು ಭುಂಜಿಸುತ್ತ ರಾಜ್ಯಭಾರ ಮಾಡುತ್ತಿದ್ದ ಅಲರ್ಕನಿಗೆ ದೀರ್ಘಕಾಲ ಕಳೆದರೂ ವೈರಾಗ್ಯವು ಉದಯಿಸಲಿಲ್ಲ. ಹಾಗು ಧರ್ಮ-ಅರ್ಥ-ಕಾಮ ಪುರುಷಾರ್ಥ ಸಂಪಾದನೆಯಲ್ಲಿ ತೃಪ್ತಿಯು ಹುಟ್ಟಲಿಲ್ಲ.

ತಂ ತಥಾ ಭೋಗಸಂಸರ್ಗಪ್ರಮತ್ತಮಜಿತೇನ್ದ್ರಿಯಮ್ ।
ಸುಬಾಹುರ್ನಾಮ ಶುಶ್ರಾವ ಭ್ರಾತಾ ತಸ್ಯ ವನೇಚರಃ ॥೭॥

ತಂ ಬುಬೋಧಯಿಷುಃ ಸೋಽಥ ಚಿರಂ ಧ್ಯಾತ್ವಾ ಮಹಾಮತಿಃ ।
ತದ್ವೈರಿಸಂಶ್ರಯಂ ತಸ್ಯ ಶ್ರೇಯೋಽಮನ್ಯತ ಭೂಪತೇಃ ॥೮॥

ತತಃ ಸ ಕಾಶಿಭೂಪಾಲಮುದೀರ್ಣಬಲವಾಹನಮ್ ।
ಸ್ವರಾಜ್ಯಮಾಪ್ತುಮಾಗಚ್ಛದ್ಬಹುಶಃ ಶರಣಂ ಕೃತೀ ॥೯॥

ಸೋಽಪಿ ಚಕ್ರೇ ಬಲೋದ್ಯೋಗಮಲರ್ಕಂ ಪ್ರತಿ ಪಾರ್ಥಿವಃ ।
ದೂತಂ ಚ ಪ್ರೇಷಯಾಮಾಸ ರಾಜ್ಯಮಸ್ಮೈ ಪ್ರದೀಯತಾಮ್॥೧೦॥

---

೭. ಹೀಗಿರಲು ಅಲರ್ಕನ ಭ್ರಾತೃವಾದ, ವನದಲ್ಲಿ ವಾಸಮಾಡುತ್ತಿದ್ದ ಸುಬಾಹುವು ಹೀಗೆ ಅನುಜನಾದ ಅಲರ್ಕನು ರಾಜ್ಯಭೋಗದ ಸಂಸರ್ಗದಿಂದ ಮದಿಸಿದವನೂ ಮತ್ತು ಇಂದ್ರಿಯ ವರ್ಗಕ್ಕೆ ಸೋತುಹೋದವನೂ ಆಗಿರುವನೆಂದು ಕೇಳಿದನು.

೮. ತರುವಾಯ ಮಹಾಪ್ರಾಜ್ಞನಾದ ಸುಬಾಹು ತಪಸ್ವಿಯು ಅಲರ್ಕನಿಗೆ ಬೋಧವನ್ನು ಉಂಟುಮಾಡುವ ಉಪಾಯವನ್ನು ಬಹಳ ಹೊತ್ತು ಧ್ಯಾನಿಸಿ ಕಡೆಯಲ್ಲಿ ರಾಜನಾದ ಅಲರ್ಕನ ವೈರಿಜನರನ್ನು ಪ್ರೇರೇಪಿಸಿ ರಾಜ್ಯವನ್ನು ಆಕ್ರಮಿಸುವಂತೆ ಮಾಡುವುದು ಶ್ರೇಯಸ್ಕರವೆಂದು ಭಾವಿಸಿದನು.

೯. ತರುವಾಯ ಅಗಾಧವಾದ ಸೈನ್ಯ-ವಾಹನ ಮುಂತಾದುವುಗಳಿಂದ ಕೂಡಿರುವ ಕಾಶಿರಾಜನ ಬಳಿಗೆ ಬಂದು ಉಪಾಯಚತುರನಾದ ಸುಬಾಹುವು ಅಲರ್ಕನಿಂದ ತಾನು ತನ್ನ ರಾಜ್ಯಭಾಗವನ್ನು ಹೊಂದುವಂತೆ ಸಹಾಯ ಮಾಡಲು ಕಾಶಿರಾಜನನ್ನು ಶರಣಾಗತನಾದಂತೆ ಆಗಿ ಮತ್ತೆ ಮತ್ತೆ ಪ್ರೇರೇಪಿಸಿದನು.

೧೦. ಆ ಕಾಶಿರಾಜನು ಅಲರ್ಕನ ಮೇಲೆ ದಂಡೆತ್ತಿ ಹೋಗಲು ಸೈನ್ಯವನ್ನು ಸಿದ್ಧಗೊಳಿಸಿದನು. ಮತ್ತು ರಾಜ್ಯವನ್ನು ಸುಬಾಹುವಿಗೆ ಒಪ್ಪಿಸಬೇಕೆಂದು ಸಂದೇಶವನ್ನು ಹೇಳಲು ಮೊದಲು ದೂತನನ್ನು ಅಲರ್ಕನ ಬಳಿಗೆ ಕಳುಹಿಸಿದನು.

ಸೋಽಪಿ ನೈಚ್ಛತ್ತದಾ ದಾತುಮಾಜ್ಞಾಪೂರ್ವಂ ಸ್ವಧರ್ಮವಿತ್ ।
ಪ್ರತ್ಯುವಾಚ ಚ ತಂ ದೂತಮಲರ್ಕಃ ಕಾಶಿಭೂಭೃತಃ ॥೧೧॥

ಮಾಮೇವಾಭ್ಯೇತ್ಯ ಹಾರ್ದೇನ ಯಾಚತಾಂ ರಾಜ್ಯಮಗ್ರಜಃ ।
ನಾಕ್ರಾನ್ತ್ಯಾ ಸಂಪ್ರದಾಸ್ಯಾಮಿ ಭಯೇನಾಲ್ಪಾಮಪಿ ಕ್ಷಿತಿಮ್ ॥೧೨॥

ಸುಬಾಹುರಪಿ ನೋ ಯಾಚ್ಞಾಂ ಚಕಾರ ಮತಿಮಾಂಸ್ತದಾ ।
ನ ಧರ್ಮಃ ಕ್ಷತ್ರಿಯಸ್ಯೇತಿ ಯಾಚ್ಞಾ ವೀರ್ಯಧನೋ ಹಿ ಸಃ॥೧೩॥

ತತಃ ಸಮಸ್ತಸೈನ್ಯೇನ ಕಾಶೀಶಃ ಪರಿವಾರಿತಃ ।
ಆಕ್ರಾನ್ತುಮಭ್ಯಗಾದ್ರಾಷ್ಟ್ರಮಲರ್ಕಸ್ಯ ಮಹೀಪತೇಃ ॥೧೪॥

---

೧೧. ಆಗ ಸ್ವಧರ್ಮವನ್ನು ಅರಿತಿರುವ ಅಲರ್ಕರಾಜನು ಈ ರೀತಿಯ ಆಜ್ಞಾವಚನಕ್ಕೆ ಬದ್ಧನಾಗಿ ಸುಬಾಹುವಿಗೆ ರಾಜ್ಯವನ್ನೊಪ್ಪಿಸಲು ನಿರಾಕರಿಸಿದನು. ಮತ್ತು ಕಾಶಿರಾಜನ ದೂತನಿಗೆ ಅಲರ್ಕನು ಈ ರೀತಿಯಾಗಿ ಪ್ರತ್ಯುತ್ತರವನ್ನು ಹೇಳಿಕಳುಹಿಸಿದನು.

೧೨. ಅಗ್ರಜನಾದ ಸುಬಾಹುವು ನನ್ನ ಬಳಿಗೆ ಬಂದು ಪ್ರೀತಿಪೂರ್ವಕವಾಗಿ ರಾಜ್ಯವನ್ನು ಯಾಚಿಸಿ ತೆಗೆದುಕೊಳ್ಳಲಿ. ಅದು ಹೊರತು ಆಕ್ರಮಣವಾದೀತೆಂಬ ಭಯದಿಂದ ನಾನು ಅಲ್ಪಮಾತ್ರ ಭೂಮಿಯನ್ನು ಕೂಡ ಬಿಟ್ಟುಕೊಡಲಾರೆನು.

೧೩. ವಿವೇಕಶಾಲಿಯಾದ ಸುಬಾಹುವು ಅಲರ್ಕನ ವಚನವನ್ನು ಕೇಳಿ ಅದರಂತೆ ಯಾಚನೆಮಾಡುವುದನ್ನು ತಾನು ಒಪ್ಪಲಿಲ್ಲ. ರಾಜನು ವೀರ್ಯವನ್ನು ಧನದಂತೆ ಪ್ರೀತಿಸುವವನಾದ್ದರಿಂದ ವೀರ್ಯದಿಂದ ರಾಜ್ಯವನ್ನು ಸಂಗ್ರಹಿಸಬೇಕೆ ಹೊರತು ಯಾಚನೆಮಾಡುವುದು ಕ್ಷತ್ರಿಯಧರ್ಮವಲ್ಲವೆಂದು ಅಭಿಪ್ರಾಯವನ್ನು ಹೇಳಿದನು.

೧೪. ತರುವಾಯ ಕಾಶಿಮಹಾರಾಜನು ತನ್ನ ಎಲ್ಲ ಸೈನ್ಯದಿಂದ ಕೂಡಿದವನಾಗಿ ಅಲರ್ಕಮಹಾರಾಜನ ರಾಷ್ಟ್ರವನ್ನು ಬಲಾತ್ಕಾರದಿಂದ ಮುತ್ತಿಗೆಹಾಕಲು ದಂಡೆತ್ತಿಬಂದನು.

ಅನನ್ತರೈಶ್ಚ ಸಂಶ್ಲೇಷಮುಭ್ಯೇತ್ಯ ತದನನ್ತರಮ್ ।
ಶೇಷಾಮನ್ಯತಮೈರ್ಭೃತ್ಯೈಃ ಸಮಾಕ್ರಮ್ಯಾನಯದ್ವಶಮ್ ॥೧೫॥

ಅಪೀಡಯಂಶ್ಚ ಸಾಮನ್ತಾಂಸ್ತಸ್ಯ ರಾಷ್ಟ್ರೋಪರೋಧನೈಃ ।
ತಥಾ ದುರ್ಗಾನ್ತಪಾಲಾಂಶ್ಚ ಚಕ್ರೇ ಚಾಟವಿಕಾನ್ವಶೇ ॥೧೬॥

ಕಾಂಶ್ಚಿಶ್ಶೋಪಪ್ರದಾನೇನ ಕಾಂಶ್ಚಿದ್ಭೇದೇನ ಪಾರ್ಥಿವಾನ್ ।
ಸಾಮ್ನೈವಾನ್ಯಾನ್ವಶಂ ನಿನ್ಯೇ ನಿಭೃತಾಸ್ತಸ್ಯ ಯೇಽಭವನ್ ॥೧೭॥

ತತಃ ಸೋಽಲ್ಪಬಲೋ ರಾಜಾ ಪರಚಕ್ರಾವಪೀಡಿತಃ ।
ಕೋಶಕ್ಷಯಮವಾಪೋಚ್ಚೈಃ ಪುರಂ ಚಾರುಧ್ಯತಾರಿಣಾ ॥೧೮॥

---

೧೫. ಮೊದಲು ತನ್ನ ರಾಜ್ಯದ ಒತ್ತಿದ ಭೂಮಿಯನ್ನು ಆಳುವವರ ಕೂಡ ಸಂಬಂಧವನ್ನು ಬೆಳೆಸುತ್ತ ಹಾಗೆಯೆ ಮುಂದೆಮುಂದೆ ಇರುವವರ ಸಂಬಂಧವನ್ನು ಹೊಂದಿ ಆಯಾಯ ಪರಿವಾರದಿಂದ ಎಲ್ಲರನ್ನೂ ವಶಪಡಿಸಿ-ಕೊಳ್ಳುತ್ತ ಮುಂದುವರೆದು ಬಂದನು.

೧೬. ಹಾಗು ಆ ಅಲರ್ಕರಾಜನ ರಾಷ್ಟ್ರಭಾಗಗಳನ್ನು ಮುತ್ತಿಗೆ-ಹಾಕುತ್ತ ಆಯಾಯ ಸಾಮಂತರಾಜರನ್ನು ಪೀಡೆಯಾಗದಂತೆ ವಶಪಡಿಸಿ-ಕೊಂಡನು. ಅದೇರೀತಿಯಲ್ಲಿ ಅಲರ್ಕನ ದುರ್ಗರಕ್ಷಕರನ್ನೂ ಮತ್ತು ವನಪಾಲಕರನ್ನೂ ವಶಕ್ಕೆ ತೆಗೆದುಕೊಂಡನು.

೧೭. ಅಲರ್ಕನಿಗೆ ಯಾವ ರಾಜರು ಅಂತರಂಗ ಮಿತ್ರರಾಗಿದ್ದರೊ ; ಅಂತಹವರಲ್ಲಿ ಕೆಲವರನ್ನು ದಾನೋಪಾಯದಿಂದಲೂ, ಇನ್ನು ಕೆಲವರನ್ನು ಭೇದೋಪಾಯದಿಂದಲೂ, ಮತ್ತು ಮತ್ತೆ ಕೆಲವರನ್ನು ಸಾಮೋಪಾಯದಿಂದಲೂ ವಶಪಡಿಸಿಕೊಂಡನು.

೧೮. ತರುವಾಯ ಅಲ್ಪವಾದ ಬಲದಿಂದ ಕೂಡಿದ ಆ ಅಲರ್ಕರಾಜನು ಶತ್ರುವಾದ ಕಾಶಿರಾಜನ ಸೈನ್ಯದಿಂದ ಪೀಡಿಸಲ್ಪಟ್ಟವನಾಗಿ ಅತಿಶಯವಾಗಿ ಧನಕ್ಷಯವನ್ನು ಹೊಂದಿದನು. ಹಾಗೆ ಕ್ರಮವಾಗಿ ಶತ್ರುವಿನಿಂದ ಅಲರ್ಕನ ನಗರವು ಮುತ್ತಲ್ಪಟ್ಟಿತು.

ಇತ್ಥಂ ಸಮಿಪ್ಯಾದ್ಯಮಾನಸ್ತು ಕ್ಷೀಣಕೋಶೋ ದಿನೇ ದಿನೇ ।
ವಿಷಾದಮಾಗಾತ್ಪರಮಂ ವ್ಯಾಕುಲತ್ವಂ ಚ ಚೇತಸಃ ॥೧೯॥

ಆರ್ತಿಂ ಚ ಪರಮಾಂ ಪ್ರಾಪ್ಯ ತತ್ ಸಸ್ಮಾರಾಙ್ಗುಲೀಯಕಮ್ ।
ಯದುದ್ದಿಶ್ಯ ಪುರಾ ಪ್ರಾಹ ಮಾತಾ ತಸ್ಯ ಮದಾಲಸಾ ॥೨೦॥

ತತಃ ಸ್ನಾತಃ ಶುಚಿರ್ಭೂತ್ವಾ ವಾಚಯಿತ್ವಾ ದ್ವಿಜೋತ್ತಮಾನ್ ।
ನಿಷ್ಕೃಷ್ಯ ಶಾಸನಂ ತಸ್ಮಾದ್ದದೃಶೇ ಪ್ರಸ್ಫುಟಾಕ್ಷರಮ್ ॥೨೧॥

ತತ್ರೈವ ಲಿಖಿತಂ ಮಾತ್ರಾ ವಾಚಯಾಮಾಸ ಪಾರ್ಥಿವಃ ।
ಪ್ರಕಾಶಪುಲಕಾಙ್ಗೋಽಸೌ ಪ್ರಹರ್ಷೋತ್ಫುಲ್ಲಲೋಚನಃ ॥೨೨॥

---

೧೯. ಕ್ಷಯಹೊಂದಿದ ಭಂಡಾರವುಳ್ಳವನೂ ಪ್ರತಿದಿನವೂ ಶತ್ರು-ಜನರಿಂದ ಈ ಬಗೆಯಾಗಿ ಪೀಡಿಸಲ್ಪಟ್ಟವನೂ ಆದ ಅಲರ್ಕರಾಜನು ಮನಸ್ಸಿನಲ್ಲಿ ಹೆಚ್ಚಾದ ವ್ಯಾಕುಲತೆಯನ್ನೂ ಮತ್ತು ವಿಷಾದವನ್ನೂ ಹೊಂದಿದನು.

೨೦. ಹಾಗು ಹೆಚ್ಚಿನ ವಿಷಾದವನ್ನು ಹೊಂದಿರುವ ಅಲರ್ಕನು ಜನನಿಯು ಹಿಂದೆ ಕೊಟ್ಟಿದ್ದ ಉಂಗುರವನ್ನು ಸ್ಮರಿಸಿಕೊಂಡನು. ಹಿಂದೆ ಅವನ ಜನನಿಯಾದ ಮದಾಲಸೆಯು ಉಂಗುರವನ್ನು ಕೊಡುವಾಗ ಯಾವ ಉದ್ದೇಶ-ವನ್ನು ಇಟ್ಟುಕೊಂಡು ಉಪದೇಶಮಾಡಿದ್ದಳೊ; ಅದೆಲ್ಲವನ್ನೂ ಜ್ಞಾಪಿಸಿ-ಕೊಂಡನು.

೨೧. ತರುವಾಯ ಸ್ನಾನಮಾಡಿ ಶುಚಿಯಾಗಿದ್ದುಕೊಂಡು ಅನೇಕ ಬ್ರಾಹ್ಮಣೋತ್ತಮರಿಂದ ಸ್ವಸ್ತಿವಾಚನವನ್ನು ಮಾಡಿಸಿ ಆ ಉಂಗುರದಿಂದ ಜನನಿಯ ಶಾಸನಪಟ್ಟವನ್ನು ಸೆಳೆದು ಸ್ಫುಟವಾದ ಅಕ್ಷರಗಳಿಂದ ಪ್ರಕಾಶಿಸುವ ಶಾಸನವನ್ನು ನೋಡಿದನು.

೨೨. ಆಗ ಅಲರ್ಕರಾಜನು ಆ ಶಾಸನಪಟ್ಟದಲ್ಲಿ ತಾಯಿಯಿಂದ ಬರೆಯಲ್ಪಟ್ಟಿರುವ ಶಾಸನ ವಚನವನ್ನು ಓದಿದನು. ಮತ್ತು ಪ್ರಕಾಶಿಸುವ ರೋಮಾಂಚದಿಂದ ತುಂಬಿದ ದೇಹವುಳ್ಳವನೂ, ಹರ್ಷದಿಂದ ಅರಳಿದ ಕಣ್ಣುಗಳುಳ್ಳವನೂ ಆದನು.

ಸಙ್ಗಃ ಸರ್ವಾತ್ಮನಾ ತ್ಯಾಜ್ಯಃ ಸ ಚೇತ್ತ್ಯಕ್ತುಂ ನ ಶಕ್ಯತೇ ।
ಸ ಸದ್ಭಿಃ ಸಹ ಕರ್ತವ್ಯಃ ಸತಾಂ ಸಙ್ಗೋ ಹಿ ಭೇಷಜಮ್ ॥೨೩॥

ಕಾಮಃ ಸರ್ವಾತ್ಮನಾ ಹೇಯೋ ಹಾತುಂ ಚೇಚ್ಛಕ್ಯತೇ ನ ಸಃ ।
ಮುಮುಕ್ಷಾಂ ಪ್ರತಿ ತತ್ಕಾರ್ಯಂ ಸೈವ ತಸ್ಯಾಪಿ ಭೇಷಜಮ್ ॥೨೪॥

ವಾಚಯಿತ್ವಾ ತು ಬಹುಶೋ ನೃಣಾಂ ಶ್ರೇಯಃ ಕಥಂ ತ್ವಿತಿ ।
ಮುಮುಕ್ಷಯೇತಿ ನಿಶ್ಚಿತ್ಯ ಸಾ ಚ ಸತ್ಸಙ್ಗತೋ ಯತಃ ॥೨೫॥

ತತಃ ಸ ಸಾಧುಸಮ್ಪರ್ಕಂ ಚಿನ್ತಯನ್ಪೃಥಿವೀಪತಿಃ ।
ದತ್ತಾತ್ರೇಯಂ ಮಹಾಭಾಗಮಗಚ್ಛತ್ಪರಮಾರ್ತಿಮಾನ್ ॥೨೬॥

---

೨೩. ಅಲ್ಲಿ ಕಾಣಿಸಿದ ಶಾಸನ ಉಕ್ತಿಗಳು ಈ ರೀತಿಯಾಗಿದ್ದುವು. ಎಲ್ಲ ವಿಧದಲ್ಲಿಯೂ ಸಂಗವನ್ನು ತ್ಯಾಗಮಾಡಬೇಕು. ಒಂದುವೇಳೆ ಸಂಗವನ್ನು ತ್ಯಜಿಸಲು ಸಾಧ್ಯವಾಗದಿದ್ದರೆ ಸಾಧುಜನರೊಡನೆ ಮಾತ್ರ ಸಂಗವನ್ನು ಮಾಡಬೇಕು. ಸಾಧುಜನರ ಸಂಗವು ಭವರೋಗಕ್ಕೆ ಔಷಧವು.

೨೪. ಹಾಗು ಕಾಮಭಾವನೆಯನ್ನು ಸಂಪೂರ್ಣವಾಗಿ ಬಿಡಬೇಕು. ಆದರೆ ಸಂಪೂರ್ಣವಾಗಿ ಕಾಮವನ್ನು ಬಿಡಲು ಶಕ್ಯವಾಗದಿದ್ದರೆ ಮೋಕ್ಷಪ್ರಾಪ್ತಿಯಲ್ಲಿ ಮಾತ್ರ ಕಾಮನೆಯನ್ನು ಇಡು. ಮುಕ್ತಿಯಲ್ಲಿ ಇಟ್ಟ ತೀವ್ರವಾದ ಇಚ್ಛೆಯು ಇತರ ವಿಧವಾದ ಕಾಮಪೀಡೆಗೆ ಔಷಧವಾಗುವುದು.

೨೫. ಅಲರ್ಕನು ಆ ಶಾಸನವನ್ನು ಮತ್ತೆ ಮತ್ತೆ ಓದಿಕೊಂಡನು. ಮತ್ತು ಮಾನವರಿಗೆ ಶ್ರೇಯಸ್ಸು ಹೇಗೆ ಲಭಿಸುವುದೆಂಬುದನ್ನು ಚಿಂತಿಸಿ ಮುಮುಕ್ಷೆಯಿಂದಲ್ಲದೆ ಇನ್ನಾವುದರಿಂದಲೂ ಶ್ರೇಯಃಪ್ರಾಪ್ತಿಯಿಲ್ಲವೆಂದು ನಿಶ್ಚಯಿಸಿ ಮುಮುಕ್ಷೆಗೆ ಸತ್ಸಂಗವು ಕಾರಣವೆಂಬುದನ್ನು ಅರಿತನು.

೨೬. ಅನಂತರ ಅತಿಶಯವಾದ ಪೀಡೆಗೆ ಪಾತ್ರನಾದ ಅಲರ್ಕರಾಜನು ಸಾಧುಜನರ ಸಂಗವನ್ನು ಬೆಳೆಸಬೇಕೆಂದು ಚಿಂತಿಸಿ ಸ್ಥಿರಪಡಿಸಿಕೊಂಡು ಸಾಧೂತ್ತಮನೂ, ಮಹಾಮಹಿಮನೂ ಆದ ದತ್ತಾತ್ರೇಯಮುನಿಯ ಬಳಿಗೆ ಹೋದನು.

ತಂ ಸಮೇತ್ಯ ಮಹಾತ್ಮಾನಮಕಲ್ಮಷಮಸಙ್ಗಿನಮ್ ।
ಪ್ರಣಿಪತ್ಯಾಭಿಸಮ್ಪೂಜ್ಯ ಯಥಾನ್ಯಾಯಮಭಾಷತ ॥೨೭॥

ಬ್ರಹ್ಮನ್ ಕುರು ಪ್ರಸಾದಂ ಮೇ ಶರಣ್ಯಃ ಶರಣಾರ್ಥಿನಾಮ್ ।
ದುಃಖಾಪಹಾರಂ ಕುರು ಮೇ ದುಃಖಾರ್ತಸ್ಯಾತಿಕಾಮಿನಃ ॥೨೮॥

ದತ್ತಾತ್ರೇಯ ಉವಾಚ :—

ದುಃಖಾಪಹಾರಮದ್ಯೈವ ಕರೋಮಿ ತವ ಪಾರ್ಥಿವ ।
ಸತ್ಯಂ ಬ್ರೂಹಿ ಕಿಮರ್ಥಂ ತೇ ದುಃಖಂ ತತ್ಪೃಥಿವೀಪತೇ ॥೨೯॥

ಕಸ್ಯ ತ್ವಂ ಕಸ್ಯ ವಾ ದುಃಖಂ ತತ್ತ್ವಮೇವಂ ವಿಚಾರ್ಯತಾಮ್ ।
ಅಙ್ಗಾನ್ಯಙ್ಗಿ ನಿರಙ್ಗಂ ಚ ಸರ್ವಾಙ್ಗಾನಿ ವಿಚಿನ್ತಯ ॥೩೦॥

---

೨೭. ಮಹಾತ್ಮನೂ, ನಿಷ್ಕಲಂಕನೂ, ಮತ್ತು ಸಂಗವರ್ಜಿತನೂ ಆದ ದತ್ತಾತ್ರೇಯಮುನಿಯ ಬಳಿಗೆ ಹೋಗಿ ನಮಸ್ಕಾರ ಮುಂತಾದುವುಗಳಿಂದ ಮುನಿಯನ್ನು ಗೌರವಿಸಿ ವಿನಯ ಮುಂತಾದ ಯೋಗ್ಯವಾದ ವರ್ತನೆಯಿಂದಿದ್ದು ಮಾತನಾಡಿದನು.

೨೮. ಬ್ರಹ್ಮರ್ಷಿಯೇ ! ಶರಣಾರ್ಥಿಗಳಿಗೆ ರಕ್ಷಕನಾದ ನೀನು ನನ್ನಲ್ಲಿ ಅನುಗ್ರಹವನ್ನು ತೋರು. ಅತಿಯಾದ ಕಾಮದಿಂದ ಬದ್ಧನಾದ ಮತ್ತು ದುಃಖದಿಂದ ಪೀಡಿತನಾದ ನನಗೆ ದುಃಖಪರಿಹಾರವಾಗುವಂತೆ ಮಾಡು.

ದತ್ತಾತ್ರೇಯ ಮುನಿಯು ಇಂತೆಂದನು :—

೨೯. ರಾಜನೆ ! ನಿನಗೆ ಈಗಲೇ ದುಃಖಾಪಹಾರವನ್ನು ನಾನು ಮಾಡುವೆನು. ಎಲೆ ! ರಾಜ್ಯವನ್ನಾಳುವ ನರಪತಿಯೆ ! ನಿನಗೆ ಯಾವ ನಿಮಿತ್ತ-ದಿಂದ ದುಃಖವುಂಟಾಗಿದೆಯೆಂಬುದನ್ನು ಸತ್ಯವಾಗಿ ಹೇಳು.

೩೦. ಮತ್ತು "ನೀನು ಯಾರಿಗೆ ಸೇರಿದವನು ? ಯಾರಿಗೆ ದುಃಖ-ವುಂಟಾಗಿರುವುದು ?" ಎಂಬುದಾಗಿ ಈ ತತ್ವಗಳನ್ನು ವಿಮರ್ಶಮಾಡು. ನಿನ್ನ ಎಲ್ಲ ಅವಯವಗಳ ವಿಷಯದಲ್ಲಿ ಅವಯವಗಳಾವುವು ? ಅವಯವಗಳನ್ನು ಹೊಂದಿದ ಅವಯವಿ ದೇಹವಾವುದು ? ಅವಯವ ಶೂನ್ಯವಾವುದು ? ಎಂದು ಮೊದಲಾಗಿ ಅಧ್ಯಾತ್ಮತತ್ವಗಳನ್ನು ವಿಮರ್ಶಿಸು.

ಜಡ ಉವಾಚ :—

ಇತ್ಯುಕ್ತಶ್ಚಿಂತಯಾಮಾಸ ಸ ರಾಜಾ ತೇನ ಧೀಮತಾ ।
ತ್ರಿವಿಧಸ್ಯಾಪಿ ದುಃಖಸ್ಯ ಸ್ಥಾನಮಾತ್ಮಾನಮೇವ ಚ ॥೩೧॥

ಸ ವಿಮೃಶ್ಯ ಚಿರಂ ರಾಜಾ ಪುನಃ ಪುನರುದಾರಧೀಃ ।
ಆತ್ಮಾನಮಾತ್ಮನಾ ಧೀರಃ ಪ್ರಹಸ್ಯೇದಮಥಾಬ್ರವೀತ್ ॥೩೨॥

ನಾಹಮುರ್ವೀ ನ ಸಲಿಲಂ ನ ಜ್ಯೋತಿರನಿಲೋ ನ ಚ ।
ನಾಕಾಶಂ ಕಿಂ ತು ಶಾರೀರಂ ಸಮೇತ್ಯ ಸುಖಮಿಷ್ಯತೇ ॥೩೩॥

ನ್ಯೂನಾತಿರಿಕ್ತತಾಂ ಯಾತಿ ಪಞ್ಚಕೇಽಸ್ಮಿನ್ ಸುಖಾಸುಖಮ್ ।
ಯದಿ ಸ್ಯಾನ್ಮಮ ಕಿಂ ನ ಸ್ಯಾದನ್ಯಸ್ಥೇಽಪಿಹಿತಂ ಮಯಿ ॥೩೪॥

ಜಡಪುತ್ರನು ಇಂತೆಂದನು :—

೩೧. ಪ್ರಾಜ್ಞನಾದ ದತ್ತಾತ್ರೇಯಮುನಿಯಿಂದ ಈರೀತಿಯಾಗಿ ಹೇಳಲ್ಪಟ್ಟಿರುವ ಆ ಅಲರ್ಕರಾಜನು ಆಧ್ಯಾತ್ಮಿಕ-ಆಧಿದೈವಿಕ-ಆಧಿಭೌತಿಕವೆಂಬ ಮೂರುಬಗೆಯ ದುಃಖಗಳಿಗೆ ಸ್ಥಾನವನ್ನೂ ಆತ್ಮತತ್ತ್ವವನ್ನೂ ವಿಚಾರಮಾಡ-ತೊಡಗಿದನು.

೩೨. ಉದಾರವಾದ ಪ್ರತಿಭೆಯುಳ್ಳ ಆ ರಾಜನು ಚಿರಕಾಲ ವಿಮರ್ಶ-ಮಾಡಿ ಮತ್ತೆಮತ್ತೆ ಆತ್ಮತತ್ತ್ವದ ಸ್ವರೂಪವನ್ನು ಅಂತಃಕರಣದಲ್ಲಿ ಚಿಂತಿಸುತ್ತ ಜ್ಞಾನಪ್ರಕಾಶವುಳ್ಳವನಾಗಿ ಆಶ್ಚರ್ಯದಿಂದ ನಕ್ಕು ಮತ್ತೆ ಈರೀತಿಯಾಗಿ ಹೇಳಿಕೊಂಡನು.

೩೩. ನಾನು ಭೂಮಿತತ್ತ್ವವಲ್ಲ, ಜಲತತ್ತ್ವವಲ್ಲ, ತೇಜಸ್ತತ್ತ್ವವಲ್ಲ, ವಾಯುತತ್ತ್ವವಲ್ಲ ಮತ್ತು ಆಕಾಶತತ್ತ್ವವಲ್ಲ. ಹೀಗೆ ಪಂಚಭೂತಗಳ ವಿಕಾರವಾದ ದೇಹವು ನಾನಲ್ಲ. ದೇಹಾಕಾರವನ್ನು ಹೊಂದಿದ ಪಂಚಭೂತಗಳ ಸಮಷ್ಟಿಯಲ್ಲಿ ಸುಖ-ದುಃಖಗಳು ಉಂಟಾಗುವುವು.

೩೪. ನ್ಯೂನತೆಯನ್ನೂ, ಆಧಿಕ್ಯವನ್ನೂ ಹೊಂದುವ ಸ್ವಭಾವವುಳ್ಳ ಪಂಚಭೂತಸಂಸರ್ಗವೆಂಬ ಶರೀರದಲ್ಲಿ ಸುಖ-ಅಸುಖಗಳು ಉಂಟಾದರೆ ಅದರಿಂದ ನನಗೇನು? ಶರೀರಕ್ಕಿಂತ ಬೇರೆ ತತ್ತ್ವವಾಗಿರುವ ನನ್ನ ಆತ್ಮದಲ್ಲಿ ಸುಖ-ದುಃಖಗಳ ಪೀಡೆಯುಂಟಾಗಲಾರದು.

ನಿತ್ಯಪ್ರಭೂತಸದ್ಭಾವೇ ನ್ಯೂನಾಧಿಕ್ಯಾನ್ನತೋಽನ್ನತೇ ।
ತಥಾ ಚ ಮಮತಾತ್ಮಕ್ತೋಽ ವಿಶೇಷೇಣೋಪಲಭ್ಯತೇ ॥೩೫॥

ತನ್ಮಾತ್ರಾವಸ್ಥಿತೇ ಸೂಕ್ಷ್ಮೇ ತೃತೀಯಾಂಶೇ ಚ ಪಶ್ಯತಃ ।
ತಥೈವ ಭೂತಸದ್ಭಾವಂ ಶಾರೀರಂ ಕಿಂ ಸುಖಾಸುಖಮ್ ॥೩೬॥

ಮನಸ್ಯವಸ್ಥಿತಂ ದುಃಖಂ ಸುಖಂ ವಾ ಮಾನಸಂ ಚ ಯತ್ ।
ಯತಸ್ತತೋ ನ ಮೇ ದುಃಖಂ ಸುಖಂ ವಾ ನ ಹ್ಯಹಂ ಮನಃ ॥೩೭॥

ನಾಹಙ್ಕಾರೋ ನ ಚ ಮನೋ ಬುದ್ಧಿರ್ನಾಹಂ ಯತಸ್ತತಃ ।
ಅನ್ತಃಕರಣಜಂ ದುಃಖಂ ಪಾರಕ್ಯಂ ಮಮ ತತ್ಕಥಮ್ ॥೩೮॥

---

೩೫. ದೇಹದ ವೃದ್ಧಿ-ಕ್ಷಯಗಳೆಂಬ ನ್ಯೂನತೆ-ಅತಿರೇಕಗಳಿಂದ ಯಾವಾಗಲೂ ನಿರತಿಶಯವಾದ ಸತ್ತಾಸ್ವರೂಪದಿಂದ ಇರುವ ಆತ್ಮವಸ್ತುವಿನಲ್ಲಿ ಏರಿಳಿತಗಳಾದಂತೆ ಮಮತಾವಶದಿಂದ ಭಾಸವಾಗುವುವು. ಮಮತೆಯನ್ನು ತ್ಯಜಿಸಿದ ಆತ್ಮವು ಶಾರೀರವಾದ ದುಃಖಸಂಪರ್ಕವಿಲ್ಲದೆ ನಿಜರೂಪದಿಂದ ಪ್ರಕಾಶಿಸುವುದು.

೩೬. ಸತ್ತಾಮಾತ್ರಾಂಶದಿಂದ ಇರುವುದೂ, ಸೂಕ್ಷ್ಮವೂ, ಸತ್-ಅಸತ್ ಎಂಬ ವರ್ಗದ್ವಯಕ್ಕಿಂತ ಮೂರನೆಯದೂ ಆದ ಸಾಕ್ಷಿರೂಪದಲ್ಲಿ ಪಂಚಭೂತ-ಮಯವಾದ ದೇಹದಲ್ಲಿ ಹುಟ್ಟುವ ಸುಖ-ದುಃಖಗಳು ಹೇಗೆ ಅಂಟಿಕೊಳ್ಳುವುವು ?

೩೭. ದುಃಖವು ಮನಸ್ಸಿನಲ್ಲಿ ಉದಯಿಸುವುದಾಗಿದೆ. ಹಾಗು ಸುಖವು ಮನಸ್ಸಿನಲ್ಲೆ ಜನಿಸುವುದು. ಹೀಗೆ ಸುಖ-ದುಃಖಗಳು ಮಾನಸವಾದುದರಿಂದ ನನಗೆ ಸಂಬಂಧಿಸಿದುವುಗಳಲ್ಲ. ನಾನು ಮನಸ್ಸಲ್ಲ. ಇಂದ್ರಿಯ-ಮನಸ್ಸುಗಳಿಗಿಂತ ಆತ್ಮವು ಬೇರೆಯಾದುದು.

೩೮- ನಾನು ಅಹಂಕಾರಸ್ವರೂಪನಾಗಿಲ್ಲ. ಮನೋರೂಪನಾಗಿಲ್ಲ. ಮತ್ತು ಬುದ್ಧಿತತ್ತ್ವಸ್ವರೂಪನೂ ಅಲ್ಲ. ಹೀಗೆ ಮನ-ಬುದ್ಧಿ-ಅಹಂಕಾರತತ್ತ್ವ-ಗಳಿಗಿಂತ ಬೇರೆಯಾಗಿರುವ ಆತ್ಮತತ್ತ್ವದಲ್ಲಿ ಅಂತಃಕರಣವೆಂಬ ಮತ್ತೊಂದು ವಸ್ತುವಿನ ದುಃಖವು ಹೇಗೆ ಉಂಟಾಗುವುದು ?

ನಾಹಂ ಶರೀರಂ ನ ಮನೋ ಯತೋಽಹಂ
ಪೃಥಕ್ಶರೀರಾನ್ಮನಸಸ್ತಥಾಹಮ್ ।
ತತ್ಸನ್ತು ಚೇತಸ್ಯಥ ವಾಪಿ ದೇಹೇ
ಸುಖಾನಿ ದುಃಖಾನಿ ಚ ಕಿಂ ಮಮಾತ್ರ ॥೩೯॥

ರಾಜ್ಯಸ್ಯ ವಾಞ್ಛಾಂ ಕುರುತೇಽಪ್ರಜೋಽಸ್ಯ
ದೇಹಸ್ಯ ಚೇತ್ಪಞ್ಚಮಯಃ ಸ ರಾಶಿಃ ।
ಗುಣಪ್ರವೃತ್ತ್ಯಾ ಮಮ ಕಿಂ ನು ತತ್ರ
ತತ್ಸ್ಥಃ ಸ ಚಾಹಂ ಚ ಶರೀರತೋಽನ್ಯಃ ॥೪೦॥

ನ ಯಸ್ಯ ಹಸ್ತಾದಿಕಮಪ್ಯಶೇಷಂ
ಮಾಂಸಂ ನ ಚಾಸ್ಥೀನಿ ಶಿರಾವಿಭಾಗಃ ।
ಕಸ್ತಸ್ಯ ನಾಗಾಶ್ವರಥಾದಿಕೋಶೈಃ
ಸ್ವಲ್ಪೋಽಪಿ ಸಂಬನ್ಧ ಇಹಾಸ್ತಿ ಪುಂಸಃ ॥೪೧॥

---

೩೯. ನಾನು ದೇಹವೂ ಅಲ್ಲ. ನಾನು ಮನಸ್ಸೂ ಅಲ್ಲ. ನನ್ನ ಆತ್ಮವು ದೇಹ-ಮನಸ್ಸುಗಳಿಗಿಂತಲೂ ಬೇರೆಯಾಗಿರುವುದು. ಹೀಗಿರಲು ಮನಸ್ಸಿನಲ್ಲಿಯೂ ದೇಹದಲ್ಲಿಯೂ ಅನಂತವಾಗಿ ಸುಖಗಳೂ ದುಃಖಗಳೂ ಜನಿಸಲಿ. ಆ ಸುಖ-ದುಃಖಗಳಿಂದ ನನಗೆ ಆಗುವ ಪೀಡೆಯೇನು ?

೪೦. ಪರಮಾರ್ಥವಾಗಿ ಪ್ರಜಾಸಂಪರ್ಕವಿಲ್ಲದ ಆತ್ಮವು ರಾಜ್ಯ-ಭೋಗದ ಆಶೆಯನ್ನು ಮಾಡುವುದು ಹೇಗೆ? ಪಂಚಭೂತಗಳ ರಾಶಿರೂಪವಾದ ದೇಹಕ್ಕೆ ಪ್ರಜಾಸಂಪರ್ಕ-ಹಾಗು ರಾಜ್ಯಾಭಿಲಾಷೆಯಿರುವುದಾದರೆ ಸತ್ತ್ವ-ರಜ-ಎಂಬ ಗುಣಗಳ ಪ್ರವೃತ್ತಿಧಾರೆಯಿಂದ ರಾಜ್ಯಸೂತ್ರವನ್ನು ನಡೆಸಲಿ ಅಥವಾ ಬಿಡಲಿ. ದೇಹಕ್ಕಿಂತಲೂ ಬೇರೆಯಾಗಿ ದೇಹದ ಪ್ರವೃತ್ತಿಗಳಿಗೆ ಸಾಕ್ಷಿಯಾಗಿರುವ ನನಗೆ ಅದರಿಂದಾಗುವುದು ಏನಿದೆ ?

೪೧. ಯಾವ ಆತ್ಮತತ್ತ್ವಕ್ಕೆ ಕೈ ಮುಂತಾದ ಎಲ್ಲ ಅವಯವಗಳು ಇರುವುದಿಲ್ಲವೊ; ಹಾಗು ಮಾಂಸ, ಎಲುಬು-ಮೂಳೆಗಳ ಸಂಪರ್ಕವಿಲ್ಲವೊ, ಅಂತಹ ಪುರುಷರೂಪನಾದ ಆತ್ಮನಿಗೆ ರಥ-ಗಜ-ತುರಗ-ಕೋಶಗೃಹ ಮುಂತಾದ ರಾಜ್ಯಾಂಗಗಳೊಡನೆ ಸಂಪರ್ಕವು ಲೇಶಮಾತ್ರವಾದರೂ ಹೇಗೆ ಸಂಭವಿಸೀತು ?

ತಸ್ಮಾನ್ನ ಮೇಽರಿರ್ನ ಚ ಮೇಽಸ್ತಿ ದುಃಖಂ
ನ ಮೇ ಸುಖಂ ನಾಪಿ ಪುರಂ ನ ಕೋಶಮ್ ।
ನ ಚಾಶ್ವನಾಗಾದಿಬಲಂ ನ ತಸ್ಯ
ನಾನ್ಯಸ್ಯ ವಾ ಕಸ್ಯಚಿದ್ವಾ ಮಮಾಸ್ತಿ ॥೪೨॥

ಯಥಾ ಘಟೀಕುಮ್ಭಕಮಣ್ಡಲುಸ್ಥ-
ಮಾಕಾಶಮೇಕಂ ಬಹುಧಾ ಹಿ ದೃಷ್ಟಮ್ ।
ತಥಾ ಸುಬಾಹುಃ ಸ ಚ ಕಾಶಿಪೋಽಹಂ
ಮನ್ಯೇ ಚ ದೇಹೇಷು ಶರೀರಭೇದೈಃ ॥೪೩॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಪಿತಾಪುತ್ರಸಂವಾದೇ
ಆತ್ಮವಿವೇಕೋ ನಾಮ ಚತುಸ್ತ್ರಿಂಶೋಽಧ್ಯಾಯಃ

---

೪೨. ಆದುದರಿಂದ ಅಸಂಗನಾದ ನನಗೆ ಶತ್ರುವಿಲ್ಲ, ನನಗೆ ದುಃಖವಿಲ್ಲ, ನನಗೆ ಸುಖವಿಲ್ಲ, ನನಗೆ ನಗರವಿಲ್ಲ, ನನಗೆ ಭಂಡಾರವಿಲ್ಲ ಮತ್ತು ನನಗೆ ಗಜ-ತುರಗ ಮುಂತಾದ ಚತುರಂಗಸೈನ್ಯವಿಲ್ಲ. ಹೀಗೆ ಸುಖ-ದುಃಖ ಮುಂತಾದುವು ನನಗೆ ಹೇಗೆ ಇಲ್ಲವೊ; ಅದರಂತೆ ಸುಬಾಹು-ಕಾಶಿರಾಜರಿಗಾಗಲಿ ಮತ್ತಾರಿಗಾಗಲಿ ಇರುವುದಿಲ್ಲ. ಎಲ್ಲರಲ್ಲಿಯೂ ಇರುವ ಆತ್ಮತತ್ತ್ವವು ಅಸಂಗವೂ ಅದ್ವಿತೀಯವೂ ಆಗಿರುವುದು.

೪೩. ಒಂದು ಆಕಾಶತತ್ತ್ವವು ಮಡಿಕೆ-ಕುಡಿಕೆ-ಕಮಂಡಲು ಮುಂತಾದ ಬಗೆ ಬಗೆಯ ಪಾತ್ರಗಳ ಒಳಭಾಗದಲ್ಲಿ ಅಡಕವಾಗಿ ಹೇಗೆ ಅನೇಕ ರೂಪವಾಗಿ ಕಾಣುವುದೊ ಹಾಗೆ ಒಂದು ಆತ್ಮತತ್ತ್ವವು ಆಯಾಯ ಬಗೆ ಬಗೆಯ ದೇಹಗಳಲ್ಲಿದ್ದು ದೇಹಭೇದದಿಂದ ಸುಬಾಹು, ಕಾಶಿರಾಜ ಮತ್ತು ಅಲರ್ಕನೆಂಬ ನಾನು ಹೀಗೆ ಬೇರೆಯಾಗಿ ಕಾಣುತ್ತಿರುವೆವು; ಎಂದರಿಯುವೆನು.

ಮಾರ್ಕಂಡೇಯ ಮಹಾಪುರಾಣದಲ್ಲಿ ಮೂವತ್ತನಾಲ್ಕನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯ್ಯೈ ನಮಃ ||

ಮಾರ್ಕಂಡೇಯ ಪುರಾಣಂ

ಷಟ್ತ್ರಿಂಶೋಽಧ್ಯಾಯಃ

(ಯೋಗವಿಧಿ ಪ್ರಶ್ನ ನಿರೂಪಣಮ್)

ಜಡ ಉವಾಚ :—

ದತ್ತಾತ್ರೇಯಂ ತತೋ ವಿಪ್ರಂ ಪ್ರಣಿಪತ್ಯ ಸ ಪಾರ್ಥಿವಃ ।
ಪ್ರತ್ಯುವಾಚ ಮಹಾತ್ಮಾನಂ ಪ್ರಶ್ರಯಾವನತೋ ವಚಃ ॥೧॥

ಸಮ್ಯಕ್ಪ್ರಪಶ್ಯತೋ ಬ್ರಹ್ಮನ್ಮಮ ದುಃಖಂ ನ ಕಿಂಚನ ।
ಅಸಮ್ಯಗ್ದರ್ಶಿನೋ ಮಗ್ನಾಃ ಸರ್ವದೈವಾಸುಖಾರ್ಣವೇ ॥೨॥

ಯಸ್ಮಿನ್ ಯಸ್ಮಿನ್ ಮಮತ್ವೇನ ಬುದ್ಧಿಃ ಪುಂಸಃ ಪ್ರಜಾಯತೇ ।
ತತಸ್ತತಃ ಸಮಾದಾಯ ದುಃಖಾನ್ಯೇವ ಪ್ರಯಚ್ಛತಿ ॥೩॥

ಮೂವತ್ತೈದನೆಯ ಅಧ್ಯಾಯ

ಜಡಪುತ್ರನು ಹೀಗೆ ಹೇಳಿದನು :—

೧. ತರುವಾಯ ಆ ಅಲರ್ಕರಾಜನು ಮಹಾತ್ಮನಾದ ದತ್ತಾತ್ರೇಯ-ಮುನಿಯನ್ನು ನಮಸ್ಕರಿಸಿ ನಮ್ರತೆಯಿಂದ ತಗ್ಗಿದವನಾಗಿ ಈ ರೀತಿಯಾಗಿ ಮಾತನಾಡಿದನು.

೨. ಬ್ರಹ್ಮರ್ಷಿಯೆ! ವಿಮರ್ಶೆಮಾಡಿ ಪರಮಾರ್ಥವಾಗಿ ತತ್ತ್ವಗಳನ್ನು ಅರಿತಿರುವ ನನಗೆ ಈಗ ಯಾವ ದುಃಖವೂ ಇಲ್ಲ. ಪರಮಾರ್ಥಜ್ಞಾನದಿಂದ ಶೂನ್ಯರಾದ ಮಾನವರು ಯಾವಾಗಲೂ ದುಃಖಸಾಗರದಲ್ಲಿ ಮುಳುಗಿರುವರು.

೩. ಪುರುಷನಿಗೆ ಯಾವ ಯಾವ ವಿಷಯದಲ್ಲಿ ಮಮತ್ವವನ್ನು ತೋರಿಸುವ ಬುದ್ಧಿಯು ಉಂಟಾಗುವುದೊ; ಆಯಾಯ ವಿಷಯದ ಕಡೆಗೆ ಪುರುಷನನ್ನು ಆಕರ್ಷಿಸಿ ಮಮತ್ವಬುದ್ಧಿಯು ದುಃಖಗಳನ್ನು ಕೊಡುವುದು.

ಮಾರ್ಜಾರಭಕ್ಷಿತೇ ದುಃಖಂ ಯಾದೃಶಂ ಗೃಹಕುಕ್ಕುಟೇ ।
ನ ತಾದೃಙ್ಮಮತಾಶೂನ್ಯೇ ಕಲವಿಙ್ಕೇಽಥ ಮೂಷಿಕೇ ॥೪॥

ಸೋಽಹಂ ನ ದುಃಖೀ ನ ಸುಖೀ ಯತೋಽಹಂ ಪ್ರಕೃತೇಃ ಪರಃ ।
ಯೋ ಭೂತಾಭಿಭವೋ ಭೂತ್ಯೈಃ ಸುಖದುಃಖಾತ್ಮಕೋ ಹಿ ಸಃ ॥೫॥

ದತ್ತಾತ್ರೇಯ ಉವಾಚ :—

ಏವಮೇತನ್ನರವ್ಯಾಘ್ರ ಯಥೈತದ್ವ್ಯಾಹೃತಂ ತ್ವಯಾ ।
ಮಮೇತಿ ದುಃಖಂ ಮೂಲಸ್ಯ ನ ಮಮೇತಿ ಚ ನಿರ್ವೃತಿಃ ॥೬॥

---

೪. ದುಃಖವು ಮಮತ್ವವೆಂಬ ಮೂಲಕಾರಣದಿಂದ ಉದಯಿಸುವುದು. ಮನೆಯಲ್ಲಿ ಸಾಕಿರುವ ಕೋಳಿಯನ್ನು ಮಾರ್ಜಾರವು ತಿಂದುಹಾಕಿದರೆ ಯಜಮಾನನಿಗೆ ತುಂಬ ದುಃಖವಾಗುವುದು. ಹಾಗೆ ಒಂದು ಗುಬ್ಬಚ್ಚಿ ಅಥವಾ ಇಲಿ– ಇವುಗಳನ್ನು ಮಾರ್ಜಾರವು ತಿಂದುಹಾಕಿದರೆ ಅಂತಹ ದುಃಖವುಂಟಾಗುವುದಿಲ್ಲ.

೫. ಹೀಗೆ ವಿಮರ್ಶದಿಂದ ಜ್ಞಾನವನ್ನು ಹೊಂದಿರುವ ನಾನು ದುಃಖವುಳ್ಳವನೂ ಅಲ್ಲ; ಸುಖವುಳ್ಳವನೂ ಅಲ್ಲ. ಪ್ರಕೃತಿಯಿಂದ ಬೇರೆಯಾದವನು ನಾನು. ಯಾವ ಆತ್ಮನು ಪ್ರಕೃತಿಯಿಂದ ಹುಟ್ಟಿದ ಭೂತ-ಇಂದ್ರಿಯಗಳ ಗುಂಪಿನಿಂದ ಆವರಿಸಲ್ಪಟ್ಟು ತನ್ಮಯನಾಗಿರುವನೊ; ಅವನು ಸುಖ-ದುಃಖಗಳಿಗೆ ಪಾತ್ರನಾಗುವನು.

ದತ್ತಾತ್ರೇಯ ಮುನಿಯು ಹೀಗೆ ನುಡಿದನು!—

೬. ಎಲೆ! ಪುರುಷಶ್ರೇಷ್ಠನೆ! ಆತ್ಮನ ಸುಖ-ದುಃಖಪ್ರಾಪ್ತಿಯ ವಿಷಯದಲ್ಲಿ ನೀನು ಏನನ್ನು ಹೇಳಿರುವೆಯೊ; ಅದು ಹಾಗೆಯೇ ಸರಿ. ಬಾಹ್ಯವಸ್ತುವಿನಲ್ಲಿ "ಮಮ=ನನ್ನದು" ಎಂಬ ಬುದ್ಧಿಯು ದುಃಖವನ್ನು ಕೊಡುವುದು. "ನ-ಮಮ=ನನ್ನದಲ್ಲ" ಎಂಬ ಬುದ್ಧಿಯು ದುಃಖವನ್ನು ನಾಶಮಾಡಿ ಸುಖವನ್ನು ಉಂಟುಮಾಡುವುದು.

ಮತ್ಪ್ರಶ್ನಾದೇವ ತೇ ಜ್ಞಾನಮುತ್ಪನ್ನಮಿದಮುತ್ತಮಮ್ ।
ಮಮೇತಿ ಪ್ರತ್ಯಯೋ ಯೇನ ಕ್ಷಿಪ್ತಃ ಶಾಲ್ಮಲಿತೂಲವತ್ ॥೭॥

ಅಹಮಿತ್ಯಙ್ಕುರೋತ್ಪನ್ನೋ ಮಮೇತಿ ಸ್ಕನ್ಧವಾನ್ಮಹಾನ್ ।
ಗೃಹಕ್ಷೇತ್ರೋಚ್ಚಶಾಖಶ್ಚ ಪುತ್ರದಾರಾದಿಪಲ್ಲವಃ ॥೮॥

ಧನಧಾನ್ಯಮಹಾಪತ್ರೋ ನೈಕಕಾಲಪ್ರವರ್ಧಿತಃ ।
ಪುಣ್ಯಾಪುಣ್ಯಾಗ್ರಪುಷ್ಪಶ್ಚ ಸುಖದುಃಖಮಹಾಫಲಃ ॥೯॥

ಅಪವರ್ಗಪಥವ್ಯಾಪೀ ಮೂಢಸಮ್ಪರ್ಕಸೇಚನಃ ।
ವಿಧಿತ್ಸಾಭೃಙ್ಗಮಾಲಾಢ್ಯೋ ಕೃತ್ಯಜ್ಞಾನಮಹಾತರುಃ ॥೧೦॥

---

೭. ಅಲರ್ಕಮಹಾರಾಜನೆ! ನಾನು ನಿನ್ನನ್ನು ಪ್ರಶ್ನಿಸಿದುದರಿಂದಲೆ ನಿನಗೆ ಉತ್ತಮವಾದ ಈ ತತ್ತ್ವಜ್ಞಾನವು ಉದಯಿಸಿರುವುದು. ಹಾಗೆ ಜ್ಞಾನೋದಯವಾದುದರಿಂದ ನೀನು ಬೂರುಗದ ಹತ್ತಿಯಂತೆ ಮಮತ್ವಬುದ್ಧಿಯನ್ನು ದೂರ ಹಾರಿಸಿಬಿಟ್ಟದ್ದೀಯೆ.

೮. ಅಹಂತೆ–ಮಮತೆಗಳಿಗೆ ವಶನಾಗಿ ಕೃತ್ಯ-ಅಕೃತ್ಯಗಳನ್ನು ಎಸಗುವ ಜ್ಞಾನರೂಪವಾದ ಸಂಸಾರವು ಒಂದು ಮರದಂತಿದೆ. ಆ ಮರವು ಅಹಂತೆಯೆಂಬ ಅಂಕುರದಿಂದ ಹುಟ್ಟಿರುವುದೂ, ಮಮತೆಯೆಂಬ ಕಾಂಡದಿಂದ ಕೂಡಿರುವುದೂ, ಮನೆ-ಹೊಲ ಮುಂತಾದ ದೊಡ್ಡ ರೆಂಬೆಗಳುಳ್ಳದ್ದೂ, ಹಾಗು ಪತ್ನಿ-ಪುತ್ರರೆಂಬ ಚಿಗುರುಗಳುಳ್ಳದ್ದೂ ಆಗಿದೆ.

೯. ಮತ್ತು ಸಂಪಾದಿಸಬೇಕೆಂದಿರುವ ಧನ-ಧಾನ್ಯಗಳೆಂಬ ದೊಡ್ಡ ಎಲೆಗಳಿಂದ ಕೂಡಿರುವುದೂ, ಅನಾದಿಕಾಲದಿಂದ ಬೆಳೆಸಲ್ಪಟ್ಟಿರುವುದೂ, ಪುಣ್ಯ-ಪಾಪಗಳೆಂಬ ಅಗ್ರದಲ್ಲಿ ಕಾಣಿಸುವ ಪುಷ್ಪಗಳುಳ್ಳದ್ದೂ ಹಾಗು ಸುಖ-ದುಃಖಗಳೆಂಬ ಮಹತ್ತಾದ ಫಲಗಳುಳ್ಳದ್ದೂ ಆಗಿರುವುದು.

೧೦. ಮತ್ತು ಅಕೃತ್ಯಗಳ ಜ್ಞಾನದಿಂದ ತುಂಬಿದ ಸಂಸಾರರೂಪವಾದ ಆ ಮರವು ಮುಕ್ತಿಮಾರ್ಗವನ್ನು ತಡೆಗಟ್ಟಿ ಹಬ್ಬಿಕೊಂಡಿದೆ. ಮೂಢಜನರ ಸಂಗವೆಂಬ ಜಲಸೇಚನವುಳ್ಳದ್ದಾಗಿದೆ. ವಿಧವಿಧವಾದ ಕರ್ಮಗಳನ್ನು ಮಾಡಬೇಕೆಂಬ ಲವಲವಿಕೆಯೆಂಬ ದುಂಬಿಗಳ ಸಾಲಿನಿಂದ ಶೋಭಿಸಲ್ಪಟ್ಟಿದೆ.

ಸಂಸಾರಾಧ್ವಪರಿಶ್ರಾನ್ತಾ ಯೇ ತಚ್ಛಾಯಾಂ ಸಮಾಶ್ರಿತಾಃ ।
ಭ್ರಾನ್ತಿಜ್ಞಾನಸುಖಾಧೀನಾಸ್ತೇಷಾಮಾತ್ಯನ್ತಿಕಂ ಕುತಃ ॥೧೧॥

ಯೈಸ್ತು ಸತ್ಸಙ್ಗಪಾಷಾಣಶಿತೇನ ಮಮತಾತರುಃ ।
ಛಿನ್ನೋ ವಿದ್ಯಾಕುಠಾರೇಣ ತೇ ಗತಾಸ್ತೇನ ವರ್ತ್ಮನಾ ॥೧೨॥

ಪ್ರಾಪ್ಯ ಬ್ರಹ್ಮವನಂ ಶೀತಂ ನೀರಜಸ್ಕಮಕಣ್ಟಕಮ್ ।
ಪ್ರಾಪ್ನುವನ್ತಿ ಪರಾಂ ಪ್ರಾಜ್ಞಾ ನಿರ್ವೃತಿಂ ವೃತ್ತಿವರ್ಜಿತಾಃ ॥೧೩॥

ಭೂತೇನ್ದ್ರಿಯಮಯಂ ಸ್ಥೂಲಂ ನ ತ್ವಂ ರಾಜನ್ನ ಚಾಪ್ಯಹಮ್ ।
ನ ತನ್ಮಾತ್ರಂ ಮಯಾ ವಾಚ್ಯಂ ನೈವಾನ್ತಃಕರಣಾತ್ಮಕೌ ॥೧೪॥

---

೧೧. ಸಂಸಾರಪಥದಲ್ಲಿ ನಡೆದು ಆಯಾಸಗೊಂಡವರಾಗಿ ಯಾರು ಅಜ್ಞಾನವೃಕ್ಷದ ಛಾಯೆಯನ್ನು ಆಶ್ರಯಿಸುವರೊ; ಮತ್ತು ಅಲ್ಲಲ್ಲಿ ತೋರುವ, ವಾಸ್ತವವಾಗಿ ಸುಖವಲ್ಲವಾದರೂ ಸುಖವೆಂದು ಭ್ರಾಂತಿಜ್ಞಾನದಿಂದ ಸಿದ್ಧವಾದ ವಿಷಯಸುಖಗಳಲ್ಲಿ ಲೀನರಾಗುವರೊ; ಅಂತಹವರಿಗೆ ಉತ್ತಮಸುಖರೂಪವಾದ ಮುಕ್ತಿಯು ಹೇಗೆ ಲಭಿಸೀತು?

೧೨. ಯಾವ ಧೀರರು ತತ್ತ್ವಜ್ಞಾನವೆಂಬ ಕೊಡಲಿಯನ್ನು ಸಾಧುಗಳ ಸಂಗವೆಂಬ ಕಲ್ಲಿನಲ್ಲಿ ಉಜ್ಜಿ ಹರಿತವನ್ನಾಗಿ ಮಾಡಿ ಮಮತೆಯೆಂಬ ವೃಕ್ಷವನ್ನು ಕತ್ತರಿಸಿಹಾಕುವರೊ; ಅಂತಹವರು ಮರದ ತಡೆಯನ್ನು ಕಳೆದುಕೊಂಡು ಆ ಮಾರ್ಗವಾಗಿ ಮುಂದೆ ಹೋಗುವರು.

೧೩. ಅಂತಹ ಪ್ರಾಜ್ಞರು ಮಲಿನವಾದ, ಧೂಳಿಯಿಲ್ಲದ, ಕಂಟಕಗಳಿಂದ ವರ್ಜಿಸಲ್ಪಟ್ಟ ಮತ್ತು ಶೀತಲವಾದ ಬ್ರಹ್ಮವೆಂಬ ವನಕ್ಕೆ ಬಂದು ಕರ್ತವ್ಯವಾದ ವ್ಯಾಪಾರವಿಲ್ಲದೆ ವಿಶ್ರಾಂತಿಯಿಂದ ಸರ್ವೋತ್ತಮವಾದ ಸುಖವನ್ನು ಅನುಭವಿಸುತ್ತಾರೆ.

೧೪. ರಾಜನೆ! ಪಂಚಭೂತ-ಇಂದ್ರಿಯಗಳಿಂದ ಹುಟ್ಟಿದ ದೇಹವೆಂಬ ಈ ಸ್ಥೂಲಾಕಾರವು ನಾನು ಅಲ್ಲ ಮತ್ತು ನೀನೂ ಅಲ್ಲ. ಭೂತ-ಇಂದ್ರಿಯಗಳು ಆತ್ಮಸ್ವರೂಪವಲ್ಲವೆಂದು ಮಾತ್ರ ನಾನು ಹೇಳುವುದಿಲ್ಲ. ನಿನ್ನಲ್ಲಿರುವ ಅನ್ತಃಕರಣ ಸ್ವರೂಪನು ನೀನಲ್ಲ. ಮತ್ತು ನನ್ನ ಅಂತಃಕರಣರೂಪನೂ ನಾನಲ್ಲ.

ಕಂ ವಾ ಪಶ್ಯಾಮಿ ರಾಜೇನ್ದ್ರ ಪ್ರಧಾನಮಿದಮಾವಯೋಃ ।
ಯತಃ ಪರೋ ಹಿ ಕ್ಷೇತ್ರಜ್ಞಃ ಸಙ್ಘಾತೋ ಹಿ ಗುಣಾತ್ಮಕಃ ॥೧೫॥

ಮಶಕೋದುಮ್ಬರೇಷೀಕಾಮುಞ್ಜಾಮತ್ಸ್ಯಾಮ್ಭಸಾಂ ಯಥಾ ।
ಏಕತ್ವೇಽಪಿ ಪೃಥಗ್ಭಾವಸ್ತಥಾ ಕ್ಷೇತ್ರಾತ್ಮನೋರ್ನೃಪ ॥೧೬॥

ಅಲರ್ಕ ಉವಾಚ :—

ಭಗವಂಸ್ತ್ವತ್ಪ್ರಸಾದೇನ ಮಮಾವಿರ್ಭೂತಮುತ್ತಮಮ್ ।
ಜ್ಞಾನಂ ಪ್ರಧಾನಚಿಚ್ಛಕ್ತಿ ವಿವೇಕಕರಮೀದೃಶಮ್ ॥೧೭॥

ಕಿಂ ತ್ವತ್ರ ವಿಷಯಾಕ್ರಾನ್ತೇ ಸ್ಥೈರ್ಯವತ್ತ್ವಂ ನ ಚೇತಸಿ ।
ನ ಚಾಪಿ ವೇದ್ಮಿ ಮುಚ್ಯೇಯಂ ಕಥಂ ಪ್ರಕೃತಿಬನ್ಧನಾತ್ ॥೧೮॥

---

೧೫. ರಾಜೇಂದ್ರನೆ! ನಮ್ಮಿಬ್ಬರಲ್ಲಿ ಯಾವುದನ್ನು ತಾನೇ ಪ್ರಧಾನ-ವೆಂದು ನಾನರಿಯಲಿ. ಈ ನಮ್ಮ ದೇಹ-ಇಂದ್ರಿಯಗಳ ಸಂಘಾತದಲ್ಲಿ ಆತ್ಮವೆನಿಸಿ-ಕೊಳ್ಳುವ ವಸ್ತುವು ಇಲ್ಲ. ಸಂಘಾತವು ಸತ್ತ್ವ-ರಜಸ್ಸು-ತಮಸ್ಸು-ಎಂಬ ಗುಣ-ಮಯವಾಗಿರುವುದು. ಕ್ಷೇತ್ರಜ್ಞನೆಂದು ಕರೆಯುವ ಆತ್ಮವು ಸಂಘಾತಕ್ಕಿಂತ ಬೇರೆಯಾದುದು.

೧೬. ಎಲೈ! ರಾಜನೆ! ಅತ್ತಿಕಾಯಿ-ಕಾಯಿಯೊಳಗಿನಕ್ರಿಮಿ, ಇಷೀಕಾ ಹುಲ್ಲು-ಕಡ್ಡಿಯೊಳಗಿನ ನಾರು, ನೀರು-ನೀರೊಳಗಿನ ಮೀನು—ಇವು ಒಂದರೊಳ-ಗೊಂದು ಸೇರಿಕೊಂಡು ಐಕ್ಯದಿಂದ ತೋರಿದರೂ ವಾಸ್ತವವಾಗಿ ಬೇರೆಯಾಗಿರು-ವಂತೆ ಕ್ಷೇತ್ರ-ಆತ್ಮವಸ್ತುಗಳು ಬೇರೆಯಾಗಿರುವುವು.

ಅಲರ್ಕನು ಹೀಗೆಂದನು :—

೧೭. ಪೂಜ್ಯನಾದ ಮುನಿಯೆ! ನಿನ್ನ ಅನುಗ್ರಹದಿಂದ ಪ್ರಧಾನ ಮತ್ತು ಆತ್ಮಚೈತನ್ಯಗಳಿಗೆ ವಿವೇಚನೆಯನ್ನು ತೋರ್ಪಡಿಸುವ ಉತ್ತಮವಾದ ಈ ಜ್ಞಾನವು ನನಗೆ ಪ್ರಕಾಶವಾಯಿತು.

೧೮. ಆದರೆ ದೇಹ-ಇಂದ್ರಿಯ ಮೊದಲುಗೊಂಡು ಬಾಹ್ಯವಾದ ಇತರ ವಿಷಯಗಳಿಂದ ಲೇಪಿಸಲ್ಪಟ್ಟಂತಿರುವ ಆತ್ಮತತ್ತ್ವದ ವಿಷಯದಲ್ಲಿ ಮನಸ್ಸಿಗೆ ಸ್ಥೈರ್ಯವುಂಟಾಗುವುದಿಲ್ಲ. ಹೀಗಿರಲು ಪ್ರಕೃತಿಯ ಬಂಧನದಿಂದ ನಾನು ಹೇಗೆ ಮುಕ್ತನಾಗುವೆನೊ ; ಅದನ್ನು ನಾನು ಅರಿಯೆನು.

ಕಥಂ ನ ಭೂಯಃ ಭೂಯಶ್ಚ ಕಥಂ ನಿರ್ಗುಣತಾಮಿಯಾಮ್ ।
ಕಥಂ ಚ ಬ್ರಹ್ಮಣ್ಯೈಕತ್ವಂ ವ್ರಜೇಯಂ ಶಾಶ್ವತೇನ ವೈ ॥೧೯॥

ತನ್ಮೇ ಯೋಗಂ ತಥಾ ಬ್ರಹ್ಮನ್ಪ್ರಣತಾಯಾಭಿಯಾಚತೇ ।
ಸಮ್ಯಗ್ಬ್ರೂಹಿ ಮಹಾಪ್ರಾಜ್ಞ ಸತ್ಸಙ್ಗೋ ಹ್ಯುಪಕೃನ್ನೃಣಾಮ್ ॥೨೦॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ದತ್ತಾತ್ರೇಯಾಲರ್ಕ-ಸಂವಾದೇ ಷಟ್ತ್ರಿಂಶೋಽಧ್ಯಾಯಃ

---

೧೯. ಮತ್ತು ಯಾವ ವರ್ತನೆಯಿಂದ ನಾನು ಮತ್ತೆ ಹುಟ್ಟನ್ನು ಹೊಂದದಂತೆ ಆದೀತು? ಹೇಗೆ ಗುಣಸಂಗವನ್ನು ಬಿಟ್ಟು ನಿರ್ಗುಣತ್ವವನ್ನು ಹೊಂದುವೆನು? ಹಾಗು ಶಾಶ್ವತವಾದ ಬ್ರಹ್ಮವಸ್ತುವಿನಲ್ಲಿ ಐಕ್ಯವನ್ನು ನಾನು ಹೇಗೆ ಹೊಂದಲಿ?

೨೦. ಮಹಾಪ್ರಜ್ಞಾಶಾಲಿಯೆ! ಬ್ರಹ್ಮರ್ಷಿಯೆ! ಆದಕಾರಣದಿಂದ ನಿನ್ನನ್ನು ನಮಸ್ಕರಿಸಿ ವಿನಯದಿಂದ ಯಾಚಿಸಿಕೊಳ್ಳುತ್ತಿದ್ದ ನನಗೆ ಯೋಗ ಜ್ಞಾನವನ್ನು ಚನ್ನಾಗಿ ಉಪದೇಶಮಾಡು. ಮಾನವರಿಗೆ ಸಾಧುಗಳ ಸಂಗವು ಪರಮೋಪಕಾರವನ್ನು ಮಾಡುವುದಲ್ಲವೆ!

ಮಾರ್ಕಂಡೇಯ ಮಹಾಪುರಾಣದಲ್ಲಿ ಮೂವತ್ತೈದನೆಯ ಅಧ್ಯಾಯವು ಮುಗಿದುದು

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಷಟ್ತ್ರಿಂಶೋಽಧ್ಯಾಯಃ

(ಯೋಗವಿಧಾನೋಪದೇಶಃ)

ದತ್ತಾತ್ರೇಯ ಉವಾಚ :—

ಜ್ಞಾನಪೂರ್ವೋ ವಿಯೋಗೋ ಯೋಽಜ್ಞಾನೇನ ಸಹ ಯೋಗಿನಃ ।
ಸಾ ಮುಕ್ತಿರ್ಬ್ರಹ್ಮಣಾ ಚೈಕ್ಯಮನೈಕ್ಯಂ ಪ್ರಾಕೃತೈರ್ಗುಣೈಃ ॥೧॥

ಯೋಗೇ ಚ ಶಕ್ತಿರ್ವಿದುಷಾಂ ಯೇನ ಶ್ರೇಯಃ ಪರಂ ಭವೇತ್ ।
ಮುಕ್ತಿರ್ಯೋಗಾತ್ತಥಾ ಯೋಗಃ ಸಮ್ಯಜ್ಞ್ಞಾನಾನ್ಮಹೀಪತೇ ॥೨॥

ಮೂವತ್ತಾರನೆಯ ಅಧ್ಯಾಯ

ದತ್ತಾತ್ರೇಯ ಮುನಿಯು ಇಂತೆಂದನು :—

೧. ಅಲರ್ಕನೆ ! ಯೋಗಸಿದ್ಧಿಯನ್ನು ಹೊಂದಿದ ಮಹಾತ್ಮನಿಗೆ ಜ್ಞಾನದಿಂದ ಅಜ್ಞಾನ ಮತ್ತು ಅದರ ಕಾರ್ಯಪರಂಪರೆಯು ನಾಶವಾಗುವುದು ಮುಕ್ತಿಯು. ಮತ್ತು ಅದೆ ಬ್ರಹ್ಮವಸ್ತುವಿನಲ್ಲಿ ಐಕ್ಯಪ್ರಾಪ್ತಿಯೆನಿಸುವುದು. ಪ್ರಕೃತಿಸಿದ್ಧವಾದ ಗುಣತ್ರಯದ ಸಂಗವು ಬ್ರಹ್ಮಭೇದವೆನಿಸುವುದು.

೨. ಎಲೈ ! ಭೂಪಾಲಕನೆ ! ಜ್ಞಾನಿಗಳಿಗೆ ಯೋಗಾಭ್ಯಾಸದಲ್ಲಿ ಶಕ್ತಿಯು ಆವಶ್ಯಕವಾದುದು. ಯೋಗಾಭ್ಯಾಸದಿಂದ ಸರ್ವೋತ್ತಮವಾದ ಮುಕ್ತಿಯೆಂಬ ಶ್ರೇಯಸ್ಸು ಲಭಿಸುವುದು. ಯೋಗದಿಂದ ಮುಕ್ತಿಯು ಲಭಿಸುವುದು. ತತ್ತ್ವಜ್ಞಾನದಿಂದ ಯೋಗಸಿದ್ಧಿಯುಂಟಾಗುವುದು.

ಸಙ್ಗದೋಷೋದ್ಭವಂ ದುಃಖಂ ಮಮತ್ವಾಸಕ್ತಚೇತಸಾಮ್ ।
ತಸ್ಮಾತ್ಸಙ್ಗಂ ಪ್ರಯತ್ನೇನ ಮುಮುಕ್ಷುಃ ಸನ್ತ್ಯಜೇನ್ನರಃ ॥೩॥

ಸಙ್ಗಾಭಾವೇ ಮಮೇತ್ಯಸ್ಯಾಃ ಖ್ಯಾತೇರ್ಹಾನಿಃ ಪ್ರಜಾಯತೇ ॥೪॥

ನಿರ್ಮಮತ್ವಂ ಸುಖಾಯೈವ ವೈರಾಗ್ಯಾದ್ದೋಷದರ್ಶನಮ್ ।
ಜ್ಞಾನಾದೇವ ಚ ವೈರಾಗ್ಯಂ ಜ್ಞಾನಂ ವೈರಾಗ್ಯಪೂರ್ವಕಮ್ ॥೫॥

ತದ್ಗೃಹಂ ಯತ್ರ ವಸತಿ ತದ್ಭೋಜ್ಯಂ ಯೇನ ಜೀವತಿ ।
ಯನ್ಮುಕ್ತಯೇ ತದೇವೋಕ್ತಂ ಜ್ಞಾನಮಜ್ಞಾನಮನ್ಯಥಾ ॥೬॥

---

೩. ಮಮತ್ವಭಾವನೆಯಲ್ಲಿ ಅಂಟಿಕೊಂಡಿರುವ ಮಾನಸವುಳ್ಳವರಿಗೆ ಸಂಗದೋಷದಿಂದ ದುಃಖವು ಉಂಟಾಗುವುದು. ಆದುದರಿಂದ ಮೋಕ್ಷವನ್ನು ಬಯಸುವ ಮಾನವನು ಯತ್ನಪೂರ್ವಕವಾಗಿ ಸಂಗವೆಂಬ ದೋಷವನ್ನು ತ್ಯಜಿಸಬೇಕು.

೪. ಬಾಹ್ಯವಸ್ತುವಿನಲ್ಲಿ ಮೊದಲು ಸಂಗದೋಷವನ್ನು ತ್ಯಜಿಸಿದರೆ ಆಗ ' ನನ್ನದು ' ಎಂಬ ಮಮತ್ವ ಸ್ಫೂರ್ತಿಯು ಅಡಗಿಹೋಗುವುದು. ಮಮತ್ವ ಪ್ರತೀತಿಯು ನಶಿಸಿದರೆ ಮುಕ್ತಿದ್ವಾರವು ತೆರೆದಂತಾಗುವುದು.

೫. ಹಾಗೆ ಮಮತ್ವವು ದೂರವಾಗಿ ನಿರ್ಮಮತ್ವಭಾವನೆಯುಂಟಾದರೆ ಸುಖವನ್ನು ತಪ್ಪದೆ ಕೊಡುವುದು. ವೈರಾಗ್ಯದಿಂದ ವಿಷಯಗಳಲ್ಲಿ ದೋಷಗಳು ಕಾಣಿಸುವುವು. ಜ್ಞಾನದಿಂದ ವೈರಾಗ್ಯಪ್ರಾಪ್ತಿಯಾಗುವುದು. ವೈರಾಗ್ಯ ಮೂಲಕ-ವಾಗಿಯೆ ಜ್ಞಾನವು ಉದಯಿಸುವುದು.

೬. ಹಾಗೆ ವಿರಕ್ತಿಯನ್ನು ಹೊಂದಿರುವ ಮಾನವನಿಗೆ ಅವನು ವಾಸಮಾಡುವ ಸ್ಥಳವೆ ಮನೆಯಾಗುವುದು. ಅವನು ಯಾವುದರಿಂದ ಜೀವಿಸು-ವನೊ ; ಅದೇ ಅವನಿಗೆ ಭೋಜ್ಯವಾಗುವುದು. ಮುಕ್ತಿಯನ್ನು ಕೊಡುವುದೆ ಜ್ಞಾನವು. ಮಿಕ್ಕಾದುದೆಲ್ಲವೂ ಅಜ್ಞಾನವು.

ಉಪಭೋಗೇನ ಪುಣ್ಯಾನಾಮಪುಣ್ಯಾನಾಂ ಚ ಪಾರ್ಥಿವ ॥೭॥

ಕರ್ತವ್ಯಮಿತಿ ನಿತ್ಯಾನಾಮಕಾಮಕರಣಾತ್ತಥಾ ।
ಅಸಙ್ಖ್ಯಯಾದಪೂರ್ವಸ್ಯ ಕ್ಷಯಾತ್ಪೂರ್ವಾರ್ಜಿತಸ್ಯ ಚ ॥೮॥

ಕರ್ಮಣೋ ಬನ್ಧಮಾಪ್ನೋತಿ ಶರೀರಂ ಚ ಪುನಃ ಪುನಃ ।
ಕರ್ಮಣಾ ಮೋಕ್ಷಮಾಪ್ನೋತಿ ವೈಪರೀತ್ಯೇನ ತಸ್ಯ ತು ॥೯॥

ಏತತ್ತೇ ಕಥಿತಂ ಜ್ಞಾನಂ ಯೋಗಂ ಚೇಮಂ ನಿಬೋಧ ಮೇ ।
ಯಂ ಪ್ರಾಪ್ಯ ಬ್ರಹ್ಮಣೋ ಯೋಗೀ ಶಾಶ್ವತಾನ್ನಾನ್ಯತಾಂ ವ್ರಜೇತ್ ॥೧೦॥

---

೭. ಜ್ಞಾನವು ಉಂಟಾಗಲು ಅನಾದಿಯಾಗಿ ಕೂಡಿಹಾಕಿರುವ, ಅನೇಕ ಸಂಚಿತ ಕರ್ಮಗಳು ಅಡ್ಡಿಮಾಡುವುವು. ಅಂತಹ ಪುಣ್ಯ ಅಥವಾ ಪಾಪ-ಕರ್ಮಗಳ ಫಲವನ್ನು ಭುಂಜಿಸಿ ಆ ಕರ್ಮಗಳನ್ನು ಲಯಮಾಡಿಕೊಳ್ಳಬೇಕು.

೮. ಹಾಗು ಆಯಾಯ ಫಲಪ್ರಾಪ್ತಿಯಲ್ಲಿ ಆಶೆಯನ್ನು ಬಿಟ್ಟು, ಶಾಸ್ತ್ರ-ವಿಧಿಯಿರುವುದರಿಂದ ಕರ್ತವ್ಯವೆಂಬ ಭಾವನೆಯಿಂದ ನಿತ್ಯಕರ್ಮಗಳನ್ನು ಮಾಡುವುದರಿಂದಲೂ ಹೊಸದಾಗಿ ಪುಣ್ಯ-ಪಾಪಗಳ ಸಂಗ್ರಹವಿಲ್ಲದ್ದರಿಂದಲೂ ಮತ್ತು ಪೂರ್ವಾರ್ಜಿತ ಪುಣ್ಯಪಾಪಗಳು ಕ್ಷಯಿಸಿಹೋಗುವುದರಿಂದಲೂ ಜ್ಞಾನ ಲಾಭದ ವಿಘ್ನಗಳು ಪರಿಹಾರವಾಗುವುವು.

೯. ಪ್ರಾಣಿಯು ಸಂಸಾರ ಬಂಧವನ್ನು ಹೊಂದಲು ಕರ್ಮವೇ ಸಾಧನವು. ಕರ್ಮದಿಂದಲೆ ಪುನಃ ಪುನಃ ದೇಹವನ್ನು ಹೊಂದುವುದು. ಇದಕ್ಕೆ ವಿರುದ್ಧವಾಗಿ ಬಂಧನವಾಗದಂತೆ ಯುಕ್ತಿಯಿಂದ ಸೇವಿಸಿದ ಕರ್ಮಯೋಗದಿಂದ ಮುಕ್ತಿಯು ಲಭಿಸುವುದು.

೧೦. ಮಹಾರಾಜನೆ! ಹೀಗೆ ನಿನಗೆ ಜ್ಞಾನವನ್ನು ಉಪದೇಶಿಸಿರುವೆನು. ಮುಂದೆ ಯೋಗವಿಧಿಯನ್ನು ಹೇಳುವೆನು. ಅದನ್ನು ಕೇಳು. ಯೋಗಸಿದ್ಧಿ-ಯನ್ನು ಹೊಂದಿದ ಯೋಗಿಯು ಶಾಶ್ವತವಾದ ಬ್ರಹ್ಮವಸ್ತುವಿನಿಂದ ಭೇದವನ್ನು ಯಾವಾಗಲೂ ಹೊಂದುವುದಿಲ್ಲ.

ಪ್ರಾಗೇವಾತ್ಮಾತ್ಮನಾ ಜೇಯೋ ಯೋಗಿನಾಂ ಸ ಹಿ ದುರ್ಜಯಃ ।
ಕುರ್ವೀತ ತಜ್ಜಯೇ ಯತ್ನಂ ತಸ್ಯೋಪಾಯಂ ಶೃಣುಷ್ವ ಮೇ ॥೧೧॥

ಪ್ರಾಣಾಯಾಮೈರ್ದಹೇದ್ದೋಷಾನ್ಧಾರಣಾಭಿಶ್ಚ ಕಿಲ್ಬಿಷಮ್ ।
ಪ್ರತ್ಯಾಹಾರೇಣ ವಿಷಯಾನ್ಧ್ಯಾನೇನಾನೀಶ್ವರಾನ್ಗುಣಾನ್ ॥೧೨॥

ಯಥಾ ಪರ್ವತಧಾತೂನಾಂ ಧ್ಮಾತಾನಾಂ ದಹ್ಯತೇ ಮಲಮ್ ।
ತಥೇನ್ದ್ರಿಯಕೃತಾ ದೋಷಾ ದಹ್ಯನ್ತೇ ಪ್ರಾಣನಿಗ್ರಹಾತ್ ॥೧೩॥

ಪ್ರಥಮಂ ಸಾಧನಂ ಕುರ್ಯಾತ್ಪ್ರಾಣಾಯಾಮಸ್ಯ ಯೋಗವಿತ್ ।
ಪ್ರಾಣಾಪಾನನಿರೋಧಸ್ತು ಪ್ರಾಣಾಯಾಮ ಉದಾಹೃತಃ ॥೧೪॥

---

೧೧. ಯೋಗಾಭ್ಯಾಸಿಯು ಮೊದಲು ತನ್ನ ಮಾನಸವನ್ನು ತಾನೆ ಜಯಿಸಿಕೊಳ್ಳಬೇಕು. ಆತ್ಮರೂಪವಾದ ಮನಸ್ಸನ್ನು ಜಯಿಸುವುದು ಸುಲಭವಲ್ಲ. ಆದ್ದರಿಂದ ಆತ್ಮನಿಗ್ರಹದಲ್ಲಿ ಹೆಚ್ಚಾದ ಪ್ರಯತ್ನವನ್ನು ಮಾಡಬೇಕು. ಅದಕ್ಕೆ ಉಪಾಯವನ್ನು ಹೇಳುವೆನು. ಅದನ್ನು ಕೇಳು.

೧೨. ಪ್ರಾಣಾಯಾಮ-ಧಾರಣಾ-ಪ್ರತ್ಯಾಹಾರ ಮತ್ತು ಧ್ಯಾನಗಳು ಯೋಗಾಂಗಗಳಾಗಿವೆ. ಅವುಗಳಲ್ಲಿ ಪ್ರಾಣಾಯಾಮದಿಂದ ವ್ಯಾಧಿ ಮುಂತಾದ ದೋಷಗಳನ್ನೂ, ಧಾರಣೆಗಳಿಂದ ಪಾಪಪ್ರವೃತ್ತಿಯನ್ನೂ, ಪ್ರತ್ಯಾಹಾರದಿಂದ ವಿಷಯಗಳನ್ನೂ ಮತ್ತು ಧ್ಯಾನದಿಂದ ಅನೀಶ್ವರತ್ವವನ್ನುಂಟುಮಾಡುವ ಗುಣಗಳನ್ನೂ ನಾಶಮಾಡಬೇಕು.

೧೩. ಪರ್ವತಗಳಲ್ಲಿ ಬೆಳೆದ ವಿವಿಧ ಧಾತುಗಳನ್ನು ಅಗ್ನಿಯಲ್ಲಿ ಹಾಕಿ ಸುಡುವುದರಿಂದ ಅವುಗಳಲ್ಲಿರುವ ಮಲವು ಹೇಗೆ ಸುಟ್ಟುಹೋಗುವುದೋ; ಅದರಂತೆ ಇಂದ್ರಿಯಗಳಿಂದ ಉಂಟಾದ ದೋಷಗಳು ಪ್ರಾಣವಾಯುವನ್ನು ನಿಗ್ರಹಿಸುವ ಪ್ರಾಣಾಯಾಮಾನುಷ್ಠಾನದಿಂದ ಲಯಹೊಂದುವುವು.

೧೪. ಯೋಗಕ್ರಮವನ್ನು ತಿಳಿದಿರುವ ಯೋಗಿಯು ಯೋಗಾಭ್ಯಾಸದ ಪ್ರಾರಂಭದಲ್ಲಿ ಪ್ರಾಣಾಯಾಮವೆಂಬ ಅಂಗದ ಸಾಧನೆಯನ್ನು ಮಾಡಬೇಕು. ದೇಹದ ಒಳಭಾಗದಲ್ಲಿರುವ ಪ್ರಾಣ-ಅಪಾನ ವಾಯುಗಳ ವೃತ್ತಿಯನ್ನು ತಡೆಗಟ್ಟುವುದು ಪ್ರಾಣಾಯಾಮವೆಂದು ಕರೆಯಲ್ಪಟ್ಟಿದೆ.

ಲಘುರ್ಮಧ್ಯೋತ್ತರೀಯಾಖ್ಯಃ ಪ್ರಾಣಾಯಾಮಸ್ತ್ರಿಧೋದಿತಃ ।
ತಸ್ಯ ಪ್ರಮಾಣಂ ವಕ್ಷ್ಯಾಮಿ ತದಲರ್ಕ ಶೃಣುಷ್ವ ಮೇ ॥೧೫॥

ಲಘುರ್ದ್ವಾದಶಮಾತ್ರಸ್ತು ದ್ವಿಗುಣಃ ಸ ತು ಮಧ್ಯಮಃ ।
ತ್ರಿಗುಣಾಭಿಸ್ತು ಮಾತ್ರಾಭಿರುತ್ತಮಃ ಪರಿಕೀರ್ತಿತಃ ॥೧೬॥

ನಿಮೇಷೋನ್ಮೇಷಣೇ ಮಾತ್ರಾ ಕಾಲೋ ಲಘ್ವಕ್ಷರಸ್ತಥಾ ।
ಪ್ರಾಣಾಯಾಮಸ್ಯ ಸಂಖ್ಯಾರ್ಥಂ ಸ್ಮೃತೋ ದ್ವಾದಶಮಾತ್ರಿಕಃ॥೧೭॥

ಪ್ರಥಮೇನ ಜಯೇತ್ಸ್ವೇದಂ ಮಧ್ಯಮೇನ ಚ ವೇಪಥುಮ್ ।
ವಿಷಾದಂ ಹಿ ತೃತೀಯೇನ ಜಯೇದ್ದೋಷಾನನುಕ್ರಮಾತ್ ॥೧೮॥

---

೧೫. ಅಲರ್ಕರಾಜನೆ! ಪ್ರಾಣಾಯಾಮವು ಮೂರು ಬಗೆಯಾಗಿರುವುದು. ಲಘು, ಮಧ್ಯ ಮತ್ತು ಉತ್ತಮ ಪ್ರಾಣಾಯಾಮಗಳೆಂಬುವು ಅದರ ಮೂರು ಬಗೆಗಳು. ಈ ಬಗೆಗಳ ಪ್ರಮಾಣವನ್ನು ಹೇಳುವೆನು; ಅದನ್ನು ಕೇಳು.

೧೬. ಮೊದಲನೆಯದಾದ ಲಘು ಪ್ರಾಣಾಯಾಮವು ಹನ್ನೆರಡು ಮಾತ್ರಾಕಾಲದ ವರೆಗೆ ಪ್ರಾಣ ನಿಗ್ರಹದಿಂದ ಸಾಧ್ಯವಾಗುವುದು. ಇದಕ್ಕೆ ದ್ವಿಗುಣವಾಗಿ ಮೂವತ್ತೆರಡು ಮಾತ್ರಾಕಾಲದ ಪ್ರಾಣನಿರೋಧವು ಮಧ್ಯಮ ಪ್ರಾಣಾಯಾಮವಾಗುವುದು. ಮತ್ತು ತ್ರಿಗುಣವಾಗಿ ಮೂವತ್ತಾರು ಮಾತ್ರಾಕಾಲದ ಪ್ರಾಣಾಯಾಮವು ಉತ್ತಮ ಪ್ರಾಣಾಯಾಮವಾಗುವುದು.

೧೭. ಒಂದು ಸಲ ಕಣ್ಣನ್ನು ಮುಚ್ಚಿ ತೆರೆಯುವ ಕಾಲವು ಮತ್ತು ವರ್ಣಮಾಲೆಯಲ್ಲಿರುವ ಹ್ರಸ್ವಾಕ್ಷರವನ್ನು ಉಚ್ಚಾರ ಮಾಡುವ ಕಾಲವು ಮಾತ್ರಾಕಾಲವೆನಿಸುವುದು. ಪ್ರಾಣಾಯಾಮದ ಸಮಯದ ಪರಿಣಾಮವನ್ನು ತೋರಿಸಲು ಮಾತ್ರಾ ಕಾಲವು ಸ್ಮರಿಸಲ್ಪಟ್ಟಿದೆ. ಹನ್ನೆರಡು ಮಾತ್ರಾಕಾಲವು ಲಘುಪ್ರಾಣಾಯಾಮದ ಕಾಲವಾಗುವುದು.

೧೮. ಹೀಗೆ ಲಘು-ಮಧ್ಯಮ-ಉತ್ತಮ ಪ್ರಾಣಾಯಾಮಗಳು ದೋಷ ಜಯಕ್ಕೆ ಕಾರಣವಾಗಿವೆ. ಲಘು ಪ್ರಾಣಾಯಾಮದಿಂದ ಬೆವರನ್ನೂ, ಮಧ್ಯಮ ಪ್ರಾಣಾಯಾಮದಿಂದ ನಡುಗನ್ನೂ ಮತ್ತು ಮೂರನೆಯ ಉತ್ತಮ ಪ್ರಾಣಾಯಾಮದಿಂದ ವಿಷಾದವನ್ನೂ—ಹೀಗೆ ಕ್ರಮವಾಗಿ ದೋಷಗಳನ್ನು ಕ್ಷಯಿಸಬೇಕು.

ಮೃದುತ್ವಂ ಸೇವ್ಯಮಾನಾಸ್ತು ಸಿಹ್ಮಶಾರ್ದೂಲಕುಞ್ಜರಾಃ ।
ಯಥಾ ಯಾನ್ತಿ ತಥಾ ಪ್ರಾಣೋ ವಶ್ಯೋ ಭವತಿ ಯೋಗಿನಃ ॥೧೯॥

ವಶ್ಯಂ ಮತ್ತಂ ಯಥೇಚ್ಛಾತೋ ನಾಗಂ ನಯತಿ ಹಸ್ತಿಪಃ ।
ತಥೈವ ಯೋಗೀ ಛನ್ದೇನ ಪ್ರಾಣಂ ನಯತಿ ಸಾಧಿತಮ್ ॥೨೦॥

ಯಥಾ ಹಿ ಸಾಧಿತಃ ಸಿಹ್ಮೋ ಮೃಗಾನ್ಹನ್ತಿ ನ ಮಾನವಾನ್ ।
ತದ್ವನ್ನಿಷಿದ್ಧಪವನಃ ಕಿಲ್ಬಿಷಂ ನ ನೃಣಾಂ ತನುಮ್ ॥೨೧॥

ತಸ್ಮಾದ್ಯುಕ್ತಃ ಸದಾ ಯೋಗೀ ಪ್ರಾಣಾಯಾಮಪರೋ ಭವೇತ್ ।
ಶ್ರೂಯತಾಂ ಮುಕ್ತಿಫಲದಂ ತಸ್ಯಾವಸ್ಥಾಚತುಷ್ಟಯಮ್ ॥೨೨॥

---

೧೯. ಸಿಂಹ, ಶಾರ್ದೂಲ, ಗಜ ಮುಂತಾದ ಭಯಂಕರ ಪ್ರಾಣಿಗಳನ್ನು ಸೇವಿಸಿ ಉಪಚರಿಸುತ್ತಿದ್ದರೆ ಅವು ಮೃದುತ್ವವನ್ನು ಹೊಂದುತ್ತವೆ. ಹಾಗೆ ಕ್ರಮವಾಗಿ ನಿರೋಧಮಾಡಿ ಅಭ್ಯಾಸಮಾಡುತ್ತ ಬರುವುದರಿಂದ ಯೋಗಿಗೆ ಪ್ರಾಣವು ವಶ್ಯವಾಗುವುದು.

೨೦. ಆನೆಯ ಮಾವಟಿಗನು ವಶಪಡಿಸಿಕೊಂಡ ಮದ್ದಾನೆಯನ್ನು ತನ್ನ ಇಚ್ಛಾನುಸಾರವಾಗಿ ನಡೆಯಿಸುವನಲ್ಲವೆ! ಅದರಂತೆ ಯೋಗಿಯು ಪ್ರಾಣಾಯಾಮದಿಂದ ವಶಪಡಿಸಿಕೊಂಡ ಪ್ರಾಣವಾಯುವನ್ನು ತನ್ನ ಇಷ್ಟ-ಬಂದಂತೆ ನಿಲ್ಲಿಸಬಲ್ಲನು.

೨೧. ವಶಮಾಡಿಕೊಂಡು ಪಳಗಿಸಿಕೊಂಡ ಸಿಂಹವು ಆಹಾರವಾಗಿ ಒಪ್ಪಿಸಿದ ಮೃಗಗಳನ್ನು ಮಾತ್ರ ಕೊಂದು ಮಾನವರನ್ನು ಕೊಲ್ಲದೆ ಬಿಡುವುದು; ಹಾಗೆ ನಿರೋಧದಿಂದ ಗೆದ್ದ ಪ್ರಾಣವು ಮಾನವರ ಪಾಪವನ್ನು ಮಾತ್ರ ನಾಶಮಾಡುವುದು. ದೇಹಕ್ಕೆ ಅಪಾಯವನ್ನು ಮಾಡುವುದಿಲ್ಲ.

೨೨. ಆದುದರಿಂದ ಯೋಗಾಭ್ಯಾಸದಲ್ಲಿ ತತ್ಪರನಾದ ಯೋಗಿಯು ಯಾವಾಗಲೂ ಪ್ರಾಣಾಯಾಮಾಭ್ಯಾಸದಲ್ಲಿ ಹೆಚ್ಚು ತತ್ಪರನಾಗಿರಬೇಕು. ಈ ವಿಧವಾದ ಪ್ರಾಣಾಯಾಮದಲ್ಲಿ ಮುಕ್ತಿಫಲವನ್ನುಂಟುಮಾಡುವ ನಾಲ್ಕು ಅವಸ್ಥೆಗಳಿವೆ. ಅವುಗಳನ್ನು ಕೇಳು.

ಧ್ವಸ್ತಿಃ ಪ್ರಾಪ್ತಿಸ್ತಥಾ ಸಂವಿತ್ಪ್ರಸಾದಶ್ಚ ಮಹೀಪತೇ ।
ಸ್ವರೂಪಂ ಶೃಣು ಚೈತೇಷಾಂ ಕಥ್ಯಮಾನಮನುಕ್ರಮಾತ್ ॥೨೩॥

ಕರ್ಮಣಾಮಿಷ್ಟದುಷ್ಟಾನಾಂ ಜಾಯತೇ ಫಲಸಂಕ್ಷಯಃ ।
ಚೇತಸೋಽಪಕಷಾಯತ್ವಂ ಯತ್ರ ಸಾ ಧ್ವಸ್ತಿರುಚ್ಯತೇ ॥೨೪॥

ಐಹಿಕಾಮುಷ್ಮಿಕಾನ್ಕಾಮಾಂಲ್ಲೋಭಮೋಹಾತ್ಮಕಾನ್ ಸ್ವಯಮ್ ।
ನಿರುಧ್ಯಾಸ್ತೇ ಸದಾ ಯೋಗೀ ಪ್ರಾಪ್ತಿಃ ಸಾ ಸಾರ್ವಕಾಲಿಕೀ ॥೨೫॥

ಅತೀತಾನಾಗತಾನರ್ಥಾನ್ವಿಪ್ರಕೃಷ್ಟತಿರೋಹಿತಾನ್ ।
ವಿಜಾನಾತೀನ್ದುಸೂರ್ಯರ್ಕ್ಷಗ್ರಹಾಣಾಂ ಜ್ಞಾನಸಂಪದಾ ॥೨೬॥

---

೨೩. ಅಲರ್ಕಮಹೀಪಾಲನೆ ! ಪ್ರಾಣಾಯಾಮದಲ್ಲಿ ಧ್ವಸ್ತಿ, ಪ್ರಾಪ್ತಿ, ಸಂವಿತ್ ಮತ್ತು ಪ್ರಸಾದ ಎಂದು ನಾಲ್ಕು ಅವಸ್ಥೆಗಳು ಇರುತ್ತವೆ. ಈ ನಾಲ್ಕು ಅವಸ್ಥೆಗಳ ಸ್ವರೂಪವನ್ನು ನಾನು ಕ್ರಮವಾಗಿ ಉಪದೇಶಿಸುವೆನು. ಅದನ್ನು ಕೇಳು.

೨೪. ಪ್ರಾಣಾಯಾಮದ ಯಾವ ಅವಸ್ಥೆಯಲ್ಲಿ ಪುಣ್ಯ-ಪಾಪಕರ್ಮಗಳ ಫಲವು ಸಮಗ್ರವಾಗಿ ನಾಶವಾಗುವುದೋ ಮತ್ತು ಕರ್ಮಬಂಧವು ನಾಶವಾಗಿ ಮನಸ್ಸು ನಿಷ್ಕಳಂಕಸ್ವರೂಪವನ್ನು ಹೊಂದುವುದೋ ಆ ಅವಸ್ಥೆಯನ್ನು ಧ್ವಸ್ತಿಯೆಂದು ಕರೆಯುವರು.

೨೫. ಹಾಗು ಯೋಗಿಯು ಇಹ-ಪರಲೋಕಗಳ ವಿಷಯಗಳಲ್ಲಿ ಉದ್ಭವಿಸುವ, ಕ್ರಮವಾಗಿ ಲೋಭ-ಮೋಹಗಳಿಗೆ ಆಸ್ಪದವನ್ನು ಕೊಡುವ ಸಮಸ್ತ ಕಾಮಗಳನ್ನು ಯಾವಾಗಲೂ ನಿರೋಧಿಸಿ ಇರುವ ಅವಸ್ಥೆಯು ಸರ್ವಕಾಲದಲ್ಲಿಯೂ ಇರುವ ಪ್ರಾಪ್ತಿಯೆಂಬ ಪ್ರಾಣಾಯಾಮದ ಅವಸ್ಥೆಯಾಗಿರುವುದು.

೨೬. ಯೋಗಪರಿಪಾಕವನ್ನು ಹೊಂದಿದ ಯೋಗಿಯು ಹಿಂದೆ ಕಳೆದಿರುವ ಅಥವಾ ಮುಂದೆ ಬರುವ, ಹಾಗು ಹತ್ತಿರದಲ್ಲಿದ್ದ ಅಥವಾ ದೂರದಲ್ಲಿದ್ದ ಎಲ್ಲ ವಸ್ತುಗಳನ್ನೂ ತಿಳಿಯುವಂತೆ ಸಿದ್ಧಿಯನ್ನು ಹೊಂದುವನು. ಮತ್ತು ಸೂರ್ಯ-ಚಂದ್ರ-ನಕ್ಷತ್ರ-ಗ್ರಹಗಳ ಜ್ಞಾನಸಂಪತ್ತಿಯನ್ನು ಹೊಂದುವನು.

ತುಲ್ಯಪ್ರಭಾವಸ್ತು ಯದಾ ಯೋಗೀ ಪ್ರಾಪ್ನೋತಿ ಸಂವಿದಮ್ ।
ತದಾ ಸಂವಿದಿತಿ ಖ್ಯಾತಾ ಪ್ರಾಣಾಯಾಮಸ್ಯ ಸಾ ಸ್ಥಿತಿಃ ॥೨೭॥

ಯಾನ್ತಿ ಪ್ರಸಾದಂ ಯೇನಾಸ್ಯ ಮನಃ ಪಞ್ಚ ಚ ವಾಯವಃ ।
ಇನ್ದ್ರಿಯಾಣೀನ್ದ್ರಿಯಾರ್ಥಾಶ್ಚ ಸ ಪ್ರಸಾದ ಇತಿ ಸ್ಮೃತಃ ॥೨೮॥

ಶೃಣುಷ್ವ ಚ ಮಹೀಪಾಲ ಪ್ರಾಣಾಯಾಮಸ್ಯ ಲಕ್ಷಣಮ್ ।
ಯುಞ್ಜತಶ್ಚ ಸದಾ ಯೋಗಂ ಯಾದೃಗ್ವಿಹಿತಮಾಸನಮ್ ॥೨೯॥

ಪದ್ಮಮರ್ಧಾಸನಂ ಚಾಪಿ ತಥಾ ಸ್ವಸ್ತಿಕಮಾಸನಮ್ ।
ಆಸ್ಥಾಯ ಯೋಗಂ ಯುಞ್ಜೀತ ಕೃತ್ವಾ ಚ ಪ್ರಣವಂ ಹೃದಿ ॥೩೦॥

---

೨೭. ಹಾಗೆ ಚಂದ್ರ-ಸೂರ್ಯ ಮುಂತಾದವರ ಪ್ರಭಾವವನ್ನು ಹೊಂದಿದ ಯೋಗಿಯು ಒಂದು ಅವಸ್ಥೆಯಲ್ಲಿ ಸರ್ವಜ್ಞತ್ವವನ್ನು ಹೊಂದುವನು. ಪ್ರಾಣಾಯಾಮದ ಆ ವಿಶೇಷಾವಸ್ಥೆಯನ್ನು 'ಸಂವಿತ್' ಎಂದು ಪ್ರಾಜ್ಞರು ಕರೆಯುವರು.

೨೮. ಪ್ರಾಣಾಯಾಮದ ಮತ್ತೊಂದು ಸ್ಥಿತಿಯಲ್ಲಿ ಮನಸ್ಸು, ಪಂಚ ಪ್ರಾಣಗಳು, ಇಂದ್ರಿಯ ಮತ್ತು ವಿಷಯಗಳು ಪ್ರಸನ್ನತೆಯನ್ನು ಹೊಂದುವುವು. ಇಂತಹ ಗುಣವನ್ನು ಉಂಟುಮಾಡುವ ಸ್ಥಿತಿಯು 'ಪ್ರಸಾದ'ವೆಂದು ಕರೆಯಲ್ಪಟ್ಟಿದೆ.

೨೯. ಅಲರ್ಕಮಹಾರಾಜನೆ! ಮುಂದೆ ಹೇಳುವ ಪ್ರಾಣಾಯಾಮದ ಲಕ್ಷಣವನ್ನು ನೀನು ಕೇಳು. ಮತ್ತು ಯೋಗಾಭ್ಯಾಸದಲ್ಲಿ ಯಾವಾಗಲೂ ತತ್ಪರತೆಯುಳ್ಳ ಯೋಗಿಗೆ ವಿಹಿತವಾದ ವಿಧವಿಧವಾದ ಆಸನವನ್ನು ಕೇಳು.

೩೦. ಯೋಗಿಯು ಪದ್ಮಾಸನ, ಅರ್ಧಾಸನ, ಅಥವಾ ಸ್ವಸ್ತಿಕಾಸನ ಇವುಗಳಲ್ಲಿ ಯಾವುದಾದರೊಂದು ಆಸನಬಂಧವನ್ನು ಮಾಡಿಕೊಂಡು ಪ್ರಣವ ಮಂತ್ರವನ್ನು ಹೃದಯದಲ್ಲಿ ಧ್ಯಾನಿಸುತ್ತ ಯೋಗಾಭ್ಯಾಸವನ್ನು ಮಾಡಬೇಕು.

ಸಮಃ ಸಮಾಸನೋ ಭೂತ್ವಾ ಸಂಹೃತ್ಯ ಚರಣಾವುಭೌ ।
ಸಂವೃತಾಸ್ಯಸ್ತಥೈವೋರಃ ಸಮ್ಯಗ್ವಿಷ್ಟಭ್ಯ ಚಾಗ್ರತಃ ||೩೧||

ಪಾರ್ಷ್ಣಿಭ್ಯಾಂ ಲಿಙ್ಗವೃಷಣಾವಸ್ಪೃಶನ್ಪ್ರಯತಃ ಸ್ಥಿತಃ ।
ಕಿಞ್ಚಿದುನ್ನಾಮಿತಶಿರಾ ದನ್ತೈರ್ದನ್ತಾನ್ನ ಸಂಸ್ಪೃಶೇತ್ ||೩೨||

ಸ ಪಶ್ಯನ್ನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್ ||೩೩||

ರಜಸಾ ತಮಸೋ ವೃತ್ತಿಂ ಸತ್ತ್ವೇನ ರಜಸಸ್ತಥಾ ।
ಸಂಛಾದ್ಯ ನಿರ್ಮಲೇ ಸತ್ತ್ವೇ ಸ್ಥಿತೋ ಯುಞ್ಜೀತ ಯೋಗವಿತ್ ||೩೪||

---

೩೧. ಮತ್ತು ಸಮಸ್ಥಿತಿಯುಳ್ಳವನೂ, ಅಚಲವಾದ ಆಸನವುಳ್ಳವನೂ, ಆದ ಯೋಗಿಯು ಎರಡು ಪಾದಗಳನ್ನು ಮಡಿಸಿಟ್ಟುಕೊಂಡು ಬಾಯಿಯನ್ನು ತೆರೆಯದೆ ಮುಚ್ಚಿಕೊಂಡು ಮತ್ತು ಎದೆಯನ್ನು ಮುಂದಕ್ಕೆ ಚಾಚಿಕೊಂಡು ಯೋಗಾಭ್ಯಾಸವನ್ನು ಮಾಡಬೇಕು.

೩೨. ಮತ್ತು ಯೋಗಾಭ್ಯಾಸದ ಸ್ಥಿತಿಯಲ್ಲಿ ಹಿಮ್ಮಡಿಗಳಿಂದ ಲಿಂಗ-ವೃಷಣ (ಗುಪ್ತೇಂದ್ರಿಯ)ಗಳನ್ನು ಸ್ಪರ್ಶಿಸದ ಹಾಗೆ ಆಸನದಲ್ಲಿ ಕುಳಿತಿರಬೇಕು. ತ್ರಿಕರಣಶುದ್ಧನಾಗಿದ್ದು ಸ್ವಲ್ಪ ಮಾತ್ರ ತಲೆಯನ್ನು ಎತ್ತಿಕೊಂಡಿರಬೇಕು. ಹಾಗು ಹಲ್ಲುಗಳನ್ನು ಹಲ್ಲಿನಿಂದ ಮುಟ್ಟಿಕೊಳ್ಳಬಾರದು.

೩೩. ಮತ್ತು ಯೋಗಿಯು ಅರ್ಧಮಾತ್ರ ತೆರೆದ ಕಣ್ಣುಗಳಿಂದ ತನ್ನ ಮೂಗಿನ ತುದಿಯನ್ನು ನೋಡುತ್ತ ನಿಶ್ಚಲದೃಷ್ಟಿಯುಳ್ಳವನಾಗಿ ದಿಕ್ಕು ಮೂಲೆ-ಗಳನ್ನು ನೋಡದಂತೆ ಕುಳಿತು ಯೋಗಾಭ್ಯಾಸವನ್ನು ಮಾಡಬೇಕು.

೩೪. ಮತ್ತು ಸತ್ತ್ವ-ರಜಸ್ಸು-ತಮಸ್ಸು ಎಂಬ ಗುಣಗಳು ತಮ್ಮ ತಮ್ಮ ವೃತ್ತಿಪ್ರವಾಹವನ್ನು ಹೊಂದುವುವು. ಹೀಗಿರಲು ರಜೋಗುಣದಿಂದ ತಮೋಗುಣದ ವೃತ್ತಿಯನ್ನು ತಡೆಗಟ್ಟಬೇಕು. ಹಾಗು ಸತ್ತ್ವಗುಣದಿಂದ ರಜೋಗುಣವನ್ನು ತಡೆಯಬೇಕು. ತರುವಾಯ ನಿರ್ಮಲವಾದ ಸತ್ತ್ವಗುಣ-ದಲ್ಲಿದ್ದುಕೊಂಡು ಯೋಗಾಭ್ಯಾಸವನ್ನು ಮಾಡಬೇಕು.

ಇನ್ದ್ರಿಯಾಣೀನ್ದ್ರಿಯಾರ್ಥೇಭ್ಯಃ ಪ್ರಾಣಾದೀನ್ಮನ ಏವ ಚ ।
ನಿಗೃಹ್ಯ ಸಮವಾಯೇನ ಪ್ರತ್ಯಾಹಾರಮುಪಕ್ರಮೇತ್ ॥೩೫॥

ಯಸ್ತು ಪ್ರತ್ಯಾಹರೇತ್ಕಾಮಾನ್ ಸರ್ವಾಙ್ಗಾನೀವ ಕಚ್ಛಪಃ ।
ಸದಾತ್ಮರತಿರೇಕಸ್ಥಃ ಪಶ್ಯತ್ಯಾತ್ಮಾನಮಾತ್ಮನಿ ॥೩೬॥

ಸಬಾಹ್ಯಾಭ್ಯನ್ತರಂ ಶೌಚಂ ನಿಷ್ಪಾದ್ಯಾಕಣ್ಠನಾಭಿತಃ ।
ಪೂರಯಿತ್ವಾ ಬುಧೋ ದೇಹಂ ಪ್ರತ್ಯಾಹಾರಮುಪಕ್ರಮೇತ್ ॥೩೭॥

ಪ್ರಾಣಾಯಾಮಾ ದಶ ದ್ವೌ ಚ ಧಾರಣಾ ಸಾಭಿಧೀಯತೇ ।
ದ್ವೇ ಧಾರಣೇ ಸ್ಮೃತೇ ಯೋಗೇ ಯೋಗಿಭಿಸ್ತತ್ತ್ವದೃಷ್ಟಿಭಿಃ ॥೩೮॥

---

೩೫. ಆಯಾಯ ವಿಷಯಗಳಿಂದ ಇಂದ್ರಿಯಗಳನ್ನೂ ಶ್ವಾಸ ಮುಂತಾದ ವ್ಯಾಪಾರಗಳಿಂದ ಪ್ರಾಣಗಳನ್ನು ಮತ್ತು ಸಂಕಲ್ಪ-ವಿಕಲ್ಪ ವ್ಯಾಪಾರಗಳಿಂದ ಮನಸ್ಸನ್ನು ನಿಗ್ರಹಿಸಿ ಅಚಲಸ್ಥಿತಿಯಿಂದ ಪ್ರತ್ಯಾಹಾರವೆಂಬ ಯೋಗಾಂಗವನ್ನು ಸಾಧಿಸಬೇಕು.

೩೬. ಆಮೆಯು ತನ್ನ ಪ್ರತಿಯೊಂದು ಅವಯವವನ್ನು ಸಂಕೋಚ-ಪಡಿಸಿಕೊಳ್ಳುವಂತೆ ಯಾವ ಮಾನವನು ತನ್ನ ಕಾಮವೃತ್ತಿಯನ್ನು ಅಡಗಿಸಿ-ಕೊಳ್ಳುವನೋ ಅವನು ಸದ್ರೂಪವಾದ ಆತ್ಮನಲ್ಲಿ ನಿಷ್ಠೆಯುಳ್ಳವನಾಗಿ ಶುದ್ಧವಾದ ಚಿತ್ತದಿಂದ ತನ್ನ ಆತ್ಮನಲ್ಲಿ ಪರಮಾತ್ಮರೂಪವನ್ನು ಕಾಣುವನು.

೩೭. ಪ್ರಾಜ್ಞನಾದ ಯೋಗಿಯು ಬಾಹ್ಯ-ಆಭ್ಯಂತರ ಶೌಚಗಳನ್ನು ಆಚರಿಸಿ ನಾಭಿಯಮೊದಲುಗೊಂಡು ಕಂಠಸ್ಥಾನದ ವರೆಗೆ ದೇಹದಲ್ಲಿ ಪ್ರಾಣ-ವಾಯುವನ್ನು ಕುಂಭಕ ಪ್ರಾಣಾಯಾಮದ ವಿಧಾನದಿಂದ ತುಂಬಿಸಿಕೊಂಡು ಮುಂದೆ ಪ್ರತ್ಯಾಹಾರ ಕ್ರಮವನ್ನು ಆಚರಿಸಬೇಕು.

೩೮. ಹನ್ನೆರಡು ಆವೃತ್ತಿಯಾಗಿ ಪ್ರಾಣಾಯಾಮಗಳನ್ನು ಆಚರಿಸಿ ಆಗ ಚಿತ್ತವನ್ನು ಆಯಾಯ ದೇಶದಲ್ಲಿ ಇರಿಸಿಕೊಳ್ಳುವುದು ಧಾರಣೆಯೆಂದೆನಿಸು-ವುದು. ಯೋಗಶಾಸ್ತ್ರದ ತತ್ತ್ವಗಳನ್ನು ಅರಿತ ವಿದ್ವಾಂಸರು ಯೋಗದಲ್ಲಿ ಎರಡು ಆವೃತ್ತಿಯಾಗಿ ಮಾಡುವ ಧಾರಣೆಗಳು ದೋಷಶಮನಮಾಡುತ್ತವೆಂದು ಹೇಳುವರು.

ತಥಾ ವೈ ಯೋಗಯುಕ್ತಸ್ಯ ಯೋಗಿನೋ ನಿಯತಾತ್ಮನಃ ।
ಸರ್ವೇ ದೋಷಾಃ ಪ್ರಣಶ್ಯನ್ತಿ ಸ್ವಸ್ಥಶ್ಚೈವೋಪಜಾಯತೇ ॥೩೯॥

ವೀಕ್ಷತೇ ಚ ಪರಂ ಬ್ರಹ್ಮ ಪ್ರಾಕೃತಾಂಶ್ಚ ಗುಣಾನ್ ಪೃಥಕ್ ।
ವ್ಯೋಮಾದಿಪರಮಾಣೂಂಶ್ಚ ತಥಾತ್ಮಾನಮಕಲ್ಮಷಮ್ ॥೪೦॥

ಇತ್ಥಂ ಯೋಗೀ ಯತಾಹಾರಃ ಪ್ರಾಣಾಯಾಮಪರಾಯಣಃ ।
ಜಿತಾಂ ಜಿತಾಂ ಶನೈರ್ಭೂಮಿಮಾರೋಹೇತ ಯಥಾಗೃಹಮ್॥೪೧॥

ದೋಷಾನ್ವ್ಯಾಧೀಂಸ್ತಥಾ ಮೋಹಮಾಕ್ರಾನ್ತಾ ಭೂರನಿರ್ಜಿತಾ ।
ವಿವರ್ಧಯತಿ ನಾರೋಹೇತ್ತಸ್ಮಾದ್ಭೂಮಿಮನಿರ್ಜಿತಾಮ್ ॥೪೨॥

---

೩೯. ಯೋಗಾಭ್ಯಾಸತತ್ಪರನು ಮತ್ತು ನಿಗ್ರಹಿಸಿದ ಅಂತಃಕರಣವುಳ್ಳವನು ಆದ ಯೋಗಿಯ ಎಲ್ಲ ದೋಷಗಳು ಈ ವಿಧವಾದ ಯೋಗಾನುಷ್ಠಾನದಿಂದ ನಾಶವಾಗುವುವು. ಮತ್ತು ಅಂತಹ ಯೋಗಿಯು ಸ್ವಸ್ಥತೆಯನ್ನು ಹೊಂದುತ್ತಾನೆ.

೪೦. ಅಂತಹ ಯೋಗಸಿದ್ಧಿಯುಳ್ಳ ಯೋಗಿಯು ಪರಬ್ರಹ್ಮವಸ್ತು, ಪ್ರಕೃತಿಗೆ ಅಧೀನವಾದ ಸತ್ವಮುಂತಾದ ಗುಣಗಳು, ಆಕಾಶ-ಪರಮಾಣು ಮುಂತಾದ ಇಂದ್ರಿಯಾತೀತವಾದ ವಸ್ತು ಮತ್ತು ಸಮಸ್ತ ದೋಷಸಂಪರ್ಕವನ್ನು ಬಿಟ್ಟು ಶುದ್ಧವಾದ ಆತ್ಮ—ಇವುಗಳನ್ನು ಸ್ಪಷ್ಟವಾಗಿ ಕಾಣುವನು.

೪೧. ಹೀಗೆ ನಿಯತವಾದ ಆಹಾರ ಸೇವನೆಯುಳ್ಳ ಯೋಗಿಯು ವಿಶೇಷವಾಗಿ ಪ್ರಾಣಾಯಾಮದಲ್ಲಿ ಆಸಕ್ತಿಯುಳ್ಳವನಾಗಿ ಯೋಗಸಿದ್ಧಿಯ ಅನೇಕ ಭೂಮಿಕೆಗಳಲ್ಲಿ ಕ್ರಮವಾಗಿ ಒಂದೊಂದನ್ನು ಜಯಿಸಿ ಮುಂದಿನ ಭೂಮಿಕೆಯನ್ನು ಏರಬೇಕು. ಮನೆಯ ಮೇಲುಭಾಗವನ್ನು ಏರುವ ನಿದರ್ಶನದಂತೆ ಕ್ರಮವಾಗಿ ಏರುವುದು ಶ್ರೇಯಸ್ಕರವು.

೪೨. ಒಂದು ಭೂಮಿಕೆಯನ್ನು ಪೂರ್ತಿಯಾಗಿ ಜಯಿಸಿದ ಹೊರತು ಅದನ್ನು ಏರಿ ನಿಂತು ಮುಂದಿನ ಭೂಮಿಕೆಯನ್ನು ಏರಲು ಯತ್ನಿಸಬಾರದು. ಆಗ ಜಯಿಸದೆ ಇರುವ ಭೂಮಿಕೆಯು ದೋಷಗಳನ್ನು, ವ್ಯಾಧಿಗಳನ್ನು ಮತ್ತು ಮೋಹವನ್ನು ವೃದ್ಧಿಮಾಡಿ ಯೋಗಾಭ್ಯಾಸಕ್ಕೆ ವಿಘ್ನವನ್ನುಂಟುಮಾಡುವುದು.

ಪ್ರಾಣಾನಾಮುಪಸಂರೋಧಾತ್ಪ್ರಾಣಾಯಾಮ ಇತಿ ಸ್ಮೃತಃ ।
ಧಾರಣೇತ್ಯುಚ್ಯತೇ ಚೇಯಂ ಧಾರ್ಯತೇ ಯನ್ಮನೋ ಯಯಾ ॥೪೩॥

ಶಬ್ದಾದಿಭ್ಯಃ ಪ್ರವೃತ್ತಾನಿ ಯದಕ್ಷಾಣಿ ಯತಾತ್ಮಭಿಃ ।
ಪ್ರತ್ಯಾಹ್ರಿಯನ್ತೇ ಯೋಗೇನ ಪ್ರತ್ಯಾಹಾರಸ್ತತಃ ಸ್ಮೃತಃ ॥೪೪॥

ಉಪಾಯಶ್ಚಾತ್ರ ಕಥಿತೋ ಯೋಗಿಭಿಃ ಪರಮರ್ಷಿಭಿಃ ।
ಯೇನ ವ್ಯಾಧ್ಯಾದಯೋ ದೋಷಾ ನ ಜಾಯನ್ತೇ ಹಿ ಯೋಗಿನಃ ॥೪೫॥

ಯಥಾ ತೋಯಾರ್ಥಿನಸ್ತೋಯಂ ಯನ್ತ್ರನಾಲಾದಿಭಿಃ ಶನೈಃ ।
ಆಪಿಬೇಯುಸ್ತಥಾ ವಾಯುಂ ಪಿಬೇದ್ಯೋಗೀ ಜಿತಶ್ರಮಃ ॥೪೬॥

---

೪೩. ಪ್ರಾಣಾಯಾಮ-ಧಾರಣಾ ಎಂಬ ಎರಡು ಯೋಗಾಂಗಗಳು ಅನ್ವರ್ಥವಾದ ನಾಮಾಂಕನಗಳಿಂದ ಪ್ರಸಿದ್ಧವಾಗಿವೆ. ದೇಹದ ಒಳಗೆ ಚಲಿಸುವ ಪ್ರಾಣವಾಯುಗಳನ್ನು ತಡೆಗಟ್ಟುವುದರಿಂದ ಪ್ರಾಣಾಯಾಮವೆಂದೂ ಮನಸ್ಸನ್ನು ಅಚಲವಾಗಿ ತಡೆಗಟ್ಟುವುದರಿಂದ ಧಾರಣಾ ಎಂದೂ ಆಯಾಯ ಯೋಗಾಂಗಗಳು ಕರೆಯಲ್ಪಟ್ಟವೆ.

೪೪. ಹಾಗು ಶಬ್ದ ಮುಂತಾದ ವಿಷಯಗಳನ್ನು ಗ್ರಹಿಸಲು ಹೊರಟಿರುವ ಇಂದ್ರಿಯಗಳನ್ನು ಜಿತೇಂದ್ರಿಯರಾದ ಯೋಗಿಗಳು ಯೋಗಬಲದಿಂದ ಹಿಂದಕ್ಕೆ ಸೆಳೆದುಕೊಳ್ಳುವುದರಿಂದ ಆ ಯೋಗಾಂಗವು ಪ್ರತ್ಯಾಹಾರವೆಂದು ಪ್ರಾಜ್ಞರಿಂದ ಸ್ಮರಿಸಲ್ಪಟ್ಟದೆ.

೪೫. ಯಾವ ವಿಧಾನದಿಂದ ಯೋಗಿಯ ಯೋಗಾಭ್ಯಾಸಕ್ಕೆ ವಿಘ್ನವನ್ನು ಉಂಟುಮಾಡುವ ವ್ಯಾಧಿ ಮುಂತಾದ ದೋಷಗಳು ಜನಿಸಲಾರವೋ ಅಂತಹ ಉಪಾಯವು ಯೋಗಿಗಳಾದ ಅನೇಕ ಮುನಿವರ್ಯರಿಂದ ತೋರಿಸಲ್ಪಟ್ಟಿರುವುದು.

೪೬. ನೀರನ್ನು ಕುಡಿಯಲು ಆಶಿಸುವವರು ಯಂತ್ರ-ನಳಿಕೆ ಮುಂತಾದುವುಗಳ ಮೂಲಕ ಹೇಗೆ ಮೆಲ್ಲಗೆ ನೀರನ್ನು ಕುಡಿಯುವರೋ ಹಾಗೆ ಯೋಗಿಯು ಆಯಾಸವಾಗದ ಹಾಗೆ ಪ್ರಾಣಾಯಾಮ ವಿಧಾನದಿಂದ ವಾಯುವನ್ನು ಸೇವಿಸಬೇಕು,

ಪ್ರಾಙ್ನಾಭ್ಯಾಂ ಹೃದಯೇ ಚಾಥ ತೃತೀಯೇ ಚ ತಥೋರಸಿ ।
ಕಣ್ಠೇ ಮುಖೇ ನಾಸಿಕಾಗ್ರೇ ನೇತ್ರಭ್ರೂಮಧ್ಯಮೂರ್ಧಸು ॥೪೭॥

ಕಿಂಚ ತಸ್ಮಾತ್ಪರಸ್ಮಿಂಶ್ಚ ಧಾರಣಾ ಪರಮಾ ಸ್ಮೃತಾ ।
ದಶೈತಾ ಧಾರಣಾಃ ಪ್ರಾಪ್ಯ ಪ್ರಾಪ್ನೋತ್ಯಕ್ಷರಸಾಮ್ಯತಾಮ್ ॥೪೮॥

ನಾಧ್ಮಾತಃ ಕ್ಷುಧಿತಃ ಶ್ರಾನ್ತೋ ನ ಚ ವ್ಯಾಕುಲಚೇತನಃ ।
ಯುಞ್ಜೀತ ಯೋಗಂ ರಾಜೇನ್ದ್ರ ಯೋಗೀ ಸಿದ್ಧ್ಯರ್ಥಮಾದೃತಃ ॥೪೯॥

ನಾತಿಶೀತೇ ನ ಚೋಷ್ಣೇ ವೈ ನ ದ್ವನ್ದ್ವೇ ನಾನಿಲಾತ್ಮಕೇ ।
ಕಾಲೇಷ್ವೇತೇಷು ಯುಞ್ಜೀತ ನ ಯೋಗಂ ಧ್ಯಾನತತ್ಪರಃ ॥೫೦॥

---

೪೭. ಮತ್ತು ಪ್ರಾಣಾಯಾಮವನ್ನು ಮಾಡಿರುವ ಯೋಗಿಯು ಮನಸ್ಸನ್ನು ಆಯಾಯ ಸ್ಥಾನದಲ್ಲಿ ದೃಢವಾಗಿ ನಿಲ್ಲಿಸಿ ಧಾರಣೆಯನ್ನು ಮಾಡಬೇಕು. ಆ ಸ್ಥಾನಗಳು ಕ್ರಮವಾಗಿ ಹತ್ತು ಸಂಖ್ಯೆಯಾಗಿವೆ. ನಾಭಿ, ಹೃದಯ, ಉರಸ್ಸು, ಕಂಠ, ಮುಖ, ನಾಸಿಕಾಗ್ರ, ಕಣ್ಣು, ಹುಬ್ಬುಗಳ ನಡು ಮತ್ತು ತಲೆ—ಹೀಗೆ ಒಂಭತ್ತು ಮೊದಲನೆಯ ಸ್ಥಾನಗಳು.

೪೮. ಕಡೆಯದಾಗಿ ಮೂರ್ಧಾಂತ ವೆಂಬ ನೆತ್ತಿಯಲ್ಲಿಯೂ ಮನಸ್ಸನ್ನು ಅಚಲವಾಗಿ ನಿಲ್ಲಿಸುವುದು ಧಾರಣಾ ಎಂದು ಸ್ಮರಿಸಲ್ಪಟ್ಟಿರುವುದು. ಈ ಹತ್ತು ಸ್ಥಾನಗಳ ಧಾರಣಾಭ್ಯಾಸವನ್ನು ಮಾಡಿದ ಯೋಗಿಯು ಅಕ್ಷರಬ್ರಹ್ಮವಸ್ತುವಿನ ಸಾಮ್ಯವನ್ನು ಹೊಂದುತ್ತಾನೆ.

೪೯. ಅಲರ್ಕರಾಜನೆ! ಹೊಟ್ಟೆ ತುಂಬ ಆಹಾರವನ್ನು ಸ್ವೀಕರಿಸಿದವನೂ ಹಸಿವುಳ್ಳವನೂ ಆಯಾಸಗೊಂಡವನೂ ಅಥವಾ ವ್ಯಾಕುಲವಾದ ಮನಸ್ಸುಳ್ಳವನೂ ಆದ ಯೋಗಿಯು ಆ ಅವಸ್ಥೆಯಲ್ಲಿ ಯೋಗಸಿದ್ಧಿಯ ಆದರದಿಂದ ಯೋಗಾಭ್ಯಾಸವನ್ನು ಮಾಡಬಾರದು.

೫೦. ಧ್ಯಾನಪರನಾಗಿದ್ದ ಯೋಗಿಯು ಹೆಚ್ಚಾಗಿ ತಣ್ಣಗಿರುವ, ಬಲು ಉಷ್ಣವಾದ, ದ್ವಂದ್ವಬಾಧೆಗೆ ಎಡೆಯಾದ ಅಥವಾ ಅತಿಶಯವಾಗಿ ಗಾಳಿ ಬೀಸುವ ಸ್ಥಳಗಳಲ್ಲಿಯೂ ಯೋಗ-ಸ್ಥಿರತೆಗೆ ಬಾಧೆಕವಾದ ಕಾಲಗಳಲ್ಲಿಯೂ ಯೋಗಾಭ್ಯಾಸದಲ್ಲಿ ತೊಡಗಬಾರದು.

ಸಶಬ್ದಾಗ್ನಿಜಲಾಭ್ಯಾಶೇ ಜೀರ್ಣಗೋಷ್ಠೇ ಚತುಷ್ಪಥೇ |
ಶುಷ್ಕಪರ್ಣಚಯೇ ನದ್ಯಾಂ ಶ್ಮಶಾನೇ ಸಸರೀಸೃಪೇ ॥೫೧॥

ಸಭಯೇ ಕೂಪತೀರೇ ವಾ ಚೈತ್ಯವಲ್ಮೀಕಸಞ್ಚಯೇ |
ದೇಶೇಷ್ವೇತೇಷು ತತ್ತ್ವಜ್ಞೋ ಯೋಗಾಭ್ಯಾಸಂ ವಿವರ್ಜಯೇತ್ ॥೫೨॥

ಸತ್ತ್ವಸ್ಯಾನುಪಪತ್ತೌ ಚ ದೇಶಕಾಲಂ ವಿವರ್ಜಯೇತ್ |
ನಾಸತೋ ದರ್ಶನಂ ಯೋಗೇ ತಸ್ಮಾತ್ತತ್ಪರಿವರ್ಜಯೇತ್ ॥೫೩॥

ದೋಷಾನೇತಾನನಾದೃತ್ಯ ಮೂಢತ್ವಾದ್ಯೋ ಯುನಕ್ತಿ ವೈ |
ವಿಘ್ನಾಯ ತಸ್ಯ ವೈ ದೋಷಾ ಜಾಯನ್ತೇ ತನ್ನಿಬೋಧ ಮೇ ॥೫೪॥

---

೫೧. ಮತ್ತು ಶಬ್ದವಾಗುತ್ತಿದ್ದ ಸ್ಥಳ, ಬೆಂಕಿಯ ಸಮೀಪ, ನೀರಿನ ಹತ್ತಿರ, ಜೀರ್ಣವಾದ ಗೋಶಾಲೆ, ನಾಲ್ಕು ದಾರಿಗಳು ಸೇರುವ ಚೌಕ, ಜೀರ್ಣವಾಗಿ ಬಿದ್ದ ಎಲೆಗಳ ರಾಶಿ, ನದೀಮಧ್ಯ, ಶ್ಮಶಾನ ಮತ್ತು ಹಾವುಗಳಿಂದ ಕೂಡಿದ ಹುತ್ತ ಮುಂತಾದ ಸ್ಥಳ—ಈ ಪ್ರದೇಶಗಳಲ್ಲಿ ಯೋಗಾಭ್ಯಾಸವನ್ನು ಮಾಡಬಾರದು.

೫೨. ಮತ್ತು ಭಯಂಕರವಾದ ಪ್ರದೇಶ, ಬಾವಿಯ ತೀರ, ಶೂನ್ಯಗೃಹ ಮತ್ತು ಭಾರಿಯಾಗಿ ಬೆಳೆದ ಹುತ್ತ—ಇಂತಹ ಪ್ರದೇಶಗಳಲ್ಲಿ ಯೋಗವಿಧಾನದ ತತ್ತ್ವವನ್ನು ಅರಿತ ಯೋಗಿಯು ಅಭ್ಯಾಸವನ್ನು ಬಿಡಬೇಕು.

೫೩. ಮುಖ್ಯವಾಗಿ ಯಾವ ದೇಶ-ಕಾಲಗಳು ಚಿತ್ತಸ್ಥಿರತೆಗೆ ಆತಂಕವನ್ನುಂಟುಮಾಡುವುವೋ ಆಯಾಯ ದೇಶ-ಕಾಲಗಳನ್ನು ಯೋಗಾಭ್ಯಾಸದಲ್ಲಿ ವರ್ಜಿಸಬೇಕು. ಯೋಗಸಮಾಧಿಸಮಯದಲ್ಲಿ ಅಸಾಧುದರ್ಶನವು ಯೋಗ್ಯವಾದುದಲ್ಲ. ಆದ್ದರಿಂದ ಅದನ್ನು ಬಿಡಬೇಕು.

೫೪. ಯಾವ ಮಾನವನು ಈ ವಿಧವಾದ ದೋಷಗಳನ್ನು ದೋಷಗಳೆಂದೆಣಿಸದೆ ಅಲಕ್ಷ್ಯಮಾಡಿ ಯೋಗಾಭ್ಯಾಸಮಾಡುವನೋ ಅವನಿಗೆ ವಿಘ್ನವನ್ನು ಉಂಟುಮಾಡಲು ಅನೇಕ ದೋಷಗಳು ಜನಿಸುತ್ತವೆ. ಆ ದೋಷಗಳನ್ನು ವರ್ಣಿಸುತ್ತೇನೆ. ಅವುಗಳನ್ನು ಕೇಳು.

ಬಾಧಿರ್ಯಂ ಜಡತಾ ಲೋಪಃ ಸ್ಮೃತೇರ್ಮೂಕತ್ವಮನ್ಧತಾ ।
ಜ್ವರಶ್ಚ ಜಾಯತೇ ಸದ್ಯಸ್ತತ್ತದಜ್ಞಾನಯೋಗಿನಃ ॥೫೫॥

ಪ್ರಮಾದಾದ್ಯೋಗಿನೋ ದೋಷಾ ಯದ್ಯೇತೇ ಸ್ಯುಶ್ಚಿಕಿತ್ಸಿತಮ್ ।
ತೇಷಾಂ ನಾಶಾಯ ಕರ್ತವ್ಯಂ ಯೋಗಿನಾಂ ತನ್ನಿಬೋಧ ಮೇ॥೫೬॥

ಸ್ನಿಗ್ಧಾಂ ಯವಾಗೂಮತ್ಯುಷ್ಣಾಂ ಭುಕ್ತ್ವಾ ತತ್ರೈವ ಧಾರಯೇತ್ ।
ವಾತಗುಲ್ಮಪ್ರಶಾನ್ತ್ಯರ್ಥಮುದಾವರ್ತೇ ತಥೋದರೇ ॥೫೭॥

ಯವಾಗೂಂ ವಾಪಿ ಪವನಂ ವಾಯುಗ್ರನ್ಥಿಂ ಪ್ರತಿಕ್ಷಿಪೇತ್ ।
ತದ್ವತ್ಕಮ್ಪೇ ಮಹಾಶೈಲಂ ಸ್ಥಿರಂ ಮನಸಿ ಧಾರಯೇತ್ ॥೫೮॥

---

೫೫. ದೋಷಗಳನ್ನು ದೋಷಗಳೆಂದು ಎಣಿಸದಿರುವ ಅಜ್ಞಾನದಿಂದ ಯೋಗಿಗೆ ಕಿವುಡು, ಮಂಕು, ಸ್ಮರಣಶಕ್ತಿಯ ನಾಶ, ಮೂಗತನ, ಕುರುಡು ಮತ್ತು ಜ್ವರ ಎಂಬ ದೋಷಗಳು ಕೂಡಲೆ ಕಾಣಿಸಿಕೊಳ್ಳುವುವು.

೫೬. ಪ್ರಮಾದವಶದಿಂದ ಯೋಗಾಭ್ಯಾಸಪರನಾದ ಯೋಗಿಗೆ ಕಿವುಡು ಮುಂತಾದ ದೋಷಗಳುಂಟಾದರೆ ಅವುಗಳ ಶಮನಕ್ಕೆ ಯೋಗಿಯು ಚಿಕಿತ್ಸೆಯನ್ನು ಮಾಡಬೇಕು. ಅಂತಹ ಚಿಕಿತ್ಸಾವಿಧಾನವನ್ನು ಹೇಳುವೆನು. ಅದನ್ನು ಕೇಳು.

೫೭. ಸ್ನೇಹ ವಸ್ತುವಿನಿಂದ ಕೂಡಿದ, ಹೆಚ್ಚು ಬಿಸಿಯಾದ ಗಂಜಿಯನ್ನು ಭುಂಜಿಸಿ ಮಾನಸವನ್ನು ಅದರಲ್ಲಿ ಧಾರಣ ಮಾಡಬೇಕು. ವಕ್ಷಸ್ಸು ಅಥವಾ ಉದರದಲ್ಲಿ ಹಾಗೆ ಗಂಜಿಯಲ್ಲಿ ಮನೋಧಾರಣದಿಂದ ವಾತಗುಲ್ಮದೋಷವು ಕ್ಷಯಿಸುವುದು.

೫೮. ಅಂತಹ ಗಂಜಿಯನ್ನು ಪಾನಮಾಡಿ ವಾಯುವನ್ನು ವಾಯುಗ್ರಂಥಿ ಸ್ಥಳಕ್ಕೆ ತಂದು ಅಲ್ಲಿ ಅಚಲವಾದಂತೆ ಧರಿಸಬೇಕು. ಮತ್ತು ನಡುಕು ಹುಟ್ಟಿದರೆ ಮಹತ್ತಾದ ಬೆಟ್ಟವನ್ನು ಮನದಲ್ಲಿ ಸ್ಥಿರವಾಗಿ ಧಾರಣಮಾಡಬೇಕು. ದೀರ್ಘಕಾಲ ಧಾರಣಮಾಡುವುದರಿಂದ ಕಂಪರೋಗವು ಶಮನವಾಗುವುದು,

ವಿಘಾತೇ ವಚಸೋ ವಾಚಂ ಬಾಧಿರ್ಯೇ ಶ್ರವಣೇನ್ದ್ರಿಯಮ್ ।
ಯಥಾ ವಾಮ್ರಫಲಂ ಧ್ಯಾಯೇತ್ತೃಷ್ಣಾರ್ತೋ ರಸನೇನ್ದ್ರಿಯಮ್ ॥೫೯॥

ಯಸ್ಮಿನ್ ಯಸ್ಮಿನ್ ರುಜಾ ದೇಹೇ ತಸ್ಮಿಂಸ್ತದುಪಕಾರಿಣೀಮ್ ।
ಧಾರಯೇದ್ಧಾರಣಾಮುಷ್ಣೇ ಶೀತಾಂ ಶೀತೇ ಚ ದಾಹಿನೀಮ್ ॥೬೦॥

ಕೀಲಂ ಶಿರಸಿ ಸಂಸ್ಥಾಪ್ಯ ಕಾಷ್ಠಂ ಕಾಷ್ಠೇನ ತಾಡಯೇತ್ ।
ಲುಪ್ತಸ್ಮೃತೇಃ ಸ್ಮೃತಿಃ ಸದ್ಯೋ ಯೋಗಿನಸ್ತೇನ ಜಾಯತೇ ॥೬೧॥

ದ್ಯಾವಾಪೃಥಿವ್ಯೌ ವಾಯ್ವಗ್ನೀ ವ್ಯಾಪಿನಾವಪಿ ಧಾರಯೇತ್ ।
ಅಮಾನುಷಾತ್ಸತ್ತ್ವಜಾದ್ವಾ ಬಾಧಾಸ್ವಿತಿ ಚಿಕಿತ್ಸಿತಮ್ ॥೬೨॥

---

೫೯. ಮಾತು ನಿಂತು ಮೂಗತನ ಬಂದರೆ ವಾಗಿಂದ್ರಿಯವನ್ನೂ ಕಿವುಡು ಪ್ರಾಪ್ತವಾದರೆ ಶ್ರವಣ ಇಂದ್ರಿಯವನ್ನೂ ಧಾರಣಮಾಡಬೇಕು. ನೀರಡಿಕೆ ಮತ್ತು ಮಾವಿನ ಹಣ್ಣಿನ ಆಸ್ವಾದದಲ್ಲಿ ರುಚಿಹುಟ್ಟಿದವನು ಮಾವಿನ ಹಣ್ಣನ್ನು ಮನಸ್ಸಿನಲ್ಲಿ ಧರಿಸುವಂತೆ ಆಯಾಯ ಧಾರಣೆಗಳನ್ನು ಆಚರಿಸಬೇಕು.

೬೦. ಉಷ್ಣಬಾಧೆಯ ಸಮಯದಲ್ಲಿ ಶೀತವಾದ, ಶೀತಬಾಧೆಯಲ್ಲಿ ಉಷ್ಣವಾದ ಮತ್ತು ಯಾವ ಅಂಗದಲ್ಲಿ ವ್ಯಾಧಿಯು ಸಂಭವಿಸಿದೆಯೋ ಆಯಾಯ ಅಂಗದಲ್ಲಿ ಅಂತಹ ಬಾಧೆಯನ್ನು ಶಮನಮಾಡಿ ಉಪಕಾರಗೊಳಿಸುವಂತಹ ಧಾರಣೆಗಳನ್ನು ಮಾಡಬೇಕು.

೬೧. ಶಿರದಲ್ಲಿ ಒಂದು ಮರದ ತುಂಡಿನ ಕೀಲನ್ನು ಇಟ್ಟು ಮತ್ತೊಂದು ಮರದ ತುಂಡಿನಿಂದ ಬಲವಾಗಿ ಹೊಡೆದಂತೆ ಭಾವನೆ ಮಾಡಬೇಕು. ಅದರಿಂದ ಸ್ಮರಣಶಕ್ತಿಯನ್ನು ಕಳೆದುಕೊಂಡ ಯೋಗಿಗೆ ಕೂಡಲೆ ಸ್ಮರಣಶಕ್ತಿಯು ಉದಯಿಸುವುದು.

೬೨. ಅಮಾನುಷವಾದ ಉದ್ರಿಕ್ತ ಸತ್ತ್ವದಿಂದ ಯಾವುದಾದರೊಂದು ಬಾಧೆಯು ಯೋಗಿಗೆ ಉಂಟಾದರೆ ಅದನ್ನು ಶಮನಮಾಡಲು ವ್ಯಾಪಕವಾದ ಭೂಮಿ-ಆಕಾಶಗಳನ್ನು ಮತ್ತು ವಾಯು-ಅಗ್ನಿಗಳನ್ನು ಮನದಲ್ಲಿ ಧಾರಣ-ಮಾಡಬೇಕು. ಆ ಧಾರಣೆಯು ಚಿಕಿತ್ಸೆಯಾಗುವುದು.

ಅಮಾನುಷಂ ಸತ್ತ್ವಮನ್ತರ್ಯೋಗಿನಂ ಪ್ರವಿಶೇದ್ಯದಿ ।
ವಾಯ್ವಗ್ನಿಧಾರಣೇನೈವಂ ದೇಹಸಂಸ್ಥಂ ವಿನಿರ್ದಹೇತ್ ॥೬೩॥

ಏವಂ ಸರ್ವಾತ್ಮನಾ ರಕ್ಷಾ ಕಾರ್ಯಾ ಯೋಗವಿದಾ ನೃಪ ।
ಧರ್ಮಾರ್ಥಕಾಮಮೋಕ್ಷಾಣಾಂ ಶರೀರಂ ಸಾಧನಂ ಯತಃ ॥೬೪॥

ಪ್ರವೃತ್ತಿಲಕ್ಷಣಾಖ್ಯಾನಾದ್ಯೋಗಿನೋ ವಿಸ್ಮಯಾತ್ತಥಾ ।
ವಿಜ್ಞಾನಂ ವಿಲಯಂ ಯಾತಿ ತಸ್ಮಾದ್ಗೋಪ್ಯಾಃ ಪ್ರವೃತ್ತಯಃ ॥೬೫॥

ಅಲೌಲ್ಯಮಾರೋಗ್ಯಮನಿಷ್ಠುರತ್ವಂ
ಗನ್ಧಃ ಶುಭೋ ಮೂತ್ರಪುರೀಷಮಲ್ಪಮ್ ।
ಕಾನ್ತಿಃ ಪ್ರಸಾದಃ ಸ್ವರಸೌಮ್ಯತಾ ಚ
ಯೋಗಪ್ರವೃತ್ತೇಃ ಪ್ರಥಮಂ ಹಿ ಚಿಹ್ನಮ್ ॥೬೬॥

---

೬೩. ಯೋಗಿಯ ಹೃದಯಕ್ಕೆ ಅಮಾನುಷವಾದ ಸತ್ತ್ವವು ಬಲಾತ್ಕಾರದಿಂದ ಒಳಪ್ರವೇಶ ಮಾಡುವುದಾದರೆ ಆಗ ವಾಯು-ಅಗ್ನಿಗಳ ಧಾರಣೆಗಳಿಂದ ದೇಹದೊಳಗೆ ಸೇರಿದ ಸತ್ತ್ವವನ್ನು ದಹಿಸಬೇಕು.

೬೪. ಎಲೈ ರಾಜನೆ! ಯೋಗಿಯು ಆಯಾಯ ದೋಷಗಳಿಗೆ ಚಿಕಿತ್ಸೆ-ಯನ್ನು ಮಾಡಿ ಎಲ್ಲ ಬಗೆಯಿಂದಲೂ ಆತ್ಮ ದೇಹದ ರಕ್ಷಣವನ್ನು ಮಾಡಿಕೊಳ್ಳ-ಬೇಕು. ಸುರಕ್ಷಿತವಾದ ದೇಹವು ಧರ್ಮ-ಅರ್ಥ-ಕಾಮ-ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳ ಪ್ರಾಪ್ತಿಗೆ ಕಾರಣವಾಗುವುದು.

೬೫. ಹೀಗೆ ಯೋಗಾಭ್ಯಾಸವನ್ನು ಮಾಡುತ್ತ ಬಂದ ಯೋಗಿಗೆ ಕ್ರಮವಾಗಿ ಯೋಗಸಿದ್ಧಿಯಾಗುತ್ತ ಬರುವ ಲಕ್ಷಣಗಳನ್ನು ಹೇಳಿಕೊಳ್ಳುವುದ-ರಿಂದ ಮತ್ತು ವಿಸ್ಮಯದಿಂದ ಜ್ಞಾನವು ಲಯವನ್ನು ಹೊಂದುವುದು. ಆದ್ದರಿಂದ ಯೋಗಪ್ರವೃತ್ತಿ ಚಿಹ್ನಗಳನ್ನು ರಹಸ್ಯವಾಗಿಡಬೇಕು.

೬೬. ಮನಸ್ಸಿನಲ್ಲಿ ಸ್ಥಿರತೆ, ಆರೋಗ್ಯ, ಸೌಮ್ಯಶೀಲ, ಸುಗಂಧ, ಅಲ್ಪವಾದ ಮಲ-ಮೂತ್ರಗಳು, ಕಾಂತಿ, ಪ್ರಸನ್ನತೆ, ಮತ್ತು ಸ್ವರದಲ್ಲಿ ಸೌಮ್ಯತೆ ಇವುಗಳು ಯೋಗದ ಅಭ್ಯಾಸದಲ್ಲಿ ಪ್ರಥಮಚಿಹ್ನವಾಗಿ ಕಾಣಿಸುವುವು.

ಅನುರಾಗಂ ಜನೋ ಯಾತಿ ಪರೋಕ್ಷೇ ಗುಣಕೀರ್ತನಮ್ ।
ನ ಬಿಭ್ಯತಿ ಚ ಸತ್ತ್ವಾನಿ ಸಿದ್ಧೇರ್ಲಕ್ಷಣಮುತ್ತಮಮ್ ॥೬೭॥

ಶೀತೋಷ್ಣಾದಿಭಿರತ್ಯುಗ್ರೈರ್ಯಸ್ಯ ಬಾಧಾ ನ ವಿದ್ಯತೇ ।
ನ ಭೀತಿಮೇತಿ ಚಾನ್ಯೇಭ್ಯಸ್ತಸ್ಯ ಸಿದ್ಧಿರುಪಸ್ಥಿತಾ ॥೬೮॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಜಡೋಪಾಖ್ಯಾನೇ
ಯೋಗನಿರೂಪಣಂ ನಾಮ ಷಟ್ತ್ರಿಂಶೋಽಧ್ಯಾಯಃ

---

೬೭. ಮತ್ತು ಯೋಗಸಿದ್ಧಿಯನ್ನು ಹೊಂದಿದವನ ವಿಷಯದಲ್ಲಿ ಇತರ ಜನರು ಅನುರಾಗವನ್ನು ಹೊಂದುವರು. ಪರೋಕ್ಷದಲ್ಲಿ ಯೋಗಿಯ ಗುಣಗಳನ್ನು ಕೀರ್ತನಮಾಡುವರು. ಮತ್ತು ಇತರ ಪ್ರಾಣಿಗಳು ಆತನಿಂದ ನಿರ್ಭಯವಾಗಿರುವುವು. ಇದು ಉತ್ತಮವಾದ ಯೋಗಸಿದ್ಧಿಯ ಲಕ್ಷಣವು.

೬೮. ಉಗ್ರವಾದ ಶೀತ-ಉಷ್ಣಗಳಿಂದ ಯಾವ ಯೋಗಿಗೆ ಪೀಡೆಯುಂಟಾಗುವುದಿಲ್ಲವೊ ; ಮತ್ತು ಯಾವ ಯೋಗಿಯು ಇತರ ವಸ್ತುಗಳಿಂದ ಭಯಪಡದೆ ಇರುವನೊ ; ಅವನಿಗೆ ಯೋಗಸಿದ್ಧಿಯುಂಟಾದಂತೆ ಭಾವಿಸಬೇಕು.

ಮಾರ್ಕಂಡೇಯ ಮಹಾಪುರಾಣದಲ್ಲಿ ಮೂವತ್ತಾರನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಸಪ್ತತ್ರಿಂಶೋऽಧ್ಯಾಯಃ

(ಯೋಗೋಪಸರ್ಗನಿರೂಪಣಮ್)

ದತ್ತಾತ್ರೇಯ ಉವಾಚ :—

ಉಪಸರ್ಗಾಃ ಪ್ರವರ್ತನ್ತೇ ದೃಷ್ಟೇ ಹ್ಯಾತ್ಮನಿ ಯೋಗಿನಃ ।
ಯೇ ತಾಂಸ್ತೇ ಸಮ್ಪ್ರವಕ್ಷ್ಯಾಮಿ ಸಮಾಸೇನ ನಿಬೋಧ ಮೇ ॥೧॥

ಕಾಮ್ಯಾಃ ಕ್ರಿಯಾಸ್ತಥಾ ಕಾಮಾನ್ಮಾನುಷಾನಭಿವಾಞ್ಛತಿ ।
ಸ್ತ್ರಿಯೋ ದಾನಫಲಂ ವಿದ್ಯಾಂ ಮಾಯಾಂ ಕುಪ್ಯಂ ಧನಂ ದಿವಮ್ ॥೨॥

ಮೂವತ್ತೇಳನೆಯ ಅಧ್ಯಾಯ

ದತ್ತಾತ್ರೇಯ ಮುನಿಯು ಹೀಗೆ ಉಪದೇಶಿಸಿದನು :—

೧. ಯೋಗಸಿದ್ಧಿಯನ್ನು ಹೊಂದಿರುವ ಯೋಗಿಗೆ ಆತ್ಮದರ್ಶನ ಉಂಟಾಗಲು ಯೋಗನಿಷ್ಠೆಯನ್ನು ತಪ್ಪಿಸಿ ಭೋಗ-ವಿಸ್ಮಯಗಳನ್ನು ಉಂಟು-ಮಾಡುವ ಅನೇಕ ಐಶ್ವರ್ಯಪ್ರಾಪ್ತಿಯೆಂಬ ಉಪಸರ್ಗಗಳು ಹುಟ್ಟುತ್ತವೆ. ಅಂತಹ ಉಪಸರ್ಗಗಳನ್ನು ಸಂಗ್ರಹವಾಗಿ ನನ್ನಿಂದ ಕೇಳು.

೨. ಮೊದಲು ಕಾಮ್ಯವಾದ ಕ್ರಿಯಾನುಷ್ಠಾನವನ್ನು ಬಯಸುತ್ತಾನೆ. ಮತ್ತು ಅದರಿಂದ ಲಭಿಸುವ ಸ್ತ್ರೀ, ದಾನಫಲ, ವಿದ್ಯೆ, ಮಾಯಾ, ಅನ್ನ-ವಸ್ತ್ರ, ಐಶ್ವರ್ಯ, ಮತ್ತು ಸ್ವರ್ಗಲೋಕಗತಿ ಮುಂತಾದುವುಗಳನ್ನು ಆಶಿಸುತ್ತಾನೆ. ಈ ಫಲಕಾಮನೆಗಳು ಮುಕ್ತಿಗೆ ತಡೆಯಾದುವು.

ದೇವತ್ವಮಮರೇಶತ್ವಂ ರಸಾಯನಚಯಃಕ್ರಿಯಾಮ್ ।
ಮರುತ್ಪ್ರಪತನಂ ಯಜ್ಞಂ ಜಲಾಗ್ನ್ಯಾವೇಶನಂ ತಥಾ ॥೩॥

ಶ್ರಾದ್ಧಾನಾಂ ಸರ್ವದಾನಾನಾಂ ಫಲಾನಿ ನಿಯಮಾಂಸ್ತಥಾ ।
ತಥೋಪವಾಸಾತ್ಪೂರ್ತಾಚ್ಚ ದೇವತಾಭ್ಯರ್ಚನಾದಪಿ ॥೪॥

ತೇಭ್ಯಸ್ತೇಭ್ಯಶ್ಚ ಕರ್ಮಭ್ಯ ಉಪಸೃಷ್ಟೋಽಭಿವಾಞ್ಛತಿ ।
ಚಿತ್ತಮಿತ್ಥಂ ವರ್ತಮಾನಂ ಯತ್ನಾದ್ಯೋಗೀ ನಿವರ್ತಯೇತ್ ॥೫॥

ಬ್ರಹ್ಮಸಙ್ಗಿ ಮನಃ ಕುರ್ವನ್ನುಪಸರ್ಗಾತ್ಪ್ರಮುಚ್ಯತೇ ।
ಉಪಸರ್ಗೈರ್ಜಿತೈರೇಭಿರುಪಸರ್ಗಾಸ್ತತಃ ಪುನಃ ॥೬॥

---

೩. ಹಾಗು ಐಶ್ವರ್ಯಮತ್ತನಾದ ಯೋಗಿಯು ದೇವತ್ವ, ದೇವರಾಜತ್ವ, ರಸಾಯನಸಿದ್ಧಿ, ವಯಸ್ಸಿನ ಬದಲಾವಣೆ, ವಾಯುಸಂಚಾರ, ಯಜ್ಞಾನುಷ್ಠಾನ ಮತ್ತು ಜಲ-ಅಗ್ನಿಗಳ ಸ್ತಂಭನ ಮುಂತಾದ ಮಹಿಮೆಗಳನ್ನು ತೋರಿಸಲು ಆಶಿಸುತ್ತಾನೆ.

೪. ಶ್ರಾದ್ಧಕರ್ಮ, ಮಹಾದಾನ, ನಿಯಮ, ಉಪವಾಸ, ವಾಪೀ-ಕೂಪ—ದೇವಾಲಯಾದಿ ನಿರ್ಮಾಣ ಮತ್ತು ದೇವಾರ್ಚನ ಇವುಗಳಿಂದ ಉಂಟಾಗುವ ಮಹತ್ತಾದ ಫಲಗಳನ್ನು ಯೋಗಸಿದ್ಧಿಯಿಂದ ಹೊಂದಲು ಆಶಿಪಡುವನು.

೫. ಆಯಾಯ ಉಪಸರ್ಗಗಳಿಂದ ಆಕರ್ಷಿಸಲ್ಪಟ್ಟು ಆಯಾಯ ಕರ್ಮಾನುಷ್ಠಾನದಿಂದ ಲಭಿಸುವ ಫಲಗಳನ್ನು ಆಶಿಸುತ್ತಾನೆ. ಹೀಗೆ ವರ್ತಿಸುತ್ತಿದ್ದ ಚಿತ್ತವನ್ನು ಯೋಗಿಯು ಉಪಸರ್ಗಗಳಿಂದ ಹಿಂತಿರುಗಿಸಬೇಕು.

೬. ಉಪಸರ್ಗಗಳಿಂದ ಹಿಂದಕ್ಕೆ ತಿರುಗಿಸಿದ ಮಾನಸವುಳ್ಳವನು ಬ್ರಹ್ಮವಸ್ತುವಿನಲ್ಲಿ ಮಾನಸವನ್ನು ಸ್ಥಿರಪಡಿಸುವುದರಿಂದ ಉಪಸರ್ಗಪೀಡೆಗಳಿಂದ ಮುಕ್ತನಾಗುವನು. ಹೀಗೆ ಒಂದು ಬಗೆಯ ಉಪಸರ್ಗಗಳನ್ನು ಗೆದ್ದರೆ ಮತ್ತೆ ಮತ್ತೊಂದು ವಿಧದ ಉಪಸರ್ಗಗಳು ಉಂಟಾಗುವುವು.

ಯೋಗಿನಃ ಸಮ್ಪ್ರವರ್ತನ್ತೇ ಸಾತ್ತ್ವರಾಜಸತಾಮಸಾಃ ॥೭॥

ಪ್ರಾತಿಭಃ ಶ್ರಾವಣೋ ದೈವೋ ಭ್ರಮಾವರ್ತೌ ತಥಾಪರೌ ।
ಪಞ್ಚೈತೇ ಯೋಗಿನಾಂ ಯೋಗವಿಘ್ನಾಯ ಕಟುಕೋದಯಾಃ॥೮॥

ವೇದಾರ್ಥಾಃ ಕಾವ್ಯಶಾಸ್ತ್ರಾರ್ಥಾ ವಿದ್ಯಾಶಿಲ್ಪಾನ್ಯಶೇಷತಃ ।
ಪ್ರತಿಭಾನ್ತಿ ಯದಸ್ಯೇತಿ ಪ್ರಾತಿಭಃ ಸ ತು ಯೋಗಿನಃ ॥೯॥

ಶಬ್ದಾರ್ಥಾನಖಿಲಾನ್ವೇತ್ತಿ ಶಬ್ದಂ ಗೃಹ್ಣಾತಿ ಚೈವ ಯತ್ ।
ಯೋಜನಾನಾಂ ಸಹಸ್ರೇಭ್ಯಃ ಶ್ರಾವಣಃ ಸೋಽಭಿಧೀಯತೇ ॥೧೦॥

ಸಮನ್ತಾದ್ವೀಕ್ಷತೇ ಚಾಷ್ಟೌ ಸ ಯದಾ ದೇವಯೋನಯಃ ।
ಉಪಸರ್ಗಂ ತಮಪ್ಯಾಹುರ್ದೈವಮುನ್ಮತ್ತವದ್ಬುಧಾಃ ॥೧೧॥

---

೭. ಯೋಗಾಭ್ಯಾಸದ ಅಂತಿಮಗುರಿಯನ್ನು ಯೋಗಿಯು ಮುಟ್ಟದ ಹಾಗೆ ಬಗೆ ಬಗೆಯ ಸತ್ತ್ವ-ರಜಸ್ಸು-ತಮಸ್ಸು ಎಂಬ ಗುಣತ್ರಯ ಪರಿಣಾಮವಾದ ಅನೇಕ ಉಪಸರ್ಗಗಳು ಒಂದರಮೇಲೊಂದು ಉಂಟಾಗುವುವು.

೮. ಪ್ರಾತಿಭ, ಶ್ರಾವಣ, ದೈವ, ಭ್ರಮ ಮತ್ತು ಆವರ್ತ ಎಂಬುವು ಐದು ಉಪಸರ್ಗಗಳು. ಇವು ಬಹು ತೀಕ್ಷ್ಣವಾದ ಉದಯ ಉಳ್ಳವುಗಳಾಗಿ ಯೋಗಿಯ ಯೋಗಸಿದ್ಧಿಗೆ ವಿಘ್ನವನ್ನು ಉಂಟುಮಾಡುವುವು.

೯. ಎಲ್ಲ ವೇದಗಳ ಅರ್ಥ, ಕಾವ್ಯ-ಶಾಸ್ತ್ರ ವಾಙ್ಮಯಗಳ ಅರ್ಥ, ಇತರ ಶಿಲ್ಪವಿದ್ಯೆಯ ಅರ್ಥ ಇವೆಲ್ಲವೂ ಸಂಪೂರ್ಣವಾಗಿ ಯಾವ ಯೋಗಿಗೆ ಭಾಸವಾಗುವುವೋ ಅವನು ಪ್ರಾತಿಭವೆಂಬ ಉಪಸರ್ಗವನ್ನು ಹೊಂದುವನು. ಸಕಲ ವಾಙ್ಮಯವನ್ನು ಅರಿತ ಅಭಿಮಾನವು ಅವನನ್ನು ತಡೆಯುವುದು.

೧೦. ಯೋಗಿಯು ಎಲ್ಲ ಶಬ್ದಗಳ ಅರ್ಥವನ್ನು ಅರಿಯುವುದು ಮತ್ತು ಸಹಸ್ರಾರು ಯೋಜನಗಳ ದೂರದಿಂದ ಶಬ್ದವನ್ನು ಗ್ರಹಿಸುವುದು—ಈ ಶಕ್ತಿಯು ಶ್ರಾವಣವೆಂಬ ಉಪಸರ್ಗದಿಂದ ಹುಟ್ಟಿರುವುದೆಂದು ಅರಿಯಬೇಕು.

೧೧. ಮತ್ತು ಯೋಗಿಯು ಉನ್ಮಾದಹಿಡಿದವನ ಹಾಗೆ ತನ್ನ ಸುತ್ತಲೂ ಎಂಟು ದೇವಯೋನಿ ವಿಶೇಷಕ್ಕೆ ಸೇರಿದ ವ್ಯಕ್ತಿಗಳನ್ನು ನೋಡಿದ ಹಾಗೆ ವ್ಯವಹರಿಸುವನು. ಆ ಅವಸ್ಥೆಯನ್ನು ಪಂಡಿತರು ದೈವ ಉಪಸರ್ಗವೆಂದು ಕರೆಯುವರು.

ಭ್ರಾಮ್ಯತೇ ಯನ್ನಿರಾಲಮ್ಬಂ ಮನೋ ದೋಷೇಣ ಯೋಗಿನಃ ।
ಸಮಸ್ತಾಚಾರವಿಭ್ರಂಶಾದ್ಭ್ರಮಃ ಸ ಪರಿಕೀರ್ತಿತಃ ॥೧೨॥

ಆವರ್ತ ಇವ ತೋಯಸ್ಯ ಜ್ಞಾನಾವರ್ತೋ ಯದಾಕುಲಃ ।
ನಾಶಯೇಚ್ಚಿತ್ತಮಾವರ್ತ ಉಪಸರ್ಗಃ ಸ ಉಚ್ಯತೇ ॥೧೩॥

ಏತೈರ್ನಾಶಿತಯೋಗಾಸ್ತು ಸಕಲಾ ದೇವಯೋನಯಃ ।
ಉಪಸರ್ಗೈರ್ಮಹಾಘೋರೈರಾವರ್ತನ್ತೇ ಪುನಃ ಪುನಃ ॥೧೪॥

ಪ್ರಾವೃತ್ಯ ಕಮ್ಬಲಂ ಶುಕ್ಲಂ ಯೋಗೀ ತಸ್ಮಾನ್ಮನೋಮಯಮ್ ।
ಶರೀರಮಣ್ಡಲೇ ದೃಷ್ಟ್ವಾ ಗುರುಜ್ಞಾನಂ ತತೋ ಹಿ ಯತ್ ॥೧೫॥

---

೧೨. ಸ್ಥಿರವಾದ ಸಮಸ್ತಾಚಾರಗಳಿಂದಲೂ ಭ್ರಷ್ಟನಾದ ಯೋಗಿಯ ಮಾನಸವು ಒಂದು ಆಲಂಬನವಿಲ್ಲದಹಾಗೆ ಎಲ್ಲ ಸಮಯಗಳಲ್ಲಿಯೂ ದೋಷದಿಂದ ಸುತ್ತುವಂತೆ ಇರುವುದು. ಆ ಅವಸ್ಥೆಯು ಭ್ರಮವೆಂಬ ಉಪಸರ್ಗವು.

೧೩. ನೀರಿನಲ್ಲಿ ಕಾಣಿಸುವ ಸುಳಿಯಂತೆ ವ್ಯಾಕುಲತೆಯನ್ನು ಹೊಂದಿದ ಜ್ಞಾನದ ಸುಳಿಯು ಯೋಗಿಯ ಚಿತ್ತವನ್ನು ತನ್ನಲ್ಲಿ ಆಕರ್ಷಿಸಿ ನಾಶಮಾಡು-ವುದು. ಆ ಅವಸ್ಥೆಯು ಆವರ್ತ ಎಂಬ ಉಪಸರ್ಗವೆಂದು ಕರೆಯಲ್ಪಟ್ಟಿದೆ.

೧೪. ದೇವತೆಗಳ ವರ್ಗಕ್ಕೆ ಸೇರಿದ ಆಯಾಯ ವ್ಯಕ್ತಿಗಳು ಮಹಾ-ಮಹಿಮೆಯಂತೆ ತೋರಿಬರುವ ಈ ಘೋರ ಉಪಸರ್ಗಗಳಿಂದ ನಾಶಹೊಂದಿದ ಯೋಗೋಪಾಯವುಳ್ಳವರಾಗಿ ಉತ್ತಮ ಶಕ್ತಿಸಂಪನ್ನರಾಗಿದ್ದರೂ ಮತ್ತೆ ಮತ್ತೆ ಆವೃತ್ತಿಯನ್ನು ಹೊಂದುತ್ತಿರುವರು.

೧೫. ಆದುದರಿಂದ ಯೋಗಿಯು ಶುದ್ಧವಾದ ಮನೋಮಯವೆಂಬ ಶುಕ್ಲವರ್ಣದ ಕಂಬಲವನ್ನು ಮುಚ್ಚಿಕೊಂಡು ಶರೀರವೆಂಬ ಮಂಡಲಮಧ್ಯದಲ್ಲಿ ಇದ್ದಂತೆ ಭಾವಿಸಿ ಯೋಗವನ್ನು ಸಾಧಿಸಬೇಕು. ಅದರಿಂದ ಉತ್ತಮವಾದ ಜ್ಞಾನವು ಲಭಿಸುವುದು.

ಜ್ಞಾನಪೂರ್ವೋಽಪಿ ಯೋ ಯೋಗೋ ಜ್ಞಾತವ್ಯೋ ವೈ ವಿಪಶ್ಚಿತಾ ।
ಚಿನ್ತಯೇತ್ಪರಮಂ ಬ್ರಹ್ಮ ಕೃತ್ವಾ ತತ್ಪ್ರವಣಂ ಮನಃ ॥೧೬॥

ಯೋಗಯುಕ್ತಃ ಸದಾ ಯೋಗೀ ಲಘ್ವಾಹಾರೋ ಜಿತೇನ್ದ್ರಿಯಃ ।
ಸೂಕ್ಷ್ಮಾಸ್ತು ಧಾರಣಾಃ ಸಪ್ತ ಭೂರಾದ್ಯಾ ಮೂರ್ಧ್ನಿ ಧಾರಯೇತ್ ॥೧೭॥
ಧರಿತ್ರೀಂ ಧಾರಯೇದ್ಯೋಗೀ ತತ್ಸೌಕ್ಷ್ಮ್ಯಂ ಪ್ರತಿಪದ್ಯತೇ ॥೧೮॥

ಆತ್ಮಾನಂ ಮನ್ಯತೇ ಚೋರ್ವೀಂ ತದ್ಗನ್ಧಂ ಚ ಜಹಾತಿ ಸಃ ।
ತಥೈವಾಪ್ಸು ರಸಂ ಸೂಕ್ಷ್ಮಂ ತದ್ವದ್ರೂಪಂ ಚ ತೇಜಸಿ ॥೧೯॥

---

೧೬. ಜ್ಞಾನದ ಆವಿರ್ಭಾವವುಂಟಾದ ಮೇಲೆ ಕೂಡ ಜ್ಞಾನಿಯು ಯೋಗಾಭ್ಯಾಸದ ಅನುವರ್ತನೆಯನ್ನು ತಿಳಿಯಬೇಕು. ಹಾಗೆ ಯೋಗದಿಂದ ವಶಗೊಳಿಸಿದ ಮನಸ್ಸನ್ನು ಪರಬ್ರಹ್ಮವಸ್ತುವಿನಲ್ಲಿ ಇರಿಸಿ ಬ್ರಹ್ಮವನ್ನು ಧ್ಯಾನಿಸಬೇಕು.

೧೭. ಲಘುವಾದ ಆಹಾರವನ್ನು ಸೇವಿಸುವವನೂ ಜಿತೇಂದ್ರಿಯನೂ ಆದ ಯೋಗಿಯು ಯೋಗಾಭ್ಯಾಸಪರನಾಗಿದ್ದು ಭೂಮಿತತ್ತ್ವ ಮುಂತಾದ ಏಳು ವಿಷಯಗಳಲ್ಲಿ ಸೂಕ್ಷ್ಮವಾದ ಧಾರಣೆಗಳನ್ನು ತನ್ನ ಶಿರಸ್ಸಿನ ಸ್ಥಾನದಲ್ಲಿ ಅಭ್ಯಾಸಮಾಡಬೇಕು.

೧೮. ಯೋಗಿಯು ಭೂಮಿತತ್ತ್ವವನ್ನು ತನ್ನ ಶಿರಸ್ಸಿನಲ್ಲಿ ವಿಷಯೀಕರಿಸಿ ಧಾರಣಾಭ್ಯಾಸವನ್ನು ಮಾಡುವುದರಿಂದ ಭೂಮಿಯ ಸೂಕ್ಷ್ಮತೆಯೆಂಬ ಗುಣವನ್ನು ಹೊಂದುತ್ತಾನೆ.

೧೯. ಮತ್ತು ಅಂತಹ ಯೋಗಿಯು ಸೂಕ್ಷ್ಮರೂಪವಾಗಿ ಅಡಗಿಹೋದ ಭೂಮಿತತ್ತ್ವವು ತಾನು ಎಂದು ಅರಿಯುವನು. ಅದರ ಗಂಧಗುಣವನ್ನು ದೂರಮಾಡುವನು. ಹಾಗೆ ಜಲತತ್ತ್ವಧಾರಣೆಯಿಂದ ಜಲಸೂಕ್ಷ್ಮತೆಯನ್ನೂ ತೇಜಸ್ತತ್ತ್ವದ ಧಾರಣೆಯಿಂದ ತೇಜಸ್ಸಿನ ಸೂಕ್ಷ್ಮತೆಯನ್ನೂ ಹೊಂದುವನು.

ಸ್ಪರ್ಶಂ ವಾಯೌ ತಥಾ ತದ್ವದ್ಬಿಭ್ರತಸ್ತಸ್ಯ ಧಾರಣಾಮ್ ।
ವ್ಯೋಮ್ನಃ ಸೂಕ್ಷ್ಮಾಂ ಪ್ರವೃತ್ತಿಂ ಚ ಶಬ್ದಂ ತದ್ವಜ್ಜಹಾತಿ ಸಃ॥೨೦॥

ಮನಸಾ ಸರ್ವಭೂತಾನಾಂ ಮನಸ್ಯಾವಿಶತೇ ಯದಾ ।
ಮಾನಸೀಂ ಧಾರಣಾಂ ಬಿಭ್ರನ್ಮನಃ ಸೂಕ್ಷ್ಮಂ ಚ ಜಾಯತೇ ॥೨೧॥

ತದ್ವದ್ಬುದ್ಧಿಮಶೇಷಾಣಾಂ ಸತ್ತ್ವಾನಾಮೇತ್ಯ ಯೋಗವಿತ್ ।
ಪರಿತ್ಯಜತಿ ಸಂಪ್ರಾಪ್ಯ ಬುದ್ಧಿಸೌಕ್ಷ್ಮ್ಯಮನುತ್ತಮಮ್ ॥೨೨॥

ಪರಿತ್ಯಜತಿ ಸೂಕ್ಷ್ಮಾಣಿ ಸಪ್ತ ತ್ವೇತಾನಿ ಯೋಗವಿತ್ ।
ಸಮ್ಯಗ್ವಿಜ್ಞಾಯ ಯೋಽಲರ್ಕ ತಸ್ಯಾವೃತ್ತಿರ್ನ ವಿದ್ಯತೇ ॥೨೩॥

---

೨೦. ವಾಯುತತ್ತ್ವದಲ್ಲಿ ಧಾರಣಾಭ್ಯಾಸಿಯಾದ ಯೋಗಿಗೆ ಸ್ಪರ್ಶ-ಗುಣವನ್ನು ದೂರಮಾಡಿ ವಾಯು ಸೂಕ್ಷ್ಮತೆಯು ಉಂಟಾಗುವುದು. ಹಾಗು ಆಕಾಶತತ್ತ್ವದ ಧಾರಣೆಯಿಂದ ಆಕಾಶದ ಸೂಕ್ಷ್ಮತೆಯು ಉಂಟಾಗುವುದು. ಮತ್ತು ಆ ಯೋಗಿಯು ಶಬ್ದಗುಣವನ್ನು ದೂರ ಪರಿಹರಿಸುವನು.

೨೧. ಮತ್ತು ತನ್ನ ಮನಸ್ಸಿನಿಂದ ಸಕಲ ಪ್ರಾಣಿಗಳ ಮನಸ್ಸನ್ನು ಆವೇಶ ಮಾಡಿದಂತೆ ಧಾರಣ ಮಾಡುವುದರಿಂದ ಮಾನಸೀ ಧಾರಣೆಯನ್ನು ಆಚರಿಸಿದಂತೆ ಆಗುವುದು. ಮತ್ತು ಆಗ ಯೋಗಿಯ ಮನಸ್ಸು ಬಹಳ ಸೂಕ್ಷ್ಮ-ವಾಗುವುದು.

೨೨. ಹಾಗು ಯೋಗಾಭ್ಯಾಸಿಯು ಎಲ್ಲ ಪ್ರಾಣಿಗಳ ಬುದ್ಧಿಯನ್ನು ತನ್ನ ಬುದ್ಧಿಯು ಆವೇಶ ಹೊಂದಿರುವಂತೆ ಭಾವಿಸಿ ಧಾರಣೆಯನ್ನು ಮಾಡ-ಬೇಕು. ಆಗ ತನ್ನ ಬುದ್ಧಿಯಲ್ಲಿ ನಿರುಪಮವಾದ ಸೂಕ್ಷ್ಮತೆಯನ್ನು ಹೊಂದು-ವನು.

೨೩. ಅಲರ್ಕನೆ ! ಯಾವ ಯೋಗಿಯು ಆಯಾಯ ಧಾರಣಾಸಿದ್ಧಿ-ಯಿಂದ ಭೂಮಿತತ್ತ್ವ ಮುಂತಾದುವುಗಳ ಗಂಧ ಮುಂತಾದ ಏಳು ಸೂಕ್ಷ್ಮ ಅಂಶಗಳನ್ನು ತ್ಯಜಿಸುವನೋ ಅವನು ತತ್ತ್ವಜ್ಞಾನವನ್ನು ಹೊಂದುವನು. ಮತ್ತು ಅವನಿಗೆ ಪುನರಾವೃತ್ತಿಯು ಇಲ್ಲ.

ಏತಾಸಾಂ ಧಾರಣಾನಾಂ ತು ಸಪ್ತಾನಾಂ ಸೌಕ್ಷ್ಮ್ಯಮಾತ್ಮವಾನ್ ।
ದೃಷ್ಟ್ವಾ ದೃಷ್ಟ್ವಾ ತತಃ ಸಿದ್ಧಿಂ ತ್ಯಕ್ತ್ವಾ ತ್ಯಕ್ತ್ವಾ ಪರಾಂ ವ್ರಜೇತ್ ॥೨೪॥

ಯಸ್ಮಿನ್ಯಸ್ಮಿಂಶ್ಚ ಕುರುತೇ ಭೂತೇ ರಾಗಂ ಮಹೀಪತೇ ।
ತಸ್ಮಿಂಸ್ತಸ್ಮಿನ್ ಸಮಾಸಕ್ತಿಂ ಸಂಪ್ರಾಪ್ಯ ಸ ವಿನಶ್ಯತಿ ॥೨೫॥

ತಸ್ಮಾದ್ವಿದಿತ್ವಾ ಸೂಕ್ಷ್ಮಾಣಿ ಸಂಸಕ್ತಾನಿ ಪರಸ್ಪರಮ್ ।
ಪರಿತ್ಯಜತಿ ಯೋ ದೇಹೀ ಸ ಪರಂ ಪ್ರಾಪ್ನುಯಾತ್ಪದಮ್ ॥೨೬॥

ಏತಾನ್ಯೇವ ತು ಸನ್ಧಾಯ ಸಪ್ತ ಸೂಕ್ಷ್ಮಾಣಿ ಪಾರ್ಥಿವ ।
ಭೂತಾದೀನಾಂ ವಿನಾಶೋಽತ್ರ ಸದ್ಭಾವಜ್ಞಸ್ಯ ಮುಕ್ತಯೇ ॥೨೭॥

---

೨೪. ಜಾಗರೂಕತೆಯಿಂದ ಯೋಗಾಭ್ಯಾಸದಲ್ಲಿ ವರ್ತಿಸುವ ಯೋಗಿಯು ಹಿಂದೆ ಹೇಳಿರುವ ಧಾರಣೆಗಳ ಬಲದಿಂದ ಸೂಕ್ಷ್ಮತೆಯನ್ನು ಹೊಂದಿ ಆಯಾಯ ಸಿದ್ಧಿಯನ್ನು ಹೊಂದುತ್ತ ಅವುಗಳನ್ನು ಬಿಟ್ಟು ಮುಂದಿನ ಸಿದ್ಧಿಯನ್ನು ಹೊಂದಬೇಕು.

೨೫. ಅಲರ್ಕ ರಾಜನೆ! ಯೋಗಿಯು ಯಾವ ಯಾವ ಭೂತದಲ್ಲಿ ತಲ್ಲೀನತೆಯಿಂದ ರಾಗವನ್ನು ಹೊಂದುವನೋ ಆಯಾಯ ಭೂತ ಗುಣ ಭೋಗ-ದಲ್ಲಿ ಸಂಗ ಹುಟ್ಟಿ ಹಾಗೆಯೇ ಲಯವನ್ನು ಹೊಂದುತ್ತಾನೆ.

೨೬. ಆದುದರಿಂದ ಯಾವ ಯೋಗಿಯಾದ ಮಾನವನು ಅನ್ಯೋನ್ಯ-ವಾಗಿ ಬೆರೆತಿರುವ ಭೂತ ತತ್ತ್ವಗಳ ಸೂಕ್ಷ್ಮಾಂಶಗಳ ಸೂಕ್ಷ್ಮತೆಯನ್ನು ಗ್ರಹಿಸಿ ಭೂತ ತತ್ತ್ವಗಳನ್ನು ಸೂಕ್ಷ್ಮಾಂಶಸಹಿತವಾಗಿ ತ್ಯಜಿಸುವನೋ ಅವನು ಮುಕ್ತಿಯೆಂಬ ಪರಮ ಪದವನ್ನು ಹೊಂದುವನು.

೨೭. ಎಲೈ ರಾಜನೆ! ಭೂತ ಮುಂತಾದುವುಗಳ ಈ ಏಳು ಸೂಕ್ಷ್ಮ ರೂಪಗಳನ್ನು ಅಚಲವಾಗಿ ತನ್ನ ಮಾನಸದಲ್ಲಿ ಧಾರಣೆ ಮಾಡಿ ಭೂತ ರೂಪ-ಗಳನ್ನು ಲಯ ಪಡಿಸುವುದರಿಂದ ಪರಮಾರ್ಥವನ್ನು ಅರಿತ ಯೋಗಿಗೆ ಮುಕ್ತಿಯು ಲಭಿಸುವುದು.

ಗನ್ಧಾಧಿಷು ಸಮಾಸಕ್ತಿಂ ಸಂಪ್ರಾಪ್ಯ ಸ ವಿನಶ್ಯತಿ ।
ಪುನರಾವರ್ತತೇ ಭೂಪ ಸ ಬ್ರಹ್ಮಾಪರಮಾನುಷಮ್ ॥೨೮॥

ಸಪ್ತೈತಾ ಧಾರಣಾ ಯೋಗೀ ಸಮತೀತ್ಯ ಯದಿಚ್ಛತಿ ।
ತಸ್ಮಿಂಸ್ತಸ್ಮಿನ್ ಲಯಂ ಸೂಕ್ಷ್ಮೇ ಭೂತೇ ಯಾತಿ ನರೇಶ್ವರ ॥೨೯॥

ದೇವಾನಾಮಸುರಾಣಾಂ ವಾ ಗನ್ಧರ್ವೋರಗರಕ್ಷಸಾಮ್ ।
ದೇಹೇಷು ಲಯಮಾಯಾತಿ ಸಙ್ಗಂ ನಾಪ್ನೋತಿ ಚ ಕ್ವಚಿತ್ ॥೩೦॥

ಅಣಿಮಾ ಲಘಿಮಾ ಚೈವ ಮಹಿಮಾ ಪ್ರಾಪ್ತಿರೇವ ಚ ।
ಪ್ರಾಕಾಮ್ಯಂ ಚ ತಥೇಶಿತ್ವಂ ವಶಿತ್ವಂ ಚ ತಥಾಪರಮ್ ॥೩೧॥

---

೨೮. ಅಲರ್ಕ ಮಹಾರಾಜನೆ! ಯೋಗಿಯು ಗಂಧ ಮುಂತಾದ ಭೂತ ಸೂಕ್ಷ್ಮಗಳಲ್ಲಿ ಸಂಗವನ್ನು ಹೊಂದಿದರೆ ಹಾಗೆಯೇ ನಾಶ ಹೊಂದುವನು. ಮತ್ತು ಅವನು ಬ್ರಹ್ಮಲೋಕ-ಅಧೋಲೋಕ ಅಥವಾ ಮರ್ತ್ಯಲೋಕಗಳ ಪೈಕಿ ಎಲ್ಲಿ-ಯಾದರೂ ಪುನರಾವೃತ್ತಿಯನ್ನು ಹೊಂದುತ್ತಾನೆ.

೨೯. ನರಪತಿಯೆ! ಏಳುಬಗೆಯ ಈ ಧಾರಣೆಗಳನ್ನು ಅಭ್ಯಾಸದಿಂದ ಗೆದ್ದು ಯಾವ ಮತ್ತೊಂದು ಸೂಕ್ಷ್ಮತತ್ತ್ವವನ್ನು ಆಶಿಸುವನೋ ಆಯಾಯ ಸೂಕ್ಷ್ಮಭೂತಧಾರಣೆಯಿಂದ ಅಲ್ಲಿ ಲಯವನ್ನು ಹೊಂದುತ್ತಾನೆ.

೩೦. ಧಾರಣಾಸಿದ್ಧಿಯನ್ನು ಹೊಂದಿದ ಯೋಗಿಯು ದೇವತೆ, ಅಸುರ, ಗಂಧರ್ವ, ಸರ್ಪ, ರಾಕ್ಷಸ ಇವರಲ್ಲಿ ಯಾವ ದೇಹವನ್ನು ಅಪೇಕ್ಷಿಸುವನೋ ; ಅಲ್ಲಲ್ಲಿ ಧಾರಣೆಯಿಂದ ಲಯವನ್ನು ಹೊಂದುತ್ತಾನೆ. ಎಲ್ಲಿಯೂ ಸಂಗವನ್ನು ಹೊಂದುವುದಿಲ್ಲ.

೩೧. ಮತ್ತು ಯೋಗಾಭ್ಯಾಸಬಲವನ್ನು ಹೊಂದಿದ ಯೋಗಿಯು ಅಣಿಮಾ ಮುಂತಾದ ಎಂಟು .ಬಗೆಯ ಐಶ್ವರ್ಯವನ್ನು ಹೊಂದುತ್ತಾನೆ. ಆ ಅಷ್ಟಸಿದ್ಧಿಗಳಲ್ಲಿ ಅಣಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ ಮತ್ತು ವಶಿತ್ವ—ಇವು ಏಳು ಸಿದ್ಧಿಗಳಾಗಿವೆ.

ಯತ್ರ ಕಾಮಾವಶಾಯಿತ್ವಂ ಗುಣಾನೇತಾಂಸ್ತಥೈಶ್ವರಾನ್ ।
ಪ್ರಾಪ್ನೋತ್ಯಷ್ಟೌ ನರವ್ಯಾಘ್ರ ಪರಂ ನಿರ್ವಾಣಸೂಚಕಾನ್ ॥೩೨॥

ಸೂಕ್ಷ್ಮಾತ್ಸೂಕ್ಷ್ಮತಮೋಽಣೀಯಾಂಶ್ಶೀಘ್ರತ್ವಂ ಲಘಿಮಾ ಗುಣಃ ।
ಮಹಿಮಾಶೇಷಪೂಜ್ಯತ್ವಾತ್ಪ್ರಾಪ್ತಿರ್ನಾಪ್ರಾಪ್ಯಮಸ್ಯ ಯತ್ ॥೩೩॥

ಪ್ರಾಕಾಮ್ಯಮಸ್ಯ ವ್ಯಾಪಿತ್ವಾದೀಶಿತ್ವಂ ಚೇಶ್ವರೋ ಯತಃ ।
ವಶಿತ್ವಾದ್ವಶಿಮಾ ನಾಮ ಯೋಗಿನಃ ಸಪ್ತಮೋ ಗುಣಃ ॥೩೪॥

ಯತ್ರೇಚ್ಛಾಸ್ಥಾನಮಪ್ಯುಕ್ತಂ ಯತ್ರ ಕಾಮಾವಶಾಯಿತಾ ॥೩೫॥

ಐಶ್ವರ್ಯಕಾರಣೈರೇಭಿರ್ಯೋಗಿನಃ ಪ್ರೋಕ್ತಮಷ್ಟಧಾ ।
ಮುಕ್ತಿಸಂಸೂಚಕಂ ಭೂಪ ಪರಂ ನಿರ್ವಾಣಮಾತ್ಮನಃ ॥೩೬॥

---

೩೨. ಪುರುಷಶ್ರೇಷ್ಠನೆ! ಕಾಮಾಸಾಯಿತ್ವವೆಂಬುದು ಎಂಟನೆಯ ಐಶ್ವರ್ಯಸಿದ್ಧಿಯು. ಹೀಗೆ ಪರಮಸುಖವನ್ನು ಸೂಚಿಸುವ ಈಶ್ವರಗುಣಗಳಾದುದರಿಂದ ಅಷ್ಟೈಶ್ವರ್ಯವೆಂದು ಪ್ರಸಿದ್ಧವಾದ ಸಿದ್ಧಿಗಳನ್ನು ಹೊಂದುತ್ತಾನೆ.

೩೩. ಲೋಕದಲ್ಲಿರುವ ಸೂಕ್ಷ್ಮವಸ್ತುಗಳಿಗಿಂತ ಮಿಗಿಲಾದ ಸೂಕ್ಷ್ಮತೆಯು ಅಣಿಮಸಿದ್ಧಿಯು. ಅತಿಯಾದ ಶೀಘ್ರತೆಯು ಲಘಿಮಸಿದ್ಧಿಯು. ಎಲ್ಲರಿಂದ ಪೂಜ್ಯತೆಯನ್ನು ಹೊಂದುವುದು ಮಹಿಮಸಿದ್ಧಿಯು. ಮತ್ತು ಯಾವುದೊಂದು ವಸ್ತುವು ದುರ್ಲಭವೆನಿಸದಿರುವುದು ಪ್ರಾಪ್ತಿಸಿದ್ಧಿಯು.

೩೪. ಮತ್ತು ಯೋಗಿಗೆ ಲಭಿಸುವ ವ್ಯಾಪಕತೆಯು ಪ್ರಾಕಾಮ್ಯ-ಸಿದ್ಧಿಯು. ಸಮಸ್ತತತ್ತ್ವಗಳಿಗೂ ಈಶ್ವರನಾಗುವುದು ಈಶಿತ್ವಸಿದ್ಧಿಯು. ಹಾಗು ಯೋಗಿಯು ಸರ್ವಸ್ವತಂತ್ರನಾಗಿರುವುದು ವಶಿತ್ವವೆಂಬ ಏಳನೆಯ ಸಿದ್ಧಿಯು.

೩೫. ಯಾವ ಸಿದ್ಧಿಯನ್ನು ಹೊಂದಿರುವ ಸಮಯದಲ್ಲಿ ಯೋಗಿಯು ತನ್ನ ಇಷ್ಟಬಂದಂತೆ ಆಯಾಯ ಸಮಸ್ತ ವಿಷಯಗಳನ್ನು ಹೊಂದಬಲ್ಲನೋ; ಆ ಗುಣವು ಕಾಮಾವಸಾಯಿತ್ವವೆಂಬ ಸಿದ್ಧಿಯೆನಿಸಿರುವುದು.

೩೬. ಅಲರ್ಕರಾಜನೆ! ಐಶ್ವರ್ಯಕ್ಕೆ ಕಾರಣಗಳಾದ ಅಣಿಮಾ ಮುಂತಾದ ಶಕ್ತಿಗಳಿಂದ ಯೋಗಿಯ ಆತ್ಮಕ್ಕೆ ಮುಕ್ತಿಲಾಭವನ್ನು ಸೂಚಿಸುವ ಎಂಟು ವಿಧವಾದ ಉತ್ತಮ ಸುಖೋದಯವು ಉಂಟಾಗುವುದು. ಇಂತಹ ಅಷ್ಟೈಶ್ವರ್ಯದ ಪ್ರಾಪ್ತಿಯಾದ ನಂತರ ಮುಕ್ತಿಯು ತಪ್ಪದೇ ಬರುವುದು.

ತತೋ ನ ಜಾಯತೇ ನೈವ ವರ್ಧತೇ ನ ವಿನಶ್ಯತಿ ।
ನಾಪಿ ಕ್ಷಯಮವಾಪ್ನೋತಿ ಪರಿಣಾಮಂ ನ ಗಚ್ಛತಿ ॥೩೭॥

ಛೇದಂ ಕ್ಲೇದಂ ತಥಾ ದಾಹಂ ಶೋಷಂ ಭೂರಾದಿತೋ ನ ಚ ।
ಭೂತವರ್ಗಾದವಾಪ್ನೋತಿ ಶಬ್ದಾದ್ಯೈರ್ಹ್ರಿಯತೇ ನ ಚ ॥೩೮॥

ನ ಚಾಸ್ಯ ಸನ್ತಿ ಶಬ್ದಾದ್ಯಾಸ್ತದ್ಭೋಕ್ತಾ ತೈರ್ನಯುಜ್ಯತೇ ॥೩೯॥

ಯಥಾ ಹಿ ಕಾನಕಂ ಖಣ್ಡಮಪದ್ರವ್ಯವದಗ್ನಿನಾ ।
ದಗ್ಧದೋಷಂ ದ್ವಿತೀಯೇನ ಖಣ್ಡೇನೈಕ್ಯಂ ವ್ರಜೇನ್ನೃಪ ॥೪೦॥

ನ ವಿಶೇಷಮವಾಪ್ನೋತಿ ತದ್ವದ್ಯೋಗಾಗ್ನಿನಾ ಯತಿಃ ।
ನಿರ್ದಗ್ಧದೋಷಸ್ತೇನೈಕ್ಯಂ ಪ್ರಯಾತಿ ಬ್ರಹ್ಮಣಾ ಸಹ ॥೪೧॥

---

೩೭. ಅಂತಹ ಮುಕ್ತಿಯೋಗ್ಯತೆಯನ್ನು ಹೊಂದಿರುವ ಮಾನವನು ಜನಿಸುವುದಿಲ್ಲ, ವೃದ್ಧಿ ಹೊಂದುವುದಿಲ್ಲ, ನಾಶಹೊಂದುವುದಿಲ್ಲ, ಕ್ಷೀಣತೆಯನ್ನು ಹೊಂದುವುದಿಲ್ಲ. ಮತ್ತು ಪರಿಣಾಮವನ್ನು ಹೊಂದುವುದಿಲ್ಲ. ಯಾವುದೊಂದು ವಿಕಾರಕ್ಕೂ ಆಸ್ಪದನಾಗುವುದಿಲ್ಲ.

೩೮. ಹಾಗು ಪೃಥಿವೀ ಮುಂತಾದ ಭೂತವರ್ಗದ ಸಂಪರ್ಕದಿಂದ ಛೇದನ, ಆರ್ದ್ರತೆ, ದಾಹ, ಅಥವಾ ಶೋಷಣಗಳೆಂಬ ವಿಕಾರಗಳನ್ನು ಹೊಂದುವುದಿಲ್ಲ. ಮತ್ತು ಶಬ್ದ-ಸ್ಪರ್ಶ-ರೂಪ-ರಸ-ಗಂಧವೆಂಬ ಭೌತಿಕ ವಿಷಯಗಳಿಂದ ಆಕರ್ಷಿಸಲ್ಪಡುವುದಿಲ್ಲ.

೩೯. ಹೀಗೆ ಯೋಗಸಿದ್ಧಿಯನ್ನು ಹೊಂದಿದ ಮಾನವನು ನಿಜರೂಪದಿಂದ ಆನಂದಭೋಕ್ತೃವಾಗಿದ್ದು ಶಬ್ದ ಮುಂತಾದುವುಗಳಿಂದ ಸೇರುವುದಿಲ್ಲ. ಹಾಗೆ ಶಬ್ದ ಮುಂತಾದ ವಿಷಯಗಳು ಪ್ರತ್ಯೇಕವಾಗಿ ಇರುವುದಿಲ್ಲ.

೪೦. ರಾಜನೆ! ಚಿನ್ನದ ಒಂದು ಖಂಡವು ಬೆಂಕಿಯಲ್ಲಿ ಕಾದು ತನ್ನಲ್ಲಿರುವ ಮಲಿನತೆಯನ್ನು ಕಳೆದುಕೊಂಡಮೇಲೆ ನಿರ್ದುಷ್ಟವಾಗಿ ಅಂತಹುದೇ ಆದ ಮತ್ತೊಂದು ಚಿನ್ನದ ಖಂಡದೊಡನೆ ಐಕ್ಯಹೊಂದುವುದು.

೪೧. ಯೋಗಾಭ್ಯಾಸಿಯಾದ ಯತಿಯು ಆ ಚಿನ್ನದಂತೆ ತನ್ನ ಮಾಲಿನ್ಯರೂಪವಾದ ವಿಶೇಷವನ್ನು ಯೋಗಾಗ್ನಿಯಿಂದ ತ್ಯಜಿಸುವನು. ಹಾಗೆ ದಹಿಸಿಹೋದ ದೋಷಗಳುಳ್ಳವನಾಗಿ ಪರಬ್ರಹ್ಮವಸ್ತುವಿನೊಡನೆ ಐಕ್ಯವನ್ನು ಹೊಂದುತ್ತಾನೆ.

ಯಥಾಗ್ನಿರಗ್ನೌ ಸಂಕ್ಷಿಪ್ತಃ ಸಮಾನತ್ವಮನುವ್ರಜೇತ್ ।
ತದಾಖ್ಯಸ್ತನ್ಮಯೋ ಭೂತೋ ನ ಗೃಹ್ಯೇತ ವಿಶೇಷತಃ ॥೪೨॥

ಪರೇಣ ಬ್ರಹ್ಮಣಾ ತದ್ವತ್ಪ್ರಾಪ್ತೈಕ್ಯಂ ದಗ್ಧಕಿಲ್ಬಿಷಃ ।
ಯೋಗೀ ಯಾತಿ ಪೃಥಗ್ಭಾವಂ ನ ಕದಾಚಿನ್ಮಹೀಪತೇ ॥೪೩॥

ಯಥಾ ಜಲಂ ಜಲೇನೈಕ್ಯಂ ನಿಕ್ಷಿಪ್ತಮುಪಗಚ್ಛತಿ ।
ತಥಾತ್ಮಾ ಸಾಮ್ಯಮಭ್ಯೇತಿ ಯೋಗಿನಃ ಪರಮಾತ್ಮನಿ ॥೪೪॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಯೋಗಸಿದ್ಧಿರ್ನಾಮ
ಸಪ್ತವಿಂಶೋಽಧ್ಯಾಯಃ

---

೪೨. ಒಂದು ಅಗ್ನಿರಾಶಿಯಲ್ಲಿ ಇನ್ನೊಂದು ಅಗ್ನಿಯನ್ನು ಹಾಕಿದರೆ ಅದು ಸಾಮ್ಯವನ್ನು ಹೊಂದುತ್ತದೆ. ಮೇಲೆ ಹಾಕಿರುವ ಅಗ್ನಿಯು ಆಧಾರವಾದ ಅಗ್ನಿಯಂತೆ ಭಾಸವಾಗುತ್ತ ತನ್ಮಯವಾಗಿದ್ದು ಬೇರೊಂದು ವಿಶೇಷ ಧರ್ಮದಿಂದ ಗ್ರಹಿಸಲ್ಪಡುವುದಿಲ್ಲ.

೪೩. ಎಲೈ! ರಾಜನೆ! ಅದರಂತೆ ತ್ಯಜಿಸಿದ ಕಳಂಕಗಳುಳ್ಳ ಯೋಗಿಯು ಪರಬ್ರಹ್ಮವಸ್ತುವಿನಲ್ಲಿ ಐಕ್ಯವನ್ನು ಹೊಂದುತ್ತಾನೆ. ಮತ್ತು ಅಂತಹ ಯೋಗಿಯು ಮುಂದೆ ಯಾವಾಗಲೂ ಭೇದವನ್ನು ಹೊಂದುವುದಿಲ್ಲ.

೪೪. ಮತ್ತು ಜಲರಾಶಿಯಲ್ಲಿ ಸುರಿದ ಜಲವು ಆಧಾರಜಲದಲ್ಲಿ ಐಕ್ಯವನ್ನು ಹೊಂದುತ್ತದೆ. ಅದರಂತೆ ಯೋಗಿಯ ಶುದ್ಧವಾದ ಆತ್ಮವು ಪರಮಾತ್ಮನಲ್ಲಿ ಸಾಮ್ಯವನ್ನು ಹೊಂದುವುದು. ಭೇದವು ಭಾಸಿಸುವ ಕಾರಣಗಳು ಲಯವಾಗುವುವು.

ಮಾರ್ಕಂಡೇಯ ಮಹಾಪುರಾಣದಲ್ಲಿ ಮೂವತ್ತೇಳನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಅಷ್ಟಾತ್ರಿಂಶೋಽಧ್ಯಾಯಃ

(ಯೋಗಿಚರ್ಯಾನಿರೂಪಣಮ್)

ಅಲರ್ಕ ಉವಾಚ :—

ಭಗವನ್ಯೋಗಿನಶ್ಚರ್ಯಾಂ ಶ್ರೋತುಮಿಚ್ಛಾಮಿ ತತ್ತ್ವತಃ ।
ಬ್ರಹ್ಮವರ್ತ್ಮನ್ಯನುಸರನ್ಯಥಾ ಯೋಗೀ ನ ಸೀದತಿ ॥೧॥

ದತ್ತಾತ್ರೇಯ ಉವಾಚ :—

ಮಾನಾಪಮಾನೌ ಯಾವೇತೌ ಪ್ರತ್ಯುದ್ವೇಗಕರೌ ನೃಣಾಮ್ ।
ತಾವೇವ ವಿಪರೀತಾರ್ಥೌ ಯೋಗಿನಃ ಸಿದ್ಧಿಕಾರಕೌ ॥೨॥

ಮೂವತ್ತೆಂಟನೆಯ ಅಧ್ಯಾಯ

ಅಲರ್ಕನು ಇಂತೆಂದನು :—

೧. ಪೂಜ್ಯನಾದ ದತ್ತಾತ್ರೇಯಮುನಿಯೆ! ಯೋಗಿಯು ಪರಬ್ರಹ್ಮವೆಂಬ ಮಾರ್ಗವನ್ನು ಅನುಸರಿಸಿ ನಡೆಯುತ್ತ ಶ್ರಮವಿಲ್ಲದಂತಿರುವನಲ್ಲವೆ! ಅಂತಹ ಯೋಗಿಯ ಚರ್ಯೆಯನ್ನು ತತ್ತ್ವಾಂಶದಿಂದ ತಿಳಿಯಲು ನಾನು ಆಶಿಸುತ್ತೇನೆ.

ದತ್ತಾತ್ರೇಯ ಮುನಿಯು ಇಂತೆಂದನು :—

೨. ಲೋಕದಲ್ಲಿ ಮಾನವರಿಗೆ ವಿಶೇಷವಾಗಿ ಉದ್ವೇಗವನ್ನುಂಟು-ಮಾಡುವ ಯಾವ ಮಾನ–ಅಪಮಾನಗಳು ಪ್ರಸಿದ್ಧವಾಗಿವೆಯೋ ಯೋಗಿಗೆ ಅದೇ ಮಾನ-ಅಪಮಾನಗಳು ಲೋಕರೂಢಿಗೆ ವಿರುದ್ಧವಾದ ಅರ್ಥಗಳಿಂದ ಕೂಡಿ ಸಿದ್ಧಿಯನ್ನು ಕೊಡುವುವು.

ಮಾನಾಪಮಾನೌ ಯಾವೇತೌ ತಾವೇವಾಹುರ್ವಿಷಾಮೃತೇ ।
ಅಪಮಾನೋಽಮೃತಂ ತತ್ರ ಮಾನಸ್ತು ವಿಷಮಂ ವಿಷಮ್ ॥೩॥

ಚಕ್ಷುಃಪೂತಂ ನ್ಯಸೇತ್ಪಾದಂ ವಸ್ತ್ರಪೂತಂ ಜಲಂ ಪಿಬೇತ್ ।
ಸತ್ಯಪೂತಾಂ ವದೇದ್ವಾಣೀಂ ಬುದ್ಧಿಪೂತಂ ಚ ಚಿನ್ತಯೇತ್ ॥೪॥

ಆತಿಥ್ಯಶ್ರಾದ್ಧಯಜ್ಞೇಷು ದೇವಯಾತ್ರೋತ್ಸವೇಷು ಚ ।
ಮಹಾಜನೇಷು ಸಿದ್ಧ್ಯರ್ಥಂ ನ ಗಚ್ಛೇದ್ಯೋಗವಿತ್ಕ್ವಚಿತ್ ॥೫॥

ವ್ಯಸ್ತೇ ವಿಧೂಮೇ ವ್ಯಙ್ಗಾರೇ ಸರ್ವಸ್ಮಿನ್ಭುಕ್ತವಜ್ಜನೇ ।
ಅಟೇತ ಯೋಗವಿದ್ಭೈಕ್ಷ್ಯಂ ನ ತು ತೇಷ್ವೇವ ನಿತ್ಯಶಃ ॥೬॥

---

೩. ಆ ಮಾನಾಪಮಾನಗಳನ್ನು ವಿಷ-ಅಮೃತಸ್ವರೂಪವೆಂದು ಪ್ರಾಜ್ಞರು ಹೇಳುತ್ತಿರುವರು. ಅವುಗಳಲ್ಲಿ ಅಪಮಾನವು ಅಮೃತಸ್ವರೂಪ-ವಾದುದು; ಹಾಗು ಮಾನವು ವಿಷಸ್ವರೂಪವಾದುದು. ಮಾನವು ಅಮೃತ-ವಾಗಿಯೂ, ಅಪಮಾನವು ವಿಷವಾಗಿಯೂ ತೋರುವ ಲೋಕರೂಢಿಗೆ ಇದು ವಿರೋಧವಾದುದು.

೪. ದೃಷ್ಟಿಯಿಂದ ವಿವೇಚಿಸಿ ಪಾದವನ್ನು ಮುಂದಕ್ಕೆ ಇಡಬೇಕು. ವಸ್ತ್ರದಿಂದ ಶೋಧಿಸಿ ನೀರನ್ನು ಕುಡಿಯಬೇಕು. ಸತ್ಯವಚನ ಶ್ರದ್ಧೆಯಿಂದ ಪವಿತ್ರವಾದ ಮಾತನ್ನು ಆಡಬೇಕು. ಮತ್ತು ಬುದ್ಧಿವಿವೇಕದಿಂದ ಕೂಡಿ ಆಯಾಯ ವಿಷಯವನ್ನು ಚಿಂತಿಸಬೇಕು.

೫. ಯೋಗಾಭ್ಯಾಸಿಯು ಯಾವಾಗಲೂ ಆತಿಥ್ಯ ಸಮಾರಂಭ, ಶ್ರಾದ್ಧ-ಕರ್ಮ, ಯಜ್ಞ, ದೇವತೆಯ ಜಾತ್ರೆ ಮತ್ತು ಉತ್ಸವಗಳಲ್ಲಿ ಜನಸಮಾಜದಲ್ಲಿ ತಾನು ಯೋಗಿಯೆಂದು ಪ್ರಕಾಶಪಡಿಸಿ ಗೌರವವನ್ನು ಆರ್ಜಿಸುವ ದೃಷ್ಟಿಯಿಂದ ಹೋಗಬಾರದು.

೬. ಒನಕೆ ಮುಂತಾದುವುಗಳ ಶಬ್ದವು ಅಡಗಿಹೋದ, ಹೊಗೆಯಾಡು-ವುದು ನಿಂತಿರುವ, ಬೆಂಕಿಯು ಆರಿಹೋದ ಮತ್ತು ಮನೆಯ ಪರಿವಾರ ಜನರು ಊಟಮಾಡಿ ಮುಗಿದಿರುವ ಮನೆಯಲ್ಲಿ ಮಾತ್ರ ಯೋಗಿಯು ಭಿಕ್ಷೆಯನ್ನು ಬೇಡಬೇಕು. ಮತ್ತು ಪ್ರತಿದಿನವೂ ಒಂದೇ ಕಡೆಯಲ್ಲಿ ಭಿಕ್ಷೆಯನ್ನು ಬೇಡ-ಬಾರದು.

ಯಥೈವಮವಮನ್ಯನ್ತೇ ಜನಾಃ ಪರಿಭವನ್ತಿ ಚ ।
ತಥಾಯುಕ್ತಶ್ಚರೇದ್ಯೋಗೀ ಸತಾಂ ವರ್ತ್ಮ ನ ದೂಷಯನ್ ॥೭॥

ಭೈಕ್ಷ್ಯಂ ಚರೇದ್ಗೃಹಸ್ಥೇಷು ಯಾಯಾವರಗೃಹೇಷು ಚ ।
ಶ್ರೇಷ್ಠಾ ತು ಪ್ರಥಮಾ ಚೇತಿ ವೃತ್ತಿರಸ್ಯೋಪದಿಶ್ಯತೇ ॥೮॥

ಅಥ ನಿತ್ಯಂ ಗೃಹಸ್ಥೇಷು ಶಾಲೀನೇಷು ಚರೇದ್ಯತಿಃ ।
ಶ್ರದ್ದಧಾನೇಷು ದಾನ್ತೇಷು ಶ್ರೋತ್ರಿಯೇಷು ಮಹಾತ್ಮಸು ॥೯॥

ಅತ ಊರ್ಧ್ವಂ ಪುನಶ್ಚಾಪಿ ಅದುಷ್ಟಾಪತಿತೇಷು ಚ ।
ಭೈಕ್ಷ್ಯಚರ್ಯಾ ವಿವರ್ಣೇಷು ಜಘನ್ಯಾ ವೃತ್ತಿರಿಷ್ಯತೇ ॥೧೦॥

---

೭. ಯೋಗಿಯು ಯಾವ ರೀತಿಯಲ್ಲಿ ವರ್ತಿಸಿದರೆ ತನ್ನನ್ನು ಇತರ ಜನರು ಅವಮಾನದಿಂದ ನೋಡುವರೋ ಹಾಗು ಧಿಕ್ಕರಿಸಿ ನಡೆಯುವರೋ ಹಾಗೆ ಸಾಧುಮಾರ್ಗವನ್ನು ನಿಂದಿಸದೆ ತಾನು ಯೋಗಾಭ್ಯಾಸಪರನಾಗಿ ವರ್ತಿಸಬೇಕು.

೮. ಯೋಗಿಯು ಸ್ವಕರ್ಮಪರರಾದ ಗೃಹಸ್ಥಾಶ್ರಮಿಗಳಲ್ಲಿಯೂ ವಾನಪ್ರಸ್ಥಾಶ್ರಮಿಗಳಲ್ಲಿಯೂ ಭಿಕ್ಷೆಯನ್ನು ಬೇಡಬೇಕು. ಯೋಗಿಗೆ ಭಿಕ್ಷಾವೃತ್ತಿಯು ಮುಖ್ಯವಾಗಿಯೂ, ಶ್ರೇಷ್ಠವಾಗಿಯೂ ಇರುವುದೆಂದು ಶಾಸ್ತ್ರದಲ್ಲಿ ಉಪದೇಶಿಸಲ್ಪಟ್ಟಿದೆ.

೯. ಆದುದರಿಂದ ಯೋಗಿಯು ಪ್ರತಿದಿನವೂ ಧೀರರೂ ಶ್ರದ್ಧೆಯಿಂದ ಕೂಡಿರುವವರೂ, ಜಿತೇಂದ್ರಿಯರೂ, ಶ್ರೋತ್ರಿಯರೂ ಮತ್ತು ಮಹಾತ್ಮರೂ ಆದ ಗೃಹಸ್ಥಾಶ್ರಮಿಗಳಲ್ಲಿ ಭಿಕ್ಷೆಯನ್ನೆತ್ತಬೇಕು.

೧೦. ಉತ್ತಮವಾದ ಭಿಕ್ಷೆಯು ದೊರೆಯದಿದ್ದರೆ ಆಗ ಪತಿತರೂ, ದುಷ್ಟರೂ ಅಲ್ಲದಿರುವ ಅಸವರ್ಣಿಗಳ ಮನೆಯಲ್ಲಿಯೂ ಭಿಕ್ಷೆಯನ್ನು ತರಬಹುದು. ಅಂತಹ ಭಿಕ್ಷಾವೃತ್ತಿಯು ಆಪತ್ಕಾಲದ ವೃತ್ತಿಯೆಂದು ಹೇಳಲ್ಪಟ್ಟಿದೆ.

ಭೈಕ್ಷ್ಯಂ ಯವಾಗೂಂ ತಕ್ರಂ ವಾ ಪಯೋ ಯಾವಕಮೇವ ವಾ ।
ಫಲಂ ಮೂಲಂ ಪ್ರಿಯಙ್ಗುಂ ವಾ ಕಣಪಿಣ್ಯಾಕಸಕ್ತವಃ ||೧೧||

ಇತ್ಯೇತೇ ಚ ಶುಭಾಹಾರಾ ಯೋಗಿನಾಂ ಸಿದ್ಧಿಕಾರಕಾಃ ।
ತತ್ಪ್ರಯುಞ್ಜ್ಯಾನ್ಮುನಿರ್ಭಕ್ತ್ಯಾ ಪರಮೇಣ ಸಮಾಧಿನಾ ||೧೨||

ಅಪಃ ಪೂರ್ವಂ ಸಕೃತ್ಪ್ರಾಶ್ಯ ತೂಷ್ಣೀಂ ಭೂತ್ವಾ ಸಮಾಹಿತಃ ।
ಪ್ರಾಣಾಯೇತಿ ತತಸ್ತಸ್ಯ ಪ್ರಥಮಾ ಹ್ಯಾಹುತಿಃ ಸ್ಮೃತಾ ||೧೩||

ಅಪಾನಾಯ ದ್ವಿತೀಯಾ ತು ಸಮಾನಾಯೇತಿ ಚಾಪರಾ ।
ಉದಾನಾಯ ಚತುರ್ಥೀ ಸ್ಯಾದ್ವ್ಯಾನಾಯೇತಿ ಚ ಪಞ್ಚಮೀ ||೧೪||

---

೧೧. ಭಿಕ್ಷಾನ್ನ, ಗಂಜಿ, ಮಜ್ಜಿಗೆ, ಹಾಲು, ಗೆಡ್ಡೆ. ಗೆಣಸು, ನವಣೆ, ಯಾವಕ, ಎಳ್ಳಿನಪುಡಿ, ಮತ್ತು ಹಿಟ್ಟು—ಇವು ಯೋಗಿಗೆ ಉತ್ತಮವಾದ ಆಹಾರಗಳಾಗಿವೆ.

೧೨. ಇವು ಯೋಗಿಗಳಿಗೆ ಮಂಗಲಕರವಾದ ಆಹಾರಗಳು ಮತ್ತು ಇವು ಯೋಗಸಿದ್ಧಿಯನ್ನು ಮಾಡುವ ಆಹಾರಗಳಾಗಿವೆ. ಯೋಗಿಯು ಅಂತಹ ಆಹಾರವನ್ನು ಭಕ್ತಿಯಿಂದಲೂ ಉತ್ತಮವಾದ ಚಿತ್ತದ ಏಕಾಗ್ರತೆಯಿಂದಲೂ ಸೇವಿಸಬೇಕು.

೧೩. ಯೋಗಿಯು ಆಹಾರಸೇವನೆಗೆ ಮೊದಲು ಒಂದು ಸಲ ನೀರನ್ನು ಸೇವಿಸಿ ಮೌನದಿಂದಲೂ ಚಿತ್ತಸಮಾಧಾನದಿಂದಲೂ ಇದ್ದು ಮೊದಲು "ಪ್ರಾಣಾಯ ಸ್ವಾಹಾ" ಎಂದು ಮಂತ್ರವನ್ನು ಹೇಳುತ್ತ ಒಂದು ಆಹುತಿಯನ್ನು ಸ್ವೀಕರಿಸಬೇಕು.

೧೪. ಮತ್ತು "ಅಪಾನಾಯ ಸ್ವಾಹಾ" ಎಂಬ ಮಂತ್ರದಿಂದ ಎರಡನೆಯ ಆಹುತಿಯನ್ನೂ "ಸಮಾನಾಯ ಸ್ವಾಹಾ" ಎಂಬ ಮಂತ್ರದಿಂದ ಮೂರನೆಯ ಆಹುತಿಯನ್ನೂ "ಉದಾನಾಯ ಸ್ವಾಹಾ" ಎಂಬ ಮಂತ್ರದಿಂದ ನಾಲ್ಕನೆಯ ಆಹುತಿಯನ್ನೂ, ಹಾಗು "ವ್ಯಾನಾಯ ಸ್ವಾಹಾ" ಎಂಬ ಮಂತ್ರದಿಂದ ಐದನೆಯ ಆಹುತಿಯನ್ನೂ ಸ್ವೀಕರಿಸಬೇಕು.

ಪ್ರಾಣಾಯಾಮೈಃ ಪೃಥಕ್ಕೃತ್ವಾ ಶೇಷಂ ಭುಞ್ಜೀತ ಕಾಮತಃ ।
ಅಪಃ ಪುನಃ ಸಕೃತ್ಪ್ರಾಶ್ಯ ಆಚಮ್ಯ ಹೃದಯಂ ಸ್ಪೃಶೇತ್ ॥೧೫॥

ಅಸ್ತೇಯಂ ಬ್ರಹ್ಮಚರ್ಯಂ ಚ ತ್ಯಾಗೋಽಲೋಭಸ್ತಥೈವ ಚ ।
ವ್ರತಾನಿ ಪಞ್ಚ ಭಿಕ್ಷೂಣಾಮಹಿಂಸಾಪರಮಾಣಿ ವೈ ॥೧೬॥

ಅಕ್ರೋಧೋ ಗುರುಶುಶ್ರೂಷಾ ಶೌಚಮಾಹಾರಲಾಘವಮ್ ।
ನಿತ್ಯಸ್ವಾಧ್ಯಾಯ ಇತ್ಯೇತೇ ನಿಯಮಾಃ ಪರಿಕೀರ್ತಿತಾಃ ॥೧೭॥

ಸಾರಭೂತಮುಪಾಸೀತ ಜ್ಞಾನಂ ಯತ್ಕಾರ್ಯಸಾಧಕಮ್ ।
ಜ್ಞಾನಾನಾಂ ಬಹುತಾ ಯೇಯಂ ಯೋಗವಿಘ್ನಕರೀ ಹಿ ಸಾ ॥೧೮॥

---

೧೫. ಹೀಗೆ ಬೇರೆಯಾಗಿ ಪ್ರಾಣಾಹುತಿಗಳನ್ನು ತೆಗೆದುಕೊಂಡು ಪ್ರಾಣಾಯಾಮದಿಂದ ಪ್ರಾಣವಾಯುವನ್ನು ಜಯಿಸಿಕೊಂಡು ಮಿಕ್ಕ ಅನ್ನವನ್ನು ಯಥೇಷ್ಟವಾಗಿ ಸ್ವೀಕರಿಸಬೇಕು. ಕಡೆಯಲ್ಲಿ ನೀರನ್ನು ಕುಡಿದು ಆಚಮನವನ್ನು ಮಾಡಿ ಹೃದಯವನ್ನು ಸ್ಪರ್ಶಿಸಿಕೊಳ್ಳಬೇಕು.

೧೬. ಯೋಗಾಭ್ಯಾಸಿಗಳಾದ ಭಿಕ್ಷುಜನರಲ್ಲಿ ಪರದ್ರವ್ಯವನ್ನು ಅಪಹರಿಸದಿರುವಿಕೆ, ಬ್ರಹ್ಮಚರ್ಯ, ತ್ಯಾಗಬುದ್ಧಿ, ಲೋಭವಿಲ್ಲದಿರುವಿಕೆ ಮತ್ತು ಅಹಿಂಸಾ ಎಂಬುವು ಐದು ಅವರ ಕರ್ತವ್ಯವಾದ ವ್ರತಗಳಾಗಿವೆ.

೧೭. ಮತ್ತು ಕೋಪವನ್ನು ತ್ಯಜಿಸುವುದು, ಗುರುಶುಶ್ರೂಷೆ, ಶೌಚಾನುಷ್ಠಾನ, ಲಘುಆಹಾರಸೇವನೆ ಹಾಗು ಸ್ವಾಧ್ಯಾಯಜಪ—ಇವು ಯೋಗಿಯ ಕರ್ತವ್ಯನಿಯಮಗಳೆಂದು ಹೇಳಲ್ಪಟ್ಟಿವೆ.

೧೮. ಜ್ಞಾನಗಳಲ್ಲಿ ನಿಸ್ಸಾರವನ್ನು ಬಿಟ್ಟು ಸಾರರೂಪವಾದ ಜ್ಞಾನವನ್ನು ಸಂಪಾದಿಸಿ ಉಪಾಸನ ಮಾಡಬೇಕು. ಹೆಚ್ಚು ಜ್ಞಾನಗಳನ್ನು ಸಂಪಾದಿಸುವ ಆಶೆಯು ಯೋಗಕ್ಕೆ ವಿಘ್ನವನ್ನುಂಟುಮಾಡುವುದಾಗಿದೆ. ಆದ್ದರಿಂದ ಅಸಾರವಾದ ಜ್ಞಾನಾರ್ಜನೆಯನ್ನು ಬಿಡಬೇಕು,

ಇದಂ ಜ್ಞೇಯಮಿದಂ ಜ್ಞೇಯಮಿತಿ ಯಸ್ತೃಷಿತಶ್ಚರೇತ್ ।
ಅಪಿ ಕಲ್ಪಸಹಸ್ರೇಷು ನೈವ ಜ್ಞೇಯಮವಾಪ್ನುಯಾತ್ ॥೧೯॥

ತ್ಯಕ್ತಸಙ್ಗೋ ಜಿತಕ್ರೋಧೋ ಲಘ್ವಾಹಾರೀ ಜಿತೇನ್ದ್ರಿಯಃ ।
ಪಿಧಾಯ ಬುದ್ಧ್ಯಾ ದ್ವಾರಾಣಿ ಮನೋ ಧ್ಯಾನೇ ನಿವೇಶಯೇತ್ ॥೨೦॥

ಶೂನ್ಯೇಷ್ವೇವಾವಕಾಶೇಷು ಗುಹಾಸು ಚ ವನೇಷು ಚ ।
ನಿತ್ಯಯುಕ್ತಃ ಸದಾ ಯೋಗೀ ಧ್ಯಾನಂ ಸಮ್ಯಗುಪಕ್ರಮೇತ್ ॥೨೧॥

ವಾಗ್ದಣ್ಡಃ ಕರ್ಮದಣ್ಡಶ್ಚ ಮನೋದಣ್ಡಶ್ಚ ತೇ ತ್ರಯಃ ।
ಯಸ್ಯೈತೇ ನಿಯತಾ ದಣ್ಡಾ ಸ ತ್ರಿದಣ್ಡೀ ಮಹಾಯತಿಃ ॥೨೨॥

---

೧೯. ಯಾವ ಮಾನವನು ಇದನ್ನು ತಿಳಿಯಬೇಕು; ' ಇದನ್ನು ತಿಳಿಯಬೇಕು ಎಂದು ಆಶೆಯಿಂದ ತೃಪ್ತಿಯಿಲ್ಲದೆ ವರ್ತಿಸುವನೋ; ಅವನು ಸಹಸ್ರಾರು ಕಲ್ಪಗಳ ಕಾಲವು ಕಳೆದರೂ ಮುಖ್ಯವಾದ ಜ್ಞೇಯಾಂಶವನ್ನು ತಿಳಿಯಲಾರನು.

೨೦. ಸಂಗವನ್ನು ತ್ಯಜಿಸಿದವನೂ, ನಿಗ್ರಹಿಸಿದ ಕೋಪವುಳ್ಳವನೂ, ಲಘುವಾದ ಆಹಾರವುಳ್ಳವನೂ, ಮತ್ತು ಜಿತೇಂದ್ರಿಯನೂ ಆದ ಯೋಗಿಯು ವಿವೇಕದಿಂದ ಇಂದ್ರಿಯದ್ವಾರಗಳನ್ನು ಮುಚ್ಚಿ ಮನಸ್ಸನ್ನು ತತ್ತ್ವಧ್ಯಾನದಲ್ಲಿ ಇರಿಸಬೇಕು.

೨೧. ಸಂತತವಾದ ಯೋಗಾಭ್ಯಾಸಪರತೆಯುಳ್ಳ ಯೋಗಿಯು ನಿರ್ಜನವಾದ ಶೂನ್ಯಪ್ರದೇಶ, ಗುಹೆ, ವನ ಮುಂತಾದ ಅವಕಾಶಗಳಲ್ಲಿ ಕುಳಿತು ಯಾವಾಗಲೂ ಯಥಾವಿಧಿಯಾಗಿ ಧ್ಯಾನವನ್ನು ಉಪಕ್ರಮಿಸಬೇಕು.

೨೨. ಯತಿಯು ತ್ರಿದಂಡಿಯೆಂದು ಕರೆಯಲ್ಪಡುವನು. ಅವನು ವಾಗ್ದಂಡ, ಕರ್ಮದಂಡ ಮತ್ತು ಮನೋದಂಡವೆಂಬ ಮೂರು ದಂಡಗಳು ತಪ್ಪದೆ ಅವನ ಬಳಿಯಲ್ಲಿ ಇರುವುದರಿಂದ ತ್ರಿದಂಡಿಯಾಗುವನು. ಕಾಯ, ವಾಕ್, ಮನಸ್ಸು ಎಂಬ ತ್ರಿಕರಣಗಳನ್ನು ಜಯಿಸುವುದೇ ಮೂರು ದಂಡಗಳೆಂದು ಭಾವಿಸಬೇಕು.

ಸರ್ವಮಾತ್ಮಮಯಂ ಯಸ್ಯ ಸದಸಜ್ಜಗದೀದೃಶಮ್ ।
ಗುಣಾಗುಣಮಯಂ ತಸ್ಯ ಕಃ ಪ್ರಿಯಃ ಕೋ ನೃಪಾಪ್ರಿಯಃ ॥೨೩॥

ವಿಶುದ್ಧಬುದ್ಧಿಃ ಸಮಲೋಷ್ಟಕಾಞ್ಚನಃ
ಸಮಸ್ತಭೂತೇಷು ಸಮಾಂ ಸಮಾಹಿತಃ ।
ಸ್ಥಾನಂ ಪರಂ ಶಾಶ್ವತಮವ್ಯಯಂ ಚ
ಯತಿರ್ಹಿ ಗತ್ವಾ ನ ಪುನಃ ಪ್ರಜಾಯತೇ ॥೨೪॥

ವೇದಾಚ್ಛ್ರೇಷ್ಠಾಃ ಸರ್ವಯಜ್ಞಕ್ರಿಯಾಶ್ಚ
ಯಜ್ಞಾಜ್ಜಾಪ್ಯಂ ಜ್ಞಾನಮಾರ್ಗಶ್ಚ ಜಪ್ಯಾತ್ ।
ಜ್ಞಾನಾದ್ಧ್ಯಾನಂ ಸಙ್ಗರಾಗವ್ಯಪೇತಂ
ತಸ್ಮಿನ್ಪ್ರಾಪ್ತೇ ಶಾಶ್ವತಸ್ಯೋಪಲಬ್ಧಿಃ ॥೨೫॥

---

೨೩. ಎಲೈ ರಾಜನೆ! ಗುಣಪೂರ್ಣ-ನಿರ್ಗುಣವಾಗಿ ಭಾಸಿಸುವ, ಸತ್-ಅಸತ್ ಎಂಬ ಕಲ್ಪನೆಗಳಿಗೆ ಒಳಗಾದ ಈ ಎಲ್ಲ ಜಗತ್ತು ಯಾವ ಮಹಾತ್ಮನಿಗೆ ಆತ್ಮರೂಪವಾಗಿ ತೋರುವುದೋ ; ಅವನಿಗೆ ಪ್ರಿಯನಾಗಿರುವನು ; ಅಥವಾ ಅಪ್ರಿಯನಾಗಿರುವನು ; ಯಾರು ?

೨೪. ಯೋಗಸಿದ್ಧಿಯನ್ನು ಹೊಂದಿದ ಯತಿಯು ಶುದ್ಧವಾದ ಬುದ್ಧಿಯುಳ್ಳವನೂ, ಮಣ್ಣು-ಹೊನ್ನುಗಳಲ್ಲಿ ಸಮತ್ವಭಾವನೆಯುಳ್ಳವನೂ, ಸಮಸ್ತ ಪ್ರಾಣಿಗಳಲ್ಲಿಯೂ ಸಾಮ್ಯಬುದ್ಧಿಯನ್ನು ಹೊಂದಿದವನೂ ಮತ್ತು ಮನಃಶಾಂತಿಯನ್ನು ಹೊಂದಿದವನೂ ಆಗಿ ಚ್ಯುತಿಯಿಲ್ಲದ ಶಾಶ್ವತಸ್ಥಾನವಾದ ಮುಕ್ತಿಪದವನ್ನು ಸೇರಿ ಪುನರ್ಜನ್ಮವನ್ನು ಹೊಂದದಂತೆ ಇರುವನು.

೨೫. ವೇದಾಧ್ಯಯನಕ್ಕಿಂತಲೂ ವೇದದಲ್ಲಿ ಹೇಳಿದ ಯಜ್ಞಾದಿಕರ್ಮಗಳ ಆಚರಣೆಯು ಶ್ರೇಷ್ಠವಾದುದು. ಯಜ್ಞಾನುಷ್ಠಾನಕ್ಕಿಂತಲೂ ಜಪಾನುಷ್ಠಾನವು ಪವಿತ್ರವಾದುದು. ಜಪಕ್ಕಿಂತಲೂ ಜ್ಞಾನಾಭ್ಯಾಸವು ಉತ್ತಮವಾದುದು. ಜ್ಞಾನಾಭ್ಯಾಸಕ್ಕಿಂತಲೂ ಸಂಗ-ರಾಗಗಳಿಂದ ವರ್ಜಿತವಾದ ಧ್ಯಾನವು ಮೇಲಾದುದು. ಧ್ಯಾನವು ಸಿದ್ಧಿಸಿದರೆ ಶಾಶ್ವತ ಪದದ ಲಾಭವಾಗುವುದು.

ಸಮಾಹಿತೋ ಬ್ರಹ್ಮಪರೋಽಪ್ರಮಾದೀ
ಶುಚಿಸ್ತಥೈಕಾನ್ತರತಿರ್ಯತೇನ್ದ್ರಿಯಃ ।
ಸಮಾಪ್ನುಯಾದ್ಯೋಗಮಿಮಂ ಮಹಾತ್ಮಾ
ವಿಮುಕ್ತಿಮಾಪ್ನೋತಿ ತತಃ ಸ್ವಯೋಗತಃ ॥೨೬॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಯೋಗಿಚರ್ಯಾಕಥನಂ ನಾಮ ಅಷ್ಟಾತ್ರಿಂಶೋಽಧ್ಯಾಯಃ

---

೨೬. ಚಿತ್ತಸಮಾಧಾನವುಳ್ಳವನೂ, ಬ್ರಹ್ಮಚಿಂತನದಲ್ಲಿ ಆಸಕ್ತನೂ, ಪ್ರಮಾದವಿಲ್ಲದವನೂ, ಶುಚಿಯಾದವನೂ, ಏಕಾನ್ತವಾಸ ಮಾಡುವವನೂ ಮತ್ತು ಜಿತೇಂದ್ರಿಯನೂ ಆದ ಯೋಗಿಯು ಯೋಗಸಿದ್ಧಿಯನ್ನು ಹೊಂದುವನು. ಮತ್ತು ಆ ಮಹಾತ್ಮನು ಯೋಗಪರಿಪಾಕದಿಂದ ಮುಕ್ತಿಯನ್ನು ಪಡೆಯುವನು.

ಮಾರ್ಕಂಡೇಯ ಮಹಾಪುರಾಣದಲ್ಲಿ ಮೂವತ್ತೆಂಟನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಏಕೋನಚತ್ವಾರಿಂಶೋಽಧ್ಯಾಯಃ

(ಓಂಕಾರವರ್ಣನಮ್)

ದತ್ತಾತ್ರೇಯ ಉವಾಚ :—

ಏವಂ ಯೋ ವರ್ತತೇ ಯೋಗೀ ಸಮ್ಯಗ್ಯೋಗವ್ಯವಸ್ಥಿತಃ ।
ನ ಸ ವ್ಯಾವರ್ತಿತುಂ ಶಕ್ಯೋ ಜನ್ಮಾನ್ತರಶತೈರಪಿ ॥೧॥

ದೃಷ್ಟ್ವಾ ಚ ಪರಮಾತ್ಮಾನಂ ಪ್ರತ್ಯಕ್ಷಂ ವಿಶ್ವರೂಪಿಣಮ್ ।
ವಿಶ್ವಪಾದಶಿರೋಗ್ರೀವಂ ವಿಶ್ವೇಶಂ ವಿಶ್ವಭಾವನಮ್ ॥೨॥

ಮೂವತ್ತೊಂಭತ್ತನೆಯ ಅಧ್ಯಾಯ

ದತ್ತಾತ್ರೇಯ ಮುನಿಯು ಉಪದೇಶಮಾಡಿದನು :—

೧. ಸಾಂಗವಾದ ಯೋಗಾಭ್ಯಾಸದಲ್ಲಿ ತತ್ಪರನಾದ ಯಾವ ಯೋಗಿಯು ಈ ರೀತಿಯಲ್ಲಿ ವರ್ತಿಸುವನೋ; ನೂರಾರು ಜನ್ಮಾಂತರಗಳಲ್ಲಿಯೂ ಅವನನ್ನು ಯೋಗಭ್ರಷ್ಟನನ್ನಾಗಿ ಮಾಡಿ ಯೋಗಮಾರ್ಗದಿಂದ ಹಿಂತಿರುಗಿಸಲು ಸಾಧ್ಯವಿಲ್ಲ.

೨. ಅಂತಹ ಯೋಗಿಯು ವಿಶ್ವವೇ ಪಾದ-ಶಿರಸ್ಸು-ಕತ್ತು ಮುಂತಾದ ಅವಯವಗಳಾಗಿರುವವನೂ, ವಿಶ್ವಕ್ಕೆ ಈಶ್ವರನೂ ಮತ್ತು ವಿಶ್ವದ ಉತ್ಪತ್ತಿ-ಕಾರಣನೂ ಆದ ಪರಮಾತ್ಮನನ್ನು ಪ್ರತ್ಯಕ್ಷವಾಗಿ ಸಾಕ್ಷಾತ್ಕರಿಸುವನು.

ತತ್ಪ್ರಾಪ್ತಯೇ ಮಹತ್ಪುಣ್ಯಮೋಮಿತ್ಯೇಕಾಕ್ಷರಂ ಜಪೇತ್ ।
ತದೇವಾಧ್ಯಯನಂ ತಸ್ಯ ಸ್ವರೂಪಂ ಶೃಣ್ವತಃ ಪರಮ್ ॥೩॥

ಅಕಾರಶ್ಚ ತಥೋಕಾರೋ ಮಕಾರಶ್ಚಾಕ್ಷರತ್ರಯಮ್ ।
ಏತಾಸ್ತಿಸ್ರಃ ಸ್ಮೃತಾ ಮಾತ್ರಾಃ ಸಾತ್ತ್ವರಾಜಸತಾಮಸಾಃ ॥೪॥

ನಿರ್ಗುಣಾ ಯೋಗಿಗಮ್ಯಾನ್ಯಾ ಚಾರ್ಧಮಾತ್ರೋರ್ಧ್ವಸಂಸ್ಥಿತಾ ।
ಗಾನ್ಧಾರೀತಿ ಚ ವಿಜ್ಞೇಯಾ ಗಾನ್ಧಾರಸ್ವರಸಂಶ್ರಯಾ ॥೫॥

ಪಿಪೀಲಿಕಾಗತಿಸ್ಪರ್ಶಾ ಪ್ರಯುಕ್ತಾ ಮೂರ್ಧ್ನಿ ಲಕ್ಷ್ಯತೇ ॥೬॥

---

೩. ಯೋಗಿಯು ವಿಶ್ವರೂಪಿಯಾದ ಪರಮಾತ್ಮನ ಪ್ರಾಪ್ತಿಗೆ ಮಹಾ-ಪವಿತ್ರವಾದ ಓಂಕಾರರೂಪವಾದ ಏಕಾಕ್ಷರಮಂತ್ರವನ್ನು ಜಪಿಸಬೇಕು. ಯೋಗಿಗೆ ಓಂಕಾರಜಪವು ಸಕಲ ವೇದಾಧ್ಯಯನಸಮಾನವಾದುದು. ಇನ್ನು ಮುಂದೆ ಓಂಕಾರಮಂತ್ರದ ಸ್ವರೂಪವನ್ನು ಹೇಳುವೆನು. ಕೇಳು.

೪. ಓಂಕಾರದಲ್ಲಿ ಅಕಾರ ಉಕಾರ-ಮಕಾರಗಳೆಂಬ ಮೂರು ಅಕ್ಷರಗಳು ಸಂಧಿಸಿ "ಓಂ" ಎಂಬ ರೂಪವನ್ನು ಹೊಂದಿವೆ. ಪ್ರತ್ಯೇಕವಾಗಿ ಮೂರು ವರ್ಣಗಳು ಸತ್ತ್ವ-ರಜಸ್ಸು-ತಮಸ್ಸುಗಳೆಂಬ ಗುಣತ್ರಯರೂಪವಾದ ಮಾತ್ರೆ-ಗಳೆಂದು ಹೇಳಲ್ಪಟ್ಟಿರುವುವು.

೫. ಈ ಮೂರು ಮಾತ್ರೆಗಳನ್ನು ಲಂಘಿಸಿದ ನಿರ್ಗುಣವಾದ ಮತ್ತೊಂದು ಅರ್ಧಮಾತ್ರೆಯಿರುವುದು. ಮೂರು ಮಾತ್ರೆಗಳ ಕಡೆಯಲ್ಲಿರುವ ಅರ್ಧಮಾತ್ರೆಯು ಯೋಗಿಗಳಿಗೆ ವೇದ್ಯವಾಗಿರುವುದು. ಅದನ್ನು ಗಾಂಧಾರಸ್ವರವನ್ನು ಆಶ್ರಯಿಸಿರು-ವುದರಿಂದ ಗಾಂಧಾರಿ ಮಾತ್ರೆಯೆಂದು ಅರಿಯಬೇಕು.

೬. ಓಂಕಾರವನ್ನು ಉಚ್ಚರಿಸಿರುವ ಸಮಯದಲ್ಲಿ ಮೊದಲನೆಯ ಮೂರು ಮಾತ್ರೆಗಳ ಕಡೆಯಲ್ಲಿ ಮೂರ್ಧಸ್ಥಾನದಲ್ಲಿ ಇರುವೆಯು ನಡೆಯುವಾಗ ಆಗುವ ಸೂಕ್ಷ್ಮಸ್ಪರ್ಶದಂತೆ ಸೂಕ್ಷ್ಮಗತಿಯಿಂದ ಆ ಅರ್ಧಮಾತ್ರೆಯು ಯೋಗಿ ವೇದ್ಯವಾಗುವುದು.

ಯಥಾ ಪ್ರಯುಕ್ತ ಓಙ್ಕಾರಃ ಪ್ರತಿನಿರ್ಯಾತಿ ಮೂರ್ಧನಿ ।
ತಥೋಙ್ಕಾರಮಯೋ ಯೋಗೀ ತ್ವಕ್ಷರೇ ತ್ವಕ್ಷರೋ ಭವೇತ್ ॥೭॥

ಪ್ರಾಣೋ ಧನುಃ ಶರೋ ಹ್ಯಾತ್ಮಾ ಬ್ರಹ್ಮ ವಧ್ಯಮನುತ್ತಮಮ್ ।
ಅಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್ ॥೮॥

ಓಮಿತ್ಯೇತತ್ತ್ರಯೋ ವೇದಾಸ್ತ್ರಯೋ ಲೋಕಾಸ್ತ್ರಯೋಽಗ್ನಯಃ ।
ವಿಷ್ಣುರ್ಬ್ರಹ್ಮಾ ಹರಶ್ಚೈವ ಋಕ್ಸಾಮಾನಿ ಯಜೂಂಷಿ ಚ ॥೯॥

ಮಾತ್ರಾಃ ಸಾರ್ಧಾಶ್ಚ ತಿಸ್ರಶ್ಚ ವಿಜ್ಞೇಯಾಃ ಪರಮಾರ್ಥತಃ ।
ತತೋ ಯುಕ್ತಸ್ತು ಯೋ ಯೋಗೀ ಸ ತಲ್ಲಯಮವಾಪ್ನುಯಾತ್ ॥೧೦॥

---

೭. ಯಥಾವಿಧಿಯಾಗಿ ಉಚ್ಚಾರಮಾಡಿದ ಓಂಕಾರವು ಮೂರ್ಧ ಸ್ಥಾನಕ್ಕೆ ತಗುಲಿ ಹಿಂತಿರುಗಿ ಬರುವಂತೆ ಭಾಸವಾಗುವುದು. ಹಾಗೆ ಪ್ರಣವಾಕ್ಷರ-ವಲ್ಲಿ ಐಕ್ಯಹೊಂದಿ ಅಕ್ಷರಸ್ವರೂಪನಾದ ಯೋಗಿಯು ಓಂಕಾರಮಯನಾಗುವನು.

೮. ವಾಚಕ ಅಕ್ಷರವಾದ ಓಂಕಾರ, ವಾಚ್ಯವಾದ ಪರಮಾತ್ಮವಸ್ತುಗಳ ಧ್ಯಾನದಲ್ಲಿ ಮನಸ್ಸು ಏಕಾಗ್ರತೆಯಿಂದ ಇರಬೇಕು. ಪ್ರಣವಮಂತ್ರವೆಂಬ ಬಿಲ್ಲಿನಲ್ಲಿ ಅತ್ಮವೆಂಬ ಬಾಣವನ್ನು ಸಂಧಾನಮಾಡಿ ಬ್ರಹ್ಮವಸ್ತುವೆಂಬ ಗುರಿಯನ್ನು ಜಾಗರೂಕತೆಯಿಂದ ಭೇದಿಸಲು ಬಾಣಮಯನಾಗಿರಬೇಕು.

೯. ಮೂರು ಮಾತ್ರಾರೂಪವಾದ ಅವಯವಗಳಿಂದ ಕೂಡಿದ ಓಂಕಾರವು ಋಗ್ವೇದ-ಯಜುರ್ವೆದ-ಸಾಮವೇದವೆಂಬ ಮೂರು ವೇದಗಳ-ಸ್ವರ್ಗ-ಮರ್ತ್ಯ-ಪಾತಾಲವೆಂಬ ಮೂರು ಲೋಕಗಳ, ದಕ್ಷಿಣಾಗ್ನಿ-ಗಾರ್ಹಪತ್ಯ, ಆಹವನೀಯವೆಂಬ ಮೂರು ಅಗ್ನಿಗಳ ಮತ್ತು ಬ್ರಹ್ಮ-ವಿಷ್ಣು-ಈಶ್ವರರೆಂಬ ತ್ರಿಮೂರ್ತಿಗಳ ಸ್ವರೂಪವನ್ನು ಹೊಂದಿರುವುದು.

೧೦. ಓಂಕಾರದಲ್ಲಿ ಅರ್ಧಮಾತ್ರೆಯಿಂದ ಕೂಡಿರುವ ಮೂರು ಮಾತ್ರೆಗಳು ಪರಮಾರ್ಥವಾಗಿ ವೇದಾದಿ ಸ್ವರೂಪವನ್ನು ಹೊಂದಿದಂತೆ ತಿಳಿಯ-ಬೇಕು. ಅದರಲ್ಲಿ ಧ್ಯಾನಾಸಕ್ತನಾದ ಯೋಗಿಯು ತನ್ಮಯನಾಗಿ ಸರ್ವಾತ್ಮವಾದ ಓಂಕಾರದಲ್ಲಿ ಲಯವನ್ನು ಹೊಂದುವನು.

ಅಕಾರಸ್ತ್ವಥ ಭೂರ್ಲೋಕ ಉಕಾರಶ್ಚೋಚ್ಯತೇ ಭುವಃ ।
ಸವ್ಯಞ್ಜನೋ ಮಕಾರಶ್ಚ ಸ್ವರ್ಲೋಕಃ ಪರಿಕಲ್ಪ್ಯತೇ ॥೧೧॥

ವ್ಯಕ್ತಾ ತು ಪ್ರಥಮಾ ಮಾತ್ರಾ ದ್ವಿತೀಯಾವ್ಯಕ್ತಸಞ್ಜ್ಞಿತಾ ।
ಮಾತ್ರಾ ತೃತೀಯಾ ಚಿಚ್ಛಕ್ತಿರರ್ಧಮಾತ್ರಾ ಪರಂ ಪದಮ್ ॥೧೨॥

ಅನೇನೈವ ಕ್ರಮೇಣೈತಾ ವಿಜ್ಞೇಯಾ ಯೋಗಭೂಮಯಃ ।
ಓಮಿತ್ಯುಚ್ಚಾರಣಾತ್ಸರ್ವಂ ಗೃಹೀತಂ ಸದಸದ್ಭವೇತ್ ॥೧೩॥

ಹ್ರಸ್ವಾ ತು ಪ್ರಥಮಾ ಮಾತ್ರಾ ದ್ವಿತೀಯಾ ದೈರ್ಘ್ಯಸಂಯುತಾ ।
ತೃತೀಯಾ ಚ ಪ್ಲುತಾರ್ಧಾಖ್ಯಾ ವಚಸಃ ಸಾ ನ ಗೋಚರಾ ॥೧೪॥

---

೧೧. ಓಂಕಾರದಲ್ಲಿರುವ ಮೊದಲನೆಯ ಅಕಾರವು ಭೂಲೋಕವು. ಎರಡನೆಯದಾದ ಉಕಾರವು ಭುವರ್ಲೋಕವು ಮತ್ತು ವ್ಯಂಜನಾಕ್ಷರರೂಪವಾದ ಮಕಾರವು ಸ್ವರ್ಲೋಕವೆಂದು ಕಲ್ಪಿಸಲ್ಪಟ್ಟಿದೆ. ಹೀಗೆ ಮೂರು ಮಾತ್ರೆಗಳು ಮೂರು ಲೋಕಸ್ವರೂಪವಾಗಿವೆ.

೧೨. ಹಾಗು ಪ್ರಥಮಮಾತ್ರೆಯು ವ್ಯಕ್ತವೆಂದೂ, ದ್ವಿತೀಯ ಮಾತ್ರೆಯು ಅವ್ಯಕ್ತವೆಂದೂ ಮತ್ತು ತೃತೀಯ ಮಾತ್ರೆಯು ಚಿಚ್ಛಕ್ತಿಯೆಂದೂ ನಾಮಾಂಕನಗಳನ್ನು ಹೊಂದಿವೆ. ಅರ್ಧಮಾತ್ರೆಯು ಪರಮಪದಸ್ವರೂಪವೆಂದರಿಯಬೇಕು.

೧೩. ಯೋಗಭ್ಯಾಸದ ಬಗೆಬಗೆಯ ಭೂಮಿಕೆಯಂತಿರುವ ಈ ಮಾತ್ರೆಗಳನ್ನು ಈ ಕ್ರಮದಿಂದ ಅರಿತು ಧ್ಯಾನಿಸಬೇಕು. ಓಂಕಾರದ ಉಚ್ಚಾರಣೆಯಿಂದ ಸತ್-ಅಸತ್ ರೂಪವಾದ ನಿಖಿಲಪ್ರಪಂಚವೂ ಗ್ರಹಿಸಲ್ಪಟ್ಟಂತೆ ಆಗುವುದು.

೧೪. ಓಂಕಾರದ ಮೊದಲನೆಯ ಮಾತ್ರೆಯು ಹ್ರಸ್ವಸ್ವರೂಪವಾದುದು. ಎರಡನೆಯ ಮಾತ್ರೆಯು ದೀರ್ಘರೂಪವನ್ನು ಹೊಂದಿದೆ. ಮೂರನೆಯ ಮಾತ್ರೆಯು ಪ್ಲುತರೂಪವನ್ನು ಹೊಂದಿರುವುದು. ಕಡೆಯ ಅರ್ಧ ಮಾತ್ರೆಯು ವಾಗಿಂದ್ರಿಯಕ್ಕೆ ಗೋಚರವಾದುದಲ್ಲ.

ಇತ್ಯೇತದಕ್ಷರಂ ಬ್ರಹ್ಮ ಪರಮೋಙ್ಕಾರಸಞ್ಜ್ಞಿತಮ್ ॥೧೫॥

ಯಸ್ತು ವೇದ ನರಃ ಸಮ್ಯಕ್ತಥಾ ಧ್ಯಾಯತಿ ವಾ ಪುನಃ ।
ಸಂಸಾರಚಕ್ರಮುತ್ಸೃಜ್ಯ ತ್ಯಕ್ತತ್ರಿವಿಧಬನ್ಧನಃ ॥೧೬॥

ಪ್ರಾಪ್ನೋತಿ ಬ್ರಹ್ಮಣಿ ಲಯಂ ಪರಮೇ ಪರಮಾತ್ಮನಿ ।
ಅಕ್ಷೀಣಕರ್ಮಬನ್ಧಶ್ಚ ಜ್ಞಾತ್ವಾ ಮೃತ್ಯುಮರಿಷ್ಟತಃ ॥೧೭॥

ಉತ್ಕ್ರಾನ್ತಿಕಾಲೇ ಸಂಸ್ಮೃತ್ಯ ಪುನರ್ಯೋಗಿತ್ವಮೃಚ್ಛತಿ ॥೧೮॥

---

೧೫. ವ್ಯಕ್ತ-ಅವ್ಯಕ್ತ-ಚಿಚ್ಛಕ್ತಿಗಳ, ಹ್ರಸ್ವ-ದೀರ್ಘ-ಪ್ಲುತಗಳ ರೂಪ-ವನ್ನು ಹೊಂದಿದ ಮೂರು ಮಾತ್ರಾಮಯವಾದ ಓಂಕಾರವೆಂಬ ಸಂಜ್ಞೆಯಿಂದ ಅಂಕಿತವಾಗಿರುವ ಪರಬ್ರಹ್ಮವಸ್ತುವು ನಾಶವಿಲ್ಲದಿರುವುದರಿಂದಲೂ ಅಕ್ಷರದಿಂದ ವಾಚ್ಯವಾದುದರಿಂದಲೂ ಅಕ್ಷರವೆಂದು ಕರೆಯಲ್ಪಡುವುದು.

೧೬. ಯಾವ ಮಾನವನು ಬ್ರಹ್ಮವಸ್ತುವನ್ನು ಚನ್ನಾಗಿ ಅರಿಯು-ವನೋ; ಮತ್ತು ಹಾಗೆಯೆ ಧ್ಯಾನಮಾಡುವನೋ; ಅವನು ಸ್ಥೂಲ-ಸೂಕ್ಷ್ಮ-ಕಾರಣಗಳೆಂಬ ಮೂರು ಬಗೆಯ ಬಂಧನಗಳನ್ನು ಕಳೆದುಕೊಂಡು ಸಂಸಾರ-ಚಕ್ರದಿಂದ ಬಿಡುಗಡೆಯನ್ನು ಹೊಂದುವನು.

೧೭. ಹಾಗು ಆಗಾಮಿ-ಸಂಚಿತ-ಪ್ರಾರಬ್ಧವೆಂಬ ತ್ರಿವಿಧವಾದ ಕರ್ಮ-ಬಂಧನಗಳನ್ನು ಕ್ಷಯಿಸಿಕೊಂಡು ಯೋಗಿಯು ಪರಮಾತ್ಮನೆಂದು ಕರೆಯಲ್ಪಡುವ ಪರಬ್ರಹ್ಮವಸ್ತುವಿನಲ್ಲಿ ಲಯವನ್ನು ಹೊಂದುತ್ತಾನೆ.

೧೮. ಯೋಗಿಯು ಅಂತಕಾಲದಲ್ಲಿ ಮರಣಸೂಚಕವಾದ ಅರಿಷ್ಟ-ದಿಂದ ಮರಣವನ್ನು ತಿಳಿದುಕೊಂಡು ಉತ್ಕ್ರಾಂತಿಸಮಯದಲ್ಲಿ ಬ್ರಹ್ಮ-ವನ್ನು ಧ್ಯಾನಿಸಿ ಅದರಿಂದ ಪುನರ್ಜನ್ಮದಲ್ಲಿಯೂ ಯೋಗಿಜನ್ಮವನ್ನು ಹೊಂದುವನು.

ತಸ್ಮಾದಸಿದ್ಧಯೋಗೇನ ಸಿದ್ಧಯೋಗೇನ ವಾ ಪುನಃ ।
ಜ್ಞೇಯಾನ್ಯರಿಷ್ಟಾನಿ ಸದಾ ಯೇನೋತ್ಕ್ರಾನ್ತೌ ನ ಸೀದತಿ ॥೧೯॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಯೋಗಧರ್ಮೇ ಓಂಕಾರವರ್ಣನಂ ನಾಮ ಏಕೋನಚತ್ವಾರಿಂಶೋಽಧ್ಯಾಯಃ

---

೧೯. ಆದುದರಿಂದ ಯೋಗಸಿದ್ಧಿಯನ್ನು ಹೊಂದಿರುವವನಾಗಲಿ ಅಥವಾ ಹೊಂದದಿರುವವನಾಗಲಿ ಆದ ಯೋಗಿಯು ಮೃತ್ಯುಸೂಚಕವಾದ ಅರಿಷ್ಟಗಳನ್ನು ಯಾವಾಗಲೂ ತಿಳಿದಿರಬೇಕು. ಅರಿಷ್ಟಗಳ್ನು ತಿಳಿದುಕೊಂಡವನು ಉಕ್ರಾಂತಿ ಸಮಯದಲ್ಲಿ ದುಃಖಿಯಾಗುವುದಿಲ್ಲ.

ಮಾರ್ಕಂಡೇಯ ಮಹಾಪುರಾಣದಲ್ಲಿ ಮೂವತ್ತೊಂಭತ್ತನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಚತ್ವಾರಿಂಶೋಽಧ್ಯಾಯಃ

(ಮರಣಾರಿಷ್ಟನಿರೂಪಣಮ್)

ದತ್ತಾತ್ರೇಯ ಉವಾಚ :—

ಅರಿಷ್ಟಾನಿ ಮಹಾರಾಜ ಶೃಣು ವಕ್ಷ್ಯಾಮಿ ತಾನಿ ತೇ ।
ಯೇಷಾಮಾಲೋಕನಾನ್ಮೃತ್ಯುಂ ನಿಜಂ ಜಾನಾತಿ ಯೋಗವಿತ್ ॥೧॥

ದೇವಮಾರ್ಗಂ ಧ್ರುವಂ ಶುಕ್ರಂ ಸೋಮಚ್ಛಾಯಾಮರುನ್ಧತೀಮ್ ।
ಯೋ ನ ಪಶ್ಯೇನ್ನ ಜೀವೇತ್ಸ ನರಃ ಸಂವತ್ಸರಾತ್ಪರಮ್ ॥೨॥

ಅರಶ್ಮಿಬಿಮ್ಬಂ ಸೂರ್ಯಸ್ಯ ವಹ್ನಿಂ ಚೈವಾಂಶುಮಾಲಿನಮ್ ।
ದೃಷ್ಟ್ವೈಕಾದಶಮಾಸೇಭ್ಯೋ ನರೋ ನೋರ್ಧ್ವಂ ತು ಜೀವತಿ ॥೩॥

ನಲವತ್ತನೆಯ ಅಧ್ಯಾಯ

ದತ್ತಾತ್ರೇಯ ಮುನಿಯು ಇಂತು ಹೇಳಿದನು :—

೧. ಯೋಗತತ್ತ್ವವನ್ನು ಅರಿತ ಯೋಗಿಯು ಯಾವ ಶಕುನಗಳನ್ನು ನೋಡಿದ ಮಾತ್ರದಿಂದ ತನ್ನ ಮುಂದಿನ ಮೃತ್ಯುವನ್ನು ಅರಿಯುವನೋ ಅಂತಹ ಅರಿಷ್ಟಗಳನ್ನು ಹೇಳುವೆನು, ಮಹಾರಾಜನೆ! ನೀನು ಅವುಗಳನ್ನು ಕೇಳು.

೨. ಯಾವ ಮಾನವನು ದೇವಮಾರ್ಗ, ಧ್ರುವ, ಶುಕ್ರಗ್ರಹ, ಚಂದ್ರಬಿಂಬದ ಛಾಯೆ ಮತ್ತು ಅರುಂಧತೀನಕ್ಷತ್ರ—ಇವುಗಳನ್ನು ಕಾಣುವುದಿಲ್ಲವೋ ಅವನು ಒಂದು ಸಂವತ್ಸರದ ಮೇಲೆ ಬದುಕುವುದಿಲ್ಲ.

೩. ಹಾಗು ಕಿರಣಗಳಿಲ್ಲದ ಹಾಗೆ ಸೂರ್ಯನ ಬಿಂಬವನ್ನೂ ಕಿರಣಮಾಲೆಯಿಂದ ಕೂಡಿರುವ ಹಾಗೆ ಅಗ್ನಿಯನ್ನೂ ನೋಡಿದ ಮಾನವನು ಹನ್ನೊಂದು ಮಾಸಗಳಿಗಿಂತ ಹೆಚ್ಚಾಗಿ ಬದುಕುವುದಿಲ್ಲ.

ವಾನ್ತೇ ಮೂತ್ರಪುರೀಷೇ ಚ ಯಃ ಸ್ವರ್ಣಂ ರಜತಂ ತಥಾ ।
ಪ್ರತ್ಯಕ್ಷಂ ಕುರುತೇ ಸ್ವಪ್ನೇ ಜೀವೇತ್ಸ ದಶಮಾಸಿಕಮ್ ॥೪॥

ದೃಷ್ಟ್ವಾ ಪ್ರೇತಪಿಶಾಚಾದೀನ್ಗನ್ಧರ್ವನಗರಾಣಿ ಚ ।
ಸುವರ್ಣವರ್ಣಾನ್ವೃಕ್ಷಾಂಶ್ಚ ನವಮಾಸಾನ್ ಸ ಜೀವತಿ ॥೫॥

ಸ್ಥೂಲಃ ಕೃಶಃ ಕೃಶಃ ಸ್ಥೂಲೋ ಯೋಽಕಸ್ಮಾದೇವ ಜಾಯತೇ ।
ಪ್ರಕೃತೇಶ್ಚ ನಿವರ್ತೇತ ತಸ್ಯಾಯುಶ್ಚಾಷ್ಟಮಾಸಿಕಮ್ ॥೬॥

ಖಣ್ಡಂ ಯಸ್ಯ ಪದಂ ಪಾರ್ಷ್ಣ್ಯಾಂ ಪಾದಸ್ಯಾಗ್ರೇ ಚ ವಾ ಭವೇತ್ ।
ಪಾಂಶುಕರ್ದಮಯೋರ್ಮಧ್ಯೇ ಸಪ್ತಮಾಸಾನ್ ಸ ಜೀವತಿ ॥೭॥

---

೪. ಮತ್ತು ಯಾವ ಮಾನವನು ವಾಂತಿ-ಮೂತ್ರ-ಮಲಗಳಲ್ಲಿ ಚಿನ್ನ ಅಥವಾ ಬೆಳ್ಳಿಯನ್ನು ಕನಸ್ಸಿನಲ್ಲಿ ಪ್ರತ್ಯಕ್ಷವಾಗಿ ಕಾಣುವನೋ ಅವನು ಹತ್ತು ಮಾಸಗಳ ವರೆಗೆ ಮಾತ್ರ ಬದುಕುವನು.

೫. ಹಾಗು ಪ್ರೇತ–ಪಿಶಾಚ ಮುಂತಾದುವುಗಳನ್ನು, ಗಂಧರ್ವನಗರ-ಗಳನ್ನು, ಮತ್ತು ಚಿನ್ನದ ಬಣ್ಣದಿಂದ ಶೋಭಿತವಾದ ವೃಕ್ಷಗಳನ್ನು ಕಂಡವನು ಒಂಭತ್ತು ತಿಂಗಳುಗಳ ವರೆಗೆ ಮಾತ್ರವೇ ಜೀವಿಸುವನು.

೬. ಮತ್ತು ಯಾವ ಮಾನವನು ದಪ್ಪವಾಗಿದ್ದವನು ಅಕಸ್ಮಾತ್ತಾಗಿ ಕೃಶನೂ ಕೃಶನಾಗಿದ್ದವನು ಅಕಸ್ಮಾತ್ತಾಗಿ ಸ್ಥೂಲನೂ ಆಗಿ ಮತ್ತು ಸ್ವಾಭಾವಿಕ-ವಾದ ರೀತಿಯಿಂದ ಬದಲಾಯಿಸಿವನೋ ಅವನು ಎಂಟು ತಿಂಗಳು ಮಾತ್ರ ಆಯುಷ್ಯವನ್ನು ಹೊಂದಿರುವನು.

೭. ಯಾವ ಮಾನವನಿಗೆ ಧೂಳಿ-ಅಥವಾ ಕೆಸರಿನಲ್ಲಿ ಹೆಜ್ಜೆಯಿಟ್ಟಾಗ ಹಿಮ್ಮಡಿಯ ಗುರುತು ಮುಂದುಗಡೆಯೂ ಮುಂಗಾಲಿನ ಗುರುತು ಹಿಂದು-ಗಡೆಯೂ ಕಾಣಿಸುವುದೋ ಅವನು ಅಲ್ಲಿಂದ ಮುಂದೆ ಏಳು ತಿಂಗಳು ಮಾತ್ರ ಬದುಕಿರುವನು.

ಗೃಧ್ರಃ ಕಪೋತಃ ಕಾಕೋಲೋ ವಾಯಸೋ ವಾಪಿ ಮೂರ್ಧನಿ ।
ಕ್ರವ್ಯಾದೋ ವಾ ಖಗೋ ನೀಲಃ ಷಣ್ಮಾಸಾಯುಃಪ್ರದರ್ಶಕಃ ॥೮॥

ಜನ್ಯತೇ ಕಾಕಪಙ್ಕ್ತಿಭಿಃ ಪಾಂಸುವರ್ಷೇಣ ವಾ ನರಃ ।
ಸ್ವಾಂ ಛಾಯಾಮನ್ಯಥಾ ದೃಷ್ಟ್ವಾ ಚತುಃ ಪಞ್ಚ ಸ ಜೀವತಿ ॥೯॥

ಅನಭ್ರೇ ವಿದ್ಯುತಂ ದೃಷ್ಟ್ವಾ ದಕ್ಷಿಣಾಂ ದಿಶಮಾಶ್ರಿತಾಮ್ ।
ರಾತ್ರಾವಿನ್ದ್ರಧನುಶ್ಚಾಪಿ ಜೀವಿತಂ ಹಿ ತ್ರಿಮಾಸಿಕಮ್ ॥೧೦॥

ಘೃತೇ ತೈಲೇ ತಥಾದರ್ಶೇ ತೋಯೇ ವಾ ನಾತ್ಮನಸ್ತನುಮ್ ।
ಯಃ ಪಶ್ಯೇದಶಿರಸ್ಕಾಂ ವಾ ಮಾಸಾದೂರ್ಧ್ವಂ ನ ಜೀವತಿ ॥೧೧॥

---

೮. ಮಾನವನ ತಲೆಯಲ್ಲಿ ಗಿಡಗ, ಪಾರಿವಾಳ, ರಣಹದ್ದು, ಕಾಗೆ ಅಥವಾ ಮಾಂಸವನ್ನು ತಿನ್ನುವ ಇನ್ನಾವುದೋ ಕಪ್ಪುಬಣ್ಣದ ಹಕ್ಕಿಯು ಕುಳಿತುಕೊಂಡರೆ ಆರು ತಿಂಗಳು ಮಾತ್ರ ಉಳಿದ ಆಯುಷ್ಯವನ್ನು ಸೂಚಿಸುವುದು.

೯. ಮಾನವನು ಕಾಗೆಗಳ ಗುಂಪಿನಿಂದ ಅಥವಾ ಧೂಳಿಯ ಮಳೆಯಿಂದ ಪೀಡಿಸಲ್ಪಟ್ಟರೆ ಮತ್ತು ತನ್ನ ಛಾಯೆಯನ್ನು ತಲೆಕೆಳಗಾಗಿ ಕಂಡರೆ ನಾಲ್ಕು ಅಥವಾ ಐದು ತಿಂಗಳು ಮಾತ್ರ ಬದುಕುವನೆಂದು ತಿಳಿಯಬೇಕು.

೧೦. ಮೋಡವಿಲ್ಲದ ಸಮಯದಲ್ಲಿ ದಕ್ಷಿಣದಿಕ್ಕನ್ನು ಆಶ್ರಯಿಸಿದ ಮಿಂಚನ್ನು ನೋಡಲಿ ಅಥವಾ ರಾತ್ರಿವೇಳೆಯಲ್ಲಿ ಕಾಮನಬಿಲ್ಲನ್ನು ನೋಡಲಿ ಅವನಿಗೆ ಮೂರು ತಿಂಗಳು ಮಾತ್ರ ಆಯುಷ್ಯವೆಂದು ತಿಳಿಯಬೇಕು.

೧೧. ಯಾವ ಮಾನವನು ತುಪ್ಪ, ಎಣ್ಣೆ, ಕನ್ನಡಿ ಅಥವಾ ನೀರಿನಲ್ಲಿ ತನ್ನ ಪ್ರತಿಬಿಂಬವನ್ನು ಕಾಣುವುದಿಲ್ಲವೋ ಮತ್ತು ತಲೆಯಿಲ್ಲದ ಕಬಂಧದಂತಿರುವ ಪ್ರತಿಬಿಂಬವನ್ನು ಕಾಣುವನೋ ಅವನು ಒಂದು ಮಾಸಕ್ಕಿಂತ ಹೆಚ್ಚಾಗಿ ಬದುಕುವುದಿಲ್ಲ.

ಯಸ್ಯ ಬಸ್ತಸಮೋ ಗನ್ಧೋ ಗಾತ್ರೇ ಶವಸಮೋಽಪಿ ವಾ ।
ತಸ್ಯಾರ್ಧಮಾಸಕಂ ಜ್ಞೇಯಂ ಯೋಗಿನೋ ನೃಪ ಜೀವಿತಮ್॥೧೨॥

ಯಸ್ಯ ವೈ ಸ್ನಾತಮಾತ್ರಸ್ಯ ಹೃತ್ಪಾದಮುಪಶುಷ್ಯತೇ ।
ಪಿಬತಶ್ಚ ಜಲಂ ಶೋಷೋ ದಶಾಹಂ ಸೋಽಪಿ ಜೀವತಿ ॥೧೩॥

ಸಂಭಿನ್ನೋ ಮಾರುತೋಯಸ್ಯ ಮರ್ಮಸ್ಥಾನಾನಿ ಕೃನ್ತತಿ ।
ಹೃಷ್ಯತೇ ನಾಮ್ಬುಸಂಸ್ಪರ್ಶಾತ್ತಸ್ಯ ಮೃತ್ಯುರುಪಸ್ಥಿತಃ ॥೧೪॥

ಋಕ್ಷವಾನರಯಾನಸ್ಥೋ ಗಾಯನ್ಯೋ ದಕ್ಷಿಣಾಂ ದಿಶಮ್ ।
ಸ್ವಪ್ನೇ ಪ್ರಯಾತಿ ತಸ್ಯಾಪಿ ನ ಮೃತ್ಯುಃ ಕಾಲಮಿಚ್ಛತಿ ॥೧೫॥

---

೧೨. ಮಹಾರಾಜನೆ! ಯಾವ ಯೋಗಿ ಮಾನವನಿಗೆ ದೇಹದಲ್ಲಿ ಆಡಿನ ದೇಹದಂತೆ ಅಥವಾ ಶವದಂತೆ ದುರ್ಗಂಧವು ಉಂಟಾಗುವುದೋ ಅವನಿಗೆ ಹದಿನೈದು ದಿನಗಳು ಮಾತ್ರ ಜೀವಿತವಿರುವುದೆಂದು ತಿಳಿಯಬೇಕು.

೧೩. ಯಾವ ಮಾನವನಿಗೆ ಸ್ನಾನಮಾಡಿದ ಒಡನೆಯೇ ಹೃದಯ ಮತ್ತು ಕಾಲುಗಳು ಒಣಗಿ ಹೋಗುವುವೋ ಮತ್ತು ನೀರನ್ನು ಕುಡಿಯುತ್ತಿರುವ ಹಾಗೆ ಬಾಯಿಯು ಒಣಗಿದಂತಾಗುವುದೋ ಅವನು ಹತ್ತು ದಿನಗಳು ಮಾತ್ರ ಬದುಕಿರುವನು.

೧೪. ಯಾವ ಮಾನವನಿಗೆ ಪ್ರಾಣವಾಯುವು ಕೆರಳಿದಂತೆ ಆಗಿ ಮರ್ಮ-ಸ್ಥಾನಗಳನ್ನು ಭೇದಿಸುವುದೋ ಹಾಗು ನೀರನ್ನು ಹಾಕಿ ತಟ್ಟಿದರೂ,ನೀರನ್ನು ಕುಡಿಸಿದರೂ ಹರ್ಷವಾಗುವುದಿಲ್ಲವೋ ಅವನಿಗೆ ಕೂಡಲೆ ಮೃತ್ಯುವು ಬರುವುದೆಂದು ತಿಳಿಯಬೇಕು.

೧೫. ಯಾವ ಮಾನವನು ಕರಡಿ, ಕೋತಿ—ಮುಂತಾದ ವಾಹನಗಳನ್ನು ಏರಿ ಹಾಡುತ್ತ ದಕ್ಷಿಣದಿಕ್ಕಿಗೆ ಹೋದಂತೆ ಕನಸ್ಸಿನಲ್ಲಿ ತನ್ನನ್ನು ಕಾಣುವನೋ ಅವನಿಗೆ ಮೃತ್ಯುವು ಕಾಲವಿಲಂಬವಿಲ್ಲದಂತೆ ಬರುವುದೆಂದು ಭಾವಿಸಬೇಕು.

ರಕ್ತಕೃಷ್ಣಾಮ್ಬರಧರಾ ಗಾಯನ್ತೀ ಹಸತೀ ಚ ಯಮ್ ।
ದಕ್ಷಿಣಾಶಾಂ ನಯೇನ್ನಾರೀ ಸ್ವಪ್ನೇ ಸೋಽಪಿ ನ ಜೀವತಿ ॥೧೬॥

ನಗ್ನಂ ಕ್ಷಪಣಕಂ ಸ್ವಪ್ನೇ ಹಸಮಾನಂ ಮಹಾಬಲಮ್ ।
ಏವಂ ಸಂವೀಕ್ಷ್ಯ ವಲ್ಗನ್ತಂ ವಿದ್ಯಾನ್ಮೃತ್ಯುಮುಪಸ್ಥಿತಮ್ ॥೧೭॥

ಆಮಸ್ತಕತಲಾದ್ಯಸ್ತು ನಿಮಗ್ನಂ ಪಙ್ಕಸಾಗರೇ ।
ಸ್ವಪ್ನೇ ಪಶ್ಯತ್ಯಥಾತ್ಮಾನಂ ಸ ಸದ್ಯೋ ಮ್ರಿಯತೇ ನರಃ ॥೧೮॥

ಕೇಶಾಙ್ಗಾರಾಂಸ್ತಥಾ ಭಸ್ಮ ಭುಜಙ್ಗಾನ್ನಿರ್ಜಲಾಂ ನದೀಮ್ ।
ದೃಷ್ಟ್ವಾ ಸ್ವಪ್ನೇ ದಶಾಹಾತ್ತು ಮೃತ್ಯುರೇಕಾದಶೇ ದಿನೇ ॥೧೯॥

ಕರಾಲೈರ್ವಿಕಟೈಃ ಕೃಷ್ಣೈಃ ಪುರುಷೈರುದ್ಯತಾಯುಧೈಃ ।
ಪಾಷಾಣೈಸ್ತಾಡಿತಃ ಸ್ವಪ್ನೇ ಸದ್ಯೋ ಮೃತ್ಯುಂ ಲಭೇನ್ನರಃ ॥೨೦॥

---

೧೬. ಕೆಂಪು ಅಥವಾ ಕಪ್ಪು ಸೀರೆಯನ್ನುಟ್ಟಿರುವ ಮತ್ತು ನಗುತ್ತಿರುವ ಒಬ್ಬಳು ನಾರಿಯು ಯಾವ ಮಾನವನನ್ನು ದಕ್ಷಿಣದಿಕ್ಕಿಗೆ ಕರೆದೊಯ್ಯುವಂತೆ ಕನಸ್ಸಿನಲ್ಲಿ ತೋರುವುದೋ ಅವನು ಮುಂದೆ ಬದುಕುವುದಿಲ್ಲ.

೧೭. ದಿಗಂಬರ, ಜೈನ, ಬೌದ್ಧಸನ್ಯಾಸಿ ಅಥವಾ ಮಹಾಬಲಿಷ್ಠನಾದ ವ್ಯಕ್ತಿಯು ನಗುತ್ತ ಕುಣಿದಾಡಿ ಎದುರು ಬಂದಂತೆ ಸ್ವಪ್ನದಲ್ಲಿ ಕಂಡಿರುವ ಮಾನವನಿಗೆ ಮೃತ್ಯುವು ಸಮೀಪ ಬಂದಿದೆಯೆಂದು ಅರಿಯಬೇಕು.

೧೮. ಯಾವ ಮಾನವನು ತಲೆಯವರೆಗೆ ತನ್ನ ದೇಹವನ್ನು ಸಮುದ್ರದಂತೆ ಅಪಾರವಾದ ಕೆಸರಿನ ರಾಶಿಯಲ್ಲಿ ಹೂತು ಹೋದಂತೆ ಸ್ವಪ್ನದಲ್ಲಿ ಕಾಣುವನೋ ಅವನು ಕೂಡಲೇ ಮರಣವನ್ನು ಹೊಂದುವನು.

೧೯. ಸ್ವಪ್ನದಲ್ಲಿ ಕೂದಲು, ಬೆಂಕಿಯ ಕೆಂಡ, ಬೂದಿ, ಸರ್ಪ ಅಥವಾ ನೀರಿಲ್ಲದ ನದಿ—ಇವುಗಳನ್ನು ಕಂಡವನಿಗೆ ಹತ್ತುದಿನಗಳು ಕಳೆದು ಹನ್ನೊಂದನೆಯ ದಿನದಲ್ಲಿ ಮೃತ್ಯುವು ಬರುವುದೆಂದು ತಿಳಿಯಬೇಕು.

೨೦. ಯಾವ ಮಾನವನು ಭಯಂಕರಾಕಾರವುಳ್ಳವರೂ ವಿಕಾರರೂಪವಂತರೂ ಆಯುಧವನ್ನು ಎತ್ತಿ ಹಿಡಿದವರೂ ಮತ್ತು ಕಪ್ಪುಬಣ್ಣವುಳ್ಳವರೂ ಆದ ಪುರುಷರಿಂದ ಸ್ವಪ್ನದಲ್ಲಿ ಕಲ್ಲಿನಿಂದ ಹೊಡೆಯಲ್ಪಡುವನೋ ಅವನು ಸದ್ಯೋಮೃತ್ಯುವನ್ನು ಹೊಂದುವನು.

ಸೂರ್ಯೋದಯೇ ಯಸ್ಯ ಶಿವಾ ಕ್ರೋಶನ್ತೀ ಯಾತಿ ಸಮ್ಮುಖಮ್ ।
ವಿಪರೀತಂ ಪರೀತಂ ವಾ ಸ ಸದ್ಯೋ ಮೃತ್ಯುಮೃಚ್ಛತಿ ॥೨೧॥

ಯಸ್ಯ ವೈ ಭುಕ್ತಮಾತ್ರಸ್ಯ ಹೃದಯಂ ಬಾಧ್ಯತೇ ಕ್ಷುಧಾ ।
ಜಾಯತೇ ದನ್ತಘರ್ಷಶ್ಚ ಸ ಗತಾಯುರ್ನ ಸಂಶಯಃ ॥೨೨॥

ದೀಪಗನ್ಧಂ ನ ಯೋ ವೇತ್ತಿ ತ್ರಸ್ಯತ್ಯಹ್ನಿ ತಥಾ ನಿಶಿ ।
ನಾತ್ಮಾನಂ ಪರನೇತ್ರಸ್ಥಂ ವೀಕ್ಷತೇ ನ ಸ ಜೀವತಿ ॥೨೩॥

ಶಕ್ರಾಯುಧಂ ಚಾರ್ಧರಾತ್ರೇ ದಿವಾ ಗ್ರಹಗಣಾಂಸ್ತಥಾ ।
ದೃಷ್ಟ್ವಾ ಮನ್ಯೇತ ಸಂಕ್ಷೀಣಮಾತ್ಮಜೀವಿತಮಾತ್ಮವಿತ್ ॥೨೪॥

---

೨೧. ಸೂರ್ಯನು ಉದಯಿಸುತ್ತಿರುವ ಸಮಯದಲ್ಲಿ ಯಾವ ಮಾನವನಿಗೆ ಎದುರಾಗಿ ಕೂಗುತ್ತಿದ್ದ ಹೆಣ್ಣು ನರಿಯು ಎಡ ಅಥವಾ ಬಲಭಾಗಗಳಲ್ಲಿ ಬರುವುದೋ ಅವನು ಕೂಡಲೇ ಮರಣವನ್ನು ಹೊಂದುವನು.

೨೨. ಯಾವ ಯೊಗಿ ಮಾನವನಿಗೆ ಭೋಜನವಾದ ಕೂಡಲೆ ಮತ್ತೆ ಹಸಿವಿನಿಂದ ಹೃದಯವು ಬಾಧಿಸಲ್ಪಡುವುದೋ ಮತ್ತು ಹಲ್ಲುಗಳ ಎರಡು ಸಾಲು ಘರ್ಷಣೆಯಾಗುವುದೋ ಅವನು ಆಯುಷ್ಯ ಮುಗಿದವನೇ ಆಗಿರುವನು, ಇದರಲ್ಲಿ ಸಂಶಯವಿಲ್ಲ.

೨೩. ಯಾವ ಮಾನವನು ದೀಪವನ್ನು ಕಾಣುವುದಿಲ್ಲವೋ, ಗಂಧವನ್ನು ತಿಳಿಯಲಾರನೋ ಹಗಲು-ರಾತ್ರಿ ವೇಳೆಗಳಲ್ಲಿ ನಿಷ್ಕಾರಣವಾಗಿ ಭಯಪಡುವನೋ ಮತ್ತು ಪರರ ಕಣ್ಣಿನಲ್ಲಿ ತನ್ನ ಛಾಯೆಯನ್ನು ಕಾಣುವುದಿಲ್ಲವೋ ಅವನು ಮುಂದೆ ಬದುಕುವುದಿಲ್ಲ.

೨೪. ಅರ್ಧರಾತ್ರಿ ಸಮಯದಲ್ಲಿ ಕಾಮನಬಿಲ್ಲನ್ನೂ ಹಾಗು ಪಗಲು ಹೊತ್ತಿನಲ್ಲಿ ಗ್ರಹಗಳ ಗುಂಪನ್ನೂ ನೋಡಿದ ಆತ್ಮಜ್ಞಾನಿಯಾದ ಯೋಗಿಯು ತನ್ನ ಆಯುಷ್ಯವು ಕ್ಷೀಣವಾಗಿದೆಯೆಂಬುದನ್ನು ಅರಿಯಬೇಕು.

ನಾಸಿಕಾ ವಕ್ರತಾಮೇತಿ ಕರ್ಣಯೋರ್ನಮನೋನ್ನತೀ ।
ನೇತ್ರಂ ಚ ವಾಮಂ ಸ್ರವತಿ ಯಸ್ಯ ತಸ್ಯಾಯುರುದ್ಗತಮ್ ॥೨೫॥

ಆರಕ್ತತಾಮೇತಿ ಮುಖಂ ಜಿಹ್ವಾ ವಾ ಶ್ಯಾಮತಾಂ ಯದಾ ।
ತದಾ ಪ್ರಾಜ್ಞೋ ವಿಜಾನೀಯಾನ್ಮೃತ್ಯುಮಾಸನ್ನಮಾತ್ಮನಃ ॥೨೬॥

ಉಷ್ಟ್ರರಾಸಭಯಾನೇನ ಯಃ ಸ್ವಪ್ನೇ ದಕ್ಷಿಣಾಂ ದಿಶಮ್ ।
ಪ್ರಯಾತಿ ತಂ ಚ ಜಾನೀಯಾತ್ಸದ್ಯೋ ಮೃತ್ಯುಂ ನರೇಶ್ವರ ॥೨೭॥

ಪಿಧಾಯ ಕರ್ಣೌ ನಿರ್ಘೋಷಂ ನ ಶೃಣೋತ್ಯಾತ್ಮಸಂಭವಮ್ ।
ನಶ್ಯತೇ ಚಕ್ಷುಷೋರ್ಜ್ಯೋತಿರ್ಯಸ್ಯ ಸೋಽಪಿ ನ ಜೀವತಿ ॥೨೮॥

---

೨೫. ಯಾರಿಗೆ ಮೂಗು ತನ್ನ ನಿಜಸ್ಥಿತಿಯನ್ನು ಬಿಟ್ಟು ಸೊಟ್ಟವಾಗುವುದೋ ಕಿವಿಗಳು ಬಗ್ಗಿ ಅಥವಾ ಎತ್ತರವಾಗಿ ಆಗುವುವೋ ಮತ್ತು ಎಡಭಾಗದ ಕಣ್ಣು ನೀರುಸುರಿಸುವುದೋ ಅವನ ಆಯುಷ್ಯವು ಕಳೆದಿರುವುದು ಎಂದರಿಯಬೇಕು.

೨೬. ಮುಖವು ಕೆಂಪುಬಣ್ಣವನ್ನು ಹೊಂದಲಿ, ಅಥವಾ ನಾಲಿಗೆಯು ಕಪ್ಪುಬಣ್ಣವನ್ನು ಪೊಂದಲಿ, ಆಗ ಪ್ರಾಜ್ಞನಾದ ಯೋಗಿಯು ತನಗೆ ಮೃತ್ಯುವು ಸಮೀಪಿಸಿದಂತೆ ತಿಳಿಯಬೇಕು.

೨೭. ಅಲರ್ಕರಾಜನೆ! ಯಾವ ಮಾನವನು ಸ್ವಪ್ನದಲ್ಲಿ ಒಂಟೆ ಅಥವಾ ಕತ್ತೆಯ ವಾಹನವನ್ನು ಏರಿಕೊಂಡು ದಕ್ಷಿಣದಿಕ್ಕಿಗೆ ಹೋಗುವನೋ ಅವನಿಗೆ ಸದ್ಯೋಮೃತ್ಯುವು ಉಂಟಾಗುವುದೆಂದು ಅರಿಯಬೇಕು.

೨೮. ಯಾವ ಮಾನವನು ಕಿವಿಯನ್ನು ಮುಚ್ಚಿಕೊಂಡಾಗ ದೇಹದೊಳಗೆ ಆಗುವ ಶಬ್ದವನ್ನು ಕೇಳುವುದಿಲ್ಲವೋ ಹಾಗು ಕಣ್ಣುಗಳ ಜ್ಯೋತಿಯು ಅಡಗಿಹೋಗುವುದೋ ಅವನು ಮುಂದೆ ಬದುಕುವುದಿಲ್ಲ.

ಪತತೋ ಯಸ್ಯ ವೈ ಗರ್ತೇ ಸ್ವಪ್ನೇ ದ್ವಾರಂ ಪಿಧೀಯತೇ ।
ನ ಚೋತ್ತಿಷ್ಠತಿ ಯಃ ಶ್ವಭ್ರಾತ್ತದನ್ತಂ ತಸ್ಯ ಜೀವಿತವ್ ॥೨೯॥

ಊರ್ಧ್ವಾ ಚ ದೃಷ್ಟಿರ್ನ ಚ ಸಂಪ್ರತಿಷ್ಠಾ
ರಕ್ತಾ ಪುನಃ ಸಂಪರಿವರ್ತಮಾನಾ ।
ಮುಖಸ್ಯ ಚೋಷ್ಮಾ ಶಿಶಿರಾ ಚ ನಾಭಿಃ
ಶಂಸನ್ತಿ ಪುಂಸಾಮಪರಂ ಶರೀರಮ್ ॥೩೦॥

ಸ್ವಪ್ನೇಽಗ್ನಿಂ ಪ್ರವಿಶೇದ್ಯಸ್ತು ನ ಚ ನಿಷ್ಕ್ರಮತೇ ಪುನಃ ।
ಜಲಪ್ರವೇಶಾದಪಿ ವಾ ತದನ್ತಂ ತಸ್ಯ ಜೀವಿತಮ್ ॥೩೧॥

ಯಶ್ಚಾಭಿಹನ್ಯತೇ ದುಷ್ಟೈರ್ಭೂತೈ ರಾತ್ರಾವಥೋ ದಿವಾ ।
ಸ ಮೃತ್ಯುಂ ಸಪ್ತರಾತ್ರಾನ್ತೇ ನರಃ ಪ್ರಾಪ್ನೋತ್ಯಸಂಶಯಮ್ ॥೩೨॥

---

೨೯. ಯಾವ ಮಾನವನು ಸ್ವಪ್ನದಲ್ಲಿ ಒಂದು ಹಳ್ಳದಲ್ಲಿ ಬೀಳುತ್ತಿರುವಾಗ ಮೇಲಿನ ದ್ವಾರವು ಮುಚ್ಚಿದಂತೆ ಕಾಣುವನೋ ಮತ್ತು ಹಳ್ಳದಿಂದ ಮೇಲಕ್ಕೆ ಏಳುವುದನ್ನು ಕಾಣುವುದಿಲ್ಲವೋ ಅವನಿಗೆ ಆಗಲೇ ಜೀವಿತಾವಸಾನವೆಂದರಿಯಬೇಕು.

೩೦. ಯಾವ ಸಮಯದಲ್ಲಿ ಮಾನವನಿಗೆ ದೃಷ್ಟಿಯು ಮೇಲಕ್ಕೆ ಸೆಳೆಯಲ್ಪಡುವುದೋ ಒಂದು ಕಡೆಯಲ್ಲಿ ಸ್ಥಿರವಾಗಿ ನಿಲ್ಲುವುದಿಲ್ಲವೋ ಮತ್ತು ಕೆಂಪಾಗಿ ಅಲ್ಲಲ್ಲಿ ಹೊರಳಾಡುವಂತೆ ಕಾಣುವುದೋ ಹಾಗು ಮುಖವು ಬಿಸಿಯಾಗಿಯೂ ನಾಭಿಯು ತಣ್ಣಗಾಗಿಯೂ ಇರುವುದೋ ಆಗ ಅಂತಹ ಮಾನವನಿಗೆ ಮತ್ತೊಂದು ದೇಹದ ಪ್ರಾಪ್ತಿಯಾಗುವುದೆಂದು ಪ್ರಾಜ್ಞರು ಹೇಳುವರು.

೩೧. ಯಾವ ಮಾನವನು ಸ್ವಪ್ನದಲ್ಲಿ ಅಗ್ನಿಯನ್ನು ಪ್ರವೇಶಿಸುವನೋ ಮತ್ತೆ ಹೊರಕ್ಕೆ ಬರುವುದಿಲ್ಲವೋ ಹಾಗು ಜಲದ ಒಳಗೆ ಪ್ರವೇಶಿಸಿ ಅಲ್ಲಿಂದ ಹೊರಗೆ ಬರುವುದಿಲ್ಲವೋ ಅವನಿಗೆ ಅದೇ ಆಯುಷ್ಯಾವಧಿಯೆಂದು ಭಾವಿಸಬೇಕು.

೩೨. ಯಾವ ಮಾನವನು ಹಗಲು ಅಥವಾ ರಾತ್ರಿವೇಳೆಗಳಲ್ಲಿ ದುಷ್ಟಭೂತಗಳಿಂದ ಹೊಡೆಯಲ್ಪಡುವನೋ ಅವನು ಏಳು ದಿನಗಳೊಳಗಾಗಿ ನಿಸ್ಸಂಶಯವಾಗಿ ಮೃತ್ಯುವನ್ನು ಹೊಂದುವನು.

ಸ್ವವಸ್ತ್ರಮಮಲಂ ಶುಕ್ಲಂ ರಕ್ತಂ ಪಶ್ಯತ್ಯಥೋ ಸಿತಮ್ ।
ಯಃ ಪುಮಾನ್ ಮೃತ್ಯುಮಾಸನ್ನಂ ತಸ್ಯಾಪಿ ಹಿ ವಿನಿರ್ದಿಶೇತ್॥೩೩॥

ಸ್ವಭಾವವೈಪರೀತ್ಯಂ ತು ಪ್ರಕೃತೇಶ್ಚ ವಿಪರ್ಯಯಃ ।
ಕಥಯನ್ತಿ ಮನುಷ್ಯಾಣಾಂ ಸಮಾಸನ್ನೌ ಯಮಾನ್ತಕೌ ॥೩೪॥

ಯೋಽಷಾಂ ವಿನೀತಃ ಸತತಂ ಯೇಽಸ್ಯ ಪೂಜ್ಯತಮಾ ಮತಾಃ ।
ತಾನೇವ ಚಾವಜಾನಾತಿ ತಾನೇವ ಚ ವಿನಿನ್ದತಿ ॥೩೫॥

ದೇವಾನ್ನಾರ್ಚಯತೇ ವೃದ್ಧಾನ್ಗುರೂನ್ವಿಪ್ರಾಂಶ್ಚ ನಿನ್ದತಿ ।
ಮಾತಾಪಿತ್ರೋರ್ನ ಸತ್ಕಾರಂ ಜಾಮಾತೄಣಾಂ ಕರೋತಿ ಚ ॥೩೬॥

---

೩೩. ಯಾವ ಮಾನವನು ತಾನು ಉಟ್ಟುಕೊಂಡಿರುವ ಬಿಳಿಯ ಬಟ್ಟೆಯನ್ನು ಕೆಂಪು ಅಥವಾ ಕಪ್ಪುಬಟ್ಟೆಯನ್ನಾಗಿ ಭಾವಿಸುವನೋ ಆ ಮಾನವನಿಗೆ ಮೃತ್ಯುವು ಸಮೀಪಿಸಿದೆಯೆಂದು ಸೂಚಿಸಬಹುದು.

೩೪. ಯಾವ ಮಾನವನಿಗೆ ಆಕಸ್ಮಿಕವಾಗಿ ಸ್ವಭಾವವು ಬದಲಾಯಿಸುವುದೋ ಹಾಗು ಪ್ರಕೃತಿಯು ಬೇರೊಂದು ವಿಧವಾಗುವುದೋ ಅವನಿಗೆ ಯಮಾಂತಕರೆಂಬ ಮರಣಾಭಿಮಾನಿದೇವತೆಗಳು ಸಮೀಪಕ್ಕೆ ಬಂದಿರುವರೆಂದು ಪ್ರಾಜ್ಞರು ಹೇಳುವರು.

೩೫. ಮಾನವನಿಗೆ ಯಾರು ಹೆಚ್ಚು ಪೂಜಿಸಲು ಅರ್ಹರಾಗಿರುವರೋ ಹಾಗು ಯಾರಲ್ಲಿ ತಾನು ಯಾವಾಗಲೂ ವಿನಯದಿಂದ ವರ್ತಿಸುವನೋ ಅಂತಹ ಮಾನ್ಯರನ್ನು ಅವನು ಅವಮಾನಮಾಡುವನು ಮತ್ತು ಅವರನ್ನು ನಿಂದಿಸುವನು.

೩೬. ಮಾನವನಿಗೆ ಮರಣವು ಸಮೀಪಿಸಿದಾಗ ಅವನು ದೇವತೆಗಳನ್ನು ಪೂಜಿಸುವುದಿಲ್ಲ. ಗುರುಗಳು ಮತ್ತು ವೃದ್ಧರು ಇವರನ್ನು ನಿಂದಿಸುವನು. ಮತ್ತು ಮಾತಾಪಿತೃಗಳಿಗೂ ಅಳಿಯಂದಿರಿಗೂ ಸತ್ಕಾರವನ್ನು ಮಾಡುವುದಿಲ್ಲ.

ಯೋಗಿನಾಂ ಜ್ಞಾನವಿದುಷಾಮನ್ಯೇಷಾಂ ಚ ಮಹಾತ್ಮನಾಮ್ ।
ಪ್ರಾಪ್ತೇ ತು ಕಾಲೇ ಪುರುಷಸ್ತದ್ವಿಜ್ಞೇಯಂ ವಿಚಕ್ಷಣೈಃ ॥೩೭॥

ಯೋಗಿನಾಂ ಸತತಂ ಯತ್ನಾದರಿಷ್ಟಾನ್ಯವನೀಪತೇ ।
ಸಂವತ್ಸರಾನ್ತೇ ತಜ್ಞೇಯಂ ಫಲದಾನಿ ದಿವಾನಿಶಮ್ ॥೩೮॥

ವಿಲೋಕ್ಯಾ ವಿಶದಾ ಚೈಷಾಂ ಫಲಪಙ್ಕ್ತಿಃ ಸುಭೀಷಣಾ ।
ವಿಜ್ಞಾಯ ಕಾರ್ಯೋ ಮನಸಿ ಸ ಚ ಕಾಲೋ ನರೇಶ್ವರ ॥೩೯॥

ಜ್ಞಾತ್ವಾ ಕಾಲಂ ಚ ತಂ ಸಮ್ಯಗಭಯಸ್ಥಾನಮಾಶ್ರಿತಃ ।
ಯುಞ್ಜೀತ ಯೋಗೀ ಕಾಲೋಽಸೌ ಯಥಾ ನಾಸ್ಯಾಫಲೋ ಭವೇತ್ ॥೪೦॥

---

೩೭. ಹಾಗು ಅಂತಹ ಮಾನವನು ಯೋಗಿಗಳು ಜ್ಞಾನಿಗಳು ಮತ್ತು ಇತರ ಮಹಾತ್ಮರು ಇವರನ್ನು ಸತ್ಕರಿಸುವುದಿಲ್ಲ. ಮೃತ್ಯುಕಾಲವು ಸಮೀಪಿಸಿದಾಗ ಈ ವಿಧದ ವರ್ತನೆಯುಂಟಾಗುವುದೆಂದು ಪ್ರಾಜ್ಞರಿಂದ ಹೇಳಲ್ಪಟ್ಟದೆ.

೩೮. ಎಲೈ ರಾಜನೇ ! ಯೋಗಿಗಳಿಗೆ ಕಂಡುಬರುವ ಈ ಅರಿಷ್ಟಗಳು ಎಲ್ಲವೂ ಒಂದು ವರ್ಷದ ಒಳಗಾಗಿ ಯಾವಾಗಲಾದರೂ ಫಲವನ್ನು ಕೊಡುವುವು. ಹಗಲು-ರಾತ್ರಿಯೆಂಬ ನಿಯಮವಿಲ್ಲದೆ ಆ ಫಲಗಳು ಉಂಟಾಗುತ್ತವೆಯೆಂದು ತಿಳಿಯಬೇಕು.

೩೯. ರಾಜನೆ ! ಇಂತಹ ಅರಿಷ್ಟಗಳ ಭಯಂಕರವಾದ ಫಲಪರಂಪರೆಯನ್ನು ಸ್ಪಷ್ಟವಾಗಿ ತಿಳಿಯಬೇಕು. ಮತ್ತು ಅರಿಷ್ಟಗಳು ಉಂಟಾದ ಕಾಲವನ್ನು ತಿಳಿದು ಅದರ ಫಲಪ್ರಾಪ್ತಿಯ ಕಾಲವನ್ನು ಯತ್ನದಿಂದ ತಿಳಿದಿರಬೇಕು.

೪೦. ಹಾಗೆ ಅರಿಷ್ಟಗಳಿಂದ ಸೂಚಿಸಲ್ಪಟ್ಟ ಮೃತ್ಯುಕಾಲವನ್ನು ಚನ್ನಾಗಿ ತಿಳಿದು ಯೋಗಿಯು ನಿರ್ಭಯವಾದ ಸ್ಥಾನವನ್ನು ಆಶ್ರಯಿಸಿ ಮನಸ್ಸನ್ನು ಸಮಾಧಿಯಲ್ಲಿ ಇರಿಸಬೇಕು. ಯೋಗಿಯು ತನಗೆ ಉಳಿದ ಅಲ್ಪಕಾಲವನ್ನು ವ್ಯರ್ಥವಾಗದಂತೆ ನೋಡಬೇಕು.

ದೃಷ್ಟ್ವಾsರಿಷ್ಟಂ ತಥಾ ಯೋಗೀ ತ್ಯಕ್ತ್ವಾ ಮರಣಜಂ ಭಯಮ್ ।
ತತ್ಸ್ವಭಾವಂ ತದಾಲೋಕ್ಯ ಕಾಲೋ ಯಾವದ್ವಿಪಾಕದಃ ॥೪೦॥

ತಸ್ಯ ಭಾಗೇ ತಥೈವಾಹ್ನೋ ಯೋಗಂ ಯುಞ್ಜೀತ ಯೋಗವಿತ್ ।
ಪೂರ್ವಾಹ್ಣೇ ಚಾಪರಾಹ್ಣೇ ಚ ಮಧ್ಯಾಹ್ನೇ ವಾಪಿ ತದ್ದಿನೇ ॥೪೨॥

ಯತ್ರ ವಾ ರಜನೀಭಾಗೇ ತದರಿಷ್ಟಂ ನಿರೀಕ್ಷಿತಮ್ ।
ತತ್ರೈವ ತಾವದ್ಯುಞ್ಜೀತ ಯಾವತ್ಪ್ರಾಪ್ತಂ ಹಿ ತದ್ದಿನಮ್ ॥೪೩॥

ತತಸ್ತ್ಯಕ್ತ್ವಾ ಭಯಂ ಸರ್ವಂ ಜಿತ್ವಾ ತಂ ಕಾಲಮಾತ್ಮವಾನ್ ।
ತತ್ರೈವಾವಸಥೇ ಸ್ಥಿತ್ವಾ ಯತ್ರ ವಾ ಸ್ಥೈರ್ಯಮಾತ್ಮನಃ ॥೪೪॥

---

೪೧. ಯೋಗಿಯು ಅರಿಷ್ಟವನ್ನು ನೋಡಿ ಹುಟ್ಟಿದವನಿಗೆ ಮರಣವು ಒದಗುವುದು ಸ್ವಭಾವವೆಂದು ಅರಿತು ಸಾವಿನ ಭಯವನ್ನು ಬಿಟ್ಟು ಅರಿಷ್ಟದ ಪರಿಣಾಮವಾಗಿ ಫಲವು ಉಂಟಾಗುವವರೆಗಿನ ಕಾಲವನ್ನು ಧ್ಯಾನದಿಂದ ಸಾರ್ಥಕಗೊಳಿಸಬೇಕು.

೪೨. ಯೋಗಾಭ್ಯಾಸವನ್ನು ಅರಿತಿರುವ ಯೋಗಿಯು ಅರಿಷ್ಟವನ್ನು ಕಂಡ ದಿನದ ಆ ಭಾಗದಿಂದ ಆಯಾಯ ದಿನಗಳ ಪೂರ್ವಾಹ್ಣ, ಮಧ್ಯಾಹ್ನ ಮತ್ತು ಅಪರಾಹ್ಣಗಳಲ್ಲಿ ಯಾವಾಗಲೂ ಯೋಗಸಮಾಧಿಯಲ್ಲಿ ಲೀನನಾಗಬೇಕು.

೪೩. ರಾತ್ರಿಯ ಯಾವ ಭಾಗದಲ್ಲಿ ಮರಣಾರಿಷ್ಟವು ಕಂಡಿರುವುದೋ ಆಗಿನಿಂದಲೇ ಅದೇ ಸ್ಥಳದಲ್ಲಿ ಹಗಲು ಬರುವವರೆಗೆ ನಿಶ್ಚಲತೆಯಿಂದ ಯೋಗ-ಪರನಾಗಬೇಕು.

೪೪. ಪ್ರಮಾದವಿಲ್ಲದ ಯೋಗಿಯು ತರುವಾಯ ಎಲ್ಲತರದ ಭಯವನ್ನು ಬಿಟ್ಟು ಭಯಕೊಡುವ ಆ ಸಮಯವನ್ನು ಗೆದ್ದು ಅದೇ ಮನೆಯಲ್ಲಿ ಅಥವಾ ತನ್ನ ಮನಸ್ಸಿಗೆ ಎಲ್ಲಿ ಸ್ಥೈರ್ಯವುಂಟಾಗುವುದೋ ಆ ಸ್ಥಳದಲ್ಲಿ ಕುಳಿತು ಯೋಗನಿಷ್ಠೆಯನ್ನು ಹೊಂದಬೇಕು.

ಯುಞ್ಜೀತ ಯೋಗಂ ನಿರ್ಜಿತ್ಯ ತ್ರೀನ್ಗುಣಾನ್ಪರಮಾತ್ಮನಿ ।
ತನ್ಮಯಶ್ಚಾತ್ಮನಾ ಭೂತ್ವಾ ಚಿದ್ವೃತ್ತಿಮಪಿ ಸನ್ತ್ಯಜೇತ್ ॥೪೫॥

ತತಃ ಪರಮನಿರ್ವಾಣಮತೀನ್ದ್ರಿಯಮಗೋಚರಮ್ ।
ಯದ್ಬುದ್ಧೇರ್ಯನ್ನ ಚಾಖ್ಯಾತುಂ ಶಕ್ಯತೇ ತತ್ಸಮಶ್ನುತೇ ॥೪೬॥

ಏತತ್ಸರ್ವಂ ಸಮಾಖ್ಯಾತಂ ತವಾಲರ್ಕ ಯಥಾರ್ಥವತ್ ।
ಪ್ರಾಪ್ಸ್ಯಸೇ ಯೇನ ತದ್ಬ್ರಹ್ಮ ಸಂಕ್ಷೇಪಾತ್ತನ್ನಿಬೋಧ ಮೇ ॥೪೭॥

ಶಶಾಙ್ಕರಶ್ಮಿಸಂಯೋಗಾಚ್ಚನ್ದ್ರಕಾನ್ತಮಣಿಃ ಪಯಃ ।
ಸಮುತ್ಸೃಜತಿ ನಾಯುಕ್ತಃ ಸೋಪಮಾ ಯೋಗಿನಃ ಸ್ಮೃತಾ ॥೪೮॥

---

೪೫. ಸತ್ತ್ವ-ರಜಸ್ಸು-ತಮಸ್ಸು ಎಂಬ ಮೂರು ಗುಣಗಳ ವಿಕಾರಕ್ಕೆ ಆಸ್ಪದವನ್ನು ಕೊಡದೆ ಅವುಗಳನ್ನು ಗೆದ್ದು ಪರಮಾತ್ಮನಲ್ಲಿ ಮನಸ್ಸನ್ನು ಇಟ್ಟು ತನ್ಮಯನಾಗಿ ಧ್ಯಾನಿಸಬೇಕು. ಕಡೆಯಲ್ಲಿ ಚೈತನ್ಯದ ವೃತ್ತಿರೂಪವಾದ ಜ್ಞಾನಾಕಾರವನ್ನು ತ್ಯಜಿಸಬೇಕು.

೪೬. ಹಾಗೆ ಸಮಾಧಿಯ ಪರಿಪಾಕದಿಂದ ಇಂದ್ರಿಯ ಅಥವಾ ಮತ್ತಾವ ಪ್ರಮಾಣಗಳಿಗೆ ಗೋಚರವಾಗದ ಪರಮ ಮುಕ್ತಿಪದವನ್ನು ಹೊಂದುತ್ತಾನೆ. ಅಂತಹ ಮುಕ್ತಿಪದವು ಮನಸ್ಸಿಗೆ ಗೋಚರವಲ್ಲ. ವಾಗಿಂದ್ರಿಯದಿಂದ ಹೇಳಲಾಗುವುದಿಲ್ಲ.

೪೭. ಅಲರ್ಕಮಹಾರಾಜನೆ! ನಿನಗೆ ಪರಮಾರ್ಥವಾದ ಯೋಗವಿಧಿಯು ಹೇಳಲ್ಪಟ್ಟಿದೆ. ಇನ್ನು ಅಂತಹ ಬ್ರಹ್ಮಪದವನ್ನು ನೀನು ಯಾವ ಸಾಧನದಿಂದ ಹೊಂದುತ್ತೀಯೋ ಅದನ್ನು ಸಂಕ್ಷೇಪವಾಗಿ ನಾನು ಹೇಳುವೆನು ; ಕೇಳು.

೪೮. ಚಂದ್ರಕಾಂತಮಣಿಯು ಚಂದ್ರನ ರಶ್ಮಿಗಳ ಸಂಪರ್ಕವಾದ ಒಡನೆ ನೀರನ್ನು ಸುರಿಸುವುದು. ಚಂದರಶ್ಮಿ ಸಂಪರ್ಕವಿಲ್ಲದ ಮಣಿಯು ನೀರನ್ನು ಸುರಿಸಲಾರದು. ಅದರಂತೆ ಯೋಗಿಯ ಆತ್ಮವು ಪರಮಾತ್ಮಧ್ಯಾನಾಸಕ್ತಿಯನ್ನು ಹೊಂದಿದರೆ ಮುಕ್ತಿರಸವು ಗೋಚರವಾಗುವುದು. ಇದೊಂದು ಯೋಗಿಗೆ ನಿದರ್ಶನವು.

ಯಥಾರ್ಕರಶ್ಮಿಸಂಯೋಗಾದರ್ಕಕಾನ್ತೋ ಹುತಾಶನವ್ ।
ಆವಿಷ್ಕರೋತಿ ನೈಕಃ ಸನ್ನುಪಮಾ ಸಾಪಿ ಯೋಗಿನಃ ॥೪೯॥

ಪಿಪೀಲಿಕಾಖುನಕುಲಗೃಹಗೋಧಾಕಪಿಞ್ಜಲಾಃ ।
ವಸನ್ತಿ ಸ್ವಾಮಿವದ್ಗೇಹೇ ಧ್ವಸ್ತೇ ಯಾನ್ತಿ ತತೋಽನ್ಯತಃ ॥೫೦॥

ದುಃಖಂ ತು ಸ್ವಾಮಿನೋ ಧ್ವಂಸೇ ತಸ್ಯ ತೇಷಾಂ ನ ಕಿಂಚನ ।
ವೇಶ್ಮನೋ ಯತ್ರ ರಾಜೇನ್ದ್ರ ಸೋಪಮಾ ಯೋಗಸಿದ್ಧಯೇ॥೫೧॥

ಮೃದ್ದೇಹಿಕಾಲ್ಪದೇಹಾಪಿ ಮುಖಾಗ್ರೇಣಾಪ್ಯಣೀಯಸಾ ।
ಕರೋತಿ ಮೃದ್ಭರಚಯಮುಪದೇಶಃ ಸ ಯೋಗಿನಃ ॥೫೨॥

---

೪೯. ಹಾಗೂ ಸೂರ್ಯಕಾಂತಶಿಲೆಯು ಸೂರ್ಯರಶ್ಮಿಸಂಯೋಗದಿಂದ ಅಗ್ನಿಜ್ವಾಲೆಯನ್ನು ತೋರಿಸುವುದು. ಹಾಗೆ ಸೂರ್ಯರಶ್ಮಿಸಂಯೋಗವಿಲ್ಲದ ಶಿಲೆಯು ಅಗ್ನಿಜ್ವಾಲೆಯನ್ನು ಹೊಂದುವುದಿಲ್ಲ. ಹಾಗೆ ಚಿತ್ತವೃತ್ತಿಯು ಬಾಹ್ಯ-ವಿಷಯಗಳಿಂದ ಹುಟ್ಟಿ ಯೋಗಿಗೆ ದುಃಖವನ್ನು ಕೊಡುವುದು. ಚಿತ್ತನಿರೋಧ-ದಿಂದ ದುಃಖ ಮೋಕ್ಷವಾಗುವುದು.

೫೦. ಒಂದು ಮನೆಯಲ್ಲಿ ಯಜಮಾನನಂತೆ ಇರುವೆ, ಇಲಿ, ಮುಂಗಸಿ, ಹಾವುರಾಣಿ, ಗುಬ್ಬಚ್ಚಿ—ಮುಂತಾದುವುಗಳು ವಾಸಮಾಡುತ್ತವೆ. ಮನೆಯು ನಾಶಹೊಂದಿದರೆ ಅಲ್ಲಿಂದ ಬೇರೊಂದು ಕಡೆಗೆ ಹೋಗುತ್ತವೆ.

೫೧. ಆದರೆ ಮನೆಯು ನಾಶವಾದ ಕಾರಣದಿಂದ ಮನೆಯ ಯಜಮಾನ-ನಿಗೆ ತುಂಬ ದುಃಖವಾಗುವುದು. ಇಲಿ ಮುಂತಾದುವುಗಳಿಗೆ ದುಃಖವಿಲ್ಲ. ಹಾಗೆ ಮಮತೆಯಿಲ್ಲದ ಯೋಗಿಗೆ ಯಾವ ದುಃಖವೂ ಅಂಟಿಕೊಳ್ಳುವುದಿಲ್ಲ. ಯೋಗಿಯ ಯೋಗಸಿದ್ಧಿಗೆ ಈ ನಿದರ್ಶನದ ಅನುಭವವು ಸಾಧನವಾಗುವುದು.

೫೨. ಮಣ್ಣಿನ ಸ್ವರೂಪವುಳ್ಳ ಗೆಜ್ಜಲು ಸಣ್ಣ ದೇಹವುಳ್ಳದ್ದಾದರೂ ತನ್ನ ಅತಿಸೂಕ್ಷ್ಮವಾದ ಮುಖದ ತುದಿಯಿಂದ ಮಣ್ಣಿನ ರಾಶಿಯನ್ನು ನಿರ್ಮಾಣ-ಮಾಡುವುದು. ಇದೊಂದು ಯೋಗಿಗೆ ಅನುಭವವನ್ನು ಕೊಡುವ ನಿದರ್ಶನದ ಉಪದೇಶವು.

ಪಶುಪಕ್ಷಿಮನುಷ್ಯಾದ್ಯೈಃ ಪತ್ರಪುಷ್ಪಫಲಾನ್ವಿತಮ್ ।
ವೃಕ್ಷಂ ವಿಲುಪ್ಯಮಾನಂ ತು ದೃಷ್ಟ್ವಾ ಸಿದ್ಧ್ಯನ್ತಿ ಯೋಗಿನಃ ॥೫೩॥

ರುರುಶಾವವಿಷಾಣಾಗ್ರಮಾಲಕ್ಷ್ಯ ತಿಲಕಾಕೃತಿಮ್ ।
ಸಹತೆ ನ ವಿವರ್ಧನ್ತಂ ಯೋಗೀ ಸಿದ್ಧಿಮವಾಪ್ನುಯಾತ್ ॥೫೪॥

ದ್ರವಪೂರ್ಣಮುಪಾದಾಯ ಪಾತ್ರಭಾರೋ ಹತೋ ಭುವಃ ।
ತುಙ್ಗಮುಙ್ಗಂ ವಿಲೋಕ್ಯೋಚ್ಚೈರ್ವಿಜ್ಞಾತಂ ಕಿಂ ನ ಯೋಗಿನಾ ॥೫೫॥

ಸರ್ವಸ್ವೇ ಜೀವನಾಯಾಲಂ ನಿಖಾತೇ ಪುರುಷಸ್ಯ ಯಾ ।
ಚೇಷ್ಟಾಂ ತಾಂ ತತ್ತ್ವತೋ ಜ್ಞಾತ್ವಾ ಯೋಗಿನಃ ಕೃತಕೃತ್ಯತಾ॥೫೬॥

---

೫೩. ಹೂ, ಹಣ್ಣು, ಪತ್ರಗಳಿಂದ ತುಂಬಿದ ಗಿಡವನ್ನು ಪಶು-ಪಕ್ಷಿ-ಮನುಷ್ಯ ಮುಂತಾದವರು ಸುತ್ತಿಕೊಂಡು ತಮಗೆ ಬೇಕಾದುದನ್ನು ಅದರಿಂದ ಕಿತ್ತುಕೊಳ್ಳುವುದನ್ನು ನೋಡಿ ಯೋಗಿಗಳು ಸಿದ್ಧಿ ಹೊಂದುವರು.

೫೪. ಸಣ್ಣ ತಿಲಕದ ಆಕಾರವುಳ್ಳ, ಜಿಂಕೆಮರಿಯ ತಲೆಯ ಮೇಲೆ ಕಾಣುವ ಕೊಂಬಿನ ತುದಿಯನ್ನು ನೋಡಿ ಅದರ ಬೆಳವಣಿಗೆಯನ್ನು ಸಹಿಸದಿರುವ ಯೋಗಿಯು ಹಾಗೆಯೇ ಸಿದ್ಧಿಯನ್ನು ಹೊಂದುತ್ತಾನೆ.

೫೫. ನೀರು ಮುಂತಾದ ದ್ರವವಸ್ತುವಿನಿಂದ ಕೂಡಿದ ಪಾತ್ರೆಯನ್ನು ನೆಲದಿಂದ ಮೇಲಕ್ಕೆತ್ತಿ ಹಿಡಿದರೆ ನೆಲದ ಭಾರವು ಕಡಿಮೆಯಾಗುವುದು. ಹಾಗೆ ನಾರಿಯ ದೇಹದಲ್ಲಿರುವ ಸ್ಥೂಲಸ್ತನರೂಪವಾದ ಅವಯವವನ್ನು ನೋಡಿ ಯೋಗಿಯು ತಿಳಿಯಲಾರದ ವಿಷಯವು ಏನಿರುವುದು ?

೫೬. ಒಬ್ಬ ಪುರುಷನ ಸರ್ವಸ್ವವನ್ನು ಅವನ ನಿರಂತರ ದೀರ್ಘ-ಜೀವನಕ್ಕೋಸ್ಕರ ಹೂತುಹಾಕಿರಲು ಆ ಪುರುಷನಲ್ಲಿ ಯಾವ ಚೇಷ್ಟೆಯುಂಟಾ-ಗುವುದೋ ಅದನ್ನು ತಾತ್ತ್ವಿಕವಾಗಿ ತಿಳಿದು ಯೋಗಿಯು ಕೃತಕೃತ್ಯತೆಯನ್ನು ಹೊಂದುವನು.

ತದ್ಗೃಹಂ ಯತ್ರ ವಸತಿ ತದ್ಭೋಜ್ಯಂ ಯೇನ ಜೀವತಿ ।
ಯೇನ ಸಂಪದ್ಯತೇ ವಾರ್ಥಸ್ತತ್ಸುಖಂ ಮಮತಾತ್ರ ಕಾ ॥೫೭॥

ಅಭ್ಯರ್ಥಿತೋಽಪಿ ತೈಃ ಕಾರ್ಯಂ ಕರೋತಿ ಕರಣೈರ್ಯಥಾ ।
ತಥಾ ಬುದ್ಧ್ಯಾದಿಭಿರ್ಯೋಗೀ ಪಾರಕ್ಯೈಃ ಸಾಧಯೇತ್ಪರಮ್॥೫೮॥

ಜಡ ಉವಾಚ :—

ತತಃ ಪ್ರಣಮ್ಯಾತ್ರಿಪುತ್ರಮಲರ್ಕಃ ಸ ಮಹೀಪತಿಃ ।
ಪ್ರಶ್ರಯಾವನತೋ ವಾಕ್ಯಮುವಾಚಾತಿಮುದಾನ್ವಿತಃ ॥೫೯॥

ದಿಷ್ಟ್ಯಾ ದೇವೈರಿದಂ ಬ್ರಹ್ಮನ್ಪರಾಭಿಭವಸಂಭವಮ್ ।
ಉಪಪಾದಿತಮತ್ಯುಗ್ರಂ ಪ್ರಾಣಸನ್ದೇಹದಂ ಭಯಮ್ ॥೬೦॥

---

೫೭. ಯೋಗಿಯು ಎಲ್ಲಿ ವಾಸಿಸುವನೋ ಅದೇ ಅವನಿಗೆ ಮನೆಯು. ಯಾವ ಆಹಾರದಿಂದ ಜೀವಿಸುವನೋ ಅದೇ ಭೋಜ್ಯವಸ್ತು. ಯಾವುದರಿಂದ ತನ್ನ ಇಷ್ಟಸಾಧನೆಯಾಗುವುದೋ ಅದೇ ಅವನ ಸುಖವು. ಹೀಗಿರಲು ಯೋಗಿಗೆ ಮಮತೆಯಿಂದ ಆಗುವ ಒಳಿತೇನು?

೫೮. ಒಬ್ಬ ಅತಿಥಿಯು ಪರಗೃಹದಲ್ಲಿ ಸತ್ಕರಿಸಲ್ಪಟ್ಟು ಪರರ ಉಪಕರಣಗಳಿಂದ ಭೋಜನಾದಿಕಾರ್ಯವನ್ನು ನಡೆಸುವನು. ಹಾಗೆ ಯೋಗಿಯು ಪರಕೀಯವಾದ ಬುದ್ಧಿ ಮುಂತಾದ ಕರಣಗಳಿಂದ ಪರಪದವನ್ನು ಸಾಧಿಸಿಕೊಳ್ಳುವನು.

ಜಡಪುತ್ರನು ಹೀಗೆಂದನು:—

೫೯. ತರುವಾಯ ಆ ಅಲರ್ಕಮಹಾರಾಜನು ಅತ್ರಿಮುನಿಯ ಪುತ್ರನಾದ ದತ್ತಾತ್ರೇಯಮುನಿಯನ್ನು ವಂದಿಸಿ ವಿನಯದಿಂದ ತಗ್ಗಿದವನೂ ಅತಿಯಾದ ಆನಂದದಿಂದ ತುಂಬಿದವನೂ ಆಗಿ ಈ ರೀತಿಯಾಗಿ ದತ್ತಾತ್ರೇಯ ಮುನಿಗೆ ಹೇಳಿದನು.

೬೦. ಬ್ರಹ್ಮರ್ಷಿಯೆ! ಅತ್ಯುಗ್ರವೂ, ಪ್ರಾಣಾಪಾಯ ಸಂಶಯವನ್ನು ಉಂಟುಮಾಡುವುದೂ ಮತ್ತು ಶತ್ರುಗಳ ತಿರಸ್ಕಾರದಿಂದ ಸಂಭವಿಸಿರುವುದೂ ಆದ ಈ ಭಯಂಕರ ಸನ್ನಿವೇಶವು ದೇವತೆಗಳಿಂದ ನನಗೆ ತರಲ್ಪಟ್ಟಿರುವುದು ನನ್ನ ಮಹಾಭಾಗ್ಯವು.

ದಿಷ್ಟ್ಯಾ ಕಾಶಿಪತೇರ್ಭೂರಿಬಲಸಂಪತ್ಪರಾಕ್ರಮಃ ।
ಯದುಚ್ಛೇದಾದಿಹಾಯಾತಃ ಸ ಯುಷ್ಮತ್ಸಙ್ಗದೋ ಮಮ ॥೬೧॥

ದಿಷ್ಟ್ಯಾ ಮನ್ದಬಲಶ್ಚಾಹಂ ದಿಷ್ಟ್ಯಾ ಭೃತ್ಯಾಶ್ಚ ಮೇ ಹತಾಃ ।
ದಿಷ್ಟ್ಯಾ ಕೋಶಃ ಕ್ಷಯಂ ಯಾತೋ ದಿಷ್ಟ್ಯಾಹಂ ಭೀತಿಮಾಗತಃ
॥೬೨॥

ದಿಷ್ಟ್ಯಾ ತ್ವತ್ಪಾದಯುಗಲಂ ಮಮ ಸ್ಮೃತಿಪಥಂ ಗತಮ್ ।
ದಿಷ್ಟ್ಯಾ ತ್ವದುಕ್ತಯಃ ಸರ್ವಾ ಮಮ ಚೇತಸಿ ಸಂಸ್ಥಿತಾಃ ॥೬೩॥

ದಿಷ್ಟ್ಯಾ ಜ್ಞಾನಂ ಮಮೋತ್ಪನ್ನಂ ಭವತಶ್ಚ ಸಮಾಗಮಾತ್ ।
ಭವತಾ ಚೈವ ಕಾರುಣ್ಯಂ ದಿಷ್ಟ್ಯಾ ಬ್ರಹ್ಮನ್ ಕೃತಂ ಮಯಿ ॥೬೪॥

---

೬೧. ಕಾಶಿರಾಜನ ಶಕ್ತಿ ಸಂಪತ್ತು, ಮತ್ತು ಸೈನ್ಯಪರಿವಾರವು ಅತಿಯಾಗಿರುವುದು ನನ್ನ ಭಾಗ್ಯ. ಅದರಿಂದ ವಿಪತ್ತು ಬಂದಿದ್ದರಿಂದ ನಾನು ತಮ್ಮ ಬಳಿಗೆ ಬಂದೆನು. ಕಾಶಿರಾಜನ ಪರಾಕ್ರಮವು ನನಗೆ ತಮ್ಮ ಸಂಪರ್ಕವನ್ನು ಉಂಟುಮಾಡಿಕೊಟ್ಟಿದೆ.

೬೨. ನಾನು ಅಲ್ಪಶಕ್ತಿಯುಳ್ಳವನಾದುದು ಸಂತೋಷ; ನನ್ನ ಭೃತ್ಯರು ಶತ್ರುಗಳಿಂದ ನಾಶಹೊಂದಿರುವುದು ಸಂತೋಷ; ನನ್ನ ಭಂಡಾರವು ಕ್ಷಯಿಸಿ ಹೋದುದು ಸಂತೋಷ; ಮತ್ತು ನನಗೆ ಭಯವು ಆವರಿಸಿದುದು ಸಂತೋಷ.

೬೩. ನನಗೆ ತಮ್ಮ ಪಾದಯುಗ್ಮದ ಸ್ಮರಣೆಯು ಸಕಾಲದಲ್ಲಿ ಉಂಟಾದುದು ಭಾಗ್ಯ, ತಮ್ಮ ಉಪದೇಶವಾಣಿಗಳು ಎಲ್ಲವೂ ನನ್ನ ಹೃದಯದಲ್ಲಿ ನೆಲಸುವಂತೆ ಆದುದು ನನ್ನ ಭಾಗ್ಯ.

೬೪. ತಮ್ಮ ಸಹವಾಸದಿಂದ ನನಗೆ ವಿವೇಕವು ಉದಯಿಸಿರುವುದು ನನ್ನ ಭಾಗ್ಯ. ಬ್ರಹ್ಮರ್ಷಿಯೆ! ತಮ್ಮಿಂದ ನನ್ನಲ್ಲಿ ದಯೆ ತೋರಿಸಲ್ಪಟ್ಟಿರುವುದು ನನ್ನ ಭಾಗ್ಯವು.

ಅನರ್ಥೋಽಪ್ಯರ್ಥತಾಂ ಯಾತಿ ಪುರುಷಸ್ಯ ಶುಭೋದಯೇ ।
ತಥೇದಮುಪಕಾರಾಯ ವ್ಯಸನಂ ಸಙ್ಗಮಾತ್ತವ ॥೬೫॥

ಸುಬಾಹುರುಪಕಾರೀ ಮೇ ಸ ಚ ಕಾಶಿಪತಿಃ ಪ್ರಭೋ ।
ತಯೋಃ ಕೃತೇಽಹಂ ಸಂಪ್ರಾಪ್ತೋ ಯೋಗೀಶ ಭವತೋಽನ್ತಿಕಮ್ ॥೬೬॥

ಸೋಽಹಂ ತವ ಪ್ರಸಾದಾಗ್ನಿನಿರ್ದಗ್ಧಾಜ್ಞಾನಕಿಲ್ಬಿಷಃ ।
ತಥಾ ಯತಿಷ್ಯೇ ಯೇನೇದೃಙ್ನ ಭೂಯಾಂ ದುಃಖಭಾಜನಮ್ ॥೬೭॥

ಪರಿತ್ಯಜಿಷ್ಯೇ ಗಾರ್ಹಸ್ಥ್ಯಮಾರ್ತಿಪಾದಪಕಾನನಮ್ ।
ತ್ವತ್ತೋಽನುಜ್ಞಾಂ ಸಮಾಸಾದ್ಯ ಜ್ಞಾನದಾತುರ್ಮಹಾತ್ಮನಃ ॥೬೮॥

ದತ್ತಾತ್ರೇಯ ಉವಾಚ :—

ಗಚ್ಛ ರಾಜೇನ್ದ್ರ ಭದ್ರಂ ತೇ ಯಥಾ ತೇ ಕಥಿತಂ ಮಯಾ ।
ನಿರ್ಮಮೋ ನಿರಹಙ್ಕಾರಸ್ತಥಾ ಚರ ವಿಮುಕ್ತಯೇ ॥೬೯॥

---

೬೫. ಮಾನವನಿಗೆ ಶುಭವುಂಟಾಗುವ ಸಮಯವು ಬಂದರೆ ಅನರ್ಥವು ಕೂಡ ಅರ್ಥವಾಗುವುದುಂಟು. ಹಾಗೆ ನನಗೆ ಬಂದ ಶತ್ರುವ್ಯಸನವು ತಮ್ಮ ಸಂಗಮವನ್ನು ಕೊಟ್ಟು ಉಪಕಾರದಲ್ಲಿ ಪರ್ಯವಸಾನವಾಗಿರುವುದು.

೬೬. ಪ್ರಭುವೆ! ನನ್ನ ಅಣ್ಣನಾದ ಸುಬಾಹು ಮತ್ತು ಕಾಶಿರಾಜ— ಇವರಿಬ್ಬರೂ ನನಗೆ ಉಪಕಾರಮಾಡಿರುವರು. ಯೋಗೀಶ್ವರನೆ! ಅವರ ನಿಮಿತ್ತದಿಂದ ನಾನು ನಿಮ್ಮ ಬಳಿಗೆ ಬರುವಂತಾಯಿತು.

೬೭. ದೀನನಾಗಿ ತಮ್ಮನ್ನು ಸೇರಿದ ನಾನು ತಮ್ಮ ಅನುಗ್ರಹವೆಂಬ ಅಗ್ನಿಯಿಂದ ಸುಟ್ಟುಹೋದ ಅಜ್ಞಾನವೆಂಬ ಕಶ್ಮಲವುಳ್ಳವನಾಗಿ ಮುಂದೆ ಮತ್ತೊಮ್ಮೆ ಹೀಗೆ ದುಃಖಭಾಗಿಯಾಗಿ ಜನ್ಮವೆತ್ತದ ಹಾಗೆ ಯತ್ನ ಮಾಡುವೆನು.

೬೮. ನಾನಾವಿಧವಾದ ಪೀಡೆಗಳೆಂಬ ಮರಗಳಿಗೆ ಕಾಡಿನಂತಿರುವ ಗೃಹಸ್ಥಾಶ್ರಮವನ್ನು ಜ್ಞಾನದಾತೃವೂ ಮಹಾತ್ಮನೂ ಆದ ನಿನ್ನ ಅನುಮತಿಯನ್ನು ಪಡೆದು ಈಗಲೇ ತ್ಯಜಿಸುವೆನು.

ದತ್ತಾತ್ರೇಯ ಉವಾಚ :—

೬೯. ರಾಜೇಂದ್ರನೆ! ಈಗ ನೀನು ಹೊರಡು. ನಾನು ನಿನಗೆ ಹೇಳಿರುವ ಹಾಗೆ ಮಮತೆಯಿಲ್ಲದವನೂ, ಅಹಂಕಾರವನ್ನು ತ್ಯಜಿಸಿದವನೂ ಆಗಿ ಮುಕ್ತಿಯನ್ನು ಸಾಧಿಸಲು ಯತ್ನವನ್ನು ಆಚರಿಸು.

ಜಡ ಉವಾಚ :—

ಏವಮುಕ್ತಃ ಪ್ರಣಮ್ಯೈನಮಾಜಗಾಮ ತ್ವರಾನ್ವಿತಃ ।
ಯತ್ರ ಕಾಶಿಪತಿರ್ಭ್ರಾತಾ ಸುಬಾಹುಶ್ಚಾಸ್ಯ ಸೋಽಗ್ರಜಃ ॥೭೦॥

ಸಮುತ್ಪತ್ಯ ಮಹಾಬಾಹುಂ ಸೋಽಲರ್ಕಃ ಕಾಶಿಭೂಪತಿಮ್ ।
ಸುಬಾಹೋರಗ್ರತೋ ವೀರಮುವಾಚ ಪ್ರಹಸನ್ನಿವ ॥೭೧॥

ರಾಜ್ಯಕಾಮುಕ ಕಾಶೀಶ ಭುಜ್ಯತಾಂ ರಾಜ್ಯಮೂರ್ಜಿತಮ್ ।
ಯಥಾ ಚ ರೋಚತೇ ತದ್ವತ್ಸುಬಾಹೋಃ ಸಂಪ್ರಯಚ್ಛ ವಾ ॥೭೨॥

ಕಾಶಿರಾಜ ಉವಾಚ :—

ಕಿಮಲರ್ಕ ಪರಿತ್ಯಕ್ತಂ ರಾಜ್ಯಂ ತೇ ಸಂಯುಗಂ ವಿನಾ ।
ಕ್ಷತ್ರಿಯಸ್ಯ ನ ಧರ್ಮೋಽಯಂ ಭವಾಂಶ್ಚ ಕ್ಷತ್ರಧರ್ಮವಿತ್ ॥೭೩॥

ಜಡಪುತ್ರನಿಂತೆಂದನು:—

೭೦. ದತ್ತಾತ್ರೇಯ ಮುನಿಯಿಂದ ಈ ರೀತಿಯಾಗಿ ನುಡಿಯಲ್ಪಟ್ಟ ಅಲರ್ಕರಾಜನು ಮುನಿಯನ್ನು ವಂದಿಸಿ ಬಲು ತ್ವರೆಯಿಂದ ಕೂಡಿದವನಾಗಿ ಕಾಶಿರಾಜನೂ ಮತ್ತು ತನ್ನ ಅಣ್ಣನಾದ ಸುಬಾಹುವೂ ಇದ್ದ ಸ್ಥಳಕ್ಕೆ ಬಂದನು.

೭೧. ಹಾಗೆ ಧಾವಿಸಿಬಂದ ಅಲರ್ಕನು ಮಹಾಬಾಹುಬಲಶಾಲಿಯೂ ಮಹಾವೀರನೂ ಆದ ಕಾಶಿಭೂಪಾಲನ ಬಳಿಗೆ ಬಂದು ಸುಬಾಹುವಿನ ಮುಂದೆ ನಗುನಗುತ್ತ ಈ ರೀತಿಯಾಗಿ ಹೇಳಿದನು.

೭೨. ರಾಜ್ಯದಲ್ಲಿ ಆಶೆಯುಳ್ಳವನೇ ! ಕಾಶಿದೇಶಾಧಿಪನೇ ! ಊರ್ಜಿತವಾದ ಮತ್ತು ಸಮೃದ್ಧಿಯಿಂದ ಕೂಡಿದ ನನ್ನ ರಾಜ್ಯವನ್ನು ನೀನು ಯಥೇಚ್ಛವಾಗಿ ಭುಂಜಿಸು. ಒಂದು ಸಮಯ ನಿನಗೆ ಇಷ್ಟಬಂದು ಸುಬಾಹುವಿಗೆ ಕೊಡಬೇಕೆಂದಿದ್ದರೆ ಕೊಡು. ನಿನ್ನ ಇಷ್ಟವು ಬಂದಂತೆ ಆಚರಿಸು.

ಕಾಶಿರಾಜನು ಹೀಗೆ ಹೇಳಿದನು :—

೭೩. ಅಲರ್ಕರಾಜನೆ ! ನೀನು ಯುದ್ಧವನ್ನು ಮಾಡದೇ ರಾಜ್ಯವನ್ನು ಈ ಬಗೆಯಿಂದ ನನಗೆ ಅರ್ಪಿಸಿ ತ್ಯಜಿಸುವುದೇಕೆ ? ಹೀಗೆ ರಾಜ್ಯವನ್ನು ತ್ಯಜಿಸುವುದು ಕ್ಷತ್ರಿಯನಿಗೆ ಧರ್ಮವಲ್ಲ. ನೀನು ಕ್ಷತ್ರಿಯ ಧರ್ಮವನ್ನು ಅರಿತಿದ್ದೀಯೆ.

ನಿರ್ಜಿತಾಮಾತ್ಯವರ್ಗಸ್ತು ತ್ಯಕ್ತ್ವಾ ಮರಣಜಂ ಭಯಮ್ ।
ಸನ್ದಧೀತ ಶರಂ ರಾಜಾ ಲಕ್ಷ್ಯಮುದ್ದಿಶ್ಯ ವೈರಿಣಮ್ ॥೭೪॥

ತಂ ಜಿತ್ವಾ ನೃಪತಿರ್ಭೋಗಾನ್ಯಥಾಭಿಲಷಿತಾನ್ವರಾನ್ ।
ಭುಞ್ಜೀತ ಪರಮಂ ಸಿದ್ಧ್ಯೈ ಯಜೇತ ಚ ಮಹಾಮಖೈಃ ॥೭೫॥

ಅಲರ್ಕ ಉವಾಚ :—

ಏವಮೀದೃಶಕಂ ವೀರ ಮಮಾಪ್ಯಾಸೀನ್ಮನಃ ಪುರಾ ।
ಸಾಮ್ಪ್ರತಂ ವಿಪರೀತಾರ್ಥಂ ಶೃಣು ಚಾಪ್ಯತ್ರ ಕಾರಣಮ್ ॥೭೬॥

ಯಥಾಯಂ ಭೌತಿಕಃ ಸಂಘಸ್ತಥಾನ್ತಃಕರಣಂ ನೃಣಾಮ್ ।
ಗುಣಾಸ್ತು ಸಕಲಾಸ್ತದ್ವದಶೇಷೇಷ್ವೇವ ಜನ್ತುಷು ॥೭೭॥

---

೭೪. ವಶಪಡಿಸಿಕೊಂಡ ಅಮಾತ್ಯವರ್ಗ ಮುಂತಾದ ರಾಜ್ಯಾಂಗವುಳ್ಳ ರಾಜನು ಮರಣಭಯವನ್ನು ದೂರಮಾಡಿ ಶತ್ರುರಾಜನ ಮೇಲೆ ಗುರಿಯಿಟ್ಟು ಅವನನ್ನು ಗೆಲ್ಲಲು ಬಾಣವನ್ನು ತೊಡಬೇಕು.

೭೫. ರಾಜನು ಹಾಗೆ ಶತ್ರುವನ್ನು ಗೆದ್ದು ರಾಜ್ಯವನ್ನು ಸಂಪಾದಿಸಿ ತನಗೆ ಇಷ್ಟಬಂದ ಹಾಗೆ ಉತ್ತಮವಾದ ಭೋಗಗಳನ್ನು ಅನುಭವಿಸುತ್ತ ಸದ್ಗತಿಯ ಸಿದ್ಧಿಗೋಸ್ಕರ ದೊಡ್ಡ ಯಜ್ಞಾದಿ ಸಮಾರಂಭವುಳ್ಳವನಾಗಿ ದೇವತೆ-ಯನ್ನು ಆರಾಧಿಸಬೇಕು.

ಅಲರ್ಕನು ಇಂತೆಂದನು :—

೭೬. ವೀರನಾದ ಕಾಶಿರಾಜನೆ! ಮೊದಲು ನನ್ನ ಮನಸ್ಸು ಕೂಡ ಈ ವಿಧದ ಭಾವನೆಯಿಂದ ತುಂಬಿಕೊಂಡಿತ್ತು. ಆದರೆ ಈಗ ಅದಕ್ಕೆ ವಿರೋಧವಾದ ಇಷ್ಟವುಳ್ಳದ್ದಾಗಿದೆ. ಅದಕ್ಕೆ ಕಾರಣವನ್ನು ಹೇಳುವೆನು. ಕೇಳು.

೭೭. ಮನುಷ್ಯರಿಗೆ ಈ ದೇಹೇಂದ್ರಿಯರೂಪವಾಗಿ ತೋರುವ ಸಂಘವು ಹೇಗೆ ಭೂತವಿಕಾರವೋ ಅದರಂತೆ ಅಂತಃಕರಣವು ಭೌತಿಕವಾದುದು. ಇವೆಲ್ಲವೂ ಸತ್ತ್ವ-ಮುಂತಾದ ಗುಣಗಳ ಪರಿಣಾಮವಾಗಿ ಹುಟ್ಟಿರುವುದು. ಎಲ್ಲ ಜಂತುಗಳಲ್ಲಿಯೂ ದೇಹ-ಇಂದ್ರಿಯ ಮುಂತಾದುವುಗಳು ಭೌತಿಕವೆಂಬುದು ಸಮಾನವು.

ಚಿಚ್ಛಕ್ತಿರೇಕ ಏವಾಯಂ ಯದಾ ನಾನ್ಯೋಽಸ್ತಿ ಕಶ್ಚನ ।
ತದಾ ಕಾ ನೃಪತೇಽಜ್ಞಾನಾನ್ಮಿತ್ರಾರಿಪ್ರಭುಭೃತ್ಯತಾ ॥೭೮॥

ತನ್ಮಯಾ ದುಃಖಮಾಸಾದ್ಯ ತ್ವದ್ಭಯೋದ್ಭವಮುತ್ತಮಮ್ ।
ದತ್ತಾತ್ರೇಯಪ್ರಸಾದೇನ ಜ್ಞಾನಂ ಪ್ರಾಪ್ತಂ ನರೇಶ್ವರ ॥೭೯॥

ನಿರ್ಜಿತೇನ್ದ್ರಿಯವರ್ಗಸ್ತು ತ್ಯಕ್ತ್ವಾ ಸಙ್ಗಮಶೇಷತಃ ।
ಮನೋ ಬ್ರಹ್ಮಣಿ ಸನ್ಧಾಸ್ಯೇ ತಜ್ಜಯೇ ಪರಮೋ ಜಯಃ ॥೮೦॥

ಸಂಸಾಧ್ಯಮನ್ಯತ್ತತ್ಸಿದ್ಧ್ಯೈ ಯತಃ ಕಿಂಚಿನ್ನ ವಿದ್ಯತೇ ।
ಇನ್ದ್ರಿಯಾಣಿ ಚ ಸಂಯಮ್ಯ ತತಃ ಸಿದ್ಧಿಂ ನಿಯಚ್ಛತಿ ॥೮೧॥

---

೭೮. ಪ್ರತಿಯೊಂದು ದೇಹದಲ್ಲಿರುವ, ಚೈತನ್ಯಶಕ್ತಿಯುಳ್ಳ ಆತ್ಮನು ಒಬ್ಬನೇ ಆಗಿರುವನು. ಬೇರೊಬ್ಬ ಆತ್ಮನಿಲ್ಲ. ಕಾಶಿರಾಜನೆ! ಹೀಗಿರಲು ಮಿತ್ರ-ಶತ್ರು, ಸ್ವಾಮಿ-ಸೇವಕ ಎಂಬೀ ಭೇದಗಳು ಕಾಣುವುದು ಅಜ್ಞಾನವಲ್ಲದೆ ಮತ್ತೇನು?

೭೯. ಕಾಶಿರಾಜನೆ! ನಿನ್ನ ಭೀತಿಯಿಂದ ಉಂಟಾದ ಅತಿಶಯವಾದ ದುಃಖವನ್ನು ಹೊಂದಿದ ನಾನು ದತ್ತಾತ್ರೇಯ ಮುನಿಯನ್ನು ಶರಣುಹೊಂದಿ ಆ ಮುನಿಯ ಪ್ರಸಾದದಿಂದ ತತ್ತ್ವಜ್ಞಾನವನ್ನು ಹೊಂದಿರುವೆನು.

೮೦. ಇನ್ನು ಮುಂದೆ ನಾನು ಸಂಪೂರ್ಣವಾಗಿ ಸಂಗವನ್ನು ತ್ಯಜಿಸಿ ಎಲ್ಲ ಇಂದ್ರಿಯವರ್ಗವನ್ನು ಜಯಿಸಿಕೊಂಡವನಾಗಿ ಮನಸ್ಸನ್ನು ಬ್ರಹ್ಮವಸ್ತುವಿನಲ್ಲಿ ಅಚಲವಾಗಿ ಇರಿಸುವೆನು. ಮನಸ್ಸನ್ನು ಗೆದ್ದರೆ ಉತ್ತಮವಾದ ಜಯವನ್ನು ಗಳಿಸಿದಂತೆ ಆಗುವುದು.

೮೧. ಹೀಗೆ ಉತ್ತಮ ಜಯವನ್ನು ಗಳಿಸಲು ಇಂದ್ರಿಯ-ಮನೋನಿಗ್ರಹವನ್ನು ಬಿಟ್ಟು ಮತ್ತಾವುದನ್ನೂ ಗೆಲ್ಲಬೇಕಾದ್ದು ಇಲ್ಲ. ಆದುದರಿಂದ ಇಂದ್ರಿಯ-ಮಾನಸಗಳನ್ನು ಗೆಲ್ಲುವುದು ಮಹತ್ತಾದ ಸಿದ್ಧಿಯನ್ನು ನೀಡುವುದು.

ಸೋಽಹಂ ನ ತೇಽರಿರ್ನ ಮಮಾಸಿ ಶತ್ರುಃ
ಸುಬಾಹುರೇಷೋ ನ ಮಮಾಪಕಾರೀ ।
ದೃಷ್ಟಂ ಮಯಾ ಸರ್ವಮಿದಂ ಯಥಾತ್ಮಾ
ಅನ್ವಿಷ್ಯತಾಂ ಭೂಪ ರಿಪುಸ್ತ್ವಯಾನ್ಯಃ ॥೪೨॥

ಇತ್ಥಂ ಸ ತೇನಾಭಿಹಿತೋ ನರೇನ್ದ್ರೋ
ಹೃಷ್ಟಃ ಸಮುತ್ಥಾಯ ತತಃ ಸುಬಾಹುಃ ।
ದಿಷ್ಟ್ಯೇತಿ ತಂ ಭ್ರಾತರಮಾಭಿನನ್ದ್ಯ
ಕಾಶೀಶ್ವರಂ ವಾಕ್ಯಮಿದಂ ಬಭಾಷೇ ॥೪೩॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಅಲರ್ಕನಿರ್ವೇದೋ ನಾಮ
ಚತ್ವಾರಿಂಶೋಽಧ್ಯಾಯಃ

---

೪೨. ಇಂತಹ ಜ್ಞಾನವನ್ನು ಆರ್ಜಿಸಿದ ನಾನು ನಿನಗೆ ಶತ್ರುವಾಗಿಲ್ಲ. ನೀನು ನನಗೂ ಶತ್ರುವಲ್ಲ. ಈ ಸುಬಾಹುವು ನನಗೆ ಅಪಕಾರ ಮಾಡಿದವನಲ್ಲ. ಎದುರಿನಲ್ಲಿರುವ ಎಲ್ಲ ವಿಶ್ವವು ಆತ್ಮಸ್ವರೂಪವೆಂಬುದನ್ನು ನಾನು ಅರಿಯುವೆನು. ಎಲೈ ರಾಜನೆ! ನೀನು ಸ್ಪರ್ಧೆಯಿಂದ ಹೋರಾಡಲು ಬೇರೊಬ್ಬ ಶತ್ರುವನ್ನು ಹುಡುಕು.

೪೩. ಅಲರ್ಕನಿಂದ ಆ ಕಾಶಿರಾಜನು ಈ ರೀತಿಯಾಗಿ ಹೇಳಲ್ಪಟ್ಟನು. ತರುವಾಯ ಅದರಿಂದ ಸಂತೋಷಗೊಂಡ ಸುಬಾಹುವು ಅಲ್ಲಿಂದ ಎದ್ದು ಅಲರ್ಕನನ್ನು ಭಾಗ್ಯಶಾಲಿಯೆಂದು ಅಭಿನಂದಿಸುತ್ತ ಕಾಶಿರಾಜನನ್ನು ಕುರಿತು ಈ ರೀತಿಯಾಗಿ ಹೇಳಿದನು.

ಮಾರ್ಕಂಡೇಯ ಮಹಾಪುರಾಣದಲ್ಲಿ ನಲವತ್ತನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಏಕಚತ್ವಾರಿಂಶೋಽಧ್ಯಾಯಃ

(ಅಲರ್ಕೋದರ್ಕನಿರೂಪಣೇನ ಪಿತಾಪುತ್ರಸಂವಾದೋಪಸಂಹಾರಃ)

ಸುಬಾಹುರುವಾಚ :—

ಯದರ್ಥಂ ನೃಪಶಾರ್ದೂಲ ತ್ವಾಮಹಂ ಶರಣಂ ಗತಃ |
ತನ್ಮಯಾ ಸಕಲಂ ಪ್ರಾಪ್ತಂ ಯಾಸ್ಯಾಮಿ ತ್ವಂ ಸುಖೀ ಭವ ||೧||

ಕಾಶಿರಾಜ ಉವಾಚ :—

ಕಿಂ ನಿಮಿತ್ತಂ ಭವಾನ್ಪ್ರಾಪ್ತೋ ನಿಷ್ಪನ್ನೋಽರ್ಥಶ್ಚ ಕಸ್ತವ |
ಸುಬಾಹೋ ತನ್ಮಮಾಚಕ್ಷ್ವ ಪರಂ ಕೌತೂಹಲಂ ಹಿ ಮೇ ||೨||

ನಲವತ್ತೊಂದನೆಯ ಅಧ್ಯಾಯ

ಸುಬಾಹುವು ಇಂತೆಂದನು :—

೧. ರಾಜೇಂದ್ರನಾದ ಕಾಶಿರಾಜನೆ! ನಾನು ನಿನ್ನನ್ನು ಯಾವ ಇಷ್ಟಾಭಿಲಾಷೆಯಿಂದ ಶರಣುಹೊಂದಿದೆನೊ ಅಂತಹ ನನ್ನ ಎಲ್ಲ ಇಷ್ಟವೂ ನೆರವೇರಿತು. ನಾನು ಇನ್ನು ಹೊರಡುವೆನು. ನೀನು ಸುಖವಾಗಿ ಬಾಳು.

ಕಾಶಿರಾಜನು ಹೀಗೆ ಹೇಳಿದನು :—

೨. ಸುಬಾಹುವೆ! ನೀನು ನನ್ನ ಬಳಿಗೆ ಏಕೆ ಬಂದೆ? ಈಗ ನಿನಗೆ ದೊರಕಿದ ಇಷ್ಟಾರ್ಥವಾವುದು? ಅದೆಲ್ಲವನ್ನೂ ನನಗೆ ಹೇಳು. ಅದನ್ನು ತಿಳಿಯಲು ನನಗೆ ಹೆಚ್ಚು ಕುತೂಹಲವುಂಟಾಗಿರುವುದು.

ಸಮಾಕ್ರಾನ್ತಮಲರ್ಕೇಣ ಪಿತೃಪೈತಾಮಹಂ ಮಹತ್ ।
ರಾಜ್ಯಂ ದೇಹೀತಿ ನಿರ್ಜಿತ್ಯ ತ್ವಯಾಹಮಭಿಚೋದಿತಃ ॥೩॥

ತತೋ ಮಯಾ ಸಮಾಕ್ರಮ್ಯ ರಾಜ್ಯಮಸ್ಯಾನುಜಸ್ಯ ತೇ ।
ಏತತ್ತೇ ಬಲಮಾನೀತಂ ತದ್ಭುಙ್ಕ್ಷ್ವ ಸ್ವಕುಲೋಚಿತಮ್ ॥೪॥

ಸುಬಾಹುರುವಾಚ :—

ಕಾಶಿರಾಜ ನಿಬೋಧ ತ್ವಂ ಯದರ್ಥಮಯಮುದ್ಯಮಃ ।
ಕೃತೋ ಮಯಾ ಭವಾಂಶ್ಚೈವ ಕಾರಿತೋಽತ್ಯನ್ತಮುದ್ಯಮಮ್ ॥೫॥

ಭ್ರಾತಾ ಮಮಾಯಂ ಗ್ರಾಮ್ಯೇಷು ಸಕ್ತೋ ಭೋಗೇಷ್ವತತ್ತ್ವವಿತ್ ।
ವಿಮೂಢೌ ಬೋಧವನ್ತೌ ಚ ಭ್ರಾತರಾವಗ್ರಜೌ ಮಮ ॥೬॥

---

೩. ಅಲರ್ಕನಿಂದ ಆಕ್ರಮಿಸಲ್ಪಟ್ಟಿರುವ, ಪಿತೃ-ಪಿತಾಮಹರಿಂದ ವಂಶ-ಕ್ರಮವಾಗಿ ಬಂದಿರುವ ದೊಡ್ಡ ರಾಜ್ಯವನ್ನು ಅಲರ್ಕನನ್ನು ಗೆದ್ದು ನೀನು ನನಗೆ ಕೊಟ್ಟು ಉಪಕಾರ ಮಾಡು—ಎಂದು ನೀನು ನನ್ನನ್ನು ಪ್ರೇರೇಪಿಸಿದೆಯಲ್ಲವೆ !

೪. ತರುವಾಯ ನಾನು ನಿನಗೋಸ್ಕರ ಈ ಸೈನ್ಯವನ್ನು ತಂದು ನಿನ್ನ ತಮ್ಮನಾದ ಅಲರ್ಕನ ರಾಜ್ಯವನ್ನು ಮುತ್ತಿ ಅದನ್ನು ಗೆದ್ದು ನಿನಗೆ ವಶಮಾ-ಡಿರುವೆನು. ಹೀಗೆ ವಂಶಕ್ರಮವಾಗಿ ಬಂದ ರಾಜ್ಯವನ್ನು ನೀನು ಭುಂಜಿಸು.

ಸುಬಾಹುವು ಹೀಗೆ ನುಡಿದನು :—

೫. ಕಾಶಿರಾಜನೆ ! ನನ್ನ ಈ ಉದ್ಯಮದ ಗುರಿಯು ಏನೆಂಬುದನ್ನು ಹೇಳುವೆನು. ಅದನ್ನು ಕೇಳು. ನಾನು ನಿನ್ನಿಂದ ಮಹತ್ತಾದ ಉದ್ಯಮವನ್ನು ಮಾಡಿಸಿರುವೆನು. ನಿಜ. ಅದರ ಉದ್ದೇಶವನ್ನು ತಿಳಿದುಕೊ.

೬. ತತ್ತ್ವವನ್ನು ಅರಿಯದ ಈ ನನ್ನ ಭ್ರಾತೃವಾದ ಅಲರ್ಕನು ಗ್ರಾಮ್ಯ-ಜನರಿಗೆ ಮೆಚ್ಚುಗೆಯಾದ ಭೋಗದಲ್ಲಿ ಆಸಕ್ತಿಯನ್ನು ಹೊಂದಿದನು. ನನ್ನ ಹಿರಿಯರಾದ ಇಬ್ಬರು ಭ್ರಾತೃಗಳು ಗ್ರಾಮ್ಯಭೋಗದಲ್ಲಿ ಮೂಢರೂ ತತ್ತ್ವಾನು-ಭವದಲ್ಲಿ ಜ್ಞಾನಿಗಳೂ ಆಗಿರುವರು.

ತಯೋರ್ಮಮ ಚ ಯನ್ಮಾತ್ರಾ ಬಾಲ್ಯೇ ಸ್ತನ್ಯಂ ಯಥಾ ಮುಖೇ ।
ತಥಾವಬೋಧೋ ವಿನ್ಯಸ್ತಃ ಕರ್ಣಯೋರವನೀಪತೇ ॥೭॥

ತಯೋರ್ಮಮ ಚ ವಿಜ್ಞೇಯಾಃ ಪದಾರ್ಥಾ ಯೇ ಮತಾ ನೃಭಿಃ ।
ಪ್ರಾಕಾಶ್ಯಂ ಮನಸೋ ನೀತಾಸ್ತೇ ಮಾತ್ರಾ ನಾಸ್ಯ ಪಾರ್ಥಿವ ॥೮॥

ಯಥೈಕಸಾರ್ಥೇ ಯಾತಾನಾಮೇಕಸ್ಮಿನ್ನವಸೀದತಿ ।
ದುಃಖಂ ಭವತಿ ಸಾಧೂನಾಂ ತಥಾಸ್ಮಾಕಂ ಮಹೀಪತೇ ॥೯॥

ಗಾರ್ಹಸ್ಥ್ಯಮೋಹಮಾಪನ್ನೇ ಸೀದತ್ಯಸ್ಮಿನ್ನರೇಶ್ವರ ।
ಸಂಬನ್ಧಿನ್ಯಸ್ಯ ದೇಹಸ್ಯ ಬಿಭ್ರತಿ ಭ್ರಾತೃಕಲ್ಪನಾಮ್ ॥೧೦॥

---

೭. ಎಲೈ ! ಕಾಶಿರಾಜನೆ ! ನನ್ನ ಹಿರಿಯರಾದ ಇಬ್ಬರು ಭ್ರಾತೃಗಳಿಗೂ ಮತ್ತು ನನಗೂ ಜನನಿಯು ಬಾಲ್ಯಾವಸ್ಥೆಯಲ್ಲಿ ಬಾಯಿಯಲ್ಲಿ ಸ್ತನ್ಯರಸವನ್ನು ಕೊಟ್ಟಂತೆ ಕಿವಿಯಲ್ಲಿ ತತ್ತ್ವಬೋಧ ರಸವನ್ನು ಕೊಟ್ಟಿರುವಳು.

೮. ಎಲೈ ! ರಾಜನೆ ! ಮಾನವರು ಅವಶ್ಯವಾಗಿ ತಿಳಿಯಬೇಕಾಗಿರುವ ತತ್ತ್ವಗಳು ಎಷ್ಟಿವೆಯೋ ಅವುಗಳನ್ನು ಜನನಿಯು ನನ್ನ ಇಬ್ಬರು ಅಣ್ಣಂದಿರಿಗೂ ಮತ್ತು ನನಗೂ ಮನಸ್ಸಿನಲ್ಲಿ ಭಾಸಿಸುವಂತೆ ಉಪದೇಶ ಮಾಡಿದಳು. ಆದರೆ ಈ ಅಲರ್ಕನಿಗೆ ಹಾಗೆ ಉಪದೇಶಿಸಲಿಲ್ಲ.

೯. ರಾಜನೆ ! ಒಂದು ಗುರಿಯಿಂದ ಹೊರಟಿರುವ ಒಂದು ಗುಂಪಿನಲ್ಲಿ ಒಂದು ವ್ಯಕ್ತಿಯು ಆಯಾಸಗೊಂಡು ಭಂಗಹೊಂದಿದರೆ ಸಾಧುಗಳಾದ ಇತರರಿಗೆ ಹೇಗೆ ದುಃಖವುಂಟಾಗುವುದೋ ಹಾಗೆ ನಮ್ಮಲ್ಲಿ ಒಬ್ಬನು ಭ್ರಷ್ಟನಾದರೆ ಇತರರಿಗೆ ದುಃಖವಾಗುವುದು ಸಹಜ.

೧೦. ಕಾಶಿರಾಜನೆ ! ಈ ದೇಹದ ಸಂಬಂಧವನ್ನು ಗಮನಿಸಿ ಸಹೋದರನೆಂಬ ಕಲ್ಪನೆಗೆ ಒಳಗಾದ ಅಲರ್ಕನು ಗೃಹಸ್ಥಾಶ್ರಮಧರ್ಮದ ಮೋಹಪಾಶಕ್ಕೆ ಬಿದ್ದು ಅನರ್ಥಹೊಂದುತ್ತಿರುವುದನ್ನು ನೋಡಿ ನನಗೆ ದುಃಖವುಂಟಾಯಿತು.

ತತೋ ಮಯಾ ವಿನಿಶ್ಚಿತ್ಯ ದುಃಖಾದ್ವೈರಾಗ್ಯಭಾವನಾ ।
ಭವಿಷ್ಯತೀತ್ಯಸ್ಯ ಭವಾನಿತ್ಯುದ್ಯೋಗಾಯ ಸಂಶ್ರಿತಃ ॥೧೧॥

ತದಸ್ಯ ದಃಖಾದ್ವೈರಾಗ್ಯಂ ಸಂಬೋಧಾದವನೀಪತೇ ।
ಸಮುದ್ಭೂತಂ ಕೃತಂ ಕಾರ್ಯಂ ಭದ್ರಂ ತೇಽಸ್ತು ವ್ರಜಾಮ್ಯಹಮ್ ॥೧೨॥

ಉಷ್ಟ್ವಾ ಮದಾಲಸಾಗರ್ಭೇ ಪೀತ್ವಾ ತಸ್ಯಾಸ್ತಥಾ ಸ್ತನಮ್ ।
ನಾನ್ಯನಾರೀಸುತೈರ್ಯಾತಂ ವರ್ತ್ಮ ಯಾತ್ವಿತಿ ಪಾರ್ಥಿವ ॥೧೩॥

ವಿಚಾರ್ಯ ತನ್ಮಯಾ ಸರ್ವಂ ಯುಷ್ಮತ್ಸಂಶ್ರಯಪೂರ್ವಕಮ್ ।
ಕೃತಂ ತಚ್ಚಾಪಿ ನಿಷ್ಪನ್ನಂ ಪ್ರಯಾಸ್ಯೇ ಸಿದ್ಧಯೇ ಪುನಃ ॥೧೪॥

---

೧೧. ತರುವಾಯ ನಾನು ದುಃಖವುಂಟಾದರೆ ವೈರಾಗ್ಯಭಾವನೆಯು ಉಂಟಾಗುವುದೆಂದು ನಿಶ್ಚಯಿಸಿ ಅಲರ್ಕನಿಗೆ ಹಾಗೆ ವೈರಾಗ್ಯಭಾವನೆಯನ್ನು ತರಲು ಹೀಗೆ ಯುದ್ಧೋದ್ಯಮಕ್ಕೋಸ್ಕರ ನಿನ್ನನ್ನು ಆಶ್ರಯಿಸಿದೆನು.

೧೨. ಕಾಶಿರಾಜನೆ! ಇಂದು ಅಲರ್ಕನಿಗೆ ನನ್ನ ಉದ್ದೇಶದಂತೆ ದುಃಖಪ್ರಾಪ್ತಿಯಿಂದ ತತ್ತ್ವಜ್ಞಾನವು ಹುಟ್ಟಿ ವೈರಾಗ್ಯಭಾವನೆಯು ಉದಯಿಸಿರುವುದು. ನನ್ನ ಕಾರ್ಯವು ಸಫಲವಾಯಿತು. ನಿನಗೆ ಮಂಗಳವಾಗಲಿ. ನಾನು ಹೊರಟುಹೋಗುವೆನು.

೧೩. ಕಾಶಿರಾಜನೆ! ಈ ಅಲರ್ಕನು ಮದಾಲಸೆಯ ಗರ್ಭವಾಸಮಾಡಿ ಜನ್ಮತಾಳಿದ ಮೇಲೆ ಆಕೆಯ ಸ್ತನ್ಯಪಾನವನ್ನು ಮಾಡಿದವನಾದ್ದರಿಂದ ಇತರ ನಾರಿಯರ ಪುತ್ರರು ನಡೆಯದಿರುವಂತಹ ಉತ್ತಮಮಾರ್ಗದಲ್ಲಿ ನಡೆಯಲೆಂದು ನಾನು ಈರೀತಿಯಾಗಿ ವರ್ತಿಸಿದೆನು.

೧೪. ನಾನು ಇದೆಲ್ಲವನ್ನೂ ಮನಸ್ಸಿನಲ್ಲಿ ವಿಮರ್ಶಮಾಡಿ ಅದರಂತೆ ನಿನ್ನ ಆಶ್ರಯಬಲದಿಂದ ಎಲ್ಲವನ್ನೂ ನಡೆಯಿಸಿದೆ. ಹಾಗು ಅದೆಲ್ಲವೂ ಸಫಲವೂ ಆಗಿದೆ. ಇನ್ನು ಮುಂದೆ ನಾನು ನನ್ನ ಕಾರ್ಯಸಿದ್ಧಿಗೆ ಹೋಗುವೆನು.

ಉಪೇಕ್ಷ್ಯತೇ ಸೀದಮಾನಃ ಸ್ವಜನೋ ಬಾನ್ಧವಃ ಸುಹೃತ್ ।
ಯೈರ್ನರೇನ್ದ್ರ ನ ತಾನ್ಮನ್ಯೇ ಸೇನ್ದ್ರಿಯಾ ವಿಕಲಾ ಹಿ ತೇ ॥೧೫॥

ಸುಹೃದಿ ಸ್ವಜನೇ ಬನ್ಧೌ ಸಮರ್ಥೇ ಯೋಽವಸೀದತಿ ।
ಧರ್ಮಾರ್ಥಕಾಮಮೋಕ್ಷೇಭ್ಯೋ ವಾಚ್ಯಾಸ್ತೇ ತತ್ರ ನ ತ್ವಸೌ ॥೧೬॥

ಏತತ್ತ್ವತ್ಸಙ್ಗಮಾದ್ಭೂಪ ಮಯಾ ಕಾರ್ಯಂ ಮಹತ್ಕೃತಮ್ ।
ಸ್ವಸ್ತಿ ತೇಽಸ್ತು ಗಮಿಷ್ಯಾಮಿ ಜ್ಞಾನಭಾಗ್ಭವ ಸತ್ತಮ ॥೧೭॥

ಕಾಶಿರಾಜ ಉವಾಚ :—

ಉಪಕಾರಸ್ತ್ವಯಾ ಸಾಧೋರಲರ್ಕಸ್ಯ ಕೃತೋ ಮಹಾನ್ ।
ಮಮೋಪಕಾರಾಯ ಕಥಂ ನ ಕರೋಷಿ ಸ್ವಮಾನಸಮ್ ॥೧೮॥

---

೧೫. ಎಲೈ ಕಾಶಿರಾಜನೇ ! ಯಾರು ತನ್ನ ಸ್ವಜನ, ಬಂಧು ಅಥವಾ ಮಿತ್ರರಲ್ಲಿ ಯಾರಾದರೂ ಅಧೋಗತಿಗೆ ಇಳಿದು ನಾಶಹೊಂದುತ್ತಿದ್ದರೆ ಅಂತಹವರನ್ನು ಉಪೇಕ್ಷೆಮಾಡುವರೋ ಅವರು ಇಂದ್ರಿಯಗಳಿದ್ದರೂ ಇಂದ್ರಿಯಶೂನ್ಯರೆಂದು ನಾನು ಅರಿಯುವೆನು.

೧೬. ಯಾವ ಮಾನವನು ತನ್ನ ಮಿತ್ರ, ಸ್ವಜನ ಅಥವಾ ಬನ್ಧುಜನರು ಸಮರ್ಥರಾಗಿದ್ದ ಸಮಯದಲ್ಲಿ ತಾನು ಅನಾಥನಂತೆ ಧರ್ಮ-ಅರ್ಥ-ಕಾಮ-ಮೋಕ್ಷಗಳೆಂಬ ಪುರುಷಾರ್ಥಗಳಿಂದ ಭ್ರಂಶ ಹೊಂದುವನೋ ಆಗ ಅವನು ನಿಂದಾಸ್ಪದನಲ್ಲ. ಉಪೇಕ್ಷೆಮಾಡಿದ ಮಿತ್ರ-ಸ್ವಜನ-ಬಂಧುಗಳು ನಿಂದಾಸ್ಪದರಾಗುವರು.

೧೭. ಸಾಧುಶ್ರೇಷ್ಠನೆ! ಕಾಶಿರಾಜನೆ! ಈ ಮಹತ್ತಾದ ಕಾರ್ಯವು ನನ್ನಿಂದ ನಿನ್ನ ಸಹಾಯವು ದೊರೆತು ಮಾಡಲ್ಪಟ್ಟಿರುವುದು. ಉಪಕಾರಿಯಾದ ನಿನಗೆ ಮಂಗಳವಾಗಲಿ. ನೀನು ಜ್ಞಾನವಂತನಾಗು. ನಾನು ಹೊರಟು ಹೋಗುವೆನು.

ಕಾಶಿರಾಜನಿಂತೆಂದನು :—

೧೮. ಎಲೈ ಸಾಧುವೆ! ನೀನು ನಿನ್ನ ತಮ್ಮನಾದ ಅಲರ್ಕನಿಗೆ ಮಹತ್ತಾದ ಉಪಕಾರವನ್ನು ಮಾಡಿದ್ದೀಯೇ. ಹಾಗೆಯೇ ನನಗೆ ಉಪಕಾರ ಮಾಡಲು ಏಕೆ ನೀನು ಮನಸ್ಸು ಮಾಡುವುದಿಲ್ಲ?

ಫಲದಾಯಿನೀ ಸತಾಂ ಸಿದ್ಧಿಃ ಸಙ್ಗಮೋ ನಾಫಲೋ ಯತಃ ।
ತಸ್ಮಾತ್ತ್ವತ್ಸಂಶ್ರಯಾದ್ಯುಕ್ತಾ ಮಯಾ ಪ್ರಾಪ್ತಾ ಸಮುನ್ನತಿಃ ॥೧೯॥

ಸುಬಾಹುರುವಾಚ :—

ಧರ್ಮಾರ್ಥಕಾಮಮೋಕ್ಷಾಖ್ಯಂ ಪುರುಷಾರ್ಥಚತುಷ್ಟಯಮ್ ।
ತತ್ರ ಧರ್ಮಾರ್ಥಕಾಮಾಸ್ತೇ ಸಕಲೋ ಹೀಯತೇಽಪರಃ ॥೨೦॥

ತತ್ತೇ ಸಂಕ್ಷೇಪತೋ ವಕ್ಷ್ಯೇ ತದಿಹೈಕಮನಾಃ ಶೃಣು ।
ಶ್ರುತ್ವಾ ಚ ಸಮ್ಯಗಾಲೋಚ್ಯ ಯತೇಥಾಃ ಶ್ರೇಯಸೇ ನೃಪ ॥೨೧॥

ಮಮೇತಿ ಪ್ರತ್ಯಯೋ ಭೂಪ ನ ಕಾರ್ಯೋಽಹಮಿತಿ ತ್ವಯಾ ।
ಸಮ್ಯಗಾಲೋಚ್ಯ ಧರ್ಮೋ ಹಿ ಧರ್ಮಾಭಾವೇ ನಿರಾಶ್ರಯಃ ॥೨೨॥

---

೧೯. ಯಾವ ಕಾರಣದಿಂದ ಸಾಧುಗಳಿಗೆ ಪರಮಸಾಧುಗಳೊಡನೆ ದೊರೆತ ಸಂಗವು ಫಲವನ್ನು ಕೊಡುವುದೋ, ನಿಷ್ಫಲವಾಗಲಾರದೋ, ಆ ಕಾರಣದಿಂದ ನಿನ್ನ ಆಶ್ರಯದಿಂದ ನಾನು ಮಹತ್ತಾದ ಉನ್ನತಿಯನ್ನು ಹೊಂದಿರುವೆನು.

ಸುಬಾಹುವು ಹೀಗೆಂದನು :—

೨೦. ಧರ್ಮ-ಅರ್ಥ ಕಾಮ-ಮೋಕ್ಷ ಎಂಬೀ ಬಗೆಯಿಂದ ಪುರುಷಾರ್ಥಗಳು ನಾಲ್ಕಾಗಿವೆ. ಇವುಗಳಲ್ಲಿ ಧರ್ಮ-ಅರ್ಥ-ಕಾಮ ಪುರುಷಾರ್ಥಗಳಿಗೆ ಹಾನಿಯುಂಟಾಗುವುದು.

೨೧. ಕಾಶಿರಾಜನೆ! ನಾನು ಅದನ್ನು ನಿನಗೆ ಸಂಕ್ಷೇಪವಾಗಿ ಹೇಳುವೆನು. ನೀನು ಏಕಾಗ್ರತೆಯುಳ್ಳ ಮನಸ್ಸಿನಿಂದ ಕೇಳು. ಕೇಳಿ ಅದರಂತೆ ಚನ್ನಾಗಿ ವಿಚಾರಮಾಡಿ ತರುವಾಯ ನಿನ್ನ ಶ್ರೇಯೋಮಾರ್ಗದಲ್ಲಿ ನೀನು ಯತ್ನಮಾಡು.

೨೨. ಎಲೈ ರಾಜನೆ! ನಿನ್ನಿಂದ ನನ್ನದು ಎನ್ನುವ ಮಮತ್ವ-ಭಾವನೆಯು ಎಲ್ಲೆಲ್ಲಿಯೂ ಇಡಲ್ಪಡಬಾರದು. ಇದನ್ನು ಚನ್ನಾಗಿ ಯೋಚಿಸಬೇಕು. ಧರ್ಮಪುರುಷಾರ್ಥವು ಅಸ್ಥಿರವಾದುದರಿಂದ ಅದನ್ನು ಅವಲಂಬಿಸಿದವನಿಗೆ ಧರ್ಮವು ಭ್ರಂಶಹೊಂದಿದಾಗ ಅವನು ನಿರಾಶ್ರಯ-ನಾಗುವನು.

ಕೋ ಽಹಮಿತಿ ಸಂಜ್ಞೇಯಮಿತ್ಯಾಲೋಚ್ಯ ತ್ವಯಾತ್ಮನಾ ।
ಬಾಹ್ಯಾನ್ತರ್ಗತಮಾಲೋಚ್ಯಮಾಲೋಚ್ಯಾಪರರಾತ್ರಿಷು ॥೨೩॥

ಅವ್ಯಕ್ತಾದಿ ವಿಶೇಷಾನ್ತಮವಿಕಾರಮಚೇತನಮ್ ।
ವ್ಯಕ್ತಾವ್ಯಕ್ತಂ ತ್ವಯಾ ಜ್ಞೇಯಂ ಜ್ಞಾತಾ ಕಶ್ಚಾಹಮಿತ್ಯುತ ॥೨೪॥

ಏತಸ್ಮಿನ್ನೇವ ವಿಜ್ಞಾತವಿಜ್ಞಾತವ್ಯೇಽಖಿಲಂ ತ್ವಯಾ ।
ಅನಾತ್ಮನ್ಯಾತ್ಮವಿಜ್ಞಾನಮಸ್ವೇ ಸ್ವಮಿತಿ ಮೂಢತಾ ॥೨೫॥

ಸೋಽಹಂ ಸರ್ವಗತೋ ಭೂಪ ಲೋಕಸಂವ್ಯವಹಾರತಃ ।
ಮಯೇದಮುಚ್ಯತೇ ಸರ್ವಂ ತ್ವಯಾ ಪೃಷ್ಟೋ ವ್ರಜಾಮ್ಯಹಮ್ ॥೨೬॥

---

೨೩. ನೀನು ನಿನ್ನ ಅಂತಃಕರಣದಲ್ಲಿ " ನಾನು ಯಾರು " ಎಂಬುದನ್ನು ವಿಚಾರಮಾಡಿ ಆತ್ಮವನ್ನು ಅರಿಯಬೇಕು. ರಾತ್ರಿಯ ಕಡೆಯಭಾಗದಲ್ಲಿ ಅಧ್ಯಾತ್ಮವಸ್ತುಗಳಲ್ಲಿ ಹೊರಗಿನ ಮತ್ತು ಒಳಗಿನ ತತ್ತ್ವಗಳನ್ನು ಮತ್ತೆ ಮತ್ತೆ ಆಲೋಚಿಸಬೇಕು.

೨೪. ಅವ್ಯಕ್ತತತ್ತ್ವ ಮೊದಲುಗೊಂಡು ವಿಶೇಷವಾದ ಸ್ಥೂಲತತ್ತ್ವಗಳವರೆಗೆ ಇರುವ ಅಚೇತನವಾದ ಮತ್ತು ವಿಕಾರಗಳಿಂದ ಪೂರ್ಣವಾದ ತತ್ತ್ವರಾಶಿಯನ್ನು ವಿಮರ್ಶಮಾಡಬೇಕು. ಮತ್ತು ವ್ಯಕ್ತ-ಅವ್ಯಕ್ತ ತತ್ತ್ವವೆಂಬ ಜ್ಞೇಯವಸ್ತು ಹಾಗು ಇವುಗಳ ಜ್ಞಾತೃವಾದ ಆತ್ಮವಸ್ತುಗಳನ್ನು ತಿಳಿಯಬೇಕು.

೨೫. ಮುಖ್ಯವಾಗಿ ತಿಳಿಯಬೇಕಾದ ತತ್ತ್ವವನ್ನು ನೀನು ಅರಿತವನಾದರೆ ಆಗ ನಿನಗೆ ಸಂಸಾರ ಚಕ್ರಕ್ಕೆ ಕಾರಣವಾದ ಅಜ್ಞಾನದ ಅರಿವುಂಟಾಗುವುದು. ಅನಾತ್ಮ ವಸ್ತುವಿನಲ್ಲಿ ಆತ್ಮವೆಂಬ ಅಭಿಮಾನವೂ ತನ್ನದಲ್ಲದ ವಸ್ತುವಿನಲ್ಲಿ ತನ್ನದು ಎಂಬ ಅಭಿಮಾನವೂ ಸಂಸಾರಪ್ರವೃತ್ತಿಗೆ ಕಾರಣವು.

೨೬. ಎಲೈ ಕಾಶಿರಾಜನೆ! ನಾನು ಸರ್ವವ್ಯಾಪಿಯಾದ ನಿತ್ಯಾತ್ಮಸ್ವರೂಪನಾಗಿರುವೆನು. ಲೋಕವ್ಯವಹಾರದ ಪಥದಲ್ಲಿದ್ದು ನಾನು ಇದೆಲ್ಲವನ್ನೂ ನಿನಗೆ ಉಪದೇಶಿಸಿರುವೆನು. ಈಗ ನಿನ್ನನ್ನು ಕೇಳಿಕೊಂಡು ಹೊರಟು ಹೋಗುವೆನು.

ಏವಮುಕ್ತ್ವಾ ಯಯೌ ಧೀಮಾನ್ ಸುಬಾಹುಃ ಕಾಶಿಭೂಮಿಪಮ್।
ಕಾಶಿರಾಜೋಽಪಿ ಸಂಪೂಜ್ಯ ಸೋಽಲರ್ಕಂ ಸ್ವಪುರಂ ಯಯೌ॥೨೭॥

ಅಲರ್ಕೋಽಪಿ ಸುತಂ ಜ್ಯೇಷ್ಠಮಭಿಷಿಚ್ಯ ನರಾಧಿಪಮ್ ।
ವನಂ ಜಗಾಮ ಸನ್ತ್ಯಕ್ತಸರ್ವಸಂಗಃ ಸ್ವಸಿದ್ಧಯೇ ॥೨೮॥

ತತಃ ಕಾಲೇನ ಮಹತಾ ನಿರ್ದ್ವನ್ದ್ವೋ ನಿಷ್ಪರಿಗ್ರಹಃ ।
ಪ್ರಾಪ್ಯ ಯೋಗರ್ಧಿಮತುಲಾಂ ಪರಂ ನಿರ್ವಾಣಮಾಪ್ತವಾನ್ ॥೨೯॥

ಪಶ್ಯನ್ ಜಗದಿದಂ ಸರ್ವಂ ಸದೇವಾಸುರಮಾನುಷಮ್ ।
ಪಾಶೈರ್ಗುಣಮಯೈರ್ಬದ್ಧಂ ಬಧ್ಯಮಾನಂ ಚ ನಿತ್ಯಶಃ ॥೩೦॥

---

೨೭. ಜ್ಞಾನಿಯಾದ ಸುಬಾಹುವು ಕಾಶಿರಾಜನಿಗೆ ಹೀಗೆಂದು ಹೇಳಿ ಹೊರಟುಹೋದನು. ಕಾಶಿರಾಜನು ಅಲರ್ಕರಾಜನನ್ನು ಗೌರವಿಸಿ ತಾನು ತನ್ನ ನಗರಕ್ಕೆ ಪ್ರಯಾಣ ಮಾಡಿದನು.

೨೮. ಅಲರ್ಕಮಹಾರಾಜನು ತನ್ನ ಜ್ಯೇಷ್ಠ ಕುಮಾರನಿಗೆ ಪಟ್ಟಾಭಿಷೇಕವನ್ನು ಮಾಡಿ ರಾಜ್ಯಭಾರವನ್ನೊಪ್ಪಿಸಿ ಸರ್ವಸಂಗಗಳನ್ನು ತೊರೆದವನಾಗಿ ಆತ್ಮೋದ್ಧಾರಕ್ಕೋಸ್ಕರ ವನಕ್ಕೆ ತೆರಳಿದನು.

೨೯. ತರುವಾಯ ಅಲರ್ಕನು ಹಾಗೆಯೇ ದೀರ್ಘಕಾಲ ಕಳೆದಮೇಲೆ ಸಮಸ್ತ ಉಪಕರಣಗಳನ್ನು ಬಿಟ್ಟು ಶೀತೋಷ್ಣಾದಿ ದ್ವಂದ್ವಗಳಲ್ಲಿ ಗಮನ-ವಿಲ್ಲದಂತೆ ಇದ್ದು ನಿರುಪಮವಾದ ಯೋಗಪರಿಪಾಕವನ್ನು ಹೊಂದಿ ಪರಮ ಮುಕ್ತಿಯನ್ನು ಹೊಂದಿದನು.

೩೦. ಜ್ಞಾನದಿಂದ ಕೃತಾರ್ಥನಾದ ಅಲರ್ಕನಿಗೆ ಪ್ರಪಂಚಾನುಭವವು ಈ ವಿಧವಾಗಿದ್ದಿತು. ದೇವ-ಅಸುರ-ಮಾನವರಿಂದ ಕೂಡಿದ ಸಮಸ್ತ ಜಗತ್ತು ಯಾವಾಗಲೂ ಸತ್ತ್ವ-ರಜಸ್ಸು-ತಮಸ್ಸುಗಳೆಂಬ ಗುಣಮಯವಾದ ಪಾಶಗಳಿಂದ ಕಟ್ಟಲ್ಪಟ್ಟುದಾಗಿಯೂ ಕಟ್ಟಲ್ಪಡುವುದಾಗಿಯೂ ಇದೆ.

ಪುತ್ರಾದಿಭ್ರಾತೃಪುತ್ರಾದಿಸ್ವಪಾರಕ್ಯಾದಿಭಾವಿತೈಃ ।
ಆಕೃಷ್ಯಮಾಣಂ ಕರಣೈರ್ದುಃಖಾರ್ತಂ ಭಿನ್ನದರ್ಶನಮ್ ॥೩೧॥

ಅಜ್ಞಾನಪಙ್ಕಗರ್ಭಸ್ಥಮನುದ್ಧಾರಂ ಮಹಾಮತಿಃ ।
ಆತ್ಮಾನಂ ಚ ಸಮುತ್ತೀರ್ಣಂ ಗಾಥಾಮೇತಾಮಗಾಯತ ॥೩೨॥

ಅಹೋ ಕಷ್ಟಂ ಯದಸ್माಭಿಃ ಪೂರ್ವಂ ರಾಜ್ಯಮನುಷ್ಠಿತಮ್ ।
ಇತಿ ಪಶ್ಚಾನ್ಮಯಾ ಜ್ಞಾತಂ ಯೋಗಾನ್ನಾಸ್ತಿ ಪರಂ ಸುಖಮ್ ॥೩೩॥

ಪುತ್ರ ಉವಾಚ :—

ತಾತೈನಂ ತ್ವಂ ಸಮಾತಿಷ್ಠ ಮುಕ್ತಯೇ ಯೋಗಮುತ್ತಮಮ್ ।
ಪ್ರಾಪ್ಸ್ಯಸೇ ಯೇನ ತದ್ಬ್ರಹ್ಮ ಯತ್ರ ಗತ್ವಾ ನ ಶೋಚಸಿ ॥೩೪॥

---

೩೧. ಮತ್ತು ಇವನು ಪುತ್ರನು; ತನ್ನವನು, ಮತ್ತೊಬ್ಬನು ಭ್ರಾತೃವಿನ ಪುತ್ರನು; ಪರಕೀಯನು, ಎಂಬ ಭಾವನೆಗಳಿಂದ ಕೂಡಿದ ಇಂದ್ರಿಯ-ಮಾನಸಗಳಿಂದ ಸೆಳೆಯಲ್ಪಡುತ್ತಿರುವ ಜಗತ್ತು ಭೇದಜ್ಞಾನದಿಂದ ದುಃಖಪೀಡಿತವಾಗಿರುವುದು.

೩೨. ಮಹಾಪ್ರಜ್ಞಾಶಾಲಿಯಾದ ಅಲರ್ಕನು ಜ್ಞಾನವಿಲ್ಲದೆ ಉದ್ಧಾರ-ವಾಗದಿರುವ ಅಜ್ಞಾನವೆಂಬ ಕೆಸರಿನ ಮಧ್ಯದಲ್ಲಿ ಮುಳುಗಿರುವ ಆತ್ಮವನ್ನು ಜ್ಞಾನದಿಂದ ಮೇಲಕ್ಕೆ ಎತ್ತಿ ಅನುಭವಪೂರ್ಣವಾದ ಈ ಗಾಥಾವಚನಗಳನ್ನು ಹಾಡಿದನು.

೩೩. ಇಂತಹ ವಿವೇಕದಿಂದ ಶೂನ್ಯರಾದ ನಾವು ಹಿಂದೆ ಬಹು ಕ್ಲೇಶವನ್ನುಂಟುಮಾಡುವ ರಾಜ್ಯಭಾರವನ್ನು ವಹಿಸಿದೆವು. ರಾಜ್ಯಭೋಗವು ಕಷ್ಟಕರವೆಂಬುದು ಈಗ ನನಗೆ ತಿಳಿಯುವುದು. ಯೋಗಕ್ಕಿಂತಲೂ ಮಿಗಿಲಾದ ಸುಖವು ಬೇರೆ ಇಲ್ಲ.

ಪುತ್ರನು ಇಂತೆಂದನು :—

೩೪. ತಂದೆಯೆ! ನೀನು ಮುಕ್ತಿಗೋಸ್ಕರ ಉತ್ತಮವಾದ ಯೋಗಾ-ಭ್ಯಾಸವನ್ನು ಆಚರಿಸು. ಯೋಗಾಭ್ಯಾಸದಿಂದ ಪುನರಾವೃತ್ತಿ-ಶೋಕ-ಮೋಹ-ಗಳಿಗೆ ಆಸ್ಪದವಿಲ್ಲದ ಬ್ರಹ್ಮವಸ್ತುವನ್ನು ನೀನು ಹೊಂದುತ್ತೀಯೆ.

ತತೋಽಹಮಪಿ ಯಾಸ್ಯಾಮಿ ಕಿಂ ಯಜ್ಞೈಃ ಕಿಂ ಜಪೇನ ಮೇ ।
ಕೃತಕೃತ್ಯಸ್ಯ ಕರಣಂ ಬ್ರಹ್ಮಭಾವಾಯ ಕಲ್ಪತೇ ॥೩೫॥

ತತೋಽನುಜ್ಞಾಮವಾಪ್ಯಾಹಂ ನಿರ್ದ್ವನ್ದ್ವೋ ನಿಷ್ಪರಿಗ್ರಹಃ ।
ಪ್ರಯತಿಷ್ಯೇ ತಥಾ ಮುಕ್ತ್ಯೈ ಯಥಾ ಯಾಸ್ಯಾಮಿ ನಿರ್ವೃತಿಮ್॥೩೬॥

ಪಕ್ಷಿಣ ಊಚುಃ :—

ಏವಮುಕ್ತ್ವಾ ಸ ಪಿತರಂ ಪ್ರಾಪ್ಯಾನುಜ್ಞಾಂ ತತಶ್ಚ ಸಃ ।
ಬ್ರಹ್ಮನ್ ಜಗಾಮ ಮೇಧಾವೀ ಪರಿತ್ಯಕ್ತಪರಿಗ್ರಹಃ ॥೩೭॥

ಸೋಽಪಿ ತಸ್ಯ ಪಿತಾ ತದ್ವತ್ ಕ್ರಮೇಣ ಸುಮಹಾಮತಿಃ ।
ವಾನಪ್ರಸ್ಥಂ ಸಮಾಸ್ಥಾಯ ಚತುರ್ಥಾಶ್ರಮಮಭ್ಯಗಾತ್ ॥೩೮॥

---

೩೫. ತರುವಾಯ ನಾನು ಹೊರಡುವವನಾಗಿದ್ದೇನೆ. ಜ್ಞಾನದಿಂದ ಕೃತಕೃತ್ಯನಾಗಿರುವ ನನಗೆ ಯಜ್ಞಗಳಿಂದಾಗಲಿ ಜಪ-ತಪಗಳಿಂದಾಗಲಿ ಆಗಬೇಕಾದುದು ಏನಿದೆ? ಜ್ಞಾನಿಯಾದವನು ಮಾಡುವ ನಿಷ್ಕಾಮಕರ್ಮಾಚರಣೆಯು ಬ್ರಹ್ಮಭಾವವನ್ನು ಕೊಡುವುದು.

೩೬. ಆದ್ದರಿಂದ ನಿನ್ನ ಅನುಮತಿಯನ್ನು ಹೊಂದಿದ ನಾನು ಯಾವ ವಿಧಾನದಿಂದ ಮುಕ್ತಿಸುಖವನ್ನು ಹೊಂದುವೆನೋ ಹಾಗೆ ದ್ವಂದ್ವ-ಬಾಧೆಗೆ ಒಳಗಾಗದೆ ಸಮಸ್ತ ಉಪಕರಣಗಳನ್ನು ತ್ಯಜಿಸಿ ಮುಕ್ತಿಲಾಭಕ್ಕೆ ಯತ್ನಿಸುವೆನು.

ಪಕ್ಷಿಗಳು ಇಂತೆಂದುವು :—

೩೭. ಜೈಮಿನಿಮುನಿಯೆ! ಮೇಧಾವಿಯಾದ ಸುಮತಿಯೆಂಬ ಜಡಪುತ್ರನು ತನ್ನ ತಂದೆಗೆ ಈ ರೀತಿಯಾಗಿ ಹೇಳಿ ಅವನಿಂದ ಅನುಮತಿಯನ್ನು ಪಡೆದು ಸರ್ವೋಪಕರಣಗಳನ್ನು ತ್ಯಾಗಮಾಡಿ ಹೊರಟುಹೋದನು.

೩೮. ಮಹಾಪ್ರಜ್ಞಾಶಾಲಿಯಾದ ಅವನ ತಂದೆಯು ಹಾಗೆಯೆ ಕ್ರಮವಾಗಿ ಗೃಹಸ್ಥಾಶ್ರಮದಿಂದ ವಾನಪ್ರಸ್ಥಾಶ್ರಮವನ್ನೂ ಮುಂದೆ ನಾಲ್ಕನೆಯದಾದ ಸನ್ಯಾಸಾಶ್ರಮಧರ್ಮವನ್ನೂ ಹೊಂದಿದನು.

ತತ್ರಾತ್ಮಜಂ ಸಮಾಸಾದ್ಯ ಹಿತ್ವಾ ಬನ್ಧಂ ಗುಣಾದಿಕಮ್ ।
ಪ್ರಾಪ್ಯ ಸಿದ್ಧಿಂ ಪರಾಂ ಪ್ರಾಜ್ಞಸ್ತತ್ಕಾಲೋಪಾತ್ತಸನ್ಮತಿಃ ॥೩೯॥

ಏತತ್ತೇ ಕಥಿತಂ ಬ್ರಹ್ಮನ್ ಯತ್ಪೃಷ್ಟಾ ಭವತಾ ವಯಮ್ ।
ಸುವಿಸ್ತರಂ ಯಥಾವಚ್ಚ ಕಿಮನ್ಯಚ್ಛ್ರೋತುಮಿಚ್ಛಸಿ ॥೪೦॥

ಯಶ್ಚೈತಚ್ಛೃಣುಯಾದ್ವಿಪ್ರ ಪಠೇದ್ವಾ ಸುಸಮಾಹಿತಃ ॥೪೧॥

ಯದಶ್ವಮೇಧಾವಭೃಥಸ್ನಾತಃ ಪ್ರಾಪ್ನೋತಿ ವೈ ಫಲಮ್ ।
ಸಕಲಂ ತದವಾಪ್ನೋತಿ ಶ್ರುತ್ವೈತನ್ಮುನಿಸತ್ತಮ ॥೪೨॥

---

೩೯. ಹಾಗೆ ಜಡಪುತ್ರನ ತಂದೆಯು ಪುತ್ರನ ಪ್ರಭಾವದಿಂದ ಸತ್ತ್ವ ಮುಂತಾದ ಗುಣತ್ರಯಮಯವಾದ ಬಂಧವನ್ನು ತೊರೆದು ಆ ಸಮಯದಲ್ಲಿ ಹೊಂದಿದ ಸದ್ವಿವೇಕವುಳ್ಳವನೂ ಮಹಾಪ್ರಜ್ಞಾವಂತನೂ ಆಗಿ ಉತ್ತಮವಾದ ಸಿದ್ಧಿಯನ್ನು ಗಳಿಸಿದನು.

೪೦. ಬ್ರಹ್ಮರ್ಷಿಯಾದ ಜೈಮಿನಿಯೆ! ನೀನು ನಮ್ಮಲ್ಲಿ ಏನನ್ನು ಪ್ರಶ್ನಮಾಡಿದೆಯೋ ಅದನ್ನು ನಾವು ನಿನಗೆ ತಾತ್ತ್ವಿಕವಾಗಿಯೂ ವಿಸ್ತಾರವಾಗಿಯೂ ಹೇಳಿರುವೆವು. ಇನ್ನು ಮುಂದೆ ಏನನ್ನು ಕೇಳಬೇಕೆಂದಿರುವೆ?

೪೧. ಬ್ರಹ್ಮರ್ಷಿಯೆ! ಹೀಗೆ ಆತ್ರೇಯಮುನಿಯ ತತ್ತ್ವೋಪದೇಶಗರ್ಭಿತವಾದ, ಈ ಪುತ್ರ-ಜನಕರ ಸಂವಾದರೂಪವಾದ ಕಥೆಯನ್ನು ಏಕಾಗ್ರತೆಯಿಂದ ಪಠಿಸುವುದು ಅಥವಾ ಕೇಳುವುದು ಶ್ರೇಯಸ್ಕರವಾಗಿರುವುದು.

೪೨. ಮುನಿಶ್ರೇಷ್ಠನೆ! ಅಶ್ವಮೇಧಯಾಗವನ್ನು ಪೂರ್ತಿಗೊಳಿಸಿ ಕಡೆಯಲ್ಲಿ ಅವಭೃಥಸ್ನಾನವನ್ನು ಮಾಡಿದರೆ ಯಾವ ಫಲಗಳು ಪ್ರಾಪ್ತಿಯಾಗುವುವೋ ಈ ಕಥಾಶ್ರವಣ ಮಾತ್ರದಿಂದ ಅಂತಹ ಸಮಸ್ತ ಫಲಗಳನ್ನು ಹೊಂದುವನು.

ಏತತ್ಸಂಸಾರಭ್ರಮಣಪರಿತ್ರಾಣಮನುತ್ತಮಮ್ ।
ಅಲರ್ಕಾತ್ರೇಯಸಂವಾದಮಶುಭಾನ್ಮುಚ್ಯತೇ ನರಃ ॥೪೩॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಪಿತಾಪುತ್ರಸಂವಾದೇ ಜಡೋಽಪಾಖ್ಯಾನೇ ಏಕಚತ್ವಾರಿಂಶೋಽಧ್ಯಾಯಃ

---

೪೩. ಅವಧಿಯಿಲ್ಲದ ಸಂಸಾರಚಕ್ರದಲ್ಲಿ ಭ್ರಮಣದಿಂದ ರಕ್ಷಣೆಯನ್ನು ಕೊಡುವ ಸರ್ವೋತ್ತಮವಾದ ಈ ಅಲರ್ಕ-ಆತ್ರೇಯಮುನಿ ಸಂವಾದರೂಪವಾದ ಚರಿತ್ರೆಯನ್ನು ಕೇಳಿದ ಮಾನವನು ಅಶುಭದಿಂದ ಬಿಡುಗಡೆಯನ್ನು ಹೊಂದುವನು.

ಮಾರ್ಕಂಡೇಯ ಮಹಾಪುರಾಣದಲ್ಲಿ ನಲವತ್ತೊಂದನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ದ್ವಿಚತ್ವಾರಿಂಶೋಽಧ್ಯಾಯಃ

(ಬ್ರಹ್ಮೋತ್ಪತ್ತಿನಿರೂಪಣಮ್)

ಜೈಮಿನಿರುವಾಚ :—

ಸಮ್ಯಗೇತನ್ಮಮಾಖ್ಯಾತಂ ಭವದ್ಭಿರ್ದ್ವಿಜಸತ್ತಮಾಃ ।
ಪ್ರವೃತ್ತಂ ಚ ನಿವೃತ್ತಂ ಚ ದ್ವಿವಿಧಂ ಕರ್ಮ ವೈದಿಕಮ್ ॥೧॥

ಅಹೋ ಪಿತೃಪ್ರಸಾದೇನ ಭವತಾಂ ಜ್ಞಾನಮೀದೃಶಮ್ ।
ಯೇನ ತಿರ್ಯಕ್ತ್ವಮಪ್ಯೇತತ್ಪ್ರಾಪ್ಯ ಮೋಹಸ್ತಿರಸ್ಕೃತಃ ॥೨॥

ನಲವತ್ತೆರಡನೆಯ ಅಧ್ಯಾಯ

ಜೈಮಿನಿಮುನಿಯು ಹೀಗೆ ಹೇಳಿದನು :—

೧. ಪಕ್ಷಿಶ್ರೇಷ್ಠರೆ ! ವೇದವಿಹಿತವಾದ ಸಾಧನಗಳಲ್ಲಿ ಪ್ರವೃತ್ತಿಮಾರ್ಗ-ನಿವೃತ್ತಿಮಾರ್ಗವೆಂದು ಎರಡು ಬಗೆಯ ಕರ್ಮಮಾರ್ಗಗಳಿವೆ. ಇದು ನಿಮ್ಮಿಂದ ವಿಸ್ತಾರವಾಗಿ ನನಗೆ ಉಪದೇಶಿಸಲ್ಪಟ್ಟಿದೆ.

೨. ನಿಮಗೆ ತಂದೆಯ ಅನುಗ್ರಹಬಲದಿಂದ ಈ ವಿಧವಾದ ಸರ್ವೋತ್ತಮವಾದ ಜ್ಞಾನಸಂಪತ್ತಿಯುಂಟಾಗಿದೆ. ಇದು ಆಶ್ಚರ್ಯವು. ಯಾವ ಜ್ಞಾನದಿಂದ ಮೂಕಪ್ರಾಣಿಜನ್ಮವಿದ್ದರೂ ನಿಮಗೆ ಅಜ್ಞಾನವು ನಿವಾರಣೆಯಾಗಿರುವುದು.

ಧನ್ಯಾ ಭವನ್ತಃ ಸಂಸಿದ್ಧ್ಯೈ ಪ್ರಾಗವಸ್ಥಾಸ್ಥಿತಂ ಯತಃ ।
ಭವತಾಂ ವಿಷಯೋದ್ಭೂತೈರ್ನ ಮೋಹೈಶ್ಚಾಲ್ಯತೇ ಮನಃ ॥೩॥

ದಿಷ್ಟ್ಯಾ ಭಗವತಾ ತೇನ ಮಾರ್ಕಣ್ಡೇಯೇನ ಧೀಮತಾ ।
ಭವನ್ತೋ ವೈ ಸಮಾಖ್ಯಾತಾಃ ಸರ್ವಸನ್ದೇಹಹೃತ್ತಮಾಃ ॥೪॥

ಸಂಸಾರೇಽಸ್ಮಿನ್ಮನುಷ್ಯಾಣಾಂ ಭ್ರಮತಾಮತಿಸಙ್ಕಟೇ ।
ಭವದ್ವಿಧೈಃ ಸಮಂ ಸಙ್ಗೋ ಜಾಯತೇ ನಾತಪಸ್ವಿನಾಮ್ ॥೫॥

ಯದ್ಯಹಂ ಸಙ್ಗಮಾಸಾದ್ಯ ಭವದ್ಭಿರ್ಜ್ಞಾನದೃಷ್ಟಿಭಿಃ ।
ನ ಸ್ಯಾಂ ಕೃತಾರ್ಥಸ್ತನ್ನೂನಂ ನ ಮೇಽನ್ಯತ್ರ ಕೃತಾರ್ಥತಾ ॥೬॥

---

೩. ನೀವು ಧನ್ಯರಾಗಿದ್ದೀರಿ. ನಿಮ್ಮ ಅಂತಃಕರಣವು ಈ ಪಕ್ಷಿಜನ್ಮದ ಪ್ರಾಪ್ತಿಯ ಮೊದಲಿನ ಅವಸ್ಥೆಯಲ್ಲಿರುವಂತೆ ವಿಷಯಭೋಗದಿಂದ ಜನಿಸುವ ಮೋಹವಿಕಾರದಿಂದ ಚಲಿಸಲ್ಪಡಲಿಲ್ಲ.

೪. ಷಡ್ಗುಣೈಶ್ವರ್ಯಸಂಪನ್ನನೂ, ಪ್ರಾಜ್ಞನೂ ಆದ ಮಾರ್ಕಂಡೇಯಮುನಿಯು ಸಮಸ್ತ ಸಂದೇಹಗಳನ್ನು ಹೋಗಲಾಡಿಸುವವರಲ್ಲಿ ಶ್ರೇಷ್ಠರಾದ ನಿಮ್ಮನ್ನು ನನಗೆ ಉಪದೇಶಕರನ್ನಾಗಿ ತಿಳಿಸಿದುದು ನನ್ನ ಭಾಗ್ಯವು.

೫. ಬಹಳ ಕ್ಲೇಶಕರವಾದ ಈ ಸಂಸಾರಚಕ್ರಕ್ಕೆ ಸಿಲುಕಿ ಭ್ರಮಿಸುತ್ತಿದ್ದವರಿಗೆ ನಿಮ್ಮಂತಹ ಪೂಜ್ಯರ ಸಂಗವು ದೊರೆಯುವುದಾದರೆ ತಪಸ್ಸಿನ ಪವಿತ್ರತೆಯು ಇದ್ದರೆ ಮಾತ್ರವೇ ದೊರೆಯುವುದು. ತಪಸ್ಸಿಲ್ಲದವರಿಗೆ ದೊರೆಯುವುದಿಲ್ಲ.

೬. ಜ್ಞಾನದರ್ಶನವುಳ್ಳ ಪೂಜ್ಯರಾದ ನಿಮ್ಮ ಸಹವಾಸವನ್ನು ಹೊಂದಿದ ನಾನು ಇಲ್ಲಿ ಕೃತಾರ್ಥತೆಯನ್ನು ಹೊಂದದಿದ್ದರೆ ಆಗ ನನಗೆ ಬೇರೊಂದು ಕಡೆಯಲ್ಲಿ ಕೃತಾರ್ಥತೆಯು ದೊರೆಯುವುದಿಲ್ಲವೆಂಬುದು ನಿಜ.

ಪ್ರವೃತ್ತೇ ಚ ನಿವೃತ್ತೇ ಚ ಭವತಾಂ ಜ್ಞಾನಕರ್ಮಣಿ ।
ಮತಿಮಸ್ತಮಲಾಂ ಮನ್ಯೇ ಯಥಾ ನಾನ್ಯಸ್ಯ ಕಸ್ಯಚಿತ್ ॥೭॥

ಯದಿ ತ್ವನುಗ್ರಹವತೀ ಮಯಿ ಬುದ್ಧಿರ್ದ್ವಿಜೋತ್ತಮಾಃ ।
ಭವತಾಂ ತತ್ಸಮಾಖ್ಯಾತುಮರ್ಹತೇದಮಶೇಷತಃ ॥೮॥

ಕಥಮೇತತ್ಸಮುದ್ಭೂತಂ ಜಗತ್ಸ್ಥಾವರಜಙ್ಗಮಮ್ ।
ಕಥಂ ಚ ಪ್ರಲಯಂ ಕಾಲೇ ಪುನರ್ಯಾಸ್ಯತಿ ಸತ್ತಮಾಃ ॥೯॥

ಕಥಂ ಚ ವಂಶಾ ದೇವರ್ಷಿಪಿತೃಭೂತಾದಿಸಂಭವಾಃ ।
ಮನ್ವನ್ತರಾಣಿ ಚ ಕಥಂ ವಂಶಾನುಚರಿತಂ ಚ ಯತ್ ॥೧೦॥

---

೭. ಪ್ರವೃತ್ತಿಮಾರ್ಗ-ನಿವೃತ್ತಿಮಾರ್ಗ, ಹಾಗು ಜ್ಞಾನ-ಕರ್ಮ-ಇವೆಲ್ಲ ವಿಷಯಗಳಲ್ಲಿ ಯಾವ ಬೇರೊಬ್ಬ ವ್ಯಕ್ತಿಗೂ ಇಲ್ಲದಿರುವಹಾಗೆ ನಿಮಗೆ ನಿಷ್ಕಲಂಕವಾದ ಪ್ರತಿಭೆಯುಂಟೆಂದು ನಾನರಿತಿದ್ದೇನೆ.

೮. ಪಕ್ಷೀಂದ್ರರೆ! ನಿಮಗೆ ನನ್ನಲ್ಲಿ ಅನುಗ್ರಹ ತೋರಿಸಬೇಕೆಂಬ ಬುದ್ಧಿಯು ಉಂಟಾಗಿರುವ ಪಕ್ಷದಲ್ಲಿ ನಾನು ಕೇಳಬೇಕೆಂದು ಆಶಿಸುವ, ಮುಂದೆ ಹೇಳುವ ವಿಷಯಗಳನ್ನು ಸಮಗ್ರವಾಗಿ ನೀವು ಹೇಳಲು ಅರ್ಹರಾಗಿದ್ದೀರಿ.

೯. ಸಾಧುಶ್ರೇಷ್ಠರೇ! ಸ್ಥಾವರ-ಜಂಗಮಗಳಿಂದ ಸೇರಿದ ಈ ಸಮಸ್ತ ಪ್ರಪಂಚವು ಜನಿಸಿದುದು ಹೇಗೆ? ಮತ್ತು ಅಂತಕಾಲದಲ್ಲಿ ಮತ್ತೆ ಇದೇ ಪ್ರಪಂಚವು ಪ್ರಲಯವನ್ನು ಹೊಂದುವುದು ಹೇಗೆ?

೧೦. ದೇವತೆ-ಋಷಿ-ಪಿತೃ-ಭೂತ ಮುಂತಾದವರಿಂದ ಹುಟ್ಟಿ ನಡೆದು-ಬಂದ ವಂಶಗಳು ಹೇಗೆ ವಿಸ್ತಾರಹೊಂದಿದುವು? ಮನ್ವಂತರಗಳು ಹೇಗೆ ನಡೆಯುವುವು? ಮತ್ತು ಆಯಾಯ ವಂಶಗಳ ಚರಿತ್ರೆಯೆಂಬುದು ಹೇಗೆ ಪ್ರಕಾಶಿಸಿತು?

ಯಾವತ್ಯಃ ಸೃಷ್ಟಯಶ್ಚೈವ ಯಾವನ್ತಃ ಪ್ರಲಯಾಸ್ತಥಾ ।
ತಥಾ ಕಲ್ಪವಿಭಾಗಶ್ಚ ಯಾ ಚ ಮನ್ವನ್ತರಸ್ಥಿತಿಃ ॥೧೧॥

ಯಥಾ ಚ ಕ್ಷಿತಿಸಂಸ್ಥಾನಂ ಯತ್ಪ್ರಮಾಣಂ ಚ ವೈ ಭುವಃ ।
ಯಥಾಸ್ಥಿತಿ ಸಮುದ್ರಾದಿನಿಮ್ನಗಾಃ ಕಾನನಾದಿ ಚ ॥೧೨॥

ಭೂರ್ಲೋಕಾದಿಶ್ಚ ಲೋಕಾನಾಂ ಗಣಃ ಪಾತಾಲಸಂಶ್ರಯಃ ।
ಗತಿಸ್ತಥಾರ್ಕಸೋಮಾದಿಗ್ರಹರ್ಕ್ಷಜ್ಯೋತಿಷಾಮಪಿ ॥೧೩॥

ಶ್ರೋತುಮಿಚ್ಛಾಮ್ಯಹಂ ಸರ್ವಮೇತದಾಭೂತಸಂಪ್ಲವಮ್ ।
ಉಪಸಂಹೃತೇ ಚ ಯಚ್ಛೇಷಂ ಜಗತ್ಯಸ್ಮಿನ್ಭವಿಷ್ಯತಿ ॥೧೪॥

---

೧೧. ಅನಾದಿ-ಅನಂತವಾಗಿರುವ ಕಾಲದಲ್ಲಿ ಒಟ್ಟು ಸೃಷ್ಟಿಗಳು ಎಷ್ಟು? ಪ್ರಲಯಗಳ ಆವೃತ್ತಿಗಳು ಎಷ್ಟು ? ಕಲ್ಪಕಾಲದ ವಿಭಾಗವು ಎಷ್ಟು ? ಮತ್ತು ಮನ್ವಂತರಗಳ ಸ್ಥಿತಿಯು ಹೇಗಿರುವುದು ?

೧೨. ಈ ಭೂಮಂಡಲದ ಸನ್ನಿವೇಶವು ಹೇಗಿರುವುದು ? ಹಾಗು ಭೂಮಿಯ ಪರಿಮಾಣವು ಎಷ್ಟು ? ಮತ್ತು ಇಂತಹ ಭೂಮಿಯಲ್ಲಿ ಸಮುದ್ರ-ನದೀ-ಅರಣ್ಯಸಂಪತ್ತು ಇವುಗಳ ಸ್ಥಿತಿಯು ಹೇಗಿರುವುದು ?

೧೩. ಭೂರ್ಲೋಕ ಮೊದಲಾಗಿರುವ ಎಲ್ಲ ಲೋಕಗಳ ಗಣವು, ಪಾತಾಲದಲ್ಲಿರುವ ಲೋಕಗಳು, ಮತ್ತು ಸೂರ್ಯ-ಚಂದ್ರ-ಗ್ರಹ-ನಕ್ಷತ್ರ ಮೊದಲಾದ ತೇಜೋಮಂಡಲದ ಗತಿ ಇವುಗಳ ಬಗೆಯು ಹೇಗಿರುವುದು ?

೧೪. ಸೃಷ್ಟಿಯ ಆದಿಯಿಂದ ಸಮಸ್ತ ಭೂತಗಳ ಲಯವಾಗುವ ಪ್ರಲಯದವರೆಗಿನ ಸಮಸ್ತ ವಿಷಯವನ್ನು ನಾನು ಕೇಳಲು ಆಶೆಯುಳ್ಳವನಾಗಿದ್ದೇನೆ. ಮತ್ತು ಈ ಜಗತ್ತು ಪ್ರಲಯಹೊಂದಿದ ಮೇಲೆ ಉಳಿಯುವ ಸತ್ಯವಸ್ತುವಾವುದು ?

ಪಕ್ಷಿಣ ಊಚುಃ :—

ಪ್ರಶ್ನಭಾರೋಽಯಮತುಲೋ ಯಸ್ತ್ವಯಾ ಮುನಿಸತ್ತಮ ।
ಪೃಷ್ಟಸ್ತಂ ತೇ ಪ್ರವಕ್ಷ್ಯಾಮಸ್ತಚ್ಛೃಣುಷ್ವೇಹ ಜೈಮಿನೇ ॥೧೫॥

ಮಾರ್ಕಣ್ಡೇಯೇನ ಕಥಿತಂ ಪುರಾ ಕ್ರೌಷ್ಟುಕಯೇ ಯಥಾ ।
ದ್ವಿಜಪುತ್ರಾಯ ಶಾನ್ತಾಯ ವ್ರತಸ್ನಾತಾಯ ಧೀಮತೇ ॥೧೬॥

ಮಾರ್ಕಣ್ಡೇಯಂ ಮಹಾತ್ಮಾನಮುಪಾಸೀನಂ ದ್ವಿಜೋತ್ತಮೈಃ ।
ಕ್ರೌಷ್ಟುಕಿಃ ಪರಿಪಪ್ರಚ್ಛ ಯದೇತತ್ಪೃಷ್ಟವಾನ್ ಪ್ರಭೋ ॥೧೭॥

ತಸ್ಯ ಚಾಕಥಯತ್ಪ್ರೀತ್ಯಾ ಯನ್ಮುನಿರ್ಭೃಗುನನ್ದನಃ ।
ತತ್ತೇ ಪ್ರಕಥಯಿಷ್ಯಾಮಃ ಶೃಣು ತ್ವಂ ದ್ವಿಜಸತ್ತಮ ॥೧೮॥

ಪಕ್ಷೀಂದ್ರರು ಹೇಳಿದರು :—

೧೫. ಮುನಿಶ್ರೇಷ್ಠನಾದ ಜೈಮಿನಿಮಹರ್ಷಿಯೆ ! ಸರ್ವೋತ್ತಮವಾದ ಈ ಪ್ರಶ್ನಗಳ ಭಾರವನ್ನು ನೀನು ನಮ್ಮಲ್ಲಿ ತಂದಿರಿಸಿದ್ದೀಯೆ. ಅವುಗಳ ಉತ್ತರ-ಗಳನ್ನು ನಾವು ಹೇಳುವೆವು. ನೀನೀಗ ಅದನ್ನು ಕೇಳು.

೧೬. ಹಿಂದೆ ಶಾಂತಿಸ್ವಭಾವವುಳ್ಳವನೂ, ಸ್ನಾತಕವ್ರತದಿಂದ ಪವಿತ್ರನೂ, ಪ್ರಾಜ್ಞನೂ ಮತ್ತು ದ್ವಿಜಪುತ್ರನೂ ಆದ ಕ್ರೌಷ್ಟುಕಿ ಎಂಬುವನಿಗೆ ಮಾರ್ಕಂಡೇಯಮಹಾಮುನಿಯು ಇದನ್ನು ಹೇಳಿರುವನು.

೧೭. ಜೈಮಿನಿಮುನಿಯೆ ! ನೀನು ಕೇಳಿರುವ ಈ ವಿಷಯಗಳನ್ನೆಲ್ಲ ಕ್ರೌಷ್ಟುಕಿಯು ದ್ವಿಜಶ್ರೇಷ್ಠರಿಂದ ಸೇವಿಸಲ್ಪಡುತ್ತಿದ್ದ ಮಹಾತ್ಮನಾದ ಮಾರ್ಕಂಡೇಯಮುನಿಯ ಬಳಿಗೆ ಹೋಗಿ ಪ್ರಶ್ನಿಸಿದನು.

೧೮. ದ್ವಿಜೋತ್ತಮನಾದ ಜೈಮಿನಿಯೇ ! ಭೃಗುಮುನಿಯ ವಂಶದಲ್ಲಿ ಜನಿಸಿದ ಮಾರ್ಕಂಡೇಯಮುನಿಯು ಕ್ರೌಷ್ಟುಕಿಯಲ್ಲಿರುವ ಪ್ರೀತಿಯಿಂದ ಯಾವ ತತ್ತ್ವಗಳನ್ನು ಉಪದೇಶಿಸಿರುವನೋ ಅದನ್ನು ನಾವು ಹೇಳುವೆವು. ನೀನು ಕೇಳು.

ಪ್ರಣಿಪತ್ಯ ಜಗನ್ನಾಥಂ ಪದ್ಮಯೋನಿಂ ಪಿತಾಮಹಮ್ ॥೧೯॥

ಜಗದ್ಯೋನಿಂ ಸ್ಥಿತಂ ಸೃಷ್ಟೌ ಸ್ಥಿತೌ ವಿಷ್ಣುಸ್ವರೂಪಿಣಮ್ ।
ಪ್ರಲಯೇ ಚಾನ್ತಕರ್ತಾರಂ ರೌದ್ರಂ ರುದ್ರಸ್ವರೂಪಿಣಮ್ ॥೨೦॥

ಮಾರ್ಕಣ್ಡೇಯ ಉವಾಚ :—

ಉತ್ಪನ್ನಮಾತ್ರಸ್ಯ ಪುರಾ ಬ್ರಹ್ಮಣೋಽವ್ಯಕ್ತಜನ್ಮನಃ ।
ಪುರಾಣಮೇತದ್ವೇದಾಶ್ಚ ಮುಖೇಭ್ಯೋಽನುವಿನಿಃಸೃತಾಃ ॥೨೧॥

ಪುರಾಣಸಂಹಿತಾಶ್ಚಕ್ರುರ್ಬಹುಲಾಃ ಪರಮರ್ಷಯಃ ।
ವೇದಾನಾಂ ಪ್ರವಿಭಾಗಶ್ಚ ಕೃತಸ್ತೈಸ್ತು ಸಹಸ್ರಶಃ ॥೨೨॥

---

೧೯. ಮಾರ್ಕಂಡೇಯಮುನಿಯು ಕ್ರೌಷ್ಟುಕಿಗೆ ತತ್ತ್ವಗಳನ್ನು ಉಪದೇಶಮಾಡುವ ಪ್ರಾರಂಭದಲ್ಲಿ ಜಗತ್ತಿಗೆ ಪ್ರಭುವಾದ ಸರ್ವೇಶ್ವರನನ್ನು ವಂದಿಸಿದನು. ಪರಮಾತ್ಮನು ಸೃಷ್ಟಿಯ ಸಮಯದಲ್ಲಿ ಪದ್ಮದಿಂದ ಜನಿಸಿ ಪಿತಾಮಹನೆನಿಸಿದ ಮೂರ್ತಿಯುಳ್ಳವನಾದನು.

೨೦. ಮತ್ತು ಪರಮಾತ್ಮನು ಜಗತ್ತಿನ ಸ್ಥಿತಿಯಲ್ಲಿ ಅದಕ್ಕೆ ಕಾರಣದ ವಿಷ್ಣುಸ್ವರೂಪವನ್ನು ತೆಗೆದುಕೊಂಡನು. ಹಾಗು ಪ್ರಲಯಕಾಲದಲ್ಲಿ ಜಗತ್ತನ್ನು ನಾಶಮಾಡುವ ರೌದ್ರಾಕಾರದ ರುದ್ರಮೂರ್ತಿಯನ್ನು ಪರಿಗ್ರಹಿಸಿದನು. ಈ ತ್ರಿಮೂರ್ತಿರೂಪನಾದ ಸರ್ವೇಶ್ವರನನ್ನು ಧ್ಯಾನಿಸಿದನು.

ಮಾರ್ಕಂಡೇಯಮುನಿಯು ಹೀಗೆಂದನು :—

೨೧. ಹಿಂದೆ ಅವ್ಯಕ್ತವೆಂಬ ತತ್ತ್ವದಿಂದ ಬ್ರಹ್ಮದೇವನು ಜನ್ಮವೆತ್ತಿದ ಕೂಡಲೆ ಅವನ ಮುಖಗಳಿಂದ ಪುರಾಣ-ವೇದರೂಪವಾದ ವಾಙ್ಮಯವು ಹುಟ್ಟಿಬಂದಿತು.

೨೨. ತರುವಾಯ ಪೂಜ್ಯರಾದ ಮಹರ್ಷಿಗಳು ಅನೇಕ ಪುರಾಣ-ಸಂಹಿತಾರೂಪವಾದ ಗ್ರಂಥಗಳನ್ನು ರಚಿಸಿದರು. ಹಾಗು ಅಂತಹ ಮುನಿಗಳಿಂದ ವೇದಗಳಿಗೆ ಸಾವಿರಾರು ಶಾಖಾರೂಪವಾಗಿ ವಿಭಾಗವು ರಚಿಸಲ್ಪಟ್ಟಿತು.

ಧರ್ಮೋ ಜ್ಞಾನಂ ಚ ವೈರಾಗ್ಯಮೈಶ್ವರ್ಯಂ ಚ ಮಹಾತ್ಮನಃ ।
ತಸ್ಯೋಪದೇಶೇನ ವಿನಾ ನ ಹಿ ಸಿದ್ಧಂ ಚತುಷ್ಟಯಮ್ ॥೨೩॥

ವೇದಾನ್ ಸಪ್ತರ್ಷಯಸ್ತಸ್ಮಾಜ್ಜಗೃಹುಸ್ತಸ್ಯ ಮಾನಸಾಃ ।
ಪುರಾಣಂ ಜಗೃಹುಶ್ಚಾದ್ಯಾ ಮುನಯಸ್ತಸ್ಯ ಮಾನಸಾಃ ॥೨೪॥

ಭೃಗೋಃ ಸಕಾಶಾಚ್ಚ್ಯವನಸ್ತೇನೋಕ್ತಂ ಚ ದ್ವಿಜನ್ಮನಾಮ್ ।
ಋಷಿಭಿಶ್ಚಾಪಿ ದಕ್ಷಾಯ ಪ್ರೋಕ್ತಮೇತನ್ಮಹಾತ್ಮಭಿಃ ॥೨೫॥

ದಕ್ಷೇಣ ಚಾಪಿ ಕಥಿತಮಿದಮಾಸೀತ್ತದಾ ಮಮ ।
ತತ್ತುಭ್ಯಂ ಕಥಯಾಮ್ಯದ್ಯ ಕಲಿಕಲ್ಮಷನಾಶನಮ್ ॥೨೬॥

ಸರ್ವಮೇತನ್ಮಹಾಭಾಗ ಶ್ರೂಯತಾಂ ಮೇ ಸಮಾಧಿನಾ ।
ಯಥಾಶ್ರುತಂ ಮಯಾ ಪೂರ್ವಂ ದಕ್ಷಸ್ಯ ಗದತೋ ಮುನೇ ॥೨೭॥

---

೨೩. ಧರ್ಮ-ಜ್ಞಾನ-ವೈರಾಗ್ಯ ಮತ್ತು ಐಶ್ವರ್ಯವೆಂಬ ನಾಲ್ಕು ಮಹಿಮೆಗಳು ಮಹಾತ್ಮನಾದ ಬ್ರಹ್ಮದೇವನಲ್ಲಿ ಜನ್ಮಸಿದ್ಧವಾಗಿದ್ದರೂ ಇತರರಲ್ಲಿ ಅವನ ಉಪದೇಶವಿಲ್ಲದೆ ಆ ಮಹಿಮೆಗಳು ಉಂಟಾಗುವುದಿಲ್ಲ.

೨೪. ಬ್ರಹ್ಮದೇವನ ಮಾನಸಪುತ್ರರಾದ ಸಪ್ತರ್ಷಿಗಳು ಅವನ ಉಪದೇಶದಿಂದ ವೇದಗಳನ್ನು ಕಲಿತರು. ಹಾಗು ಅವನ ಮಾನಸಪುತ್ರರಾದ ಅನೇಕ ಪ್ರಾಚೀನ ಮಹರ್ಷಿಗಳು ಪುರಾಣವಾಙ್ಮಯವನ್ನು ಅವನಿಂದ ಸ್ವೀಕರಿಸಿದರು.

೨೫. ಭೃಗುಮುನಿಯ ಉಪದೇಶದಿಂದ ಚ್ಯವನಮುನಿಯು ಪಠಿಸಿದನು. ಚ್ಯವನಮುನಿಯು ಇತರ ಅನೇಕ ಮಹರ್ಷಿಗಳಿಗೆ ಉಪದೇಶ ಮಾಡಿದನು. ಅಂತಹ ಮಹಾತ್ಮರಾದ ಋಷಿಗಳು ದಕ್ಷಬ್ರಹ್ಮನಿಗೆ ಪ್ರವಚನ ಮಾಡಿದರು.

೨೬. ಆಗ ದಕ್ಷ ಪ್ರಜಾಪತಿಯಿಂದ ನನಗೆ ಈ ಪುರಾಣವು ಉಪದೇಶಿಸಲ್ಪಟ್ಟಿತು. ಕಲಿಯುಗದಲ್ಲಿ ಸಂಭವಿಸುವ ಪಾಪಕಲ್ಮಶವನ್ನು ನಾಶಗೊಳಿಸುವ ಈ ಪುರಾಣವನ್ನು ಈಗ ನಾನು ನಿನಗೆ ಹೇಳುವೆನು.

೨೭. ಕ್ರೌಷ್ಟುಕಿ ಮುನಿಯೇ! ಹಿಂದೆ ದಕ್ಷ ಪ್ರಜಾಪತಿಯು ಹೇಳುತ್ತಿರುವಾಗ ಅವನ ಮುಖದಿಂದ ನಾನು ಹೇಗೆ ಕೇಳಿರುವೆನೋ ಅದರಂತೆ ನಾನು ಹೇಳುವ ಸಮಸ್ತ ತತ್ತ್ವಗಳನ್ನು ಏಕಾಗ್ರತೆಯುಳ್ಳ ಮನಸ್ಸಿನಿಂದ ಕೇಳು.

ಪ್ರಣಿಪತ್ಯ ಜಗದ್ಯೋನಿಮಜಮವ್ಯಯಮಾಶ್ರಯಮ್ ।
ಚರಾಚರಸ್ಯ ಜಗತೋ ಧಾತಾರಂ ಪರಮಂ ಪದಮ್ । ||೨೮||

ಬ್ರಹ್ಮಾಣಮಾದಿಪುರುಷಮುತ್ಪತ್ತಿಸ್ಥಿತಿಸಂಯಮೇ ।
ಯತ್ಕಾರಣಮನೌಪಮ್ಯಂ ಯತ್ರ ಸರ್ವಂ ಪ್ರತಿಷ್ಠಿತಮ್ ||೨೯||

ತಸ್ಮೈ ಹಿರಣ್ಯಗರ್ಭಾಯ ಲೋಕತನ್ತ್ರಾಯ ಧೀಮತೇ ।
ಪ್ರಣಮ್ಯ ಸಮ್ಯಗ್ವಕ್ಷ್ಯಾಮಿ ಭೂತವರ್ಗಮನುತ್ತಮಮ್ ||೩೦||

ಮಹದಾದ್ಯಂ ವಿಶೇಷಾನ್ತಂ ಸವೈರೂಪ್ಯಂ ಸಲಕ್ಷಣಮ್ ।
ಪ್ರಮಾಣೈಃ ಪಞ್ಚಭಿರ್ಗಮ್ಯಂ ಸ್ರೋತೋಭಿಃ ಷಡ್ಭಿರನ್ವಿತಮ್ ||೩೧||

---

೨೮. ಜಗತ್ತಿಗೆ ಕಾರಣನೂ ಜನ್ಮವಿಲ್ಲದವನೂ ನಾಶರಹಿತನೂ ಚರ-ಅಚರ ಪ್ರಪಂಚಕ್ಕೆ ಆಶ್ರಯನೂ ಸೃಷ್ಟಿಕರ್ತನೂ ಮತ್ತು ಸರ್ವೋತ್ತಮ ಪದ-ಸ್ವರೂಪನೂ ಆದ ಪರಮಾತ್ಮನಿಗೆ ವಂದಿಸುವೆನು.

೨೯. ಯಾವ ಪರಮಾತ್ಮನು ಜಗತ್ತಿನ ಸೃಷ್ಟಿ-ಸ್ಥಿತಿ-ಸಂಹಾರಗಳಲ್ಲಿ ಕಾರಣನೂ ಉಪಮಾನರಹಿತನೂ ಸಮಸ್ತ ಜಗತ್ತಿಗೆ ನೆಲೆಯಂತಿರುವವನೂ ಮತ್ತು ಆದಿ ಪುರುಷರೂಪನೂ ಆಗಿರುವನೋ ಅಂತಹ ಬ್ರಹ್ಮದೇವನನ್ನು ವಂದಿಸುವೆನು.

೩೦. ಸುವರ್ಣಮಯವಾದ ಜಗತ್ತಿನ ಅಂಡವನ್ನು ಧರಿಸಿದವನೂ ಲೋಕಪ್ರವರ್ತಕನೂ ಮತ್ತು ಜ್ಞಾನಪೂರ್ಣನೂ ಆದ ಪರಮಾತ್ಮನಿಗೆ ವಂದಿಸಿ ಉತ್ತಮವಾಗಿ ಮುಂದುವರೆದಿರುವ ಭೂತಸೃಷ್ಟಿಯನ್ನು ವರ್ಣಿಸುವೆನು.

೩೧. ಮಹತ್ತತ್ತ್ವವು ಆದಿಯಾಗಿ ಮಹಾಭೂತವಿಕಾರವೇ ಅಂತವಾಗಿರುವ, ಸಮಾನಲಕ್ಷಣ-ವಿಷಮಲಕ್ಷಣಗಳಿಂದ ಕೂಡಿರುವ, ಪ್ರತ್ಯಕ್ಷ ಮುಂತಾದ ಐದು ಪ್ರಮಾಣಗಳಿಗೆ ವೇದ್ಯವಾಗುವ ಮತ್ತು ಜನ್ಮ ಮುಂತಾದ ಆರುವಿಕಾರಗಳಿಂದ ಕೂಡಿದ ಭೂತಗಳ ಸೃಷ್ಟಿಯನ್ನು ವರ್ಣಿಸುವೆನು.

ಪುರುಷಾಧಿಷ್ಠಿತಂ ನಿತ್ಯಮನಿತ್ಯಮಿವ ಚ ಸ್ಥಿತಮ್ ।
ತಚ್ಛ್ರೂಯತಾಂ ಮಹಾಭಾಗ ಪರಮೇಣ ಸಮಾಧಿನಾ ||೩೨||

ಪ್ರಧಾನಂ ಕಾರಣಂ ಯತ್ತದವ್ಯಕ್ತಾಖ್ಯಂ ಮಹರ್ಷಯಃ ।
ಯದಾಹುಃ ಪ್ರಕೃತಿಂ ಸೂಕ್ಷ್ಮಾಂ ನಿತ್ಯಾಂ ಸದಸದಾತ್ಮಿಕಾಮ್ ||೩೩||

ಧ್ರುವಮಕ್ಷಯ್ಯಮಜರಮಮೇಯಂ ನಾನ್ಯಸಂಶ್ರಯಮ್ ।
ಗನ್ಧರೂಪರಸೈರ್ಹೀನಂ ಶಬ್ದಸ್ಪರ್ಶವಿವರ್ಜಿತಮ್ ||೩೪||

ಅನಾದ್ಯನ್ತಂ ಜಗದ್ಯೋನಿಂ ತ್ರಿಗುಣಪ್ರಭವಾಪ್ಯಯಮ್ ।
ಅಸಾಮ್ಪ್ರತಮವಿಜ್ಞೇಯಂ ಬ್ರಹ್ಮಾಗ್ರೇ ಸಮವರ್ತತ ||೩೫||

---

೩೨. ಚೇತನನಾದ ಆತ್ಮನಿಂದ ಪ್ರವೇಶಿಸಲ್ಪಟ್ಟ ಭೂತನಿಕಾಯವು ನಿತ್ಯವಾಗಿದ್ದರೂ ಅನಿತ್ಯದಂತೆ ಭಾಸವಾಗುವುದು. ಮಹಾಭಾಗ್ಯಶಾಲಿಯಾದ ಮುನಿಯೆ! ಆ ಭೂತನಿಕಾಯವನ್ನು ಉತ್ತಮವಾದ ಸಮಾಧಿಸ್ಥವಾದ ಮನಸ್ಸಿನಿಂದ ಕೇಳು.

೩೩. ಜಗತ್ತಿನ ಪ್ರವಾಹದಲ್ಲಿ ಪ್ರಧಾನವೆಂಬ ತತ್ತ್ವವು ಕಾರಣವು. ಅದನ್ನು ಮಹರ್ಷಿಗಳು ಅವ್ಯಕ್ತ ತತ್ತ್ವವೆಂದು ಕರೆಯುವರು ಮತ್ತು ಪ್ರಾಜ್ಞರು ಆ ತತ್ತ್ವವನ್ನು ಸೂಕ್ಷ್ಮವೂ ನಿತ್ಯವೂ ಸತ್-ಅಸತ್‌ರೂಪವಾದ ಪರಿಣಾಮವುಳ್ಳದ್ದೂ ಆದ ಪ್ರಕೃತಿಯೆಂದು ಹೇಳುವರು.

೩೪. ಆ ಪ್ರಕೃತಿತತ್ತ್ವವು ಶಾಶ್ವತವು, ನಾಶವಿಲ್ಲದಿರುವುದು, ಮುಪ್ಪಿಲ್ಲದುದು, ಅಳೆಯಲು ಸಾಧ್ಯವಿಲ್ಲದ್ದು, ಮತ್ತು ಬೇರೊಂದು ಆಶ್ರಯವನ್ನು ಅವಲಂಬಿಸಿಲ್ಲ. ಹಾಗು ಶಬ್ದ-ಸ್ಪರ್ಶ-ರೂಪ-ರಸ-ಗಂಧವೆಂಬ ಭೂತಗುಣಗಳಿಂದ ಶೂನ್ಯವಾಗಿರುವುದು.

೩೫. ಅಂತಹ ಪ್ರಧಾನವು ಆದಿ-ಅಂತಗಳಿಂದ ವರ್ಜಿತವೂ, ಜಗತ್ತಿನ ಪ್ರವಾಹಕ್ಕೆ ಕಾರಣವೂ ಸತ್ತ್ವ ಮುಂತಾದ ಗುಣಪರಿಣಾಮದ ಉತ್ಪತ್ತಿ-ಲಯಗಳಿಗೆ ಕಾರಣವೂ ಅನಾದಿಯೂ ಮತ್ತು ತಿಳಿಯಲು ಗಹನವೂ ಆಗಿದೆ. ಅದರಿಂದ ಮೊದಲು ಬ್ರಹ್ಮದೇವನು ಜನಿಸಿದನು.

ಪ್ರಲಯಸ್ತ್ವನು ತೇನೇದಂ ವ್ಯಾಪ್ತಮಾಸೀದಶೇಷತಃ ।
ಗುಣಸಾಮ್ಯಾತ್ತತಸ್ತಸ್ಮಾತ್ ಕ್ಷೇತ್ರಜ್ಞಾಧಿಷ್ಠಿತಾನ್ಮುನೇ ॥೩೬॥

ಗುಣಭಾವಾತ್ಸೃಜ್ಯಮಾನಾತ್ಸರ್ಗಕಾಲೇ ತತಃ ಪುನಃ ।
ಪ್ರಧಾನಂ ತತ್ತ್ವಮುದ್ಭೂತಂ ಮಹಾನ್ತಂ ತತ್ಸಮಾವೃಣೋತ್॥೩೭॥

ಯಥಾ ಬೀಜಂ ತ್ವಚಾ ತದ್ವದವ್ಯಕ್ತೇನಾವೃತೋ ಮಹಾನ್ ।
ಸಾತ್ತ್ವಿಕೋ ರಾಜಸಶ್ಚೈವ ತಾಮಸಶ್ಚ ತ್ರಿಧೋದಿತಃ ॥೩೮॥

ತತಸ್ತಸ್ಮಾದಹಂಕಾರಸ್ತ್ರಿವಿಧೋ ವೈ ವ್ಯಜಾಯತ ।
ವೈಕಾರಿಕಸ್ತೈಜಸಶ್ಚ ಭೂತಾದಿಶ್ಚ ಸ ತಾಮಸಃ ॥೩೯॥

---

೩೬. ಹಿಂದಿನ ಕಲ್ಪವು ಪ್ರಲಯವಾದ ಸಮಯದಲ್ಲಿ ಈ ಜಗತ್ತು ಸಂಪೂರ್ಣವಾಗಿ ಆ ಪ್ರಧಾನ ತತ್ತ್ವದಿಂದ ವ್ಯಾಪಿಸಲ್ಪಟ್ಟಿತ್ತು. ಮೊದಲು ಜನಿಸಿದ ಕ್ಷೇತ್ರಜ್ಞರೂಪನಾದ ಬ್ರಹ್ಮದೇವನಿಂದ ಪ್ರೇರೇಪಿಸಲ್ಪಟ್ಟ ಪ್ರಧಾನವು ಗುಣಸಾಮ್ಯರೂಪದಿಂದ ಚಲಿಸಿ ಸೃಷ್ಟಿಮಾಡಲು ಉನ್ಮುಖವಾಯಿತು.

೩೭. ತರುವಾಯ ಮತ್ತೆ ಸೃಷ್ಟಿ ಸಮಯದಲ್ಲಿ ಗುಣಗಳು ಸಾಮ್ಯಾವಸ್ಥೆಯನ್ನು ಬಿಟ್ಟು ತತ್ತ್ವ ಸೃಷ್ಟಿಯಾಗಿ ಪರಿಣಾಮ ಹೊಂದಲು ಮೊದಲು ಪ್ರಧಾನತತ್ತ್ವವು ಮಹತ್ತತ್ತ್ವವನ್ನು ಆವರಿಸಿಕೊಂಡಿತು.

೩೮. ಅಂಕುರಸೃಷ್ಟಿಗೆ ಕಾರಣವಾದ ಬೀಜವು ಹೊರಭಾಗದಲ್ಲಿ ಸಿಪ್ಪೆಯಿಂದ ಆವರಿಸಲ್ಪಟ್ಟಿರುವುದು. ಅಂತೆಯೆ ಒಳಗಿನಿಂದ ಒಡೆದು ಹುಟ್ಟುವ ಮಹತ್ತತ್ತ್ವವು ಪ್ರಧಾನದಿಂದ ಆವರಿಸಲ್ಪಟ್ಟಿತು. ಆ ಮಹತ್ತತ್ತ್ವವು ಸಾತ್ತ್ವಿಕ-ರಾಜಸ-ತಾಮಸವೆಂದು ಮೂರುಬಗೆಯಾಗಿದೆ.

೩೯. ಆ ಮಹತ್ತತ್ತ್ವದಿಂದ ವೈಕಾರಿಕ, ತೈಜಸ ಮತ್ತು ತಾಮಸ ಅಥವಾ ಭೂತಾದಿ ಎಂದು ಕರೆಯಲ್ಪಡುವ ಮೂರು ಬಗೆಯ ಅಹಂಕಾರವು ಸತ್ತ್ವ ಮುಂತಾದ ಮೂರುಗುಣಗಳ ಪರಿಣಾಮವಾಗಿ ಜನಿಸಿತು.

ಮಹತಾ ಚಾವೃತಃ ಸೋಽಪಿ ಯಥಾವ್ಯಕ್ತೇನ ವೈ ಮಹಾನ್ ।
ಭೂತಾದಿಸ್ತು ವಿಕುರ್ವಾಣಃ ಶಬ್ದತನ್ಮಾತ್ರಕಂ ತತಃ ॥೪೦॥

ಸಸರ್ಜ ಶಬ್ದತನ್ಮಾತ್ರಾದಾಕಾಶಂ ಶಬ್ದಲಕ್ಷಣಮ್ ।
ಆಕಾಶಂ ಶಬ್ದಮಾತ್ರಂ ತು ಭೂತಾದಿಶ್ಚಾವೃಣೋತ್ತತಃ ॥೪೧॥

ಸ್ಪರ್ಶತನ್ಮಾತ್ರಮೇವೇಹ ಜಾಯತೇ ನಾತ್ರ ಸಂಶಯಃ ।
ಬಲವಾನ್ ಜಾಯತೇ ವಾಯುಸ್ತಸ್ಯ ಸ್ಪರ್ಶಗುಣೋ ಮತಃ ॥೪೨॥

ವಾಯುಶ್ಚಾಪಿ ವಿಕುರ್ವಾಣೋ ರೂಪಮಾತ್ರಂ ಸಸರ್ಜ ಹ ।
ಜ್ಯೋತಿರುತ್ಪದ್ಯತೇ ವಾಯೋಸ್ತದ್ರೂಪಗುಣಮುಚ್ಯತೇ ॥೪೩॥

---

೪೦. ಅವ್ಯಕ್ತ ತತ್ತ್ವದಿಂದ ಮಹತ್ತತ್ತ್ವವು ಆವರಿಸಲ್ಪಟ್ಟಂತೆ ಮಹತ್ತತ್ತ್ವದಿಂದ ಆವರಿಸಲ್ಪಟ್ಟ ಭೂತಾದಿ ಎಂಬ ತಾಮಸಾಹಂಕಾರವು ವಿಕೃತಿಯ ಸೃಷ್ಟಿಯಲ್ಲಿ ತೊಡಗಿ ಶಬ್ದತನ್ಮಾತ್ರವೆಂಬ ತತ್ತ್ವವನ್ನು ಸೃಷ್ಟಿ-ಮಾಡಿತು.

೪೧. ಮತ್ತು ತಾಮಸಾಹಂಕಾರವು ಶಬ್ದತನ್ಮಾತ್ರದಿಂದ ಶಬ್ದಗುಣಕ್ಕೆ ಆಧಾರವಾದ ಆಕಾಶವನ್ನು ಸೃಷ್ಟಿಸಿತು. ತರುವಾಯ ಭೂತಾದಿಯು ಶಬ್ದ-ತನ್ಮಾತ್ರ-ಆಕಾಶವೆಂಬ ಸೃಷ್ಟಿಯಾದ ವಸ್ತುವನ್ನು ಆವರಿಸಿಕೊಂಡಿತು.

೪೨. ಹಾಗೆ ಸೃಷ್ಟಿಗೆ ಉನ್ಮುಖವಾಗಿರುವ ಆಕಾಶದಿಂದ ಸ್ಪರ್ಶತ-ನ್ಮಾತ್ರವು ಹುಟ್ಟುವುದು. ಅದರಲ್ಲಿ ಸಂಶಯವಿಲ್ಲ. ಸ್ಪರ್ಶತನ್ಮಾತ್ರದಿಂದ ಬಲದಿಂದ ಕೂಡಿದ ವಾಯುವು ಜನಿಸುತ್ತದೆ. ಅಂತಹ ವಾಯುವಿನಲ್ಲಿ ಸ್ಪರ್ಶಗುಣವು ಇರುವುದು.

೪೩. ವಾಯುವು ತನ್ನ ಕಾರ್ಯಸೃಷ್ಟಿಯಲ್ಲಿ ಸಿದ್ಧವಾಗಿ ರೂಪತನ್ಮಾತ್ರ-ವನ್ನು ಸೃಜಿಸುವುದು. ಮತ್ತು ವಾಯುವಿನಿಂದ ತೇಜಸ್ಸು ಹುಟ್ಟುತ್ತದೆ. ಅಂತಹ ತೇಜಸ್ಸು ರೂಪಗುಣದಿಂದ ಸೇರಿರುವುದೆಂದು ಹೇಳಲ್ಪಟ್ಟಿದೆ.

ಸ್ಪರ್ಶಮಾತ್ರಸ್ತು ವೈ ವಾಯೂ ರೂಪಮಾತ್ರಂ ಸಮಾವೃಣೋತ್ ।
ಜ್ಯೋತಿಶ್ಚಾಪಿ ವಿಕುರ್ವಾಣಂ ರಸಮಾತ್ರಂ ಸಸರ್ಜ ಹ ॥೪೪॥

ಸಂಭವನ್ತಿ ತತೋ ಹ್ಯಾಪಶ್ಚಾಸನ್ವೈ ತಾ ರಸಾತ್ಮಿಕಾಃ ।
ರಸಮಾತ್ರಂ ತು ತಾ ಹ್ಯಾಪೋ ರೂಪಮಾತ್ರಂ ಸಮಾವೃಣೋತ್ ॥೪೫॥

ಆಪಶ್ಚಾಪಿ ವಿಕುರ್ವತ್ಯೋ ಗನ್ಧಮಾತ್ರಂ ಸಸರ್ಜಿರೇ ।
ಸಂಘಾತೋ ಜಾಯತೇ ತಸ್ಮಾತ್ತಸ್ಯ ಗನ್ಧೋ ಗುಣೋ ಮತಃ ॥೪೬॥

ತಸ್ಮಿಂಸ್ತಸ್ಮಿಂಸ್ತು ತನ್ಮಾತ್ರಂ ತೇನ ತನ್ಮಾತ್ರತಾ ಸ್ಮೃತಾ ।
ಅವಿಶೇಷವಾಚಕತ್ವಾದವಿಶೇಷಾಸ್ತತಶ್ಚ ತೇ ॥೪೭॥

---

೪೪. ಸ್ಪರ್ಶತನ್ಮಾತ್ರಲಕ್ಷಣವಾದ ವಾಯುವು ರೂಪತನ್ಮಾತ್ರ-ತೇಜಸ್ಸುಗಳನ್ನು ಆವರಿಸಿಕೊಂಡಿತು. ಆಗ ವಿಕಾರೋತ್ಪತ್ತಿಯಲ್ಲಿ ಸಮರ್ಥವಾದ ತೇಜಸ್ಸು ರಸತನ್ಮಾತ್ರವನ್ನು ಸೃಷ್ಟಿಮಾಡಿತು.

೪೫. ಅದರಿಂದ ಜಲತತ್ತ್ವವು ಉತ್ಪತ್ತಿಯಾಯಿತು. ಆ ಜಲವು ರಸಗುಣದಿಂದ ಕೂಡಿರುವುದು. ರಸತನ್ಮಾತ್ರಸ್ವರೂಪವಾದ ಜಲವನ್ನು ರೂಪ-ತನ್ಮಾತ್ರಸ್ವರೂಪವಾದ ಜ್ಯೋತಿಯು ಆವರಿಸಿಕೊಂಡಿತು.

೪೬. ಆಗ ವಿಕಾರವಸ್ತು ಉತ್ಪಾದಕವಾದ ಜಲವು ಗಂಧತನ್ಮಾತ್ರವನ್ನು ಸೃಷ್ಟಿಸಿತು. ತನ್ಮೂಲಕವಾಗಿ ಸಂಘಾತರೂಪವಾದ ಪೃಥಿವಿಯು ಹುಟ್ಟಿತು. ಪೃಥಿವಿಯಲ್ಲಿ ಗಂಧವೆಂಬ ಗುಣವು ಇರುವುದು.

೪೭. ಆಕಾಶ ಮುಂತಾದ ಭೂತತತ್ತ್ವಗಳಲ್ಲಿ ಶಬ್ದ ಮುಂತಾದುವುಗಳು ಮಾತ್ರ ನಿಜರೂಪವಾಗಿರುವುದರಿಂದ ತನ್ಮಾತ್ರವೆಂದು ಅನ್ವರ್ಥತೆಯು ಸ್ಮರಿಸಲ್ಪಟ್ಟಿದೆ. ಅಂತಹ ತನ್ಮಾತ್ರಶಬ್ದಗಳು ಏನೊಂದು ವಿಶೇಷವನ್ನು ಬೋಧಿಸದಿರುವುದರಿಂದ ಅವಿಶೇಷವೆಂದು ಕರೆಯಲ್ಪಡುವುವು.

ನ ಶಾನ್ತಾ ನಾಪಿ ಘೋರಾಸ್ತೇ ನ ಮೂಢಾಶ್ಚಾವಿಶೇಷತಃ ।
ಭೂತತನ್ಮಾತ್ರಸರ್ಗೋಽಯಮಹಙ್ಕಾರಾತ್ತು ತಾಮಸಾತ್ ॥೪೮॥

ವೈಕಾರಿಕಾದಹಙ್ಕಾರಾತ್ಸತ್ತ್ವೋದ್ರಿಕ್ತಾತ್ತು ಸಾತ್ತ್ವಿಕಾತ್ ।
ವೈಕಾರಿಕಃ ಸ ಸರ್ಗಸ್ತು ಯುಗಪತ್ಸಮ್ಪ್ರವರ್ತತೇ ॥೪೯॥

ಬುದ್ಧೀನ್ದ್ರಿಯಾಣಿ ಪಞ್ಚೈವ ಪಞ್ಚಕರ್ಮೇನ್ದ್ರಿಯಾಣಿ ಚ ।
ತೈಜಸಾನೀನ್ದ್ರಿಯಾಣ್ಯಾಹುರ್ದೇವಾ ವೈಕಾರಿಕಾ ದಶ ॥೫೦॥

ಏಕಾದಶಂ ಮನಸ್ತತ್ರ ದೇವಾ ವೈಕಾರಿಕಾಃ ಸ್ಮೃತಾಃ ।
ಶ್ರೋತ್ರಂ ತ್ವಕ್ಚಕ್ಷುಷೀ ಜಿಹ್ವಾ ನಾಸಿಕಾ ಚೈವ ಪಞ್ಚಮೀ ॥೫೧॥

---

೪೮. ಅಂತಹ ತನ್ಮಾತ್ರಗಳು ಶಾಂತ–ಘೋರ–ಮೂಢಗಳಾಗುವುದಿಲ್ಲ. ಅವುಗಳಲ್ಲಿ ಅನ್ಯೋನ್ಯ ವಿಲಕ್ಷಣತೆಯನ್ನು ತೋರಿಸುವ ವಿಶೇಷವಿರುವುದಿಲ್ಲ. ಹೀಗೆ ತಾಮಸಾಹಂಕಾರದಿಂದ ತನ್ಮಾತ್ರಗಳಿಂದ ಕೂಡಿದ ಪಂಚಭೂತಗಳ ಉತ್ಪತ್ತಿಯಾಗುವುದು.

೪೯. ಸತ್ತ್ವಗುಣದ ಉದ್ರೇಕವುಳ್ಳದ್ದರಿಂದ ಸಾತ್ತ್ವಿಕವೆಂದು ಕರೆಯಲ್ಪಡುವ ವೈಕಾರಿಕ ಅಹಂಕಾರದಿಂದ ವೈಕಾರಿಕವೆಂದು ಕಾರಣಶಬ್ದದಿಂದ ಕರೆಯಲ್ಪಡುವ ಅಂತಃಕರಣದ ಸೃಷ್ಟಿಯು ಒಂದೇಸಲವಾಗುವುದು.

೫೦. ಪಂಚಜ್ಞಾನೇಂದ್ರಿಯಗಳನ್ನೂ ಹಾಗು ಪಂಚಕರ್ಮೇಂದ್ರಿಯಗಳನ್ನೂ ತೈಜಸ ಅಹಂಕಾರದಿಂದ ಜನಿಸಿದುವುಗಳೆಂದು ಪ್ರಾಜ್ಞರು ಹೇಳುವರು. ಹತ್ತು ಇಂದ್ರಿಯಶಕ್ತಿಗಳನ್ನು ವೈಕಾರಿಕದೇವ ಎಂದು ಕರೆಯುತ್ತಾರೆ.

೫೧. ಆ ಹತ್ತು ಇಂದ್ರಿಯಗಳು ವೈಕಾರಿಕದೇವ ಎಂದು ಸ್ಮರಿಸಲ್ಪಟ್ಟಿವೆ. ಹನ್ನೊಂದನೆಯದಾಗಿ ಮನಸ್ಸು ಎಂಬ ಇಂದ್ರಿಯವಿದೆ. ಶ್ರೋತ್ರ-ತ್ವಕ್-ಚಕ್ಷು-ಜಿಹ್ವಾ ಮತ್ತು ನಾಸಿಕಾ—ಎಂಬುವು ಐದು ಜ್ಞಾನೇಂದ್ರಿಯಗಳು.

ಶಬ್ದಾದೀನಾಮವಾಪ್ತ್ಯರ್ಥಂ ಬುದ್ಧಿಯುಕ್ತಾನಿ ವಕ್ಷ್ಯತೇ ।
ಪಾದೌ ಪಾಯುರುಪಸ್ಥಶ್ಚ ಹಸ್ತೌ ವಾಕ್ಪಞ್ಚಮೀ ಭವೇತ್ ॥೩೨॥

ಗತಿರ್ವಿಸರ್ಗೋ ಹ್ಯಾನನ್ದಃ ಶಿಲ್ಪಂ ವಾಕ್ಯಂ ಚ ಕರ್ಮ ತತ್ ।
ಆಕಾಶಂ ಶಬ್ದಮಾತ್ರಂ ತು ಸ್ಪರ್ಶಮಾತ್ರಂ ಸಮಾವಿಶತ್ ॥೩೩॥

ದ್ವಿಗುಣೋ ಜಾಯತೇ ವಾಯುಸ್ತಸ್ಯ ಸ್ಪರ್ಶೋ ಗುಣೋ ಮತಃ ।
ರೂಪಂ ತಥೈವಾವಿಶತಃ ಶಬ್ದಸ್ಪರ್ಶಗುಣಾವುಭೌ ॥೩೪॥

ತ್ರಿಗುಣಸ್ತು ತತಶ್ಚಾಗ್ನಿಃ ಸ ಶಬ್ದಸ್ಪರ್ಶರೂಪವಾನ್ ।
ಶಬ್ದಃ ಸ್ಪರ್ಶಶ್ಚ ರೂಪಂ ಚ ರಸಮಾತ್ರಂ ಸಮಾವಿಶತ್ ॥೩೫॥

---

೩೨. ಶಬ್ದ ಮುಂತಾದ ವಿಷಯಗಳನ್ನು ಗ್ರಹಿಸುವುದಕ್ಕಾಗಿ ಶ್ರೋತ್ರಾದಿ ಇಂದ್ರಿಯಗಳಿರುವುದರಿಂದ ಆ ಇಂದ್ರಿಯಗಳು ಜ್ಞಾನೇಂದ್ರಿಯಗಳೆಂದು ಹೇಳಲ್ಪಡುವುವು. ಪಾದ-ಪಾಯು-ಉಪಸ್ಥ-ಪಾಣಿ ಮತ್ತು ವಾಕ್—ಇವು ಐದು ಕರ್ಮೇಂದ್ರಿಯಗಳು.

೩೩. ಹಿಂದೆ ಹೇಳಿರುವ ಕರ್ಮೇಂದ್ರಿಯಗಳಿಗೆ ಕ್ರಮವಾಗಿ ಗಮನ-ವಿಸರ್ಜನೆ-ಆನಂದ-ಶಿಲ್ಪಕರ್ಮ ಮತ್ತು ವಾಕ್ಯ—ಎಂಬುವು ಐದು ಕರ್ಮಗಳಾಗಿವೆ. ಆಕಾಶ-ಶಬ್ದ ತನ್ಮಾತ್ರಗಳು ಸ್ಪರ್ಶತನ್ಮಾತ್ರವನ್ನು ಆವೇಶಮಾಡಿರುವುವು.

೩೪. ಆಕಾಶ-ಶಬ್ದ ತನ್ಮಾತ್ರಗಳ ಆವೇಶದಿಂದ ವಾಯುವು ಶಬ್ದ-ಸ್ಪರ್ಶವೆಂಬ ಎರಡು ಗುಣಗಳುಳ್ಳದ್ದಾಗಿದೆ. ವಿಶೇಷವಾಗಿ ಸ್ಪರ್ಶಗುಣವು ವಾಯುವಿನಲ್ಲಿ ಹುಟ್ಟಿರುವುದು. ಮುಂದೆ ಶಬ್ದ-ಸ್ಪರ್ಶಗುಣಗಳು ರೂಪತನ್ಮಾತ್ರವನ್ನು ಆವೇಶಮಾಡುವುವು.

೩೫. ಹಾಗೆ ಎರಡು ಗುಣಗಳ ಆವೇಶವುಳ್ಳ ರೂಪತನ್ಮಾತ್ರದಿಂದ ಶಬ್ದ-ಸ್ಪರ್ಶ-ರೂಪವೆಂಬ ಮೂರು ಗುಣಗಳಿಂದ ಕೂಡಿದ ತೇಜಸ್ಸು ಜನಿಸಿತು. ಶಬ್ದ-ಸ್ಪರ್ಶ-ರೂಪವೆಂಬ ಮೂರು ತನ್ಮಾತ್ರಗಳು ರಸತನ್ಮಾತ್ರದಲ್ಲಿ ಆವೇಶ ಹೊಂದಿದುವು.

ತಸ್ಮಾಚ್ಚತುರ್ಗುಣಾ ಹ್ಯಾಪೋ ವಿಜ್ಞೇಯಾಸ್ತಾ ರಸಾತ್ಮಿಕಾಃ ।
ಶಬ್ದಃ ಸ್ಪರ್ಶಶ್ಚ ರೂಪಂ ಚ ರಸೋ ಗನ್ಧಂ ಸಮಾವಿಶತ್ ॥೫೬॥

ಸಂಹತಾ ಗನ್ಧಮಾತ್ರೇಣ ಆವೃಣ್ವಂಸ್ತೇ ಮಹೀಮಿಮಾಮ್ ।
ತಸ್ಮಾತ್ಪಞ್ಚಗುಣಾ ಭೂಮಿಃ ಸ್ಥೂಲಾ ಭೂತೇಷು ದೃಶ್ಯತೇ ॥೫೭॥

ಶಾನ್ತಾ ಘೋರಾಶ್ಚ ಮೂಢಾಶ್ಚ ವಿಶೇಷಾಸ್ತೇನ ತೇ ಸ್ಮೃತಾಃ ।
ಪರಸ್ಪರಾನುಪ್ರವೇಶಾದ್ಧಾರಯನ್ತಿ ಪರಸ್ಪರಮ್ ॥೫೮॥

ಭೂಮೇರನ್ತಸ್ತ್ವಿಮಂ ಸರ್ವಂ ಲೋಕಾಲೋಕಂ ಘನಾವೃತಮ್ ॥೫೯॥

ವಿಶೇಷಾಶ್ಚೇನ್ದ್ರಿಯಗ್ರಾಹ್ಯಾ ನಿಯತತ್ವಾಚ್ಚ ತೇ ಸ್ಮೃತಾಃ ।
ಗುಣಂ ಪೂರ್ವಸ್ಯ ಪೂರ್ವಸ್ಯ ಪ್ರಾಪ್ನುವನ್ತ್ಯುತ್ತರೋತ್ತರಮ್ ॥೬೦॥

---

೫೬. ಅದರಿಂದ ರಸವೆಂಬ ವಿಶೇಷಗುಣದಿಂದ ಕೂಡಿದ ಜಲವು ಶಬ್ದ-ಸ್ಪರ್ಶ-ರೂಪ-ರಸವೆಂಬ ನಾಲ್ಕು ಗುಣಗಳಿಂದ ಕೂಡಿ ಜನಿಸಿತು. ತರುವಾಯ ಶಬ್ದ-ಸ್ಪರ್ಶ-ರೂಪ-ರಸತನ್ಮಾತ್ರಗಳು ಗಂಧತನ್ಮಾತ್ರದಲ್ಲಿ ಆವೇಶಹೊಂದಿದುವು.

೫೭. ಶಬ್ದ ಮುಂತಾದ ನಾಲ್ಕು ತನ್ಮಾತ್ರಗಳು ಗಂಧತನ್ಮಾತ್ರದಲ್ಲಿ ಆವೇಶವಾಗಿ ಸಂಘಾತರೂಪವಾಗಿ ಭೂಮಿಯನ್ನು ಆವರಿಸಿದುವು. ಅದರಿಂದ ಹುಟ್ಟಿದ ಶಬ್ದ-ಸ್ಪರ್ಶ-ರೂಪ-ರಸ-ಗಂಧವೆಂಬ ಐದು ಗುಣಗಳಿಂದ ಕೂಡಿದ ಭೂಮಿಯು ಪಂಚಭೂತಗಳಲ್ಲಿ ಸ್ಥೂಲವಾಗಿ ಕಾಣುವುದು.

೫೮. ಹೀಗೆ ಜನಿಸಿದ ಸ್ಥೂಲಾಕಾರದ ಮಹಾಭೂತಗಳು ಶಾಂತ-ಘೋರ-ಮೂಢರೂಪವನ್ನು ಹೊಂದಿರುವುವು. ಈ ತತ್ತ್ವಗಳು ಒಂದನ್ನೊಂದು ಆವೇಶಮಾಡಿ ಸಂಘಾತರೂಪದಿಂದ ಧರಿಸಿಕೊಂಡಿವೆ.

೫೯. ಶಾಂತ, ಘೋರ ಮತ್ತು ಮೂಢರೂಪವಾದ ಭೂತತತ್ತ್ವಗಳು ಭೂಗೋಳದ ಒಳಗಿರುವ, ದಟ್ಟವಾಗಿ ಆವರಿಸಲ್ಪಟ್ಟ ಸಮಸ್ತ ಲೋಕಾಲೋಕ-ಪ್ರಪಂಚವನ್ನು ಧರಿಸಿಕೊಂಡಿರುವುವು.

೬೦. ಇಂದ್ರಿಯಗಳಿಗೆ ಗ್ರಾಹ್ಯವಾದ ಶಬ್ದ-ಸ್ಪರ್ಶ ಮುಂತಾದುವುಗಳು ಆಯಾಯ ಇಂದ್ರಿಯಗಳಿಗೆ ಮಾತ್ರ ನಿಯತವಾಗಿ ವೇದ್ಯವಾಗುವುದರಿಂದ ವಿಶೇಷವೆಂದು ಕರೆಯಲ್ಪಡುವುವು. ಮುಂದೆ ಮುಂದೆ ಹುಟ್ಟುವ ಕಾರ್ಯವು ಹಿಂದಿನ ಕಾರಣದ ಗುಣವನ್ನು ಹೊಂದುವುದು.

ನಾನಾವೀರ್ಯಾಃ ಪೃಥಗ್ಭೂತಾಃ ಸಪ್ತೈತೇ ಸಂಹತಿಂ ವಿನಾ ।
ನಾಶಕ್ನುವನ್ಪ್ರಜಾಃ ಸ್ರಷ್ಟುಮಸಮಾಗಮ್ಯ ಕೃತ್ಸ್ನಶಃ ||೬೧||

ಸಮೇತ್ಯಾನ್ಯೋಽನ್ಯಸಂಯೋಗಮನ್ಯೋಽನ್ಯಾಶ್ರಯಿಣಶ್ಚ ತೇ ।
ಏಕಸಂಘಾತಚಿಹ್ನಾಶ್ಚ ಸಂಪ್ರಾಪ್ಯೈಕ್ಯಮಶೇಷತಃ ||೬೨||

ಪುರುಷಾಧಿಷ್ಠಿತತ್ವಾಚ್ಚ ಅವ್ಯಕ್ತಾನುಗ್ರಹೇಣ ಚ ।
ಮಹದಾದ್ಯಾ ವಿಶೇಷಾನ್ತಾ ಹ್ಯಣ್ಡಮುತ್ಪಾದಯನ್ತಿ ತೇ ||೬೩||

ಜಲಬುದ್ಬುದವತ್ತತ ಕ್ರಮಾದ್ವೈ ವೃದ್ಧಿಮಾಗತಮ್ ।
ಭೂತೇಭ್ಯೋಽಣ್ಡಂ ಮಹಾಬುದ್ಧೇ ಬೃಹತ್ತದುದಕೇಶಯಮ್||೬೪||

---

೬೧. ಅನೇಕ ಬಗೆಯ ವೀರ್ಯದಿಂದ ಕೂಡಿದ ಮಹತ್ತತ್ತ್ವ ಮುಂತಾದ ಏಳು ತತ್ತ್ವಗಳು ಒಂದರಲ್ಲಿ ಮತ್ತೊಂದು ಸಂಪೂರ್ಣವಾಗಿ ಬೆರೆತು ಸಂಘಾತ-ರೂಪವನ್ನು ಹೊಂದದೆ ಬೇರೆಯಾಗಿದ್ದುಕೊಂಡು ಪ್ರಜೆಗಳನ್ನು ಸೃಷ್ಟಿಮಾಡಲು ಸಮರ್ಥವಾಗುವುದಿಲ್ಲ.

೬೨. ಆದುದರಿಂದ ಏಳು ತತ್ತ್ವಗಳು ಪರಸ್ಪರ ಮಿಶ್ರಣವನ್ನು ಹೊಂದಿ ಹಾಗು ಅನ್ಯೋನ್ಯತತ್ತ್ವವನ್ನು ಆಶ್ರಯಿಸಿಕೊಂಡು ಒಂದು ಸಂಘಾತ-ರೂಪದ ಚಿಹ್ನವನ್ನು ಹೊಂದಿಕೊಂಡುವುಗಳಾಗಿ ಸಂಪೂರ್ಣವಾಗಿ ಐಕ್ಯವನ್ನು ಪಡೆಯುವುವು.

೬೩. ಹೀಗೆ ಸಂಪೂರ್ಣವಾಗಿ ಐಕ್ಯವನ್ನು ಹೊಂದಿದ ಮಹದಾದಿ ವಿಶೇಷಾಂತತತ್ತ್ವಗಳು ಮೂಲಕಾರಣವಾದ ಅವ್ಯಕ್ತತತ್ತ್ವದ ಅನುಗ್ರಹ-ದಿಂದಲೂ ಮತ್ತು ಪುರುಷತತ್ತ್ವದ ನಿಯಾಮಕತ್ವದಿಂದಲೂ ಬ್ರಹ್ಮಾಂಡವನ್ನು ಸೃಷ್ಟಿಮಾಡುತ್ತವೆ.

೬೪. ಮಹಾಪ್ರಜ್ಞಾಶಾಲಿಯಾದ ಮುನಿಯೆ! ಭೂತತತ್ತ್ವಗಳಿಂದ ಜನಿಸಿದ, ಬೃಹದಾಕಾರದ ಮತ್ತು ನೀರಿನಲ್ಲಿರುವ ಆ ಬ್ರಹ್ಮಾಂಡವು ನೀರಿನ ಗುಳ್ಳೆಯಂತೆ ಕ್ರಮವಾಗಿ ವೃದ್ಧಿಯನ್ನು ಹೊಂದಿತು.

ಪ್ರಾಕೃತೇಽಣ್ಡೇ ವಿವೃದ್ಧಃ ಸನ್ ಕ್ಷೇತ್ರಜ್ಞೋ ಬ್ರಹ್ಮಸಂಜ್ಞಿತಃ ॥೬೫॥

ಸ ವೈ ಶರೀರೀ ಪ್ರಥಮಃ ಸ ವೈ ಪುರುಷ ಉಚ್ಯತೇ ।
ಆದಿಕರ್ತಾ ಚ ಭೂತಾನಾಂ ಬ್ರಹ್ಮಾಗ್ರೇ ಸಮವರ್ತತ ॥೬೬॥

ತೇನ ಸರ್ವಮಿದಂ ವ್ಯಾಪ್ತಂ ತ್ರೈಲೋಕ್ಯಂ ಸಚರಾಚರಮ್ ।
ಮೇರುಸ್ತಸ್ಯಾನುಸಂಭೂತೋ ಜರಾಯುಶ್ಚಾಪಿ ಪರ್ವತಾಃ ॥೬೭॥

ಸಮುದ್ರಾ ಗರ್ಭಸಲಿಲಂ ತಸ್ಯಾಣ್ಡಸ್ಯ ಮಹಾತ್ಮನಃ ।
ತಸ್ಮಿನ್ನಣ್ಡೇ ಜಗತ್ಸರ್ವಂ ಸದೇವಾಸುರಮಾನುಷಮ್ ॥೬೮॥

ದ್ವೀಪಾದ್ಯದ್ರಿಸಮುದ್ರಾಶ್ಚ ಸಜ್ಯೋತಿರ್ಲೋಕಸಂಗ್ರಹಃ ॥೬೯॥

---

೬೫. ನೀರಿನ ಗುಳ್ಳೆಯಂತೆ ವೃದ್ಧಿಹೊಂದಿದ, ಆ ಪ್ರಾಕೃತವಾದ ಅಂಡದಲ್ಲಿ ಬ್ರಹ್ಮ ಎಂಬ ನಾಮಾಂಕಿತನಾದ ಚೇತನಪುರುಷನು ವೃದ್ಧಿ-ಹೊಂದಿದನು. ಲೋಕರೂಪವಾದ ಅಂಡವು ಕ್ಷೇತ್ರರೂಪವಾದುದರಿಂದ ಅದನ್ನು ಅರಿಯುವ ಬ್ರಹ್ಮನು ಕ್ಷೇತ್ರಜ್ಞನೆಂದು ಕರೆಯಲ್ಪಡುವನು.

೬೬. ಆ ಬ್ರಹ್ಮದೇವನು ಶರೀರಧಾರಿಗಳಲ್ಲಿ ಪ್ರಥಮನು. ಮತ್ತು ಅವನು ಪುರುಷನೆಂದು ಕರೆಯಲ್ಪಡುವನು. ಮುಂದೆ ಹುಟ್ಟುವ ಭೂತಗಳಿಗೆ ಪ್ರಥಮಕಾರಣನಾದ ಆ ಬ್ರಹ್ಮದೇವನು ಮೊದಲು ಜನಿಸಿದನು.

೬೭. ಚರ-ಅಚರ ವರ್ಗದಿಂದ ಕೂಡಿದ ಈ ಮೂರು ಲೋಕಗಳೆಲ್ಲವೂ ಆ ಬ್ರಹ್ಮದೇವನಿಂದ ವ್ಯಾಪಿಸಲ್ಪಟ್ಟವೆ. ಹಾಗೆ ಜನ್ಮವೆತ್ತಿದ ಬ್ರಹ್ಮದೇವನಿಗೆ ಬಾಹ್ಯವಾಗಿ ಆವರಿಸಿದ್ದ ಮೇರು ಮತ್ತು ಇತರ ಪರ್ವತಗಳು ಗರ್ಭಕೋಶದಂತೆ ಜನಿಸಿದುವು.

೬೮. ಮತ್ತು ಮಹಾತ್ಮನಾದ ಬ್ರಹ್ಮದೇವನು ಆವಿರ್ಭವಿಸಿದ ಆ ಬ್ರಹ್ಮಾಂಡಕ್ಕೆ ಸಮುದ್ರಗಳು ಗರ್ಭದ ಉದಕದಂತೆ ಇದ್ದುವು. ಆ ಬ್ರಹ್ಮಾಂಡದಲ್ಲಿ ದೇವ-ಅಸುರ-ಮಾನುಷರಿಂದ ಕೂಡಿದ ಸಮಸ್ತ ಜಗತ್ತು ಕಾಣಿಸಿತು.

೬೯. ಮತ್ತು ಸಮಸ್ತ ದ್ವೀಪಗಳು, ಎಲ್ಲ ಪರ್ವತಗಳು, ಅಶೇಷ ಸಮುದ್ರಗಳು, ನಿಖಿಲತೇಜೋಮಂಡಲ ಮುಂತಾದ ಲೋಕಗಳ ಸಂಗ್ರಹವು ಆ ಬ್ರಹ್ಮಾಂಡದಲ್ಲಿ ಅಡಗಿಹೋಗಿರುವುದು.

ಜಲಾನಿಲಾನಲಾಕಾಶೈಸ್ತತೋ ಭೂತಾದಿನಾ ಬಹಿಃ ।
ವೃತಮಣ್ಡಂ ದಶಗುಣೈರೇಕೈಕತ್ವೇನ ತೈಃ ಪುನಃ ||೭೦||

ಮಹತಾ ತತ್ಪ್ರಮಾಣೇನ ಸಹೈವಾನೇನ ವೇಷ್ಟಿತಃ ।
ಮಹಾಂಸ್ತೈಃ ಸಹಿತಃ ಸರ್ವೈರವ್ಯಕ್ತೇನ ಸಮಾವೃತಃ ||೭೦||

ಏಭಿರಾವರಣೈರಣ್ಡಂ ಸಪ್ತಭಿಃ ಪ್ರಾಕೃತೈರ್ವೃತಮ್ ।
ಅನ್ಯೋನ್ಯಮಾವೃತ್ಯ ಚ ತಾ ಅಷ್ಟೌ ಪ್ರಕೃತಯಃ ಸ್ಥಿತಾಃ ||೭೨||

ಏಷಾ ಸಾ ಪ್ರಕೃತಿರ್ನಿತ್ಯಾ ತದನ್ತಃ ಪುರುಷಶ್ಚ ಸಃ ।
ಬ್ರಹ್ಮಾಖ್ಯಃ ಕಥಿತೋ ಯಸ್ತೇ ಸಮಾಸಾಚ್ಛ್ರೂಯತಾಂ ಪುನಃ ||೭೩||

---

೭೦. ಇಂತಹ ಬ್ರಹ್ಮಾಂಡವು ಹೊರವಲಯನಲ್ಲಿ ಕ್ರಮವಾಗಿ ಜಲ-ತೇಜಸ್ಸು-ವಾಯು-ಆಕಾಶ ಮತ್ತು ಭೂತಾದಿ ತತ್ತ್ವಗಳಿಂದ ಆವರಿಸಲ್ಪಟ್ಟಿರುವುದು. ಆವರಿಸಿದ ತತ್ತ್ವಗಳು ಒಂದಕ್ಕಿಂತ ಮತ್ತೊಂದು ದ್ವಿಗುಣವಾಗಿ ಆವರಿಸಿಕೊಂಡಿವೆ

೭೧. ಭೂತಾದಿಯಿಂದ ಆವರಿಸಲ್ಪಟ್ಟ ವಲಯವು ಹಾಗೆಯೆ ದ್ವಿಗುಣವಾದ ಮಹತ್ತತ್ತ್ವದಿಂದ ಆವರಿಸಲ್ಪಟ್ಟಿದೆ. ಸಮಸ್ತ ತತ್ತ್ವಗಳಿಂದ ಗರ್ಭಿತವಾದ ಮಹತ್ತತ್ತ್ವವು ಹೊರಗಡೆಯಿಂದ ಅವ್ಯಕ್ತತತ್ತ್ವದಿಂದ ಆವರಿಸಲ್ಪಟ್ಟಿದೆ.

೭೨. ಹೀಗೆ ಪ್ರಾಕೃತವಾದ ಏಳು ಬಾಹ್ಯಾವರಣಗಳಿಂದ ಬ್ರಹ್ಮಾಂಡವು ಸುತ್ತಲ್ಪಟ್ಟಿರುವುದು. ಅವ್ಯಕ್ತತತ್ತ್ವವೂ ಸೇರಿ ಎಂಟು ತತ್ತ್ವಗಳು ಅನ್ಯೋನ್ಯವಾಗಿ ಆವರಿಸಿಕೊಂಡಿದ್ದು ಸಮಸ್ತ ಜಗತ್ತಿಗೆ ಕಾರಣಗಳಾಗಿರುವುವು.

೭೩. ಇಂತಹ ತತ್ತ್ವಸಮಷ್ಟಿರೂಪವಾದ ಪ್ರಕೃತಿಯು ನಿತ್ಯವಾದುದು. ಅದರ ಒಳಗೆ ಇರುವ ಕ್ಷೇತ್ರಜ್ಞನೆನಿಸಿರುವ ಪುರುಷನು ನಿತ್ಯಸ್ವರೂಪನಾಗಿರುವನು. ಬ್ರಹ್ಮನೆಂಬ ನಾಮಾಂಕನವುಳ್ಳ ಕ್ಷೇತ್ರಜ್ಞನ ವಿಷಯದಲ್ಲಿ ಮತ್ತೊಂದು ಸಂಗ್ರಹವಚನವನ್ನು ಕೇಳು.

ಯಥಾ ಮಗ್ನೋ ಜಲೇ ಕಶ್ಚಿದುನ್ಮಜ್ಜಜ್ಜಲಸಂಭವಮ್ ।
ವಲಯಂ ಕ್ಷಿಪತಿ ಬ್ರಹ್ಮಾ ಸ ತಥಾ ಪ್ರಕೃತೀರ್ವಿಭುಃ ॥೭೪॥

ಅವ್ಯಕ್ತಂ ಕ್ಷೇತ್ರಮುದ್ದಿಷ್ಟಂ ಬ್ರಹ್ಮಾ ಕ್ಷೇತ್ರಜ್ಞ ಉಚ್ಯತೇ ।
ಏತತ್ಸಮಸ್ತಂ ಜಾನೀಯಾತ್ಕ್ಷೇತ್ರಕ್ಷೇತ್ರಜ್ಞಲಕ್ಷಣಮ್ ॥೭೫॥

ಇತ್ಯೇಷ ಪ್ರಾಕೃತಃ ಸರ್ಗಃ ಕ್ಷೇತ್ರಜ್ಞಾಧಿಷ್ಠಿತಸ್ತು ಸಃ ।
ಅಬುದ್ಧಿಪೂರ್ವಃ ಪ್ರಥಮಃ ಪ್ರಾದುರ್ಭೂತಸ್ತಡಿದ್ಯಥಾ ॥೭೬॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಬ್ರಹ್ಮೋತ್ಪತ್ತಿರ್ನಾಮ
ದ್ವಿಚತ್ವಾರಿಂಶೋಽಧ್ಯಾಯಃ

---

೭೪. ನೀರಿನಲ್ಲಿ ಮುಳುಗಿರುವ ಒಬ್ಬ ಮಾನವನು ನೀರಿನಿಂದ ಮೇಲಕ್ಕೆ ಏಳುವ ಸಮಯದಲ್ಲಿ ಹೇಗೆ ನೀರಿನ ವಲಯವನ್ನು ಸೃಷ್ಟಿಸುವನೋ ಅದರಂತೆ ಬ್ರಹ್ಮದೇವನು ತನ್ನ ಹೊರಗಡೆಯಲ್ಲಿ ವ್ಯಾಪಿಸಿದ ಪ್ರಕೃತಿತತ್ತ್ವಗಳಲ್ಲಿ ವಿಕಾರವಸ್ತುಗಳನ್ನು ಸೃಷ್ಟಿಸುವನು.

೭೫. ಮೂಲಕಾರಣವಾದ ಅವ್ಯಕ್ತತತ್ತ್ವವು ಕ್ಷೇತ್ರವೆಂದು ಕರೆಯಲ್ಪಡುವುದು. ಬ್ರಹ್ಮನು ಕ್ಷೇತ್ರಜ್ಞನೆಂದು ಕರೆಯಲ್ಪಡುತ್ತಾನೆ. ಹೀಗೆ ಕ್ಷೇತ್ರ-ಕ್ಷೇತ್ರಜ್ಞತತ್ತ್ವಗಳ ಲಕ್ಷಣವನ್ನು ಸಂಪೂರ್ಣವಾಗಿ ಅರಿಯಬೇಕು.

೭೬. ಕ್ಷೇತ್ರಜ್ಞನ ಸಮಾವೇಶದಿಂದ ಪ್ರಕೃತಿಗಳಿಂದ ಆಗುವ ಈ ಸರ್ಗವು ಪ್ರಾಕೃತಸರ್ಗವು. ಇದು ಬುದ್ಧಿಪೂರ್ವಕವಲ್ಲದ ಮೊದಲನೆಯ ಸರ್ಗವು. ಮೋಡದಲ್ಲಿ ಮಿಂಚು ಪ್ರಾದುರ್ಭಾವವಾದಂತೆ ಈ ಸರ್ಗವು ಕಂಡುಬರುವುದು.

ಮಾರ್ಕಂಡೇಯ ಮಹಾಪುರಾಣವಲ್ಲಿ ನಲವತ್ತೆರಡನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ತ್ರಿಚತ್ವಾರಿಂಶೋಽಧ್ಯಾಯಃ

(ಬ್ರಹ್ಮಾಯುಃಪ್ರಮಾಣಕಥನಮ್)

ಕ್ರೌಷ್ಟುಕಿರುವಾಚ :—

ಭಗವಂಸ್ತ್ವಣ್ಡಸಮ್ಭೂತಿರ್ಯಥಾವತ್ಕಥಿತಾ ಮಮ ।
ಬ್ರಹ್ಮಾಣ್ಡೇ ಬ್ರಹ್ಮಣೋ ಜನ್ಮ ತಥಾ ಚೋಕ್ತಂ ಮಹಾತ್ಮನಃ ॥೧॥

ಏತದಿಚ್ಛಾಮ್ಯಹಂ ಶ್ರೋತುಂ ತ್ವತ್ತೋ ಭೃಗುಕುಲೋದ್ಭವ ।
ಯದಾ ನ ಸೃಷ್ಟಿರ್ಭೂತಾನಾಮಸ್ತಿ ಕಿಂ ನು ನ ಚಾಸ್ತಿ ವಾ ॥೨॥

ನಲವತ್ತಮೂರನೆಯ ಅಧ್ಯಾಯ

ಕ್ರೌಷ್ಟುಕಿಯು ಹೀಗೆಂದನು :—

೧. ಪೂಜ್ಯನಾದ ಮಾರ್ಕಂಡೇಯ ಮುನಿಯೇ! ಬ್ರಹ್ಮಾಂಡದ ಉತ್ಪತ್ತಿಕ್ರಮವು ನಿನ್ನಿಂದ ನನಗೆ ಯಥಾವತ್ತಾಗಿ ಹೇಳಲ್ಪಟ್ಟಿದೆ. ಮತ್ತು ಮಹಾತ್ಮನಾದ ಬ್ರಹ್ಮದೇವನ ಜನ್ಮಕ್ರಮವು ವರ್ಣಿಸಲ್ಪಟ್ಟಿರುವುದು.

೨. ಭೃಗು ಮುನಿಯ ವಂಶದಲ್ಲಿ ಜನಿಸಿದ ಮಹಾಮಹಿಮನೆ! ನಾನು ಈಗ ನಿನ್ನಿಂದ ಇದೊಂದು ವಿಷಯವನ್ನು ಕೇಳಲು ಕುತೂಹಲವುಳ್ಳವನಾಗಿರುವೆನು. ಯಾವ ಸಮಯದಲ್ಲಿ ಭೂತಗಳ ಸೃಷ್ಟಿಯಿರುವುದಿಲ್ಲವೋ ಆಗ ಏನಾದರೂ ತತ್ತ್ವವಿರುವುದೆ? ಇಲ್ಲವೆ?

ಕಾಲೇ ವೈ ಪ್ರಲಯಸ್ಯಾನ್ತೇ ಸರ್ವಸ್ಮಿನ್ನುಪಸಂಹೃತೇ ||೩||

ಮಾರ್ಕಣ್ಡೇಯ ಉವಾಚ :—

ಯದಾ ತು ಪ್ರಕೃತೌ ಯಾತಿ ಲಯಂ ವಿಶ್ವಮಿದಂ ಜಗತ್ ।
ತದೋಚ್ಯತೇ ಪ್ರಾಕೃತೋಽಯಂ ವಿದ್ವದ್ಭಿಃ ಪ್ರತಿಸಂಚರಃ ||೪||

ಸ್ವಾತ್ಮನ್ಯವಸ್ಥಿತೇಽವ್ಯಕ್ತೇ ವಿಕಾರೇ ಪ್ರತಿಸಂಹೃತೇ ।
ಪ್ರಕೃತಿಃ ಪುರುಷಶ್ಚೈವ ಸಾಧರ್ಮ್ಯೇಣಾವತಿಷ್ಠತಃ ||೫||

ಯದಾ ತಮಶ್ಚ ಸತ್ತ್ವಂ ಚ ಸಮತ್ವೇನ ಗುಣೌ ಸ್ಥಿತೌ ।
ಅನುದ್ರಿಕ್ತಾವನೂನೌ ಚ ಓತಪ್ರೋತೌ ಪರಸ್ಪರಮ್ ||೬||

---

೩. ಸೃಷ್ಟಿಸಮಯವು ಕಳೆದು ಎಲ್ಲ ಸೃಷ್ಟಿಸರ್ಗವು ಸಮಾಪ್ತಿಗೊಂಡು ಪ್ರಲಯವಾಗಿರುವ ಸಮಯದಲ್ಲಿ ಏನಾದರೂ ತತ್ತ್ವವು ಉಳಿದಿರುವುದೆ? ಇಲ್ಲವೆ? ಎಂಬುದನ್ನು ನಾನು ತಿಳಿಯಬೇಕೆಂದಿರುವೆನು.

ಮಾರ್ಕಂಡೇಯ ಮುನಿಯು ಇಂತೆಂದನು :—

೪. ಈಗ ಕಾಣುವ ಸಮಸ್ತಜಗತ್ತು ಯಾವ ಸಮಯದಲ್ಲಿ ಪ್ರಕೃತಿಯಲ್ಲಿ ಲಯವನ್ನು ಹೊಂದುವುದೋ ಆಗ ಉಂಟಾವ ಜಗತ್ತಿನ ಲಯವನ್ನು ಪ್ರಾಕೃತ ಪ್ರಲಯವೆಂದು ಪ್ರಾಜ್ಞರು ಹೇಳುವರು.

೫. ಅವ್ಯಕ್ತ ತತ್ತ್ವದಿಂದ ಜನಿಸಿದ ವಿಕಾರಗಳು ಅವ್ಯಕ್ತವೆಂಬ ಪ್ರಕೃತಿ ತತ್ತ್ವದಲ್ಲಿ ಅಡಗಿ ಹೋದುದರಿಂದ ಅದು ಪ್ರಾಕೃತಪ್ರಲಯವೆನಿಸುವುದು. ಆಗ ಪ್ರಕೃತಿ–ಪುರುಷ ಈ ಎರಡು ತತ್ತ್ವಗಳು ವಿಕಾರರಹಿತವಾದ ಸ್ವಸ್ವರೂಪವನ್ನು ಹೊಂದಿರುವುವು.

೬. ಆ ಅವಸ್ಥೆಯಲ್ಲಿ ತಮೋಗುಣ–ಸತ್ತ್ವಗುಣಗಳೆರಡು ಪರಿಮಾಣದಲ್ಲಿ ಒಂದಕ್ಕಿಂತ ಮತ್ತೊಂದು ಹೆಚ್ಚು ಅಥವಾ ಕಡಿಮೆಯಿಲ್ಲದ ಹಾಗೆ ಸಮಪರಿಮಾಣದಿಂದ ಇರುವುವು. ಮತ್ತು ಒಂದರಲ್ಲಿ ಮತ್ತೊಂದು ಹೆಣೆದುಕೊಂಡಂತೆ ಇರುವುವು.

ತಿಲೇಷು ವಾ ಯಥಾ ತೈಲಂ ಘೃತಂ ಪಯಸಿ ವಾ ಸ್ಥಿತಮ್ ।
ತಥಾ ತಮಸಿ ಸತ್ತ್ವೇ ಚ ರಜೋಽಪ್ಯನುಸೃತಂ ಸ್ಥಿತಮ್ ॥೭॥

ಉತ್ಪತ್ತಿರ್ಬ್ರಹ್ಮಣೋ ಯಾವದಾಯುರ್ವೈ ದ್ವಿಪರಾರ್ಧಿಕಮ್ ।
ತಾವದ್ದಿನಂ ಪರೇಶಸ್ಯ ಸತ್ಸಮಾ ಸಂಯಮೇ ನಿಶಾ ॥೮॥

ಅಷ್ಟೌ ಯುಗಸಹಸ್ರಾಣಿ ಅಹೋರಾತ್ರಂ ಪ್ರಜಾಪತೇಃ ।
ಅನೇನೈವ ತು ಮಾನೇನ ಶತಂ ಬ್ರಹ್ಮಾ ಸ ಜೀವತಿ ॥೯॥

ಪಿತಾಮಹಶತೇನೈವ ವಿಷ್ಣೋರ್ಮಾನಂ ವಿಧೀಯತೇ ।
ನಿಮೇಷಾರ್ಧೇನ ಶಂಭೋಸ್ತು ಸಹಸ್ರಾಣಿ ಚತುರ್ದಶ ॥೧೦॥

---

೭. ಎಳ್ಳುಕಾಳಿನಲ್ಲಿ ಎಣ್ಣೆಯು ಹೇಗೋ, ಹಾಲಿನಲ್ಲಿ ತುಪ್ಪವು ಹೇಗೋ ಹಾಗೆ ಒಂದು ಗುಣದಲ್ಲಿ ಮತ್ತೊಂದು ಗುಣವು ಬೆರೆತಿರುವುದು. ಇಂತಹ ತಮೋಗುಣ-ಸತ್ತ್ವಗುಣಗಳಲ್ಲಿ ರಜೋಗುಣವೂ ಹಾಗೆಯೇ ಸೇರಿಕೊಂಡಿರುತ್ತದೆ.

೮. ಬ್ರಹ್ಮದೇವನ ಉತ್ಪತ್ತಿಯಾಗುವವರೆಗೆ ಗುಣಗಳಲ್ಲಿ ಸಾಮ್ಯಾವಸ್ಥೆಯು ಇರುವುದು. ಬ್ರಹ್ಮದೇವನ ಆಯುಷ್ಯದಲ್ಲಿ ಎರಡು ಪರಾರ್ಧಗಳು ಹಗಲಿನ ಪರಿಮಾಣವು. ಅದರಂತೆ ಪರಮಾತ್ಮನಾದ ಬ್ರಹ್ಮದೇವನ ರಾತ್ರಿಯು ಎರಡು ಪರಾರ್ಧ ಪರಿಮಾಣವುಳ್ಳದ್ದಾಗಿವೆ.

೯. ನಾಲ್ಕು ಯುಗಗಳ ಎಂಟು ಸಹಸ್ರಸಂಖ್ಯೆಯ ಪರ್ಯಾಯವು ಬ್ರಹ್ಮದೇವನಿಗೆ ಒಂದು ಅಹೋರಾತ್ರವಾಗುವುದು. ಇಂತಹ ಅಹೋರಾತ್ರಗಳ ಪರಿಮಾಣದಿಂದ ಒಂದುನೂರುವರ್ಷಗಳು ಪೂರ್ತಿಯಾಗಿ ಬ್ರಹ್ಮದೇವನು ಜೀವಿಸಿರುವನು.

೧೦. ಬ್ರಹ್ಮದೇವರು ಒಂದುನೂರು ಮಂದಿಯು ಹುಟ್ಟಿಹೋಗುವಷ್ಟು ಸಮಯವು ವಿಷ್ಣುವಿನ ಆಯುಃಪರಿಮಾಣವೆಂದು ನಿರ್ಣಯಿಸಲ್ಪಟ್ಟಿದೆ. ಈಶ್ವರನ ಒಂದು ಅರ್ಧನಿಮಿಷದಲ್ಲಿ ಹದಿನಾಲ್ಕುಮಂದಿ ವಿಷ್ಣುದೇವರು ಹುಟ್ಟಿಹೋಗುವರು.

ವಿನಶ್ಯನ್ತಿ ತಥಾ ವಿಷ್ಣೋರಸಙ್ಖ್ಯಾತಾಃ ಪಿತಾಮಹಾಃ ॥೧೧॥

ಅಹರ್ಮುಖೇ ಪ್ರಬುದ್ಧಸ್ತು ಜಗದಾದಿರನಾದಿಮಾನ್ ।
ಸರ್ವಹೇತುರಚಿನ್ತ್ಯಾತ್ಮಾ ಪರಃ ಕೋಽಪ್ಯಪರಕ್ರಿಯಃ ॥೧೨॥

ಪ್ರಕೃತಿಂ ಪುರುಷಂ ಚೈವ ಪ್ರವಿಶ್ಯಾಶು ಜಗತ್ಪತಿಃ ।
ಕ್ಷೋಭಯಾಮಾಸ ಯೋಗೇನ ಪರೇಣ ಪರಮೇಶ್ವರಃ ॥೧೩॥

ಯಥಾ ಮದೋ ನವಸ್ತ್ರೀಣಾಂ ಯಥಾ ವಾ ಮಾಧವಾನಿಲಃ ।
ಅನುಪ್ರವಿಷ್ಟಃ ಕ್ಷೋಭಾಯ ತಥಾಸೌ ಯೋಗಮೂರ್ತಿಮಾನ್ ॥೧೪॥

ಪ್ರಧಾನೇ ಕ್ಷೋಭ್ಯಮಾಣೇ ತು ಸ ದೇವೋ ಬ್ರಹ್ಮಸಞ್ಜ್ಞಿತಃ ।
ಸಮುತ್ಪನ್ನೋಽಣ್ಡಕೋಶಸ್ಥೋ ಯಥಾ ತೇ ಕಥಿತಂ ಮಯಾ॥೧೫॥

---

೧೧. ಮತ್ತು ಈಶ್ವರನ ದೀರ್ಘಾವಧಿಯ ಆಯುಃಪರಿಮಾಣದಲ್ಲಿ ಹಿಂದೆ ಹೇಳಿದಂತೆ ಎಣಿಸಲಾಗದ ಅನೇಕ ವಿಷ್ಣುದೇವರು ಹುಟ್ಟಿಹೋಗುವರು.

೧೨. ಜಗತ್ತಿಗೆ ಆದಿಕಾರಣನೂ ಅನಾದಿಯೂ ಸಮಸ್ತ ಪ್ರಪಂಚಕ್ಕೆ ಮೂಲನೂ ಚಿಂತಿಸಲಾಗದ ಸ್ವರೂಪವುಳ್ಳವನೂ ಸರ್ವೋತ್ತಮರೂಪನೂ ಮತ್ತು ಕಾರ್ಯನಿರ್ಮಾಣದ ಪ್ರವೃತ್ತಿಯುಳ್ಳವನೂ ಆದ ಪರಮೇಶ್ವರನು ಹಗಲಿನ ಪ್ರಾರಂಭದಲ್ಲಿ ಎಚ್ಚರಗೊಳ್ಳುವನು.

೧೩. ಜಗತ್ತಿಗೆ ಪಾಲಕನೂ ಮತ್ತು ಪರಮೇಶ್ವರ ರೂಪನೂ ಆದ ಸರ್ವೇಶ್ವರನು ಪ್ರಕೃತಿ–ಪುರುಷ ತತ್ತ್ವಗಳನ್ನು ಒಳಗೆ ಪ್ರವೇಶಮಾಡಿ ಉತ್ತಮ-ವಾದ ಯೋಗಶಕ್ತಿಯಿಂದ ಬೇಗ ಕ್ಷೋಭಪಡಿಸುವನು.

೧೪. ನವತಾರುಣ್ಯವತಿಯರಾದ ಸ್ತ್ರೀಯರಿಗೆ ಮದ್ಯಪಾನದಿಂದ ಉಂಟಾಗುವ ಮದದಂತೆಯೂ ವಸಂತಮಾಸದಲ್ಲಿ ಬೀಸುವ ಮಂದಮಾರುತ-ದಂತೆಯೂ ಯೋಗಮಯವಾದ ಮೂರ್ತಿಯುಳ್ಳ ಪರಮೇಶ್ವರನು ಪ್ರಕೃತಿ-ಪುರುಷ ತತ್ತ್ವಗಳಲ್ಲಿ ಪ್ರವೇಶಮಾಡಿ ಕ್ಷೋಭಕಾರಕನಾಗುವನು.

೧೫. ಪ್ರಧಾನತತ್ತ್ವವು ಕ್ಷೋಭಹೊಂದಿರಲು ಬ್ರಹ್ಮಾಂಡಕೋಶದಲ್ಲಿ-ರುವ, ಬ್ರಹ್ಮ ಎಂಬ ನಾಮಾಂಕಿತನಾದ ದೇವನು ಉತ್ಪತ್ತಿಹೊಂದುವನು. ಬ್ರಹ್ಮದೇವನ ಉತ್ಪತ್ತಿಯನ್ನು ನಾನು ನಿನಗೆ ಹಿಂದೆ ಹೇಳಿರುವೆನು.

ಸ ಏವ ಕ್ಷೋಭಕಃ ಪೂರ್ವಂ ಸ ಕ್ಷೋಭ್ಯಃ ಪ್ರಕೃತೇಃ ಪತಿಃ ।
ಸ ಸಂಕೋಚವಿಕಾಸಾಭ್ಯಾಂ ಪ್ರಧಾನತ್ವೇಽಪಿ ಸಂಸ್ಥಿತಃ ॥೧೬॥

ಉತ್ಪನ್ನಃ ಸ ಜಗದ್ಯೋನಿರಗುಣೋಽಪಿ ರಜೋಗುಣಮ್ ।
ಭುಞ್ಜನ್ಪ್ರವರ್ತತೇ ಸರ್ಗೇ ಬ್ರಹ್ಮತ್ವಂ ಸಮುಪಾಶ್ರಿತಃ ॥೧೭॥

ಬ್ರಹ್ಮತ್ವೇ ಸ ಪ್ರಜಾಃ ಸೃಷ್ಟ್ವಾ ತತಃ ಸತ್ತ್ವಾತಿರೇಕವಾನ್ ।
ವಿಷ್ಣುತ್ವಮೇತ್ಯ ಧರ್ಮೇಣ ಕುರುತೇ ಪರಿಪಾಲನಮ್ ॥೧೮॥

ತತಸ್ತಮೋಗುಣೋದ್ರಿಕ್ತೋ ರುದ್ರತ್ವೇ ಚಾಖಿಲಂ ಜಗತ್ ।
ಉಪಸಂಹೃತ್ಯ ವೈ ಶೇತೇ ತ್ರೈಲೋಕ್ಯಂ ತ್ರಿಗುಣೋಽಗುಣಃ ॥೧೯॥

---

೧೬. ಸೃಷ್ಟಿಯ ಆದಿಯಲ್ಲಿ ತತ್ತ್ವಗಳಲ್ಲಿ ಕ್ಷೋಭವನ್ನುಂಟುಮಾಡುವವನೂ, ಪ್ರಕೃತಿತತ್ತ್ವಕ್ಕೆ ಪತಿಯಾದವನೂ ಆದ ಪರಮೇಶ್ವರನು ಅಂತಃಪ್ರವೇಶಮಾಡಿ ಕ್ಷೋಭಹೊಂದುವವನೂ ಆಗುತ್ತಾನೆ. ಮತ್ತು ಸಂಕೋಚವಿಕಾಸಭಾವಗಳಿಂದ ಪ್ರಧಾನರೂಪದಿಂದಲೂ ಇರುವನು.

೧೭. ಜಗತ್ಕಾರಣನಾದ, ನಿರ್ಗುಣಸ್ವರೂಪನಾದ ಪರಮಾತ್ಮನು ಬ್ರಹ್ಮರೂಪದಿಂದ ಜನಿಸಿ ರಜೋಗುಣವನ್ನು ಭುಂಜಿಸುತ್ತ ಬ್ರಹ್ಮಪದದ ಅಧಿಕಾರವನ್ನು ಆಶ್ರಯಿಸಿ ಜಗತ್ತಿನ ಸೃಷ್ಟಿಯಲ್ಲಿ ಪ್ರವರ್ತಿಸುತ್ತಾನೆ.

೧೮. ಪರಮಾತ್ಮನು ಬ್ರಹ್ಮರೂಪದಿಂದ ಪ್ರಜೆಗಳನ್ನು ಸೃಷ್ಟಿಮಾಡಿ ಸತ್ತ್ವಗುಣದ ಆಧಿಕ್ಯದಿಂದ ವಿಷ್ಣುಸ್ವರೂಪವನ್ನು ಹೊಂದಿ ಧರ್ಮದಿಂದ ಜಗತ್ತಿನ ಪರಿಪಾಲನವನ್ನು ಮಾಡುವನು.

೧೯. ಮತ್ತು ಗುಣಗಳಿಂದ ಶೂನ್ಯನಾದರೂ ಮೂರು ಗುಣಗಳನ್ನು ಹೊಂದಿರುವ ಈಶ್ವರನು ತಮೋಗುಣದ ಉದ್ರೇಕವುಳ್ಳವನಾಗಿ ರುದ್ರಮೂರ್ತಿಯನ್ನು ಹೊಂದಿ ಸಮಸ್ತ ಪ್ರಪಂಚವನ್ನು ಸಂಹಾರಮಾಡಿ ಆನಂದದಿಂದ ಶಯನಮಾಡುವನು.

ಯಥಾ ಪ್ರಾಗ್ವ್ಯಾಪಕಃ ಕ್ಷೇತ್ರೀ ಪಾಲಕೋ ಲಾವಕಸ್ತಥಾ ।
ತಥಾ ಸ ಸಂಜ್ಞಾಮಾಯಾತಿ ಬ್ರಹ್ಮವಿಷ್ಣುಹರಾತ್ಮಿಕಾಮ್ ॥೨೦॥

ಬ್ರಹ್ಮತ್ವೇ ಸೃಜತೇ ಲೋಕಾನ್ರುದ್ರತ್ವೇ ಸಂಹರತ್ಯಪಿ ।
ವಿಷ್ಣುತ್ವೇ ಚಾಪ್ಯುದಾಸೀನಸ್ತಿಸ್ರೋಽವಸ್ಥಾಃ ಸ್ವಯಂಭುವಃ ॥೨೧॥

ರಜೋ ಬ್ರಹ್ಮಾ ತಮೋ ರುದ್ರೋ ವಿಷ್ಣುಃ ಸತ್ತ್ವಂ ಜಗತ್ಪತಿಃ ।
ಏತ ಏವ ತ್ರಯೋ ದೇವಾ ಏತ ಏವ ತ್ರಯೋ ಗುಣಾಃ ॥೨೨॥

ಅನ್ಯೋನ್ಯಮಿಥುನಾ ಹ್ಯೇತೇ ಹ್ಯನ್ಯೋನ್ಯಾಶ್ರಯಿಣಸ್ತಥಾ ।
ಕ್ಷಣಂ ವಿಯೋಗೋ ನ ಹ್ಯೇಷಾಂ ನ ತ್ಯಜನ್ತಿ ಪರಸ್ಪರಮ್ ॥೨೩॥

---

೨೦. ಕೃಷಿಗಾರನು ತನ್ನ ಕ್ಷೇತ್ರವನ್ನು ಪಾಲಿಸುವವನೂ, ಸಸ್ಯವನ್ನು ಕುಯ್ಯುವವನೂ ಆಗಿ ಅನೇಕ ಅಧಿಕಾರಗಳನ್ನು ತೋರಿಸುವಂತೆ ವ್ಯಾಪಕನಾದ ಪರಮಾತ್ಮನು ಜಗತ್ತಿಗೆ ಸೃಷ್ಟಿಕರ್ತನೂ ಪಾಲಕನೂ ಮತ್ತು ಸಂಹಾರಕನೂ ಆಗಿ ಬ್ರಹ್ಮ-ವಿಷ್ಣು-ರುದ್ರ ಎಂಬ ಸಂಜ್ಞೆಗಳನ್ನು ಹೊಂದುವನು.

೨೧. ಪರಮಾತ್ಮನು ಬ್ರಹ್ಮತ್ವವನ್ನು ಹೊಂದಿ ಲೋಕಗಳನ್ನು ನಿರ್ಮಿಸುತ್ತಾನೆ. ರುದ್ರತ್ವವನ್ನು ಹೊಂದಿ ಸಂಹಾರಮಾಡುತ್ತಾನೆ ಮತ್ತು ವಿಷ್ಣುತ್ವದಲ್ಲಿ ಸೃಷ್ಟಿ-ಲಯಗಳಲ್ಲಿ ಉದಾಸೀನನಾಗಿ ಪಾಲಿಸುತ್ತಾನೆ. ಹೀಗೆ ಸ್ವಯಂಭುವಾದ ಈಶ್ವರನಿಗೆ ಬ್ರಹ್ಮ-ವಿಷ್ಣು-ರುದ್ರತ್ವಗಳೆಂಬ ಮೂರು ಅವಸ್ಥೆಗಳು ಕ್ರಮವಾಗಿ ಉಂಟಾಗುವುವು.

೨೨. ಬ್ರಹ್ಮನಲ್ಲಿ ರಜೋಗುಣವೂ, ರುದ್ರನಲ್ಲಿ ತಮೋಗುಣವೂ ಜಗತ್ಪಾಲಕನಾದ ವಿಷ್ಣುವಿನಲ್ಲಿ ಸತ್ತ್ವಗುಣವೂ ಅಧಿಕವಾಗಿರುವುದು. ಹೀಗೆ ಬ್ರಹ-ವಿಷ್ಣು-ರುದ್ರರೆಂಬುವರು ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳನ್ನು ನಡೆಸುವ ತ್ರಿಮೂರ್ತಿಗಳು. ಸತ್ತ್ವ-ರಜ-ತಮ ಎಂಬ ಮೂರು ಗುಣಗಳು ಮೂರ್ತಿಭೇದ-ವನ್ನು ಉಂಟುಮಾಡಿರುವುವು.

೨೩. ಸತ್ತ್ವ ಮುಂತಾದ ಮೂರುಗುಣಗಳು ಒಂದರಲ್ಲಿ ಮತ್ತೊಂದು ಮಿಥುನಭಾವದಿಂದ ಸೇರಿರುವುವು ಮತ್ತು ಅನ್ಯೋನ್ಯವಾಗಿ ಆಶ್ರಯಿಸಿಕೊಂ-ಡಿರುವುವು. ಒಂದು ಕ್ಷಣಕಾಲವೂ ಈ ಗುಣಗಳಿಗೆ ವಿಯೋಗವುಂಟಾಗುವುದಿಲ್ಲ. ಆದ್ದರಿಂದ ಒಂದನ್ನೊಂದು ಬಿಟ್ಟಿರುವುದಿಲ್ಲ.

ಏವಂ ಬ್ರಹ್ಮಾ ಜಗತ್ಪೂರ್ವೋ ದೇವದೇವಶ್ಚತುರ್ಮುಖಃ ।
ರಜೋಗುಣಂ ಸಮಾಶ್ರಿತ್ಯ ಸೃಷ್ಟ್ಯೈರ್ತ್ವೇ ಸ ವ್ಯವಸ್ಥಿತಃ ॥೨೪॥

ಹಿರಣ್ಯಗರ್ಭೋ ದೇವಾದಿರನಾದಿರುಪಚಾರತಃ ।
ಭೂಪದ್ಮಕರ್ಣಿಕಾಸಂಸ್ಥೋ ಬ್ರಹ್ಮಾಗ್ರೇ ಸಮಜಾಯತ ॥೨೫॥

ತಸ್ಯ ವರ್ಷಶತಂ ತ್ವೇಕಂ ಪರಮಾಯುರ್ಮಹಾತ್ಮನಃ ।
ಬ್ರಾಹ್ಮೇಣೈವ ಹಿ ಮಾನೇನ ತಸ್ಯ ಸಂಖ್ಯಾಂ ನಿಬೋಧ ಮೇ ॥೨೬॥

ನಿಮೇಷೈರ್ದಶಭಿಃಕಾಷ್ಠಾ ತಥಾ ಪಞ್ಚಭಿರುಚ್ಯತೇ ।
ಕಲಾಸ್ತ್ರಿಂಶಚ್ಚ ವೈ ಕಾಷ್ಠಾ ಮುಹೂರ್ತಂ ತ್ರಿಂಶದೇವ ತಾಃ ॥೨೭॥

---

೨೪. ಹೀಗೆ ಜಗತ್ತಿಗೆ ಮೊದಲಿನವನೂ ದೇವೋತ್ತಮನೂ ಮತ್ತು ಚತುರ್ಮುಖನೂ ಆದ ಬ್ರಹ್ಮದೇವನು ರಜೋಗುಣವನ್ನು ಅವಲಂಬಿಸಿ ಸೃಷ್ಟಿ-ಕಾರ್ಯದಲ್ಲಿ ವ್ಯವಸ್ಥೆಯಿಂದ ಇರುವನು.

೨೫. ಭೂಮಂಡಲವೆಂಬ ಪದ್ಮದ ಮಧ್ಯದಲ್ಲಿ ಇರುವವನೂ ಆದಿಯಲ್ಲಿ ಜನಿಸಿವವನೂ ಅನಾದಿಯೆಂದು ಉಪಚರಿಸಲ್ಪಡುವವನೂ ಮತ್ತು ಹಿರಣ್ಯಗರ್ಭ-ನಾಮಾಂಕಿತನೂ ಆದ ಬ್ರಹ್ಮದೇವನು ಎಲ್ಲಕ್ಕಿಂತಲೂ ಮೊದಲು ಜನ್ಮವೆತ್ತಿದನು.

೨೬. ಮಹಾತ್ಮನಾದ ಆ ಬ್ರಹ್ಮದೇವನಿಗೆ ಒಂದು ನೂರು ವರ್ಷಗಳು ಪರಮಾಯುಷ್ಯವು. ಬ್ರಹ್ಮಮಾನದಿಂದ ಆ ಪರಮಾಯುಷ್ಯದ ಸಂಖ್ಯೆಯನ್ನು ನಾನು ಹೇಳುವೆನು. ಅವನ್ನು ಕೇಳು.

೨೭. ಕಾಲಪರಿವರ್ತನೆಯಲ್ಲಿ ಕಣ್ಣನ್ನು ಮಿಟಿಕಿಸುವ ಸೂಕ್ಷ್ಮಕಾಲವು ನಿಮೇಷರೂಪವೆನಿಸುವುದು. ಹದಿನೈದು ನಿಮೇಷಗಳು ಒಂದು ಕಾಷ್ಠಾಕಾಲ-ವೆಂದು ಗಣಿಸಲ್ಪಟ್ಟಿದೆ. ಅಂತಹ ಮೂವತ್ತು ಕಾಷ್ಠಾಕಾಲಗಳು ಒಂದು ಕಲೆಯೆಂದೂ ಮೂವತ್ತು ಕಲೆಗಳು ಒಂದು ಮುಹೂರ್ತವೆಂದೂ ಗಣಿಸಲ್ಪಡು-ವುವು.

ಅಹೋರಾತ್ರಂ ಮುಹೂರ್ತಾನಾಂ ನೃಣಾಂ ತ್ರಿಂಶತ್ತು ವೈ ಸ್ಮೃತಮ್।
ಅಹೋರಾತ್ರೈಶ್ಚ ತ್ರಿಂಶದ್ಭಿಃ ಪಕ್ಷೌ ದ್ವೌ ಮಾಸ ಉಚ್ಯತೇ ॥೨೮॥

ತೈಃ ಷಡ್ಭಿರಯನಂ ವರ್ಷಂ ದ್ವೇಽಯನೇ ದಕ್ಷಿಣೋತ್ತರೇ।
ತದ್ದೇವಾನಾಮಹೋರಾತ್ರಂ ದಿನಂ ತತ್ರೋತ್ತರಾಯಣಮ್ ॥೨೯॥

ದಿವ್ಯೈರ್ವರ್ಷಸಹಸ್ರೈಸ್ತು ಕೃತತ್ರೇತಾದಿಸಂಜ್ಞಿತಮ್।
ಚತುರ್ಯುಗಂ ದ್ವಾದಶಭಿಸ್ತದ್ವಿಭಾಗಂ ಶೃಣುಷ್ವ ಮೇ ॥೩೦॥

ಚತ್ವಾರಿ ತು ಸಹಸ್ರಾಣಿ ವರ್ಷಾಣಾಂ ಕೃತಮುಚ್ಯತೇ।
ಶತಾನಿ ಸನ್ಧ್ಯಾ ಚತ್ವಾರಿ ಸನ್ಧ್ಯಾಂಶಶ್ಚ ತಥಾವಿಧಃ ॥೩೧॥

---

೨೮. ಅಂತಹ ಮುಹೂರ್ತಗಳು ಮೂವತ್ತು ಕಳೆದರೆ ಮಾನವರಿಗೆ ಒಂದು ಅಹೋರಾತ್ರವಾಗುವುದು. ಮೂವತ್ತು ಅಹೋರಾತ್ರಗಳು ಕಳೆದರೆ ಎರಡು ಪಕ್ಷಗಳಾಗುವುವು. ಎಂದು ಪ್ರಾಜ್ಞರಿಂದ ಹೇಳಲ್ಪಟ್ಟಿದೆ. ಎರಡು ಪಕ್ಷಗಳು ಸೇರಿ ಒಂದು ಮಾಸವಾಗುವುದು.

೨೯.. ಆರು ಮಾಸಗಳಿಂದ ಒಂದು ಅಯನವೂ ದಕ್ಷಿಣಾಯನ-ಉತ್ತರಾಯಣವೆಂಬ ಎರಡು ಅಯನಗಳಿಂದ ಒಂದು ಸಂವತ್ಸರವೂ ಆಗುವುವು. ಒಂದು ಸಂವತ್ಸರವು ದೇವತೆಗಳಿಗೆ ಒಂದು ಅಹೋರಾತ್ರವಾಗುವುದು. ಉತ್ತರಾಯಣವು ದೇವತೆಗಳಿಗೆ ಅಹಃಕಾಲವಾಗಿರುವುದು.

೩೦. ದೇವಮಾನದಿಂದ ಜರುಗುವ ಹನ್ನೆರಡು ಸಹಸ್ರವರ್ಷಗಳಿಂದ ಕೃತ-ತ್ರೇತಾ-ದ್ವಾಪರ-ಕಲಿಯುಗಗಳೆಂಬ ನಾಮಾಂಕನವುಳ್ಳ ನಾಲ್ಕುಯುಗಗಳು ನಡೆಯುವುವು. ನೀನು ನನ್ನಿಂದ ನಾಲ್ಕುಯುಗಗಳ ವಿಭಾಗವನ್ನು ಕೇಳು.

೩೧. ದೇವಮಾನದ ನಾಲ್ಕು ಸಹಸ್ರ ವರ್ಷಗಳು ಕೃತಯುಗವೆಂದು ಕರೆಯಲ್ಪಡುವುದು. ಯುಗಗಳ ನಡುವೆಯಿರುವ ಸಂಧ್ಯಾಕಾಲವು ನಾಲ್ಕು ನೂರು ವರ್ಷಪರಿಮಾಣದಿಂದ ಇರುವುದು.

ತ್ರೇತಾ ತ್ರೀಣಿ ಸಹಸ್ರಾಣಿ ದಿವ್ಯಾಬ್ದಾನಾಂ ಶತತ್ರಯಮ್ ।
ತಸ್ಯ ಸನ್ಧ್ಯಾ ಸಮಾಖ್ಯಾತಾ ಸನ್ಧ್ಯಾಂಶಶ್ಚ ತಥಾವಿಧಃ ॥೩೨॥

ದ್ವಾಪರಂ ದ್ವೇ ಸಹಸ್ರೇ ತು ವರ್ಷಾಣಾಂ ದ್ವೇ ಶತೇ ತಥಾ ।
ತಸ್ಯ ಸನ್ಧ್ಯಾ ಸಮಾಖ್ಯಾತಾ ದ್ವೇ ಶತಾಬ್ದೇ ತದಂಶಕಃ ॥೩೩॥

ಕಲಿಃ ಸಹಸ್ರಂ ದಿವ್ಯಾನಾಮಬ್ದಾನಾಂ ದ್ವಿಜಸತ್ತಮ ।
ಸನ್ಧ್ಯಾ ಸನ್ಧ್ಯಾಂಶಕಶ್ಚೈವ ಶತಕೌ ಸಮುದಾಹೃತೌ ॥೩೪॥

ಏಷಾ ದ್ವಾದಶಸಾಹಸ್ರೀ ಯುಗಾಖ್ಯಾ ಕವಿಭಿಃ ಕೃತಾ ।
ಏತತ್ಸಹಸ್ರಗುಣಿತಮಹೋ ಬ್ರಾಹ್ಮಮುದಾಹೃತಮ್ ॥೩೫॥

---

೩೨. ದೇವಮಾನದ ಮೂರು ಸಹಸ್ರವರ್ಷಗಳು ತ್ರೇತಾಯುಗವೆಂದು ಕರೆಯಲ್ಪಡುವುದು. ತ್ರೇತಾಯುಗದ ಸಂಧ್ಯಾಕಾಲ ಮತ್ತು ಸಂಧ್ಯಾಂಶಕಾಲಗಳು ಪ್ರತ್ಯೇಕವಾಗಿ ಮೂರುನೂರು ವರ್ಷಗಳ ಪರಿಮಾಣವುಳ್ಳದ್ದಾಗಿರುವುವು.

೩೩. ಎರಡು ಸಹಸ್ರಸಂಖ್ಯೆಯ ದಿವ್ಯವರ್ಷಗಳು ದ್ವಾಪರಯುಗವೆನಿಸುವುದು. ಅದರ ಸಂಧ್ಯಾಕಾಲವು ಎರಡುನೂರು ವರ್ಷಗಳಿಂದ ಕೂಡಿರುವುದು. ಮತ್ತು ಸಂಧ್ಯಾಂಶವು ಎರಡುನೂರು ವರ್ಷ ಪರಿಮಾಣದಿಂದ ಕೂಡಿದೆ.

೩೪. ದ್ವಿಜೋತ್ತಮನಾದ ಕ್ರೌಷ್ಟುಕಿಯೆ! ದೇವಮಾನದ ಒಂದು ಸಹಸ್ರವರ್ಷಗಳು ಕಲಿಯುಗದ ಪರಿಮಾಣವಾಗುವುದು. ಅದರ ಸಂಧ್ಯಾಕಾಲವೂ ಮತ್ತು ಸಂಧ್ಯಾಂಶಕಾಲವೂ ಪ್ರತ್ಯೇಕವಾಗಿ ಒಂದುನೂರುವರ್ಷ ಪರಿಮಾಣವುಳ್ಳದ್ದೆಂದು ಹೇಳಲ್ಪಟ್ಟವೆ.

೩೫. ಪ್ರಾಜ್ಞರಿಂದ ಹೀಗೆ ಹನ್ನೆರಡು ಸಹಸ್ರ ದಿವ್ಯವರ್ಷಗಳ ಪರ್ಯಾಯವು ಯುಗರೂಪದಿಂದ ಕರೆಯಲ್ಪಟ್ಟಿದೆ. ಈ ಚತುರ್ಯುಗಗಳ ಒಂದು ಸಹಸ್ರ ಆವೃತ್ತಿಯು ಬ್ರಹ್ಮದೇವನಿಗೆ ಒಂದು ಹಗಲೆಂದು ಹೇಳಲ್ಪಟ್ಟಿದೆ.

ಬ್ರಹ್ಮಣೋ ದಿವಸೇ ಬ್ರಹ್ಮನ್ಮನವಃ ಸ್ಯುಶ್ಚತುರ್ದಶ ।
ಭವನ್ತಿ ಭಾಗಶಸ್ತೇಷಾಂ ಸಹಸ್ರಂ ತದ್ವಿಭಜ್ಯತೇ ॥೩೬॥

ದೇವಾಃ ಸಪ್ತರ್ಷಯಃ ಸೇನ್ದ್ರಾ ಮನುಸ್ತತ್ಸೂನವೋ ನೃಪಾಃ ।
ಮನುನಾ ಸಹ ಸೃಜ್ಯನ್ತೇ ಸಂಹ್ರಿಯನ್ತೇ ಚ ಪೂರ್ವವತ್ ॥೩೭॥

ಚತುರ್ಯುಗಾನಾಂ ಸಂಖ್ಯಾತಾ ಸಾಧಿಕಾ ಹ್ಯೇಕಸಪ್ತತಿಃ ।
ಮನ್ವನ್ತರಂ ತಸ್ಯ ಸಂಖ್ಯಾಂ ಮಾನುಷಾಬ್ದೈರ್ನಿಬೋಧ ಮೇ ॥೩೮॥

ತ್ರಿಂಶತ್ಕೋಟ್ಯಸ್ತು ಸಮ್ಪೂರ್ಣಾಃ ಸಂಖ್ಯಾತಾಃ ಸಂಖ್ಯಯಾ ದ್ವಿಜ ।
ಸಪ್ತಷಷ್ಟಿಸ್ತಥಾನ್ಯಾನಿ ನಿಯುತಾನಿ ಚ ಸಂಖ್ಯಯಾ ॥೩೯॥

---

೩೬. ಕ್ರೌಷ್ಟುಕಿಮುನಿಯೆ! ಬ್ರಹ್ಮದೇವನ ಒಂದು ಹಗಲಿನ ಸಮಯದಲ್ಲಿ ಹದಿನಾಲ್ಕುಮಂದಿ ಮನುಗಳು ತಮ್ಮ ತಮ್ಮ ಅಧಿಕಾರದ ಕಾಲ-ವಿಭಾಗದಲ್ಲಿ ಮನ್ವಂತರಗಳನ್ನು ನಡೆಯಿಸುತ್ತಿರುವರು. ಮನುಗಳ ಆಯುಃಪರಿ-ಮಾಣವಾದ ಸಹಸ್ರಾರು ವರ್ಷಗಳನ್ನು ವಿಂಗಡಿಸಿ ತೋರಿಸುವೆನು.

೩೭. ಇಂದ್ರಾದಿದೇವತೆಗಳು, ಸಪ್ತರ್ಷಿಗಳು, ಮನುರಾಜ ಮತ್ತು ಅವನ ಪುತ್ರರಾದ ಕ್ಷತ್ರಿಯರಾಜರು—ಇವರೆಲ್ಲರೂ ಒಂದು ಮನ್ವಂತರದಲ್ಲಿ ಮನುವಿನೊಡನೆ ಸೃಷ್ಟಿಸಲ್ಪಟ್ಟವರಾಗಿ ಮೊದಲಿನಂತೆ ಮನುವಿನೊಡನೆಯೇ ಸಂಹರಿಸಲ್ಪಡುವರು.

೩೮. ಅಧಿಕಭಾಗದಿಂದ ಕೂಡಿದ ಎಪ್ಪತ್ತೊಂದು ಸಂಖ್ಯೆಯ ನಾಲ್ಕು ಯುಗಗಳ ಆವೃತ್ತಿಯು ಒಂದು ಮನ್ವಂತರವೆನಿಸುವುದು. ಮನುಷ್ಯಮಾನವನ್ನು ಅನುಸರಿಸಿ ಮನ್ವಂತರಕಾಲದ ಮಿತಿಯನ್ನು ನನ್ನಿಂದ ನೀನು ಕೇಳು.

೩೯. ಎಲೈ! ಕ್ರೌಷ್ಟುಕಿದ್ವಿಜನೆ! ಮನ್ವಂತರದ ಪರಿಮಾಣದಲ್ಲಿ ಮೂವತ್ತುಕೋಟಿ ಸಂಖ್ಯೆಯ ವರ್ಷಗಳು ಪೂರ್ಣವಾಗಿ ಸೇರಿವೆ. ಮತ್ತು ಎಪ್ಪತ್ತಾರು ಲಕ್ಷ ಸಂಖ್ಯೆಯ ವರ್ಷಗಳು ಹೆಚ್ಚಾಗಿ ಸೇರಿಕೊಂಡಿರುವುವು.

ವಿಂಶತಿಶ್ಚ ಸಹಸ್ರಾಣಿ ಕಾಲೋಽಯಂ ಸಾಧಿಕಂ ವಿನಾ ।
ಏತನ್ಮನ್ವನ್ತರಂ ಪ್ರೋಕ್ತಂ ದಿವ್ಯೈರ್ವರ್ಷೈರ್ನಿಬೋಧ ಮೇ ॥೪೦॥

ಅಷ್ಟೌ ವರ್ಷಸಹಸ್ರಾಣಿ ದಿವ್ಯಯಾ ಸಂಖ್ಯಯಾ ಯುತಮ್ ।
ದ್ವಿಪಞ್ಚಾಶತ್ತಥಾನ್ಯಾನಿ ಸಹಸ್ರಾಣ್ಯಧಿಕಾನಿ ತು ॥೪೧॥

ಚತುರ್ದಶಗುಣೋ ಹ್ಯೇಷ ಕಾಲೋ ಬ್ರಾಹ್ಮಮಹಃ ಸ್ಮೃತಮ್ ।
ತಸ್ಯಾನ್ತೇ ಪ್ರಲಯಃ ಪ್ರೋಕ್ತೋ ಬ್ರಾಹ್ಮೋ ನೈಮಿತ್ತಿಕೋ ಬುಧೈಃ ॥೪೨॥

ಭೂರ್ಲೋಕೋಽಥ ಭುವರ್ಲೋಕಃ ಸ್ವರ್ಲೋಕಸ್ತನ್ನಿವಾಸಿನಃ ।
ತದಾ ವಿನಾಶಮಾಯಾನ್ತಿ ಮಹರ್ಲೋಕಶ್ಚ ತಿಷ್ಠತಿ ॥೪೩॥

---

೪೦. ಮತ್ತು ಜೊತೆಗೆ ಇಪ್ಪತ್ತು ಸಹಸ್ರ ವರ್ಷಗಳು ಸೇರಿದರೆ ಒಟ್ಟಾಗಿ ಲಭಿಸುವ ಮೂವತ್ತುಕೋಟಿ ಎಪ್ಪತ್ತಾರುಲಕ್ಷ ಇಪ್ಪತ್ತುಸಾವಿರ ವರ್ಷಗಳು ಅಧಿಕಾಂಶವನ್ನು ಬಿಟ್ಟು ಒಂದು ಮನ್ವಂತರವಾಗುವುದು. ದೇವಮಾನದಿಂದಲೂ ಮನ್ವಂತರಪರಿಮಾಣವನ್ನು ಕೇಳು.

೪೧. ದೇವಮಾನದ ಗಣನೆಯಿಂದ ಎಂಟು ಸಹಸ್ರ ವರ್ಷಗಳೂ ಮತ್ತು ಅಧಿಕವಾಗಿ ಐವತ್ತೆರಡು ವರ್ಷಗಳೂ ಸೇರಿದರೆ ಒಂದು ಮನ್ವಂತರವಾಗುವುದು. ಇದು ದೇವಮಾನದಿಂದ ಮನ್ವಂತರದ ಗಣನೆಯೆಂದು ಅರಿಯಬೇಕು.

೪೨. ಒಂದು ಮನ್ವಂತರಕಾಲದ ಹದಿನಾಲ್ಕರಷ್ಟು ಕಾಲವು ಬ್ರಹ್ಮದೇವನ ಒಂದು ಹಗಲೆಂದು ಸ್ಮರಿಸಲ್ಪಟ್ಟಿದೆ. ಅಂತಹ ಹಗಲಿನ ಸಮಾಪ್ತಿಯಲ್ಲಿ ಬ್ರಹ್ಮನ ಹಗಲಿನ ಸಮಾಪ್ತಿಯೆಂಬ ನಿಮಿತ್ತದಿಂದಾಗುವ ಪ್ರಲಯವನ್ನು ವಿದ್ವಾಂಸರು ನೈಮಿತ್ತಿಕಪ್ರಲಯವೆಂದು ಕರೆಯುವರು.

೪೩. ನೈಮಿತ್ತಿಕಪ್ರಲಯದಲ್ಲಿ ಭೂರ್ಲೋಕ, ಭುವರ್ಲೋಕ ಮತ್ತು ಸ್ವರ್ಲೋಕಗಳು ಹಾಗು ಆಯಾಯ ಲೋಕಗಳಲ್ಲಿ ವಾಸಮಾಡುವ ಪ್ರಾಣಿಗಳು ನಾಶವನ್ನು ಹೊಂದುತ್ತವೆ. ಮಹರ್ಲೋಕವು ನೈಮಿತ್ತಿಕ ಪ್ರಲಯದಲ್ಲಿ ನಾಶಹೊಂದದೇ ಇರುವುದು.

ತದ್ವಾಸಿನೋಽಪಿ ತಾಪೇನ ಜನಲೋಕಂ ಪ್ರಯಾನ್ತಿ ವೈ ।
ಏಕಾರ್ಣವೇ ಚ ತ್ರೈಲೋಕ್ಯೇ ಬ್ರಹ್ಮಾ ಸ್ವಪಿತಿ ವೈ ನಿಶಿ ॥೪೪॥

ತತ್ಪ್ರಮಾಣೈವ ಸಾ ರಾತ್ರಿಸ್ತದನ್ತೇ ಸೃಜ್ಯತೇ ಪುನಃ ।
ಏವಂ ತು ಬ್ರಹ್ಮಣೋ ವರ್ಷಮೇಕಂ ವರ್ಷಶತಂ ತು ತತ್ ॥೪೫॥

ಶತಂ ಹಿ ತಸ್ಯ ವರ್ಷಾಣಾಂ ಪರಮಿತ್ಯಭಿಧೀಯತೇ ।
ಪಞ್ಚಾಶದ್ಭಿಸ್ತಥಾ ವರ್ಷೈಃ ಪರಾರ್ಧಮಿತಿ ಕೀರ್ತ್ಯತೇ ॥೪೬॥

ಏಕಮಸ್ಯ ಪರಾರ್ಧಂ ತು ವ್ಯತೀತಂ ದ್ವಿಜಸತ್ತಮ ।
ಯಸ್ಯಾನ್ತೇಽಭೂನ್ಮಹಾಕಲ್ಪಃ ಪಾದ್ಮ ಇತ್ಯಭಿವಿಶ್ರುತಃ ॥೪೭॥

---

೪೪. ಆದರೆ ಮಹರ್ಲೋಕದಲ್ಲಿ ವಾಸಮಾಡುವ ಪ್ರಜೆಗಳು ಪ್ರಲಯಾಗ್ನಿಯ ತಾಪದಿಂದ ಅಲ್ಲಿರಲಾರದೆ ಮುಂದಿನ ಜನಲೋಕವನ್ನು ಪ್ರವೇಶಮಾಡುವರು. ಹೀಗೆ ಬ್ರಹ್ಮದೇವನ ರಾತ್ರಿಯಲ್ಲಿ ಮೂರು ಲೋಕಗಳು ನೀರಿನಲ್ಲಿ ಮುಳುಗಿ ಸಮುದ್ರಮಯವಾಗಿರಲು ಬ್ರಹ್ಮದೇವನು ನಿದ್ರೆಮಾಡುವನು.

೪೫. ಬ್ರಹ್ಮದೇವನ ಆ ರಾತ್ರಿಯು ಹಗಲಿನಷ್ಟು ಪರಿಮಾಣವುಳ್ಳದ್ದಾಗಿದೆ. ಆ ರಾತ್ರಿಯು ಕಳೆದ ಮೇಲೆ ಮತ್ತೆ ಪ್ರಪಂಚವು ಸೃಷ್ಟಿಯಾಗುವುದು. ಈ ರೀತಿಯಾಗಿ ಬ್ರಹ್ಮದೇವನಿಗೆ ಕ್ರಮವಾಗಿ ಒಂದೊಂದು ವರ್ಷವಾಗಿ ಒಂದು ನೂರು ವರ್ಷಗಳು ಕಳೆಯುವುವು.

೪೬. ಬ್ರಹ್ಮದೇವನ ಒಂದು ನೂರು ವರ್ಷಗಳ ದೀರ್ಘಕಾಲವು ಪರವೆಂದು ಹೇಳಲ್ಪಡುವುದು. ಹಾಗು ಅದರ ಅರ್ಧಭಾಗವಾದ ಐವತ್ತು ವರ್ಷಗಳ ಕಾಲವು ಪರಾರ್ಧವೆಂದು ಗಣಿಸಲ್ಪಟ್ಟಿದೆ.

೪೭. ಎಲೈ ! ದ್ವಿಜೋತ್ತಮನಾದ ಕ್ರೌಷ್ಟುಕಿಯೆ ! ಈಗ ಬ್ರಹ್ಮದೇವನ ಒಂದು ಪರಾರ್ಧವು ಕಳೆದಿರುವುದು. ಆ ಒಂದು ಪರಾರ್ಧದ ಕಡೆಯಲ್ಲಿ ಉಂಟಾದ ಮಹಾಕಲ್ಪದ ಪ್ರಲಯವು ಪಾದ್ಮಕಲ್ಪದ ಅವಸಾನವೆಂದು ಪ್ರಸಿದ್ಧಿಹೊಂದಿರುವುದು.

ದ್ವಿತೀಯಸ್ಯ ಪರಾರ್ಧಸ್ಯ ವರ್ತಮಾನಸ್ಯ ವೈ ದ್ವಿಜ ।
ವಾರಾಹ ಇತಿ ಕಲ್ಪೋಽಯಂ ಪ್ರಥಮಃ ಪರಿಕಲ್ಪಿತಃ ॥೪೮॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಬ್ರಹ್ಮಾಯುಃ-
ಪ್ರಮಾಣಕಥನಂ ನಾಮ ತ್ರಿಚತ್ವಾರಿಂಶೋಽಧ್ಯಾಯಃ

---

೪೮. ಎಲೈ ! ಬ್ರಹ್ಮರ್ಷಿಯೆ ! ಈಗ ನಡೆಯುತ್ತಿದ್ದ ಬ್ರಹ್ಮದೇವನ ಎರಡನೆಯ ಪರಾರ್ಧದಲ್ಲಿ ವಾರಾಹಕಲ್ಪವೆಂದು ನಾಮಾಂಕಿತವಾದ ಮೊದಲನೆಯ ಕಲ್ಪವು ಸೃಷ್ಟಿಯಾಗಿ ನಡೆಯುತ್ತಿರುವುದು.

ಮಾರ್ಕಂಡೇಯ ಮಹಾಪುರಾಣದಲ್ಲಿ ನಲವತ್ತಮೂರನೆಯ
ಅಧ್ಯಾಯವು ಮುಗಿದುದು.

॥ ಓಂ ಶ್ರೀ ದುರ್ಗಾಯೈ ನಮಃ ॥

ಮಾರ್ಕಂಡೇಯ ಪುರಾಣಂ

ಚತುಶ್ಚತ್ವಾರಿಂಶೋಽಧ್ಯಾಯಃ

(ಪ್ರಾಕೃತವೈಕೃತಸರ್ಗವರ್ಣನಮ್)

ಕ್ರೌಷ್ಟುಕಿರುವಾಚ :—

ಯಥಾ ಸಸರ್ಜ ವೈ ಬ್ರಹ್ಮಾ ಭಗವಾನಾದಿಕೃತ್ಪ್ರಜಾಃ ।
ಪ್ರಜಾಪತಿಃ ಪತಿರ್ದೇವಸ್ತನ್ಮೇ ವಿಸ್ತರತೋ ವದ ॥೧॥

ಮಾರ್ಕಣ್ಡೇಯ ಉವಾಚ :—

ಕಥಯಾಮ್ಯೇಷ ತೇ ಬ್ರಹ್ಮನ್ ಸಸರ್ಜ ಭಗವಾನ್ಯಥಾ ।
ಲೋಕಕೃಚ್ಛಾಶ್ವತಃ ಕೃತ್ಸ್ನಂ ಜಗತ್ಸ್ಥಾವರಜಙ್ಗಮಮ್ ॥೨॥

ನಲವತ್ತನಾಲ್ಕನೆಯ ಅಧ್ಯಾಯ

ಕ್ರೌಷ್ಟುಕಿಯು ಇಂತೆಂದನು :—

೧. ಅಪಾರಮಹಿಮೆಯುಳ್ಳವನೂ, ಆದಿನಿರ್ಮಾತನೂ, ಪ್ರಜಾಪಾಲಕನೂ ಮತ್ತು ದೇವೋತ್ತಮನೂ ಆದ ಬ್ರಹ್ಮದೇವನು ಪ್ರಜೆಗಳನ್ನು ಯಾವ ವಿಧಾನದಿಂದ ಸೃಷ್ಟಿಮಾಡಿದನೋ ಅದನ್ನು ನನಗೆ ವಿಸ್ತಾರವಾಗಿ ಹೇಳು.

ಮಾರ್ಕಂಡೇಯ ಮುನಿಯು ಹೀಗೆ ಹೇಳಿದನು :—

೨. ಬ್ರಹ್ಮರ್ಷಿಯೆ! ಅಮಿತಗುಣಗಳಿಂದ ಪೂರ್ಣನೂ, ಲೋಕಕಾರಣನೂ ಮತ್ತು ಶಾಶ್ವತನೂ ಆದ ಬ್ರಹ್ಮದೇವನು ಸ್ಥಾವರ-ಜಂಗಮಗಳಿಂದ ಕೂಡಿದ ಸಮಸ್ತ ಪ್ರಪಂಚವನ್ನು ಹೇಗೆ ನಿರ್ಮಿಸಿದನೆಂಬುದನ್ನು ನಾನು ಹೇಳುವೆನು.

ಪಾದ್ಮಾವಸಾನಸಮಯೇ ನಿಶಾಸುಪ್ತೋತ್ಥಿತಃ ಪ್ರಭುಃ ।
ಸತ್ತ್ವೋದ್ರಿಕ್ತಸ್ತದಾ ಬ್ರಹ್ಮಾ ಶೂನ್ಯಲೋಕಮವೈಕ್ಷತ ॥೩॥

ಇಮಂ ಚೋದಾಹರನ್ತ್ಯತ್ರ ಶ್ಲೋಕಂ ನಾರಾಯಣಂ ಪ್ರತಿ ।
ಬ್ರಹ್ಮಸ್ವರೂಪಿಣಂ ದೇವಂ ಜಗತಃ ಪ್ರಭವಾಪ್ಯಯಮ್ ॥೪॥

ಆಪೋ ನಾರಾ ಇತಿ ಪ್ರೋಕ್ತಾ ಆಪೋ ವೈ ನರಸೂನವಃ ।
ತಾಸು ಶೇತೇ ಸ ಯಸ್ಮಾಚ್ಚ ತೇನ ನಾರಾಯಣಃ ಸ್ಮೃತಃ ॥೫॥

ವಿಬುದ್ಧಃ ಸಲಿಲೇ ತಸ್ಮಿನ್ವಿಜ್ಞಾಯಾನ್ತರ್ಗತಾಂ ಮಹೀಮ್ ।
ಅನುಮಾನಾತ್ತದುದ್ಧಾರಂ ಕರ್ತುಕಾಮಸ್ತದಾ ಕ್ಷಿತೇಃ ॥೬॥

---

೩. ಪಾದ್ಮಕಲ್ಪದ ಅವಸಾನದ ಸಮಯದಲ್ಲಿ ಕ್ರಮವಾಗಿ ರಾತ್ರಿಯಲ್ಲಿ ನಿದ್ರೆಮಾಡಿ ಎಚ್ಚರಹೊಂದಿದ, ಸತ್ತ್ವಗುಣದ ಉದ್ರೇಕದಿಂದ ಕೂಡಿದ ಮತ್ತು ಪ್ರಭುವಾದ ಬ್ರಹ್ಮದೇವನು ಆಗ ಲೋಕವೆಲ್ಲವೂ ಶೂನ್ಯವಾಗಿರುವುದನ್ನು ಕಂಡನು.

೪. ಕಲ್ಪಾವಸಾನದಲ್ಲಿ ಸತ್ತ್ವಗುಣಮಯನಾಗಿರುವವನೂ, ಜಗತ್ತಿನ ಸೃಷ್ಟಿ–ಲಯಗಳಿಗೆ ನಿಯಾಮಕನೂ ಮತ್ತು ಬ್ರಹ್ಮಸ್ವರೂಪನೂ ಆದ ನಾರಾ–ಯಣನೆಂದು ಕರೆಯಲ್ಪಡುವ ಮೂರ್ತಿಯ ವಿಷಯದಲ್ಲಿ ಇದೊಂದು ಶ್ಲೋಕ–ವನ್ನು ಪ್ರಾಜ್ಞರು ಹೇಳುತ್ತಿರುವರು.

೫. ಪುರುಷರೂಪಿಯಾದ ಪರಮಾತ್ಮನಿಂದ ಜಲತತ್ತ್ವವು ಹುಟ್ಟಿರು–ವುದು. ಆದ್ದರಿಂದ ನರನಿಂದ ಹುಟ್ಟಿದ ಜಲವು "ನಾರ" ಎಂದು ಕರೆಯಲ್ಪ–ಡುವುದು. ಪರಮಾತ್ಮನು ಕಲ್ಪಾವಸಾನದಲ್ಲಿ ನೀರಿನಲ್ಲಿ ಮಲಗಿದ್ದುದರಿಂದ ನಾರ=ಜಲವನ್ನು, ಅಯನ=ಆಶ್ರಯಿಸಿದಂತಾದುದರಿಂದ "ನಾರಾಯಣ" ಎಂದು ಕರೆಯಲ್ಪಡುವನು.

೬. ಕಲ್ಪಾದಿಯಲ್ಲಿ ಎಚ್ಚರಹೊಂದಿದ ಪರಮಾತ್ಮನು ಭೂಮಿಯು ಸುತ್ತಲೂ ಇರುವ ಜಲರಾಶಿಯ ಅಡಿಯ ಪಾತಾಲದಲ್ಲಿ ಮುಳುಗಿ ಹೋದುದನ್ನು ಅನುಮಾನ ಪ್ರಮಾಣದಿಂದ ಊಹಿಸಿ ಆಗ ಭೂಮಿಯನ್ನು ಮೇಲಕ್ಕೆ ಎತ್ತಿ–ತರುವ ಸಂಕಲ್ಪವನ್ನು ಹೊಂದಿದನು.

ಅಕರೋತ್ಸ ತನೂರನ್ಯಾಃ ಕಲ್ಪಾದಿಷು ಯಥಾ ಪುರಾ ।
ಮತ್ಸ್ಯಕೂರ್ಮಾದಿಕಾಸ್ತದ್ವದ್ವಾರಾಹಂ ವಪುರಾಸ್ಥಿತಃ ॥೭॥

ವೇದಯಜ್ಞಮಯಂ ದಿವ್ಯಂ ವೇದಯಜ್ಞಮಯೋ ವಿಭುಃ ।
ರೂಪಂ ಕೃತ್ವಾ ವಿವೇಶಾಪ್ಸು ಸರ್ವಗಃ ಸರ್ವಸಮ್ಭವಃ ॥೮॥

ಸಮುದ್ಧೃತ್ಯ ಚ ಪಾತಾಲಾನ್ಮುಮೋಚ ಸಲಿಲೇ ಭುವಮ್ ।
ಜನಲೋಕಸ್ಥಿತೈಃ ಸಿದ್ಧೈಶ್ಚಿನ್ತ್ಯಮಾನೋ ಜಗತ್ಪತಿಃ ॥೯॥

ತಸ್ಯೋಪರಿ ಜಲೌಘಸ್ಯ ಮಹತೀ ನೌರಿವ ಸ್ಥಿತಾ ।
ವಿಸ್ತೃತತ್ವಾತ್ತು ದೇಹಸ್ಯ ನ ಮಹೀ ಯಾತಿ ಸಂಪ್ಲವಮ್ ॥೧೦॥

---

೭. ಆಗ ಸ್ವಾಮಿಯು ಹಿಂದಿನ ಅನೇಕ ಕಲ್ಪಗಳ ಪ್ರಾರಂಭದಲ್ಲಿ ಮತ್ಸ್ಯ-ಕೂರ್ಮ ಮುಂತಾದ ಬಗೆ ಬಗೆಯ ಮೂರ್ತಿಗಳನ್ನು ಧರಿಸಿದಂತೆ ಭೂಮಿಯನ್ನು ಮೇಲಕ್ಕೆ ಎತ್ತಲು ವರಾಹ ಮೂರ್ತಿಯನ್ನು ಧರಿಸಿದವನಾದನು.

೮. ವೇದ-ಯಜ್ಞಮಯವಾದ ರೂಪವುಳ್ಳವನೂ, ಸರ್ವೇಶ್ವರನೂ, ಸರ್ವವ್ಯಾಪಿಯೂ ಮತ್ತು ಸರ್ವಕಾರಣನೂ ಆದ ಪರಮಾತ್ಮನು ವೇದ-ಯಜ್ಞ-ಗಳ ಅಂಶದಿಂದ ಕೂಡಿದ ದಿವ್ಯವಾದ ವರಾಹ ಮೂರ್ತಿಯನ್ನು ಧರಿಸಿಕೊಂಡು ಜಲರಾಶಿಯಲ್ಲಿ ಪ್ರವೇಶಿಸಿದನು.

೯. ಆಗ ಜನಲೋಕದಲ್ಲಿ ವಾಸಮಾಡುತ್ತಿದ್ದ ಸಿದ್ಧರಿಂದ ಧ್ಯಾನಿಸಲ್ಪ-ಡುತ್ತಿದ್ದ ಜಗತ್ತಿನ ಪಾಲಕನಾದ ವರಾಹಮೂರ್ತಿಯು ಪಾತಾಲದಿಂದ ಭೂಮಿ-ಯನ್ನು ಮೇಲಕ್ಕೆ ಎತ್ತಿ ಜಲರಾಶಿಯಲ್ಲಿ ಬಿಟ್ಟನು.

೧೦. ಆಗ ವಿಸ್ತಾರವಾದ ಜಲರಾಶಿಯ ಮೇಲೆ ಬಿಡಲ್ಪಟ್ಟ ಭೂಮಿಯು ದೋಣಿಯಂತೆ ನೀರಿನ ಮೇಲೆ ನಿಂತುಕೊಂಡಿತು. ಭೂಮಿಯ ಆಕಾರವು ಹೆಚ್ಚು ವಿಸ್ತಾರವುಳ್ಳದ್ದಾದುದರಿಂದ ನೀರಿನಲ್ಲಿ ಚಲಿಸದಂತೆ ನಿಂತಿತು.

ತತಃ ಕ್ಷಿತಿಂ ಸಮೀಕೃತ್ಯ ಪೃಥಿವ್ಯಾಂ ಸೋऽಸೃಜದ್ಗಿರೀನ್ ॥೧೧॥

ಪ್ರಾಕ್ಸರ್ಗೇ ದಹ್ಯಮಾನೇ ತು ತದಾ ಸಂವರ್ತಕಾಗ್ನಿನಾ ।
ತೇನಾಗ್ನಿನಾ ವಿಶೀರ್ಣಾಸ್ತೇ ಪರ್ವತಾ ಭುವಿ ಸರ್ವಶಃ ॥೧೨॥

ಶೈಲಾ ಏಕಾರ್ಣವೇ ಮಗ್ನಾ ವಾಯುನಾಪಸ್ತು ಸಂಹತಾಃ ।
ನಿಷಕ್ತಾ ಯತ್ರ ಯತ್ರಾಸಂಸ್ತತ್ರ ತತ್ರಾಚಲಾಭವನ್ ॥೧೩॥

ಭೂವಿಭಾಗಂ ತತಃ ಕೃತ್ವಾ ಸಪ್ತದ್ವೀಪೋಪಶೋಭಿತಮ್ ।
ಭೂರಾದ್ಯಾಂಶ್ಚತುರೋ ಲೋಕಾನ್ ಪೂರ್ವವತ್ಸಮಕಲ್ಪಯತ್ ॥೧೪॥

ಸೃಷ್ಟಿಂ ಚಿನ್ತಯತಸ್ತಸ್ಯ ಕಲ್ಪಾದಿಷು ಯಥಾ ಪುರಾ ।
ಅಬುದ್ಧಿಪೂರ್ವಕಸ್ತಸ್ಮಾತ್ಪ್ರಾದುರ್ಭೂತಸ್ತಮೋಮಯಃ ॥೧೫॥

---

೧೧. ಅನಂತರ ಪರಮಾತ್ಮನು ಪಾತಾಲದಿಂದ ಮೇಲಕ್ಕೆ ಎತ್ತಿದ್ದ ಭೂಮಿಯನ್ನು ಸಮಮಟ್ಟವನ್ನಾಗಿ ಮಾಡಿ ಆ ಭೂಮಿಯಲ್ಲಿ ಅಲ್ಲಲ್ಲಿ ಬೆಟ್ಟಗಳನ್ನು ಸೃಷ್ಟಿಮಾಡಿದನು.

೧೨. ಹಿಂದಿನ ಕಲ್ಪಾವಸಾನದಲ್ಲಿ ಪ್ರಲಯಾಗ್ನಿಯಿಂದ ಸೃಷ್ಟಿಪ್ರಪಂಚವು ಸುಟ್ಟುಹೋಗಿ ಭೂಮಿಯಲ್ಲಿದ್ದ ಎಲ್ಲ ಪರ್ವತಗಳು ಆ ಅಗ್ನಿಯ ತಾಪದಿಂದ ಕರಗಿ ಹೋಗಿದ್ದುವು.

೧೩. ಆಗ ಕರಗಿಹೋದ ಪರ್ವತಗಳು ಜಲರಾಶಿಯಲ್ಲಿ ಸೇರಿಕೊಂಡುವು. ಗಾಳಿಯಿಂದ ನೀರು ಗಟ್ಟಿಯಾಗಿ ಎಲ್ಲೆಲ್ಲಿ ಪರ್ವತಗಳು ಲಯಹೊಂದಿದ್ದುವೋ ಅಲ್ಲಲ್ಲಿ ಮತ್ತೆ ಪರ್ವತಗಳು ಅಚಲವಾಗಿ ಕಾಣಿಸಿಕೊಂಡುವು.

೧೪. ತರುವಾಯ ನಾರಾಯಣಸ್ವಾಮಿಯು ಏಳು ದ್ವೀಪಗಳಿಂದ ಶೋಭಿಸುವ ಭೂವಿಭಾಗವನ್ನು ರಚಿಸಿ ಪ್ರಲಯಾವಸ್ಥೆಯಲ್ಲಿ ಲಯಹೊಂದಿದ ಭೂರ್ಲೋಕ ಮುಂತಾದ ನಾಲ್ಕುಲೋಕಗಳನ್ನು ಮತ್ತೆ ಹಿಂದಿನಂತೆ ರಚಿಸಿದನು.

೧೫. ಹಿಂದೆ ಕಳೆದ ಅನೇಕ ಕಲ್ಪಗಳ ಪ್ರಾರಂಭದಲ್ಲಿ ಹೇಗೋ ಹಾಗೆಯೇ ಈ ಕಲ್ಪದ ಪ್ರಾರಂಭದಲ್ಲಿ ಸೃಷ್ಟಿಕರ್ತನು ಸೃಷ್ಟಿಕಾರ್ಯವನ್ನು ಚಿಂತಿಸುತ್ತಿರಲು ಅಬುದ್ಧಿ ಪೂರ್ವಕ ಸೃಷ್ಟಿಯೆಂದು ಕರೆಯಲ್ಪಡುವ ತಮೋಗುಣಮಯವಾದ ವಸ್ತುಗಳ ಸೃಷ್ಟಿಯು ಮೊದಲು ಉದಯಿಸಿತು.

ತಮೋ ಮೋಹೋ ಮಹಾಮೋಹಸ್ತಾಮಿಸ್ರೋ ಹ್ಯನ್ಧಸಂಜ್ಞಿತಃ ।
ಅವಿದ್ಯಾ ಪಞ್ಚಪರ್ವೈಷಾ ಪ್ರಾದುರ್ಭೂತಾ ಮಹಾತ್ಮನಃ ॥೧೬॥

ಪಞ್ಚಧಾವಸ್ಥಿತಃ ಸರ್ಗೋ ಧ್ಯಾಯತೋಽಪ್ರತಿಬೋಧವಾನ್ ।
ಬಹಿರನ್ತಶ್ಚಾಪ್ರಕಾಶಃ ಸಂವೃತಾತ್ಮಾ ನಗಾತ್ಮಕಃ ॥೧೭॥

ಮುಖ್ಯಾ ನಗಾ ಯತಶ್ಚೋಕ್ತಾ ಮುಖ್ಯಸರ್ಗಸ್ತತಸ್ತ್ವಯಮ್ ।
ತಂ ದೃಷ್ಟ್ವಾಸಾಧಕಂ ಸರ್ಗಮಮನ್ಯದಪರಂ ಪುನಃ ॥೧೮॥

ತಸ್ಯಾಭಿಧ್ಯಾಯತಃ ಸರ್ಗಂ ತಿರ್ಯಕ್ಸ್ರೋತೋ ಹ್ಯವರ್ತತ ।
ಯಸ್ಮಾತ್ತಿರ್ಯಕ್ಪ್ರವೃತ್ತಿಃ ಸ ತಿರ್ಯಕ್ಸ್ರೋತಸ್ತತಃ ಸ್ಮೃತಃ ॥೧೯॥

---

೧೬. ಆಗ ಮಹಾತ್ಮನಾದ ಪರಮಾತ್ಮನ ಸೃಷ್ಟಿಸಂಕಲ್ಪವನ್ನು ನೆರವೇರಿಸಿದ ಅವಿದ್ಯೆಯು ಐದು ವಿಭಾಗವುಳ್ಳದ್ದಾಗಿ ಪ್ರಾದುರ್ಭವಿಸಿತು. ಅಂತಹ ಐದು ವಿಭಾಗಗಳು ತಮಸ್ಸು, ಮೋಹ, ಮಹಾಮೋಹ, ತಾಮಿಸ್ರ ಮತ್ತು ಅಂಧತಾಮಿಸ್ರ—ಎಂದು ಕರೆಯಲ್ಪಡುವುವು.

೧೭. ಸೃಷ್ಟಿರಚನೆಯನ್ನು ಧ್ಯಾನಿಸುತ್ತಿದ್ದ ಸರ್ವೇಶ್ವರನಿಂದ ಜ್ಞಾನಶಕ್ತಿಯಿಲ್ಲದ, ಐದು ಅವಿದ್ಯಾಂಶಗಳಿಂದ ಪೂರ್ಣವಾದ ಸೃಷ್ಟಿಯು ಜನಿಸಿತು. ಆ ಸೃಷ್ಟಿಯು ಒಳಗೆ ಮತ್ತು ಹೊರಭಾಗಗಳಲ್ಲಿ ಪ್ರಕಾಶವಿಲ್ಲದಿರುವುದೂ, ಅಜ್ಞಾನದಿಂದ ಕವಿತ ಆತ್ಮವುಳ್ಳದ್ದೂ ಮತ್ತು ಚಲನೆಯಿಲ್ಲದ್ದೂ ಆಯಿತು.

೧೮. ಆ ಸೃಷ್ಟಿಯಲ್ಲಿ ಅಚಲಗಳು ಮುಖ್ಯವಾಗಿ ಗಣಿಸಲ್ಪಟ್ಟುವು. ಆ ಕಾರಣದಿಂದ ಪರ್ವತಸೃಷ್ಟಿಯು ಮುಖ್ಯಸೃಷ್ಟಿಯೆಂದು ಪ್ರಸಿದ್ಧವಾಯಿತು. ಆಗ ಸೃಷ್ಟಿಕರ್ತನು ಅಚೇತನ ಸೃಷ್ಟಿಯು ಮುಂದುವರೆಯದೆ ನಿಂತಿರುವುದನ್ನು ನೋಡಿ ಮತ್ತೊಂದು ಬಗೆಯ ಸೃಷ್ಟಿಯನ್ನು ಧ್ಯಾನಿಸಿದನು.

೧೯. ಹಾಗೆ ಧ್ಯಾನಮಾಡುತ್ತಿರುವ ಬ್ರಹ್ಮದೇವನಿಂದ ತಿರ್ಯಕ್ಪ್ರಾಣಿಗಳ ಸೃಷ್ಟಿಯು ಉದ್ಭವವಾಯಿತು. ಆ ಸೃಷ್ಟಿವರ್ಗವು ಅಡ್ಡಲಾಗಿ ನಡೆಯುವ ಶೀಲವುಳ್ಳದ್ದಾದುದರಿಂದ ತಿರ್ಯಕ್‌ಸ್ರೋತವೆಂದು ಸ್ಮರಿಸಲ್ಪಟ್ಟಿತು.

ಪಶ್ವಾದಯಸ್ತೇ ವಿಖ್ಯಾತಾಸ್ತಮಃಪ್ರಾಯಾ ಹ್ಯವೇದಿನಃ ।
ಉತ್ಪಥಗ್ರಾಹಿಣಶ್ಚೈವ ತೇಽಜ್ಞಾನೇ ಜ್ಞಾನಮಾನಿನಃ ॥೨೦॥

ಅಹಙ್ಕೃತಾ ಅಹಂಮಾನಾ ಅಷ್ಟಾವಿಂಶದ್ವಿಧಾತ್ಮಿಕಾಃ ।
ಅನ್ತಃಪ್ರಕಾಶಾಸ್ತೇ ಸರ್ವೇ ಆವೃತಾಸ್ತು ಪರಸ್ಪರಮ್ ॥೨೧॥

ತಮಪ್ಯಸಾಧಕಂ ಮತ್ವಾ ಧ್ಯಾಯತೋಽನ್ಯಸ್ತತೋಽಭವತ್ ।
ಊರ್ಧ್ವಸ್ರೋತಸ್ತೃತೀಯಸ್ತು ಸಾತ್ತ್ವಿಕೋರ್ಧ್ವಮವರ್ತತ ॥೨೨॥

ತೇ ಸುಖಪ್ರೀತಿಬಹುಲಾ ಬಹಿರನ್ತಸ್ತ್ವನಾವೃತಾಃ ।
ಪ್ರಕಾಶಾ ಬಹಿರನ್ತಶ್ಚ ಊರ್ಧ್ವಸ್ರೋತಸ್ಸಮುದ್ಭವಾಃ ॥೨೩॥

---

೨೦. ತಿರ್ಯಕ್‌ಸ್ರೋತ ಸೃಷ್ಟಿಯಲ್ಲಿ ಸೇರಿದ ಪಶು ಮುಂತಾದ ಮೂಕಪ್ರಾಣಿಗಳು ಲೋಕದಲ್ಲಿ ಪ್ರಸಿದ್ಧವಾಗಿವೆ. ಅವು ತಮೋಗುಣದಿಂದ ತುಂಬಿರುವುವೂ, ಜ್ಞಾನವಿಲ್ಲದಿರುವುವೂ, ಸ್ವತಂತ್ರವಾಗಿ ಉನ್ಮಾರ್ಗದಲ್ಲಿ ನಡೆಯುವುವೂ ಮತ್ತು ಅಜ್ಞಾನವನ್ನು ಜ್ಞಾನವೆಂದು ಅರಿತಿರುವುವೂ ಆಗಿವೆ.

೨೧. ಮತ್ತು ಅಹಂಕಾರಕ್ಕೆ ಒಳಗಾಗಿರುವುವೂ, ತನ್ನ ಬುದ್ಧಿಯನ್ನೇ ಪ್ರಮಾಣವೆಂದು ತಿಳಿದಿರುವುವೂ, ಅನ್ಯೋನ್ಯ ಆವರಣದಿಂದ ಕೂಡಿರುವುವೂ, ಮತ್ತು ಅಂತರಂಗದಲ್ಲಿ ಪ್ರಕಾಶದಿಂದ ಕೂಡಿರುವುವೂ ಆದ ಆ ಪ್ರಾಣಿಗಳು ಒಟ್ಟು ಇಪ್ಪತ್ತೆಂಟು ವಿಧವಾಗಿವೆ.

೨೨. ಸೃಷ್ಟಿಕರ್ತನು ಆ ಸೃಷ್ಟಿಯನ್ನು ಅಸಾಧಕವೆಂದರಿತು ಧ್ಯಾನಿಸುತ್ತಿರಲು ಮತ್ತೊಂದು ಸೃಷ್ಟಿಯು ಉಂಟಾಯಿತು. ಮೂರನೆಯದಾಗಿ ಜನಿಸಿದ ಸತ್ತ್ವಗುಣಪೂರ್ಣವಾದ ಆ ಸೃಷ್ಟಿಯು ಹಿಂದಿನ ಸೃಷ್ಟಿಗಿಂತಲೂ ಮೇಲಾದುದರಿಂದ ಊರ್ಧ್ವಸ್ರೋತವೆಂದು ಕರೆಯಲ್ಪಟ್ಟಿತು.

೨೩. ಊರ್ಧ್ವಸ್ರೋತವೆಂಬ ಆ ಸೃಷ್ಟಿಯಲ್ಲಿ ಜನ್ಮವೆತ್ತಿದ್ದ ಪ್ರಜೆಗಳು ಸುಖ-ಪ್ರೀತಿಗಳ ಅತಿಶಯವುಳ್ಳವರೂ ಒಳ-ಹೊರಭಾಗಗಳಲ್ಲಿ ಆವರಣವಿಲ್ಲದವರೂ ಹಾಗು ಒಳ-ಹೊರಭಾಗಗಳಲ್ಲಿ ಪ್ರಕಾಶಮಯರೂ ಆಗಿದ್ದರು.

ತುಷ್ಟಾತ್ಮನಸ್ತೃತೀಯಸ್ತು ದೇವಸರ್ಗೋ ಹಿ ಸ ಸ್ಮೃತಃ ।
ತಸ್ಮಿನ್ ಸರ್ಗೇಽಭವತ್ಪ್ರೀತಿರ್ನಿಷ್ಪನ್ನೇ ಬ್ರಹ್ಮಣಸ್ತದಾ ॥೨೪॥

ತತೋಽನ್ಯಂ ಸ ತದಾ ದಧ್ಯೌ ಸಾಧಕಂ ಸರ್ಗಮುತ್ತಮಮ್ ।
ತಥಾಭಿಧ್ಯಾಯತಸ್ತಸ್ಯ ಸತ್ಯಾಭಿಧ್ಯಾಯಿನಸ್ತತಃ ॥೨೫॥

ಪ್ರಾದುರ್ಬಭೌ ತದಾವ್ಯಕ್ತಾದರ್ವಾಕ್ಸ್ರೋತಸ್ತು ಸಾಧಕಃ ।
ಯಸ್ಮಾದರ್ವಾಗ್ವ್ಯವರ್ತನ್ತ ತತೋಽರ್ವಾಕ್ಸ್ರೋತಸಸ್ತು ತೇ ॥೨೬॥

ತೇ ಚ ಪ್ರಕಾಶಬಹುಲಾಸ್ತಮೋದ್ರಿಕ್ತಾ ರಜೋಽಧಿಕಾಃ ।
ತಸ್ಮಾತ್ತೇ ದುಃಖಬಹುಲಾ ಭೂಯೋ ಭೂಯಶ್ಚ ಕಾರಿಣಃ ॥೨೭॥

---

೨೪. ಸಂತೋಷಗೊಂಡ ಅಂತರಂಗವುಳ್ಳ ಬ್ರಹ್ಮನಿಂದ ಜನಿಸಿದ ಆ ಮೂರನೆಯ ಸೃಷ್ಟಿಯು ದೇವಸರ್ಗವೆಂದು ಸ್ಮರಿಸಲ್ಪಟ್ಟಿರುವುದು. ಆ ಸೃಷ್ಟಿಯು ಪೂರ್ಣವಾಗಲು ಆಗ ಬ್ರಹ್ಮನಿಗೆ ಪ್ರೀತಿಯುಂಟಾಯಿತು.

೨೫. ತರುವಾಯ ಬ್ರಹ್ಮದೇವನು ಮತ್ತೊಂದು ಉತ್ತಮವಾದ ಮತ್ತು ಪ್ರಜಾವರ್ಗಸಾಧಕವಾದ ಸೃಷ್ಟಿಯನ್ನು ಧ್ಯಾನಿಸಿದನು. ಆಗ ಸತ್ಯಸಂಕಲ್ಪವನ್ನು ಹೊಂದಿದವನೂ ಮತ್ತು ಮತ್ತೊಂದು ಸೃಷ್ಟಿಯನ್ನು ಧ್ಯಾನಿಸುವವನೂ ಆದ ಬ್ರಹ್ಮದೇವನ ಧ್ಯಾನಬಲದಿಂದ ಮತ್ತೊಂದು ಬಗೆಯ ಸೃಷ್ಟಿಯು ಉದ್ಭವಿಸಿತು.

೨೬. ಆಗ ಅವ್ಯಕ್ತಕಾರಣದಿಂದ ಸೃಷ್ಟಿವರ್ಗವನ್ನು ಮುಂದುವರಿಸುವ ಅರ್ವಾಕ್ಸ್ರೋತವೆಂಬ ಸೃಷ್ಟಿಯು ಪ್ರಾದುರ್ಭವಿಸಿತು. ಆ ಸೃಷ್ಟಿಯಲ್ಲಿ ಸೇರಿದ ಪ್ರಜಾವರ್ಗವು ಕಡೆಯಲ್ಲಿ ಹುಟ್ಟಿ ಕಾಣಿಸಿಕೊಂಡಿದ್ದರಿಂದ ಅದು ಅರ್ವಾಕ್ ಸ್ರೋತಸೃಷ್ಟಿಯೆಂದು ಕರೆಯಲ್ಪಟ್ಟಿತು.

೨೭. ಆ ಪ್ರಜೆಗಳು ಉದ್ರಿಕ್ತವಾದ ತಮೋಗುಣವುಳ್ಳವರೂ ಮತ್ತು ಅಧಿಕವಾದ ರಜೋಗುಣದಿಂದ ಕೂಡಿದವರೂ ಆಗಿರುವರು. ಆದ್ದರಿಂದ ಅವರು ಅತಿಶಯವಾದ ದುಃಖವುಳ್ಳವರೂ ಮತ್ತು ಮತ್ತೆ ಮತ್ತೆ ಸಾಹಸ-ಉದ್ಯಮವುಳ್ಳ-ವರೂ ಆಗಿರುವರು.

ಪ್ರಕಾಶಾ ಬಹಿರನ್ತಶ್ಚ ಮನುಷ್ಯಾಃ ಸಾಧಕಾಶ್ಚ ತೇ ||೨೮||

ಷಷ್ಠೋಽನುಗ್ರಹಃ ಸರ್ಗಃ ಸ ಚತುರ್ಧಾ ವ್ಯವಸ್ಥಿತಃ |
ವಿಪರ್ಯಯೇಣ ಸಿದ್ಧ್ಯಾ ಚ ಶಾನ್ತ್ಯಾ ತುಷ್ಟ್ಯಾ ತಥೈವ ಚ ||೨೯||

ನಿವೃತ್ತಂ ವರ್ತಮಾನಂ ಚ ತೇಽರ್ಥಂ ಜಾನನ್ತಿ ವೈ ಪುನಃ |
ಭೂತಾದಿಕಾನಾಂ ಭೂತಾನಾಂ ಷಷ್ಠಃ ಸರ್ಗಃ ಸ ಉಚ್ಯತೇ ||೩೦||

ತೇ ಪರಿಗ್ರಾಹಿಣಃ ಸರ್ವೇ ಸಂವಿಭಾಗರತಾಸ್ತಥಾ |
ಚೋದನಾಶ್ಚಾಪ್ಯಶೀಲಾಶ್ಚ ಜ್ಞೇಯಾ ಭೂತಾದಿಕಾಶ್ಚ ತೇ ||೩೧||

ಪ್ರಥಮೋ ಮಹತಃ ಸರ್ಗೋ ವಿಜ್ಞೇಯೋ ಬ್ರಹ್ಮಣಸ್ತು ಸಃ |
ತನ್ಮಾತ್ರಾಣಾಂ ದ್ವಿತೀಯಸ್ತು ಭೂತಸರ್ಗಃ ಸ ಉಚ್ಯತೇ ||೩೨||

---

೨೮. ಮತ್ತು ಈ ಸೃಷ್ಟಿಯಲ್ಲಿ ಸೇರಿದ ಮನುಷ್ಯರೂಪರಾದ ಪ್ರಜೆಗಳು ಒಳ-ಹೊರಭಾಗಗಳಲ್ಲಿ ಜ್ಞಾನಪ್ರಕಾಶವುಳ್ಳವರೂ ಮತ್ತು ಎಲ್ಲ ಸೃಷ್ಟಿಗಿಂತಲೂ ಹೆಚ್ಚಾಗಿ ಸೃಷ್ಟಿಯನ್ನು ಸಾಧಿಸುವವರೂ ಆಗಿರುವರು.

೨೯. ಅನಂತರ ಬ್ರಹ್ಮದೇವನಿಂದ ಹುಟ್ಟಿದ ಸೃಷ್ಟಿಯು ಅನುಗ್ರಹ ಸೃಷ್ಟಿಯು. ಅದು ಸ್ವಭಾವವೈಷಮ್ಯ, ಕಾರ್ಯಸಿದ್ಧಿ, ಶಾಂತಿ ಮತ್ತು ತುಷ್ಟಿ ಎಂಬ ನಾಲ್ಕು ಗುಣಗಳ ಪ್ರಾಧಾನ್ಯದಿಂದ ನಾಲ್ಕು ಬಗೆಯಾಗಿರುವುದು.

೩೦. ಅನುಗ್ರಹ ಸರ್ಗದಲ್ಲಿ ಸೇರಿದ ವ್ಯಕ್ತಿಗಳು ಭೂತ-ಭವಿಷ್ಯ-ವರ್ತಮಾನವಾದ ಅರ್ಥಗಳನ್ನು ತಿಳಿಯುವರು. ಭೂತ-ಯಕ್ಷ ಮುಂತಾದ ಪ್ರಾಣಿಗಳ ಸೃಷ್ಟಿಯು ಆರನೆಯ ಸೃಷ್ಟಿಯೆಂದು ಹೇಳಲ್ಪಟ್ಟಿದೆ.

೩೧. ಭೂತಾದಿ ಪ್ರಾಣಿಗಳ ಆರನೆಯ ಸೃಷ್ಟಿಯಲ್ಲಿ ಸೇರಿದ ಪ್ರಜೆಗಳು ಎಲ್ಲವನ್ನು ವ್ಯಾಪಿಸಿರುವವರೂ, ಭೋಗಿಗಳೂ, ವಿತರಣಶೀಲವುಳ್ಳವರೂ, ಪರರಿಗೆ ಚೋದಕರೂ ಮತ್ತು ಶೀಲ-ಆಚಾರವರ್ಜಿತರೂ ಆಗಿರುವರು.

೩೨. ಈ ರೀತಿಯಲ್ಲಿ ಹುಟ್ಟಿದ ಅನೇಕ ಸೃಷ್ಟಿಗಳಲ್ಲಿ ಬ್ರಹ್ಮದೇವನಿಂದ ಉಂಟಾದ ಮಹತ್ತತ್ತ್ವದ ಸೃಷ್ಟಿಯು ಮೊದಲನೆಯದೆಂದು ಅರಿಯಬೇಕು. ಎರಡನೆಯದಾದ ಭೂತತನ್ಮಾತ್ರ ಸೃಷ್ಟಿಯು ಭೂತಸರ್ಗವೆಂದು ಕರೆಯಲ್ಪಡುತ್ತದೆ.

ವೈಕಾರಿಕಸ್ತೃತೀಯಸ್ತು ಸರ್ಗಶ್ಚೈನ್ದ್ರಿಯಕಃ ಸ್ಮೃತಃ ।
ಇತ್ಯೇಷ ಪ್ರಾಕೃತಃ ಸರ್ಗಃ ಸಮ್ಭೂತೋಽಬುದ್ಧಿಪೂರ್ವಕಃ ॥೩೩॥

ಮುಖ್ಯಃ ಸರ್ಗಶ್ಚತುರ್ಥಸ್ತು ಮುಖ್ಯಾ ವೈ ಸ್ಥಾವರಾಃ ಸ್ಮೃತಾಃ ।
ತಿರ್ಯಕ್ಸ್ರೋತಾಸ್ತು ಯಃ ಪ್ರೋಕ್ತಸ್ತಿರ್ಯಗ್ಯೋನ್ಯಃ ಸ ಪಞ್ಚಮಃ ॥೩೪॥

ತಥೋರ್ಧ್ವಸ್ರೋತಸಾಂ ಷಷ್ಠೋ ದೇವಸರ್ಗಸ್ತು ಸ ಸ್ಮೃತಃ ।
ತತೋಽರ್ವಾಕ್ಸ್ರೋತಸಾಂ ಸರ್ಗಃ ಸಪ್ತಮಃ ಸ ತು ಮಾನುಷಃ॥೩೫॥

ಅಷ್ಟಮೋಽನುಗ್ರಹಃ ಸರ್ಗಸ್ಸಾತ್ತ್ವಿಕಸ್ತಾಮಸಶ್ಚ ಸಃ ।
ಪಞ್ಚೈತೇ ವೈಕೃತಾಃ ಸರ್ಗಾಃ ಪ್ರಾಕೃತಾಸ್ತು ತ್ರಯಃ ಸ್ಮೃತಾಃ ॥೩೬॥

---

೩೩. ವೈಕಾರಿಕವೆಂದು ಕರೆಯಲ್ಪಡುವ ಮೂರನೆಯ ಸೃಷ್ಟಿಯು ಇಂದ್ರಿಯಸೃಷ್ಟಿರೂಪವೆಂದು ಸ್ಮರಿಸಲ್ಪಟ್ಟಿರುವುದು. ಕ್ರಮವಾಗಿ ಹುಟ್ಟಿರುವ ಈ ಮೂರು ಸೃಷ್ಟಿಗಳ ವರ್ಗವು ಅಬುದ್ಧಿ ಪೂರ್ವಕವಾದ ಪ್ರಾಕೃತ ಸರ್ಗವೆನಿಸಿರುವುದು.

೩೪. ನಾಲ್ಕನೆಯದಾಗಿ ಉಂಟಾಗಿರುವ ಸೃಷ್ಟಿಯು ಮುಖ್ಯಸೃಷ್ಟಿಯು. ಮುಖ್ಯವೆಂದರೆ ಸ್ಥಾವರ ಪ್ರಾಣಿಗಳೆಂದು ಕರೆಯಲ್ಪಟ್ಟವೆ. ಮೂಕಜಂತುಯೋನಿಯಲ್ಲಿ ಜನಿಸಿರುವುದರಿಂದ ಯಾವ ಸೃಷ್ಟಿಯು ತಿರ್ಯಕ್‌ಸ್ರೋತವೆಂದು ಕರೆಯಲ್ಪಡುವುದೋ ಅದು ಐದನೆಯ ಸೃಷ್ಟಿಯು.

೩೫. ಹಾಗು ಊರ್ಧ್ವಸ್ರೋತ ನಾಮಾಂಕಿತರಾದ ದೇವತೆಗಳ ಸೃಷ್ಟಿಯು ಆರನೆಯದಾಗಿ ಎಣಿಸಲ್ಪಟ್ಟಿದೆ. ತರುವಾಯ ಜನಿಸಿದ ಅರ್ವಾಕ್‌ಸ್ರೋತರೆಂದು ಕರೆಯಲ್ಪಡುವ ಮಾನವರ ಸೃಷ್ಟಿಯು ಏಳನೆಯ ಸೃಷ್ಟಿಯು.

೩೬. ಸತ್ತ್ವಗುಣ-ತಮೋಗುಣಗಳಿಂದ ಕೂಡಿದ ಅನುಗ್ರಹ ನಾಮಾಂಕಿತವಾದ ಸೃಷ್ಟಿಯು ಎಂಟನೆಯದು. ಈ ಸೃಷ್ಟಿಯಲ್ಲಿ ವಿಪರ್ಯಯ-ಸಿದ್ಧಿ ಮುಂತಾದ ಗುಣಪೂರ್ಣ ಪ್ರಜೆ ಮತ್ತು ಭೂತಾದಿಗಳು ಸೇರಿರುವರೆಂದು ಭಾವಿಸಬೇಕು. ಹೀಗೆ ಪ್ರಾಕೃತಸರ್ಗವು ಮೂರು ವಿಧವಾಗಿಯೂ ವೈಕೃತಸರ್ಗವು ಐದು ವಿಧವಾಗಿಯೂ ಇದೆಯೆಂದು ಸ್ಮರಿಸಲ್ಪಟ್ಟಿದೆ.

ಪ್ರಾಕೃತೋ ವೈಕೃತಶ್ಚೈವ ಕೌಮಾರೋ ನವಮಃ ಸ್ಮೃತಃ ।
ಇತ್ಯೇತೇ ವೈ ಸಮಾಖ್ಯಾತಾ ನವ ಸರ್ಗಾಃ ಪ್ರಜಾಪತೇಃ ॥೩೭॥

ಪ್ರಾಕೃತಾ ವೈಕೃತಾಶ್ಚೈವ ಜಗತೋ ಮೂಲಹೇತವಃ ।
ಸೃಜತೋ ಜಗದೀಶಸ್ಯ ಕಿಮನ್ಯಚ್ಛ್ರೋತುಮಿಚ್ಛಸಿ ॥೩೮॥

ಇತಿ ಶ್ರೀ ಮಾರ್ಕಣ್ಡೇಯಮಹಾಪುರಾಣೇ ಪ್ರಾಕೃತವೈಕೃತ ಸರ್ಗವರ್ಣನಂ ನಾಮ ಚತುಶ್ಚತ್ವಾರಿಂಶೋಽಧ್ಯಾಯಃ

---

೩೭. ಪ್ರಾಕೃತ-ವೈಕೃತಸರ್ಗಗಳೆರಡೂ ಸೇರಿ ಎಂಟು ಸೃಷ್ಟಿವರ್ಗವಲ್ಲದೆ ಕೌಮಾರಸರ್ಗವು ಒಂಭತ್ತನೆಯದಾಗಿ ಸ್ಮರಿಸಲ್ಪಟ್ಟಿರುವುದು. ಹೀಗೆ ಪ್ರಜಾಪತಿಯಿಂದ ಜನಿಸಿದ ಒಂಭತ್ತು ಸರ್ಗಗಳು ಹೇಳಲ್ಪಟ್ಟಿರುವುವು.

೩೮. ಜಗತ್ತನ್ನು ನಿರ್ಮಿಸಿರುವ ಜಗದೀಶ್ವರನಿಂದ ಜನಿಸಿದ ಈ ಪ್ರಾಕೃತ–ವೈಕೃತವೆಂಬ ಎಂಟು ಸೃಷ್ಟಿಗಳು ಜಗತ್ತಿಗೆ ಮೂಲಕಾರಣಗಳಾಗಿವೆ. ಕ್ರೌಷ್ಟುಕಿಯೆ! ನೀನು ಇನ್ನು ಏನು ಕೇಳಬೇಕೆಂದಿರುವೆ?

ಮಾರ್ಕಂಡೇಯ ಮಹಾಪುರಾಣದಲ್ಲಿ ನಲವತ್ತನಾಲ್ಕನೆಯ
ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಪಞ್ಚಚತ್ವಾರಿಂಶೋಽಧ್ಯಾಯಃ

(ಸೃಷ್ಟಿಪ್ರಕರಣಪ್ರಾರಮ್ಭಃ)

ಕ್ರೌಷ್ಟುಕಿರುವಾಚ :—

ಸಮಾಸಾತ್ಕಥಿತಾ ಸೃಷ್ಟಿಃ ಸಮ್ಯಗ್ಭಗವತಾ ಮಮ ।
ದೇವಾದೀನಾಂ ಭವಂ ಬ್ರಹ್ಮನ್ ವಿಸ್ತರಾತ್ತು ಬ್ರವೀಹಿ ಮೇ ॥೧॥

ಮಾರ್ಕಣ್ಡೇಯ ಉವಾಚ :—

ಕುಶಲಾಕುಶಲೈರ್ಬ್ರಹ್ಮನ್ಭಾವಿತಾಃ ಪೂರ್ವಕರ್ಮಭಿಃ ।
ಖ್ಯಾತ್ಯಾ ತಯಾ ಹ್ಯನಿರ್ಮುಕ್ತಾಃ ಪ್ರಲಯೇ ಹ್ಯುಪಸಂಹೃತಾಃ ॥೨॥

ನಲವತ್ತೈದನೆಯ ಅಧ್ಯಾಯ

ಕ್ರೌಷ್ಟುಕಿಯು ಇಂತೆಂದನು :—

೧. ಬ್ರಹ್ಮರ್ಷಿಯಾದ ಮಾರ್ಕಂಡೇಯಮುನಿಯೆ! ಪೂಜ್ಯನಾದ ನಿನ್ನಿಂದ ನನಗೆ ಸೃಷ್ಟಿಕ್ರಮವು ಸಂಗ್ರಹವಾಗಿ ಹೇಳಲ್ಪಟ್ಟಿರುವುದು. ಮುಂದೆ ದೇವಾದಿಗಳ ಸೃಷ್ಟಿಯನ್ನು ಚನ್ನಾಗಿ ವಿಸ್ತಾರವಾಗಿ ಹೇಳು.

ಮಾರ್ಕಂಡೇಯ ಮುನಿಯು ಹೀಗೆ ಹೇಳಿದನು :—

೨. ಕ್ರೌಷ್ಟುಕಿಮುನಿಯೆ! ಹಿಂದಿನ ಕಲ್ಪದ ಪ್ರಜೆಗಳು ಶುಭ-ಅಶುಭ ರೂಪವಾದ ತಮ್ಮ ಪೂರ್ವಕರ್ಮಗಳ ವಾಸನೆಯಿಂದ ಕೂಡಿದವರೂ ಮತ್ತು ಅದರ ಭವಿಷ್ಯಫಲಭೋಗದಿಂದ ಬಿಡಲ್ಪಡದವರೂ ಆಗಿ ಹಾಗೆ ಪ್ರಲಯದಲ್ಲಿ ಸಂಹಾರಹೊಂದಿದರು.

ದೇವಾದ್ಯಾಃ ಸ್ಥಾವರಾನ್ತಾಶ್ಚ ಪ್ರಜಾ ಬ್ರಹ್ಮಂಶ್ಚತುರ್ವಿಧಾಃ ।
ಬ್ರಹ್ಮಣಃ ಕುರ್ವತಃ ಸೃಷ್ಟಿಂ ಜಜ್ಞಿರೇ ಮಾನಸಾಸ್ತದಾ ॥೩॥

ತತೋ ದೇವಾಸುರಪಿತೄನ್ಮಾನುಷಾಂಶ್ಚ ಚತುಷ್ಟಯಮ್ ।
ಸಿಸೃಕ್ಷುರಮ್ಭಸ್ಯೇತಾನಿ ಸ್ವಮಾತ್ಮಾನಮಯೂಯುಜತ್ ॥೪॥

ಯುಕ್ತಾತ್ಮನಸ್ತಮೋಮಾತ್ರಾ ಉದ್ರಿಕ್ತಾಭೂತ್ಪ್ರಜಾಪತೇಃ ।
ಸಿಸೃಕ್ಷೋರ್ಜಘನಾತ್ಪೂರ್ವಮಸುರಾ ಜಜ್ಞಿರೇ ತತಃ ॥೫॥

ಉತ್ಸಸರ್ಜ ತತಸ್ತಾಂ ತು ತಮೋಮಾತ್ರಾತ್ಮಿಕಾಂ ತನುಮ್ ।
ಸಾಪಿ ವಿದ್ಧಾ ತನುಸ್ತೇನ ಸದ್ಯೋ ರಾತ್ರಿರಜಾಯತ ॥೬॥

ಅನ್ಯಾಂ ತನುಮುಪಾದಾಯ ಸಿಸೃಕ್ಷುಃ ಪ್ರೀತಿಮಾಪ ಸಃ ।
ಸತ್ತ್ವೋದ್ರೇಕಾಸ್ತತೋ ದೇವಾ ಮುಖತಸ್ತಸ್ಯ ಜಜ್ಞಿರೇ ॥೭॥

---

೩. ಬ್ರಹ್ಮರ್ಷಿಯೆ! ಜಗತ್ತಿನ ಸೃಷ್ಟಿಯನ್ನು ರಚಿಸುತ್ತಿದ್ದ ಬ್ರಹ್ಮದೇವನಿಂದ ಆಗ ದೇವತೆಗಳು ಮೊದಲಾಗಿರುವ ಮತ್ತು ಸ್ಥಾವರಪ್ರಾಣಿಗಳು ಕಡೆಯಾಗಿರುವ ನಾಲ್ಕು ವಿಧದ ಮಾನಸ ಪ್ರಜೆಗಳು ಜನಿಸಿದರು.

೪. ಆಗ ದೇವ-ಅಸುರ-ಪಿತೃ ಮತ್ತು ಮನುಷ್ಯರೆಂಬ ನಾಲ್ಕುವಿಧದ ಪ್ರಜೆಗಳನ್ನು ಸೃಜಿಸುವ ಸಂಕಲ್ಪವುಳ್ಳ ಬ್ರಹ್ಮದೇವನು ಜಲರಾಶಿಯಲ್ಲಿ ಕುಳಿತು ತನ್ನ ಮನಸ್ಸನ್ನು ಈ ಸೃಷ್ಟಿಧ್ಯಾನದಲ್ಲಿರಿಸಿದನು.

೫. ಧ್ಯಾನಾಸಕ್ತನಾದ ಪ್ರಜಾಪತಿದೇವನಿಗೆ ತಮೋಗುಣದ ಅಂಶವು ಉದ್ರೇಕವನ್ನು ಹೊಂದಿತು. ಆಗ ಸೃಷ್ಟಿಸಂಕಲ್ಪಪೂರ್ಣನಾದ ಬ್ರಹ್ಮದೇವನ ಜಘನಭಾಗದಿಂದ ಮೊದಲು ಅಸುರರು ಹುಟ್ಟಿದರು.

೬. ಅನಂತರದಲ್ಲಿ ಬ್ರಹ್ಮದೇವನು ತಮೋಗುಣದ ಉದ್ರೇಕವುಳ್ಳ ಆ ದೇಹವನ್ನು ತ್ಯಜಿಸಿದನು. ಬ್ರಹ್ಮದೇವನಿಂದ ತ್ಯಜಿಸಲ್ಪಟ್ಟ ಆ ತಾಮಸ ದೇಹವು ಕೂಡಲೆ ರಾತ್ರಿರೂಪವಾಗಿ ಪರಿಣಮಿಸಿತು.

೭. ತರುವಾಯ ಬೇರೊಂದು ಮೂರ್ತಿಯನ್ನು ಸ್ವೀಕರಿಸಿ ಸೃಷ್ಟಿಮಾಡಲು ಆಶೆಯನ್ನು ಹೊಂದಿದ ಬ್ರಹ್ಮದೇವನು ಪ್ರೀತಿಯುಳ್ಳವನಾದನು. ಆಗ ಬ್ರಹ್ಮನ ಮುಖಭಾಗದಿಂದ ಸತ್ತ್ವಗುಣಮಯರಾದ ದೇವತೆಗಳು ಜನಿಸಿದರು.

ಉತ್ಸಸರ್ಜ ಚ ಭೂತೇಶಸ್ತನುಂ ತಾಮಪ್ಯಥೇಶ್ವರಃ ।
ಸಾ ಚಾಪವಿದ್ಧಾ ದಿವಸಂ ಸತ್ತ್ವಪ್ರಾಯಮಜಾಯತ ॥೮॥

ಸತ್ತ್ವಮಾತ್ರಾತ್ಮಿಕಾಮೇವ ತತೋಽನ್ಯಾಂ ಜಗೃಹೇ ತನುಮ್ ।
ಪಿತೃವನ್ಮನ್ಯಮಾನಸ್ಯ ಪಿತರಸ್ತಸ್ಯ ಜಜ್ಞಿರೇ ॥೯॥

ಸೃಷ್ಟ್ವಾ ಪಿತೄನುತ್ಸಸರ್ಜ ತನುಂ ತಾಮಪಿ ಸ ಪ್ರಭುಃ ।
ಸಾ ಚೋತ್ಸೃಷ್ಟಾಭವತ್ಸನ್ಧ್ಯಾ ದಿನನಕ್ತಾನ್ತರಸ್ಥಿತಾ ॥೧೦॥

ರಜೋಮಾತ್ರಾತ್ಮಿಕಾಮನ್ಯಾಂ ತನುಂ ಭೇಜೇಽಥ ಸ ಪ್ರಭುಃ ।
ತತೋ ಮನುಷ್ಯಾಃ ಸಮ್ಭೂತಾ ರಜೋಮಾತ್ರಾಸಮುದ್ಭವಾಃ॥೧೧॥

---

೮. ಭೂತೇಶ್ವರನಾದ ಬ್ರಹ್ಮದೇವನು ಕೂಡಲೇ ಆ ದೇಹವನ್ನು ತ್ಯಜಿಸಿದನು. ಹಾಗೆ ಬಿಡಲ್ಪಟ್ಟಿರುವ ಸತ್ತ್ವಗುಣಪೂರ್ಣವಾದ ಮೂರ್ತಿಯು ಸತ್ತ್ವಗುಣಮಯವಾದ ಹಗಲಿನರೂಪವಾಗಿ ಪರಿಣಾಮವನ್ನು ಹೊಂದಿತು.

೯. ತರುವಾಯ ಬ್ರಹ್ಮನು ಸತ್ತ್ವಗುಣದಿಂದಲೇ ಪೂರ್ಣವಾದ ಮತ್ತೊಂದು ದೇಹವನ್ನು ಸ್ವೀಕರಿಸಿದನು. ಆ ಮೂರ್ತಿಯಲ್ಲಿ ಪಿತೃಸೃಷ್ಟಿ ಅಭಿಮಾನದಿಂದ ಕೂಡಿರುವ ಬ್ರಹ್ಮದೇವನಿಂದ ಪಿತೃಗಳು ಜನಿಸಿದರು.

೧೦. ಅನಂತರ ಸರ್ವಪ್ರಭುವಾದ ಬ್ರಹ್ಮದೇವನು ಪಿತೃಗಳನ್ನು ಸೃಷ್ಟಿಮಾಡಿ ಆ ದೇಹವನ್ನು ತ್ಯಜಿಸಿದನು. ಬ್ರಹ್ಮನಿಂದ ಬಿಡಲ್ಪಟ್ಟ ಆ ಮೂರ್ತಿಯು ಹಗಲು-ರಾತ್ರಿಗಳ ನಡುವೆ ಇರುವ ಸಂಧ್ಯಾಕಾಲದ ರೂಪವಾಗಿ ಪರಿಣಮಿಸಿತು.

೧೧. ಸರ್ವೇಶ್ವರನಾದ ಬ್ರಹ್ಮನು ರಜೋಗುಣದ ಅಧಿಕಾಂಶದಿಂದ ಕೂಡಿದ ಮತ್ತೊಂದು ಮೂರ್ತಿಯನ್ನು ತೆಗೆದುಕೊಂಡನು. ರಜೋಗುಣದ ಅಂಶದಿಂದ ಕೂಡಿದ ಮನುಷ್ಯರು ಬ್ರಹ್ಮದೇವನ ಆ ಮೂರ್ತಿಯಿಂದ ಹುಟ್ಟಿದರು.

ಸೃಷ್ಟ್ವಾ ಮನುಷ್ಯಾನ್ ಸ ವಿಭುರುತ್ಸಸರ್ಜ ತನುಂ ತತಃ ।
ಜ್ಯೋತ್ಸ್ನಾ ಸಮಭವತ್ಸಾ ಚ ನಕ್ತಾನ್ತೇಽಹರ್ಮುಖೇ ಚ ಯಾ॥೧೨॥

ಇತ್ಯೇತಾಸ್ತನವಸ್ತಸ್ಯ ದೇವದೇವಸ್ಯ ಧೀಮತಃ ।
ಖ್ಯಾತಾ ರಾತ್ರ್ಯಹನೀ ಚೈವ ಸನ್ಧ್ಯಾ ಜ್ಯೋತ್ಸ್ನಾ ಚ ವೈ ದ್ವಿಜ॥೧೩॥

ಜ್ಯೋತ್ಸ್ನಾ ಸನ್ಧ್ಯಾ ತಥೈವಾಹಃ ಸತ್ತ್ವಮಾತ್ರಾತ್ಮಕಂ ತ್ರಯಮ್ ।
ತಮೋಮಾತ್ರಾತ್ಮಿಕಾ ರಾತ್ರಿಃ ಸಾ ವೈ ತಸ್ಮಾತ್ತಮೋಽಧಿಕಾ ॥೧೪॥

ತಸ್ಮಾದ್ದೇವಾ ದಿವಾ ರಾತ್ರಾವಸುರಾಸ್ತು ಬಲಾನ್ವಿತಾಃ ।
ಜ್ಯೋತ್ಸ್ನಾಗಮೇ ಚ ಮನುಜಾಸ್ಸನ್ಧ್ಯಾಯಾಂ ಪಿತರಸ್ತಥಾ ॥೧೫॥

---

೧೨. ತರುವಾಯ ಸರ್ವೇಶ್ವರನಾದ ಬ್ರಹ್ಮನು ಮನುಷ್ಯರನ್ನು ಸೃಷ್ಟಿಮಾಡಿ ಆ ದೇಹವನ್ನು ತ್ಯಜಿಸಿದನು. ಆಗ ಆ ಮೂರ್ತಿಯು ರಾತ್ರಿಯ ಕಡೆಯ ಮತ್ತು ಹಗಲಿನ ಆದಿಯಲ್ಲಿ ಪ್ರಕಾಶಿಸುವ ಬೆಳದಿಂಗಳಿನ ರೂಪವಾಗಿ ಪರಿಣಾಮವಾಯಿತು.

೧೩. ಎಲೈ ದ್ವಿಜೋತ್ತಮನೇ! ಪ್ರಾಜ್ಞನೂ, ದೇವತೆಗಳಿಗೆ ದೇವತಾ-ಸ್ವರೂಪನೂ ಆದ ಬ್ರಹ್ಮದೇವನ ಈ ನಾಲ್ಕು ಮೂರ್ತಿಗಳು ಕ್ರಮವಾಗಿ ರಾತ್ರಿ-ಹಗಲು-ಸಂಧ್ಯಾ ಮತ್ತು ಬೆಳದಿಂಗಳುಗಳ ರೂಪವಾಗಿ ಪ್ರಕಾಶವಾಗಿರುವುವು.

೧೪. ಬೆಳದಿಂಗಳು, ಸಂಧ್ಯಾಕಾಲ ಮತ್ತು ಹಗಲು ಈ ಮೂರು ಸತ್ತ್ವಗುಣಾಂಶದಿಂದ ಕೂಡಿರುವುವು. ರಾತ್ರಿಯು ಮಾತ್ರ ತಮೋಗುಣದ ಮೂರ್ತಿಯಿಂದ ಜನಿಸಿದ್ದರಿಂದ ತಮೋಗುಣದ ಆಧಿಕ್ಯದಿಂದ ಕೂಡಿರುವುದು.

೧೫. ಆದುದರಿಂದ ತಮ್ಮ ತಮ್ಮ ಉತ್ಪತ್ತಿಗುಣವನ್ನು ಅನುಸರಿಸಿ ದೇವತೆಗಳು ಹಗಲಿನಲ್ಲಿ ಬಲಿಷ್ಠರಾಗುವರು. ಅಸುರರು ರಾತ್ರಿವೇಳೆಯಲ್ಲಿ ಬಲಿಷ್ಠರು. ಬೆಳದಿಂಗಳಿನ ಸಮಯದಲ್ಲಿ ಮನುಷ್ಯರು ಬಲವನ್ನು ಹೊಂದುವರು. ಹಾಗು ಪಿತೃಗಳು ಸಂಧ್ಯಾಕಾಲದಲ್ಲಿ ಬಲಿಷ್ಠರಾಗಿರುವರು.

ಭವನ್ತಿ ಬಲಿನೋಽಧೃಷ್ಯಾ ವಿಪಕ್ಷಾಣಾಂ ನ ಸಂಶಯಃ ।
ತದ್ವಿಪರ್ಯಯಮಾಸಾದ್ಯ ಪ್ರಯಾನ್ತಿ ಚ ವಿಪರ್ಯಯಮ್ ॥೧೬॥

ಜ್ಯೋತ್ಸ್ನಾ ರಾತ್ರ್ಯಹನೀ ಸನ್ಧ್ಯಾ ಚತ್ವಾರ್ಯೇತಾನಿ ವೈ ಪ್ರಭೋಃ।
ಬ್ರಹ್ಮಣಸ್ತು ಶರೀರಾಣಿ ತ್ರಿಗುಣೋಪಸೃತಾನಿ ತು ॥೧೭॥

ಚತ್ವಾರ್ಯೇತಾನ್ಯಥೋತ್ಪಾದ್ಯ ತನುಮನ್ಯಾಂ ಪ್ರಜಾಪತಿಃ ।
ರಜಸ್ತಮೋಮಯೀಂ ರಾತ್ರೌ ಜಗೃಹೇ ಕ್ಷುತ್ತೃಡನ್ವಿತಃ ॥೧೮॥

ತದನ್ಧಕಾರೇ ಕ್ಷುತ್ಕ್ಷಾಮಾನಸೃಜದ್ಭಗವಾನಜಃ ।
ವಿರೂಪಾಞ್ಛ್ಮಶ್ರುಲಾನತ್ತುಮಾರಬ್ಧಾಸ್ತೇ ಚ ತಾಂ ತನುಮ್ ॥೧೯॥

---

೧೬. ಆಯಾಯ ಸಮಯಗಳಲ್ಲಿ ಅವರವರು ಬಲ್ಲಿಷ್ಠರೂ ಶತ್ರುಗಳಿಂದ ಆಕ್ರಮಿಸಲಾಗದವರೂ ಆಗುವರು. ಇದರಲ್ಲಿ ಸಂಶಯವಿಲ್ಲ. ಆದರೆ ಆಯಾಯ ಬಲಹೊಂದುವ ಸಮಯವನ್ನು ಬಿಟ್ಟರೆ ಬಲವಿಲ್ಲದವರೂ ಶತ್ರುಗಳಿಂದ ಜೇಯರೂ ಆಗುವರು

೧೭. ಚಂದ್ರಿಕೆ, ರಾತ್ರಿ, ಹಗಲು ಮತ್ತು ಸಂಧ್ಯಾಕಾಲ ಈ ನಾಲ್ಕು ಸರ್ವೇಶ್ವರನಾದ ಬ್ರಹ್ಮದೇವನ ಸತ್ತ್ವ-ರಜ-ತಮವೆಂಬ ಮೂರು ಗುಣಾಂಶ-ಗಳಿಂದ ಕೂಡಿದ ಮೂರ್ತಿಗಳೆಂದು ಅರಿಯಬೇಕು.

೧೮. ಸೃಷ್ಟಿಕರ್ತನಾದ ಬ್ರಹ್ಮದೇವನು ಈ ನಾಲ್ಕು ಸೃಷ್ಟಿವರ್ಗವನ್ನು ನಿರ್ಮಾಣಮಾಡಿ ಅನಂತರ ಹಸಿವು-ನೀರಡಿಕೆಗಳಿಂದ ಕೂಡಿದವನಾಗಿ ರಾತ್ರಿಯಲ್ಲಿ ರಜೋಗುಣ-ತಮೋಗುಣಗಳಿಂದ ಕೂಡಿರುವ ಮತ್ತೊಂದು ಮೂರ್ತಿಯನ್ನು ಧರಿಸಿದನು.

೧೯. ಆ ರಾತ್ರಿಯ ಕತ್ತಲಿನಲ್ಲಿ ಪೂಜ್ಯನಾದ ಬ್ರಹ್ಮದೇವನು ಹಸಿವಿ-ನಿಂದ ಕೃಶರಾದವರೂ ವಿಕಾರರೂಪವುಳ್ಳವರೂ ಮತ್ತು ಹೆಚ್ಚಾದ ಮೀಸೆಗಳಿಂದ ಕೂಡಿದವರೂ ಆದ ಪ್ರಜೆಗಳನ್ನು ಸೃಜಿಸಿದನು. ಅವರು ಬ್ರಹ್ಮನ ಆ ಮೂರ್ತಿ-ಯನ್ನು ತಿಂದುಹಾಕಲು ಪ್ರಾರಂಭಿಸಿದರು.

ರಕ್ಷಾಮ ಇತಿ ತೇಭ್ಯೋಽನ್ಯೇ ಯ ಊಚುಸ್ತೇ ತು ರಾಕ್ಷಸಾಃ ।
ಖಾದಾಮ ಇತಿ ಯೇ ಚೋಚುಸ್ತೇ ಯಕ್ಷಾ ಯಕ್ಷಣಾದ್ದ್ವಿಜ ॥೨೦॥

ತಾನ್ದೃಷ್ಟ್ವಾ ಹ್ಯಪ್ರಿಯೇಣಾಸ್ಯ ಕೇಶಾಃ ಶೀರ್ಯನ್ತ ವೇಧಸಃ ।
ಸಮಾರೋಹಣಹೀನಾಶ್ಚ ಶಿರಸೋ ಬ್ರಹ್ಮಣಸ್ತು ತೇ ॥೨೧॥

ಸರ್ಪಣಾತ್ತೇಽಭವನ್ ಸರ್ಪಾ ಹೀನತ್ವಾದಹಯಃ ಸ್ಮೃತಾಃ ।
ಸರ್ಪಾನ್ದೃಷ್ಟ್ವಾ ತತಃ ಕ್ರೋಧಾತ್ಕ್ರೋಧಾತ್ಮಾನೋ ವಿನಿರ್ಮಮೇ ॥೨೨॥

ವರ್ಣೇನ ಕಪಿಲೇನೋಗ್ರಾಸ್ತೇ ಭೂತಾಃ ಪಿಶಿತಾಶನಾಃ ।
ಧ್ಯಾಯತೋ ಗಾಂ ತತಸ್ತಸ್ಯ ಗನ್ಧರ್ವಾ ಜಜ್ಞಿರೇ ತದಾ ॥೨೩॥

---

೨೦. ದ್ವಿಜನೆ ! ಆ ಗುಂಪಿನಲ್ಲಿ ರಕ್ಷಿಸುತ್ತೇವೆಂದು ಹೇಳಿದವರು ರಾಕ್ಷಸರಾದರು. ಯಾರು ತಿಂದುಹಾಕುತ್ತೇವೆಂದು ಹೇಳಿದರೋ ಅವರು ತಿನ್ನುವ ಯಜ್ಞವನ್ನು ಮಾಡಿದ್ದರಿಂದ ಯಕ್ಷರಾದರು.

೨೧. ಯಕ್ಷ-ರಾಕ್ಷಸರನ್ನು ನೋಡಿ ಅಪ್ರೀತಿಯಿಂದ ಕೂಡಿದ ಸೃಷ್ಟಿಕರ್ತನಾದ ಬ್ರಹ್ಮದೇವನ ತಲೆಯಲ್ಲಿ ಬೆಳವಣಿಗೆಯಿಲ್ಲದ ದೀರ್ಘವಾದ ಕೂದಲುಗಳು ಅಲ್ಲಲ್ಲಿ ಉದುರಿದುವು.

೨೨. ಬ್ರಹ್ಮನ ತಲೆಯಿಂದ ಬಿದ್ದ ಕೂದಲುಗಳು ಹರಿದುಹೋದದ್ದರಿಂದ " ಸರ್ಪ " ಎಂದೂ ಬಿದ್ದುಹೋದುದರಿಂದ " ಅಹಿ " ಎಂದೂ ಪ್ರಸಿದ್ಧವಾದ ಪ್ರಾಣಿಗಳಾದುವು. ಅವುಗಳನ್ನು ನೋಡಿ ಬ್ರಹ್ಮನು ಕೋಪಭಾವವನ್ನು ಹೊಂದಿದ್ದರಿಂದ ಕೋಪಶೀಲರಾದ ಪ್ರಜೆಗಳನ್ನು ಸೃಷ್ಟಿಸಿದನು.

೨೩. ಆ ಪ್ರಜೆಗಳು ಉಗ್ರವಾದ ಹೊಂಬಣ್ಣದಿಂದ ಕೂಡಿದ ಮಾಂಸಾಹಾರಿಯಾದ ಭೂತಗಳಾದುವು. ತರುವಾಯ ಬ್ರಹ್ಮನು ವಾಣಿಯನ್ನು ಧ್ಯಾನಿಸುತ್ತ ಸೃಷ್ಟಿಯಲ್ಲಿ ತೊಡಗಲು ಆಗ ಗಂಧರ್ವರು ಹುಟ್ಟಿದರು.

ಜಜ್ಞಿರೇಽಪಿ ತತೋ ವಾಚಂ ಗನ್ಧರ್ವಾಸ್ತೇನ ತೇ ಸ್ಮೃತಾಃ ।
ಅಷ್ಟಾಸ್ವೇತಾಸು ಸೃಷ್ಟಾಸು ದೇವಯೋನಿಷು ಸ ಪ್ರಭುಃ ॥೨೪॥

ತತಃ ಸ್ವದೇಹತೋಽನ್ಯಾನಿ ವಯಾಂಸಿ ಪಶವೋಽಸೃಜತ್ ।
ಮುಖತೋಽಜಾಃ ಸಸರ್ಜಾಥ ವಕ್ಷಸಶ್ಚಾವಯೋಽಸೃಜತ್ ॥೨೫॥

ಗಾಶ್ಚೈವೋದರತೋ ಬ್ರಹ್ಮಾ ಪಾರ್ಶ್ವಾಭ್ಯಾಂ ಚ ವಿನಿರ್ಮಮೇ ।
ಪದ್ಭ್ಯಾಂ ಚಾಶ್ವಾನ್ಸಮಾತಙ್ಗಾನ್ ರಾಸಭಾನ್ ಶಶಕಾನ್ಮೃಗಾನ್ ॥೨೬॥

ಉಷ್ಟ್ರಾನಶ್ವತರಾಂಶ್ಚೈವ ನಾನಾರೂಪಾಶ್ಚ ಜಾತಯಃ ।
ಓಷಧ್ಯಃ ಫಲಮೂಲಿನ್ಯೋ ರೋಮಭ್ಯಸ್ತಸ್ಯ ಜಜ್ಞಿರೇ ॥೨೭॥

---

೨೪. ಆಗ ಸೃಷ್ಟಿಯನ್ನು ಹೊಂದಿದ ಗಂಧರ್ವರು ಗೀತವಾಣಿಯನ್ನು ತಿಳಿದವರಾದ್ದರಿಂದ ಗಂಧರ್ವರೆಂಬ ಅನ್ವರ್ಥನಾಮಾಂಕಿತರಾದರು. ಹೀಗೆ ಸರ್ವೇಶ್ವರನಾದ ಬ್ರಹ್ಮನು ಈ ಎಂಟು ಬಗೆಯ ದೇವಯೋನಿ ಪ್ರಜೆಗಳ ಸೃಷ್ಟಿಯನ್ನು ರಚಿಸಿದನು.

೨೫. ತರುವಾಯ ಸರ್ವಶಕ್ತನಾದ ಪ್ರಜಾಪತಿಯು ಮತ್ತೊಂದು ತನ್ನ ಮೂರ್ತಿಯಿಂದ ಪಶು-ಪಕ್ಷಿರೂಪವಾದ ಮತ್ತೊಂದು ಸೃಷ್ಟಿಯನ್ನು ರಚಿಸಿದನು. ತನ್ನ ಮುಖಭಾಗದಿಂದ ಆಡುಗಳನ್ನೂ ಎದೆಯಿಂದ ಕುರಿಗಳನ್ನೂ ಸೃಷ್ಟಿಮಾಡಿದನು.

೨೬. ಹಾಗು ಬ್ರಹ್ಮನು ಹೊಟ್ಟೆಯಿಂದ ಗೋವುಗಳನ್ನೂ ಪಾರ್ಶ್ವಗಳಿಂದಲೂ ಕಾಲುಗಳಿಂದಲೂ ಆನೆ, ಕುದುರೆ, ಕತ್ತೆ ಮೊಲ ಮತ್ತು ಅನೇಕ ಮೃಗಗಳನ್ನೂ ಕ್ರಮವಾಗಿ ಸೃಷ್ಟಿಮಾಡಿದನು.

೨೭. ಮತ್ತು ಒಂಟೆ, ಹೇಸರುಗತ್ತೆ—ಇನ್ನೂ ಅನೇಕ ಜಾತಿಯ ಪಶು ಜಾತಿಯನ್ನು ಬ್ರಹ್ಮನು ಸೃಷ್ಟಿಸಿದನು. ಅಲ್ಲದೆ ಬ್ರಹ್ಮದೇವನ ರೋಮಗಳಿಂದ ಫಲಮೂಲಗಳಿಂದ ಕೂಡಿದ ಓಷಧಿವರ್ಗವು ಜನಿಸಿತು.

ಏವಂ ಪಶ್ವೋಷಧೀಃ ಸೃಷ್ಟ್ವಾ ಹ್ಯಯಜಚ್ಚಾಧ್ವರೇ ವಿಭುಃ ।
ತಸ್ಮಾದಾದೌ ತು ಕಲ್ಪಸ್ಯ ತ್ರೇತಾಯುಗಮುಖೇ ತದಾ ॥೨೮॥

ಗೌರಜಃ ಪುರುಷೋ ಮೇಷೋ ಹ್ಯಶ್ವಾಶ್ವತರಗರ್ದಭಾಃ ।
ಏತಾನ್ಗ್ರಾಮ್ಯಾನ್ಪಶೂನಾಹುರಾರಣ್ಯಾಂಶ್ಚ ನಿಬೋಧ ಮೇ ॥೨೯॥

ಶ್ವಾಪದಂ ದ್ವಿಖುರಂ ಹಸ್ತೀ ವಾನರಾಃ ಪಕ್ಷಿಪಞ್ಚಮಾಃ ।
ಔದಕಾಃ ಪಶವಃ ಷಷ್ಠಾಃ ಸಪ್ತಮಾಸ್ತು ಸರೀಸೃಪಾಃ ॥೩೦॥

ಗಾಯತ್ರೀಂ ಚ ತೃಚಂ ಚೈವ ತ್ರಿವೃತ್ಸಾಮ ರಥನ್ತರಮ್ ।
ಅಗ್ನಿಷ್ಟೋಮಂ ಚ ಯಜ್ಞಾನಾಂ ನಿರ್ಮಮೇ ಪ್ರಥಮಾನ್ಮುಖಾತ್ ॥೩೧॥

---

೨೮. ಹೀಗೆ ಸರ್ವವ್ಯಾಪಿಯಾದ ಬ್ರಹ್ಮದೇವನು ಕಲ್ಪದ ಆದಿಯಾದ ತ್ರೇತಾಯುಗದ ಪ್ರಾರಂಭದಲ್ಲಿ ಪಶು-ಓಷಧಿಗಳ ಸೃಷ್ಟಿಯನ್ನು ರಚಿಸಿ ಆಗ ಅವುಗಳನ್ನು ಉಪಯೋಗಿಸಿ ಯಾಗ ಸಮಾರಂಭವನ್ನು ನಡೆಸಿದನು.

೨೯. ಸೃಷ್ಟಿಯಾದ ಪಶುಗಳಲ್ಲಿ ಹಸು, ಆಡು, ಮನುಷ್ಯ, ಟಗರು, ಕುದುರೆ, ಕತ್ತೆ ಮತ್ತು ಹೇಸರುಗತ್ತೆ—ಇವುಗಳನ್ನು ಗ್ರಾಮ್ಯಪಶುಗಳೆಂದು ಪ್ರಾಜ್ಞರು ಕರೆಯುವರು. ಇನ್ನು ಆರಣ್ಯ ಪಶುಗಳನ್ನು ಹೇಳುವೆನು, ಕೇಳು.

೩೦. ಎರಡು ಗೊರಸಿನ ಪ್ರಾಣಿ, ತೋಳ, ಆನೆ, ಕಪಿ ಮತ್ತು ಪಕ್ಷಿ—ಇವು ಐದು ಆರಣ್ಯಪಶು ಎಂದು ಸಂಕೇತವನ್ನು ಹೊಂದಿವೆ. ಹಾಗು ಜಲಜಂತುಗಳು ಆರನೆಯವರ್ಗವಾಗಿಯೂ ಹರಿಯುವ ಪ್ರಾಣಿಗಳು ಏಳನೆಯ ವರ್ಗವಾಗಿಯೂ ಆ ಗುಂಪಿಗೆ ಸೇರಿವೆ.

೩೧. ಮತ್ತು ಬ್ರಹ್ಮದೇವನು ಋಙ್ಮಂತ್ರ, ಗಾಯತ್ರೀಛಂದಸ್ಸು, ತ್ರಿವೃತ್‌ಸ್ತೋಮ, ರಥಂತರಸಾಮ ಮತ್ತು ಯಜ್ಞಗಳಲ್ಲಿ ಅಗ್ನಿಷ್ಟೋಮವೆಂಬ ಸಂಸ್ಥೆ ಇವುಗಳನ್ನು ಮೊದಲನೆಯ ಮುಖದಿಂದ ಸೃಷ್ಟಿಮಾಡಿದನು.

ಯಜೂಂಷಿ ತ್ರೈಷ್ಟುಭಂ ಛನ್ದಃ ಸ್ತೋಮಂ ಪಞ್ಚದಶಂ ತಥಾ ।
ಬೃಹತ್ಸಾಮ ತಥೋಕ್ತಂ ಚ ದಕ್ಷಿಣಾದಸೃಜನ್ಮುಖಾತ್ ॥೩೨॥

ಸಾಮಾನಿ ಜಗತೀಛನ್ದಃ ಸ್ತೋಮಂ ಸಪ್ತದಶಂ ತಥಾ ।
ವೈರೂಪಮತಿರಾತ್ರಂ ಚ ನಿರ್ಮಮೇ ಪಶ್ಚಿಮಾನ್ಮುಖಾತ್ ॥೩೩॥

ಏಕವಿಂಶಮಥರ್ವಾಣಮಪ್ತೋರ್ಯಾಮಾಣಮೇವ ಚ ।
ಅನುಷ್ಟುಭಂ ಸವೈರಾಜಮುತ್ತರಾದಸೃಜನ್ಮುಖಾತ್ ॥೩೪॥

ವಿದ್ಯುತೋಽಶನಿಮೇಘಾಂಶ್ಚ ರೋಹಿತೇನ್ದ್ರಧನೂಂಷಿ ಚ ।
ವಯಾಂಸಿ ಚ ಸಸರ್ಜಾದೌ ಕಲ್ಪಸ್ಯ ಭಗವಾನ್ವಿಭುಃ ॥೩೫॥

ಉಚ್ಚಾವಚಾನಿ ಭೂತಾನಿ ಗಾತ್ರೇಭ್ಯಸ್ತಸ್ಯ ಜಜ್ಞಿರೇ ।
ಸೃಷ್ಟ್ವಾ ಚತುಷ್ಟಯಂ ಪೂರ್ವಂ ದೇವಾಸುರಪಿತೄನ್ಪ್ರಜಾಃ ॥೩೬॥

---

೩೨. ಹಾಗು ಯಜುರ್ಮಂತ್ರ, ತ್ರಿಷ್ಟುಪ್‌ಛಂದಸ್ಸು, ಪಂಚದಶ-ಸ್ತೋಮ, ಬೃಹತ್‌ಸಾಮ ಮತ್ತು ಉಕ್ಥ್ಯಸಂಸ್ಥೆ—ಇವುಗಳನ್ನು ಬ್ರಹ್ಮನು ತನ್ನ ಬಲಭಾಗದ ಮುಖದಿಂದ ಸೃಷ್ಟಿಮಾಡಿದನು.

೩೩. ಮತ್ತು ಸಾಮವೇದ, ಜಗತೀಛಂದಸ್ಸು, ಸಪ್ತದಶಸ್ತೋಮ, ವೈರೂಪಸಾಮ ಹಾಗು ಅತಿರಾತ್ರಸಂಸ್ಥೆಯ ಜ್ಯೋತಿಷ್ಟೋಮ—ಇವುಗಳನ್ನು ಬ್ರಹ್ಮದೇವನು ಪಶ್ಚಿಮಭಾಗದ ಮುಖದಿಂದ ನಿರ್ಮಿಸಿದನು.

೩೪. ಹಾಗು ಬ್ರಹ್ಮದೇವನು ತನ್ನ ಉತ್ತರದಿಕ್ಕಿನ ಮುಖದಿಂದ ಅಥರ್ವವೇದ, ಅನುಷ್ಟುಪ್ ಛಂದಸ್ಸು, ಏಕವಿಂಶಸ್ತೋಮ, ವೈರಾಜಸಾಮ ಮತ್ತು ಅಪ್ತೋರ್ಯಾಮ ಸಂಸ್ಥೆ—ಇವುಗಳನ್ನು ಸೃಷ್ಟಿಮಾಡಿದನು.

೩೫. ಷಡ್ಗುಣೈಶ್ವರ್ಯ ಸಂಪನ್ನನಾದ ಬ್ರಹ್ಮನು ಕಲ್ಪದ ಆದಿಯಲ್ಲಿ ಮಿಂಚು, ಸಿಡಿಲು, ಮೋಡ, ಕಾಮನಬಿಲ್ಲು, ಅದರ ರೋಹಿತವೆಂಬ ನಾಮಾಂ-ಕಿತವಾದ ರೂಪಾಂತರ ಮತ್ತು ಪಕ್ಷಿಗಳನ್ನು ನಿರ್ಮಾಣಮಾಡಿದನು.

೩೬. ಬ್ರಹ್ಮನು ಮೊದಲು ದೇವ-ಅಸುರ-ಪಿತೃ ಮತ್ತು ಮನುಷ್ಯರೆಂಬ ನಾಲ್ಕು ವರ್ಗವನ್ನು ಸೃಷ್ಟಿಸಿದ ಮೇಲೆ ಅವನ ದೇಹದ ಅವಯವಗಳಿಂದ ಅನೇಕ ವಿಧವಾದ ಪ್ರಾಣಿಗಳು ಜನಿಸಿದುವು.

ತತೋಽಸೃಜತ್ಸ ಭೂತಾನಿ ಸ್ಥಾವರಾಣಿ ಚರಾಣಿ ಚ ।
ಯಕ್ಷಾನ್ಪಿಶಾಚಾನ್ಗಧರ್ವಾಂಸ್ತಥೈವಾಪ್ಸರಸಾಂ ಗಣಾನ್ ॥೩೭॥

ನರಕಿನ್ನರರಕ್ಷಾಂಸಿ ವಯಃಪಶುಮೃಗೋರಗಾನ್ ।
ಅವ್ಯಯಂ ಚ ವ್ಯಯಂ ಚೈವ ಯದಿದಂ ಸ್ಥಾಣು ಜಙ್ಗಮಮ್॥೩೮॥

ತೇಷಾಂ ಯೇ ಯಾನಿ ಕರ್ಮಾಣಿ ಪ್ರಾಕ್ಸೃಷ್ಟೇಃ ಪ್ರತಿಪೇದಿರೇ ।
ತಾನ್ಯೇವ ಪ್ರತಿಪದ್ಯನ್ತೇ ಸೃಜ್ಯಮಾನಾಃ ಪುನಃ ಪುನಃ ॥೩೯॥

ಹಿಂಸ್ರಾಹಿಂಸ್ರೇ ಮೃದುಕ್ರೂರೇ ಧರ್ಮಾಧರ್ಮಾವೃತಾನೃತೇ ।
ತದ್ಭಾವಿತಾಃ ಪ್ರಪದ್ಯನ್ತೇ ತಸ್ಮಾತ್ತತ್ತಸ್ಯ ರೋಚತೇ ॥೪೦॥

---

೩೭. ತರುವಾಯ ಪ್ರಜಾಪತಿಯು ಅನೇಕವಿಧದ ಸ್ಥಾವರ–ಜಂಗಮ ಪ್ರಾಣಿಗಳನ್ನು ಸೃಷ್ಟಿಮಾಡಿದನು. ಆಗ ಯಕ್ಷ-ಪಿಶಾಚ-ಗಂಧರ್ವ-ಅಪ್ಸರಃ ಸ್ತ್ರೀಯರು ಮುಂತಾದ ದೇವಯೋನಿವಿಶೇಷರು ಜನಿಸಿದರು.

೩೮. ಹಾಗು ಮಾನವ, ಕಿನ್ನರ, ರಾಕ್ಷಸ, ಪಕ್ಷಿ, ಪಶು, ಮೃಗ, ಸರ್ಪ ಇವೇ ಮುಂತಾದ ಬೇಗ ನಶಿಸುವ ಮತ್ತು ಸ್ವಲ್ಪ ಚಿರಕಾಲ ಬದುಕಿರುವ ಸ್ಥಾವರ-ಜಂಗಮ ರೂಪವಾದ ಪ್ರಾಣಿಗಳ ಸೃಷ್ಟಿಯು ಕಲ್ಪದ ಆದಿಯಲ್ಲಿ ಜರುಗಿತು.

೩೯. ಈ ಪ್ರಾಣಿಗಳು ಹಿಂದಿನ ಕಲ್ಪದಲ್ಲಿ ಯಾರು ಯಾವ ಕರ್ಮ-ಸ್ವಭಾವಗಳನ್ನು ಹೊಂದಿಕೊಂಡಿದ್ದವೋ ಕಲ್ಪಾಂತರದಲ್ಲಿ ಪುನಃ ಪುನಃ ಸೃಷ್ಟಿಯಾಗುವಾಗಲೂ ಆ ಕರ್ಮ-ಸ್ವಭಾವಗಳನ್ನು ಹೊಂದಿಕೊಂಡಿರುವುವು.

೪೦. ಹಿಂಸೆ-ಅಹಿಂಸೆ, ಕ್ರೂರತ್ವ-ಮೃದುತ್ವ, ಧರ್ಮ-ಅಧರ್ಮ, ಸತ್ಯ–ಅಸತ್ಯ—ಮುಂತಾದ ಬಗೆಬಗೆಯ ಕರ್ಮಸಂಸ್ಕಾರಗಳಿಂದ ಕೂಡಿದ ಪ್ರಾಣಿಗಳು ಹಾಗೆಯೇ ಜನ್ಮವೆತ್ತುವುವು. ಆದ್ದರಿಂದ ಆಯಾಯ ಪ್ರಾಣಿಗೆ ಆಯಾಯ ಕರ್ಮವು ರುಚಿಸುವುದು.

ಇನ್ದ್ರಿಯಾರ್ಥೇಷು ಭೂತೇಷು ಶರೀರೇಷು ಚ ಸ ಪ್ರಭುಃ ।
ನಾನಾತ್ವಂ ವಿನಿಯೋಗಂ ಚ ಧಾತೈವ ವ್ಯದಧಾತ್ಸ್ವಯಮ್ ॥೪೧॥

ನಾಮ ರೂಪಂ ಚ ಭೂತಾನಾಂ ಕೃತ್ಯಾನಾಂ ಚ ಪ್ರಪಞ್ಚನಮ್ ।
ವೇದಶಬ್ದೇಭ್ಯ ಏವಾದೌ ದೇವಾದೀನಾಂ ಚಕಾರ ಸಃ ॥೪೨॥

ಋಷೀಣಾಂ ನಾಮಧೇಯಾನಿ ಯಾಶ್ಚ ದೇವೇಷು ಸೃಷ್ಟಯಃ ।
ಶರ್ವರ್ಯನ್ತೇ ಪ್ರಸೂತಾನಾಮನ್ಯೇಷಾಂ ಚ ದದಾತಿ ಸಃ ॥೪೩॥

ಯಥರ್ತಾವೃತುಲಿಙ್ಗಾನಿ ನಾನಾರೂಪಾಣಿ ಪರ್ಯಯೇ ।
ದೃಶ್ಯನ್ತೇ ತಾನಿ ತಾನ್ಯೇವ ತಥಾ ಭಾವಾ ಯುಗಾದಿಷು ॥೪೪॥

---

೪೧. ಹೀಗೆ ಸೃಷ್ಟಿಮಾಡಿದ ಬ್ರಹ್ಮದೇವನು ತಾನೇ ಇಂದ್ರಿಯಗಳ ವಿಷಯಗಳಲ್ಲಿಯೂ, ಭೂತಗಳಲ್ಲಿಯೂ ಮತ್ತು ಶರೀರಗಳಲ್ಲಿಯೂ ನಾನಾತ್ವ-ವನ್ನೂ ಮತ್ತು ಪರಸ್ಪರ ಸಂಪರ್ಕರೂಪವಾದ ವಿನಿಯೋಗವನ್ನೂ ರಚಿಸಿದನು.

೪೨. ಬ್ರಹ್ಮದೇವನು ಸೃಷ್ಟಿಮಾಡಿದ ದೇವ—ಮುಂತಾದವರ ಬಗೆ ಬಗೆಯ ನಾಮ-ರೂಪಗಳನ್ನೂ ಭೂತ ವಿಸ್ತಾರ—ಹಾಗು ಕರ್ಮವಿಸ್ತಾರವನ್ನೂ ವೇದಶಬ್ದಗಳನ್ನು ಧ್ಯಾನಿಸಿಕೊಂಡು ತನ್ಮೂಲಕವಾಗಿಯೇ ಕಲ್ಪಾದಿಯಲ್ಲಿ ನಿರ್ಮಿಸಿದನು.

೪೩. ಪ್ರಜಾಪತಿಯು ತನ್ನ ರಾತ್ರಿಯ ರೂಪವಾದ ಪ್ರಳಯವು ಕಳೆದು ಕಲ್ಪಾದಿಯಲ್ಲಿ ಸೃಷ್ಟಿಯಾಗಿರುವ ಋಷಿ, ದೇವಯೋನಿಗಳೆಂದೆನಿಸಿದ ವಿಶೇಷ ವ್ಯಕ್ತಿ ಮತ್ತು ಇತರ ಭೂತಗಳಿಗೆ ಆಯಾಯ ನಾಮಧೇಯಗಳನ್ನು ಹಿಂದಿನಂತೆ ಇಡುವನು.

೪೪. ವಸಂತ-ಗ್ರೀಷ್ಮ ಮುಂತಾದ ಋತುಗಳ ಪರ್ಯಾಯದಲ್ಲಿ ಒಂದು ಕಳೆದು ಮತ್ತೊಂದು ಬಂದಾಗ ಹೇಗೆ ಬಗೆ ಬಗೆಯ ಆಯಾಯ ಋತುವಿಗೆ ಸೇರಿದ ಚಿಹ್ನಗಳು ಕಾಣಿಸುವುವೋ ಹಾಗೆಯೇ ಕಲ್ಪಾದಿಯಲ್ಲಿ ಯುಗಪ್ರಾರಂಭ-ದಲ್ಲಿ ಆಯಾಯ ಚಿಹ್ನಗಳು ಅಲ್ಲಲ್ಲಿ ಕಾಣಿಸಿಕೊಳ್ಳುವುವು.

ಏವಂವಿಧಾಃ ಸೃಷ್ಟಯಸ್ತು ಬ್ರಹ್ಮಣೋಽವ್ಯಕ್ತಜನ್ಮನಃ ।
ಶರ್ವರ್ಯನ್ತೇ ಪ್ರಬುದ್ಧಸ್ಯ ಕಲ್ಪೇ ಕಲ್ಪೇ ಭವನ್ತಿ ವೈ ॥೪೫॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಸೃಷ್ಟಿಪ್ರಕರಣೇ
ಪಞ್ಚಚತ್ವಾರಿಂಶೋಽಧ್ಯಾಯಃ

---

೪೫. ಅವ್ಯಕ್ತ ತತ್ತ್ವದಿಂದ ಜನ್ಮವೆತ್ತಿದ ಬ್ರಹ್ಮದೇವನು ಎಚ್ಚರ-ಹೊಂದುವ ರಾತ್ರಿಯ ಕಡೆಯ ಸಮಯದಲ್ಲಿ ಉಂಟಾಗುವ ಪ್ರತಿಯೊಂದು ಕಲ್ಪದಲ್ಲಿಯೂ ಈ ವಿಧವಾದ ಸೃಷ್ಟಿಗಳು ಮತ್ತೆ ಮತ್ತೆ ಆಗುವುವು.

ಮಾರ್ಕಂಡೇಯ ಮಹಾಪುರಾಣದಲ್ಲಿ ನಲವತ್ತೈದನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಷಟ್ಚತ್ವಾರಿಂಶೋಽಧ್ಯಾಯಃ

(ಮಾನುಷಸೃಷ್ಟಿವಿಸ್ತರಃ)

ಕ್ರೌಷ್ಟುಕಿರುವಾಚ :—

ಅರ್ವಾಕ್ಸ್ರೋತಸ್ತು ಕಥಿತೋ ಭವತಾ ಯಸ್ತು ಮಾನುಷಃ ।
ಬ್ರಹ್ಮನ್ವಿಸ್ತರತೋ ಬ್ರೂಹಿ ಬ್ರಹ್ಮಾ ಸಮಸೃಜದ್ಯಥಾ ॥೧॥

ಯಥಾ ಚ ವರ್ಣಾನಸೃಜದ್ಯದ್ಗುಣಾಂಶ್ಚ ಮಹಾಮತೇ ।
ಯಚ್ಚ ಯೇಷಾಂ ಸ್ಮೃತಂ ಕರ್ಮ ವಿಪ್ರಾದೀನಾಂ ವದಸ್ವ ತತ್ ॥೨॥

ನಲವತ್ತಾರನೆಯ ಅಧ್ಯಾಯ

ಕ್ರೌಷ್ಟುಕಿಯು ಹೀಗೆಂದನು :—

೧. ಬ್ರಹ್ಮರ್ಷಿಯಾದ ಮಾರ್ಕಂಡೇಯ ಮಹಾಮುನಿಯೆ! ನಿನ್ನಿಂದ ಅರ್ವಾಕ್ಸ್ರೋತವೆಂದು ಕರೆಯಲ್ಪಡುವ ಯಾವ ಮನುಷ್ಯಸೃಷ್ಟಿಯು ಹೇಳಲ್ಪಟ್ಟಿತೋ ಬ್ರಹ್ಮನು ಆ ಸೃಷ್ಟಿಯನ್ನು ರಚಿಸಿದ ಬಗೆಯನ್ನು ವಿಸ್ತಾರವಾಗಿ ಹೇಳು.

೨. ಮಹಾಪ್ರಜ್ಞಾಶಾಲಿಯಾದ ಮುನಿಯೆ! ಬ್ರಹ್ಮದೇವನು ಬ್ರಾಹ್ಮಣಾದಿ ವರ್ಣಗಳನ್ನು ಹೇಗೆ ಸೃಷ್ಟಿಮಾಡಿದನು.? ಯಾವ ಯಾವ ಗುಣಗಳಿಂದ ಕೂಡಿರುವಂತೆ ಸೃಷ್ಟಿಮಾಡಿದನು? ಮತ್ತು ಬ್ರಾಹ್ಮಣಾದಿ ಚಾತುರ್ವರ್ಣ್ಯದಲ್ಲಿ ಯಾರಾರಿಗೆ ಯಾವ ಯಾವ ಕರ್ಮವು ವಿಹಿತವಾಗಿದೆ? ಇದೆಲ್ಲವನ್ನೂ ಬೋಧಿಸು.

ಮಾರ್ಕಣ್ಡೇಯ ಉವಾಚ :—

ಬ್ರಹ್ಮಣಃ ಸೃಜತಃ ಪೂರ್ವಂ ಸತ್ಯಾಭಿಧ್ಯಾಯಿನಸ್ತಥಾ ।
ಮಿಥುನಾನಾಂ ಸಹಸ್ರಂ ತು ಮುಖಾತ್ಸೋಽಥಾಸೃಜನ್ಮುನೇ ॥೩॥

ಜಾತಾಸ್ತೇ ಹ್ಯುಪಪದ್ಯನ್ತೇ ಸತ್ತ್ವೋದ್ರಿಕ್ತಾಃ ಸ್ವತೇಜಸಃ ।
ಸಹಸ್ರಮನ್ಯದ್ವಕ್ಷಸ್ತೋ ಮಿಥುನಾನಾಂ ಸಸರ್ಜ ಹ ॥೪॥

ತೇ ಸರ್ವೇ ರಜಸೋದ್ರಿಕ್ತಾಃ ಶುಷ್ಮಿಣಶ್ಚಾಪ್ಯಮರ್ಷಿಣಃ ।
ಸಸರ್ಜಾನ್ಯತ್ಸಹಸ್ರಂ ತು ದ್ವನ್ದ್ವಾನಾಮೂರುತಃ ಪುನಃ ॥೫॥

ರಜಸ್ತಮೋಭ್ಯಾಮುದ್ರಿಕ್ತಾ ಈಹಾಶೀಲಾಸ್ತು ತೇ ಸ್ಮೃತಾಃ ।
ಪದ್ಭ್ಯಾಂ ಸಹಸ್ರಮನ್ಯಚ್ಚ ಮಿಥುನಾನಾಂ ಸಸರ್ಜ ಹ ॥೬॥

ಮಾರ್ಕಂಡೇಯ ಮುನಿಯು ಹೀಗೆಂದನು :—

೩. ಕ್ರೌಷ್ಟುಕಿ ಮುನಿಯೆ! ಬ್ರಹ್ಮದೇವನು ಹಿಂದೆ ಸೃಷ್ಟಿಕ್ರಮವನ್ನು ಉಪಕ್ರಮಿಸುವವನೂ, ಮತ್ತು ಸತ್ಯಸಂಕಲ್ಪವುಳ್ಳವನೂ ಆಗಿ ತನ್ನ ಮುಖದಿಂದ ಒಂದು ಸಹಸ್ರ ಸಂಖ್ಯೆಯ ಸ್ತ್ರೀ-ಪುರುಷರನ್ನು ಸೃಷ್ಟಿಸಿದನು.

೪. ಬ್ರಹ್ಮನ ಮುಖದಿಂದ ಜನಿಸಿದ ಆ ಪ್ರಜೆಗಳು ಸತ್ತ್ವಗುಣದ ಉದ್ರೇಕವುಳ್ಳವರೂ ಸ್ವತೇಜಸ್ಸಿನಿಂದ ಪರಿಪೂರ್ಣರೂ ಆಗಿರುವರು. ತರುವಾಯ ಪ್ರಜಾಪತಿಯು ತನ್ನ ಹೃದಯದಿಂದ ಮತ್ತೊಂದು ಸಹಸ್ರ ಸ್ತ್ರೀ-ಪುರುಷರನ್ನು ನಿರ್ಮಾಣಮಾಡಿದನು.

೫. ಹೃದಯದಿಂದ ಹುಟ್ಟಿದವರೆಲ್ಲರೂ ರಜೋಗುಣದ ಉದ್ರೇಕವುಳ್ಳ-ವರೂ, ವೀರ್ಯವಂತರೂ ಮತ್ತು ಅಕ್ಷಮಾಶೀಲರೂ ಆಗಿರುವರು. ಮತ್ತೆ ಸೃಷ್ಟಿ-ಕರ್ತನು ಇನ್ನೊಂದು ಸಹಸ್ರ ಸ್ತ್ರೀ-ಪುರುಷರನ್ನು ಸೃಜಿಸಿದನು.

೬. ಅವರು ರಜೋಗುಣ-ತಮೋಗುಣಗಳ ಉದ್ರೇಕದಿಂದ ಕೂಡಿದ-ವರೂ ಮತ್ತು ಉದ್ಯಮಶೀಲರೂ ಆದವರೆಂದು ಸ್ಮರಿಸಲ್ಪಟ್ಟಿರುವರು. ತರು-ವಾಯ ಬ್ರಹ್ಮನು ತನ್ನ ಪಾದಗಳಿಂದ ಮತ್ತೊಂದು ಸಹಸ್ರ ಸ್ತ್ರೀ-ಪುರುಷರ ದ್ವಂದ್ವಗಳನ್ನು ನಿರ್ಮಿಸಿದನು.

ಉದ್ರಿಕ್ತಾಸ್ತಮಸಾ ಸರ್ವೇ ನಿಃಶ್ರೀಕಾ ಹ್ಯಲ್ಪಚೇತಸಃ ॥೭॥

ತತಃ ಸಂಹರ್ಷಮಾಣಾಸ್ತೇ ದ್ವನ್ದ್ವೋತ್ಪನ್ನಾಸ್ತು ಪ್ರಾಣಿನಃ ।
ಅನ್ಯೋನ್ಯಂ ಹೃಚ್ಛಯಾವಿಷ್ಟಾ ಮೈಥುನಾಯೋಪಚಕ್ರಮುಃ ॥೮॥

ತತಃ ಪ್ರಭೃತಿ ಕಲ್ಪೇಽಸ್ಮಿನ್ ಮಿಥುನಾನಾಂ ಹಿ ಸಮ್ಭವಃ ॥೯॥

ಮಾಸಿ ಮಾಸ್ಯಾರ್ತವಂ ಯತ್ತು ನ ತದಾಸೀತ್ತು ಯೋಷಿತಾಮ್ ।
ತಸ್ಮಾತ್ತದಾ ನ ಸುಷುವುಃ ಸೇವಿತೈರಪಿ ಮೈಥುನೈಃ ॥೧೦॥

ಆಯುಷೋಽನ್ತೇ ಪ್ರಸೂಯನ್ತೇ ಮಿಥುನಾನ್ಯೇವ ತೇ ಸಕೃತ್ ।
ಕುಲಿಕಂ ಕುಲಿಕಾ ಚೈವ ಉತ್ಪದ್ಯನ್ತೇ ಮುಮೂರ್ಷತಾಮ್ ॥೧೧॥

---

೭. ಪಾದದಿಂದ ಹುಟ್ಟಿದವರೆಲ್ಲರೂ ತಮೋಗುಣದ ಉದ್ರೇಕವುಳ್ಳವರೂ ಸಂಪತ್ತಿಯಿಂದ ಹೀನರೂ ಮತ್ತು ಮಂದವಾದ ಜ್ಞಾನವುಳ್ಳವರೂ ಆದರು.

೮. ತರುವಾಯ ಸ್ತ್ರೀ–ಪುರುಷರ ದ್ವಂದ್ವರೂಪವಾಗಿ ಹುಟ್ಟಿದ ಆ ಪ್ರಾಣಿಗಳು ಹರ್ಷದಿಂದ ಮೆರೆಯುವವರೂ ಪರಸ್ಪರವಾಗಿ ಕಾಮವಿಕಾರದಿಂದ ಕೂಡಿದವರೂ ಆಗಿ ರತಿವಿಹಾರ ಸುಖಭೋಗವನ್ನು ಅನುಭವಿಸಲು ಆರಂಭಿಸಿದರು.

೯. ಹೀಗೆ ಪ್ರಾರಂಭದಲ್ಲಿ ಸ್ತ್ರೀ-ಪುರುಷರ ದ್ವಂದ್ವಗಳು ಹುಟ್ಟಿ ಮೈಥುನಕ್ರೀಡೆಗೆ ಉಪಕ್ರಮಿಸಿದ ಮೊದಲುಗೊಂಡು ಈ ಕಲ್ಪದಲ್ಲಿ ಹಾಗೆಯೇ ಸ್ತ್ರೀ–ಪುರುಷರ ದ್ವಂದ್ವಗಳು ಹುಟ್ಟುವಂತಾಯಿತು.

೧೦. ನಾರಿಯರಿಗೆ ಪ್ರತಿಮಾಸದಲ್ಲಿಯೂ ಯಾವ ಋತುಧರ್ಮವು ಪ್ರಸಿದ್ಧವಾಗಿದೆಯೋ ಅದು ಆ ಸಮಯದಲ್ಲಿ ಇರಲಿಲ್ಲ. ಆದ್ದರಿಂದ ಸ್ತ್ರೀ–ಪುರುಷರು ಮೈಥುನವನ್ನು ಅನುಭವಿಸಿದರೂ ಅದರಿಂದ ಸ್ತ್ರೀಯರು ಗರ್ಭವತಿಯರಾಗಿ ಪ್ರಸವಿಸುತ್ತಿರಲಿಲ್ಲ.

೧೧. ಆದರೆ ಹಾಗೆ ಹುಟ್ಟಿದ ಸ್ತ್ರೀ-ಪುರುಷರ ಆಯುಷ್ಯಾವಸಾನದಲ್ಲಿ ಒಂದುಸಲ ಮಾತ್ರ ಸ್ತ್ರೀಯರು ಸ್ತ್ರೀ-ಪುರುಷರ ಜೊತೆಯನ್ನು ಪ್ರಸವಿಸುತ್ತಿದ್ದರು. ಆಯುಷ್ಯವು ಕಳೆದು ಮರಣದಶೆಯಲ್ಲಿರುವಾಗ ಸ್ತ್ರೀಯರಲ್ಲಿ ಕುಲಿಕ–ಕುಲಿಕಾ ಎಂದು ಕರೆಯಲ್ಪಡುವ ಪುರುಷ-ಸ್ತ್ರೀಪ್ರಜೆಗಳು ಜನಿಸುತ್ತಿದ್ದರು.

ತತಃ ಪ್ರಭೃತಿ ಕಲ್ಪೇಽಸ್ಮಿನ್ಮಿಥುನಾನಾಂ ಹಿ ಸಮ್ಭವಃ ॥೧೨॥

ಧ್ಯಾನೇನ ಮನಸಾ ತಾಸಾಂ ಪ್ರಜಾನಾಂ ಜಾಯತೇ ಸಕೃತ್ ।
ಶಬ್ದಾದಿರ್ವಿಷಯಃ ಶುದ್ಧಃ ಪ್ರತ್ಯೇಕಂ ಪಞ್ಚಲಕ್ಷಣಃ ॥೧೩॥

ಇತ್ಯೇಷಾ ಮಾನುಷೀ ಸೃಷ್ಟಿರ್ಯಾ ಪೂರ್ವಂ ವೈ ಪ್ರಜಾಪತೇಃ ।
ತಸ್ಯಾನ್ವವಾಯಸಮ್ಭೂತಾ ಯೈರಿದಂ ಪೂರಿತಂ ಜಗತ್ ॥೧೪॥

ಸರಿತ್ಸರಃಸಮುದ್ರಾಂಶ್ಚ ಸೇವನ್ತೇ ಪರ್ವತಾನಪಿ ।
ತಾಸ್ತದಾ ಹ್ಯಲ್ಪಶೀತೋಷ್ಣಾ ಯುಗೇ ತಸ್ಮಿಂಶ್ಚರನ್ತಿ ವೈ ॥೧೫॥

ತೃಪ್ತಿಂ ಸ್ವಾಭಾವಿಕೀಂ ಪ್ರಾಪ್ತಾ ವಿಷಯೇಷು ಮಹಾಮತೇ ।
ನ ತಾಸಾಂ ಪ್ರತಿಘಾತೋಽಸ್ತಿ ನ ದ್ವೇಷೋ ನಾಪಿ ಮತ್ಸರಃ ॥೧೬॥

---

೧೨. ಅಂದಿನಿಂದ ಪ್ರಾರಂಭಿಸಿ ಈ ಕಲ್ಪದಲ್ಲಿ ಸ್ತ್ರೀ-ಪುರುಷರ ಪರಸ್ಪರ ಮೈಥುನ ಧರ್ಮವೂ ಕಡೆಯಲ್ಲಿ ಅದರಿಂದ ಸ್ತ್ರೀ-ಪುರುಷರ ಜೊತೆಯ ಉತ್ಪತ್ತಿಯೂ ಉಂಟಾದುವು.

೧೩. ಆಗ ಹುಟ್ಟಿರುವ ಪ್ರಜೆಗಳಿಗೆ ಐದು ವಿಭಾಗಗಳಿಂದ ಕೂಡಿದ ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳೆಂಬ ಶುದ್ಧವಾದ ವಿಷಯಗಳು ಮನಸ್ಸಿನ ಧ್ಯಾನಮಾತ್ರದಿಂದ ಒಂದುಸಲ ಪ್ರತ್ಯೇಕವಾಗಿ ಗೋಚರವಾಗುವುದು.

೧೪. ಇದು ಹಿಂದೆ ಬ್ರಹ್ಮದೇವನಿಂದ ಉಂಟಾದ ಮನುಷ್ಯ ಸೃಷ್ಟಿಯು. ಈಗ ಜಗತ್ತು ಯಾವ ಮನುಷ್ಯರಿಂದ ತುಂಬಿರುವುದೋ ಆ ಮನುಷ್ಯರು ಪ್ರಜಾಪತಿಯಿಂದ ಹಿಂದೆ ಸೃಷ್ಟಿಸಲ್ಪಟ್ಟ ಮನುಷ್ಯ ಸೃಷ್ಟಿಯ ವಂಶದಲ್ಲಿ ಜನಿಸಿದವರೇ ಆಗಿರುವರು.

೧೫. ಕಲ್ಪದ ಆದಿಯಲ್ಲಿ ಸೃಷ್ಟಿಯಾದ ಪ್ರಜೆಗಳು ಆ ಯುಗದಲ್ಲಿ ಅಲ್ಪವಾದ ಶೀತ-ಉಷ್ಣಗಳಿಂದ ಕೂಡಿದವರಾಗಿ ನದಿ, ಸರೋವರ, ಸಮುದ್ರ ಮತ್ತು ಪರ್ವತಪ್ರದೇಶಗಳನ್ನು ಸೇವಿಸಿ ಸಂಚಾರಮಾಡುತ್ತಿರುವರು.

೧೬. ಮಹಾಪ್ರಜ್ಞಾವಂತನೆ! ಆ ಪ್ರಜೆಗಳು ಶಬ್ದಾದಿ ವಿಷಯಗಳಲ್ಲಿ ಸ್ವಾಭಾವಿಕವಾದ ತೃಪ್ತಿಯನ್ನು ಹೊಂದಿಕೊಂಡಿರುವರು. ಅವರಿಗೆ ಯಾವ ಭೋಗದಲ್ಲಿಯೂ ತಡೆಯು ಇರುವುದಿಲ್ಲ. ಮತ್ತೊಬ್ಬರಲ್ಲಿ ದ್ವೇಷವಿಲ್ಲ ಮತ್ತು ಮಾತ್ಸರ್ಯವಿರುವುದಿಲ್ಲ.

ಪರ್ವತೋದಧಿಸೇವಿನ್ಯೋ ಹ್ಯನಿಕೇತಾಸ್ತು ಸರ್ವಶಃ।
ತಾ ವೈ ನಿಷ್ಕಾಮಚಾರಿಣ್ಯೋ ನಿತ್ಯಂ ಮುದಿತಮಾನಸಾಃ ॥೧೭॥

ಪಿಶಾಚೋರಗರಕ್ಷಾಂಸಿ ತಥಾ ಮತ್ಸರಿಣೋ ಜನಾಃ।
ಪಶವಃ ಪಕ್ಷಿಣಶ್ಚೈವ ನಕ್ರಾ ಮತ್ಸ್ಯಾಃ ಸರೀಸೃಪಾಃ ॥೧೮॥

ಅವಾರಕಾ ಹ್ಯಣ್ಡಜಾ ವಾ ತೇ ಹ್ಯಧರ್ಮಪ್ರಸೂತಯಃ।
ನ ಮೂಲಫಲಪುಷ್ಪಾಣಿ ನಾರ್ತವಾ ವತ್ಸರಾಣಿ ಚ ॥೧೯॥

ಸರ್ವಕಾಲಸುಖಃ ಕಾಲೋ ನಾತ್ಯರ್ಥಂ ಘರ್ಮಶೀತತಾ।
ಕಾಲೇನ ಗಚ್ಛತಾ ತೇಷಾಮಿಚ್ಛಾಸಿದ್ಧಿರಜಾಯತ ॥೨೦॥

---

೧೭. ನಿಷ್ಕಾಮವಾಗಿ ಅಲ್ಲಲ್ಲಿ ಸಂಚರಿಸುವ, ಮತ್ತು ಸಂತತವಾಗಿ ಸಂತೋಷಗೊಂಡ ಮಾನಸವುಳ್ಳ ಪ್ರಜೆಗಳು ಎಲ್ಲಿಯೂ ಸ್ಥಿರವಾದ ಒಂದು ವಸತಿಯಿಲ್ಲದೆ ಪರ್ವತ–ಸಮುದ್ರತೀರಗಳನ್ನು ಸೇವಿಸುವವರಾಗಿರುವರು.

೧೮. ಕಲ್ಪದ ಆದಿಯಲ್ಲಿ ಮನುಷ್ಯಸೃಷ್ಟಿಯಾದಂತೆ ಪಿಶಾಚ-ಸರ್ಪ-ರಾಕ್ಷಸ-ಮಾತ್ಸರ್ಯವುಳ್ಳ ಜನರು–ಪಶು-ಪಕ್ಷಿ-ಮೀನು-ಮೊಸಳೆ ಮತ್ತು ಹಾವು ಮುಂತಾದ ಅಧರ್ಮದ ಪರಿಪಾಕದಿಂದ ಜನ್ಮವೆತ್ತುವ ಪ್ರಾಣಿಗಳ ಸೃಷ್ಟಿಯಾಗುವುದು.

೧೯. ಮತ್ತು ಮೊಟ್ಟೆಯಿಂದ ಜನಿಸುವ ಪ್ರಾಣಿ, ಮತ್ತೊಂದನ್ನು ತಡೆಯಲಾಗದ ಕ್ರಿಮಿ ಮುಂತಾದುವುಗಳು ಅಧರ್ಮದಿಂದ ಜನಿಸುವುವು. ಆಗ ಆಯಾಯ ಋತುಗಳಲ್ಲಿ ಅಥವಾ ಸಂವತ್ಸರಗಳಲ್ಲಿ ಲಭಿಸುವ ಫಲ-ಪುಷ್ಪ-ಮೂಲಗಳು ಇರಲಿಲ್ಲ.

೨೦. ಆ ಪ್ರಜೆಗಳಿಗೆ ಎಲ್ಲ ಕಾಲವು ಸುಖಮಯಕಾಲವಾಗಿತ್ತು. ಹೆಚ್ಚಾಗಿ ಉಷ್ಣ-ಶೀತಬಾಧೆಯು ಇರಲಿಲ್ಲ. ಹೀಗೆ ಪ್ರಜೆಗಳಿಗೆ ಅನೇಕ ಕಾಲವು ಕಳೆದು ಹೋಗಲು ಕ್ರಮವಾಗಿ ಸಂಕಲ್ಪದಿಂದ ಫಲಸಿದ್ಧಿಯುಂಟಾಯಿತು.

ತತಶ್ಚ ತೇಷಾಂ ಪೂರ್ವಾಹ್ಣೇ ಮಧ್ಯಾಹ್ನೇ ಚ ವಿತೃಪ್ತತಾ ।
ಪುನಸ್ತಥೇಚ್ಛತಾಂ ತೃಪ್ತಿರನಾಯಾಸೇನ ಸಾಭವತ್ ॥೨೧॥

ಇಚ್ಛತಾಂ ಚ ತಥಾಯಾಸೋ ಮನಸಃ ಸಮಜಾಯತ ।
ಅಪಾಂ ಸೌಕ್ಷ್ಮ್ಯಂ ತತಸ್ತಾಸಾಂ ಸಿದ್ಧಿರ್ನಾಮ್ನಾ ರಸೋಲ್ಲಸಾ ॥೨೨॥

ಸಮಜಾಯತ ಚೈನಾನ್ಯಾ ಸರ್ವಕಾಮಪ್ರದಾಯಿನೀ ।
ಅಸಂಸ್ಕಾರ್ಯೈಃ ಶರೀರೈಶ್ಚ ಪ್ರಜಾಸ್ತಾಃ ಸ್ಥಿರಯೌವನಾಃ ॥೨೩॥

ತಾಸಾಂ ವಿನಾ ತು ಸಂಕಲ್ಪಂ ಜಾತಾಸ್ತೇ ಮಿಥುನಾಃ ಪ್ರಜಾಃ ।
ಸಮಂ ಜನ್ಮ ಚ ರೂಪಂ ಚ ಮ್ರಿಯನ್ತೇ ಚೈವ ತಾಃ ಸಮಮ್॥೨೪॥

---

೨೧. ಆದುದರಿಂದ ಆ ಜನರಿಗೆ ಪೂರ್ವಾಹ್ಣ-ಮಧ್ಯಾಹ್ನ ಸಮಯಗಳಲ್ಲಿ ಮನಸ್ಸಿಗೆ ತೃಪ್ತಿಯಿಲ್ಲದಂತೆ ಆಗುವುದು. ಮತ್ತೆ ತೃಪ್ತಿಬಯಸುತ್ತಿರುವಷ್ಟರಲ್ಲಿ ಅನಾಯಾಸವಾಗಿ ತೃಪ್ತಿಯು ಉಂಟಾಗುವುದು.

೨೨. ಆದರೆ ಅನಾಯಾಸವಾಗಿ ಲಭಿಸುವ ತೃಪ್ತಿಯನ್ನು ಬಯಸುವುದು ಮನಸ್ಸಿಗೆ ಆಯಾಸವಾಗುತ್ತಿತ್ತು. ಜಲದಲ್ಲಿ ಭೋಗವನ್ನು ಕೊಡುವ ಸೂಕ್ಷ್ಮವಾದ ಸಾರಾಂಶಗಳು ಇರುವುದರಿಂದ ಆ ಪ್ರಜೆಗಳಿಗೆ "ರಸೋಲ್ಲಸಾ" ಎಂಬ ನಾಮಾಂಕನವುಳ್ಳ ಸಿದ್ಧಿಯು ದೊರಕಿತು.

೨೩. ರಸೋಲ್ಲಸವೆಂಬ ಆ ಮತ್ತೊಂದು ಸಿದ್ಧಿಯು ಪ್ರಜೆಗಳ ಸಮಸ್ತ ಇಷ್ಟಾರ್ಥಗಳನ್ನು ಕೊಡುವುದಾಯಿತು. ಯಾವ ಸಂಸ್ಕಾರದ ಆವಶ್ಯಕತೆಯೂ ಇಲ್ಲದ ಶರೀರಗಳಿಂದ ಕೂಡಿದ ಆ ಪ್ರಜೆಗಳು ಸ್ಥಿರವಾದ ಯೌವನವುಳ್ಳವರಾದರು.

೨೪. ಅವರಿಗೆ ಸಂತತಿಯ ಸಂಕಲ್ಪವಿಲ್ಲದಿದ್ದರೂ ಸ್ತ್ರೀಪುರುಷ ಮಿಥುನರೂಪರಾದ ಪ್ರಜೆಗಳು ಜನಿಸುವರು. ಆ ಪ್ರಜೆಗಳಿಗೆ ಜನ್ಮ-ರೂಪಗಳು ಒಂದೇ ವಿಧವಾಗಿದ್ದುವು ಮತ್ತು ಆ ಪ್ರಜೆಗಳು ಒಟ್ಟಿಗೆ ಮರಣವನ್ನು ಹೊಂದುವರು.

ಅನಿಚ್ಛಾದ್ವೇಷಸಂಯುಕ್ತಾ ವರ್ತನ್ತೇ ತು ಪರಸ್ಪರಮ್ ।
ತುಲ್ಯರೂಪಾಯುಷಃ ಸರ್ವಾ ಅಧಮೋತ್ತಮತಾಂ ವಿನಾ ॥೨೫॥

ಚತ್ವಾರಿ ತು ಸಹಸ್ರಾಣಿ ವರ್ಷಾಣಾಂ ಮಾನುಷಾಣಿ ತು ।
ಆಯುಃಪ್ರಮಾಣಂ ಜೀವನ್ತಿ ನ ಚ ಕ್ಲೇಶಾದ್ವಿಪತ್ತಯಃ ॥೨೬॥

ಕ್ವಚಿತ್ಕ್ವಚಿತ್ಪುನಃ ಸಾಭೂತ್ ಕ್ಷಿತಿರ್ಭಾಗ್ಯೇನ ಸರ್ವಶಃ ।
ಕಾಲೇನ ಗಚ್ಛತಾ ನಾಶಮುಪಯಾನ್ತಿ ಯಥಾ ಪ್ರಜಾಃ ॥೨೭॥

ತಥಾ ತಾಃ ಕ್ರಮಶೋ ನಾಶಂ ಜಗ್ಮುಃ ಸರ್ವತ್ರ ಸಿದ್ಧಯಃ ।
ತಾಸು ಸರ್ವಾಸು ನಷ್ಟಾಸು ನಭಸಃ ಪ್ರಚ್ಯುತಾ ರಸಾಃ ॥೨೮॥

---

೨೫. ಮತ್ತು ಆ ಪ್ರಜೆಗಳು ಪರಸ್ಪರವಾಗಿ ಇಚ್ಛೆ-ದ್ವೇಷಗಳಿಲ್ಲದವರೂ ಹಾಗು ಒಬ್ಬರಿಗಿಂತಲೂ ಮತ್ತೊಬ್ಬರು ಹೆಚ್ಚು ಅಥವಾ ಕಡಿಮೆಯೆಂಬ ತಾರತಮ್ಯವಿಲ್ಲದೇ ಸಮಾನವಾದ ರೂಪ-ಆಯುಷ್ಯಗಳಿಂದ ಕೂಡಿದವರೂ ಆಗಿದ್ದರು.

೨೬. ಅಂತಹವರು ಮನುಷ್ಯಮಾನದಿಂದ ನಾಲ್ಕು ಸಹಸ್ರ ವರ್ಷಗಳ ದೀರ್ಘಕಾಲದವರೆಗೆ ಜೀವಿಸುತ್ತಿರುವರು. ಅವರಿಗೆ ತಮ್ಮ ಜೀವನದ ನಡುವೆ ಕ್ಲೇಶಮೂಲಕವಾಗಿ ವಿಪತ್ತುಗಳು ಒದಗುತ್ತಿರಲಿಲ್ಲ.

೨೭. ಆ ಪ್ರಜೆಗಳಿಗೆ ಅವರವರ ಭಾಗ್ಯಾನುಸಾರವಾಗಿ ಕೆಲವೆಡೆಗಳಲ್ಲಿ ಮಾತ್ರ ಭೂಮಿಯು ಭೋಗ್ಯವಾಗಿತ್ತು. ಹೀಗೆ ವಾಸಮಾಡುತ್ತಿದ್ದ ಪ್ರಜೆಗಳು ಕೆಲವು ದೀರ್ಘಕಾಲವು ಕಳೆದ ತರುವಾಯ ನಾಶವನ್ನು ಹೊಂದುವರು.

೨೮. ಪ್ರಜೆಗಳು ನಾಶವಾದಂತೆ ಅವರಿಗೆ ಅಧೀನವಾಗಿದ್ದ ಸಿದ್ಧಿಗಳು ಎಲ್ಲೆಡೆಗಳಲ್ಲಿಯೂ ಕ್ರಮವಾಗಿ ನಾಶವಾಗುತ್ತ ಬಂದುವು. ಆ ಸಿದ್ಧಿಗಳೆಲ್ಲವೂ ನಾಶಹೊಂದಿದ ಬಳಿಕ ಆಕಾಶದಿಂದ ಅನೇಕ ಬಗೆಯ ರಸಗಳು ಪ್ರವಹಿಸಿ ಬಂದುವು.

ಪಯಸಃ ಕಲ್ಪವೃಕ್ಷಾಸ್ತೇ ಸಮುದ್ಭೂತಾ ಗೃಹಸಂಸ್ಥಿತಾಃ ।
ಸರ್ವೇ ಪ್ರತ್ಯುಪಭೋಗಾಶ್ಚ ತಾಸಾಂ ತೇಭ್ಯಃ ಪ್ರಜಾಯತ ॥೨೯॥

ವರ್ತಯನ್ತಿ ಸ್ಮ ತೇಭ್ಯಸ್ತಾಸ್ತ್ರೇತಾಯುಗಮುಖೇ ತದಾ ।
ತತಃ ಕಾಲೇನ ವೈ ರಾಗಸ್ತಾಸಾಮಾಕಸ್ಮಿಕೋಽಭವತ್ ॥೩೦॥

ಮಾಸಿ ಮಾಸ್ಯಾರ್ತವೋತ್ಪತ್ತ್ಯಾ ಗರ್ಭೋತ್ಪತ್ತಿಃ ಪುನಃ ಪುನಃ ।
ರಾಗೋತ್ಪತ್ತ್ಯಾ ತತಸ್ತಾಸಾಂ ವೃಕ್ಷಾಸ್ತೇ ಗೃಹಸಂಸ್ಥಿತಾಃ ॥೩೧॥

ಪ್ರಣೇಶುರಪರೇ ಚಾಸಂಶ್ಚತುಃಶಾಖಾ ಮಹೀರುಹಾಃ ।
ವಸ್ತ್ರಾಣಿ ಚ ಪ್ರಸೂಯನ್ತೇ ಫಲೇಷ್ವಾಭರಣಾನಿ ಚ ॥೩೨॥

---

೨೯. ಆಕಾಶದಿಂದ ಹರಿದುಬಂದ ಹಾಲಿನ ರಸಗಳು ಕೆಳಗೆ ಬಿದ್ದು ಮನೆಗಳ ಆಕಾರವನ್ನು ಹೊಂದಿದ ಕಲ್ಪವೃಕ್ಷಗಳಾಗಿ ಜನಿಸಿದುವು. ಆಗಿನ ಪ್ರಜೆಗಳಿಗೆ ಸಮಸ್ತ ಭೋಗಗಳು ಆ ಕಲ್ಪವೃಕ್ಷಗಳಿಂದ ದೊರಕಿದುವು.

೩೦. ತ್ರೇತಾಯುಗದ ಆದಿಯಲ್ಲಿದ್ದ ಆ ಪ್ರಜೆಗಳು ಕಲ್ಪವೃಕ್ಷಗಳಿಂದ ದೊರೆತಿರುವ ಭೋಗ್ಯವಸ್ತುಗಳನ್ನು ಭುಂಜಿಸುತ್ತ ಜೀವಿಸುತ್ತಿದ್ದರು. ಕೆಲವು ಕಾಲದ ನಂತರ ಆ ಪ್ರಜೆಗಳಲ್ಲಿ ಅಕಸ್ಮಾತ್ತಾಗಿ ವಿಷಯಭೋಗದಲ್ಲಿ ಆಶೆಯು ಉಂಟಾಯಿತು.

೩೧. ಹಾಗು ಸ್ತ್ರೀಯರಲ್ಲಿ ಮಾಸಮಾಸಗಳಲ್ಲಿ ಋತುಧರ್ಮವು ಕಾಣಿಸಿಕೊಂಡು ಹಾಗೆಯೆ ಮತ್ತೆ ಮತ್ತೆ ಗರ್ಭೋತ್ಪತ್ತಿಯೂ ಪ್ರಜಾವೃದ್ಧಿಯೂ ಉಂಟಾಮವು. ಆಗ ಪ್ರಜೆಗಳಲ್ಲಿ ಆಶಾದೋಷವು ಉಂಟಾದುದರ ಪರಿಣಾಮವಾಗಿ ಮನೆಗಳಂತಿದ್ದ ಕಲ್ಪವೃಕ್ಷಗಳು ನಾಶಹೊಂದಿದುವು.

೩೨. ಕಲ್ಪವೃಕ್ಷಗಳು ನಾಶಹೊಂದಿ ನಾಲ್ಕು ರೆಂಬೆಗಳಿಂದ ಕೂಡಿದ ಬೇರೆ ವೃಕ್ಷಗಳು ಜನಿಸಿದುವು. ಆ ಮರಗಳು ಪ್ರಜೆಗಳ ಇಷ್ಟಾನುಸಾರವಾಗಿ ರೆಂಬೆಗಳಲ್ಲಿ ವಸ್ತ್ರಗಳನ್ನೂ ಆಭರಣಗಳನ್ನೂ ಫಲರೂಪವಾಗಿ ಕೊಡುತ್ತಿದ್ದುವು.

ತೇಷ್ವೇವ ಜಾಯತೇ ತೇಷಾಂ ಗನ್ಧವರ್ಣರಸಾನ್ವಿತಮ್ ।
ಅಮಾಕ್ಷಿಕಂ ಮಹಾವೀರ್ಯಂ ಪುಟಕೇ ಪುಟಕೇ ಮಧು ॥೩೩॥

ತೇನ ತಾ ವರ್ತಯನ್ತಿ ಸ್ಮ ಮುಖೇ ತ್ರೇತಾಯುಗಸ್ಯ ವೈ ।
ತತಃ ಕಾಲಾನ್ತರೇಣೈವ ಪುನರ್ಲೋಭಾನ್ವಿತಾಸ್ತು ತಾಃ ॥೩೪॥

ವೃಕ್ಷಾಂಸ್ತಾಃ ಪರ್ಯಗೃಹ್ಣನ್ತ ಮಮತ್ವಾವಿಷ್ಟಚೇತಸಃ ।
ನೇಶುಸ್ತೇನಾಪಚಾರೇಣ ತೇ ಹಿ ತಾಸಾಂ ಮಹೀರುಹಾಃ ॥೩೫॥

ಮೂಲೇಷು ಚಾಪರಂ ವಾಸಂ ಚಕ್ರುಃ ಶಾಲಾ ಮಹೀರುಹಾಮ್
॥೩೬॥

ತತೋ ದ್ವನ್ದ್ವಾನ್ಯಜಾಯನ್ತ ಶೀತೋಷ್ಣಕ್ಷುನ್ಮುಖಾನಿ ವೈ ।
ತಾಸ್ತದ್ದ್ವನ್ದ್ವೋಪಘಾತಾರ್ಥಂ ಚಕ್ರುಃ ಪೂರ್ವಂ ಪುರಾಣಿ ತು
॥೩೭॥

---

೩೩. ಮತ್ತು ಪ್ರಜೆಗಳಿಗೆ ಆ ವೃಕ್ಷಗಳ ಎಲೆಗಳಲ್ಲಿ ಸುಗಂಧ-ಸುರೂಪ-ಸುಸ್ವಾದಗಳಿಂದ ಕೂಡಿರುವುದೂ, ಹೆಚ್ಚು ವೀರ್ಯವತ್ತಾಗಿರುವುದೂ ಮತ್ತು ಜೇನುಹುಳಗಳಿಂದ ನಿರ್ಮಿಸಲ್ಪಡದಿರುವುದೂ ಆದ ಮಧುರಸವು ಉಂಟಾಯಿತು.

೩೪. ತ್ರೇತಾಯುಗದ ಆದಿಯಲ್ಲಿದ್ದ ಆ ಪ್ರಜೆಗಳು ಮಧುರಸವನ್ನು ಭುಂಜಿಸಿ ಜೀವನವನ್ನು ಸಾಗಿಸಿದರು. ತರುವಾಯ ಹಾಗು ಕೆಲವು ಕಾಲ ಕಳೆದ ಮೇಲೆ ಮತ್ತೆ ಆ ಪ್ರಜೆಗಳು ಲೋಭವುಳ್ಳವರಾದರು.

೩೫. ಪ್ರಜೆಗಳು ಲೋಭಾವೇಶವುಳ್ಳವರಾದುದರಿಂದ ಆ ವೃಕ್ಷಗಳನ್ನು ಮಮತ್ವಬುದ್ಧಿಯಿಂದ ಪರಿಗ್ರಹಿಸಿದರು. ಆದರೆ ಪ್ರಜೆಗಳಿಗೆ ಭೋಗ್ಯವಾಗಿದ್ದ ಆ ಮರಗಳು ಅವರ ಲೋಭದೋಷದಿಂದ ಕಣ್ಮರೆಯಾದುವು.

೩೬. ಆಗ ಈಗಿರುವಂತೆ ಸಾಮಾನ್ಯವಾದ ವೃಕ್ಷಶ್ರೇಣಿಯನ್ನು ಹುಡುಕಿಕೊಂಡು ಆ ಮರಗಳ ಅಡಿಯಲ್ಲಿ ಶಾಲಾರೂಪವಾಗಿ ಮನೆಗಳನ್ನು ನಿರ್ಮಿಸಿಕೊಂಡು ವಾಸಮಾಡಿದರು.

೩೭. ಅಂತಹ ಪ್ರಜೆಗಳಲ್ಲಿ ಶೀತ-ಉಷ್ಣ, ಹಸಿವು-ನೀರಡಿಕೆ-ಮುಂತಾದ ದ್ವಂದ್ವದುಃಖಗಳು ಉಂಟಾದುವು. ಅಂತಹ ದ್ವಂದ್ವದುಃಖಗಳನ್ನು ಕಳೆದು-ಕೊಳ್ಳುವುದಕ್ಕೋಸ್ಕರ ಪ್ರಜೆಗಳು ಮೊದಲು ಪುರಗಳನ್ನು ನಿರ್ಮಿಸಿಕೊಂಡರು

ಮರುಧನ್ವಸು ದುರ್ಗೇಷು ಪರ್ವತೇಷು ದರೀಷು ಚ ।
ಸಂಶ್ರಯನ್ತಿ ಚ ದುರ್ಗಾಣಿ ವಾರ್ಕ್ಷಂ ಪಾರ್ವತಮೌದಕಮ್ ॥೩೮॥

ಕೃತ್ರಿಮಂ ಚ ತಥಾ ದುರ್ಗಂ ಮಿತ್ವಾ ಮಿತ್ವಾತ್ಮನೋಽಙ್ಗುಲೈಃ ।
ಮಾನಾರ್ಥಾನಿ ಪ್ರಮಾಣಾನಿ ತಾಸ್ತು ಪೂರ್ವಂ ಪ್ರಚಕ್ರಿರೇ ॥೩೯॥

ಪರಮಾಣುಃ ಪರಂ ಸೂಕ್ಷ್ಮಂ ತ್ರಸರೇಣುರ್ಮಹೀರಜಃ ।
ವಾಲಾಗ್ರಂ ಚೈವ ಲಿಕ್ಷಾಂ ಚ ಯೂಕಾಂ ಚಾಥ ಯವೋದರಮ್ ॥೪೦॥

ಕ್ರಮಾದಷ್ಟಗುಣಾನ್ಯಾಹುರ್ಯವಾನಷ್ಟೌ ತಥಾಙ್ಗುಲಮ್ ।
ಷಡಙ್ಗುಲಂ ಪದಂ ತಚ್ಚ ವಿತಸ್ತಿರ್ದ್ವಿಗುಣಂ ಸ್ಮೃತಮ್ ॥೪೧॥

---

೩೮. ಮರುಭೂಮಿ, ವೃಕ್ಷದುರ್ಗ, ಪರ್ವತ ಮತ್ತು ಗುಹೆ ಮುಂತಾದ ಗಹನಪ್ರದೇಶಗಳಲ್ಲಿ ವೃಕ್ಷ, ಗಿರಿ, ಜಲಮಯವಾದ ದುರ್ಗಗಳನ್ನು ಹುಡುಕಿಕೊಂಡು ಅವುಗಳನ್ನು ಆಶ್ರಯಿಸಿ ವಾಸಮಾಡಿದರು.

೩೯. ಪ್ರಜೆಗಳು ದುರ್ಗಗಳ ನಿರ್ಮಾಣಕ್ಕಾಗಿ ತಮ್ಮ ಅಂಗುಲ ಪರಿಮಾಣದಿಂದ ಅಳೆದು ಕೃತ್ರಿಮ ದುರ್ಗಗಳನ್ನು ರಚಿಸಿಕೊಂಡರು. ಮೊದಲು ದುರ್ಗನಿರ್ಮಾಣದ ಅಳತೆಗಾಗಿ ಅನೇಕ ಬಗೆಯ ಪರಿಮಾಣಗಳನ್ನು ಕಲ್ಪಿಸಿಕೊಂಡರು.

೪೦. ಅವರು ಏರ್ಪಡಿಸಿಕೊಂಡ ಪರಿಮಾಣಗಳಲ್ಲಿ ಪರಮಾಣು ಎಂಬುದು ಅತಿಸೂಕ್ಷ್ಮವಾದ ಒಂದು ಪರಿಮಾಣವು. ಹಾಗು ತ್ರಸರೇಣುರೂಪವಾದ ಭೂಮಿಯ ಧೂಳಿಕಣ, ವಾಲಾಗ್ರ, ಲಿಕ್ಷಾ, ಯೂಕ ಮತ್ತು ಯವೋದರ—ಎಂಬುವು ಹಿಂದಿನ ಪರಿಮಾಣಕ್ಕಿಂತಲೂ ಎಂಟರಷ್ಟು ಹೆಚ್ಚಿಕೆಯುಳ್ಳ ಪರಿಮಾಣಗಳಾದುವು.

೪೧. ಹೀಗೆ ಹಿಂದಿನ ಪರಿಮಾಣಗಳು ಉತ್ತರೋತ್ತರ ಅಷ್ಟಗುಣವಾಗಿ ಅಧಿಕವಾದುವು. ಅವುಗಳಲ್ಲಿ ಎಂಟು ಯವಗಳು ಒಂದು ಅಂಗುಲವೂ, ಆರು ಅಂಗುಲಗಳು ಒಂದು ಪದ ಪರಿಮಾಣವೂ ಮತ್ತು ಎರಡು ಪದ ಪರಿಮಾಣವು ಒಂದು ವಿತಸ್ತಿ (ಅಡಿ)ಯೂ ಆಗಿರುವುವು.

ದ್ವೇ ವಿತಸ್ತೀ ತಥಾ ಹಸ್ತೋ ಬ್ರಾಹ್ಮ್ಯತೀರ್ಥಾದಿವೇಷ್ಟಿತಃ ।
ಚತುರ್ಹಸ್ತಂ ಧನುರ್ದಣ್ಡೋ ನಾಡಿಕಾ ಯುಗಮೇವ ಚ ॥೪೨॥

ಕ್ರೋಶೋ ಧನುಃ ಸಹಸ್ರೇ ದ್ವೇ ಗವ್ಯೂತಿಸ್ತಚ್ಚತುರ್ಗುಣಮ್ ।
ಪ್ರೋಕ್ತಂ ಚ ಯೋಜನಂ ಪ್ರಾಜ್ಞೈಃ ಸಂಖ್ಯಾನಾರ್ಥಮಿದಂ ಪರಮ್ ॥೪೩॥

ಚತುರ್ಣಾಮಥ ದುರ್ಗಾಣಾಂ ಸ್ವಸಮುತ್ಥಾನಿ ತ್ರೀಣಿ ತು ।
ಚತುರ್ಥಂ ಕೃತ್ರಿಮಂ ದುರ್ಗಂ ತಚ್ಚಕ್ರುರ್ಯತ್ನತಸ್ತು ವೈ ॥೪೪॥

ಪುರಂ ಚ ಖೇಟಕಂ ಚೈವ ತದ್ವದ್ದ್ರೋಣೀಮುಖಂ ದ್ವಿಜ ।
ಶಾಖಾನಗರಕಂ ಚಾಪಿ ತಥಾ ಖರ್ವಟಕಂ ದ್ರಮೀ ॥೪೫॥

---

೪೨. ಅಂತಹ ಎರಡು ವಿತಸ್ತಿ ಪರಿಮಾಣವು ಬ್ರಾಹ್ಮ ಮುಂತಾದ ತೀರ್ಥಗಳಿಂದ ಕೂಡಿದ ಒಂದು ಹಸ್ತ ಪರಿಮಾಣವೆನಿಸುವುದು. ನಾಲ್ಕು ಹಸ್ತ ಪರಿಮಾಣವು ಒಂದು ಧನುರ್ದಂಡ ಪರಿಮಾಣವೂ ಎರಡು ಧನುಃಪರಿಮಾಣವು ಒಂದು ನಾಡಿಕಾಪರಿಮಾಣವೂ ಆಗುವುವು.

೪೩. ಒಂದು ಸಹಸ್ರ ಧನುಃಪರಿಮಾಣವು ಒಂದು ಕ್ರೋಶಪರಿಮಾಣವೂ, ಎರಡು ಕ್ರೋಶಗಳು ಒಂದು ಗವ್ಯೂತಿಪರಿಮಾಣವೂ ಮತ್ತು ನಾಲ್ಕು ಗವ್ಯೂತಿಗಳು ಒಂದು ಯೋಜನ ಪರಿಮಾಣವೂ ಆಗುವುವೆಂದೂ ಪರಿಮಾಣಗಣನೆಯು ಪ್ರಾಜ್ಞರಿಂದ ಹೇಳಲ್ಪಟ್ಟಿರುವುದು.

೪೪. ವೃಕ್ಷ-ಪರ್ವತ-ಉದಕ ಮತ್ತು ಪುರಾದಿ ದುರ್ಗ—ಈ ನಾಲ್ಕು ವಿಧವಾದ ದುರ್ಗಗಳಲ್ಲಿ ಮೊದಲಿನ ಮೂರು ದುರ್ಗಗಳು ಸ್ವಾಭಾವಿಕವಾದುವು. ನಾಲ್ಕನೆಯ ದುರ್ಗವು ಕೃತ್ರಿಮವಾದ ದುರ್ಗವು. ಅದನ್ನು ಯತ್ನದಿಂದ ರಚಿಸಿಕೊಂಡರು.

೪೫. ದ್ವಿಜೋತ್ತಮನೆ! ಪ್ರಜೆಗಳು ಹಾಗೆ ನಿರ್ಮಿಸುವ ಬಗೆಬಗೆಯ ಕೃತ್ರಿಮದುರ್ಗಗಳಲ್ಲಿ ಪುರ, ಖೇಟಕ, ದ್ರೋಣೀಮುಖ, ಶಾಖಾನಗರ, ಖರ್ವಟ ಮತ್ತು ದ್ರಮೀ ಎಂಬುವು ಕೆಲವು ದುರ್ಗಗಳಾಗಿವೆ.

ಗ್ರಾಮಸಂಘೋಷವಿನ್ಯಾಸಂ ತೇಷು ಚಾವಸಥಾನ್ ಪೃಥಕ್ ।
ಸೋತ್ಸೇಧವಪ್ರಾಕಾರಂ ಚ ಸರ್ವತಃ ಪರಿಖಾವೃತಮ್ ॥೪೬॥

ಯೋಜನಾರ್ಧಾರ್ಧವಿಷ್ಕಮ್ಭಮಷ್ಟಭಾಗಾಯತಂ ಪುರಮ್ ।
ಪ್ರಾಗುದಕ್ಪ್ರವಣಂ ಶಸ್ತಂ ಶುದ್ಧವಂಶಬಹಿರ್ಗಮಮ್ ॥೪೭॥

ತದರ್ಧೇನ ತಥಾ ಖೇಟಂ ತತ್ಪಾದೇನ ಚ ಖರ್ವಟಮ್ ।
ನ್ಯೂನಂ ದ್ರೋಣೀಮುಖಂ ತಸ್ಮಾದಷ್ಟಭಾಗೇನ ಚೋಚ್ಯತೇ ॥೪೮॥

ಪ್ರಾಕಾರಪರಿಖಾಹೀನಂ ಪುರಂ ಖರ್ವಟಮುಚ್ಯತೇ ।
ಶಾಖಾನಗರಕಂ ಚಾನ್ಯನ್ಮನ್ತ್ರಿಸಾಮನ್ತಭುಕ್ತಿಮತ್ ॥೪೯॥

---

೪೬. ಮತ್ತು ಗ್ರಾಮ, ಘೋಷಗಳು ಒಂದುವಿಧದ ವಿನ್ಯಾಸವುಳ್ಳ ದುರ್ಗಗಳಾಗಿವೆ. ಈ ದುರ್ಗಗಳಲ್ಲಿ ಬೇರೆಬೇರೆಯಾಗಿ ವಾಸಗೃಹಗಳನ್ನು ರಚಿಸಿಕೊಂಡರು. ಇವುಗಳಲ್ಲಿ ಪುರದುರ್ಗವು ಎತ್ತರವಾದ ಕೋಟೆ-ಕೊತ್ತಲು-ಗಳಿಂದಲೂ ನೀರಿನ ಕಂದುಕಗಳಿಂದಲೂ ಸುತ್ತಲ್ಪಟ್ಟಿರುವುದು.

೪೭. ಮತ್ತು ಒಂದುಕಾಲುಭಾಗದ ಯೋಜನ ಪ್ರಮಾಣದಷ್ಟು ವಿಷ್ಕಂಭ ಪರಿಮಾಣದಿಂದಲೂ ಎರಡು ಯೋಜನಗಳಷ್ಟು ದೀರ್ಘಪರಿಮಾಣ-ದಿಂದಲೂ ಕೂಡಿರುವುದು ಪೂರ್ವ ಅಥವಾ ಉತ್ತರದಿಕ್ಕುಗಳಲ್ಲಿ ತಗ್ಗಾದ ಭೂಮಿಯುಳ್ಳದ್ದೂ ಶುದ್ಧವಾದ ವಂಶಗಳಿಂದ ಕೂಡಿರುವುದೂ ಪ್ರಶಸ್ತವಾದ ಪುರದುರ್ಗವೆನಿಸುವುದು.

೪೮. ಪುರದ ಅರ್ಧಪ್ರಮಾಣದಿಂದ ಕೂಡಿರುವುದು ಖೇಟವೂ, ಕಾಲು-ಭಾಗದ ಪ್ರಮಾಣದಿಂದ ಕೂಡಿರುವುದು ಖರ್ವಟವೂ ಆಗುವುದು. ಮತ್ತು ಪುರದ ಎಂಟನೆಯ ಒಂದುಭಾಗದ ಪ್ರಮಾಣವುಳ್ಳದ್ದು ಖರ್ವಟಕ್ಕಿಂತಲೂ ಚಿಕ್ಕದಾದ ದ್ರೋಣೀಮುಖವೆಂದು ಕರೆಯಲ್ಪಡುವುದು.

೪೯. ಖರ್ವಟವೆಂಬುದು ಕೋಟೆ–ಕಂದುಕಗಳಿಂದ ಹೀನವಾದುದೆಂದು ಹೇಳಲ್ಪಟ್ಟಿದೆ. ಮಂತ್ರಿ ಮತ್ತು ಸಾಮಂತರಾಜರು ವಾಸಮಾಡುವ ಸ್ಥಲ-ವಿಶೇಷವು ಶಾಖಾನಗರವೆಂದು ಗಣಿಸಲ್ಪಟ್ಟಿದೆ.

ತಥಾ ಶೂದ್ರಜನಪ್ರಾಯಾಃ ಸ್ವಸಮೃದ್ಧಕೃಷೀವಲಾಃ ।
ಕ್ಷೇತ್ರೋಪಭೋಗ್ಯಭೂಮಧ್ಯೇ ವಸತಿರ್ಗ್ರಾಮಸಂಜ್ಞಿತಾ ॥೫೦॥

ಅನ್ಯಸ್ಮಾನ್ನಗರಾದೇರ್ಯಾ ಕಾರ್ಯಮುದ್ದಿಶ್ಯ ಮಾನವೈಃ ।
ಕ್ರಿಯತೇ ವಸತಿಃ ಸಾ ವೈ ವಿಜ್ಞೇಯಾ ವಸತಿರ್ನರೈಃ ॥೫೧॥

ದುಷ್ಟಪ್ರಾಯೋ ವಿನಾ ಕ್ಷೇತ್ರೈಃ ಪರಭೂಮಿಚರೋ ಬಲೀ ।
ಗ್ರಾಮ ಏವ ದ್ರಮೀಸಂಜ್ಞೋ ರಾಜವಲ್ಲಭಸಂಶ್ರಯಃ ॥೫೨॥

ಶಕಟಾರೂಢಭಾಣ್ಡೈಶ್ಚ ಗೋಪಾಲೈರ್ವಿಪಣಂ ವಿನಾ ।
ಗೋಸಮೂಹೈಸ್ತಥಾ ಘೋಷೋ ಯತ್ರೇಚ್ಛಾಭೂಮಿಕೇತನಃ॥೫೩॥

---

೫೦ ಹಾಗು ಶೂದ್ರಜನರು ಹೆಚ್ಚಾಗಿ ವಾಸಮಾಡುವ ಸ್ವಸಂಪೂರ್ಣತೆಯ ಸಮೃದ್ಧಿಯಿಂದ ಕೂಡಿದ ರೈತಜನರುಳ್ಳ ಮತ್ತು ಹೊಲ-ಗದ್ದೆಗಳ ನಡುವೆ ಇರುವ ವಾಸಭೂಮಿಯು ಗ್ರಾಮವೆಂದು ಕರೆಯಲ್ಪಡುವುದು.

೫೧. ಮಾನವರು ನಗರಾದಿಗಳನ್ನು ಬಿಟ್ಟು ಬೇರೊಂದು ಸ್ಥಳದಲ್ಲಿ ಯಾವುದಾದರೊಂದು ಕಾರ್ಯನಿಮಿತ್ತದಿಂದ ವಸತಿಯನ್ನು ಮಾಡಿಕೊಂಡರೆ ಅದನ್ನು ಪ್ರಾಜ್ಞರು ವಸತಿಯೆಂಬ ನಾಮಾಂಕನದಿಂದ ಕರೆಯುವರು.

೫೨. ಕ್ಷೇತ್ರಗಳಿಂದ ರಹಿತವೂ, ದುಷ್ಟಜನರ ಗುಂಪಿನಿಂದಕೂಡಿರುವುದೂ, ಪರಭೂಮಿಯನ್ನು ಆಕ್ರಮಿಸಿ ಕಲ್ಪಿಸಿಕೊಂಡಿರುವುದೂ ಮತ್ತು ರಾಜವಲ್ಲಭರ ಆಶ್ರಯದಿಂದ ಬಲಿಷ್ಠವೂ ಆದ ಗ್ರಾಮವು ದ್ರಮೀ ಎಂಬ ನಾಮಾಂಕವನ್ನು ಹೊಂದುವುದು.

೫೩. ಗಾಡಿಗಳಲ್ಲಿ ಹೇರುವ ಪಾತ್ರೋಪಕರಣಗಳಿಂದ ಕೂಡಿದವರೂ ಗೋಧನವನ್ನು ಹೊಂದಿದವರೂ ಆದ ಗೋಪಾಲಕರು ವಾಸಮಾಡುವ, ಅಂಗಡಿಗಳಿಲ್ಲದ ಮತ್ತು ಇಷ್ಟಾನುಸಾರವಾಗಿ ಅಲ್ಲಲ್ಲಿ ವಸತಿಯನ್ನು ಮಾಡಿಕೊಂಡಿರುವ ಪ್ರದೇಶವು ಘೋಷವೆನಿಸುವುದು.

ತ ಏವಂ ನಗರಾದೀಂಸ್ತು ಕೃತ್ವಾ ವಾಸಾರ್ಥಮಾತ್ಮನಃ ।
ನಿಕೇತನಾನಿ ದ್ವನ್ದ್ವಾನಾಂ ಚಕ್ರುಶ್ಚೋಪಶಮಾಯ ವೈ ॥೫೪॥

ಗೃಹಾಕಾರಾ ಯಥಾಪೂರ್ವಂ ತೇಷಾಮಾಸನ್ಮಹೀರುಹಾಃ ।
ತಥಾ ಸಂಸ್ಮೃತ್ಯ ತತ್ಸರ್ವಂ ಚಕ್ರುರ್ವೇಶ್ಮಾನಿ ತಾಃ ಪ್ರಜಾಃ ॥೫೫॥

ವೃಕ್ಷಸ್ಯೈವಙ್ಗತಾಃ ಶಾಖಾಸ್ತಥೈವಂ ಚಾಪರಾ ಗತಾಃ ।
ನತಾಶ್ಚೈವೋನ್ನತಾಶ್ಚೈವ ತದ್ವಚ್ಚಾಲಾಃ ಪ್ರಚಕ್ರಿರೇ ॥೫೬॥

ಯಾಃ ಶಾಖಾಃ ಕಲ್ಪವೃಕ್ಷಾಣಾಂ ಪೂರ್ವಮಾಸನ್ ದ್ವಿಜೋತ್ತಮ ।
ತಾ ಏವ ಶಾಖಾ ಗೇಹಾನಾಂ ಶಾಲಾತ್ವಂ ತೇನ ತಾಸು ತತ್ ॥೫೭॥

---

೫೪. ಹೀಗೆ ಆ ಪ್ರಜೆಗಳು ಶೀತ-ಉಷ್ಣ ಮುಂತಾದ ದ್ವಂದ್ವದುಃಖಗಳ ಪರಿಹಾರಕ್ಕೆ ಗ್ರಾಮ-ನಗರ ಮುಂತಾದುವುಗಳನ್ನು ರಚಿಸಿಕೊಂಡು ಅವುಗಳಲ್ಲಿ ತಮ್ಮ ವಾಸಕ್ಕೋಸ್ಕರ ಮನೆಗಳನ್ನು ಮಾಡಿಕೊಂಡರು.

೫೫. ಹಿಂದೆ ಆಕಾಶದಿಂದ ಬಿದ್ದ ಕ್ಷೀರಧಾರೆಗಳು ಯಾವರೀತಿಯಲ್ಲಿ ಮನೆಯ ಆಕಾರದ ವೃಕ್ಷಗಳಾಗಿದ್ದುವೋ ಆ ಆಕಾರವನ್ನು ಸ್ಮರಿಸಿಕೊಂಡು ಪ್ರಜೆಗಳು ಮನೆಮುಂತಾದುವುಗಳನ್ನು ಕಲ್ಪಿಸಿಕೊಂಡರು.

೫೬. ಮರಗಳ ಶಾಖೆಗಳು ಶಾಲೆಯ ಆಕಾರವನ್ನು ಹೊಂದಿಕೊಂಡಿರುವಂತೆ ಕೆಲವು ಎತ್ತರ–ತಗ್ಗಾಗಿಯೂ ಮತ್ತೆ ಕೆಲವು ಅಡ್ಡಡ್ಡವಾಗಿಯೂ ಸರ್ವತೋಮುಖವಾಗಿ ಬೆಳೆದುಕೊಂಡಿದ್ದುವು. ಅದನ್ನು ನೆನೆಸಿಕೊಂಡು ಅದರಂತೆ ವಸತಿಯನ್ನು ನಿರ್ಮಿಸಿದರು.

೫೭. ದ್ವಿಜಶ್ರೇಷ್ಠನಾದ ಕ್ರೌಷ್ಟುಕಿಯೆ ! ಹಿಂದೆ ಕಲ್ಪವೃಕ್ಷಗಳ ಯಾವ ಶಾಖೆಗಳು ಶಾಲಾರೂಪವನ್ನು ಹೊಂದಿಕೊಂಡಿದ್ದುವೋ ಅವು ಮನೆಗಳ ಉಪಕರಣಗಳಾದ ಶಾಖೆಗಳಾದುದರಿಂದ ಅವುಗಳಲ್ಲಿ ಶಾಲಾರೂಪವುಂಟಾಯಿತು.

ಕೃತ್ವಾ ದ್ವನ್ದ್ವೋಪಘಾತಂ ತೇ ವಾರ್ತೋಪಾಯಮಚಿನ್ತಯನ್ ।
ನಷ್ಟೇಷು ಮಧುನಾ ಸಾರ್ಧಂ ಕಲ್ಪವೃಕ್ಷೇಷ್ವಶೇಷತಃ ॥೫೮॥

ವಿಷಾದವ್ಯಾಕುಲಾಸ್ತಾ ವೈ ಪ್ರಜಾಸ್ತೃಷ್ಣಾಕ್ಷುಧಾರ್ದಿತಾಃ ।
ತತಃ ಪ್ರಾದುರ್ಬಭೌ ತಾಸಾಂ ಸಿದ್ಧಿಸ್ತ್ರೇತಾಮುಖೇ ತದಾ ॥೫೯॥

ವಾರ್ತಾ ಸ್ವಸಾಧಿತಾ ಹ್ಯನ್ಯಾ ವೃಷ್ಟಿಸ್ತಾಸಾಂ ನಿಕಾಮತಃ ।
ತಾಸಾಂ ವೃಷ್ಟ್ಯುದಕಾನೀಹ ಯಾನಿ ನಿಮ್ನಗತಾನಿ ವೈ ॥೬೦॥

ವೃಷ್ಟ್ಯಾವರುದ್ಧೈರಭವನ್ ಸ್ರೋತಃಖಾತಾನಿ ನಿಮ್ನಗಾಃ ।
ಯೇ ಪುರಸ್ತಾದಪಾಂ ಸ್ತೋಕಾ ಆಪನ್ನಾಃ ಪೃಥಿವೀತಲೇ ॥೬೧॥

---

೫೮. ತರುವಾಯ ಕಲ್ಪವೃಕ್ಷಗಳು ತಮ್ಮಲ್ಲಿ ಲಭಿಸುವ ಮಧುರಸದ ಸಂಗಡ ಸಂಪೂರ್ಣವಾಗಿ ನಾಶಹೊಂದಿರಲು ಹೀಗೆ ಮನೆಗಳನ್ನು ನಿರ್ಮಿಸಿ-ಕೊಂಡು ದ್ವಂದ್ವದುಃಖಪರಿಹಾರವನ್ನು ಮಾಡಿಕೊಂಡಿರುವ ಪ್ರಜೆಗಳು ಜೀವನೋಪಾಯವನ್ನು ಚಿಂತಿಸಿದರು.

೫೯. ಆಗ ಆ ಪ್ರಜೆಗಳು ಹಸಿವು-ನೀರಡಿಕೆಗಳಿಂದ ಪೀಡಿಸಲ್ಪಟ್ಟವರೂ, ಚಿಂತೆವಿಷಾದಗಳಿಂದ ಕೂಡಿದವರೂ ಆದರು. ತ್ರೇತಾಯುಗದ ಆದಿಭಾಗದಲ್ಲಿ ಮತ್ತೊಂದು ಬಗೆಯ ಸಿದ್ಧಿಯು ಪ್ರಜೆಗಳಿಗೆ ದೊರಕಿತು.

೬೦. ಆ ಪ್ರಸಂಗದಲ್ಲಿ ಸ್ವಪ್ರಯತ್ನದಿಂದ ಸಾಧಿಸುವ ಒಂದು ಸಿದ್ಧಿಯುಂಟಾಯಿತು. ಪ್ರಜೆಗಳ ಇಷ್ಟದಂತೆ ಮಳೆಯು ಬೀಳುತ್ತಿತ್ತು. ಮಳೆಯ ನೀರು ಅಲ್ಲಲ್ಲಿ ಹಳ್ಳಗಳಲ್ಲಿ ತುಂಬಿಕೊಳ್ಳುತ್ತಿತ್ತು.

೬೧. ಹಾಗೆ ಮಳೆಯ ನೀರಿನಿಂದ ಅಲ್ಲಲ್ಲಿ ಅನೇಕ ಪ್ರವಾಹಗಳು, ಕೆರೆ-ಕೊಳಗಳು ಮತ್ತು ನದಿಗಳು ಜನಿಸಿದುವು. ಹಾಗೆ ಪೃಥಿವಿಯಲ್ಲಿ ಮುಂಗಾರು-ಮಳೆಯ ನೀರಿನ ಬಿಂದುಗಳು ಬೀಳುತ್ತಿದ್ದುವು.

ತತೋ ಭೂಮೇಶ್ಚ ಸಂಯೋಗಾದೋಷಧ್ಯಸ್ತಾಸ್ತದಾಭವನ್ ।
ಅಫಾಲಕೃಷ್ಟಾಶ್ಚಾನುಪ್ತಾ ಗ್ರಾಮಾರಣ್ಯಾಶ್ಚತುರ್ದಶ ॥೬೨॥

ಋತುಪುಷ್ಪಫಲಾಶ್ಚೈವ ವೃಕ್ಷಾ ಗುಲ್ಮಾಶ್ಚ ಜಜ್ಞಿರೇ ।
ಪ್ರಾದುರ್ಭಾವಸ್ತು ತ್ರೇತಾಯಾಮಾದ್ಯೋಽಯಮೌಷಧಸ್ಯ ತು॥೬೩॥

ತೇನೌಷಧೇನ ವರ್ತನ್ತೇ ಪ್ರಜಾಸ್ತ್ರೇತಾಯುಗೇ ಮುನೇ ।
ರಾಗಲೋಭೌ ಸಮಾಸಾದ್ಯ ಪ್ರಜಾಶ್ಚಾಕಸ್ಮಿಕೌ ತದಾ ॥೬೪॥

ತತಸ್ತಾಃ ಪರ್ಯಗೃಹ್ಣನ್ತ ನದೀಕ್ಷೇತ್ರಾಣಿ ಪರ್ವತಾನ್ ।
ವೃಕ್ಷಗುಲ್ಮೌಷಧೀಶ್ಚೈವ ಮಾತ್ಸರ್ಯಾಚ್ಚ ಯಥಾಬಲಮ್ ॥೬೫॥

---

೬೨. ಹಾಗೆ ಬಿದ್ದಿರುವ ಮಳೆಯ ನೀರಿನ ಬಿಂದುಗಳಿಗೆ ಭೂಮಿ-ಸಂಪರ್ಕವುಂಟಾಗಿ ಆಗ ನೇಗಿಲದಿಂದ ಉಳದಿರುವ ಭೂಮಿಯಲ್ಲಿ ಬೀಜಗಳ-ಬಿತ್ತಣೆಯಿಲ್ಲದ ಗ್ರಾಮ್ಯ-ಆರಣ್ಯವೆಂಬ ಹದಿನಾಲ್ಕು ಬಗೆಯ ಸಸ್ಯಗಳು ಜನಿಸಿದುವು.

೬೩. ಮತ್ತು ಆಯಾಯ ಋತುಗಳಲ್ಲಿ ವಿಶೇಷವಾದ ಫಲ-ಪುಷ್ಪ-ಗಳಿಂದ ಕೂಡಿರುವ ವೃಕ್ಷಗಳೂ ಪೊದೆಗಳೂ ಹುಟ್ಟಿದುವು. ಹೀಗೆ ತ್ರೇತಾಯುಗ-ದಲ್ಲಿ ಸಸ್ಯವರ್ಗದ ಉತ್ಪತ್ತಿಯು ಮೊದಲನೆಯದಾಗಿ ಕಾಣಿಸಿಕೊಂಡಿತು.

೬೪. ಕ್ರೌಷ್ಟುಕಿಮುನಿಯೆ! ತ್ರೇತಾಯುಗದಲ್ಲಿ ಆಕಸ್ಮಿಕವಾದ ರಾಗ-ಲೋಭಗಳೆಂಬ ದೋಷಗಳನ್ನು ಹೊಂದಿದ ಪ್ರಜೆಗಳು ವೃಷ್ಟಿಸಿದ್ಧಿಯಿಂದ ಜನಿಸಿದ ಓಷಧಗಳಿಂದ ಜೀವನವನ್ನು ನಡೆಯಿಸಿದರು.

೬೫. ತರುವಾಯ ಆ ಪ್ರಜೆಗಳು ಅನ್ಯೋನ್ಯ ಮಾತ್ಸರ್ಯವನ್ನು ಹೊಂದಿ ತಮ್ಮ ತಮ್ಮ ಶಕ್ತಿಗನುಗುಣವಾಗಿ ಲಭಿಸಿದ ನದಿ, ಕ್ಷೇತ್ರ, ಪರ್ವತ, ವೃಕ್ಷ, ಪೊದೆ ಮತ್ತು ಓಷಧಿ ಮುಂತಾದುವುಗಳನ್ನು ಆಶ್ರಯಿಸಿದರು.

ತೇನ ದೋಷೇಣ ತಾ ನೇಶುರೋಷಧ್ಯೋ ಮಿಷತಾಂ ದ್ವಿಜ ।
ಅಗ್ರಸದ್ಭ್ಯೋರ್ಯುಗಪತ್ತಾಸ್ತದೋಷಧ್ಯೋ ಮಹಾಮತೇ ॥೬೬॥

ಪುನಸ್ತಾಸು ಪ್ರಣಷ್ಟಾಸು ವಿಭ್ರಾನ್ತಾಸ್ತಾಃ ಪುನಃ ಪ್ರಜಾಃ ।
ಬ್ರಹ್ಮಾಣಂ ಶರಣಂ ಜಗ್ಮುಃ ಕ್ಷುಧಾರ್ತಾಃ ಪರಮೇಷ್ಠಿನಮ್ ॥೬೭॥

ಸ ಚಾಪಿ ತತ್ತ್ವತೋ ಜ್ಞಾತ್ವಾ ತದಾ ಗ್ರಸ್ತಾಂ ವಸುನ್ಧರಾಮ್ ।
ವತ್ಸಂ ಕೃತ್ವಾ ಸುಮೇರುಂ ತು ದುದೋಹ ಭಗವಾನ್ವಿಭುಃ ॥೬೮॥

ದುಗ್ಧೇಯಂ ಗೌಸ್ತದಾ ತೇನ ಸಸ್ಯಾನಿ ಪೃಥಿವೀತಲೇ ।
ಜಜ್ಞಿರೇ ತಾನಿ ಬೀಜಾನಿ ಗ್ರಾಮ್ಯಾರಣ್ಯಾಸ್ತು ತಾಃ ಪುನಃ ॥೬೯॥

---

೬೬. ದ್ವಿಜೋತ್ತಮನೆ! ಪ್ರಜೆಗಳಲ್ಲಿ ಉಂಟಾದ ಮಾತ್ಸರ್ಯದೋಷದಿಂದ ಅವರು ನೋಡುತ್ತಿರುವ ಹಾಗೆಯೇ ಓಷಧಿಗಳು ನಾಶಹೊಂದಿದುವು. ಮಹಾಪ್ರಜ್ಞಾವಂತನೇ! ಭೂಮಿಯು ಒಂದೇಸಲ ಎಲ್ಲ ಓಷಧಿಗಳನ್ನು ನುಂಗಿಹಾಕಿತು.

೬೭. ಮತ್ತೆ ಆ ಓಷಧಿವರ್ಗವು ನಾಶಹೊಂದಲು ಮೊದಲಿನಂತೆ ಕಂಗೆಟ್ಟುಹೋದ ಆ ಪ್ರಜೆಗಳು ಹಸಿವಿನಿಂದ ಪೀಡಿತರಾಗಿ ದಿವ್ಯಸ್ಥಾನದಲ್ಲಿದ್ದ ಬ್ರಹ್ಮದೇವನನ್ನು ಶರಣುಹೊಂದಿದರು.

೬೮. ಮಹಾಮಹಿಮನೂ ಸರ್ವೇಶ್ವರನೂ ಆದ ಬ್ರಹ್ಮದೇವನು ಭೂಮಿಯು ಓಷಧಿಗಳನ್ನು ನುಂಗಿರುವ ವಸ್ತುಸ್ಥಿತಿಯನ್ನು ಅರಿತು ಆಗ ಸುಮೇರು ಪರ್ವತವನ್ನು ಕರುವನ್ನಾಗಿ ಕಲ್ಪಿಸಿಕೊಂಡು ಗೋರೂಪವಾದ ಭೂಮಿಯಲ್ಲಿ ಹಾಲನ್ನು ಕರೆದನು.

೬೯. ಬ್ರಹ್ಮದೇವನು ಗೋರೂಪವಾದ ಭೂಮಿಯಲ್ಲಿ ಹಾಲನ್ನು ಕರೆಯಲು ಆಗ ಭೂಮಿಯಲ್ಲಿ ಅನೇಕ ಸಸ್ಯಗಳು ಬೆಳೆದು ಅವುಗಳಿಂದ ಗ್ರಾಮ್ಯ-ಆರಣ್ಯವೆಂಬ ಅನೇಕಬಗೆಯ ಧಾನ್ಯಗಳು ಮತ್ತೆ ಹುಟ್ಟಿದುವು.

ಓಷಧ್ಯಃ ಫಲಪಾಕಾನ್ತಾ ಗಣಾಃ ಸಪ್ತದಶ ಸ್ಮೃತಾಃ ।
ವ್ರೀಹಯಶ್ಚ ಯವಾಶ್ಚೈವ ಗೋಧೂಮಾ ಅಣವಸ್ತಿಲಾಃ ॥೭೦॥

ಪ್ರಿಯಙ್ಗವಃ ಕೋವಿದಾರಾಃ ಕೋರದೂಷಾಃ ಸತೀನಕಾಃ ।
ಮಾಷಾ ಮುದ್ಗಾ ಮಸೂರಾಶ್ಚ ನಿಷ್ಪಾವಾಃ ಸಕುಲತ್ಥಕಾಃ ॥೭೧॥

ಆಢಕ್ಯಶ್ಚಣಕಾಶ್ಚೈವ ಶಣಾಃ ಸಪ್ತದಶ ಸ್ಮೃತಾಃ ।
ಇತ್ಯೇತಾ ಓಷಧೀನಾಂ ತು ಗ್ರಾಮ್ಯಾಣಾಂ ಜಾತಯಃ ಪುರಾ ॥೭೨॥

ಓಷಧ್ಯೋ ಯಜ್ಞಿಯಾಶ್ಚೈವ ಗ್ರಾಮ್ಯಾರಣ್ಯಾಶ್ಚತುರ್ದಶ ।
ವ್ರೀಹಯಶ್ಚ ಯವಾಶ್ಚೈವ ಗೋಧೂಮಾ ಅಣವಸ್ತಿಲಾಃ ॥೭೩॥

ಪ್ರಿಯಙ್ಗುಷಷ್ಠಾ ಹ್ಯೇತೇ ಸಪ್ತಮಾಸ್ತು ಕುಲತ್ಥಕಾಃ ।
ಶ್ಯಾಮಾಕಾಸ್ತ್ವಥ ನೀವಾರಾ ಜರ್ತಿಲಾಃ ಸಗವೇಧುಕಾಃ ॥೭೪॥

---

೭೦. ಧಾನ್ಯಗಳು ಪಾಕಹೊಂದುವ ಸುಗ್ಗಿಯಿಂದ ಕೂಡಿದ ಸಸ್ಯ-ವರ್ಗವು ಹದಿನೇಳುಜಾತಿಯಾಗಿದೆಯೆಂದು ಸ್ಮರಿಸಲ್ಪಟ್ಟಿದೆ. ಅವುಗಳಲ್ಲಿ ಗ್ರಾಮ್ಯಜಾತಿಯ ಧಾನ್ಯಗಳಲ್ಲಿ ಭತ್ತ, ಜವೆ, ಗೋಧಿ, ರಾಗಿ ಮತ್ತು ಎಳ್ಳು—ಈ ಧಾನ್ಯಗಳು ಸೇರಿಕೊಂಡಿವೆ.

೭೧. ಹಾಗು ನವಣೆ, ಸಾಮೆ, ಜೋಳ, ಕಡಲೆಕಾಯಿ, ಉದ್ದು, ಹೆಸರು, ಅಳಸಂದೆ, ಅವರೆ ಮತ್ತು ಹುರುಳಿ—ಎಂಬುವು ಒಂಭತ್ತು ಗ್ರಾಮ್ಯ-ಜಾತಿಯ ಧಾನ್ಯವರ್ಗದಲ್ಲಿ ಸೇರಿಕೊಂಡಿವೆ.

೭೨. ಮತ್ತು ತೊಗರಿ, ಹಸಿಕಡಲೆ, ಶಣಧಾನ್ಯ—ಇವು ಸೇರಿ ಒಟ್ಟು ಹದಿನೇಳುಬಗೆಯ ಧಾನ್ಯಗಳು ಸ್ಮರಿಸಲ್ಪಟ್ಟಿವೆ. ಈ ಓಷಧಿಗಳೆಲ್ಲವೂ ಹಿಂದೆ ಜನಿಸಿದ ಗ್ರಾಮ್ಯಜಾತಿಯ ಓಷಧಿಗಳಾಗಿವೆ.

೭೩. ಇವುಗಳಲ್ಲಿ ಗ್ರಾಮ್ಯ ಅಥವಾ ಆರಣ್ಯಜಾತಿಗೆ ಸೇರಿದ ಹದಿನಾಲ್ಕು ಬಗೆಯ ಓಷಧಿಗಳು ಯಜ್ಞಾರ್ಹವಾಗಿದ್ದುವು. ಭತ್ತ, ಜವೆ, ಗೋಧಿ, ರಾಗಿ ಮತ್ತು ಎಳ್ಳು—ಇವು ಯಜ್ಞಾರ್ಹವಾದ ಓಷಧಿವರ್ಗಕ್ಕೆ ಸೇರಿದುವು.

೭೪. ಮತ್ತು ನವಣೆ, ಹುರುಳಿ, ನೀವಾರ, ಶ್ಯಾಮಾಕ, ಜರ್ತಿಲ, ಗವೇಧುಕ—ಎಂಬ ಈ ಆರುಜಾತಿಯ ಧಾನ್ಯಗಳು ಯಜ್ಞಾರ್ಹವಾಗಿರುವುವು. ಇವು ಯಾಜ್ಞಿಕರಲ್ಲಿ ಪ್ರಸಿದ್ಧಿಹೊಂದಿದ ಧಾನ್ಯಗಳಾಗಿವೆ.

ಕುರುವಿನ್ದಾ ಮರ್ಕಟಕಾಸ್ತಥಾ ವೇಣುಯವಾಶ್ಚ ಯೇ ।
ಗ್ರಾಮ್ಯಾರಣ್ಯಾಃ ಸ್ಮೃತಾ ಹ್ಯೇತಾ ಓಷಧ್ಯಶ್ಚ ಚತುರ್ದಶ ॥೭೫॥

ಯದಾ ಪ್ರಸೃಷ್ಟಾ ಓಷಧ್ಯೋ ನ ಪ್ರರೋಹನ್ತಿ ತಾಃ ಪುನಃ ।
ತತಃ ಸ ತಾಸಾಂ ವೃದ್ಧ್ಯರ್ಥಂ ವಾರ್ತೋಪಾಯಂ ಚಕಾರ ಹ ॥೭೬॥

ಬ್ರಹ್ಮಾ ಸ್ವಯಮ್ಭೂರ್ಭಗವಾನ್ ಹಸ್ತಸಿದ್ಧಿಂ ಚ ಕರ್ಮಜಾಮ್ ।
ತತಃ ಪ್ರಭೃತ್ಯಥೌಷಧ್ಯಃ ಕೃಷ್ಟಪಚ್ಯಾಸ್ತು ಜಜ್ಞಿರೇ ॥೭೭॥

ಸಂಸಿದ್ಧಾಯಾಂ ತು ವಾರ್ತಾಯಾಂ ತತಸ್ತಾಸಾಂ ಸ್ವಯಂ ಪ್ರಭುಃ ।
ಮರ್ಯಾದಾಂ ಸ್ಥಾಪಯಾಮಾಸ ಯಥಾನ್ಯಾಯಂ ಯಥಾಗುಣಮ್ ॥೭೮॥

---

೭೫. ಮತ್ತು ಕುರುವಿಂದ, ಮರ್ಕಟಕ, ಬಿದುರಕ್ಕಿ—ಎಂಬುವು ಸೇರಿ ಗ್ರಾಮ್ಯ-ಆರಣ್ಯ ಜಾತಿಯ ಧಾನ್ಯಕ್ಕೆ ಸೇರಿದ ಹದಿನಾಲ್ಕು ಬಗೆಯ ಓಷಧಿಗಳು ಯಜ್ಞಕರ್ಮಕ್ಕೆ ಅರ್ಹವಾಗಿದ್ದುವು.

೭೬. ಬ್ರಹ್ಮದೇವನು ಸೃಷ್ಟಿಮಾಡಿದ ಓಷಧಿಗಳು ಯಾವಾಗ ಮತ್ತೆ ಬೆಳೆಯಲಾರದೇ ಹೋದುವೋ ಆಗ ಓಷಧಿಗಳ ವೃದ್ಧಿಗೋಸ್ಕರವೂ ತನ್ಮೂಲಕ-ವಾಗಿ ಪ್ರಜೆಗಳ ಜೀವನಲಾಭಕ್ಕೂ ಉಪಾಯವನ್ನು ರಚಿಸಿದನು.

೭೭. ಸ್ವಸಂಕಲ್ಪದಿಂದ ಆವಿರ್ಭವಿಸುವವನೂ, ಅಪಾರಮಹಿಮನೂ ಆದ ಬ್ರಹ್ಮದೇವನು ಕೃಷಿಕರ್ಮದಿಂದ ಧಾನ್ಯವನ್ನು ಹೊಂದುವ ಹಸ್ತಸಿದ್ಧಿಯನ್ನು ಕೊಟ್ಟನು. ಆಗಿನಿಂದ ಉತ್ತು-ಬಿತ್ತಿ ಬೆಳೆಯುವ ಓಷಧಿಗಳು ಬೆಳೆಯುತ್ತ ಬಂದುವು.

೭೮. ಹೀಗೆ ಪ್ರಜೆಗಳಿಗೆ ಜೀವನೋಪಾಯವು ಸ್ಥಿರವಾಗಿ ಸಿದ್ಧಿಹೊಂದಿದ ಬಳಿಕ ಸ್ವಯಂಪ್ರಕಾಶನಾದ ಬ್ರಹ್ಮದೇವನು ಆಯಾಯ ಪ್ರಜೆಗಳ ಗುಣ-ನ್ಯಾಯ-ಗಳಿಗೆ ಅನುರೂಪವಾಗಿ ಸ್ಥಿತಿ ಮರ್ಯಾದೆಯನ್ನು ಕಲ್ಪಿಸಿದನು.

ವರ್ಣಾನಾಮಾಶ್ರಮಾಣಾಂ ಚ ಧರ್ಮಾನ್ ಧರ್ಮಭೃತಾಂ ವರ ।
ಲೋಕಾನಾಂ ಸರ್ವವರ್ಣಾನಾಂ ಸಮ್ಯಗ್ಧರ್ಮಾರ್ಥಪಾಲಿನಾಮ್ ॥೭೯॥

ಪ್ರಾಜಾಪತ್ಯಂ ಬ್ರಾಹ್ಮಣಾನಾಂ ಸ್ಮೃತಂ ಸ್ಥಾನಂ ಕ್ರಿಯಾವತಾಮ್ ।
ಸ್ಥಾನಮೈನ್ದ್ರಂ ಕ್ಷತ್ರಿಯಾಣಾಂ ಸಂಗ್ರಾಮೇಷ್ವಪಲಾಯಿನಾಮ್ ॥೮೦॥

ವೈಶ್ಯಾನಾಂ ಮಾರುತಂ ಸ್ಥಾನಂ ಸ್ವಧರ್ಮಮನುವರ್ತತಾಮ್ ।
ಗಾನ್ಧರ್ವಂ ಶೂದ್ರಜಾತೀನಾಂ ಪರಿಚರ್ಯಾನುವರ್ತಿನಾಮ್ ॥೮೧॥

ಅಷ್ಟಾಶೀತಿಸಹಸ್ರಾಣಾಮೃಷೀಣಾಮೂರ್ಧ್ವರೇತಸಾಮ್ ।
ಸ್ಮೃತಂ ತೇಷಾಂ ತು ಯತ್ ಸ್ಥಾನಂ ತದೇವ ಗುರುವಾಸಿನಾಮ್॥೮೨॥

---

೭೯. ಧಾರ್ಮಿಕೋತ್ತಮನಾದ ಕ್ರೌಷ್ಟುಕಿಯೆ ! ಸರಿಯಾಗಿ ಧರ್ಮ-ಅರ್ಥ ಮುಂತಾದ ಪುರುಷಾರ್ಥಗಳನ್ನು ಪಾಲಿಸುವ, ಆಯಾಯ ವರ್ಣಗಳಿಗೆ ಸೇರಿದ ಪ್ರಜೆಗಳು ಆಚರಿಸಬೇಕಾದ ವರ್ಣಧರ್ಮ ಮತ್ತು ಆಶ್ರಮಧರ್ಮ—ಇವುಗಳನ್ನು ನಿರ್ಮಿಸಿದನು.

೮೦. ಹಾಗೆ ವಿಧಿಸಿದ ವರ್ಣಾಶ್ರಮ ಧರ್ಮಗಳನ್ನು ಆಚರಿಸುವ ವಿಪ್ರರಿಗೆ ಪ್ರಾಜಾಪತ್ಯಸ್ಥಾನವೆಂಬ ಸದ್ಗತಿಯು ಲಭಿಸುವುದೆಂದು ಸ್ಮರಿಸಲ್ಪಟ್ಟಿದೆ. ಹಾಗು ಯುದ್ಧದಲ್ಲಿ ಹಿಮ್ಮುಖರಾಗಿ ಧಾವಿಸದಿರುವ ವೀರಕ್ಷತ್ರಿಯರಿಗೆ ಇಂದ್ರಸ್ಥಾನವು ಲಭಿಸುವುದು.

೮೧. ಸ್ವಧರ್ಮವನ್ನು ಆಚರಿಸುವ ವೈಶ್ಯರಿಗೆ ಮಾರುತಸ್ಥಾನವೆಂಬ ಸದ್ಗತಿಯು ದೊರಕುವುದು. ಮತ್ತು ತ್ರೈವರ್ಣಿಕರ ಶುಶ್ರೂಷೆಯೆಂಬ ಸ್ವಧರ್ಮವನ್ನು ಪಾಲಿಸುವ ಶೂದ್ರರಿಗೆ ಗಾಂಧರ್ವಪದವೆಂಬ ಸದ್ಗತಿಯುಂಟಾಗುವುದು.

೮೨. ಯಾವಜ್ಜೀವವಾಗಿ ಗುರುಕುಲದಲ್ಲಿ ವಾಸಮಾಡುವ ನೈಷ್ಠಿಕ ಬ್ರಹ್ಮಚಾರಿಗಳಿಗೆ ಊರ್ಧ್ವರೇತ ನಾಮಾಂಕಿತರಾದ ಎಂಭತ್ತೆಂಟು ಸಹಸ್ರಮಂದಿ ಮುನಿಗಳು ವಾಸಮಾಡುವ ಉತ್ತಮಸ್ಥಾನವು ಫಲವಾಗಿ ಲಭಿಸುವುದು.

ಸಪ್ತರ್ಷೀಣಾಂ ತು ಯತ್ಸ್ಥಾನಂ ಸ್ಮೃತಂ ತದ್ವೈ ವನೌಕಸಾಮ್ ।
ಪ್ರಾಜಾಪತ್ಯಂ ಗೃಹಸ್ಥಾನಾಂ ನ್ಯಾಸಿನಾಂ ಬ್ರಹ್ಮಣಃ ಕ್ಷಯಮ್॥೪೩॥

ಯೋಗಿನಾಮಮೃತಂ ಸ್ಥಾನಮಿತಿ ವೈ ಸ್ಥಾನಕಲ್ಪನಾ ॥೪೪॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಸೃಷ್ಟಿಪ್ರಕರಣೇ
ಷಟ್ಚತ್ವಾರಿಂಶೋಽಧ್ಯಾಯಃ

---

೪೩. ವಾನಪ್ರಸ್ಥಾಶ್ರಮ ಧರ್ಮಾವಲಂಬಿಗಳಿಗೆ ಸಪ್ತರ್ಷಿಗಳ ಸ್ಥಾನವು ಲಭ್ಯವಾಗುವುದು. ಗೃಹಸ್ಥಾಶ್ರಮಿಗಳಿಗೆ ಪ್ರಾಜಾಪತ್ಯಸ್ಥಾನವು ಲಭಿಸುತ್ತದೆ. ಮತ್ತು ಸನ್ಯಾಸಿಗಳಿಗೆ ಬ್ರಹ್ಮಲೋಕಸ್ಥಾನವು ಪ್ರಾಪ್ತಿಯಾಗುವುದು.

೪೪. ಹಾಗು ಯೋಗಾಭ್ಯಾಸಪರರಾದವರಿಗೆ ಸರ್ವೋತ್ತಮವಾದ ಅಮೃತಸ್ಥಾನವು ದೊರಕುವುದು. ಹೀಗೆ ಆಯಾಯ ವರ್ಣಧರ್ಮ-ಆಶ್ರಮಧರ್ಮ ಅವಲಂಬಿಗಳಿಗೆ ದೊರಕುವ ಸ್ಥಾನಗಳ ಕಲ್ಪನೆಯು ಪ್ರಸಿದ್ಧವಾಗಿದೆ.

ಮಾರ್ಕಂಡೇಯ ಮಹಾಪುರಾಣದಲ್ಲಿ ನಲವತ್ತಾರನೆಯ ಅಧ್ಯಾಯವು
ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಸಪ್ತಚತ್ವಾರಿಂಶೋಽಧ್ಯಾಯಃ

(ಯಕ್ಷ್ಮಾನುಶಾಸನಮ್)

ಮಾರ್ಕಣ್ಡೇಯ ಉವಾಚ :—

ತತೋಽಭಿಧ್ಯಾಯತಸ್ತಸ್ಯ ಜಜ್ಞಿರೇ ಮಾನಸೀಃ ಪ್ರಜಾಃ ।
ತಚ್ಛರೀರಸಮುತ್ಪನ್ನೈಃ ಕಾರ್ಯೈಸ್ತೈಃ ಕಾರಣೈಃ ಸಹ ||೧||

ಕ್ಷೇತ್ರಜ್ಞಾಃ ಸಮವರ್ತನ್ತ ಗಾತ್ರೇಭ್ಯಸ್ತಸ್ಯ ಧೀಮತಃ ।
ತೇ ಸರ್ವೇ ಸಮವರ್ತನ್ತ ಯೇ ಮಯಾ ಪ್ರಾಗುದಾಹೃತಾಃ ||೨||

ನಲವತ್ತೇಳನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೀಗೆ ಹೇಳಿದನು :—

೧. ತರುವಾಯ ಸೃಷ್ಟಿಕ್ರಮವನ್ನು ಧ್ಯಾನಿಸುತ್ತಿದ್ದ ಬ್ರಹ್ಮದೇವನಿಂದ ಅವನ ದೇಹಾವಯವಗಳಿಂದ ಜನಿಸಿದ ಕಾರ್ಯ-ಕಾರಣಗಳೆಂದು ಕರೆಯಲ್ಪಡುವ ದೇಹೇಂದ್ರಿಯಗಳೊಡನೆ ಮಾನಸರಾದ ಪ್ರಜೆಗಳು ಜನಿಸಿದರು.

೨. ಸರ್ವಜ್ಞನಾದ ಆ ಬ್ರಹ್ಮದೇವನ ಅವಯವಗಳಿಂದ ಅನೇಕಮಂದಿ ಕ್ಷೇತ್ರಜ್ಞರೆನಿಸಿದ ಪ್ರಜಾಪತಿಗಳು ಜನಿಸಿದರು. ಹಿಂದೆ ನನ್ನಿಂದ ಹೇಳಲ್ಪಟ್ಟ ದೇವ—ಮುಂತಾದವರೆಲ್ಲರೂ ಆಗ ಜನ್ಮವೆತ್ತಿದರು.

ದೇವಾದ್ಯಾಃ ಸ್ಥಾವರಾನ್ತಾಶ್ಚ ತ್ರೈಗುಣ್ಯವಿಷಯಾಃ ಸ್ಮೃತಾಃ ।
ಏವಂಭೂತಾನಿ ಸೃಷ್ಟಾನಿ ಸ್ಥಾವರಾಣಿ ಚರಾಣಿ ಚ ॥೩॥

ಯದಾಸ್ಯ ತಾಃ ಪ್ರಜಾಃ ಸರ್ವಾ ನ ವ್ಯವರ್ಧನ್ತ ಧೀಮತಃ ।
ಅಥಾನ್ಯಾನ್ಮಾನಸಾನ್ಪುತ್ರಾನ್ಸದೃಶಾನಾತ್ಮನೋಽಸೃಜತ್ ॥೪॥

ಭೃಗುಂ ಪುಲಸ್ತ್ಯಂ ಪುಲಹಂ ಕ್ರತುಮಙ್ಗಿರಸಂ ತಥಾ ।
ಮರೀಚಿಂ ದಕ್ಷಮತ್ರಿಂ ಚ ವಸಿಷ್ಠಂ ಚೈವ ಮಾನಸಮ್ ॥೫॥

ನವ ಬ್ರಹ್ಮಾಣ ಇತ್ಯೇತೇ ಪುರಾಣೇ ನಿಶ್ಚಯಂ ಗತಾಃ
ತತೋಽಸೃಜತ್ಪುನರ್ಬ್ರಹ್ಮಾ ರುದ್ರಂ ಕ್ರೋಧಾತ್ಮಸಮ್ಭವಮ್ ॥೬॥

---

೩. ಸತ್ತ್ವ-ರಜಸ್ಸು-ತಮಸ್ಸು ಎಂಬ ತ್ರಿಗುಣಮಯವಾದ ಫಲ-ಭೋಗವುಳ್ಳ ದೇವ ಮುಂತಾದ ಮತ್ತು ಸ್ಥಾವರಪ್ರಾಣಿ ಕಡೆಯಲ್ಲಿಉಳ್ಳ ಜಂತುಗಳ ಸೃಷ್ಟಿಯಾಯಿತು. ಹೀಗೆ ಸ್ಥಾವರ-ಜಂಗಮರೂಪವಾದ ಪ್ರಾಣಿಗಳು ಸೃಷ್ಟಿಸಲ್ಪಟ್ಟರು.

೪. ಪ್ರಜ್ಞಾಶಾಲಿಯಾದ ಬ್ರಹ್ಮನಿಂದ ಜನಿಸಿದ ಎಲ್ಲ ಪ್ರಜೆಗಳು ಯಾವಾಗ ವೃದ್ಧಿಯನ್ನು ಹೊಂದಲಿಲ್ಲವೋ ಆಗ ತನಗೆ ಸಮಾನವಾದ ಮಹಿಮೆಯುಳ್ಳ, ಬೇರೆಯಾದ ಕೆಲವರು ಮಾನಸಪುತ್ರರನ್ನು ನಿರ್ಮಾಣ-ಮಾಡಿದನು.

೫. ಭೃಗು, ಪುಲಸ್ತ್ಯ, ಪುಲಹ, ಕ್ರತು, ಅಂಗಿರಾ, ಮರೀಚಿ, ದಕ್ಷ, ಅತ್ರಿ ಮತ್ತು ವಸಿಷ್ಠ—ಎಂದು ನಾಮಾಂಕಿತರಾದ ಒಂಭತ್ತು ಮಂದಿಯು ಬ್ರಹ್ಮನ ಮಾನಸಪುತ್ರರಾಗಿ ಜನಿಸಿದರು.

೬. ಭೃಗು ಮುಂತಾದ ಒಂಭತ್ತು ಮಂದಿ ಬ್ರಹ್ಮನ ಮಾನಸಪುತ್ರರು ಪುರಾಣಗಳಲ್ಲಿ ನವಬ್ರಹ್ಮರೆಂದು ವರ್ಣಿಸಲ್ಪಟ್ಟಿರುವರು. ತರುವಾಯ ಬ್ರಹ್ಮ-ದೇವನು ಮತ್ತೆ ಕ್ರೋಧಮೂರ್ತಿಯಿಂದ ಜನಿಸಿದ ರುದ್ರನನ್ನು ಸೃಷ್ಟಿಮಾಡಿದನು.

ಸಙ್ಕಲ್ಪಂ ಚೈವ ಧರ್ಮಂ ಚ ಪೂರ್ವೇಷಾಮಪಿ ಪೂರ್ವಜಮ್ ।
ಸನನ್ದನಾದಯೋ ಯೇ ಚ ಪೂರ್ವಸೃಷ್ಟಾಃ ಸ್ವಯಮ್ಭುವಾ ॥೭॥

ನ ತೇ ಲೋಕೇಷು ಸಜ್ಜನ್ತೇ ನಿರಪೇಕ್ಷಾಃ ಸಮಾಹಿತಾಃ ।
ಸರ್ವೇ ತೇಽನಾಗತಜ್ಞಾನಾ ವೀತರಾಗಾ ವಿಮತ್ಸರಾಃ ॥೮॥

ತೇಷ್ವೇವಂ ನಿರಪೇಕ್ಷೇಷು ಲೋಕಸೃಷ್ಟೌ ಮಹಾತ್ಮನಃ ।
ಬ್ರಹ್ಮಣೋಽಭೂನ್ಮಹಾಕ್ರೋಧಸ್ತತ್ರೋತ್ಪನ್ನೋಽರ್ಕಸನ್ನಿಭಃ ॥೯॥

ಅರ್ಧನಾರೀನರವಪುಃ ಪುರುಷೋಽತಿಶರೀರವಾನ್ ।
ವಿಭಜಾತ್ಮಾನಮಿತ್ಯುಕ್ತ್ವಾ ಸ ತದಾನ್ತರ್ದಧೇ ತತಃ ॥೧೦॥

---

೭. ಮತ್ತು ಪೂರ್ವಿಕರಿಗೆಲ್ಲ ಪೂರ್ವಜನಾದ ಧರ್ಮಪ್ರಜಾಪತಿಯನ್ನೂ ಸಂಕಲ್ಪಪ್ರಜಾಪತಿಯನ್ನೂ ಸೃಷ್ಟಿಸಿದನು. ಹಾಗು ಬ್ರಹ್ಮದೇವನಿಂದ ಸನಂದನ ಮುಂತಾದ ಮಹರ್ಷಿಗಳು ಹಿಂದೆಯೇ ಸೃಷ್ಟಿಸಲ್ಪಟ್ಟಿದ್ದರು.

೮. ಹೀಗೆ ಬ್ರಹ್ಮದೇವನಿಂದ ಸೃಷ್ಟಿಸಲ್ಪಟ್ಟಿರುವ ಪ್ರಜಾಪತಿಗಳೆಲ್ಲರೂ ಭವಿಷ್ಯಜ್ಞಾನವುಳ್ಳವರೂ, ರಾಗ-ಮತ್ಸರವಿಲ್ಲದವರೂ, ನಿರಭಿಮಾನರೂ ಮತ್ತು ಶಾಂತಚಿತ್ತರೂ ಆದುದರಿಂದ ಲೋಕವ್ಯಾಪಾರದಲ್ಲಿ ಪ್ರವೃತ್ತಿಯಿಲ್ಲದವರಾದರು.

೯. ಲೋಕಗಳ ಸೃಷ್ಟಿಯ ವ್ಯಾಪಾರದಲ್ಲಿ ಮಾನಸಪುತ್ರರಾಗಿ ಜನಿಸಿದ ಪ್ರಜಾಪತಿಗಳು ಉದಾಸೀನರಾಗಿರಲು ಮಹಾತ್ಮನಾದ ಬ್ರಹ್ಮನಿಗೆ ಮಹತ್ತಾದ ಕ್ರೋಧವು ಉಂಟಾಯಿತು. ಆ ಕ್ರೋಧದಿಂದ ಸೂರ್ಯನಂತೆ ತೇಜಸ್ವಿಯಾದ ಒಂದು ವ್ಯಕ್ತಿಯು ಹುಟ್ಟಿತು.

೧೦. ಆ ವ್ಯಕ್ತಿಯು ಅರ್ಧಭಾಗದಲ್ಲಿ ನಾರಿಯ, ಮತ್ತೊಂದು ಅರ್ಧ-ಭಾಗದಲ್ಲಿ ಪುರುಷನ ಆಕಾರವುಳ್ಳ, ದೊಡ್ಡ ಪರಿಮಾಣದ ದೇಹವುಳ್ಳ ಪುರುಷನಾಗಿ ಜನಿಸಿತು. ತರುವಾಯ ಬ್ರಹ್ಮನು ಆ ಪುರುಷನನ್ನು ಕುರಿತು ನಿನ್ನ ಮೂರ್ತಿ-ಯನ್ನು ವಿಭಜಿಸು ಎಂದು ಹೇಳಿ ತಾನು ಅದೃಶ್ಯನಾದನು.

ಸ ಚೋಕ್ತೋ ವೈ ಪೃಥಕ್ ಸ್ತ್ರೀತ್ವಂ ಪುರುಷತ್ವಂ ತಥಾಕರೋತ್ ।
ಬಿಭೇದ ಪುರುಷತ್ವಂ ಚ ದಶಧಾ ಚೈಕಧಾ ತು ಸಃ ॥೧೧॥

ಸೌಮ್ಯಾಸೌಮ್ಯೈಸ್ತಥಾ ಶಾನ್ತೈಃ ಪುಂಸ್ತ್ವಂ ಸ್ತ್ರೀತ್ವಂ ಚ ಸ ಪ್ರಭುಃ ।
ಬಿಭೇದ ಬಹುಧಾ ದೇವಃ ಪುರುಷೈರಮಿತೈಃ ಶಿತೈಃ ॥೧೨॥

ತತೋ ಬ್ರಹ್ಮಾತ್ಮಸಮ್ಭೂತಂ ಪೂರ್ವಂ ಸ್ವಾಯಮ್ಭುವಂ ಪ್ರಭುಃ ।
ಆತ್ಮನಃ ಸದೃಶಂ ಕೃತ್ವಾ ಪ್ರಜಾಪಾಲ್ಯೇ ಮನುಂ ದ್ವಿಜ ॥೧೩॥

ಶತರೂಪಾಂ ಚ ತಾಂ ನಾರೀಂ ತಪೋನಿರ್ಧೂತಕಲ್ಮಷಾಮ್ ।
ಸ್ವಾಯಮ್ಭುವೋ ಮನುರ್ದೇವಃ ಪತ್ನೀತ್ವೇ ಜಗೃಹೇ ವಿಭುಃ ॥೧೪॥

---

೧೧. ಬ್ರಹ್ಮನಿಂದ ಹಾಗೆ ಬೋಧಿಸಲ್ಪಟ್ಟ ಪುರುಷನು ತನ್ನಲ್ಲಿ ಸ್ತ್ರೀತ್ವವನ್ನೂ ಪುರುಷತ್ವವನ್ನೂ ವಿಭಜಿಸಿಕೊಂಡನು. ಆಗ ಪುರುಷತ್ವವನ್ನು ಹನ್ನೊಂದು ರೂಪದಿಂದ ವಿಭಾಗಮಾಡಿದನು.

೧೨. ಸರ್ವಶಕ್ತನಾದ ಆ ಪುರುಷನು ಪುರುಷತ್ವ ಮತ್ತು ಸ್ತ್ರೀತ್ವ-ಗಳನ್ನು ಸೌಮ್ಯ-ಅಸೌಮ್ಯರೂಪಗಳಿಂದಲೂ ಮತ್ತು ಶಾಂತರೂಪದಿಂದಲೂ ವಿಭಜಿಸಿ ಅಮಿತವಾದ ತೀಕ್ಷ್ಣಸ್ವಭಾವದ ಪುರುಷರನ್ನಾಗಿ ಬಹುವಿಧವಾಗಿ ಸೃಷ್ಟಿಸಿದನು.

೧೩. ದ್ವಿಜನೇ! ತರುವಾಯ ಸರ್ವೇಶ್ವರನಾದ ಬ್ರಹ್ಮದೇವನು ಮೊದಲು ತನ್ನಿಂದ ಜನಿಸಿದವನೂ ತನಗೆ ಸದೃಶನೂ ಆದ ಸ್ವಾಯಮ್ಭುವ-ನಾಮಾಂಕಿತನಾದ ಮನುವನ್ನು ಪ್ರಜಾಪಾಲನಾಧಿಕಾರದಲ್ಲಿ ನಿಯಮಿಸಿದನು.

೧೪. ಸರ್ವನಿಯಾಮಕನೂ, ದೇವೋತ್ತಮನೂ ಆದ ಸ್ವಾಯಮ್ಭುವ ಮನುವು ತಪಸ್ಸಿನಿಂದ ಅಡಗಿಸಿದ ಪಾತಕವುಳ್ಳ "ಶತರೂಪಾ" ಎಂಬ ನಾರಿಯನ್ನು ತನ್ನ ಪತ್ನಿಯನ್ನಾಗಿ ಪರಿಗ್ರಹಿಸಿದನು.

ತಸ್ಮಾಚ್ಚ ಪುರುಷಾತ್ಪುತ್ರೌ ಶತರೂಪಾ ವ್ಯಜಾಯತ ।
ಪ್ರಿಯವ್ರತೋತ್ತಾನಪಾದೌ ಪ್ರಖ್ಯಾತಾವಾತ್ಮಕರ್ಮಭಿಃ ॥೧೫॥

ಕನ್ಯೇ ದ್ವೇ ಚ ತಥಾಕೂತಿಂ ಪ್ರಸೂತಿಂ ಚ ತತಃ ಪಿತಾ ।
ದದೌ ಪ್ರಸೂತಿಂ ದಕ್ಷಾಯ ತಥಾಕೂತಿಂ ರುಚೇಃ ಪುರಾ ॥೧೬॥

ಪ್ರಜಾಪತಿಃ ಸ ಜಗ್ರಾಹ ತಯೋರ್ಯಜ್ಞಃ ಸದಕ್ಷಿಣಃ ।
ಪುತ್ರೋ ಜಜ್ಞೇ ಮಹಾಭಾಗ ದಂಪತೀ ಮಿಥುನಂ ತತಃ ॥೧೭॥

ಯಜ್ಞಸ್ಯ ದಕ್ಷಿಣಾಯಾಂ ತು ಪುತ್ರಾ ದ್ವಾದಶ ಜಜ್ಞಿರೇ ।
ಯಾಮಾ ಇತಿ ಸಮಾಖ್ಯಾತಾ ದೇವಾಃ ಸ್ವಾಯಮ್ಭುವೇಽನ್ತರೇ॥೧೮॥

---

೧೫. ಶತರೂಪಾನಾರಿಯು ಸ್ವಾಯಂಭುವ ಮನುವೆಂಬ ಪುರುಷನ ಸಂಗದಿಂದ ಮುಂದೆ ತಮ್ಮ ವಿಕ್ರಮಕಾರ್ಯಗಳಿಂದ ಖ್ಯಾತಿಗಳಿಸುವ ಪ್ರಿಯವ್ರತ-ಉತ್ತಾನಪಾದರೆಂಬ ಇಬ್ಬರು ಪುತ್ರರನ್ನು ಪ್ರಸವಿಸಿದಳು.

೧೬. ಮತ್ತು ಶತರೂಪೆಯು ಆಕೂತಿ-ಪ್ರಸೂತಿ ಎಂದು ಖ್ಯಾತಿಯನ್ನು ಹೊಂದಿದ ಇಬ್ಬರು ಕನ್ಯೆಯರನ್ನು ಪ್ರಸವಿಸಿದಳು. ತಂದೆಯಾದ ಸ್ವಾಯಂಭುವ ಮನುವು ಹಿಂದೆ ದಕ್ಷಪ್ರಜಾಪತಿಗೆ ಪ್ರಸೂತಿಯನ್ನೂ, ರುಚಿಪ್ರಜಾಪತಿಗೆ ಆಕೂತಿಯನ್ನೂ ಕೊಟ್ಟು ವಿವಾಹಮಾಡಿದನು.

೧೭. ರುಚಿಪ್ರಜಾಪತಿಯು ಆಕೂತಿಯನ್ನು ಪತ್ನಿಯನ್ನಾಗಿ ಪರಿಗ್ರಹಿಸಿದನು. ಆ ಮಾತಾಪಿತೃಗಳಲ್ಲಿ ದಕ್ಷಿಣಾದೇವಿಯಿಂದ ಪತ್ನೀವಂತನಾದ ಯಜ್ಞಪುರುಷನು ಪುತ್ರನಾಗಿ ಜನಿಸಿದನು. ಯಜ್ಞಪುರುಷ-ದಕ್ಷಿಣಾದೇವಿಯರು ದಾಂಪತ್ಯ ಧರ್ಮವನ್ನು ಹೊಂದಿದರು.

೧೮. ಹಿಂದೆ ಸ್ವಾಯಂಭುವ ಮನ್ವಂತರದಲ್ಲಿ ಯಜ್ಞಪುರುಷನಿಂದ ದಕ್ಷಿಣಾದೇವಿಯಲ್ಲಿ "ಯಾಮ" ಎಂಬ ನಾಮಾಂಕನದಿಂದ ಪ್ರಸಿದ್ಧರಾದ ಹನ್ನೆರಡುಮಂದಿ ದೇವತೆಗಳು ಪುತ್ರರಾಗಿ ಹುಟ್ಟಿದರು.

ತಸ್ಯ ಪುತ್ರಾಸ್ತು ಯಜ್ಞಸ್ಯ ದಕ್ಷಿಣಾಯಾಂ ಸುಭಾಸ್ವರಾಃ ।
ಪ್ರಸೂತ್ಯಾಂ ಚ ತಥಾ ದಕ್ಷಶ್ಚತಸ್ರೋ ವಿಂಶತಿಸ್ತಥಾ ॥೧೯॥

ಸಸರ್ಜ ಕನ್ಯಾಸ್ತಾಸಾಂ ಚ ಸಮ್ಯಙ್ನಾಮಾನಿ ಮೇ ಶೃಣು ।
ಶ್ರದ್ಧಾ ಲಕ್ಷ್ಮೀರ್ಧೃತಿಸ್ತುಷ್ಟಿಃ ಪುಷ್ಟಿರ್ಮೇಧಾ ಕ್ರಿಯಾ ತಥಾ ॥೨೦॥

ಬುದ್ಧಿರ್ಲಜ್ಜಾ ವಪುಃ ಶಾನ್ತಿಃ ಸಿದ್ಧಿಃ ಕೀರ್ತಿಸ್ತ್ರಯೋದಶೀ ।
ಪತ್ನ್ಯರ್ಥೇ ಪ್ರತಿಜಗ್ರಾಹ ಧರ್ಮೋ ದಾಕ್ಷಾಯಣೀಃ ಪ್ರಭುಃ ॥೨೧॥

ತಾಭ್ಯಃ ಶಿಷ್ಟಾ ಯವೀಯಸ್ಯ ಏಕಾದಶ ಸುಲೋಚನಾಃ ।
ಖ್ಯಾತಿಃ ಸತ್ಯಥ ಸಮ್ಭೂತಿಃ ಸ್ಮೃತಿಃ ಪ್ರೀತಿಸ್ತಥಾ ಕ್ಷಮಾ ॥೨೨॥

---

೧೯. ಯಜ್ಞಪುರುಷನಿಗೆ ದಕ್ಷಿಣಾದೇವಿಯಲ್ಲಿ ಜನಿಸಿದ ಪುತ್ರರು ಹೆಚ್ಚಾಗಿ ಪ್ರಕಾಶಿಸುವ ದೇಹವುಳ್ಳವರಾದರು. ದಕ್ಷಪ್ರಜಾಪತಿಯು ತನ್ನ ಧರ್ಮ-ಪತ್ನಿಯಾದ ಪ್ರಸೂತಿಯಲ್ಲಿ ಇಪ್ಪತ್ತನಾಲ್ಕುಮಂದಿ ಕನ್ಯೆಯರನ್ನು ಹೊಂದಿದನು.

೨೦. ದಕ್ಷಬ್ರಹ್ಮನ ಇಪ್ಪತ್ತನಾಲ್ಕುಮಂದಿ ಕನ್ಯೆಯರ ನಾಮಾಂಕನ-ವನ್ನು ಚನ್ನಾಗಿ ಕೇಳು. ಶ್ರದ್ಧಾ-ಲಕ್ಷ್ಮೀ-ಧೃತಿ-ತುಷ್ಟಿ-ಪುಷ್ಟಿ-ಮೇಧಾ-ಕ್ರಿಯಾ ಇವರು ಏಳುಮಂದಿ ಕನ್ಯೆಯರು ದಕ್ಷಸಂತತಿಯಲ್ಲಿ ಸೇರಿದವರಾಗಿದ್ದರು.

೨೧. ಮತ್ತು ಬುದ್ಧಿ, ಲಜ್ಜಾ, ವಪು, ಶಾಂತಿ, ಸಿದ್ಧಿ, ಕೀರ್ತಿ ಈ ಆರುಮಂದಿ ಕನ್ಯೆಯರು ದಕ್ಷಪ್ರಜಾಪತಿಯ ಪುತ್ರಿಯರಾಗಿ ಜನಿಸಿದರು. ಧರ್ಮ ಪ್ರಜಾಪತಿಯು ಈ ರೀತಿಯಾಗಿರುವ ಹದಿಮೂರುಮಂದಿ ದಕ್ಷಕನ್ಯೆಯರನ್ನು ಪತ್ನಿಯರನ್ನಾಗಿ ಸ್ವೀಕರಿಸಿದನು.

೨೨. ಶ್ರದ್ಧಾ ಮುಂತಾದ ಹದಿಮೂರು ಮಂದಿಯನ್ನು ಬಿಟ್ಟುಉಳಿದಿ-ರುವ ಹನ್ನೊಂದುಮಂದಿ ದಕ್ಷಕನ್ಯೆಯರು ಕಿರಿಯವರಾಗಿದ್ದರು. ಅವರಲ್ಲಿ ಆರು ಮಂದಿ ಕನ್ಯೆಯರು ಖ್ಯಾತಿ-ಸತೀ-ಸಂಭೂತಿ-ಸ್ಮೃತಿ-ಪ್ರೀತಿ-ಕ್ಷಮಾ ಎಂಬ ನಾಮಾಂಕನಗಳನ್ನು ಹೊಂದಿದ್ದರು.

ಸನ್ನತಿಶ್ಚಾನಸೂಯಾ ಚ ಊರ್ಜಾ ಸ್ವಾಹಾ ಸ್ವಧಾ ತಥಾ ।
ಭೃಗುರ್ಭವೋ ಮರೀಚಿಶ್ಚ ತಥಾ ಚೈವಾಙ್ಗಿರಾ ಮುನಿಃ ॥೨೩॥

ಪುಲಸ್ತ್ಯಃ ಪುಲಹಶ್ಚೈವ ಕ್ರತುಶ್ಚ ಋಷಯಸ್ತಥಾ ।
ವಸಿಷ್ಠೋಽತ್ರಿಸ್ತಥಾ ವಹ್ನಿಃ ಪಿತರಶ್ಚ ಯಥಾಕ್ರಮಮ್ ॥೨೪॥

ಖ್ಯಾತ್ಯಾದ್ಯಾ ಜಗೃಹುಃ ಕನ್ಯಾ ಮುನಯೋ ಮುನಿಸತ್ತಮಾಃ ।
ಶ್ರದ್ಧಾ ಕಾಮಂ ಶ್ರೀಶ್ಚ ದರ್ಪಂ ನಿಯಮಂ ಧೃತಿರಾತ್ಮಜಮ್ ॥೨೫॥

ಸನ್ತೋಷಂ ಚ ತಥಾ ತುಷ್ಟಿರ್ಲೋಭಂ ಪುಷ್ಟಿರಜಾಯತ ।
ಮೇಧಾ ಶ್ರುತಂ ಕ್ರಿಯಾ ದಣ್ಡಂ ನಯಂ ವಿನಯಮೇವ ಚ ॥೨೬॥

---

೨೩. ಮಿಕ್ಕ ಐದು ಮಂದಿ ದಕ್ಷಕನ್ಯೆಯರಿಗೆ ಸಂತತಿ-ಅನಸೂಯಾ-ಊರ್ಜಾ-ಸ್ವಾಹಾ-ಸ್ವಧಾ ಎಂಬ ನಾಮಾಂಕನಗಳಿದ್ದುವು. ಭೃಗು, ಭವ, ಮರೀಚಿ ಮತ್ತು ಅಂಗಿರ ಎಂಬ ಮುನಿಗಳು ಕ್ರಮವಾಗಿ ಖ್ಯಾತಿ-ಸತೀ-ಸಂಭೂತಿ ಮತ್ತು ಸ್ಮೃತಿ ಈ ಕನ್ಯೆಯರಿಂದ ಪತ್ನೀವಂತರಾದರು.

೨೪. ಮತ್ತು ಪುಲಸ್ತ್ಯ-ಪುಲಹ-ಕ್ರತು-ವಸಿಷ್ಠ-ಅತ್ರಿ-ವಹ್ನಿ-ಪಿತೃದೇವತೆಗಳು ಮಿಕ್ಕ ಏಳು ಮಂದಿ ಕನ್ಯೆಯರನ್ನು ಕ್ರಮವಾಗಿ ಪರಿಗ್ರಹಿಸಿ ಪತ್ನೀವಂತರಾದರು.

೨೫. ಹೀಗೆ ಭೃಗು ಮುನಿ ಮುಂತಾದ ಮುನಿಶ್ರೇಷ್ಠರು ಖ್ಯಾತಿ ಮುಂತಾದ ದಕ್ಷ ಪುತ್ರಿಯರನ್ನು ಪರಿಗ್ರಹಿಸಿದರು. ತನ್ಮೂಲಕವಾಗಿ ಸಂತತಿಯು ಮುಂದುವರೆಯಿತು. ಶ್ರದ್ಧಾದೇವಿಯು ಕಾಮನನ್ನೂ, ಲಕ್ಷ್ಮಿಯು ದರ್ಪವನ್ನೂ ಧೃತಿಯು ನಿಯಮವನ್ನೂ ಪುತ್ರನನ್ನಾಗಿ ಹೊಂದಿದರು.

೨೬. ಹಾಗು ತುಷ್ಟಿಯು ಸಂತೋಷ ಪುತ್ರನನ್ನೂ, ಪುಷ್ಟಿಯು ಲೋಭ ಪುತ್ರನನ್ನೂ, ಮೇಧಾದೇವಿಯು ಶ್ರುತ ಪುತ್ರನನ್ನೂ, ಕ್ರಿಯೆಯು ದಂಡ-ನಯ-ವಿನಯಗಳೆಂಬ ಪುತ್ರರನ್ನೂ ಹೊಂದಿದರು.

ಬೋಧಂ ಬುದ್ಧಿಸ್ತಥಾ ಲಜ್ಜಾ ವಿನಯಂ ವಪುರಾತ್ಮಜಮ್ ।
ವ್ಯವಸಾಯಂ ಪ್ರಜಜ್ಞೇ ವೈ ಕ್ಷೇಮಂ ಶಾನ್ತಿರಸೂಯತ ॥೨೭॥

ಸುಖಂ ಸಿದ್ಧಿರ್ಯಶಃ ಕೀರ್ತಿರಿತ್ಯೇತೇ ಧರ್ಮಯೋನಯಃ ।
ಕಾಮಾದತಿಮುದಂ ಹರ್ಷಂ ಧರ್ಮಪೌತ್ರಮಸೂಯತ ॥೨೮॥

ಹಿಂಸಾ ಭಾರ್ಯಾ ತ್ವಧರ್ಮಸ್ಯ ತಸ್ಯಾಂ ಜಜ್ಞೇ ತಥಾನೃತಮ್ ।
ಕನ್ಯಾಂ ಚ ನಿರ್ಋತಿಸ್ತಸ್ಯಾಂ ಸುತೌ ದ್ವೌ ನರಕಂ ಭಯಮ್ ॥೨೯॥

ಮಾಯಾ ಚ ವೇದನಾ ಚೈವ ಮಿಥುನಂ ದ್ವಯಮೇತಯೋಃ ।
ತಯೋರ್ಜಜ್ಞೇಽಥ ವೈ ಮಾಯಾ ಮೃತ್ಯುಂ ಭೂತಾಪಹಾರಿಣಮ್ ॥೩೦॥

---

೨೭. ಮತ್ತು ಬುದ್ಧಿಯಲ್ಲಿ ಬೋಧ, ಲಜ್ಜೆಯಲ್ಲಿ ವಿನಯ, ವಪುವಿನಲ್ಲಿ ವ್ಯವಸಾಯ ಮತ್ತು ಶಾಂತಿದೇವಿಯಲ್ಲಿ ಕ್ಷೇಮ—ಎಂಬುವರು ಕ್ರಮವಾಗಿ ಪುತ್ರರಾಗಿ ಜನ್ಮವೆತ್ತಿದರು.

೨೮. ಹಾಗು ಸಿದ್ಧಿಯಲ್ಲಿ ಸುಖ ಎಂಬ ಪುತ್ರನೂ, ಕೀರ್ತಿಯಲ್ಲಿ ಯಶ ಎಂಬ ಪುತ್ರನೂ ಜನಿಸಿದರು. ಈ ಪುತ್ರರೆಲ್ಲರೂ ಧರ್ಮಪ್ರಜಾಪತಿಯಿಂದ ಜನಿಸಿದವರು. ಕಾಮನಿಂದ ಅತಿಮುತ್ ಎಂಬ ಪತ್ನಿಯಲ್ಲಿ ಹರ್ಷಪುತ್ರನು ಜನಿಸಿದನು. ಅವನು ಧರ್ಮಪ್ರಜಾಪತಿಯ ಪೌತ್ರನಾದನು.

೨೯. ಅಧರ್ಮ ಎಂಬುವನಿಗೆ ಹಿಂಸೆಯು ಭಾರ್ಯೆಯಾಗಿದ್ದಳು. ಅವಳಲ್ಲಿ ಅನೃತ ಎಂಬ ಪುತ್ರನೂ ಮತ್ತು ನಿರ್ಋತಿ ಎಂಬ ಕನ್ಯೆಯೂ ಜನಿಸಿದರು. ನಿರ್ಋತಿಯಲ್ಲಿ ನರಕ-ಭಯ ಎಂಬ ಪುತ್ರರು ಹುಟ್ಟಿದರು.

೩೦. ನರಕ-ಭಯ ಎಂಬ ಪುತ್ರರು ಮಾಯಾ-ವೇದನಾ ಎಂಬ ಕನ್ಯೆಯರ ಪರಿಗ್ರಹದಿಂದ ದಂಪತಿಗಳಾದರು. ಮಾಯಾ ಎಂಬುವಳು ಸರ್ವಪ್ರಾಣಿಗಳ ಪ್ರಾಣಾಂತಕನಾದ ಮೃತ್ಯು ಎಂಬ ಪುತ್ರನನ್ನು ಹೊಂದಿದಳು.

ವೇದನಾತ್ಮಸುತಂ ಚಾಪಿ ದುಃಖಂ ಜಜ್ಞೇಽಥ ರೌರವಾತ್ ।
ಮೃತ್ಯೋರ್ವ್ಯಾಧಿಜರಾಶೋಕತೃಷ್ಣಾಕ್ರೋಧಾಶ್ಚ ಜಜ್ಞಿರೇ ॥೩೧॥

ದುಃಖೋದ್ಭವಾಃ ಸ್ಮೃತಾ ಹ್ಯೇತೇ ಸರ್ವೇ ಚಾಧರ್ಮಲಕ್ಷಣಾಃ ।
ನೈಷಾಂ ಭಾರ್ಯಾಸ್ತಿ ಪುತ್ರೋ ವಾ ಸರ್ವೇ ತೇ ಹ್ಯೂರ್ಧ್ವರೇತಸಃ ॥೩೨॥

ನಿರ್ಋತಿಶ್ಚ ತಥಾ ಚಾನ್ಯಾ ಮೃತ್ಯೋರ್ಭಾರ್ಯಾಭವನ್ಮುನೇ ।
ಅಲಕ್ಷ್ಮೀರ್ನಾಮ ತಸ್ಯಾಂ ಚ ಮೃತ್ಯೋಃ ಪುತ್ರಾಶ್ಚತುರ್ದಶ ॥೩೩॥

ಅಲಕ್ಷ್ಮೀಪುತ್ರಕಾ ಹ್ಯೇತೇ ಮೃತ್ಯೋರಾದೇಶಕಾರಿಣಃ ।
ವಿನಾಶಕಾಲೇಷು ನರಾನ್ಭಜನ್ತ್ಯೇತೇ ಶೃಣುಷ್ವ ತಾನ್ ॥೩೪॥

ಇನ್ದ್ರಿಯೇಷು ದಶಸ್ವೇತೇ ತಥಾ ಮನಸಿ ಚ ಸ್ಥಿತಾಃ ।
ಸ್ವೇ ಸ್ವೇ ನರಂ ಸ್ತ್ರಿಯಂ ವಾಪಿ ವಿಷಯೇ ಯೋಜಯನ್ತಿ ಹಿ ॥೩೫॥

---

೩೧. ವೇದನೆ ಎಂಬುವಳು ರೌರವನಿಂದದುಃಖ ಎಂಬ ಪುತ್ರನನ್ನು ಪ್ರಸವಿಸಿದಳು. ಮೃತ್ಯುವಿಗೆ ವ್ಯಾಧಿ, ಜರಾ, ಶೋಕ, ತೃಷ್ಣಾ, ಕ್ರೋಧ ಎಂಬುವರು ಅನೇಕ ಮಂದಿ ಪುತ್ರರಾಗಿ ಜನ್ಮವೆತ್ತಿದರು.

೩೨. ಅಧರ್ಮವಂಶದಲ್ಲಿ ಜನಿಸಿದ ಈ ಪುತ್ರರೆಲ್ಲರೂ ದುಃಖಕಾರಣರೂ ಅಧರ್ಮ ಸ್ವರೂಪವುಳ್ಳವರೂ ಆಗಿರುವರೆಂದು ಹೇಳಲ್ಪಡುವರು. ಇವರಿಗೆ ಪತ್ನಿ-ಪುತ್ರರಾರೂ ಇಲ್ಲ. ಇವರು ಎಲ್ಲರೂ ಊರ್ಧ್ವರೇತರಾಗಿರುವವರು.

೩೩. ಕ್ರೌಷ್ಟುಕಿ ಮುನಿಯೆ! ಮೃತ್ಯುವಿಗೆ ನಿರ್ಋತಿ ಮತ್ತು ಅಲಕ್ಷ್ಮೀ ಎಂಬುವರಿಬ್ಬರು ಭಾರ್ಯೆಯರಾಗಿದ್ದರು. ಅಲಕ್ಷ್ಮೀ ಎಂಬ ಭಾರ್ಯೆಯಲ್ಲಿ ಮೃತ್ಯುವಿಗೆ ಹದಿನಾಲ್ಕು ಮಂದಿ ಪುತ್ರರು ಜನಿಸಿದರು.

೩೪. ಅಲಕ್ಷ್ಮಿಯಲ್ಲಿ ಮೃತ್ಯುಪುರುಷನಿಂದ ಜನ್ಮವೆತ್ತಿದ ಪುತ್ರರು ಮೃತ್ಯುವಿನ ಆದೇಶದಂತೆ ನಡೆದುಕೊಳ್ಳುವವರಾಗಿ ಮಾನವರನ್ನು ಅವರ ಮರಣ ಸಮಯದಲ್ಲಿ ಆವೇಶಿಸುವರು. ಆ ಮೃತ್ಯುಪುತ್ರರ ವಿಷಯವನ್ನು ಕೇಳು.

೩೫. ಆ ಪುತ್ರರು ಹತ್ತು ಇಂದ್ರಿಯಗಳ ವಿಷಯಗಳಲ್ಲಿಯೂ ಮತ್ತು ಮನಸ್ಸಿನಲ್ಲಿಯೂ ವಾಸಮಾಡುತ್ತಿರುವರು. ಮತ್ತು ನಾರೀ-ನರರನ್ನು ಆಯಾಯ ಇಂದ್ರಿಯ ವಿಷಯಗಳಲ್ಲಿ ಲೋಭಿಗಳನ್ನಾಗಿ ಮಾಡುವರು.

ಅಥೇನ್ದ್ರಿಯಾಣಿ ಚಾಕ್ರಮ್ಯ ರಾಗಕ್ರೋಧಾದಿಭಿರ್ನರಾನ್ ।
ಯೋಜಯನ್ತಿ ಯಥಾ ಹಾನಿಂ ಯಾನ್ತ್ಯಧರ್ಮಾದಿಭಿರ್ದ್ವಿಜ ॥೩೬॥

ಅಹಙ್ಕಾರಗತಾಶ್ಚಾನ್ಯೇ ತಥಾನ್ಯೇ ಬುದ್ಧಿಸಂಶ್ರಿತಾಃ ।
ವಿನಾಶಾಯ ನರಸ್ತ್ರೀಣಾಂ ಯತನ್ತೇ ಮೋಹಸಂಶ್ರಿತಾಃ ॥೩೭॥

ತಥೈವಾನ್ಯೋ ಗೃಹೇ ಪುಂಸಾಂ ದುಃಸಹೋ ನಾಮ ವಿಶ್ರುತಃ ।
ಕ್ಷುತ್ಕ್ಷಾಮೋಽಧೋಮುಖೋ ನಗ್ನಶ್ಚೀರೀಕಾಕಸಮಸ್ವನಃ ॥೩೮॥

ಸ ಸರ್ವಾನ್ಖಾದಿತುಂ ಸೃಷ್ಟೋ ಬ್ರಹ್ಮಣಾ ತಮಸೋ ನಿಧಿಃ ।
ದಂಷ್ಟ್ರಾಕರಾಲಮತ್ಯರ್ಥಂ ವಿವೃತಾಸ್ಯಂ ಸುಭೈರವಮ್ ॥೩೯॥

---

೩೬. ದ್ವಿಜೋತ್ತಮನೆ ! ಮೃತ್ಯುಪುತ್ರರು ಆಯಾಯ ಇಂದ್ರಿಯಗಳನ್ನು ಆಕ್ರಮಿಸಿ ಮಾನವರನ್ನು ರಾಗ-ದ್ವೇಷಾದಿಗಳಿಗೆ ವಶಮಾಡುವರು. ರಾಗ-ದ್ವೇಷ-ಗಳನ್ನು ಹೊಂದಿದ ಮಾನವರು ಅಧರ್ಮಾಚರಣೆಯಿಂದ ಹಾನಿಯನ್ನು ಹೊಂದು-ವರು.

೩೭. ಮತ್ತೆ ಕೆಲವರು ಮೃತ್ಯುಪುತ್ರರು ಅಹಂಕಾರವನ್ನೂ ಬುದ್ಧಿ-ತತ್ತ್ವವನ್ನೂ ಆಶ್ರಯಿಸಿಕೊಂಡಿದ್ದು ಮೋಹಮಾರ್ಗದಲ್ಲಿ ರುಚಿಯನ್ನು ಹುಟ್ಟಿಸಿ ನರ-ನಾರಿಯರ ವಿನಾಶಕ್ಕೆ ಯಾವಾಗಲೂ ಯತ್ನಿಸುವರು.

೩೮. ಹಾಗೆಯೇ ಮಾನವರ ಮನೆಗಳಲ್ಲಿ ದುಃಸಹ ಎಂಬ ನಾಮಾಂಕ-ನದಿಂದ ಪ್ರಸಿದ್ಧನಾದ ಮತ್ತೊಬ್ಬ ಮೃತ್ಯುಪುತ್ರನು ಇರುವನು. ಅವನು ಹಸಿವಿನಿಂದ ತಲೆಯನ್ನು ಬಾಗಿಸಿಕೊಂಡವನೂ ದಿಗಂಬರನೂ ಮತ್ತು ಚೀರಿಕೆ-ಕಾಗೆಗಳಿಗೆ ಸಮವಾದ ಕರ್ಕಶ ಧ್ವನಿಯುಳ್ಳವನೂ ಆಗಿರುವನು.

೩೯. ತಮೋಗುಣಕ್ಕೆ ನಿಧಿಯಾದ ಆ ದುಃಸಹನು ಎಲ್ಲವನ್ನೂ ತಿಂದು-ಹಾಕಲು ಬ್ರಹ್ಮನಿಂದ ಸೃಜಿಸಲ್ಪಟ್ಟಿರುವನು. ಕೋರೆಹಲ್ಲುಗಳಿಂದ ಕರಾಲ-ರೂಪನೂ ಹೆಚ್ಚಾಗಿ ತೆರೆದ ಬಾಯಿಯುಳ್ಳವನೂ ಮತ್ತು ಭಯಂಕರನೂ ಆದ ದುಃಸಹನನ್ನು ಬ್ರಹ್ಮದೇವನು ನೋಡಿದನು.

ತಮುತ್ತುಕಾಮಮಾಹೇದಂ ಬ್ರಹ್ಮಾ ಲೋಕಪಿತಾಮಹಃ ।
ಸರ್ವಬ್ರಹ್ಮಮಯಃ ಶುದ್ಧಃ ಕಾರಣಂ ಜಗತೋಽವ್ಯಯಃ ॥೪೦॥

ಬ್ರಹ್ಮೋವಾಚ :—

ನಾತ್ತವ್ಯಂ ತೇ ಜಗದಿದಂ ಜಹಿ ಕೋಪಂ ಶಮಂ ವ್ರಜ ।
ತ್ಯಜೈನಾಂ ತಾಮಸೀಂ ವೃತ್ತಿಮುಪಾಸ್ಯ ರಜಸಃ ಕಲಾವ್ ॥೪೧॥

ದುಃಸಹ ಉವಾಚ :—

ಕ್ಷುತ್ಕ್ಷಾಮೋಽಸ್ಮಿ ಜಗನ್ನಾಥ ಪಿಪಾಸುಶ್ಚಾಸ್ಮಿ ದುರ್ಬಲಃ ।
ಕಥಂ ತೃಪ್ತಿಮಿಯಾಂ ನಾಥ ಭವೇಯಂ ಬಲವಾನ್ಕಥಮ್ ॥೪೨॥

ಕಶ್ಚಾಶ್ರಯೋ ಮಮಾಖ್ಯಾಹಿ ವರ್ತೇಯಂ ಯತ್ರ ನಿರ್ವೃತಃ ॥೪೩॥

---

೪೦. ಸರ್ವಪ್ರಜಾಪತಿಗಳಿಗೆ ಮೂಲಭೂತನೂ, ಶುದ್ಧಸ್ವರೂಪನೂ, ಜಗತ್ತಿಗೆ ಕಾರಣನೂ, ಲೋಕಪಿತಾಮಹನೂ ಮತ್ತು ನಿತ್ಯಸ್ವರೂಪನೂ ಆದ ಬ್ರಹ್ಮದೇವನು ಎಲ್ಲವನ್ನೂ ತಿಂದುಹಾಕುವ ಇಷ್ಟವುಳ್ಳ ದುಃಸಹನನ್ನು ಕುರಿತು ಹೀಗೆ ಹೇಳಿದನು.

ಬ್ರಹ್ಮದೇವನಿಂತೆಂದನು :—

೪೧. ದುಃಸಹನೇ! ನೀನು ಹೀಗೆ ಈ ಜಗತ್ತನ್ನು ತಿನ್ನಬಾರದು. ಕೋಪವನ್ನು ಬಿಡು. ಶಾಂತಿಯನ್ನು ತೆಗೆದುಕೊ. ರಜೋಗುಣಾಂಶದಿಂದ ಮಿಶ್ರಣವಾದ ಈ ತಾಮಸವೃತ್ತಿಯನ್ನು ಬಿಡುವವನಾಗು.

ದುಃಸಹನು ಇಂತೆಂದನು :—

೪೨. ಜಗತ್ಪತಿಯೇ! ನಾನು ಹಸಿವಿನಿಂದ ಬೇಸತ್ತಿರುವೆನು. ಮತ್ತು ನೀರಡಿಕೆಯಿಂದ ದುರ್ಬಲನೂ ಆಗಿದ್ದೇನೆ. ನಾಥನೆ! ನನಗೆ ತೃಪ್ತಿಯು ಹೇಗೆ ಲಭಿಸುವುದು? ನಾನು ಬಲಿಷ್ಠನಾಗುವುದು ಹೇಗೆ?

೪೩. ಪ್ರಭುವೇ! ನಾನು ಯಾವ ಆವಾಸದಲ್ಲಿ ಸುಖವಾಗಿ ಇರಬಹುದೋ ಅಂತಹ ವಾಸಭೂಮಿಯು ನನಗೆ ಎಲ್ಲಿರುವುದು? ನನಗೆ ಆಶ್ರಯವನ್ನು ಹೇಳು.

ಬ್ರಹ್ಮೋವಾಚ :—

ತವಾಶ್ರಯೋ ಗೃಹಂ ಪುಂಸಾಂ ಜನಶ್ಚಾಧಾರ್ಮಿಕೋ ಬಲವಾನ್ ।
ಪುಷ್ಟಿರ್ನಿತ್ಯಕ್ರಿಯಾಹಾನ್ಯಾ ಭವಾನ್ಸತ್ಸ ಗಮಿಷ್ಯತಿ ॥೪೪॥

ಲೂತಾಃ ಸ್ಫೋಟಾಶ್ಚ ತೇ ವಸ್ತ್ರ ಮಾಹಾರಂ ಚ ದದಾಮಿ ತೇ ।
ಕ್ಷುತಂ ಕೀಟಾವಪನ್ನಂ ಚ ತಥಾ ಶ್ವಭಿರವೇಕ್ಷಿತಮ್ ॥೪೫॥

ಭಗ್ನಭಾಣ್ಡಗತಂ ತದ್ವನ್ಮುಖವಾತೋಪಶಾಮಿತಮ್ ।
ಉಚ್ಛಿಷ್ಟಾಪಕ್ವಮಸ್ವಿನ್ನಮವಲೀಢಮಸಂಸ್ಕೃತಮ್ ॥೪೬॥

ಭಗ್ನಾಸನಸ್ಥಿತೈರ್ಭುಕ್ತಮಾಸನ್ನಾಗತಮೇವ ಚ ।
ವಿದಿಙ್ಮುಖಂ ಸನ್ಧ್ಯಯೋಶ್ಚ ನೃತ್ಯವಾದ್ಯಸ್ವನಾಕುಲಮ್ ॥೪೭॥

ಬ್ರಹ್ಮದೇವನು ಹೇಳಿದನು :—

೪೪. ಪುತ್ರನಾದ ದುಃಸಹನೇ! ಅಧಾರ್ಮಿಕನಾದ ಮಾನವನು ನಿನ್ನ ಬಲವೆಂದು ಅರಿ. ಅವನ ಮನೆಯೇ ನಿನಗೆ ಆಶ್ರಯವು. ಅವನು ಮಾಡುವ ನಿತ್ಯಕರ್ಮೋಲ್ಲಂಘನೆಯಿಂದ ನಿನಗೆ ಪುಷ್ಟಿಯುಂಟಾಗುವುದು.

೪೫. ನಿನಗೆ ಅಧಾರ್ಮಿಕನ ಮನೆಯಲ್ಲಿರುವ ಜೇಡರಹುಳುಗಳ ಬಲೆ-ನಾರುಗಳು ವಸ್ತ್ರಗಳಾಗುವುವು. ಇನ್ನು ನಿನಗೆ ಆಹಾರವನ್ನು ನಿರ್ದೇಶಿಸುವೆನು. ನಾಯಿಯ ಕಣ್ಣಿಗೆ ಬಿದ್ದ, ಕ್ರಿಮಿ-ಕೀಟಗಳು ಕಾಣಿಸಿಕೊಂಡ ಮತ್ತು ಕೆಮ್ಮು-ಶೀನುಗಳಿಂದ ಅಪವಿತ್ರವಾದ ಅನ್ನವು ನಿನ್ನ ಆಹಾರವಾಗುವುದು.

೪೬. ಮತ್ತು ಒಡೆದ ಪಾತ್ರಗಳಲ್ಲಿ ಇರಿಸಿರುವುದೂ, ಬಾಯಿಯಿಂದ ಗಾಳಿಹಾಕಿ ಆರಿಸಿರುವುದೂ, ಎಂಜಲಾದುದೂ, ಅಪಕ್ವವೂ, ನೀರಿನ ಅಂಶವಿಲ್ಲದೇ ಇಂಗಿಹೋಗಿರುವುದೂ, ನೆಕ್ಕಲ್ಪಟ್ಟಿರುವುದೂ ಮತ್ತು ಸಂಸ್ಕಾರಹೀನವೂ ಆದ ಅನ್ನವು ನಿನ್ನ ಆಹಾರವೆಂದು ತಿಳಿ.

೪೭. ಹಾಗು ಭಂಗಹೊಂದಿದ ಆಸನದಲ್ಲಿ ಕುಳಿತು ಭುಂಜಿಸುವ, ದೂರದಿಂದ ಸೆಳೆದು ತೆಗೆದುಕೊಳ್ಳಬೇಕಾದ, ಮೂಲೆದಿಕ್ಕುಗಳಿಗೆ ಎದುರಾಗಿ ಕುಳಿತು ಸ್ವೀಕರಿಸುವ, ಸಂಧ್ಯಾಕಾಲಗಳಲ್ಲಿ ತಿನ್ನುವ ಮತ್ತು ನೃತ್ಯ-ವಾದ್ಯಾದಿ ಶಬ್ದಗಳ ಗಲಭೆಯಲ್ಲಿ ಭುಂಜಿಸುವ ಅನ್ನವು ನಿನಗೆ ಆಹಾರವಾಗುವುದು.

ಉದಕ್ಯೋಪಹತಂ ಭುಕ್ತಮುದಕ್ಯಾದೃಷ್ಟಮೇವ ಚ |
ಯಚ್ಚೋಪಘಾತವತ್ಕಿಂಚಿದ್ಭಕ್ಷ್ಯಂ ಪೇಯಮಥಾಪಿ ವಾ ||೪೮||

ಏತಾನಿ ತವ ಪುಷ್ಟ್ಯರ್ಥಮನ್ಯಚ್ಚಾಪಿ ದದಾಮಿ ತೇ |
ಅಶ್ರದ್ಧಯಾ ಹುತಂ ದತ್ತಮಸ್ನಾತೈರ್ಯದವಜ್ಞಯಾ ||೪೯||

ಯನ್ನಾಮ್ಬುಪೂರ್ವಕಂ ಕ್ಷಿಪ್ತಮನಾತ್ಮೀಕೃತಮೇವ ಚ |
ತ್ಯಕ್ತುಮಾವಿಷ್ಕೃತಂ ಯತ್ತು ದತ್ತಂ ಚೈವಾತಿವಿಸ್ಮಯಾತ್ ||೫೦||

ದುಷ್ಟಂ ಕ್ರುದ್ಧಾರ್ತದತ್ತಂ ಚ ಯಕ್ಷ್ಮನ್ ಪ್ರಾಪ್ಸ್ಯಸಿ ತತ್ಫಲಮ್
||೫೧||

---

೪೮. ರಜಸ್ವಲೆಯಾದ ನಾರಿಯ ಸಂಪರ್ಕದಿಂದ ಅಶುಚಿಯಾದುದೂ, ರಜಸ್ವಲೆಯಿಂದ ನೋಡಲ್ಪಟ್ಟಿರುವುದೂ ಅಥವಾ ಇನ್ನಾವುದಾದರೂ ಉಪಘಾತ-ದಿಂದ ಕೂಡಿರುವುದೂ ಆದ ಭಕ್ಷ್ಯ-ಪಾನೀಯಗಳು ನಿನಗೆ ಆಹಾರವಾಗಲಿ.

೪೯. ಎಲೈ ದುಸ್ಸಹನೆ! ಯಕ್ಷ್ಮರಾಜನೆ! ಇವುಗಳೆಲ್ಲ ನಿನ್ನ ಪುಷ್ಟಿಗೆ ಸಾಧನವಾಗುವುವು. ನಾನು ಇನ್ನೂ ನಿನಗೆ ಆಹಾರವನ್ನು ಕೊಡುವೆನು. ಸ್ನಾನಮಾಡದಿರುವವರೂ, ಶ್ರದ್ಧಾರಹಿತರೂ ಮತ್ತು ತಿರಸ್ಕಾರಬುದ್ಧಿಯುಳ್ಳವರೂ ಹಾಗೆ ಕೊಡುವ ಅಥವಾ ಹೋಮಮಾಡುವ ವಸ್ತುವು ನಿನಗೆ ಆಹಾರವಾಗಲಿ.

೫೦. ಮತ್ತು ನೀರೆರೆಯದೆ ಕೊಡಲ್ಪಟ್ಟುದು, ತನ್ನದಲ್ಲದಿದ್ದರೂ ಕೊಡಲ್ಪಟ್ಟಿರುವುದು, ದಾನಮಾಡುವುದೆಂದು ಪ್ರಕಾಶಗೊಳಿಸಲ್ಪಟ್ಟುದು ಮತ್ತು ವಿಸ್ಮಯಭಾವದಿಂದ ಕೊಡಲ್ಪಟ್ಟಿರುವುದು ಇದೆಲ್ಲವೂ ನಿನ್ನ ಭೋಜ್ಯವಸ್ತು-ವಾಗಲಿ.

೫೧. ಎಲೈ ದುಃಸಹನೇ! ಯಕ್ಷ್ಮನೇ! ಕ್ರೋಧಹೊಂದಿ ಮನನೊಂದು ಕೊಟ್ಟಿರುವ ದುಷ್ಟವಾದ ದಾನಕರ್ಮದಿಂದ ಬರಬಹುದಾದ ಫಲವನ್ನು ನೀನು ಹೊಂದುತ್ತೀಯೆ. ಅದನ್ನು ನೀನು ಭುಂಜಿಸು.

ಯಚ್ಚ ಪೌನರ್ಭವಃ ಕಿಂಚಿತ್ಕರೋತ್ಯಾಮುಷ್ಮಿಕಂ ಕ್ರಮಮ್ ।
ಯಚ್ಚ ಪೌನರ್ಭವಾ ಯೋಷಿತ್ತದ್ಯಕ್ಷ್ಮಂಸ್ತವ ತೃಪ್ತಯೇ ॥೫೨॥

ಕನ್ಯಾಶುಲ್ಕೋಪಧಾನಾಯ ಸಮುಪಾಸ್ತೇ ಧನಕ್ರಿಯಾಃ ।
ತಥೈವ ಯಕ್ಷ್ಮನ್ ಪುಷ್ಟ್ಯರ್ಥಮಸಚ್ಛಾಸ್ತ್ರಕ್ರಿಯಾಶ್ಚ ಯಾಃ ॥೫೩॥

ಯಚ್ಚಾರ್ಥನಿರ್ವೃತಂ ಕಿಂಚಿದಧೀತಂ ಯನ್ನ ಸತ್ಯತಃ ।
ತತ್ಸರ್ವಂ ತವ ಕಾಮಾಂಶ್ಚ ದದಾಮಿ ತವ ಸಿದ್ಧಯೇ ॥೫೪॥

ಗುರ್ವಿಣ್ಯಭಿಗಮೇ ಸನ್ಧ್ಯಾನಿತ್ಯಕಾರ್ಯವ್ಯತಿಕ್ರಮೇ ॥೫೫॥

ಅಸಚ್ಛಾಸ್ತ್ರಕ್ರಿಯಾಲಾಪದೂಷಿತೇಷು ಚ ದುಃಸಹ ।
ತವಾಭಿಭವಸಾಮರ್ಥ್ಯಂ ಭವಿಷ್ಯತಿ ಸದಾ ನೃಷು ॥೫೬॥

---

೫೨. ಯಕ್ಷ್ಮನೆ! ಮತ್ತು ದ್ವಿತೀಯವಿವಾಹವನ್ನು ಹೊಂದಿದ ಸ್ತ್ರೀಯಲ್ಲಿ ಜನಿಸಿದ ಪೌನರ್ಭವನೆಂಬ ಪುತ್ರನು ಮಾಡಿರುವ ಆಮುಷ್ಮಿಕಕರ್ಮದ ಹಾಗು ಪೌನರ್ಭವಳೆಂಬ ಸ್ತ್ರೀಯು ಮಾಡಿರುವ ವಿಶಿಷ್ಟಕರ್ಮಗಳ ಫಲವು ನಿನಗೆ ತೃಪ್ತಿಯನ್ನು ಕೊಡುವುವು.

೫೩. ಯಕ್ಷ್ಮರಾಜನೆ! ಕನ್ಯೆಯ ಶುಲ್ಕರೂಪವಾಗಿ ಧನವನ್ನು ಆರ್ಜಿಸಿ ಆ ಧನದಿಂದ ಮಾಡಿರುವ ಪುಣ್ಯಕರ್ಮ ಮತ್ತು ಅಸಚ್ಛಾಸ್ತ್ರಗಳಲ್ಲಿ ನಿರ್ದಿಷ್ಟವಾದ ಕರ್ಮಗಳ ಫಲಗಳು ನಿನಗೆ ಪುಷ್ಟಿಸಾಧಕಗಳಾಗುವುವು.

೫೪. ಮತ್ತು ಕರ್ತವ್ಯವೆಂಬ ಪರಮಾರ್ಥಬುದ್ಧಿಯಿಲ್ಲದೆ ಧನದ ಆರ್ಜನೆಗಾಗಿ ಯಾವ ಅಧ್ಯಯನ ಮಾಡಲ್ಪಡುವುದೋ, ಅದೆಲ್ಲವೂ ನಿನ್ನದಾಗು- ವುದು. ಇಷ್ಟೇ ಅಲ್ಲ. ನಿನ್ನ ಇಷ್ಟಸಿದ್ಧಿಗೆ ಇನ್ನೂ ಅನೇಕ ವರಗಳನ್ನು ಕೊಡುವೆನು.

೫೫. ಗರ್ಭಿಣಿಯಾದ ನಾರಿಯ ಸಂಗಮಾಡಿದರೆ, ಹಾಗು ಸಂಧ್ಯಾ- ವಂದನ ಮುಂತಾದ ನಿತ್ಯಕರ್ಮಗಳನ್ನು ಅತಿಕ್ರಮಿಸಿದರೆ ಅಂತಹವರನ್ನು ಕಾಡಿ ಅವರ ಶ್ರೇಯಸ್ಸನ್ನು ನೀನು ಹೊಂದಬಹುದು.

೫೬. ದುಃಸಹನೆ! ಅಸಚ್ಛಾಸ್ತ್ರವಿಧಿಯಂತೆ ಆಚರಣೆ, ಅಸಚ್ಛಾಸ್ತ್ರ- ವಿಷಯದ ವ್ಯಾಖ್ಯಾನ ಇವುಗಳಿಂದ ದೂಷಿಸಲ್ಪಟ್ಟ ಮಾನವರನ್ನು ಕಾಡುವ ಸಾಮರ್ಥ್ಯವು ನಿನಗೆ ಉಂಟಾಗುವುದು.

ಪಙ್ಕ್ತಿಭೇದೇ ವೃಥಾಪಾಕೇ ಪಾಕಭೇದೇ ತಥಾ ಕೃತೇ ।
ನಿತ್ಯಂ ಚ ಗೇಹಕಲಹೇ ಭವಿತಾ ವಸತಿಸ್ತವ ॥೫೭॥

ಅಪೋಷ್ಯಮಾಣೇ ಚ ತಥಾ ಭೃತ್ಯಗೋವಾಹನಾದಿಕೇ ।
ಅಸನ್ಧ್ಯಭ್ಯುಕ್ಷಿತಾಗಾರೇ ಕಾಲೇ ತ್ವತ್ತೋ ಭಯಂ ನೃಣಾಮ್ ॥೫೮॥

ನಕ್ಷತ್ರಗ್ರಹಪೀಡಾಸು ತ್ರಿವಿಧೋತ್ಪಾತದರ್ಶನೇ ।
ಅಶಾನ್ತಿಕಪರಾನ್ ಯಕ್ಷ್ಮನ್ನರಾನಭಿಭವಿಷ್ಯಸಿ ॥೫೯॥

ವೃಥೋಪವಾಸಿನೋ ಮರ್ತ್ಯಾ ದ್ಯೂತಸ್ತ್ರೀಷು ಸದಾ ರತಾಃ ।
ತ್ವದ್ಭಾಷಣೋಪಕರ್ತಾರೋ ಬೈಡಾಲವ್ರತಿಕಾಶ್ಚ ಯೇ ॥೬೦॥

---

೫೭. ಮತ್ತು ಭೋಜನ ಸಮಯದಲ್ಲಿ ಪಂಕ್ತಿಭೇದ, ಸ್ವಾರ್ಥಕ್ಕೋಸ್ಕರ ಮಾಡಿಸಿರುವ ವೃಥಾಪಾಕ, ಒಬ್ಬೊಬ್ಬರಿಗೊಂದೊಂದು ಬಗೆಯ ಪಾಕಭೇದ ಹಾಗು ನಿತ್ಯವೂ ಗೃಹಕಲಹಗಳು ಇರುವೆಡೆಗಳಲ್ಲಿ ನಿನ್ನ ವಸತಿಯಿರುವಂತಾಗಲಿ.

೫೮. ಯಾವ ಮನೆಯಲ್ಲಿ ಭೃತ್ಯ, ಗೋವು, ವಾಹನ ಮುಂತಾದ ಪೋಷ್ಯಪ್ರಾಣಿಗಳನ್ನು ಪೋಷಿಸುವುದಿಲ್ಲವೋ ಹಾಗು ಯಾವ ಮನೆಯಲ್ಲಿ ಸಂಜೆ-ಹೊತ್ತಿನಲ್ಲಿ ಪ್ರೋಕ್ಷಣಾದಿಗಳಿಂದ ಪವಿತ್ರತೆಯ ಸಂಸ್ಕಾರವಿರುವುದಿಲ್ಲವೋ ಆ ಮನೆಯಲ್ಲಿರುವ ಮಾನವರಿಗೆ ನಿನ್ನಿಂದ ಭಯವುಂಟಾಗಲಿ.

೫೯. ಯಕ್ಷ್ಮನೆ! ನಕ್ಷತ್ರ-ಗ್ರಹಗಳ ದೋಷದಿಂದ ಉಂಟಾಗುವ ಪೀಡಾಸಮಯಗಳಲ್ಲಿಯೂ ದಿವ್ಯ, ಭೌಮ, ಆನ್ತರಿಕ್ಷವೆಂಬ ಮೂರು ಬಗೆಯ ಉತ್ಪಾತಗಳನ್ನು ಕಂಡ ಸಮಯಗಳಲ್ಲಿಯೂ ಶಾಂತಿಯನ್ನು ಮಾಡದಿರುವ ಜನರನ್ನು ನೀನು ಪೀಡಿಸುತ್ತೀಯೆ.

೬೦. ನಿಮಿತ್ತವಿಲ್ಲದೆ ವೃಥೋಪವಾಸಮಾಡುವವರು, ದ್ಯೂತ-ಸ್ತ್ರೀ ವ್ಯಸನಗಳಲ್ಲಿ ತತ್ಪರರು, ನಿನಗೆ ಸಮ್ಮತವಾದ ದುಷ್ಟಭಾಷಣ ಮಾಡಿ ಉಪಕರಿಸು-ವವರು ಮತ್ತು ವಂಚನೆಯಿಂದ ಬಿಡಾಲವ್ರತಧಾರಿಗಳು ಇವರ ಸತ್ಫಲಗಳೆಲ್ಲವೂ ನಿನಗೆ ಭೋಜ್ಯವಾಗಲಿ.

ಅಬ್ರಹ್ಮಚಾರಿಣಾಧೀತಮಿಜ್ಯಾ ಚಾವಿದುಷಾ ಕೃತಾ ।
ತಪೋವನೇ ಗ್ರಾಮ್ಯಭುಜಾಂ ತಥೈವಾನಿರ್ಜಿತಾತ್ಮನಾಮ್ ॥೬೧॥

ಬ್ರಾಹ್ಮಣಕ್ಷತ್ರಿಯವಿಶಾಂ ಶೂದ್ರಾಣಾಂ ಚ ಸ್ವಕರ್ಮತಃ ।
ಪರಿಚ್ಯುತಾನಾಂ ಯಾ ಚೇಷ್ಟಾ ಪರಲೋಕಾರ್ಥಮೀಪ್ಸತಾಮ್ ॥೬೨॥

ತಸ್ಯಾಶ್ಚ ಯತ್ಫಲಂ ಸರ್ವಂ ತತ್ತೇ ಯಕ್ಷ್ಮನ್ಭವಿಷ್ಯತಿ ।
ಅನ್ಯಚ್ಚ ತೇ ಪ್ರಯಚ್ಛಾಮಿ ಪುಷ್ಟ್ಯರ್ಥಂ ಸನ್ನಿಬೋಧ ತತ್ ॥೬೩॥

ಭವತೋ ವೈಶ್ವದೇವಾನ್ತೇ ನಾಮೋಚ್ಚಾರಣಪೂರ್ವಕಮ್ ।
ಏತತ್ತವೇತಿ ದಾಸ್ಯನ್ತಿ ಭವತೋ ಬಲಿಮೂರ್ಜಿತಮ್ ॥೬೪॥

---

೬೧. ಮತ್ತು ಬ್ರಹ್ಮಚರ್ಯವಿಲ್ಲದೇ ಮಾಡುವ ಅಧ್ಯಯನ, ಜ್ಞಾನವಿಲ್ಲದೇ ಆಚರಿಸುವ ಯಾಗ-ಹೋಮ, ತಪೋವನದಲ್ಲಿ ವಾಸಮಾಡುತ್ತ ಅನುಭವಿಸುವ ಗ್ರಾಮ್ಯಭೋಗ ಮತ್ತು ಇಂದ್ರಿಯನಿಗ್ರಹವಿಲ್ಲದವರ ಸ್ವಚ್ಛಂದ ವರ್ತನೆ—ಇವುಗಳು ನಿನ್ನ ಇಷ್ಟಾರ್ಥಗಳನ್ನು ಕೊಡುವುವು.

೬೨. ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರು ತಮಗೆ ವಿಹಿತವಾದ ಧರ್ಮದಿಂದ ಭ್ರಷ್ಟರಾಗಿ ಪರಲೋಕಸುಖಕ್ಕಾಗಿ ಆಚರಿಸುವ ಕರ್ಮಗಳ ಫಲವು ನಿನಗೆ ಪುಷ್ಟಿಯನ್ನು ಕೊಡುವುದಾಗಲಿ.

೬೩. ಎಲೈ ಯಕ್ಷ್ಮಮೂರ್ತಿಯೇ! ಧರ್ಮಭ್ರಷ್ಟರು ಮಾಡುವ ಎಲ್ಲ ಚೇಷ್ಟೆಗಳ ಫಲವು ನಿನ್ನದಾಗುವುದು. ಇನ್ನೂ ನಿನಗೆ ಪುಷ್ಟಿಸಾಧನಗಳನ್ನು ಕೊಡುವೆನು. ನೀನು ಅವುಗಳನ್ನು ಕೇಳು.

೬೪. ಧಾರ್ಮಿಕರು ವೈಶ್ವದೇವವನ್ನು ಮಾಡಿ, ಕಡೆಯಲ್ಲಿ ನಿನ್ನ ನಾಮೋಚ್ಚಾರಣೆಯನ್ನು ಮಾಡುತ್ತ ಹೆಚ್ಚಾದ ಬಲಿಯ ಅನ್ನವನ್ನು "ಇದನ್ನು ನಿನಗೆ ಅರ್ಪಿಸುವೆನು" ಎಂದು ಧ್ಯಾನಮಾಡಿ ನಿನಗೆ ಅರ್ಪಿಸುವರು.

ಯಃ ಸಂಸ್ಕೃತಾಶೀ ವಿಧಿವಚ್ಛುಚಿರನ್ತಸ್ತಥಾ ಬಹಿಃ ।
ಅಲೋಲುಪೋ ಜಿತಸ್ತ್ರೀಕಸ್ತದ್ಗೇಹಮುಪವರ್ಜಯ ॥೬೫॥

ಪೂಜ್ಯನ್ತೇ ಹವ್ಯಕವ್ಯಾಭ್ಯಾಂ ದೇವತಾಃ ಪಿತರಸ್ತಥಾ ।
ಜಾಮಯೋಽತಿಥಯಶ್ಚಾಪಿ ತದ್ಗೇಹಂ ಯಕ್ಷ್ಮ ವರ್ಜಯ ॥೬೬॥

ಯತ್ರ ಮೈತ್ರೀ ಗೃಹೇ ಬಾಲವೃದ್ಧಯೋಷಿನ್ನರೇಷು ಚ ।
ತಥಾ ಸ್ವಜನವರ್ಗೇಷು ಗೃಹಂ ತಚ್ಚಾಪಿ ವರ್ಜಯ ॥೬೭॥

ಯೋಷಿತೋಽಭಿರತಾ ಯತ್ರ ನ ಬಹಿರ್ಗಮನೋತ್ಸುಕಾಃ ।
ಲಜ್ಜಾನ್ವಿತಾಃ ಸದಾ ಗೇಹೇ ಯಕ್ಷ್ಮಂಸ್ತತ್ಪರಿವರ್ಜಯ ॥೬೮॥

---

೬೫. ಯಾವ ಮಾನವನು ಸಂಸ್ಕೃತವಾದ ಅನ್ನವನ್ನು ಭುಂಜಿಸುವನೋ, ಒಳಗೆ-ಹೊರಗೆ ಎಲ್ಲ ಭಾಗದಲ್ಲಿಯೂ ಶುಚಿಯಾಗಿರುವನೋ, ಲೋಭವನ್ನು ಗೆದ್ದಿರುವನೋ ಮತ್ತು ಸ್ತ್ರೀವ್ಯಸನವನ್ನು ದೂರಮಾಡಿರುವನೋ ಅವನ ಮನೆಯನ್ನು ನೀನು ವರ್ಜಿಸು.

೬೬. ಯಕ್ಷ್ಮರಾಜನೆ! ಯಾವ ಮನೆಯಲ್ಲಿ ಹವ್ಯ-ಕವ್ಯಗಳನ್ನು ಅರ್ಪಿಸಿ ದೇವತೆ-ಪಿತೃಗಳು ಪೂಜಿಸಲ್ಪಡುವರೋ ಮತ್ತು ಅತಿಥಿ-ಬಂಧುಗಳು ಸತ್ಕರಿಸಲ್ಪಡುವರೋ ಅಂತಹ ಮನೆಯನ್ನು ನೀನು ದೂರಮಾಡು.

೬೭. ಯಾವ ಮನೆಯಲ್ಲಿ ವಾಸಮಾಡುವ ಬಾಲಕರು, ವೃದ್ಧರು, ಸ್ತ್ರೀಯರು, ಪುರುಷರು ಮತ್ತು ಸ್ವಜನವರ್ಗ—ಇವರು ಅನ್ಯೋನ್ಯ ಪ್ರೀತಿಯಿಂದ ವಾಸಮಾಡುವರೋ ಆ ಮನೆಯನ್ನು ನೀನು ವರ್ಜನಮಾಡು.

೬೮. ಯಕ್ಷ್ಮಮೂರ್ತಿಯೇ! ಯಾವ ಮನೆಯಲ್ಲಿ ಸ್ತ್ರೀಯರು ಸ್ವಕರ್ತವ್ಯದಲ್ಲಿ ತತ್ಪರರಾಗಿ ಹೊರಗಡೆ ಸಂಚರಿಸುವ ದುರಭ್ಯಾಸವನ್ನು ಬಿಟ್ಟು ಯಾವಾಗಲೂ ಲಜ್ಜಾವತಿಯರಾಗಿ ಇರುವರೋ ಅಂತಹ ಮನೆಯನ್ನು ನೀನು ಆಶ್ರಯಿಸಬೇಡ.

ವಯಃಸಮ್ಬನ್ಧಯೋಗ್ಯಾನಿ ಶಯನಾನ್ಯಶನಾನಿ ಚ ।
ಯತ್ರ ಗೇಹೇ ತ್ವಯಾ ಯಕ್ಷ್ಮಂಸ್ತದ್ವರ್ಜ್ಯಂ ವಚನಾನ್ಮಮ ॥೬೯॥

ಯತ್ರ ಕಾರುಣಿಕಾ ನಿತ್ಯಂ ಸಾಧುಕರ್ಮಣ್ಯವಸ್ಥಿತಾಃ ।
ಸಾಮಾನ್ಯೋಪಸ್ಕರೈರ್ಯುಕ್ತಾಸ್ತ್ಯಜೇಥಾ ಯಕ್ಷ್ಮ ತದ್ಗೃಹಮ್ ॥೭೦॥

ಯತ್ರಾಸನಸ್ಥಾಸ್ತಿಷ್ಠತ್ಸು ಗುರುವೃದ್ಧದ್ವಿಜಾತಿಷು ।
ಉತ್ತಿಷ್ಠನ್ತಿ ಗೃಹಂ ತಚ್ಚ ವರ್ಜ್ಯಂ ಯಕ್ಷ್ಮಂಸ್ತ್ವಯಾ ಸದಾ ॥೭೧॥

ತರುಗುಲ್ಮಾದಿಭಿರ್ದ್ವಾರಂ ನ ವಿದ್ಧಂ ಯಸ್ಯ ವೇಶ್ಮನಃ ।
ಮರ್ಮಭೇದೋ ನ ವಾ ಪುಂಸಸ್ತಚ್ಛ್ರೇಯೋ ಭವನಂ ನ ತೇ॥೭೨॥

---

೬೯. ಯಕ್ಷ್ಮನೆ! ಯಾವ ಮನೆಯಲ್ಲಿ ಶಯನ-ಭೋಜನ ಮುಂತಾದ ಭೋಗಗಳು ಅಲ್ಲಿ ವಾಸಮಾಡುವ ಜನರ ವಯಸ್ಸು, ಸಂಬಂಧ—ಇವುಗಳಿಗೆ ಅನುರೂಪವಾಗಿ ಗೌರವದಿಂದ ಕೂಡಿರುವುವೋ ಆ ಮನೆಯನ್ನು ನನ್ನ ಆದೇಶದಂತೆ ನೀನು ವರ್ಜಿಸಬೇಕು.

೭೦. ಯಕ್ಷ್ಮನೆ! ಕರುಣಾಪೂರ್ಣರೂ, ಸಾಧುವಾದ ಕರ್ಮವನ್ನು ಆಚರಿಸುವವರೂ ಮತ್ತು ಸಾಮಾನ್ಯವಾದ ಉಪಕರಣ-ಭೋಗ್ಯವಸ್ತುಗಳಿಂದ ಕೂಡಿದವರೂ ಆದ ಧಾರ್ಮಿಕರು ಎಲ್ಲಿ ವಾಸಮಾಡುವರೋ ಆ ಮನೆಯನ್ನು ನೀನು ಬಿಡು.

೭೧- ಯಕ್ಷ್ಮನೇ! ಯಾವ ಮನೆಯಲ್ಲಿ ಗುರು-ವೃದ್ಧ-ದ್ವಿಜ ಮುಂತಾದ ಮಾನ್ಯರು ನಿಂತಿರುವಾಗ ಆಸನದಲ್ಲಿ ಕುಳಿತಿರುವ ಕಿರಿಯರು ಆಸನಗಳಿಂದ ಎದ್ದು ನಿಲ್ಲುವರೋ ಆ ಮನೆಯನ್ನು ನೀನು ಯಾವಾಗಲೂ ತ್ಯಜಿಸಬೇಕು.

೭೨. ಯಾವ ಮನೆಯ ಬಾಗಿಲಿನ ಪ್ರದೇಶವು ಮರ-ಗಿಡ-ಪೊದೆ ಮುಂತಾದುವು ಬೆಳೆದು ದುರ್ಗಮವಾಗದೆಯಿರುವುದೋ ಮತ್ತು ಪುರುಷನಿಗೆ ಮರ್ಮಭೇದವಾಗದೆಯಿರುವುದೋ ಅಂತಹ ಮನೆಯು ನಿನಗೆ ಪ್ರಶಸ್ತವಾದುದಲ್ಲ.

ದೇವತಾಪಿತೃಭೃತ್ಯಾನಾಮತಿಥೀನಾಂ ಚ ವರ್ತನಮ್ ।
ಯಸ್ಯಾವಶಿಷ್ಟೇನಾನ್ನೇನ ಪುಂಸಸ್ತಸ್ಯ ಗೃಹಂ ತ್ಯಜ ॥೭೩॥

ಸತ್ಯವಾಕ್ಯಾನ್ ಕ್ಷಮಾಶೀಲಾನಹಿಂಸ್ರಾನ್ನಾನುತಾಪಿನಃ ।
ಪುರುಷಾನೀದೃಶಾನ್ಯಕ್ಷ್ಮಂಸ್ತ್ಯಜೇಥಾಶ್ಚಾನಸೂಯಕಾನ್ ॥೭೪॥

ಭರ್ತೃಶುಶ್ರೂಷಣೇ ಯುಕ್ತಾಮಸತ್ಸ್ತ್ರೀಸಙ್ಗವರ್ಜಿತಾಮ್ ।
ಕುಟುಮ್ಬಭರ್ತೃಶೇಷಾನ್ನಪುಷ್ಟಾಂ ಚ ತ್ಯಜ ಯೋಷಿತಮ್ ॥೭೫॥

ಯಜನಾಧ್ಯಯನಾಭ್ಯಾಸದಾನಾಸಕ್ತಮತಿಂ ಸದಾ ।
ಯಾಜನಾಧ್ಯಾಪನಾದಾನಕೃತವೃತ್ತಿಂ ದ್ವಿಜಂ ತ್ಯಜ ॥೭೬॥

---

೭೩. ಮತ್ತು ದೇವತೆ-ಪಿತೃ-ಭೃತ್ಯ-ಅತಿಥಿ—ಇವರನ್ನು ಯಥೋಚಿತವಾಗಿ ಸತ್ಕರಿಸಿ ಉಳಿದಿರುವ ಅನ್ನದಿಂದ ಯಾವ ಮಾನವನು ಭೋಜನ ಮಾಡುವನೋ ಅವನ ಮನೆಯನ್ನು ನೀನು ವರ್ಜನಮಾಡು.

೭೪. ಯಕ್ಷ್ಮನೆ! ಸತ್ಯವನ್ನು ನುಡಿಯುವವರೂ, ಕ್ಷಮಾಶೀಲವುಳ್ಳವರೂ, ಹಿಂಸಾವರ್ಜಿತರೂ, ಪರಪೀಡೆಯನ್ನು ಬಿಟ್ಟವರೂ ಮತ್ತು ಅಸೂಯಾರಹಿತರೂ ಆದ ಸಾಧುಪುರುಷರನ್ನು ನೀನು ಬಾಧಿಸಬೇಡ

೭೫. ಹಾಗು ಪತಿಶುಶ್ರೂಷೆಯಲ್ಲಿ ನಿರತಳಾದವಳೂ, ದುಷ್ಟಸ್ತ್ರೀಯರ ಸಂಗವನ್ನು ಬಿಟ್ಟವಳೂ ಮತ್ತು ಕುಟುಂಬವರ್ಗ-ಪತಿದೇವ ಎಲ್ಲರಿಗೂ ಅರ್ಪಿಸಿ ಮಿಕ್ಕ ಅನ್ನದಿಂದ ಪುಷ್ಟಳೂ ಆದ ಸ್ತ್ರೀಯನ್ನು ನೀನು ವರ್ಜಿಸು.

೭೬. ಯಜನ, ಅಧ್ಯಯನ, ದಾನವೆಂಬ ಮೂರು ಕರ್ಮಗಳಲ್ಲಿ ಮತ್ತೆ ಮತ್ತೆ ಆಸಕ್ತಿ ಹೊಂದಿರುವವನೂ ಮತ್ತು ಯಾಜನ, ಅಧ್ಯಾಪನ, ಪ್ರತಿಗ್ರಹವೆಂಬ ಮೂರು ಕರ್ಮಗಳಿಂದ ಜೀವನೋಪಾಯವನ್ನು ಹೊಂದಿದವನೂ ಆದ ವಿಪ್ರನನ್ನು ವರ್ಜಿಸು.

ದಾನಾಧ್ಯಯನಯಜ್ಞೇಷು ಸದೋಽಪ್ಯುಕ್ತಂ ಚ ದುಸ್ಸಹ ।
ಕ್ಷತ್ರಿಯಂ ತ್ಯಜ ಸಚ್ಛುಲ್ಕಶಸ್ತ್ರಾಜೀವಾತ್ತವೇತನಮ್ ॥೭೭॥

ತ್ರಿಭಿಃ ಪೂರ್ವಗುಣೈರ್ಯುಕ್ತಂ ಪಾಶುಪಾಲ್ಯವಣಿಜ್ಯಯೋಃ ।
ಕೃಷೇಶ್ಚಾವಾಪ್ತವೃತ್ತಿಂ ಚ ತ್ಯಜ ವೈಶ್ಯಮಕಲ್ಮಷಮ್ ॥೭೮॥

ದಾನೇಜ್ಯಾದ್ವಿಜಶುಶ್ರೂಷಾತತ್ಪರಂ ಯಕ್ಷ್ಮ ಸನ್ತ್ಯಜ ।
ಶೂದ್ರಂ ಚ ಬ್ರಾಹ್ಮಣಾದೀನಾಂ ಶುಶ್ರೂಷಾವೃತ್ತಿಪೋಷಕಮ್ ॥೭೯॥

ಶ್ರುತಿಸ್ಮೃತ್ಯವಿರೋಧೇನ ಕೃತವೃತ್ತಿರ್ಗೃಹೇ ಗೃಹೀ ।
ಯತ್ರ ತತ್ರ ಚ ತತ್ಪತ್ನೀ ತಸ್ಯೈವಾನುಗತಾತ್ಮಿಕಾ ॥೮೦॥

---

೭೭. ದುಃಸಹನೆ! ದಾನ, ಅಧ್ಯಯನ, ಯಜ್ಞಗಳೆಂಬ ತ್ರಿಕರ್ಮಗಳಲ್ಲಿ ಆಸಕ್ತಿಯುಳ್ಳವನೂ, ನ್ಯಾಯವಾದ ಶುಲ್ಕಗ್ರಹಣ, ಮೃಗಬೇಟೆಗಳ ವ್ಯವಸ್ಥೆಯುಳ್ಳವನೂ ಆದ ಕ್ಷತ್ರಿಯನನ್ನು ವರ್ಜನಮಾಡು.

೭೮. ಹಾಗು ದಾನ, ಯಜ್ಞ, ಅಧ್ಯಯನವೆಂಬ ಮೊದಲಿನ ತ್ರಿಕರ್ಮಗಳಿಂದ ಕೂಡಿದವನೂ ಪಶುಪಾಲನ, ವ್ಯಾಪಾರ, ಕೃಷಿವ್ಯಾಪಾರಗಳಿಂದ ಜೀವನವನ್ನು ಹೊಂದಿದವನೂ ಆದ ನಿಷ್ಕಲಂಕನಾದ ವೈಶ್ಯನನ್ನು ಆಶ್ರಯಿಸಬೇಡ.

೭೯. ದಾನ-ಯಜ್ಞ ದ್ವಿಜಶುಶ್ರೂಷೆಯೆಂಬ ಸ್ವಧರ್ಮತತ್ಪರನೂ ಮತ್ತು ಬ್ರಾಹ್ಮಣ ಮುಂತಾದ ತ್ರೈವರ್ಣಿಕರ ಶುಶ್ರೂಷಾವೃತ್ತಿಯಿಂದ ಪೋಷಣವನ್ನು ಹೊಂದಿದವನೂ ಆದ ಶೂದ್ರನನ್ನು ಪೀಡಿಸಬೇಡ.

೮೦. ಯಾವ ಮನೆಯಲ್ಲಿ ಶ್ರುತಿ-ಸ್ಮೃತಿಗಳಿಗೆ ವಿರೋಧವಿಲ್ಲದ ಹಾಗೆ ಸ್ವಕರ್ಮಗಳನ್ನು ಮಾಡುತ್ತ ಗೃಹಸ್ಥನು ವಾಸಮಾಡುತ್ತಿದ್ದು ಅವನ ಪತ್ನಿಯು ಸರ್ವಭಾವಗಳಿಂದ ಅವನನ್ನು ಅನುವರ್ತಿಸಿಕೊಂಡು ವಾಸಮಾಡುತ್ತಿರುವ ಮನೆಯನ್ನು ಬಿಡು.

ಯತ್ರ ಪುತ್ರೋ ಗುರೋಃ ಪೂಜಾಂ ದೇವಾನಾಂ ಚ ತಥಾ ಪಿತುಃ ।
ಪತ್ನೀ ಚ ಭರ್ತುಃ ಕುರುತೇ ತತ್ರಾಲಕ್ಷ್ಮೀಭಯಂ ಕುತಃ ॥೬೧॥

ಸದಾನುಲಿಪ್ತಂ ಸನ್ಧ್ಯಾಸು ಗೃಹಮುಮ್ಬುಸಮುಕ್ಷಿತಮ್ ।
ಕೃತಪುಷ್ಪಬಲಿಂ ಯಕ್ಷ್ಮೇ ನ ತ್ವಂ ಶಕ್ನೋಷಿ ವೀಕ್ಷಿತುಮ್ ॥೬೨॥

ಭಾಸ್ಕರಾದೃಷ್ಟಶಯ್ಯಾನಿ ನಿತ್ಯಾಗ್ನಿಸಲಿಲಾನಿ ಚ ।
ಸೂರ್ಯಾವಲೋಕದೀಪಾನಿ ಲಕ್ಷ್ಮ್ಯಾಃ ಗೇಹಾನಿ ಭಾಜನಮ್॥೬೩॥

ಯತ್ರೋಕ್ಷಾ ಚನ್ದನಂ ವೀಣಾ ಆದರ್ಶೋ ಮಧುಸರ್ಪಿಷೀ ।
ವಿಷಾಜ್ಯತಾಮ್ರಪಾತ್ರಾಣಿ ತದ್ಗೃಹಂ ನ ತವಾಶ್ರಯಃ ॥೬೪॥

---

೬೧. ಯಾವ ಮನೆಯಲ್ಲಿ ಪುತ್ರನು ಗುರು, ಪಿತೃ, ದೇವತೆಗಳ ಪೂಜೆಯನ್ನು ಮಾಡುವನೋ ಮತ್ತು ಪತ್ನಿಯು ಭಕ್ತಿಯಿಂದ ಪತಿಶುಶ್ರೂಷೆಯನ್ನು ಮಾಡುವಳೋ ಆ ಮನೆಯಲ್ಲಿ ಅಲಕ್ಷ್ಮಿಯ ಭಯವೆಲ್ಲಿಯದು ?

೬೨. ಯಕ್ಷ್ಮೆನೆ! ಯಾವ ಮನೆಯು ಸಂಜೆಯ ಹೊತ್ತಿನಲ್ಲಿ ನೀರನ್ನು ಹಾಕಿ ಸಾರಿಸಿ ಗುಡಿಸಿ ರಂಗೋಲಿ ಮುಂತಾದುವುಗಳಿಂದ ಅಲಂಕರಿಸಲ್ಪಟ್ಟಿರುವುದೋ ಮತ್ತು ಪುಷ್ಪಬಲಿಗಳನ್ನು ಅರ್ಪಿಸಿ ಪೂಜಿಸಲ್ಪಟ್ಟಿರುವುದೋ ಆ ಮನೆಯನ್ನು ನೀನು ನೋಡಲಾರೆ.

೬೩. ಸೂರ್ಯರಶ್ಮಿಯು ಬೀಳದಿರುವ ಶಯನಗಳುಳ್ಳದ್ದೂ, ಅಗ್ನಿ-ಜಲಗಳಿಂದ ಯಾವಾಗಲೂ ಕೂಡಿರುವುದೂ, ಸೂರ್ಯ ಅಥವಾ ದೀಪದ ಬೆಳಕು ತಪ್ಪದೇ ಇರುವುದೂ ಆದ ಮನೆಗಳು ಲಕ್ಷ್ಮಿಯ ವಾಸಮಂದಿರಗಳಾಗುವುವು.

೬೪. ಯಾವ ಮನೆಯಲ್ಲಿ ಗೂಳಿ, ಚಂದನ, ವೀಣೆ, ಕನ್ನಡಿ, ಜೇನು-ತುಪ್ಪ, ತುಪ್ಪ ಮತ್ತು ವಿಷರೂಪವನ್ನು ಹೊಂದಿದ ತುಪ್ಪದ ತಾಮ್ರಪಾತ್ರೆಗಳು ಇರುವುವೋ ಅಂತಹ ಮನೆಯು ನಿನಗೆ ಆಶ್ರಯವಾಗುವುದಿಲ್ಲ.

ಯತ್ರ ಕಣ್ಟಕಿನೋ ವೃಕ್ಷಾ ಯತ್ರ ನಿಷ್ಪಾವವಲ್ಲರೀ ।
ಭಾರ್ಯಾ ಪುನರ್ಭೂರ್ವಲ್ಮೀಕಸ್ತದ್ಯಕ್ಷ್ಮ ತವ ಮನ್ದಿರಮ್ ॥೮೫॥

ಯಸ್ಮಿನ್ಗೃಹೇ ನರಾಃ ಪಞ್ಚ ಸ್ತ್ರೀತ್ರಯಂ ತಾವತೀಶ್ಚ ಗಾಃ ।
ಅನ್ಧಕಾರೇನ್ಧನಾಗ್ನಿಶ್ಚ ತದ್ಗೃಹಂ ವಸತಿಸ್ತವ ॥೮೬॥

ಏಕಚ್ಛಾಗಂ ದ್ವಿಬಾಲೇಯಂ ತ್ರಿಗವಂ ಪಞ್ಚಮಾಹಿಷಮ್ ।
ಷಡಶ್ವಂ ಸಪ್ತಮಾತಙ್ಗಂ ಗೃಹಂ ಯಕ್ಷ್ಮಾಶು ಶೋಷಯ ॥೮೭॥

ಕುದ್ದಾಲದಾತ್ರಪಿಟಕಂ ತದ್ವತ್ ಸ್ಥಾಲ್ಯಾದಿಭಾಜನಮ್ ।
ಯತ್ರ ತತ್ರೈವ ಕ್ಷಿಪ್ತಾನಿ ತವ ದದ್ಯುಃ ಪ್ರತಿಶ್ರಯಮ್ ॥೮೮॥

---

೮೫. ಯಕ್ಷ್ಮನೇ ! ಯಾವ ಮನೆಯಲ್ಲಿ ಮುಳ್ಳುಗಿಡಗಳು ತುಂಬಿರುವುವೋ, ಅವರೆಯ ಬಳ್ಳಿಯು ಬೆಳೆದಿರುವುದೋ, ಯಜಮಾನಿತಿಯು ದ್ವಿತೀಯ ವಿವಾಹವನ್ನು ಹೊಂದಿರುವಳೋ, ಮತ್ತು ಹುತ್ತ ಬೆಳೆದಿರುವುದೋ ಅದು ನಿನ್ನ ವಾಸದ ಮನೆಯಾಗುವುದು. ಅದನ್ನು ನೀನು ಪ್ರವೇಶಿಸು.

೮೬. ಯಾವ ಮನೆಯಲ್ಲಿ ಐದು ಮಂದಿ ಪುರುಷರು, ಮೂರು ಮಂದಿ ಸ್ತ್ರೀಯರು, ಮೂರು ಹಸುಗಳು ಮತ್ತು ಕತ್ತಲಿನಲ್ಲಿ ಸೌದೆ-ಬೆಂಕಿಗಳನ್ನಿರಿಸುವುದು—ಇವುಗಳಿವೆಯೋ ಆ ಮನೆಯು ನಿನ್ನ ವಾಸಗೃಹವಾಗುವುದು.

೮೭. ಯಕ್ಷ್ಮಮೂರ್ತಿಯೇ ! ಒಂದು ಆಡು, ಎರಡು ಕತ್ತೆಗಳು, ಮೂರು ಹಸುಗಳು, ಐದು ಎಮ್ಮೆಗಳು, ಆರು ಕುದುರೆಗಳು ಮತ್ತು ಏಳು ಆನೆಗಳು—ಇವುಗಳಿಂದ ಕೂಡಿದ ಮನೆಯನ್ನು ನೀನು ಬೇಗ ಕ್ಷಯಗೊಳಿಸು.

೮೮. ಗುದ್ದಲಿ, ಕುಡಲು, ಮಂಕ್ರಿ, ತಪ್ಪಲೆ ಮುಂತಾದ ಪಾತ್ರೆಗಳು—ಇವುಗಳನ್ನು ವ್ಯವಸ್ಥೆಯಿಂದ ಇಡದೆ ಎಲ್ಲಿಯಾದರಲ್ಲಿ ಎಸೆಯಲ್ಪಟ್ಟದ್ದರೆ ಇವು ನಿನಗೆ ಆಶ್ರಯವನ್ನು ಕೊಡುವುವು,

ಮುಸಲೋಲೂಖಲೇ ಸ್ತ್ರೀಣಾಮಾಸ್ಯಾ ತದ್ವದುದುಮ್ಬರೇ ।
ಅವಸ್ಕರೇ ಮನ್ತ್ರಣಂ ಚ ಯಕ್ಷ್ಮಂಸ್ತದುಪಕೃತ್ತವ ॥೮೯॥

ಲಙ್ಘ್ಯನ್ತೇ ಯತ್ರ ಧಾನ್ಯಾನಿ ಪಕ್ವಾಪಕ್ವಾನಿ ವೇಶ್ಮನಿ ।
ತದ್ವಚ್ಛಾಸ್ತ್ರಾಣಿ ತತ್ರ ತ್ವಂ ಯಥೇಷ್ಟಂ ಚರ ದುಃಸಹ ॥೯೦॥

ಸ್ಥಾಲೀಪಿಧಾನೇ ಯತ್ರಾಗ್ನಿರ್ದತ್ತೋ ದರ್ವೀಫಲೇನ ವಾ ।
ಗೃಹೇ ತತ್ರ ಹಿ ರಿಷ್ಟಾನಾಮಶೇಷಾಣಾಂ ಸಮಾಶ್ರಯಃ ॥೯೧॥

ಮಾನುಷಾಸ್ಥಿ ಗೃಹೇ ಯತ್ರ ದಿವಾರಾತ್ರಂ ಮೃತಸ್ಥಿತಿಃ ।
ತತ್ರ ಯಕ್ಷ್ಮ ತವಾವಾಸಸ್ತಥಾನ್ಯೇಷಾಂ ಚ ರಕ್ಷಸಾಮ್ ॥೯೨॥

---

೮೯. ಯಕ್ಷ್ಮರಾಜನೆ! ಒರಳು, ಒನಿಕೆಗಳ ಬಳಿಯಲ್ಲಿ ಹಾಗು ತಾಮ್ರದ ಮೇಲೆ ಸ್ತ್ರೀಯರು ನಿಂತುಕೊಳ್ಳುವುದು, ಕಸ ತುಂಬಿದ ಸ್ಥಳದಲ್ಲಿ ಮಾತು-ಕಥೆಗಳನ್ನು ಆಡುವುದು. ಇವುಗಳು ನಿನಗೆ ವಾಸವನ್ನು ಕೊಟ್ಟು ಉಪಕಾರಮಾಡುವುವು.

೯೦. ದುಃಸಹನೆ! ಯಾವ ಮನೆಯಲ್ಲಿ ಪಕ್ವ ಅಥವಾ ಅಪಕ್ವವಾಗಿದ್ದ ಧಾನ್ಯಗಳು ತುಳಿಯಲ್ಪಡುವುವೋ ಹಾಗು ಶಾಸ್ತ್ರೀಯ ವಿಧಾನಗಳು ಉಲ್ಲಂಘಿಸಲ್ಪಡುವುವೋ ಆ ಮನೆಯಲ್ಲಿ ನೀನು ಯಥೇಷ್ಟವಾಗಿ ವಾಸಮಾಡು. ಅದು ನಿನ್ನ ಸಂಚಾರ ಭೂಮಿಯಾಗಲಿ.

೯೧. ಯಾವ ಮನೆಯಲ್ಲಿ ಸ್ಥಾಲಿಯ ಮುಚ್ಚಳವಾದ ಪಾತ್ರೆಯಲ್ಲಿ ಬೆಂಕಿಯು ಇರಿಸಲ್ಪಡುವುದೋ ಸೌಟಿನಲ್ಲಿ ಬೆಂಕಿಯು ಒಂದೆಡೆಯಿಂದ ಮತ್ತೊಂದೆಡೆಗೆ ಒಯ್ಯಲ್ಪಡುವುದೋ ಆ ಮನೆಯಲ್ಲಿ ಎಲ್ಲ ಅನಿಷ್ಟಗಳಿಗೂ ಆಶ್ರಯವು ದೊರೆಯುವುದು.

೯೨. ಯಕ್ಷ್ಮಮೂರ್ತಿಯೇ! ಯಾವ ಮನೆಯಲ್ಲಿ ಮನುಷ್ಯನ ಮೂಳೆಯಿರುವುದೋ, ಮತ್ತು ಹಗಲು-ರಾತ್ರಿಗಳಲ್ಲಿ ಶವವಿರುವುದೋ ಅಂತಹ ಮನೆಯಲ್ಲಿ ನಿನಗೂ ಮತ್ತು ಇತರ ರಾಕ್ಷಸರಿಗೂ ವಾಸವು ದೊರೆಯುವುದು.

ಅದತ್ತ್ವಾ ಭುಞ್ಜತೇ ಯೋ ವೈ ಬನ್ಧೋಃ ಪಿಣ್ಡಂ ತಥೋದಕಮ್ ।
ಸಪಿಣ್ಡಾನ್ಸೋದಕಾಂಶ್ಚೈವ ತತ್ಕಾಲೇ ತಾನ್ನರಾನ್ಭಜ ॥೯೩॥

ಯತ್ರ ಪದ್ಮಮಹಾಪದ್ಮೌ ಸುರಭಿರ್ಮೋದಕಾಶಿನೀ ।
ವೃಷಭೈರಾವತೌ ಯತ್ರ ಕಲ್ಪ್ಯನ್ತೇ ತದ್ಗೃಹಂ ತ್ಯಜ ॥೯೪॥

ಅಶಸ್ತ್ರಾ ದೇವತಾ ಯತ್ರ ಸಶಸ್ತ್ರಾಶ್ಚಾಹವಂ ವಿನಾ ।
ಕಲ್ಪ್ಯನ್ತೇ ಮನುಜೈರರ್ಚ್ಯಾಸ್ತತ್ಪರಿತ್ಯಜ ಮನ್ದಿರಮ್ ॥೯೫॥

ಪೌರಜಾನಪದೈರ್ಯತ್ರ ಪ್ರಾಕ್ ಪ್ರಸಿದ್ಧಮಹೋತ್ಸವಾಃ ।
ಕ್ರಿಯನ್ತೇ ಪೂರ್ವವದ್ಗೇಹೇ ನ ತ್ವಂ ತತ್ರ ಗೃಹೇ ಚರ ॥೯೬॥

---

೯೩. ಸಪಿಂಡ-ಸೋದಕರಲ್ಲಿ ಮೃತನಾದ ಬಂಧುವಿಗೆ ಇತರರು ಪಿಂಡ-ಉದಕಗಳನ್ನು ಕೊಡದೆ ಯಾರು ಭೋಜನಮಾಡುವರೋ ಅಂತಹ ಮಾನವರನ್ನು ಅಂತಹ ಸಮಯದಲ್ಲಿ ನೀನು ಆವೇಶಮಾಡು.

೯೪. ಯಾವ ಮನೆಯಲ್ಲಿ ಪದ್ಮ-ಮಹಾಪದ್ಮಗಳೆಂಬ ನಿಧಿಗಳು, ಸಂತೋಷವನ್ನುಂಟುಮಾಡುವ ಮೋದಕಾದಿ ವಸ್ತುಗಳನ್ನು ಭುಂಜಿಸುವ ಗೋವು, ವೃಷಭ-ಐರಾವತಗಳು—ಇವುಗಳ ಚಿತ್ರವು ಬರೆಯಲ್ಪಟ್ಟಿರುವುದೋ ಆ ಮನೆಯನ್ನು ನೀನು ವರ್ಜಿಸು.

೯೫. ಮತ್ತು ಯಾವ ಮನೆಯಲ್ಲಿ ಮಾನವರಿಂದ ಶಸ್ತ್ರರಹಿತರಾದ ಮತ್ತು ಯುದ್ಧ ಪ್ರಸಂಗವಿಲ್ಲದೆ ಶಸ್ತ್ರಧಾರಿಗಳಾದ ದೇವತೆಗಳ ಮೂರ್ತಿಗಳು ಪೂಜೆಗೋಸ್ಕರ ಕಲ್ಪಿಸಲ್ಪಡುವುವೋ ಆ ಮನೆಯನ್ನು ನೀನು ದೂರಮಾಡು.

೯೬. ಎಲ್ಲಿ ಗ್ರಾಮ–ಪುರ–ದೇಶದ ಜನರು ಹಿಂದಿನ ಸಂಪ್ರದಾಯದಿಂದ ಬಂದಿರುವ ಮಹೋತ್ಸವಗಳನ್ನು ನಡೆಸುವರೋ ಮತ್ತು ಯಾವ ಮನೆಯಲ್ಲಿ ಹಿಂದಿನ ಸಂಪ್ರದಾಯವು ಆಚರಿಸಲ್ಪಡುವುದೋ ನೀನು ಅಲ್ಲಿ ಸಂಚರಿಸಬೇಡ.

ಶೂರ್ಪವಾತಘಟಾಮ್ಭೋಭಿಃ ಸ್ನಾನಂ ವಸ್ತ್ರಾಮ್ಬುವಿಪ್ರುಷೈಃ ।
ನಖಾಗ್ರಸಲಿಲೈಶ್ಚೈವ ತಾನ್ಯಾಹಿ ಹತಲಕ್ಷಣಾನ್ ॥೯೭॥

ದೇಶಾಚಾರಾನ್ಸಮಯಾಞ್ಜಾತಿಧರ್ಮಾಂ
ಜಪಂ ಹೋಮಂ ಮಙ್ಗಲಂ ದೇವತೇಷ್ಟಿಮ್ ।
ಸಮ್ಯಕ್ಶೌಚಂ ವಿಧಿವಲ್ಲೋಕವಾದಾನ್
ಪುಂಸಸ್ತ್ವಯಾ ಕುರ್ವತೋ ಮಾಸ್ತು ಸಙ್ಗಃ ॥೯೮॥

ಮಾರ್ಕಣ್ಡೇಯ ಉವಾಚ :—

ಇತ್ಯುಕ್ತ್ವಾ ದುಸ್ಸಹಂ ಬ್ರಹ್ಮಾ ತತ್ರೈವಾನ್ತರಧೀಯತ ।
ಚಕಾರ ಶಾಸನಂ ಸೋಽಪಿ ತಥಾ ಪಙ್ಕಜಜನ್ಮನಃ ॥೯೯॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಯಕ್ಷ್ಮಾನುಶಾಸನಂ
ನಾಮ ಸಪ್ತಚತ್ವಾರಿಂಶೋಽಧ್ಯಾಯಃ

---

೯೭. ಮೊರದಿಂದ ಗಾಳಿಯನ್ನು ಸೇವಿಸುವವರು, ಬಿಂದಿಗೆಯಿಂದ ನೀರನ್ನು ಹಾಕಿಕೊಳ್ಳುವವರು, ವಸ್ತ್ರೋದಕ ಉಗುರುನೀರುಗಳಿಂದ ಪ್ರೋಕ್ಷಣ-ಸ್ನಾನ ಮಾಡುವವರು ಈ ಕೆಟ್ಟ ಲಕ್ಷಣವಂತರ ಬಳಿಗೆ ನೀನು ಹೋಗು.

೯೮. ದೇಶಾಚಾರ, ಸಂಪ್ರದಾಯವಾದ ಕುಲಧರ್ಮ, ಜ್ಞಾತಿಧರ್ಮ, ಜಪ, ಹೋಮ, ಮಂಗಳ, ದೇವತಾಸೇವೆ, ಯಥಾವಿಧಿಯಾದ ಶೌಚಾನುಷ್ಠಾನ ಮತ್ತು ಸಾಧುಲೋಕದಲ್ಲಿ ಹೇಳಿರುವ ಶ್ರೇಷ್ಠಕರ್ಮಗಳನ್ನು ಮಾಡುತ್ತಿರುವ ಮಾನವರ ಸಂಗಡ ನೀನು ವಾಸಮಾಡಬೇಡ.

ಮಾರ್ಕಂಡೇಯಮುನಿಯು ಹೀಗೆಂದನು :—

೯೯. ಬ್ರಹ್ಮದೇವನು ದುಃಸಹನನ್ನು ಕುರಿತು ಹೀಗೆಂದು ಹೇಳಿ ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು. ಆ ದುಃಸಹನೂ ಕೂಡ ಪದ್ಮದಲ್ಲಿ ಜನಿಸಿದ ಬ್ರಹ್ಮನ ಆಜ್ಞೆಯನ್ನು ಹಾಗೆಯೇ ನಡೆಯಿಸಿದನು.

ಮಾರ್ಕಂಡೇಯ ಮಹಾಪುರಾಣದಲ್ಲಿ ನಲವತ್ತೇಳನೆಯ ಅಧ್ಯಾಯವು
ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಅಷ್ಟಾಚತ್ವಾರಿಂಶೋಽಧ್ಯಾಯಃ

ಮಾರ್ಕಣ್ಡೇಯ ಉವಾಚ :—

ದುಃಸಹಸ್ಯಾಭವದ್ಭಾರ್ಯಾ ನಿರ್ಮಾಷ್ಟಿರ್ನಾಮ ನಾಮತಃ ।
ಜಾತಾ ಕಲೇಸ್ತು ಭಾರ್ಯಾಯಾಮೃತೌ ಚಣ್ಡಾಲದರ್ಶನಾತ್ ॥೧॥

ತಯೋರಪತ್ಯಾನ್ಯಭವನ್ ಜಗದ್ವ್ಯಾಪೀನಿ ಷೋಡಶ ।
ಅಷ್ಟೌ ಕುಮಾರಾಃ ಕನ್ಯಾಶ್ಚ ತಥಾಷ್ಟಾವತಿಭೀಷಣಾಃ ॥೨॥

ದನ್ತಾಕೃಷ್ಟಿಸ್ತಥೋಕ್ತಿಶ್ಚ ಪರಿವರ್ತಸ್ತಥಾಪರಃ ।
ಅಙ್ಗಧೃುಕ್ಶಕುನಿಶ್ಚೈವ ಗಣ್ಡಪ್ರಾನ್ತರತಿಸ್ತಥಾ ॥೩॥

ನಲವತ್ತೆಂಟನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಇಂತೆಂದನು :—

೧. ದುಃಸಹನಿಗೆ ನಿರ್ಮಾಷ್ಟಿ ಎಂದು ನಾಮಾಂಕನವುಳ್ಳ ನಾರಿಯು ಪತ್ನಿಯಾಗಿದ್ದಳು. ಅವಳು ಕಲಿಪುರುಷನ ಭಾರ್ಯೆಯಲ್ಲಿ ಆಕೆಯ ಋತು ಸಮಯದಲ್ಲಿ ಚಂಡಾಲನ ದರ್ಶನದಿಂದ ಜನಿಸಿದವಳಾಗಿದ್ದಳು.

೨. ಆ ದುಃಸಹ-ನಿರ್ಮಾಷ್ಟಿ ಎಂಬ ದಂಪತಿಗಳಲ್ಲಿ ಎಂಟು ಮಂದಿ ಕುಮಾರರೂ ಮತ್ತೆ ಎಂಟು ಮಂದಿ ಬಹಳ ಭಯಂಕರರಾದ ಕನ್ಯೆಯರೂ ಸೇರಿ ಜಗತ್ತನ್ನು ವ್ಯಾಪಿಸಿರುವ ಹದಿನಾರು ಮಂದಿ ಪುತ್ರರು ಹುಟ್ಟಿದರು.

೩. ಎಂಟು ಮಂದಿ ಕುಮಾರರಲ್ಲಿ ಆರು ಮಂದಿಯು ಕ್ರಮವಾಗಿ ದಂತಾಕೃಷ್ಟಿ, ತಥೋಕ್ತಿ, ಪರಿವರ್ತಕ, ಅಂಗಧೃುಕ್, ಶಕುನಿ ಮತ್ತು ಗಂಡ-ಪ್ರಾಂತರತಿ ಎಂಬ ನಾಮಾಂಕನಗಳನ್ನು ಹೊಂದಿದ್ದರು.

ಗರ್ಭಹಾ ಸಸ್ಯಹಾ ಚಾನ್ಯಃ ಕುಮಾರಾಸ್ತನಯಾಸ್ತಯೋಃ ।
ಕನ್ಯಾಶ್ಚಾನ್ಯಾಸ್ತಥೈವಾಷ್ಟೌ ತಾಸಾಂ ನಾಮಾನಿ ಮೇ ಶೃಣು ॥೪॥

ನಿಯೋಜಿಕಾ ವೈ ಪ್ರಥಮಾ ತಥೈವಾನ್ಯಾ ವಿರೋಧಿನೀ ।
ಸ್ವಯಂಹಾರಕರೀ ಚೈವ ಭ್ರಾಮಣೀ ಋತುಹಾರಿಕಾ ॥೫॥

ಸ್ಮೃತಿಬೀಜಹರೀ ಚಾನ್ಯೇ ತಯೋಃ ಕನ್ಯೇ ಸುದಾರುಣೇ ।
ವಿದ್ವೇಷಣ್ಯಷ್ಟಮೀ ನಾಮ ಕನ್ಯಾ ಲೋಕಭಯಾವಹಾ ॥೬॥

ಏತಾಸಾಂ ಕರ್ಮ ವಕ್ಷ್ಯಾಮಿ ರೋಷಪ್ರಶಮನಂ ಚ ಯತ್ ।
ಅಷ್ಟಮ್ಯಾಂ ಚ ಕುಮಾರಾಣಾಂ ಶ್ರೂಯತಾಂ ದ್ವಿಜಸತ್ತಮ ॥೭॥

---

೪. ಮತ್ತು ಗರ್ಭಹಾ, ಸಸ್ಯಹಾ ಎಂಬ ನಾಮಾಂಕನವುಳ್ಳ ಇಬ್ಬರು ಪುತ್ರರು ಸೇರಿ ಅವರಿಗೆ ಎಂಟು ಮಂದಿ ಕುಮಾರರಿದ್ದರು. ಹಾಗು ಎಂಟು ಮಂದಿ ಕನ್ಯೆಯರೂ ಇದ್ದರು. ಆ ಕನ್ಯೆಯರ ಹೆಸರನ್ನು ಹೇಳುವೆನು. ಅದನ್ನು ನೀನು ಕೇಳು.

೫. ಮೊದಲನೆಯವಳು ನಿಯೋಜಿಕೆ, ಎರಡನೆಯವಳು ವಿರೋಧಿನಿ, ಮೂರನೆಯವಳು ಸ್ವಯಂಹಾರಕರಿ, ನಾಲ್ಕನೆಯವಳು ಭ್ರಾಮಣಿ ಮತ್ತು ಐದನೆಯವಳು ಋತುಹಾರಿಕೆ ಎಂದು ಪ್ರಸಿದ್ಧರಾಗಿದ್ದರು.

೬. ಮತ್ತು ಆರನೆಯವಳು ಸ್ಮೃತಿಹರೀ, ಏಳನೆಯವಳು ಬೀಜಹರೀ, ಎಂಟನೆಯವಳು ವಿದ್ವೇಷಣಿ ಎಂದು ನಾಮಾಂಕನಗಳನ್ನು ಹೊಂದಿದ್ದರು. ಈ ಕುಮಾರಿಯರು ಭಯಂಕರರೂಪವುಳ್ಳವರಾದ್ದರಿಂದ ಲೋಕವನ್ನು ಭೀತಿಗೊಳಿಸುತ್ತಿರುವರು.

೭. ಎಲೈ ದ್ವಿಜೋತ್ತಮನೆ! ಈ ಎಂಟು ಮಂದಿ ಕನ್ಯೆಯರ ಹಾಗು ಎಂಟು ಮಂದಿ ಕುಮಾರರ ಕರ್ಮವನ್ನೂ ಮತ್ತು ಇವರ ಕೋಪವನ್ನು ಶಮನಮಾಡುವ ವಿಧಾನವನ್ನೂ ನಾನು ಹೇಳುವೆನು. ಅದನ್ನು ಕೇಳು.

ದನ್ತಾಕೃಷ್ಟಿಃ ಪ್ರಸೂತಾನಾಂ ಬಾಲಾನಾಂ ದಶನಸ್ಥಿತಃ ।
ಕರೋತಿ ದನ್ತಸಂಘರ್ಷಂ ಚಿಕೀರ್ಷುರ್ದುಸ್ಸಹಾಗಮಮ್ ॥೮॥

ತಸ್ಯೋಪಶಮನಂ ಕಾರ್ಯಂ ಸುಪ್ತಸ್ಯ ಸಿತಸರ್ಷಪೈಃ ।
ಶಯನಸ್ಯೋಪರಿಕ್ಷಿಪ್ತೈರ್ವಾನುಷ್ಯೈರ್ದಶನೋಪರಿ ॥೯॥

ಸೌವರ್ಚಲೌಷಧೀಸ್ನಾನಾತ್ತಥಾ ಸಚ್ಛಾಸ್ತ್ರಕೀರ್ತನಾತ್ ।
ಉಷ್ಟ್ರಕಣ್ಟಕಗಙ್ಗಾಸ್ಥಿಕ್ಷೌಮವಸ್ತ್ರವಿಧಾರಣಾತ್ ॥೧೦॥

ತಿಷ್ಠತ್ಯನ್ಯಕುಮಾರಸ್ತು ತಥಾಸ್ತ್ವಿತ್ಯಸಕೃದ್ಬ್ರುವನ್ ।
ಶುಭಾಶುಭೇ ನೃಣಾಂ ಯುಙ್ಕ್ತೇ ತಥೋಕ್ತಿಸ್ತಚ್ಚ ನಾನ್ಯಥಾ ॥೧೧॥

---

೮. ದಂತಾಕೃಷ್ಟಿಯು ಪ್ರಸವಹೊಂದಿದ ಶಿಶುಗಳ ದಂತಸ್ಥಾನದಲ್ಲಿ ವಾಸಮಾಡಿಕೊಂಡಿದ್ದು ದುಃಸಹನ ಪೀಡೆಯುಂಟಾಗುವಂತೆ ಮಾಡಲು ಚಿಹ್ನ-ವಾಗಿ ದಂತಸ್ಥಾನಗಳ ಘರ್ಷಣೆಯನ್ನು ಮಾಡುವನು.

೯. ಆ ಪೀಡೆಯ ಶಮನಕ್ಕೋಸ್ಕರ ಮಾನವರು ಬಾಲಕನು ಮಲಗಿ-ರುವಾಗ ಹಾಸಿಗೆಯ ಮೇಲೆ ಮತ್ತು ಬಾಲಕನ ಹಲ್ಲಿನ ಮೇಲೆ ಬಿಳಿಯ ಸಾಸುವೆ ಕಾಳುಗಳನ್ನು ಚೆಲ್ಲಬೇಕು. ಆಗ ಶಮನವಾಗುವುದು.

೧೦. ಮತ್ತು ಸೌವರ್ಚಲವೆಂಬ ಔಷಧಿಯ ಸ್ನಾನ, ಸಚ್ಛಾಸ್ತ್ರ ವಿಷಯಗಳ ಕೀರ್ತನೆ, ಬನ್ನಿಯಮರದ ಮುಳ್ಳು, ಗಂಗೆಯ ತೀರ್ಥದ ಅಸ್ಥಿ, ಹಾಗು ರೇಷ್ಮೆವಸ್ತ್ರಧಾರಣ—ಇವು ದಂತಾಕೃಷ್ಟಿಯಿಂದಾಗುವ ಪೀಡೆಯನ್ನು ಪರಿಹಾರ ಮಾಡುವುವು.

೧೧. ತಥೋಕ್ತಿ ಎಂಬ ಮತ್ತೊಬ್ಬ ಕುಮಾರನು "ತಥಾಸ್ತು=ಹಾಗೇ ಆಗಲಿ" ಎಂದು ಮತ್ತೆ ಮತ್ತೆ ಹೇಳುತ್ತ ಇರುವನು. ಅವನು ಮನುಷ್ಯರಿಗೆ "ಹಾಗಾಗಲಿ" ಎಂದು ಹೇಳುತ್ತ ಶುಭ-ಅಶುಭಗಳನ್ನು ತಂದೊಡ್ಡುವನು. ಅವನ ವಚನವು ಯಾವಾಗಲೂ ತಪ್ಪಾಗುವುದಿಲ್ಲ.

ತಸ್ಮಾದದುಷ್ಟಂ ಮಙ್ಗಲ್ಯಂ ವಕ್ತವ್ಯಂ ಪಣ್ಡಿತೈಃ ಸದಾ ।
ದುಷ್ಟೇ ಶ್ರುತೇ ತಥೈವೋಕ್ತೇ ಕೀರ್ತನೀಯೋ ಜನಾರ್ದನಃ ॥೧೨॥

ಚರಾಚರಗುರುರ್ಬ್ರಹ್ಮಾ ಯಾ ಯಸ್ಯ ಕುಲದೇವತಾ ॥೧೩॥

ಅನ್ಯಗರ್ಭೇ ಪರಾನ್ಗಚ್ಛನ್ ಸದೈವ ಪರಿವರ್ತಯನ್ ।
ರತಿಮಾಪ್ನೋತಿ ವಾಕ್ಯಂ ಚ ವಿವಕ್ಷೋರನ್ಯದೇವ ಯತ್ ॥೧೪॥

ಪರಿವರ್ತಕಸಂಜ್ಞೋಽಯಂ ತಸ್ಯಾಪಿ ಸಿತಸರ್ಷಪೈಃ ।
ರಕ್ಷೋಘ್ನಮನ್ತ್ರಜಪ್ಯೈಶ್ಚ ರಕ್ಷಾಂ ಕುರ್ವೀತ ತತ್ತ್ವವಿತ್ ॥೧೫॥

---

೧೨. ಆದುದರಿಂದ ಪಂಡಿತರು ಯಾವಾಗಲೂ ನಿರ್ದುಷ್ಟವಾದ, ಮಂಗಳಕರವಾದ ಮಾತನ್ನು ಆಡುತ್ತಿರಬೇಕು. ಮತ್ತು ದುಷ್ಟವಾದ ವಿಷಯ-ವನ್ನು ಕೇಳುವಾಗ ತಥೋಕ್ತಿಯ ಪೀಡಾಪರಿಹಾರಕ್ಕೆ ಜನಾರ್ದನನಾಮವನ್ನು ಕೀರ್ತಿಸಬೇಕು.

೧೩. ಮತ್ತು ಚರ-ಅಚರ ಪ್ರಪಂಚಕ್ಕೆ ಗುರುವಾದ ಬ್ರಹ್ಮನನ್ನು ಧ್ಯಾನಿಸಿಕೊಳ್ಳಬೇಕು. ಹಾಗು ಯಾರಿಗೆ ಯಾವುದು ಕುಲದೇವತೆಯಾಗಿರು-ವುದೋ ಆ ಕುಲದೇವತಾನಾಮವನ್ನು ಕೀರ್ತಿಸಬೇಕು.

೧೪. ಪರಿವರ್ತನೆಂಬ ಮತ್ತೊಬ್ಬ ಕುಮಾರನು ಬೇರೊಬ್ಬಳ ಗರ್ಭದಲ್ಲಿ ಮತ್ತೊಂದು ಗರ್ಭವನ್ನು ಇಟ್ಟು ಪರಿವರ್ತನ ಮಾಡುತ್ತ ಹಾಗು ಏನನ್ನೋ ಹೇಳಬೇಕೆಂದಿರುವವನಿಂದ ಬೇರೆ ಯಾವುದನ್ನೋ ಹೇಳಿಸಿ ಪರಿವರ್ತನ ಮಾಡುತ್ತ ಆನಂದವನ್ನು ಹೊಂದುವನು.

೧೫. ಹೀಗೆ ಪರಿವರ್ತನ ಮಾಡುತ್ತಿರುವವನಿಗೆ ಅನ್ವರ್ಥವಾದ ಪರಿವ-ರ್ತಕವೆಂಬ ಹೆಸರು ಬಂದಿರುವುದು. ಬಿಳಿಯ ಸಾಸುವೆಯನ್ನು ಹಾಕುವುದರಿಂ-ದಲೂ ರಾಕ್ಷೋಘ್ನಮಂತ್ರಗಳನ್ನು ಜಪಿಸುವುದರಿಂದಲೂ ಜ್ಞಾನಿಯಾದವನು ಪರಿವರ್ತಕನಿಂದ ರಕ್ಷೆಯನ್ನು ಮಾಡಬೇಕು.

ಅನ್ಯಶ್ಚಾನಿಲವನ್ನೄಣಾಮಙ್ಗೇಷು ಸ್ಫುರಣೋದಿತಮ್ ।
ಶುಭಾಶುಭಂ ಸಮಾಚಷ್ಟೇ ಕುಶೈಸ್ತಸ್ಯಾಙ್ಗತಾಡನಮ್ ||೧೬||

ಕಾಕಾದಿಪಕ್ಷಿಸಂಸ್ಥೋಽನ್ಯಃ ಶ್ವಾದೇರಙ್ಗಗತೋಽಪಿ ವಾ ।
ಶುಭಾಶುಭಂ ಚ ಶಕುನಿಃ ಕುಮಾರೋಽನ್ಯೋ ಬ್ರವೀತಿ ವೈ ||೧೭||

ತತ್ರಾಪಿ ದುಷ್ಟೇ ವ್ಯಾಕ್ಷೇಪಃ ಪ್ರಾರಮ್ಭತ್ಯಾಗ ಏವ ಚ ।
ಶುಭೇ ದ್ರುತತರಂ ಕಾರ್ಯಮಿತಿ ಪ್ರಾಹ ಪ್ರಜಾಪತಿಃ ||೧೮||

ಗಣ್ಡಾನ್ತೇಷು ಸ್ಥಿತಶ್ಚಾನ್ಯೋ ಮುಹೂರ್ತಾರ್ಧಂ ದ್ವಿಜೋತ್ತಮ ।
ಸರ್ವಾರಮ್ಭಾನ್ಕುಮಾರೋಽತ್ತಿ ಶಮಂ ತಸ್ಯ ನಿಶಾಮಯ ||೧೯||

---

೧೬. ಅಂಗಧ್ರುಕ್ ಎಂಬ ಮತ್ತೊಬ್ಬ ಕುಮಾರನು ಗಾಳಿಯಂತಿದ್ದು ಆಗಾಗ ಆಯಾಯ ಅವಯವಗಳನ್ನು ಅದುಲಿಸಿ ಶುಭ-ಅಶುಭಗಳನ್ನು ಸೂಚಿಸುತ್ತಿರುವನು. ದರ್ಭೆಗಳಿಂದ ದೇಹವನ್ನು ಹೊಡೆಯುವುದು ಅಂಗಧ್ರುಕ್ ಎಂಬುವನ ಪೀಡೆಯನ್ನು ಶಮನಮಾಡುವುದು.

೧೭. ಶಕುನಿ ಎಂಬ ಮತ್ತೊಬ್ಬ ಕುಮಾರನು ಕಾಗೆ ಮುಂತಾದ ಪಕ್ಷಿಗಳಲ್ಲಿ ಅಥವಾ ನಾಯಿ ಮುಂತಾದ ಪ್ರಾಣಿಯ ಅಂಗದಲ್ಲಿ ಆವೇಶ ಹೊಂದಿ ಮಾನವರಿಗೆ ಉಂಟಾಗುವ ಆಯಾಯ ಶುಭ-ಅಶುಭಗಳನ್ನು ಸೂಚಿಸುತ್ತಿರುವನು.

೧೮. ಹೀಗೆ ಶಕುನಿಯಿಂದ ಸೂಚಿಸಲ್ಪಟ್ಟ ಅಶುಭಕಾರ್ಯದಲ್ಲಿ ವಿಲಂಬಮಾಡುವುದು ಅಥವಾ ಆ ಕಾರ್ಯವನ್ನು ಪ್ರಾರಂಭಿಸದಿರುವುದು ಮೇಲಾದುದು. ಶುಭಕಾರ್ಯದಲ್ಲಿ ತ್ವರೆಪಡುವುದು ಶ್ರೇಷ್ಠವು—ಎಂದು ಪ್ರಜಾಪತಿಯು ಉಪದೇಶಿಸಿರುವನು.

೧೯. ಗಂಡಪ್ರಾಂತರತಿ ಎಂಬ ಕುಮಾರನು ಅರ್ಧಮುಹೂರ್ತಕಾಲ ಕಪೋಲವನ್ನು ಆಶ್ರಯಿಸಿಕೊಂಡಿದ್ದು ಸಮಸ್ತ ಉದ್ಯಮಗಳನ್ನು ನಾಶಮಾಡುವನು ದ್ವಿಜೋತ್ತಮನೆ! ಅವನ ಶಮನೋಪಾಯವನ್ನು ಕೇಳು.

ವಿಪ್ರೋಕ್ತ್ಯಾ ದೇವತಾಸ್ತುತ್ಯಾ ಮೂಲೋತ್ಪಾತೇನ ಚ ದ್ವಿಜ।
ಗೋಮೂತ್ರಸರ್ಷಪಸ್ನಾನೈಸ್ತದೃಕ್ಷಗ್ರಹಪೂಜನೈಃ ॥೨೦॥

ಪುನಶ್ಚ ಧರ್ಮೋಪನಿಷತ್ಕರಣೈಃ ಶಾಸ್ತ್ರದರ್ಶನೈಃ।
ಅವಜ್ಞಯಾ ಜನ್ಮನಶ್ಚ ಪ್ರಶಮಂ ಯಾತಿ ಗಣ್ಡವಾನ್ ॥೨೧॥

ಗರ್ಭೇ ಸ್ತ್ರೀಣಾಂ ತಥಾನ್ಯಸ್ತು ಕಲಲಾಶೀ ಸುದಾರುಣಃ।
ತಸ್ಯ ರಕ್ಷಾ ಸದಾ ಕಾರ್ಯಾ ನಿತ್ಯಂ ಶೌಚನಿಷೇವಣಾತ್ ॥೨೨॥

ಪ್ರಸಿದ್ಧಮನ್ತ್ರಲಿಖನಾಚ್ಛಸ್ತಮಾಲ್ಯಾದಿಧಾರಣಾತ್।
ವಿಶುದ್ಧಗೇಹಾವಸನಾದನಾಯಾಸಾಚ್ಚ ವೈ ದ್ವಿಜ ॥೨೩॥

---

೨೦. ವಿಪ್ರರ ಆಶೀರ್ವಾದ ವಚನಗಳಿಂದಲೂ, ದೇವತಾಸ್ತೋತ್ರ ಪಾಠದಿಂದಲೂ, ಸಮೂಲವಾಗಿ ಓಡಿಸುವುದರಿಂದಲೂ, ಗೋಮೂತ್ರ-ಸಾಸುವೆಯ ಜಲಗಳಿಂದ ಸ್ನಾನಮಾಡಿಸುವುದರಿಂದಲೂ ಮತ್ತು ಬಾಲಕನ ನಕ್ಷತ್ರ-ಗ್ರಹಗಳ ಪೂಜೆಯಿಂದಲೂ ಗಂಡಪ್ರಾಂತರತಿಯ ಶಮನವಾಗುವುದು.

೨೧. ಮತ್ತು ಧರ್ಮಸಂಹಿತಾಗ್ರಂಥಗಳ, ಉಪನಿಷತ್ತುಗಳ, ಶಾಸ್ತ್ರ-ಗ್ರಂಥಗಳ ಶ್ರವಣ, ಜನ್ಮ-ಸಂಸಾರಗಳಲ್ಲಿ ದೋಷವಿವೇಚನೆಯಿಂದ ಧಿಕ್ಕಾರ—ಇವುಗಳಿಂದ ಗಂಡಪ್ರಾಂತರತಿಯ ಆಗ್ರಹವು ಶಮನವಾಗುವುದು.

೨೨. ಗರ್ಭಹಾ ಎಂಬ ಭಯಂಕರನಾದ ಕುಮಾರನು ಸ್ತ್ರೀಯರ ಗರ್ಭದಲ್ಲಿ ಪ್ರವೇಶಮಾಡಿ ಕಲಲ ಎಂಬ ಗರ್ಭಾಂಕುರವನ್ನು ನಾಶಮಾಡುವನು. ಯಾವಾಗಲೂ ಶೌಚದಿಂದಿದ್ದು ಅವನಿಂದ ರಕ್ಷೆಯನ್ನು ಹೊಂದಬೇಕು.

೨೩. ಎಲೈ ದ್ವಿಜನೆ! ಪ್ರಸಿದ್ಧವಾದ ಮಂತ್ರವನ್ನು ಬರೆದು ಧರಿಸುವುದು, ಪವಿತ್ರವಾದ ಗಂಧ-ಮಾಲ್ಯಗಳನ್ನು ಧರಿಸುವುದು, ಪವಿತ್ರವಾದ ಗೃಹದಲ್ಲಿ ವಾಸಮಾಡುವುದು, ಮತ್ತು ಆಯಾಸವಿಲ್ಲದಂತೆ ಇರುವುದು—ಇವುಗಳಿಂದ ಗರ್ಭಹನು ಶಮನಹೊಂದುವನು.

ತಥೈವ ಸಸ್ಯಹಾ ಚಾನ್ಯಃ ಸಸ್ಯರ್ಧಿಮುಪಹನ್ತಿ ಯಃ ।
ತಸ್ಯಾಪಿ ರಕ್ಷಾಂ ಕುರ್ವೀತ ಜೀರ್ಣೋಪಾನದ್ವಿಧಾರಣಾತ್ ॥೨೪॥

ತಥಾಪಸವ್ಯಗಮನಾಚ್ಚಣ್ಡಾಲಸ್ಯ ಪ್ರವೇಶನಾತ್ ।
ಬಹಿರ್ಬಲಿಪ್ರದಾನಾಚ್ಚ ಸೋಮಾಮ್ಬುಪರಿಕೀರ್ತನಾತ್ ॥೨೫॥

ಪರದಾರಪರದ್ರವ್ಯಹರಣಾದಿಷು ಮಾನವಾನ್ ।
ನಿಯೋಜಯತಿ ಚೈವಾನ್ಯಾ ಕನ್ಯಾ ಸಾ ಚ ನಿಯೋಜಿಕಾ ॥೨೬॥

ತಸ್ಯಾಃ ಪವಿತ್ರಪಠನಾತ್ಕ್ರೋಧಲೋಭಾದಿವರ್ಜನಾತ್ ।
ನಿಯೋಜಯತಿ ಮಾಮೇಷ ವಿರೋಧಾಚ್ಚ ವಿವರ್ಜನಾತ್ ॥೨೭॥

---

೨೪. ಹಾಗೆಯೇ ಸಸ್ಯಹಾ ಎಂಬುವನು ಹೊಲ-ಗದ್ದೆಗಳಲ್ಲಿ ಸಸ್ಯವರ್ಗವನ್ನು ನಾಶಮಾಡುತ್ತಿರುವನು. ಆಯಾಯ ಸ್ಥಳದಲ್ಲಿ ಜೀರ್ಣವಾದ ಪಾದರಕ್ಷೆಗಳನ್ನು ಇರಿಸುವುದರಿಂದ ಸಸ್ಯಹಾ ಎಂಬುವನಿಗೆ ರಕ್ಷೆಯನ್ನು ಮಾಡಬೇಕು.

೨೫. ಮತ್ತು ಆ ಸ್ಥಳದಲ್ಲಿ ಅಪ್ರದಕ್ಷಿಣೆಯಾಗಿ ನಡೆಯುವುದು, ಚಂಡಾಲನನ್ನು ಪ್ರವೇಶಮಾಡಿಸುವುದು, ಹೊರಗಡೆಯಲ್ಲಿ ಬಲಿಯ ಅನ್ನವನ್ನು ಇಡುವುದು ಮತ್ತು ಚಂದ್ರ–ಜಲನಾಮಗಳನ್ನು ಕೀರ್ತಿಸುವುದು—ಇವುಗಳಿಂದ ರಕ್ಷೆಯನ್ನು ಮಾಡಬೇಕು.

೨೬. ನಿಯೋಜಿಕಾ ಎಂಬ ಕನ್ಯೆಯು ಮಾನವರನ್ನು ಪರಸ್ತ್ರೀ–ಪರದ್ರವ್ಯಗಳ ಅಪಹಾರ ಮುಂತಾದ ದುಷ್ಕರ್ಮಗಳಲ್ಲಿ ಪ್ರೇರೇಪಿಸುವಳು. ಆದುದರಿಂದ ಅವಳ " ನಿಯೋಜಿಕಾ " ಎಂಬ ಹೆಸರು ಅನ್ವರ್ಥವಾಗಿರುವುದು.

೨೭. ಪವಿತ್ರಮಂತ್ರಗಳನ್ನು ಪಠಿಸುವುದು, ಕ್ರೋಧ-ಲೋಭ ಮುಂತಾದ ವಿಕಾರಗಳನ್ನು ಅಡಗಿಸಿಕೊಳ್ಳುವುದು—ನಿಯೋಜಿಕೆಯ ಶಮನೋಪಾಯವು. ಹಾಗು ಬೇರೊಬ್ಬನನ್ನು ತನ್ನಲ್ಲಿ ವಿರೋಧಮಾಡುವಂತೆ ನಿಯೋಜಿಕೆಯು ಪ್ರೇರಿಸುವಳೆಂದು ತಿಳಿದು ಉದಾಸೀನನಾಗಿರಬೇಕು.

ಆಕ್ರುಷ್ಟೋಽನ್ಯೇನ ಮನ್ಯೇತ ತಾಡಿತೋ ವಾ ನಿಯೋಜಿಕಾ ।
ನಿಯೋಜಯತ್ಯೇನಮಿತಿ ನ ಗಚ್ಛೇತ್ತದ್ವಶಂ ಬುಧಃ ॥೨೮॥

ಪರದಾರಾದಿಸಂಸರ್ಗೇ ಚಿತ್ತಮಾತ್ಮಾನಮೇವ ಚ ।
ನಿಯೋಜಯತ್ಯತ್ರ ಸಾ ಮಾಮಿತಿ ಪ್ರಾಜ್ಞೋ ವಿಚಿನ್ತಯೇತ್ ॥೨೯॥

ವಿರೋಧಂ ಕುರುತೇ ಚಾನ್ಯಾ ದಮ್ಪತ್ಯೋಃ ಪ್ರೀಯಮಾಣಯೋಃ ।
ಬನ್ಧೂನಾಂ ಸುಹೃದಾಂ ಪಿತ್ರೋಃ ಪುತ್ರೈಃ ಸಾವರ್ಣಿಕೈಶ್ಚ ಯಾ ॥೩೦॥

ವಿರೋಧಿನೀ ಸಾ ತದ್ರಕ್ಷಾಂ ಕುರ್ವೀತ ಬಲಿಕರ್ಮಣಾ ।
ತಥಾತಿವಾದಸಹನಾಚ್ಛಾಸ್ತ್ರಾಚಾರನಿಷೇವಣಾತ್ ॥೩೧॥

---

೨೮. ಮತ್ತು ಬೇರೊಬ್ಬನಿಂದ ತಾನು ನಿಂದಿಸಲ್ಪಟ್ಟರೆ ಅಥವಾ ಹೊಡೆಯಲ್ಪಟ್ಟರೆ ಆಗ ಜ್ಞಾನಿಯಾದವನು "ನಿಯೋಜಿಕೆಯು ನಿಂದಿಸಲು ಅಥವಾ ಹೊಡೆಯಲು ಇವನನ್ನು ಪ್ರೇರೇಪಿಸಿರುವಳೆಂ"ದು ತಿಳಿದು ಶಾಂತಚಿತ್ತ-ನಾಗಿರಬೇಕು. ತಾನು ಅದಕ್ಕೆ ಅಧೀನನಾಗಬಾರದು.

೨೯. ಪರಸ್ತ್ರೀ ಸಂಗ ಮುಂತಾದ ದುಷ್ಟಸಂಕಲ್ಪವುದಯಿಸಿದಾಗ ಪ್ರಾಜ್ಞನು ನಿಯೋಜಿಕೆಯು ನನ್ನನ್ನೂ ನನ್ನ ಚಿತ್ತವನ್ನೂ ಈ ದುಷ್ಟಕರ್ಮದಲ್ಲಿ ಪ್ರೇರಿಸುತ್ತಿರುವಳೆಂದು ಧ್ಯಾನಿಸಿ ವಿವೇಕವನ್ನು ಹೊಂದಬೇಕು.

೩೦. ವಿರೋಧಿನೀ ಎಂಬ ಮತ್ತೊಬ್ಬಳು ಕನ್ಯೆಯು ಪರಸ್ಪರವಾಗಿ ಪ್ರೀತಿಸುವ ದಂಪತಿಗಳು, ಬಂಧುಗಳು, ಆಪ್ತೇಷ್ಟರು, ತಂದೆ-ಮಕ್ಕಳು ಮತ್ತು ಸವರ್ಣಿಗಳು ಇವರಲ್ಲಿ ವಿರೋಧವನ್ನು ಉಂಟುಮಾಡುವಳು.

೩೧. ಅವಳು ವಿರೋಧಿನಿ ಎಂಬ ಅನ್ವರ್ಥನಾಮಾಂಕಿತಳಾಗಿರುವಳು. ಪೂಜಾಕರ್ಮ, ಸಹಿಸಲಾಗದ ಹೆಚ್ಚಿನಮಾತನ್ನು ಸಹಿಸುವುದು, ಮತ್ತು ಶಾಸ್ತ್ರ-ವಿಹಿತವನ್ನು ಆಚರಿಸುವುದು—ಇವುಗಳಿಂದ ರಕ್ಷೆಯನ್ನು ಮಾಡಬೇಕು.

ಧಾನ್ಯಂ ಖಲಾದ್ಗೃಹಾದ್ಗೋಷ್ಠಾತ್ಪಯಃ ಸರ್ಪಿಸ್ತಥಾಪರಾ ।
ಸಮೃದ್ಧಿಮೃದ್ಧಿಮದ್ದ್ರವ್ಯಾದಪಹಂತಿ ಚ ಕನ್ಯಕಾ ॥೩೨॥

ಸಾ ಸ್ವಯಂಹಾರಿಕೇತ್ಯುಕ್ತಾ ಸದಾಂತರ್ಧಾನತತ್ಪರಾ ॥೩೩॥

ಮಹಾನಸಾದರ್ಧಸಿದ್ಧಮನ್ನಾಗಾರಸ್ಥಿತಂ ತಥಾ ।
ಪರಿವಿಷ್ಯಮಾಣಂ ಚ ಸದಾ ಸಾರ್ಧಂ ಭುಂಕ್ತೇ ಚ ಭುಂಜತಾ॥೩೪॥

ಉಚ್ಛೇಷಣಂ ಮನುಷ್ಯಾಣಾಂ ಹರತ್ಯನ್ನಂ ಚ ದುರ್ಹರಾ ।
ಕರ್ಮಾನ್ತಾಗಾರಶಾಲಾಭ್ಯಃ ಸಿದ್ಧಿಂ ಹರತಿ ದ್ವಿಜ ॥೩೫॥

ಗೋಸ್ತ್ರೀಸ್ತನೇಭ್ಯಶ್ಚ ಪಯಃಕ್ಷೀರಹಾರೀ ಸದೈವ ಸಾ ।
ದಧ್ನೋ ಘೃತಂ ತಿಲಾತ್ತೈಲಂ ಸುರಾಗಾರಾತ್ತಥಾ ಸುರಾಮ್ ॥೩೬॥

---

೩೨. ಇನ್ನೊಬ್ಬಳು ಕನ್ಯೆಯು ಖಣದಿಂದ ಧಾನ್ಯವನ್ನೂ, ಗೋಶಾಲೆಯಿಂದ ಹಾಲನ್ನೂ, ಮನೆಯಿಂದ ತುಪ್ಪವನ್ನೂ ಮತ್ತು ಸಮೃದ್ಧಿಯಾಗಿರುವ ದ್ರವ್ಯರಾಶಿಯಿಂದ ಹೆಚ್ಚಿನಭಾಗವನ್ನೂ ಅಪಹರಿಸುವಳು.

೩೩. ಆ ಕನ್ಯೆಗೆ ಸ್ವಯಂಹಾರಿಕೆ ಎಂದು ಸಾರ್ಥಕವಾದ ನಾಮಾಂಕನವಿರುವುದು. ಅವಳು ಯಾವಾಗಲೂ ಅಂತರ್ಧಾನವನ್ನು ಹೊಂದಿ ಅದೃಶ್ಯಳಾಗಿರುವ ಕುತೂಹಲವನ್ನು ಹೊಂದಿರುವಳು.

೩೪. ಅವಳು ಅಡಿಗೆಯ ಮನೆಯಿಂದ ಅರ್ಧಸಿದ್ಧವಾದ ಅನ್ನವನ್ನೂ, ಅನ್ನದಗೃಹದಲ್ಲಿದ್ದ ಅನ್ನವನ್ನೂ, ಬಡಿಸಲ್ಪಡುತ್ತಿದ್ದ ಆಹಾರವಸ್ತುವನ್ನೂ ಅಪಹರಿಸುತ್ತ ಭೋಜನಮಾಡುತ್ತಿದ್ದ ವ್ಯಕ್ತಿಯ ಸಂಗಡ ತಾನೂ ಭುಂಜಿಸುವಳು.

೩೫. ಎಲೈ ದ್ವಿಜನೆ! ಮನುಷ್ಯರು ಊಟಮಾಡಿ ಬಿಟ್ಟ ಉಚ್ಛಿಷ್ಟ ಭಾಗವನ್ನು ಅಪಹರಿಸುವಳು. ಮತ್ತು ಕಣ್ಣಿಗೆಕಾಣದವಳಾಗಿ ಶಿಲ್ಪಗೃಹ, ಮನೆ, ಶಾಲೆಗಳಿಂದ ಅಲ್ಲಲ್ಲಿರುವ ಸಮೃದ್ಧಿಯನ್ನು ಅಪಹರಿಸುತ್ತಾಳೆ.

೩೬. ಹಾಗು ಗೋವುಗಳಿಂದ ಕ್ಷೀರವನ್ನೂ, ಸ್ತ್ರೀಸ್ತನಗಳಿಂದ ಸ್ತನ್ಯವನ್ನೂ, ಮೊಸರಿನಿಂದ ತುಪ್ಪದಸಾರವನ್ನೂ ಎಳ್ಳಿನಿಂದ ಎಣ್ಣೆಯ ಅಂಶವನ್ನೂ ಮತ್ತು ಮದ್ಯಗೃಹದಿಂದ ಮದ್ಯವನ್ನೂ ಯಾವಾಗಲೂ ಅಪಹರಿಸುತ್ತಿರುವಳು.

ರಾಗಂ ಕುಸುಮ್ಭಕಾದೀನಾಂ ಕಾರ್ಪಾಸಾತ್ಸೂತ್ರಮೇವ ಚ ।
ಸಾ ಸ್ವಯಂಹಾರಿಕಾ ನಾಮ ಹರತ್ಯವಿರತಂ ದ್ವಿಜ ॥೩೭॥

ಕುರ್ಯಾಚ್ಛಿಖಣ್ಡಿನೋದ್ವರ್ಂದ್ವಂ ರಕ್ಷಾರ್ಥಂ ಕೃತ್ರಿಮಾಂ ಸ್ತ್ರಿಯಮ್ ।
ರಕ್ಷಾಶ್ಚೈವ ಗೃಹೇ ಲೇಖ್ಯಾ ವರ್ಜ್ಯಾ ಚೋಚ್ಛಿಷ್ಟತಾ ತಥಾ ॥೩೮॥

ಹೋಮಾಗ್ನಿದೇವತಾಧೂಪಭಸ್ಮನಾ ಚ ಪರಿಷ್ಕ್ರಿಯಾ ।
ಕಾರ್ಯಾ ಕ್ಷೀರಾದಿಭಾಣ್ಡಾನಾಮೇವಂ ತದ್ರಕ್ಷಣಂ ಸ್ಮೃತಮ್॥೩೯॥

ಉದ್ವೇಗಂ ಜನಯತ್ಯನ್ಯಾ ಏಕಸ್ಥಾನನಿವಾಸಿನಃ ।
ಪುರುಷಸ್ಯ ತು ಯಾ ಪ್ರೋಕ್ತಾ ಭ್ರಾಮಣೀ ಸಾ ತು ಕನ್ಯಕಾ ॥೪೦॥

---

೩೭. ಎಲೈ ದ್ವಿಜಶ್ರೇಷ್ಠನೆ! ಕುಸುಂಭ ಮುಂತಾದ ದ್ರವ್ಯಗಳಿಂದ ಆಯಾಯ ಬಣ್ಣಗಳನ್ನೂ ಹತ್ತಿಯಿಂದ ನೂಲನ್ನೂ ಅಪಹರಿಸುವಳು. ಅವಳು ಸ್ವಯಂಹಾರಿಕಾ ಎಂಬ ನಾಮಾಂಕನವುಳ್ಳವಳಾಗಿದ್ದಾಳೆ.

೩೮. ಸ್ವಯಂಹಾರಿಕೆಯ ರಕ್ಷೆಗೋಸ್ಕರ ಶಿಖಂಡಿ ವ್ಯಕ್ತಿಗಳ ಜೊತೆ-ಯನ್ನೂ ಕೃತ್ರಿಮವಾದ ಸ್ತ್ರೀಪ್ರತಿಮೆಯನ್ನೂ ಮತ್ತು ಇನ್ನೂ ಹಲವಾರು ಬಗೆಯ ರಕ್ಷಾಸಾಧನಗಳನ್ನೂ ಬರೆಯಬೇಕು. ಮತ್ತು ಎಂಜಲಿನ ಸ್ಪರ್ಶವನ್ನು ಬಿಡಬೇಕು.

೩೯. ಮತ್ತು ಹಾಲು ಮುಂತಾದುವುಗಳ ಪಾತ್ರೆಗಳ ಸುತ್ತಲೂ ಹೋಮಾಗ್ನಿ ಅಥವಾ ದೇವತೆಯ ಧೂಪ—ಇವುಗಳ ಭಸ್ಮದಿಂದ ಸಂಸ್ಕಾರ ಮಾಡಬೇಕು. ಇದರಿಂದ ಸ್ವಯಂಹಾರಿಕೆಯಿಂದ ರಕ್ಷೆಯುಂಟಾಗುವುದು.

೪೦. ಏಕಾನ್ತ ಸ್ಥಾನದಲ್ಲಿ ಇರುವ ಪುರುಷನಿಗೆ ಆಕಸ್ಮಿಕವಾಗಿ ಭೀತಿ-ಯನ್ನು ಉಂಟುಮಾಡುವ ಬೇರೊಬ್ಬಳು ಕನ್ಯೆಯು ಭ್ರಾಮಣೀ ಎಂದು ಪ್ರಾಜ್ಞ-ರಿಂದ ಕರೆಯಲ್ಪಟ್ಟಿರುವಳು.

ತಸ್ಯಾಥ ರಕ್ಷಾಂ ಕುರ್ವೀತ ವಿಕ್ಷಿಪ್ತೈಃ ಸಿತಸರ್ಷಪೈಃ ।
ಆಸನೇ ಶಯನೇ ಚೋರ್ವ್ಯಾಂ ಯತ್ರಾಸ್ತೇ ಸ ತು ಮಾನವಃ ||೪೧||

ಚಿನ್ತಯೇಚ್ಚ ನರಃ ಪಾಪಾ ಮಾಮೇಷಾ ದುಷ್ಟಚೇತನಾ ।
ಭ್ರಾಮಯತ್ಯಸಕೃಜ್ಜಪ್ಯಂ ಭುವಃ ಸೂಕ್ತಂ ಸಮಾಧಿನಾ ||೪೨||

ಸ್ತ್ರೀಣಾಂ ಪುಷ್ಪಂ ಹರತ್ಯನ್ಯಾ ಪ್ರವೃತ್ತಂ ಸಾ ತು ಕನ್ಯಕಾ ।
ತಥಾ ಪ್ರವೃತ್ತಂ ಸಾ ಜ್ಞೇಯಾ ದುಃಸಹಾ ಋತುಹಾರಿಕಾ ||೪೩||

ಕುರ್ವೀತ ತೀರ್ಥದೇವೌಕಶ್ಚೈತ್ಯಪರ್ವತಸಾನುಷು ।
ನದೀಸಙ್ಗಮಖಾತೇಷು ಸ್ನಪನಂ ತತ್ಪ್ರಶಾನ್ತಯೇ ||೪೪||

ಮನ್ತ್ರವಿದ್ಭೂತತತ್ತ್ವಜ್ಞಃ ಪರ್ವಸೂಷಸಿ ಚ ದ್ವಿಜ ||೪೫||

---

೪೧. ಭೀತಿಹೊಂದುವ ಪುರುಷನು ಇರುವ ಭೂಮಿ, ಆಸನ, ಶಯನ-ಗಳಲ್ಲಿ ಬಿಳಿಯಸಾಸುವೆ ಕಾಳುಗಳನ್ನು ಚೆಲ್ಲಿ ಭ್ರಾಮಣೀ ಕನ್ಯೆಯ ಪೀಡೆಗೆ ರಕ್ಷೆಯನ್ನು ಮಾಡಬೇಕು.

೪೨. ಮತ್ತು ಆ ಮಾನವನು ನೀಚಳಾದ ಕೆಟ್ಟಸಂಕಲ್ಪವುಳ್ಳ ಭ್ರಾಮ-ಣಿಯು ನನ್ನನ್ನು ಮತ್ತೆ ಮತ್ತೆ ಭ್ರಮಣ ಮಾಡಿಸುತ್ತಿರುವಳೆಂದು ಧ್ಯಾನಿಸಬೇಕು. ಹಾಗು ಏಕಾಗ್ರಚಿತ್ತದಿಂದ ಭೂಸೂಕ್ತವನ್ನು ಜಪಿಸಬೇಕು.

೪೩. ಒಬ್ಬಳು ಕನ್ಯೆಯು ಸಕಾಲದಲ್ಲಿ ವಹಿಸುವ ಸ್ತ್ರೀಯರ ರಜಸ್ಸನ್ನು ಅಪಹರಿಸುವಳು. ಹಾಗೆ ಪ್ರವರ್ತಿಸಿದ ರಜಸ್ಸನ್ನು ಅಪಹರಿಸುವ, ಪ್ರತೀಕಾರ ಮಾಡಲಾಗದ ಆ ಕನ್ಯೆಯು ಋತುಹಾರಿಣಿಯೆಂದು ಪ್ರಸಿದ್ಧಳಾಗಿರುವಳು.

೪೪. ಅವಳಿಂದ ರಕ್ಷಣೆಗಾಗಿ ಆ ನಾರಿಗೆ ತೀರ್ಥಸನ್ನಿಧಿ, ದೇವಾಲಯ, ಚೈತ್ಯಪರ್ವತಗಳ ತಪ್ಪಲು, ನದಿಗಳ ಸಂಗಮಸ್ಥಳ ಮತ್ತು ಕೆರೆ–ಕೊಳಗಳಲ್ಲಿ ಸ್ನಾನಮಾಡಿಸಬೇಕು.

೪೫. ಎಲೈ ದ್ವಿಜೋತ್ತಮನೆ! ರಕ್ಷಾಮಂತ್ರಗಳನ್ನು ಅರಿತವನೂ, ಭೂತತತ್ತ್ವಗಳನ್ನು ಅರಿತವನೂ ಆದ ಪ್ರಾಜ್ಞನು ಪರ್ವಕಾಲ-ಉಷಃಕಾಲಗಳಲ್ಲಿ ತೀರ್ಥೋದಕ ಮುಂತಾದುವುಗಳಿಂದ ಸ್ನಾನಮಾಡಿಸಬೇಕು.

ತೇಷಾಂ ತು ಪೂಜನಂ ಕಾರ್ಯಂ ಧೂಪವರ್ತ್ಯುಪಹಾರಕೈಃ ।
ಚಿತಿತ್ಸಾಜ್ಞೈಶ್ಚ ವೈ ವೈದ್ಯೈಃ ಸಮ್ಪ್ರಯುಕ್ತೈರ್ವರೌಷಧೈಃ ॥೪೬॥

ಸ್ಮೃತಿಂ ಚಾಪಹರತ್ಯನ್ಯಾ ನೃಣಾಂ ಸಾ ಸ್ಮೃತಿಹಾರಿಕಾ ।
ವಿವಿಕ್ತದೇಶಸೇವಿತ್ವಾತ್ತಸ್ಯಾಶ್ಚೋಪಶಮೋ ಭವೇತ್ ॥೪೭॥

ಬೀಜಾಪಹಾರಿಣೀ ಚಾನ್ಯಾ ಸ್ತ್ರೀಪುಂಸೋರತಿಭೀಷಣಾ ।
ಮೇಧ್ಯಾನ್ನಭೋಜನೈಃ ಸ್ನಾನೈಸ್ತಸ್ಯಾಶ್ಚೋಪಶಮೋ ಭವೇತ್ ॥೪೮॥

ದಾರುಣಾ ಸಾ ದುರಾಚಾರಾ ದಾರುಣಂ ಕುರುತೇ ಭಯಮ್ ।
ತತ್ಪ್ರಶಾನ್ತ್ಯೈ ಪ್ರಕುರ್ವೀತ ದ್ವಿಜಾನಾಮರ್ಚನಂ ಶುಭಮ್ ॥೪೯॥

---

೪೬. ಮತ್ತು ಆಯಾಯ ಭೂತದೇವತೆಗಳಿಗೆ ಧೂಪ-ದೀಪ-ಉಪಹಾರಗಳನ್ನು ಅರ್ಪಿಸಿ ಪೂಜೆಮಾಡಬೇಕು. ಮತ್ತು ಚಿಕಿತ್ಸಾಶಾಸ್ತ್ರವನ್ನು ಅರಿತ ವೈದ್ಯರು ಉತ್ತಮವಾದ ಔಷಧಿಗಳ ಪ್ರಯೋಗದಿಂದ ಶಾಂತಿಯನ್ನು ಮಾಡಬೇಕು.

೪೭. ಮತ್ತೊಬ್ಬಳು ಕನ್ಯೆಯು ಮಾನವರ ಸ್ಮೃತಿಯನ್ನು ಅಪಹರಿಸುವಳು. ಅವಳನ್ನು ಸ್ಮೃತಿಹಾರಿಕೆಯೆಂದು ಅರಿಯಬೇಕು. ನಿರ್ಜನಪ್ರದೇಶದಲ್ಲಿ ಇರುವ ಅಭ್ಯಾಸದಿಂದ ಸ್ಮೃತಿಹಾರಿಕೆಯ ಪೀಡೆಗೆ ಉಪಶಮನವಾಗುವುದು.

೪೮. ಅತಿಭಯಂಕರಳಾದ ಬೀಜಾಪಹಾರಿಣೀ ಎಂಬ ಕನ್ಯೆಯು ಸ್ತ್ರೀ-ಪುರುಷರಲ್ಲಿರುವ ಸಂತತಿಯ ಬೀಜಶಕ್ತಿಯನ್ನು ಅಪಹರಿಸುವಳು. ಪವಿತ್ರವಾದ ಅನ್ನವನ್ನು ಭುಂಜಿಸುವುದು, ಸ್ನಾನ—ಇವುಗಳಿಂದ ಬೀಜಹಾರಿಣಿಯು ಉಪಶಮವಾಗುವಳು.

೪೯. ನೀಚಾಚಾರವುಳ್ಳವಳೂ ಭಯಂಕರಶೀಲಳೂ ಆದ ಬೀಜಹಾರಿಣಿಯು ಹೆಚ್ಚಾದ ಭಯಂಕರ ಕರ್ಮವನ್ನು ಮಾಡುವಳು. ಅವಳ ರಕ್ಷೆಗಾಗಿ ಮಂಗಳಕರ್ಮವಾದ ದ್ವಿಜರ ಸೇವೆಯನ್ನು ಮಾಡಬೇಕು.

ಅಷ್ಟಮೀ ದ್ವೇಷಿಣೀ ನಾಮ ಕನ್ಯಾ ಲೋಕಭಯಾವಹಾ ।
ಯಾ ಕರೋತಿ ಜನದ್ವಿಷ್ಟಂ ನರಂ ನಾರೀಮಥಾಪಿ ವಾ ॥೫೦॥

ಮಧುಕ್ಷೀರಘೃತಾಕ್ತಾಂಸ್ತು ಶಾನ್ತ್ಯರ್ಥಂ ಹೋಮಯೇತ್ತಿಲಾನ್ ।
ಕುರ್ವೀತ ಮಿತ್ರವಿನ್ದಾಂ ಚ ತಥೇಷ್ಟಿಂ ತತ್ಪ್ರಶಾನ್ತಯೇ ॥೫೧॥

ಏತೇಷಾಂ ತು ಕುಮಾರಾಣಾಂ ಕನ್ಯಾನಾಂ ದ್ವಿಜಸತ್ತಮ ।
ಅಷ್ಟತ್ರಿಂಶದಪತ್ಯಾನಿ ತೇಷಾಂ ನಾಮಾನಿ ಮೇ ಶೃಣು ॥೫೨॥

ದನ್ತಾಕೃಷ್ಟೇರಭೂತ್ಕನ್ಯಾ ವಿಜಲ್ಪಾ ಕಲಹಾ ತಥಾ ।
ಅವಜ್ಞಾನೃತದುಷ್ಟೋಕ್ತಿರ್ವಿಜಲ್ಪಾ ತತ್ಪ್ರಶಾನ್ತಯೇ ॥೫೩॥

ತಾಮೇವ ಚಿನ್ತಯೇತ್ಪ್ರಾಜ್ಞಃ ಪ್ರಯತಶ್ಚ ಗೃಹೀ ಭವೇತ್ ।
ಕಲಹಾ ಕಲಹಂ ಗೇಹೇ ಕರೋತ್ಯವಿರತಂ ನೃಣಾಮ್ ॥೫೪॥

---

೫೦. ದ್ವೇಷಿಣೀ ಎಂಬ ಎಂಟನೆಯ ಕನ್ಯೆಯು ಲೋಕಕ್ಕೆ ಮಹಾ ಭಯವನ್ನು ಉಂಟುಮಾಡುತ್ತಿರುವಳು. ಅವಳು ನರ-ನಾರಿಯರನ್ನು ಇತರ ಜನರ ಸಂಗಡ ದ್ವೇಷಹೊಂದಿರುವಂತೆ ಮಾಡುವಳು.

೫೧. ವಿದ್ವೇಷಿಣಿಯ ಶಾಂತಿಗೋಸ್ಕರ ಜೇನುತುಪ್ಪ, ಹಾಲು, ತುಪ್ಪ–ಇವುಗಳನ್ನು ಹಾಕಿದ ಎಳ್ಳನ್ನು ಹೋಮಮಾಡಬೇಕು. ಮತ್ತು ಆ ಕನ್ಯೆಯ ಪೀಡಾಪರಿಹಾರಕ್ಕೆ ಮಿತ್ರವಿಂದಾ ಎಂಬ ಇಷ್ಟಿಯನ್ನು ಮಾಡಬೇಕು.

೫೨. ಎಲೈ ದ್ವಿಜೋತ್ತಮನಾದ ಕ್ರೌಷ್ಟುಕಿಯೆ ! ಈ ಎಂಟು ಮಂದಿ ಕುಮಾರರಿಗೂ ಮತ್ತು ಕನ್ಯೆಯರಿಗೂ ಒಟ್ಟು ಸೇರಿ ಮೂವತ್ತೆಂಟು ಮಂದಿ ಮಕ್ಕಳು ಜನಿಸಿರುವರು. ಅವರ ಹೆಸರನ್ನು ನನ್ನಿಂದ ಕೇಳುವವನಾಗು.

೫೩. ದಂತಾಕೃಷ್ಟಿ ಎಂಬುವನಿಗೆ ವಿಜಲ್ಪಾ, ಕಲಹಾ ಎಂಬ ಇಬ್ಬರು ಕನ್ಯೆಯರು ಹುಟ್ಟಿದರು. ವಿಜಲ್ಪಾ ಎಂಬುವಳು ತಿರಸ್ಕಾರ, ಅನೃತ, ವಿರುದ್ಧ-ವಾದ ಭಾಷಣವನ್ನು ಮಾಡಿಸುವಳು.

೫೪. ಆ ದೋಷದ ಶಾಂತಿಗೋಸ್ಕರ ಪ್ರಾಜ್ಞನಾದ ಗೃಹಸ್ಥನು ಪವಿತ್ರಾಂತಃಕರಣನಾಗಿ ವಿಜಲ್ಪೆಯನ್ನು ಧ್ಯಾನಿಸಬೇಕು. ಕಲಹಾ ಎಂಬುವಳು ಮನೆಯಲ್ಲಿರುವ ಜನರಲ್ಲಿ ಪರಸ್ಪರ ಕಲಹವನ್ನು ಯಾವಾಗಲೂ ಉಂಟುಮಾಡು-ತ್ತಿರುವಳು.

ಕುಟುಮ್ಬನಾಶಹೇತುಃ ಸಾ ತತ್ಪ್ರಶಾನ್ತಿಂ ನಿಶಾಮಯ ।
ದೂರ್ವಾಙ್ಕುರಾನ್ಮಧುಘೃತಕ್ಷೀರಾಕ್ತಾನ್ಬಲಿಕರ್ಮಣಿ ॥೫೫॥

ನಿಕ್ಷಿಪೇಜ್ಜುಹುಯಾಚ್ಚೈವಾನಲಂ ಮಿತ್ರಂ ಚ ಕೀರ್ತಯೇತ್ ।
ಭೂತಾನಾಂ ಮಾತೃಭಿಃ ಸಾರ್ಧಂ ಬಾಲಕಾನಾಂ ತು ಶಾನ್ತಯೇ॥೫೬॥

ವಿದ್ಯಾನಾಂ ತಪಸಾಂ ಚೈವ ಸಂಯಮಸ್ಯ ಯಮಸ್ಯ ಚ ।
ಕೃಷ್ಯಾಂ ವಾಣಿಜ್ಯಲಾಭೇ ಚ ಶಾನ್ತಿಂ ಕುರ್ವನ್ತು ಮೇ ಸದಾ ॥೫೭॥

ಪೂಜಿತಾಶ್ಚ ಯಥಾನ್ಯಾಯಂ ತುಷ್ಟಿಂ ಗಚ್ಛನ್ತು ಸರ್ವಶಃ ।
ಕೂಷ್ಮಾಣ್ಡಾ ಯಾತುಧಾನಾಶ್ಚ ಯೇ ಚಾನ್ಯೇ ಗಣಸಂಜ್ಞಿತಾಃ ॥೫೮॥

---

೫೫. ಹಾಗೆ ಕಲಹಕ್ಕೆ ಬೀಜಳಾದ ಕಲಹಾ ಎಂಬುವಳು ಕುಟುಂಬದ ನಾಶಕ್ಕೆ ಕಾರಣಳಾಗುವಳು. ಅವಳಿಗೆ ಮಾಡಬೇಕಾದ ಶಾಂತಿಯನ್ನು ಕೇಳು. ಮಧು-ಕ್ಷೀರ-ಘೃತಗಳಲ್ಲಿ ನೆನೆಸಿದ ದೂರ್ವಾಂಕುರಗಳನ್ನು ಹೋಮಮಾಡಿ ಬಲಿಯನ್ನು ಅರ್ಪಿಸಬೇಕು.

೫೬. ಬಾಲಕರಿಗೆ ರಕ್ಷೆಗೋಸ್ಕರ ಭೂತದೇವತಾ-ಮಾತೃದೇವತೆಗಳೊಡನೆ ಸೂರ್ಯ-ಅಗ್ನಿ ನಾಮಗಳನ್ನು ಕೀರ್ತಿಸಬೇಕು. ಮತ್ತು ದೂರ್ವಾಂಕುರಗಳನ್ನು ಬಲಿಯಾಗಿ ಇಟ್ಟು ಬಾಲಕರ ಶಾಂತಿಗೋಸ್ಕರ ಯಥಾವಿಧಿಯಾಗಿ ಹೋಮವನ್ನು ಮಾಡಬೇಕು.

೫೭. ಮತ್ತು ಮಾತೃ ಮುಂತಾದ ದೇವತೆಗಳನ್ನು ಮುಂದೆ ಹೇಳುವಂತೆ ಪ್ರಾರ್ಥಿಸಿಕೊಳ್ಳಬೇಕು. ದೇವತೆಗಳು ವಿದ್ಯೆ, ತಪಸ್ಸು-ಸಂಯಮ, ಯಮ, ಕೃಷಿ ಮತ್ತು ವ್ಯಾಪಾರಗಳಲ್ಲಿ ಯಾವಾಗಲೂ ಶಾಂತಿಯನ್ನು ಕೊಡಲಿ.

೫೮. ಕೂಷ್ಮಾಂಡ, ಯಾತುಧಾನ ಮತ್ತು ಗಣದೇವತೆ ಎಂಬ ಬಗೆ ಬಗೆಯ ನಾಮಾಂಕನವುಳ್ಳ ದೇವತೆಗಳು ನನ್ನಿಂದ ಯಥಾವಿಧಿಯಾಗಿ ಪೂಜಿಸಲ್ಪಟ್ಟವರಾಗಿ ಎಲ್ಲ ರೀತಿಯಲ್ಲಿಯೂ ತೃಪ್ತಿಯನ್ನು ಹೊಂದಲಿ.

ಮಹಾದೇವಪ್ರಸಾದೇನ ಮಹೇಶ್ವರಮತೇನ ಚ ।
ಸರ್ವ ಏತೇ ನೃಣಾಂ ನಿತ್ಯಂ ತುಷ್ಟಿಮಾಶು ವ್ರಜನ್ತು ತೇ ॥೫೯॥

ತುಷ್ಟಾಃ ಸರ್ವಂ ನಿರಸ್ಯನ್ತು ದುಷ್ಕೃತಂ ದುರನುಷ್ಠಿತಮ್ ।
ಮಹಾಪಾತಕಜಂ ಸರ್ವಂ ಯಚ್ಚಾನ್ಯದ್ವಿಘ್ನಕಾರಣಮ್ ॥೬೦॥

ತೇಷಾಮೇವ ಪ್ರಸಾದೇನ ವಿಘ್ನಾ ನಶ್ಯನ್ತು ಸರ್ವಶಃ ।
ಉದ್ವಾಹೇಷು ಚ ಸರ್ವೇಷು ವೃದ್ಧಿಕರ್ಮಸು ಚೈವ ಹಿ ॥೬೧॥

ಪುಣ್ಯಾನುಷ್ಠಾನಯೋಗೇಷು ಗುರುದೇವಾರ್ಚನೇಷು ಚ ।
ಜಪಯಜ್ಞವಿಧಾನೇಷು ಯಾತ್ರಾಸು ಚ ಚತುರ್ದಶ ॥೬೨॥

---

೫೯. ಅರಿಷ್ಟವನ್ನುಂಟುಮಾಡುವ ಈ ಎಲ್ಲ ಕೂಷ್ಮಾಂಡ ಮುಂತಾದ ದೇವತೆಗಳು ಮಹೇಶ್ವರನ ಅನುಗ್ರಹದಿಂದಲೂ ಮಹೇಶ್ವರ ಸಂಕಲ್ಪವನ್ನು ಅನುಸರಿಸುವುದರಿಂದಲೂ ಮಾನವರ ವಿಷಯದಲ್ಲಿ ಬೇಗ ತುಷ್ಟಿಯನ್ನು ಹೊಂದಿರಲಿ.

೬೦. ಹಾಗೆ ಸಂತೋಷಗೊಂಡಿರುವ ದೇವತೆಗಳು ಮಾಡಬಾರದ ವಿಧಾನದಿಂದ ಮಾಡಿರುವ ದುಷ್ಕೃತವನ್ನೂ ಮತ್ತು ವಿಘ್ನಕ್ಕೆಕಾರಣವಾದ, ಮಹಾಪಾತಕಕರ್ಮದಿಂದ ಉಂಟಾದ ಇತರ ಎಲ್ಲ ದುರದೃಷ್ಟಗಳನ್ನೂ ನಿವಾರಣಮಾಡಲಿ.

೬೧. ಮತ್ತು ವಿವಾಹಕರ್ಮಗಳಲ್ಲಿಯೂ, ಇತರ ಸಮಸ್ತ ಮಂಗಲ ಕಾರ್ಯಗಳಲ್ಲಿಯೂ ಆ ದೇವತೆಗಳ ಅನುಗ್ರಹ ಬಲದಿಂದ ಒದಗಬಹುದಾದ ಎಲ್ಲವಿಧದ ವಿಘ್ನಗಳು ನಾಶವಾಗಲಿ.

೬೨. ಮತ್ತು ಪುಣ್ಯಸಂಪಾದಕವಾದ ಅನುಷ್ಠಾನ, ಗುರು-ದೇವತೆಗಳ ಅರ್ಚನೆ, ಜಪ-ಯಜ್ಞಕರ್ಮಗಳ ವಿಧಾನ ಹಾಗು ಲೋಕವ್ಯವಹಾರ ಯಾತ್ರಾ ಕರ್ಮಗಳಲ್ಲಿ ಒದಗುವ ಸಮಸ್ತ ವಿಘ್ನಗಳು ಶಮನವಾಗಲಿ.

ಶರೀರಾರೋಗ್ಯಭೋಗ್ಯೇಷು ಸುಖದಾನಧನೇಷು ಚ ।
ವೃದ್ಧಬಾಲಾತುರೇಷ್ವೇವ ಶಾನ್ತಿಂ ಕುರ್ವನ್ತು ನೋ ಸದಾ ॥೬೩॥

ಸೋಮಾಮ್ಬುಪೌ ತಥಾನ್ಯೇಭಿಃ ಸವಿತಾ ಚಾನಿಲಾನಲೌ ॥೬೪॥

ತಥೋಕ್ತೇಃ ಕಲಿಜಿಹ್ವೋಽಭೂತ್ಪುತ್ರಸ್ತಾಲನಿಕೇತನಃ ।
ಸ ಯೇಷಾಂ ರಸನಾಸಂಸ್ಥಸ್ತಾನಸಾಧೂನ್ವಿವಾದಯೇತ್ ॥೬೫॥

ಪರಿವರ್ತಸುತೌ ದ್ವೌ ತು ವಿರೂಪವಿಕೃತೌ ದ್ವಿಜ ।
ತೌ ತು ವೃಕ್ಷಾದ್ರಿಪರಿಖಾಪ್ರಾಕಾರಾಮ್ಭೋಧಿಸಂಶ್ರಯೌ ॥೬೬॥

ಗುರ್ವಿಣ್ಯಾಃ ಪರಿವರ್ತಂ ತೌ ಕುರುತಃ ಪಾದಪಾದಿಷು ।
ಕ್ರೌಷ್ಟುಕೇ ಪರಿವರ್ತಃ ಸ್ಯಾದ್ಗರ್ಭಸ್ಯಾನ್ಯೋದರಾತ್ತತಃ ॥೬೭॥

---

೬೩. ದೇಹಸ್ಥಿತಿ, ಆರೋಗ್ಯಲಾಭ, ಭೋಗ್ಯವಸ್ತುಗಳ ಸಂಪತ್ತಿ, ಸುಖ, ದಾನಕರ್ಮ, ಧನ, ವೃದ್ಧ, ಬಾಲ, ರೋಗಿಜನ—ಈ ವಿಷಯಗಳಲ್ಲಿ ಶುಭವನ್ನು ಹೆಚ್ಚಿಸುತ್ತ ಅಶುಭವನ್ನು ಪರಿಹರಿಸುತ್ತ ಶಾಂತಿಯನ್ನು ಕೊಡಲಿ.

೬೪. ಚಂದ್ರ-ವರುಣ ದೇವತೆಗಳು ಶುಭಕರ ಜಲವನ್ನು ನಮಗೆ ಕೊಟ್ಟು ರಕ್ಷಿಸಲಿ. ಸೂರ್ಯ-ಅಗ್ನಿ-ವಾಯು ದೇವತೆಗಳು ಶುಭಕರವಾದ ಇತರ ಭೌತಿಕವಿಷಯಗಳನ್ನು ಅನುಗ್ರಹಿಸಿ ರಕ್ಷಿಸಲಿ.

೬೫. ತಥೋಕ್ತಿ ಎಂಬ ಕುಮಾರನಿಗೆ ತಾಲಗಿಡದಲ್ಲಿ ವಾಸಮಾಡುವ ಕಲಿ ಜಿಹ್ವ ಎಂಬ ಪುತ್ರನು ಹುಟ್ಟಿದನು. ಅವನು ಯಾವ ಮಾನವನ ನಾಲಿಗೆಯಲ್ಲಿ ಆವೇಶಿಸುವನೋ ಅವನಿಂದ ಸಾಧುಗಳೊಡನೆ ಕಲಹಮಾಡಿಸುವನು.

೬೬. ದ್ವಿಜನೆ! ಹಾಗು ಪರಿವರ್ತ ಎಂಬ ಕುಮಾರದಿಗೆ ವಿರೂಪ-ವಿಕೃತ ಎಂಬ ಇಬ್ಬರು ಪುತ್ರರು ಜನಿಸಿದರು. ಅವರು ವೃಕ್ಷ-ಪರ್ವತ-ಕಂದುಕ-ಪ್ರಾಕಾರ ಮತ್ತು ಸಮುದ್ರಗಳನ್ನು ವಾಸಭೂಮಿಯನ್ನಾಗಿ ಆಶ್ರಯಿಸಿರುವರು.

೬೭. ಅವರು ಗರ್ಭಿಣಿಯಾದ ನಾರಿಯಲ್ಲಿ ಆವೇಶವಾಗಿ ಗರ್ಭವನ್ನು ವೃಕ್ಷಮುಂತಾದುವುಗಳಲ್ಲಿ ತಂದಿರಿಸುವರು. ಎಲೈ! ಕ್ರೌಷ್ಟುಕಿಯೆ! ಈ ಕಾರಣದಿಂದಲೇ ಯಾರ ಹೊಟ್ಟೆಯಲ್ಲಿಯೋ ಇದ್ದ ಗರ್ಭವು ಬೇರೊಂದು ಕಡೆ ಪರಿವರ್ತನೆಯಾಗುವುದು.

ನ ವೃಕ್ಷಂ ಚೈವ ನೈವಾದ್ರಿಂ ನ ಪ್ರಾಕಾರಂ ಮಹೋದಧಿಮ್ ।
ಪರಿಖಾಂ ವಾ ಸಮಾಕ್ರಾಮೇದಬಲಾ ಗರ್ಭಧಾರಿಣೀ ॥೬೮॥

ಅಙ್ಗಧೃಕ್ತನಯಂ ಲೇಭೇ ಪಿಶುನಂ ನಾಮ ನಾಮತಃ ।
ಸೋಽಸ್ಥಿಮಜ್ಜಾಗತಃ ಪುಂಸಾಂ ಬಲಮತ್ತ್ಯಜಿತಾತ್ಮನಾಮ್ ॥೬೯॥

ಶ್ಯೇನಕಾಕಕಪೋತಾಂಶ್ಚ ಗೃಧ್ರೋಲೂಕೌ ಚ ವೈ ಸುತಾನ್ ।
ಅವಾಪ ಶಕುನಿಃ ಪಞ್ಚ ಜಗೃಹುಸ್ತಾನ್ ಸುರಾಸುರಾಃ ॥೭೦॥

ಶ್ಯೇನಂ ಜಗ್ರಾಹ ಮೃತ್ಯುಶ್ಚ ಕಾಕಂ ಕಾಲೋ ಗೃಹೀತವಾನ್ ।
ಉಲೂಕಂ ನಿರ್ಋತಿಶ್ಚೈವ ಜಗ್ರಾಹಾತಿಭಯಾವಹಮ್ ॥೭೧॥

---

೬೮. ಆದುದರಿಂದ ಗರ್ಭವತಿಯಾದ ನಾರಿಯು ವಿರೂಪ-ವಿಕೃತರ ಪೀಡಾಪರಿಹಾರಕ್ಕೋಸ್ಕರ ವೃಕ್ಷ, ಪರ್ವತ, ಪ್ರಾಕಾರ, ಸಮುದ್ರ ಮತ್ತು ಕಂದುಕಗಳನ್ನು ಲಂಘಿಸಬಾರದು.

೬೯. ಅಂಗಧೃಕ್ ಎಂಬ ಕುಮಾರನು ಪಿಶುನ ಎಂಬ ನಾಮಾಂಕನ-ದಿಂದ ಪ್ರಸಿದ್ಧನಾದ ಪುತ್ರನನ್ನು ಹೊಂದಿದನು. ಅವನು ಜಿತೇಂದ್ರಿಯರಲ್ಲದ ಮಾನವರ ಅಸ್ಥಿ–ಮಜ್ಜಾ ಮುಂತಾದ ಧಾತುಗಳನ್ನು ಹೊಕ್ಕು ಬಲವನ್ನು ಕ್ಷಯಗೊಳಿಸುವನು.

೭೦. ಶಕುನಿ ಎಂಬುವನು ಹದ್ದು, ಕಾಗೆ, ಪಾರಿವಾಳ, ಗಿಡಗ ಮತ್ತು ಗೂಬೆ ಎಂಬ ಐದು ಮಂದಿ ಪುತ್ರರನ್ನು ಹೊಂದಿದನು. ಈ ಐವರು ಪುತ್ರರನ್ನು ದೇವದಾನವರು ತಮ್ಮ ಇಷ್ಟದಂತೆ ಅಧೀನಮಾಡಿಕೊಂಡರು.

೭೧. ಮೃತ್ಯುದೇವತೆಯು ಹದ್ದನ್ನೂ, ಕಾಲದೇವತೆಯು ಕಾಗೆ-ಯನ್ನೂ, ನಿರ್ಋತಿದೇವತೆಯು ಅತ್ಯಂತ ಭಯಂಕರನಾದ ಗೂಬೆಯೆಂಬ ಪುತ್ರನನ್ನೂ ಪರಿಗ್ರಹಿಸಿದನು.

ಗೃಧ್ರಂ ವ್ಯಾಧಿಸ್ತದೀಶೋಽಥ ಕಪೋತಂ ಚ ಸ್ವಯಂ ಯಮಃ ।
ಏತೇಷಾಮೇವ ಚೈವೋಕ್ತಾ ಭೂತಾಃ ಪಾಪೋಪಪಾದನೇ ॥೭೨॥

ತಸ್ಮಾಚ್ಛ್ಯೇನಾದಯೋ ಯಸ್ಯ ನಿಲೀಯೇಯುಃ ಶಿರಸ್ಯಥ ।
ತೇನಾತ್ಮರಕ್ಷಣಾಯಾಲಂ ಶಾನ್ತಿಂ ಕುರ್ಯಾದ್ದ್ವಿಜೋತ್ತಮ ॥೭೩॥

ಗೇಹೇ ಪ್ರಸೂತಿರೇತೇಷಾಂ ತದ್ವನ್ನೀಡನಿವೇಶನಮ್ ।
ನರಸ್ತಂ ವರ್ಜಯೇದ್ಗೇಹಂ ಕಪೋತಾಕ್ರಾನ್ತಮಸ್ತಕಮ್ ॥೭೪॥

ಶ್ಯೇನಃ ಕಪೋತೋ ಗೃಧ್ರಶ್ಚ ಕಾಕೋಲೂಕೌ ಗೃಹೇ ದ್ವಿಜ ।
ಪ್ರವಿಷ್ಟಾಃ ಕಥಯೇದನ್ತಂ ವಸತಾಂ ತತ್ರ ವೇಶ್ಮನಿ ॥೭೫॥

---

೭೨. ವ್ಯಾಧಿಯು ಗಿಡಗವನ್ನೂ ಮತ್ತು ಮೃತ್ಯು-ಕಾಲ-ನಿರ್ಋತಿ-ವ್ಯಾಧಿ ಎಂಬ ಉಪದೇವತೆಗಳ ಪ್ರಭುವಾದ ಯಮನು ಪಾರಿವಾಳವನ್ನೂ ಸ್ವೀಕಾರ ಮಾಡಿದನು. ಹೀಗೆ ಮೃತ್ಯು ಮುಂತಾದವರಿಗೆ ಸೇರಿದ ಹದ್ದು ಮುಂತಾದ ಪ್ರಾಣಿಗಳು ಅರಿಷ್ಟವನ್ನು ಉಂಟುಮಾಡುವುವು.

೭೩. ದ್ವಿಜೋತ್ತಮನೆ ! ಆದಕಾರಣ ಹದ್ದು ಮುಂತಾದ ಪ್ರಾಣಿಗಳು ಯಾವ ಮಾನವನ ಶಿರದಲ್ಲಿ ಕುಳಿತುಕೊಳ್ಳುವುವೋ ಅವನು ಅರಿಷ್ಟವನ್ನು ಪರಿಹಾರಮಾಡಿ ರಕ್ಷಣೆಯನ್ನು ಹೊಂದುವುದಕ್ಕೋಸ್ಕರ ವಿಹಿತವಾದ ಶಾಂತಿ-ಕರ್ಮವನ್ನು ಮಾಡಬೇಕು.

೭೪. ಈ ಪಕ್ಷಿಗಳು ಯಾವುದಾದರೊಂದು ಮನೆಯಲ್ಲಿ ಹುಟ್ಟುವು-ದಾಗಲಿ ಅಥವಾ ಗೂಡುಕಟ್ಟಿಕೊಂಡಿರುವುದಾಗಲಿ ಆದರೆ ಆ ಮನೆಯನ್ನು ಕೂಡಲೆ ಬಿಡಬೇಕು. ಮತ್ತು ಪಾರಿವಾಳವು ಮೇಲೇರಿ ಕುಳಿತಿರುವ ಮನೆಯನ್ನೂ ವರ್ಜಿಸಬೇಕು.

೭೫. ಎಲೈ ದ್ವಿಜನೆ! ಮನೆಯೊಳಗೆ ಹೊಕ್ಕಿರುವ ಹದ್ದು, ಪಾರಿವಾಳ, ಗಿಡಗ, ಕಾಗೆ ಮತ್ತು ಗೂಬೆ—ಈ ಪಕ್ಷಿಗಳು ಆ ಮನೆಯಲ್ಲಿ ವಾಸಮಾಡುತ್ತಿದ್ದ ಜನರಿಗೆ ಮರಣವನ್ನು ಸೂಚಿಸುತ್ತವೆ.

ಈದೃಕ್ಪರಿತ್ಯಜೇದ್ಗೇಹಂ ಶಾನ್ತಿಂ ಕುರ್ಯಾಚ್ಚ ಪಣ್ಡಿತಃ ।
ಸ್ವಪ್ನೇಽಪಿ ಹಿ ಕಪೋತಸ್ಯ ದರ್ಶನಂ ನ ಪ್ರಶಸ್ಯತೇ ||೭೬||

ಷಡಪತ್ಯಾನಿ ಕಥ್ಯನ್ತೇ ಗಣ್ಡಪ್ರಾನ್ತರತೇಸ್ತಥಾ ।
ಸ್ತ್ರೀಣಾಂ ರಜಸ್ಯವಸ್ಥಾನಂ ತೇಷಾಂ ಕಾಲಾಂಶ್ಚ ಮೇ ಶೃಣು ||೭೭||

ಚತ್ವಾರ್ಯಹಾನಿ ಪೂರ್ವಾಣಿ ತಥೈವಾನ್ಯತ್ರಯೋದಶಮ್ ।
ಏಕಾದಶಂ ತಥೈವಾನ್ಯದಪತ್ಯಂ ತಸ್ಯ ವೈ ದಿನೇ ||೭೮||

ಅನ್ಯದ್ದಿನಾಭಿಗಮನೇ ಶ್ರಾದ್ಧದಾನೇ ತಥಾಪರೇ ।
ಪರ್ವಸ್ವಥಾನ್ಯತ್ತಸ್ಮಾತ್ತು ವರ್ಜ್ಯಾನ್ಯೇತಾನಿ ಪಣ್ಡಿತೈಃ ||೭೯||

---

೭೬. ಜ್ಞಾನಿಯಾದ ಮಾನವನು ಅಂತಹ ಮನೆಯನ್ನು ತ್ಯಜಿಸಿ ಬೇರೊಂದು ಕಡೆ ವಾಸಮಾಡಬೇಕು. ಮತ್ತು ಆಯಾಯ ದುರ್ನಿಮಿತ್ತಕ್ಕೆ ಶಾಂತಿಯನ್ನು ಮಾಡಬೇಕು. ಕನಸ್ಸಿನಲ್ಲಿಯೂ ಸಹ ಪಾರಿವಾಳ ಪಕ್ಷಿಯನ್ನು ಕಾಣುವುದು ಒಳ್ಳೆಯದಲ್ಲ.

೭೭. ಗಂಡಪ್ರಾಂತರತಿ ಎಂಬ ಕುಮಾರನಿಗೆ ಆರು ಮಂದಿ ಪುತ್ರರು ಜನಿಸಿದರೆಂದು ಪ್ರಾಜ್ಞರಿಂದ ಹೇಳಲ್ಪಟ್ಟಿದೆ. ಅವರು ಸ್ತ್ರೀಯರ ರಜಸ್ಸಿನಲ್ಲಿ ವಾಸವನ್ನು ಹೊಂದಿರುವರು. ಅವರು ಆವೇಶಿಸುವ ಕಾಲವನ್ನು ಹೇಳುವೆನು. ಅದನ್ನು ಕೇಳು.

೭೮. ಋತುಸಮಯದ ಮೊದಲನೆಯ ನಾಲ್ಕು ದಿನಗಳು, ಋತುದಿನ-ದಿಂದ ಹದಿಮೂರನೆಯ ದಿನ ಮತ್ತು ಹನ್ನೊಂದನೆಯದಿನ ಈ ದಿನಗಳಲ್ಲಿ ಗಂಡಪ್ರಾಂತರತಿಯ ಪುತ್ರರು ಸ್ತ್ರೀಯರ ರಜಸ್ಸಿನಲ್ಲಿರುವರು. ಆದ್ದರಿಂದ ಆಯಾಯ ಸಮಯಗಳಲ್ಲಿ ಪತಿಸಂಗದಿಂದ ಉತ್ತಮಸಂತತಿಯಾಗುವುದಿಲ್ಲ.

೭೯. ಹಗಲುಹೊತ್ತಿನಲ್ಲಿಯೂ, ಶ್ರಾದ್ಧಮಾಡಿದ ದಿನ ಅದರ ಹಿಂದಿನ ದಿನ ಮತ್ತು ಮುಂದಿನ ದಿನ, ಪರ್ವತಿಥಿ ಇವುಗಳಲ್ಲಿಯೂ ಸಂಗಮಾಡುವುದು ಆ ದುರ್ದೈವಗಳ ಪೀಡೆಗೆ ಕಾರಣವಾಗುವುದು. ಆದ್ದರಿಂದ ಆ ಸಮಯದಲ್ಲಿ ಪಂಡಿತರಾದವರು ಸ್ತ್ರೀಸಂಗವನ್ನು ಮಾಡಬಾರದು.

ಗರ್ಭಹನ್ತುಃ ಸುತೋ ನಿಘ್ನೋ ಮೋಹನೀ ಚಾಪಿ ಕನ್ಯಕಾ ।
ಪ್ರವಿಶ್ಯ ಗರ್ಭಮತ್ತ್ಯೇಕೋ ಭುಕ್ತ್ವಾ ಮೋಹಯತೇಽಪರಾ ॥೮೦॥

ಜಾಯನ್ತೇ ಮೋಹನಾತ್ತಸ್ಯಾಃ ಸರ್ಪಮಣ್ಡೂಕಕಚ್ಛಪಾಃ ।
ಸರೀಸೃಪಾಣಿ ಚಾನ್ಯಾನಿ ಪುರೀಷಮಥವಾ ಪುನಃ ॥೮೧॥

ಷಣ್ಮಾಸಾದ್ಗುರ್ವಿಣೀಮಾಂಸಮಶ್ನುವಾನಾವಸಂಯುತಾಮ್ ।
ವೃಕ್ಷಚ್ಛಾಯಾಶ್ರಯಾಂ ರಾತ್ರಾವಥವಾ ತ್ರಿಚತುಷ್ಪಥೇ ॥೮೨॥

ಶ್ಮಶಾನಕಟಭೂಮಿಷ್ಠಾಮುತ್ತರೀಯವಿವರ್ಜಿತಾಮ್ ।
ರುದ್ಯಮಾನಾಂ ನಿಶೀಥೇಽಥ ಆವಿಶೇತಾಮಿಮೌ ಸ್ತ್ರಿಯಮ್ ॥೮೩॥

---

೮೦. ಗರ್ಭಹಂತಾ ಎಂಬ ಕುಮಾರನಿಗೆ ನಿಘ್ನ ಎಂಬ ಕುಮಾರನೂ ಮೋಹಿನಿ ಎಂಬ ಕನ್ಯಕೆಯೂ ಜನಿಸಿದರು. ಅವರಲ್ಲಿ ನಿಘ್ನನು ಒಳಹೊಕ್ಕು ಗರ್ಭವನ್ನು ತಿನ್ನುವನು. ಮತ್ತೊಬ್ಬಳು ತಿಂದು ಮಿಕ್ಕ ಗರ್ಭದಲ್ಲಿ ಮೋಹವನ್ನು ಉಂಟುಮಾಡುವಳು.

೮೧. ಮೋಹಿನಿ ಎಂಬುವಳ ಮೋಹನಪ್ರಭಾವದಿಂದ ಗರ್ಭದಿಂದ ಸರ್ಪ, ಕಪ್ಪೆ, ಆಮೆ ಮತ್ತು ಇತರ ವಿಧವಾದ ಹರಿಯುವ ಪ್ರಾಣಿಗಳು ಜನ್ಮವೆತ್ತುವುವು ಅಥವಾ ಗರ್ಭಸ್ರಾವವಾಗಿ ಮಲವಿಸರ್ಜನೆಯಾಗುವುದು.

೮೨. ಆರು ತಿಂಗಳು ತುಂಬಿದ ಗರ್ಭಿಣಿಯ ಮಾಂಸವನ್ನು ತಿನ್ನುವ ಇಷ್ಟವುಳ್ಳ ನಿಘ್ನ ಮೋಹಿನಿಯರು ಅಪವಿತ್ರಳೂ ರಾತ್ರಿವೇಳೆಯಲ್ಲಿ ಮರದ ನೆರಳು, ಅಥವಾ ಚೌಕಗಳಲ್ಲಿ ನಿಂತಿರುವವಳೂ ಆದ ಗರ್ಭಿಣಿಯಲ್ಲಿ ಆವೇಶಹೊಂದುವುವು.

೮೩. ಮತ್ತು ಶ್ಮಶಾನ, ಶ್ಮಶಾನದಲ್ಲಿ ಬೆಳೆದ ಹುಲ್ಲಿನ ಚಾಪೆ ಅಥವಾ ಬರಿಯದಾದ ನೆಲಗಳಲ್ಲಿ ಕುಳಿತಿರುವವಳು, ಉತ್ತರೀಯ ವಸ್ತ್ರವಿಲ್ಲದವಳು ಮತ್ತು ಅಳುತ್ತಿರುವವಳು ಇಂತಹ ಗರ್ಭವತಿಯನ್ನು ಅರ್ಧರಾತ್ರಿ ಸಮಯದಲ್ಲಿ ಆ ಕುಮಾರರು ಆವೇಶಿಸುವರು.

ಸಸ್ಯಹನ್ತುಸ್ತಥೈವೈಕಃ ಕ್ಷುದ್ರಕೋ ನಾಮ ನಾಮತಃ ।
ಸಸ್ಯರ್ಧಿಂ ಸ ಸದಾ ಹನ್ತಿ ಲಬ್ಧ್ವಾ ರನ್ಧ್ರಂ ಶೃಣುಷ್ವ ತತ್ ॥೮೪॥

ಅಮಙ್ಗಲ್ಯದಿನಾರಮ್ಭೇ ಸುತೃಪ್ತೋ ವಪತೇ ಚ ಯಃ ।
ಕ್ಷೇತ್ರೇಷ್ವನುಪ್ರವೇಶಂ ವೈ ಕರೋತ್ಯನ್ತ್ಯೋಪಸಙ್ಗಿಷು ॥೮೫॥

ಅಮಙ್ಗಲ್ಯದಿನಾರಮ್ಭಂ ಮಙ್ಗಲಾನಾಂ ಚ ವರ್ಜಯೇತ್ ।
ಮಹದ್ಭಯಂ ಪ್ರಯಚ್ಛನ್ತಿ ಯತ್ರ ವೈ ತತ್ಪ್ರಸಙ್ಗಿಷು ॥೮೬॥

ತಸ್ಮಾತ್ಕಲ್ಪಃ ಸುಪ್ರಶಸ್ತೇ ದಿನೇಽಭ್ಯರ್ಚ್ಯ ನಿಶಾಕರಮ್ ।
ಕುರ್ಯಾದಾರಮ್ಭಮುಪ್ತಿಂ ಚ ಹೃಷ್ಟಸ್ತುಷ್ಟಃ ಸಹಾಯವಾನ್ ॥೮೭॥

---

೮೪. ಕ್ಷುದ್ರಕ ಎಂಬ ನಾಮಾಂಕನವುಳ್ಳ ಸಸ್ಯಹಂತ ಎಂಬುವನ ಒಬ್ಬ ಕುಮಾರನು ಸರ್ವಕಾಲದಲ್ಲಿಯೂ ಸಸ್ಯಸಂಪತ್ತಿಯನ್ನು ನಾಶಮಾಡುವನು. ಆ ಕ್ಷುದ್ರಕನು ಯಾವ ರಂಧ್ರವನ್ನು ನೋಡಿ ಪ್ರವೇಶಮಾಡುವನೋ ಅದನ್ನು ಹೇಳುವೆನು, ಕೇಳು.

೮೫. ಯಾವ ಮಾನವನು ಸಂಪತ್ತಿಯಿಂದ ತೃಪ್ತನಾಗಿ ದಿನಶುದ್ಧಿಯನ್ನು ನೋಡದೆ ಅಮಂಗಲದಿನದಲ್ಲಿ ಪ್ರಾರಂಭಿಸಿ ಬೀಜಾವಾಪವನ್ನು ಮಾಡುವನೋ, ಸಸ್ಯನಾಶಕ್ಕೆ ಗುರಿಯಾದ ಅವನ ಕ್ಷೇತ್ರಗಳಲ್ಲಿ ಕ್ಷುದ್ರಕನು ಪ್ರವೇಶಮಾಡುವನು.

೮೬. ಪ್ರಾಯಕವಾಗಿ ಪ್ರತಿಯೊಂದು ಕರ್ಮಾರಂಭದಲ್ಲಿ ವಿಹಿತವಾದ ಮಂಗಲದಿನವನ್ನು ಬಿಟ್ಟು ಅಮಂಗಲದಿನವನ್ನು ಗೊತ್ತುಮಾಡಿಕೊಳ್ಳುವ ಪ್ರಸಂಗವುಳ್ಳವರಲ್ಲಿ ಈ ದುರ್ದೈವಗಳು ಆವೇಶವಾಗಿ ಮಹತ್ತಾದ ಭಯವನ್ನು ಕೊಡುತ್ತವೆ.

೮೭. ಆದುದರಿಂದ ಮಾನವನು ಪ್ರಶಸ್ತವಾದ ದಿನದಲ್ಲಿ ಯಥಾವಿಧಿಯಾಗಿ ಚಂದ್ರನನ್ನು ಪೂಜೆಮಾಡಿ ಹರ್ಷ-ಸಂತೋಷ-ಸಹಾಯಸಂಪತ್ತಿಗಳಿಂದ ಕೂಡಿದವನಾಗಿ ಬೀಜಬಿತ್ತಣೆಯ ಆರಂಭವನ್ನು ಮಾಡಬೇಕು.

ನಿಯೋಜಿಕೇತಿ ಯಾ ಕನ್ಯಾ ದುಃಸಹಸ್ಯ ಮಯೋದಿತಾ ।
ಜಾತಂ ಪ್ರಚೋದಿಕಾಸಂಜ್ಞಂ ತಸ್ಯಾಃ ಕನ್ಯಾಚತುಷ್ಟಯಮ್ ॥೮೮॥

ಮತ್ತೋನ್ಮತ್ತಪ್ರಮತ್ತಾಂಸ್ತು ನರಾನ್ನಾರೀಸ್ತು ತಾಃ ಸದಾ ।
ಸಮಾವಿಶನ್ತಿ ನಾಶಾಯ ಚೋದಯನ್ತೀಹ ದಾರುಣಮ್ ॥೮೯॥

ಅಧರ್ಮಂ ಧರ್ಮರೂಪೇಣ ಕಾಮಂ ಚಾಕಾಮರೂಪಿಣಮ್ ।
ಅನರ್ಥಂ ಚಾರ್ಥರೂಪೇಣ ಮೋಕ್ಷಂ ಚಾಮೋಕ್ಷರೂಪಿಣಮ್॥೯೦॥

ದುರ್ವಿನೀತಾನ್ವಿನಾ ಶೌಚಂ ದರ್ಶಯನ್ತಿ ಪೃಥಙ್ನರಾನ್ ।
ಭ್ರಂಶನ್ತ್ಯೇಭಿಃ ಪ್ರವಿಷ್ಟಾಭಿಃ ಪುರುಷಾರ್ಥಾತ್ಪೃಥಙ್ನರಾಃ ॥೯೧॥

---

೮೮. ಹಿಂದೆ ದುಃಸಹನೆಂಬುವನಿಗೆ ನಿಯೋಜಿಕಾ ಎಂಬ ಕನ್ಯೆಯು ಹುಟ್ಟಿದಳೆಂದು ನನ್ನಿಂದ ಹೇಳಲ್ಪಟ್ಟಿದೆಯಷ್ಟೆ; ಅವಳಿಗೆ ಪ್ರಚೋದಿಕಾ ಎಂಬ ಎಂಬ ನಾಮಾಂಕನವುಳ್ಳ ನಾಲ್ಕುಮಂದಿ ಕನ್ಯೆಯರು ಜನಿಸಿದರು.

೮೯. ಪ್ರಚೋದಿಕಾ ಎಂಬ ಕನ್ಯೆಯರು ಮದಿಸಿದವರು, ಉನ್ಮಾದ-ವಂತರು ಮತ್ತು ಪ್ರಮಾದವುಳ್ಳವರು ಇಂತಹ ನರ-ನಾರಿಯರನ್ನು ಯಾವಾ-ಗಲೂ ಆವೇಶಮಾಡುವರು. ಮತ್ತು ಅವರನ್ನು ನಾಶಮಾಡುವ ಹಾಗೆ ಭಯಂಕರಸಾಹಸಕ್ಕೆ ಅವರನ್ನು ಪ್ರೇರೇಪಿಸುವರು.

೯೦. ಮತ್ತು ತಾವು ಆವೇಶಹೊಂದಿದ ನರ-ನಾರಿಯರಿಗೆ ಅಧರ್ಮ-ವನ್ನು ಧರ್ಮರೂಪದಿಂದಲೂ, ಅಕಾಮವನ್ನು ಕಾಮರೂಪದಿಂದಲೂ, ಅನರ್ಥ-ವನ್ನು ಅರ್ಥರೂಪದಿಂದಲೂ ಹಾಗು ಅಮೋಕ್ಷವನ್ನು ಮೋಕ್ಷರೂಪದಿಂದಲೂ ಭ್ರಾಂತಿಯನ್ನು ಹುಟ್ಟಿಸುತ್ತವೆ.

೯೧. ಶೌಚಾನುಷ್ಠಾನವಿಲ್ಲದ ಮತ್ತು ದುರಾಚಾರರಾದ ನರ-ನಾರಿಯ-ರಲ್ಲಿ ವಿಶೇಷವಾಗಿ ಪ್ರವೇಶಮಾಡಿದ ಈ ಕನ್ಯೆಯರು ಧರ್ಮ ಮುಂತಾದುವುಗಳಲ್ಲಿ ಭ್ರಾಂತಿಯನ್ನು ತೋರಿಸುತ್ತಾರೆ. ಇವರು ಪ್ರವೇಶಮಾಡಿದ ನರರು ಪುರು-ಷಾರ್ಥಗಳಿಂದ ಭ್ರಷ್ಟರಾಗುವರು.

ತಾಸಾಂ ಪ್ರವೇಶಶ್ಚ ಗೃಹೇ ಸನ್ಧ್ಯೃಕ್ಷೇಷು ಹ್ಯುದುಮ್ಬರೇ ।
ಧಾತ್ರೇ ವಿಧಾತ್ರೇ ಚ ಬಲಿರ್ಯತ್ರ ಕಾಲೇ ನ ದೀಯತೇ ॥೯೨॥

ಭುಞ್ಜತಾಂ ಪಿಬತಾಂ ವಾಪಿ ಸಂಗಿಭಿರ್ಜಲವಿಪ್ರುಷೈಃ ।
ನರನಾರೀಷು ಸಙ್ಕ್ರಾನ್ತಿಸ್ತಾಸಾಮಾಶ್ವಭಿಜಾಯತೇ ॥೯೩॥

ವಿರೋಧಿನ್ಯಾಸ್ತ್ರಯಃ ಪುತ್ರಾಶ್ಚೋದಕೋ ಗ್ರಾಹಕಸ್ತಥಾ ।
ತಮಃಪ್ರಚ್ಛಾದಕಶ್ಚಾನ್ಯಸ್ತತ್ಸ್ವರೂಪಂ ಶೃಣುಷ್ವ ಮೇ ॥೯೪॥

ಪ್ರದೀಪತೈಲಸಂಸರ್ಗದೂಷಿತೇ ಲಙ್ಘಿತೇ ಖಲೇ ।
ಮುಸಲೋಲೂಖಲೇ ಯತ್ರ ಪಾದುಕೇ ವಾಸನೇ ಸ್ತ್ರಿಯಃ ॥೯೫॥

---

೯೨. ಯಾವ ಮನೆಯಲ್ಲಿ ಧಾತಾ, ವಿಧಾತಾ ಎಂಬ ದೇವತೆಗಳಿಗೆ ಶಾಸ್ತ್ರೀಯವಾಗಿ ಅರ್ಪಿಸಬೇಕಾದ ಬಲಿಯು ಸಕಾಲದಲ್ಲಿ ಕೊಡಲ್ಪಡುವುದಿಲ್ಲವೋ ಅಲ್ಲಿ ಸಂಧ್ಯಾಕಾಲ, ಕೆಟ್ಟನಕ್ಷತ್ರ, ಉದುಂಬರ ಸನ್ನಿಧಿಗಳಲ್ಲಿ ಪ್ರವೇಶ ಮಾಡುವರು.

೯೩. ಭೋಜನ, ಪಾನಗಳನ್ನು ಮಾಡುತ್ತಿರುವಾಗ ಎಂಜಲಾದ ಆಹಾರ-ಜಲಗಳ ಕಣಗಳ ಸಂಪರ್ಕವನ್ನು ಹೊಂದಿರುವ ಪುರುಷ-ಸ್ತ್ರೀಯರಲ್ಲಿ ಆ ದುರ್ದೈವಗಳ ಪ್ರವೇಶವು ಬೇಗ ಆಗುವುದು.

೯೪. ವಿರೋಧಿನೀ ಎಂಬುವಳಿಗೆ ಮೂರು ಮಂದಿ ಪುತ್ರರು ಜನಿಸಿ-ದರು. ಅವರು ಚೋದಕ, ಗ್ರಾಹಕ, ತಮಃಪ್ರಚ್ಛಾದಕ ಎಂದು ನಾಮಾಂಕಿತ-ರಾಗಿದ್ದರು. ಆ ಮೂರು ಮಂದಿಯ ಸ್ವರೂಪವನ್ನು ನೀನು ನನ್ನಿಂದ ಕೇಳು.

೯೫. ದೀಪದ ಎಣ್ಣೆಯು ಬಿದ್ದು ಹರಡಿರುವ ನೆಲ, ಧಾನ್ಯವನ್ನು ತುಳಿಸುವ ಖಣ, ಒನಿಕೆ, ಒರಳುಕಲ್ಲು, ಪಾದುಕೆ, ಆಸನ ಮತ್ತು ಸ್ತ್ರೀಜನರನ್ನು ಲಂಘಿಸಿ ನಡೆದರೆ ಆಗ ವಿರೋಧಿನೀ ಪುತ್ರರ ಆವೇಶವಾಗುವುದು.

ಶೂರ್ಪದಾತ್ರಾದಿಕಂ ಯತ್ರ ಪದಾಕೃಷ್ಟಂ ತಥಾಸನಮ್ ।
ಯತ್ರೋಪಲಿಪ್ತೇನಾಭ್ಯರ್ಚ್ಯ ವಿಹಾರಃ ಕ್ರಿಯತೇ ಗೃಹೇ ॥೯೬॥

ದರ್ವೀಮುಖೇನ ಯತ್ರಾಗ್ನಿರಾಹೃತೋಽನ್ಯತ್ರ ನೀಯತೇ ।
ವಿರೋಧಿನೀಸುತಾಸ್ತತ್ರ ವಿಜೃಮ್ಭನ್ತೇ ಪ್ರಚೋದಿತಾಃ ॥೯೭॥

ಏಕೋ ಜಿಹ್ವಾಗತಃ ಪುಂಸಾಂ ಸ್ತ್ರೀಣಾಂ ಚಾಲೀಕಸತ್ಯವಾನ್ ।
ಚೋದಕೋ ನಾಮ ಸ ಪ್ರೋಕ್ತಃ ಪೈಶುನ್ಯಂ ಕುರುತೇ ಗೃಹೇ ॥೯೮॥

ಅವಧಾನಗತಶ್ಚಾನ್ಯಃ ಶ್ರವಣಸ್ಥೋಽತಿದುರ್ಮತಿಃ ।
ಕರೋತಿ ಗ್ರಹಣಂ ತೇಷಾಂ ವಚಸಾಂ ಗ್ರಾಹಕಸ್ತು ಸಃ ॥೯೯॥

---

೯೬. ಗುದ್ದಲಿ, ಮೊರ ಮುಂತಾದುವುಗಳು ಅವ್ಯವಸ್ಥೆಯಿಂದ ಬಿದ್ದಿರುವುದು, ಆಸನವನ್ನು ಕಾಲಿನಿಂದ ಸೆಳೆದುಕೊಳ್ಳುವುದು, ಮತ್ತು ಸಾರಿಸಿ-ಗುಡಿಸಿ ವಿಹಾರಭೂಮಿಯನ್ನು ಅರ್ಚಿಸದಿರುವುದು—ಈ ಸ್ಥಿತಿಯುಳ್ಳ ಮನೆಯಲ್ಲಿ ವಿರೋಧಿನೀಪುತ್ರರು ಇರುವರು.

೯೭. ಮತ್ತು ಸೌಟನಿಂದ ತರಲ್ಪಟ್ಟ ಅಗ್ನಿಯು ಹಾಗೆಯೇ ಒಂದೆಡೆಯಿಂದ ಬೇರೊಂದೆಡೆಗೆ ಎಲ್ಲಿ ಒಯ್ಯಲ್ಪಡುವುದೋ ಅಂತಹ ಸ್ಥಳಗಳಲ್ಲಿ ಇಂತಹ ದುಷ್ಕರ್ಮಗಳಿಂದ ಎಬ್ಬಿಸಲ್ಪಟ್ಟ ವಿರೋಧಿನೀ ಪುತ್ರರು ತಮ್ಮ ಆರ್ಭಟವನ್ನು ತೋರಿಸುವರು.

೯೮. ಇವರಲ್ಲಿ ಒಬ್ಬನು ಸ್ತ್ರೀಯರ ಮತ್ತು ಪುರುಷರ ನಾಲಿಗೆಯಲ್ಲಿ ವಾಸಮಾಡುತ್ತ ಸುಳ್ಳನ್ನು ಆಡಿಸುವನು. ಅವನು ಚೋದಕನೆಂದು ಕರೆಯಲ್ಪಟ್ಟಿರುವನು. ಅವನು ಮನೆಯಲ್ಲಿ ಚಾಡಿವಚನ ಪ್ರಸಂಗವನ್ನು ಉಂಟುಮಾಡುವನು.

೯೯. ದುಷ್ಟಬುದ್ಧಿಯುಳ್ಳ ಮತ್ತೊಬ್ಬ ಕುಮಾರನು ಸ್ತ್ರೀ-ಪುರುಷರ ಕಿವಿಗಳ ಸಮೀಪದಲ್ಲಿದ್ದು ಬೇರೊಬ್ಬರ ರಹಸ್ಯವಚನಗಳನ್ನು ಆಲೈಸುವಂತೆ ಮಾಡಿ ಆ ಮಾತುಗಳನ್ನು ಗ್ರಹಿಸುವನು. ಅವನು ಗ್ರಾಹಕನೆಂದು ಕರೆಯಲ್ಪಡುವನು.

ಆಕ್ರಮ್ಯಾನ್ಯೋ ನರೋ ನ್ಯಣಾಂ ತಮಸಾಚ್ಛಾದ್ಯ ದುರ್ಮತಿಃ ।
ಕ್ರೋಧಂ ಜನಯತೇ ಯಸ್ತು ತಮಃಪ್ರಚ್ಛಾದಕಸ್ತು ಸಃ ॥೧೦೦॥

ಸ್ವಯಂಹಾರ್ಯಾಸ್ತು ಚೌರ್ಯೇಣ ಜನಿತಂ ತನಯತ್ರಯಮ್ ।
ಸರ್ವಹಾರ್ಯರ್ಧಹಾರೀ ಚ ವೀರ್ಯಹಾರೀ ತಥೈವ ಚ ॥೧೦೧॥

ಅನಾಚಾನ್ತಗೃಹೇಷ್ವೇತೇ ಮನ್ದಾಚಾರಗೃಹೇಷು ಚ ।
ಅಪ್ರಕ್ಷಾಲಿತಪಾದೇಷು ಪ್ರವಿಶತ್ಸು ಮಹಾನಸಮ್ ॥೧೦೨॥

ಖಲೇಷು ಗೋಷ್ಠೇಷು ಚ ವೈ ದೋಹೋ ಯೇಷು ಗೃಹೇಷು ವೈ ।
ತೇಷು ಸರ್ವೇ ಯಥಾನ್ಯಾಯಂ ವಿಹರನ್ತಿ ರಮನ್ತಿ ಚ ॥೧೦೩॥

---

೧೦೦. ಮತ್ತು ದುಷ್ಟಬುದ್ಧಿಯಾದ ಯಾವ ಕುಮಾರನು ನರರ ಮನಸ್ಸನ್ನು ಆಕ್ರಮಿಸಿ ತಾಮಸಗುಣದಿಂದ ಆವರಿಸುವಂತೆ ಮಾಡಿ ಕೋಪೋ-ದ್ರೇಕ ಹುಟ್ಟುವಂತೆ ಮಾಡುವನೋ ಅವನು ತಮಃಪ್ರಚ್ಛಾದಕನೆಂದು ಕರೆಯ-ಲ್ಪಡುವನು.

೧೦೧. ಸ್ವಯಂಹಾರೀ ಎಂಬುವಳಿಗೆ ಚೌರ್ಯದಿಂದ ನಡೆದ ಪುರುಷ-ಸಂಗದಿಂದ ಮೂರು ಮಂದಿ ಪುತ್ರರು ಜನಿಸಿದರು. ಅವರಿಗೆ ಸರ್ವಹಾರಿ, ಅರ್ಧಹಾರಿ ಮತ್ತು ವೀರ್ಯಹಾರಿ ಎಂದು ನಾಮಾಂಕನಗಳಿದ್ದುವು.

೧೦೨. ಆಚಮನದಿಂದ ಶುಚಿತ್ವವಿಲ್ಲದವರ ಮನೆಗಳಲ್ಲಿಯೂ, ಆಚಾರ-ನ್ಯೂನತೆಯುಳ್ಳವರ ಮನೆಗಳಲ್ಲಿಯೂ ಮತ್ತು ಹೊರಗಿನಿಂದ ಬಂದ ಜನರು ಪಾದಪ್ರಕ್ಷಾಲನವಿಲ್ಲದೆ ಪಾಕಶಾಲೆಗೆ ಪ್ರವೇಶಿಸುವವರ ಮನೆಗಳಲ್ಲಿಯೂ ಇವರು ಪ್ರವೇಶಮಾಡುವರು.

೧೦೩. ಖಣ ಪ್ರದೇಶ, ಗೋ ಶಾಲೆ, ಹಾಲು ಕರೆಯುವ ಮನೆ ಇವು-ಗಳಲ್ಲಿ ಸ್ವಯಂಹಾರಿಯ ಪುತ್ರರು ತಮಗೆ ಅವಕಾಶ ಸಿಕ್ಕಿದ ಹಾಗೆಲ್ಲ ಪ್ರವೇಶ-ಮಾಡಿ ವಿಹರಿಸುತ್ತಲೂ, ರಮಿಸುತ್ತಲೂ ಇರುವರು.

ಭ್ರಾಮಣ್ಯಾಸ್ತನಯಸ್ತ್ವೇಕಃ ಕಾಕಜಙ್ಘ ಇತಿ ಸ್ಮೃತಃ।
ತೇನಾವಿಷ್ಟೋ ರತಿಂ ಸರ್ವೋ ನೈವ ಪ್ರಾಪ್ನೋತಿ ವೈ ಮುನೇ॥೧೦೪॥

ಭುಞ್ಜನ್ ಯೋ ಗಾಯತೇ ಮೈತ್ರೇ ಗಾಯತೇ ಹಸತೇ ಚ ಯಃ।
ಸನ್ಧ್ಯಾಮೈಥುನಿನಂ ಚೈವ ನರಮಾವಿಶತಿ ದ್ವಿಜ ॥೧೦೫॥

ಕನ್ಯಾತ್ರಯಂ ಪ್ರಸೂತಾ ಸಾ ಯಾ ಕನ್ಯಾ ಋತುಹಾರಿಣೀ ॥೧೦೬॥

ಏಕಾ ಕುಚಹರಾ ಕನ್ಯಾ ಅನ್ಯಾ ವ್ಯಞ್ಜನಹಾರಿಕಾ।
ತೃತೀಯಾ ತು ಸಮಾಖ್ಯಾತಾ ಕನ್ಯಕಾ ಜಾತಹಾರಿಣೀ ॥೧೦೭॥

ಯಸ್ಯಾ ನ ಕ್ರಿಯತೇ ಸರ್ವಃ ಸಮ್ಯಗ್ವೈವಾಹಿಕೋ ವಿಧಿಃ।
ಕಾಲಾತೀತೋಽಥವಾ ತಸ್ಯಾ ಹರತ್ಯೇಕಾ ಕುಚದ್ವಯಮ್ ॥೧೦೮॥

---

೧೦೪. ಎಲೈ ಕ್ರೌಷ್ಟುಕಿಮುನಿಯೆ! ಭ್ರಾಮಣೀ ಎಂಬುವಳಿಗೆ ಒಬ್ಬ ಪುತ್ರನು ಜನಿಸಿದನು. ಅವನು ಕಾಕಜಂಘ ಎಂದು ಕರೆಯಲ್ಪಡುವನು. ಅವನ ಆವೇಶವುಳ್ಳವರೆಲ್ಲರೂ ಸ್ವಲ್ಪವೂ ಸುಖವನ್ನು ಹೊಂದುವುದಿಲ್ಲ.

೧೦೫. ಎಲೈ ದ್ವಿಜನೆ! ಯಾವ ಮಾನವನು ಊಟ ಮಾಡುವಾಗ ಹಾಡುವನೋ, ಮೈತ್ರೀವಿನೋದಗಳಲ್ಲಿ ಹಾಡುತ್ತ ನಗುತ್ತ ಇರುವನೋ ಮತ್ತು ಸಂಧ್ಯಾಕಾಲದಲ್ಲಿ ಸ್ತ್ರೀಸಂಗವನ್ನು ಮಾಡುವನೋ ಅಂತಹ ಮಾನವನನ್ನು ಕಾಕಜಂಘನು ಆವೇಶಿಸುವನು.

೧೦೬. ಹಿಂದೆ ದುಃಸಹನಿಗೆ ಜನಿಸಿದ ಕನ್ಯೆಯರಲ್ಲಿ ಋತುಹಾರಿಣಿ ಎಂದು ಒಬ್ಬಳು ಕನ್ಯೆಯಿದ್ದಳೆಂದು ಹೇಳಲ್ಪಟ್ಟಿದೆಯಷ್ಟೆ. ಅವಳಿಗೆ ಮೂರು ಮಂದಿ ಕನ್ಯೆಯರು ಜನಿಸಿದರು.

೧೦೭. ಆ ಮೂರುಮಂದಿಯಲ್ಲಿ ಒಬ್ಬಳು ಕುಚಹರಾ ಎಂದು ಹೆಸ-ರನ್ನು ಹೊಂದಿದ್ದಳು. ಮತ್ತೊಬ್ಬಳು ವ್ಯಂಜನಹಾರಿಕಾ ಎಂದು ಪ್ರಸಿದ್ಧಳಾ-ದಳು. ಮೂರನೆಯವಳು ಜಾತಹಾರಿಣಿ ಎಂದು ಪ್ರಸಿದ್ಧಿಯನ್ನು ಗಳಿಸಿದಳು.

೧೦೮. ಯಾವ ನಾರಿಗೆ ಎಲ್ಲ ವಿವಾಹವಿಧಿಯು ಶಾಸ್ತ್ರೀಯ ವಿಧಾನ-ದಿಂದ ನಡೆಯುವುದಿಲ್ಲವೋ ಅಥವಾ ಕಾಲಾತೀತವಾಗುವುದೋ ಅಂತಹ ನಾರಿ-ಯಲ್ಲಿ ಕುಚಹರಾ ಎಂಬುವಳು ಆವೇಶಮಾಡಿ ಅವಳ ಸ್ತನಗಳನ್ನು ಅಪಹರಿಸು-ವಳು.

ಸಮ್ಯಕ್ ಶ್ರಾದ್ಧಮದತ್ತ್ವಾ ಚ ತಥಾನಭ್ಯರ್ಚ್ಯ ಮಾತೃಕಾಃ ।
ವಿವಾಹಿತಾಯಾಃ ಕನ್ಯಾಯಾ ಹರತಿ ವ್ಯಞ್ಜನಂ ತಥಾ ॥೧೦೯॥

ಅಗ್ನ್ಯಮ್ಬುಶೂನ್ಯೇ ಚ ತಥಾ ವಿಧೂಪೇ ಸೂತಿಕಾಗೃಹೇ ।
ಅದೀಪಶಸ್ತ್ರಮುಸಲೇ ಭೂತಿಸರ್ಷಪವರ್ಜಿತೇ ॥೧೧೦॥

ಅನುಪ್ರವಿಶ್ಯ ಸಾ ಜಾತಮಪಹೃತ್ಯಾತ್ಮಸಮ್ಭವಮ್ ।
ಕ್ಷಣಪ್ರಸವಿನೀ ಬಾಲಂ ತತ್ರೈವೋತ್ಸೃಜತೇ ದ್ವಿಜ ॥೧೧೧॥

ಸಾ ಜಾತಹಾರಿಣೀ ನಾಮ ಸುಘೋರಾ ಪಿಶಿತಾಶನಾ ।
ತಸ್ಮಾತ್ಸಂರಕ್ಷಣಂ ಕಾರ್ಯಂ ಯತ್ನತಃ ಸೂತಿಕಾಗೃಹೇ ॥೧೧೨॥

---

೧೦೯. ಮತ್ತು ಅಭ್ಯುದಯ ಶ್ರಾದ್ಧವನ್ನು ಯಥಾವಿಧಿಯಾಗಿ ಮಾಡದೆ, ಮಾತೃಕಾಪೂಜೆಯನ್ನು ಆಚರಿಸದೆ ವಿವಾಹ ಮಾಡಿಕೊಟ್ಟಿರುವ ನಾರಿಯಲ್ಲಿ ವ್ಯಂಜನಹಾರಿಕೆಯು ಆವೇಶಮಾಡಿ ಅವಳ ಗುಹ್ಯಾಂಗವನ್ನು ಅಪ-ಹರಿಸುವಳು.

೧೧೦. ಅಗ್ನಿ-ಜಲಗಳಿಂದ ಶೂನ್ಯವೂ, ಧೂಪವಿಲ್ಲದಿರುವುದೂ, ದೀಪ-ಶಸ್ತ್ರ-ಮುಸಲಗಳಿಂದ ರಹಿತವೂ ಮತ್ತು ಭಸ್ಮ-ಬಿಳಿಯ ಸಾಸುವೆ ಕಾಳುಗಳ ರಕ್ಷೆಯಿಲ್ಲದ್ದೂ ಆದ ಸೂತಿಕಾಗೃಹಕ್ಕೆ ಜಾತಹಾರಿಣಿಯು ಬರುವಳು.

೧೧೧. ದ್ವಿಜೋತ್ತಮನೆ! ಜಾತಹಾರಿಣಿಯು ಅಂತಹ ಸೂತಿಕಾ-ಗೃಹವನ್ನು ಪ್ರವೇಶಮಾಡಿ ಶಿಶುವನ್ನು ಅಪಹರಿಸಿ ಕ್ಷಣಮಾತ್ರದಲ್ಲಿ ಆ ಶಿಶುವನ್ನು ತನ್ನಲ್ಲಿ ಪ್ರಸವಿಸಿ ಅದೇ ಸೂತಿಕಾಗೃಹದಲ್ಲಿ ಬಿಡುವಳು.

೧೧೨. ಆ ಕನ್ಯೆಯು ಜಾತಹಾರಿಣಿ ಎಂದು ಪ್ರಸಿದ್ಧಳಾಗಿರುವಳು. ಅವಳು ಅತಿಘೋರ ಆಕಾರವುಳ್ಳವಳೂ ಶಿಶುಮಾಂಸವನ್ನು ತಿನ್ನುವವಳೂ ಆಗಿರುವಳು. ಆದ್ದರಿಂದ ಸೂತಿಕಾಗೃಹದಲ್ಲಿ ವಿಶೇಷಯತ್ನದಿಂದ ರಕ್ಷೆಯನ್ನು ಮಾಡಬೇಕು.

ಸ್ಮೃತಿಂ ಚಾಪ್ರಯತಾನಾಂ ಚ ಶೂನ್ಯಾಗಾರನಿಷೇವಣಾತ್ ।
ಅಪಹನ್ತಿ ಸುತಸ್ತಸ್ಯಾಃ ಪ್ರಚಣ್ಡೋ ನಾಮ ನಾಮತಃ ॥೧೧೩॥

ಪೌತ್ರೇಭ್ಯಸ್ತಸ್ಯ ಸಂಭೂತಾ ಲೀಕಾಃ ಶತಸಹಸ್ರಶಃ ।
ಚಣ್ಡಾಲಯೋನಯಶ್ಚಾಷ್ಟೌ ದಣ್ಡಪಾಶಾತಿಭೀಷಣಾಃ ॥೧೧೪॥

ಕ್ಷುಧಾವಿಷ್ಟಾಸ್ತತೋ ಲೀಕಾಸ್ತಾಶ್ಚ ಚಣ್ಡಾಲಯೋನಯಃ ।
ಅಭ್ಯಧಾವನ್ತ ಚಾನ್ಯೋನ್ಯಮತ್ತುಕಾಮಾಃ ಪರಸ್ಪರಮ್ ॥೧೧೫॥

ಪ್ರಚಣ್ಡೋ ವಾರಯಿತ್ವಾ ತು ಯಾಸ್ತಾಶ್ಚಣ್ಡಾಲಯೋನಯಃ ।
ಸಮಯೇ ಸ್ಥಾಪಯಾಮಾಸ ಯಾದೃಶೇ ತಾದೃಶಂ ಶೃಣು ॥೧೧೬॥

ಅದ್ಯಪ್ರಭೃತಿ ಲೋಕಾನಾಮಾವಾಸಂ ಯೋ ಹಿ ದಾಸ್ಯತಿ ।
ದಣ್ಡಂ ತಸ್ಯಾಹಮತುಲಂ ಪಾತಯಿಷ್ಯೇ ನ ಸಂಶಯಃ ॥೧೧೭॥

---

೧೧೩. ಸ್ಮೃತಿಹಾರಿಣಿ ಎಂಬುವಳ ಪ್ರಚಂಡ ಎಂಬ ನಾಮಾಂಕಿತನಾದ ಪುತ್ರನು ಶೂನ್ಯಗೃಹಗಳನ್ನು ಪ್ರವೇಶಿಸಿ ಅಪವಿತ್ರರಾದವರ ಬುದ್ಧಿಯನ್ನು ಹೊಕ್ಕು ಅವರ ಸ್ಮೃತಿಶಕ್ತಿಯನ್ನು ಅಪಹರಿಸುವನು.

೧೧೪. ಆ ಪ್ರಚಂಡನ ಪೌತ್ರರಿಂದ ಸಾವಿರಾರುಮಂದಿ ಲೀಕಾ ಎಂಬ ನಾಮಾಂಕಿತರಾದ ದುಷ್ಟದೇವತೆಗಳು ಜನಿಸಿದರು. ಹಾಗು ದಂಡ-ಪಾಶಗಳನ್ನು ಧರಿಸಿ ಬಲು ಭಯಂಕರರಾದ ಎಂಟು ಚಂಡಾಲಯೋನಿಯ ಪ್ರಜೆಗಳು ಜನಿಸಿದರು.

೧೧೫. ತರುವಾಯ ಸಾವಿರಾರು ಮಂದಿ ಲೀಕಾ ಎಂಬುವರು ಹಾಗು ಚಂಡಾಲಪ್ರಜೆಗಳು ಹಸಿವಿನಿಂದ ಪೀಡಿತರಾಗಿ ಕ್ರೂರಸ್ವಭಾವವನ್ನು ಹೊಂದಿ ಒಬ್ಬರನ್ನೊಬ್ಬರು ತಿಂದುಹಾಕುವ ಯತ್ನದಿಂದ ಓಡಾಡಿದರು.

೧೧೬. ಆಗ ಪ್ರಚಂಡನು ಲೀಕಾ ಎಂಬುವರನ್ನೂ ಮತ್ತು ಚಂಡಾಲ-ಪ್ರಜೆಗಳನ್ನೂ ಆ ಯತ್ನದಿಂದ ನಿವಾರಣಮಾಡಿ ಒಂದು ಶಪಥದಲ್ಲಿ ಇರಿಸಿದನು. ಆ ಶಪಥವನ್ನು ನೀನು ನನ್ನಿಂದ ಕೇಳು.

೧೧೭. ಇವತ್ತಿನ ಮೊದಲುಗೊಂಡು ಯಾರು ತನ್ನ ಸಂಗವುಳ್ಳ ಲೀಕೆಗಳಿಗೆ ಆವಾಸವನ್ನು ಮಾಡಿಕೊಡುವನೋ ನಾನು ಅವನಿಗೆ ಅತಿ ತೀಕ್ಷ್ಣ-ವಾದ ದಂಡವನ್ನು ಕೊಡುವೆನು. ಇದರಲ್ಲೇನೂ ಸಂಶಯವಿಲ್ಲ.

ಚಣ್ಡಾಲಯೋನ್ಯಾವಸಥೇ ಲೀಕಾ ಯಾ ಪ್ರಸವಿಷ್ಯತಿ ।
ತಸ್ಯಾಶ್ಚ ಸನ್ತತಿಃ ಪೂರ್ವಾ ಸಾ ಚ ಸದ್ಯೋ ನಶಿಷ್ಯತಿ ॥೧೧೮॥

ಪ್ರಸೂತೇ ಕನ್ಯಕೇ ದ್ವೇ ತು ಸ್ತ್ರೀಪುಂಸೋರ್ಬೀಜಹಾರಿಣೀ ।
ಜಾತರೂಪಾಮರೂಪಾಂ ಚ ತಸ್ಯಾಃ ಪ್ರಹರಣಂ ತು ತೇ ॥೧೧೯॥

ಜಾತರೂಪಾ ನಿಷೇಕಾನ್ತೇ ಸಾ ಯಸ್ಮೈ ಕ್ಷಿಪತೇ ಸುತಮ್ ।
ಸ ಪುಮಾನ್ ಜಾತಶುಕ್ರತ್ವಂ ಪ್ರಯಾತಿ ವನಿತಾಪಿ ವಾ ॥೧೨೦॥

ತಥೈವ ಗಚ್ಛತಃ ಸದ್ಯೋ ನಿರ್ಬೀಜತ್ವಮರೂಪಯಾ ।
ಅಸ್ನಾತಾಶೀ ನರೋ ಯೋಽಸೌ ತಥಾ ಚಾಪಿ ವಿಯೋಗಿನಃ ॥೧೨೧॥

---

೧೧೮. ಮತ್ತು ಚಂಡಾಲಯೋನಿಯಾದ ಪ್ರಜೆಯ ವಾಸಸ್ಥಳದಲ್ಲಿ ಯಾವ ಲೀಕಾ ಎಂಬುವಳು ಪ್ರಸವಿಸುವಳೋ ಅವಳ ಹಿಂದಿನ ಸಂತತಿಯೆಲ್ಲವೂ ನಾಶವಾಗುವುದು ಮತ್ತು ಆಗ ಜನಿಸಿದ ಸಂತತಿಯೂ ನಶಿಸುವುದು.

೧೧೯. ಸ್ತ್ರೀ–ಪುರುಷರ ಬೀಜಶಕ್ತಿಯನ್ನು ಅಪಹರಿಸುವ ಬೀಜ-ಹಾರಿಣೀ ಎಂಬುವಳಿಗೆ ಅದೇ ಸ್ವಭಾವವುಳ್ಳ ಜಾತರೂಪಾ-ಅರೂಪಾ ಎಂಬ ಇಬ್ಬರು ಕನ್ಯೆಯರು ಜನಿಸಿದರು. ಅವರ ಅಪಘಾತದಿಂದ ಆಗುವ ಪೀಡೆಯನ್ನು ನೀನು ಕೇಳು.

೧೨೦. ಜಾತರೂಪಾ ಎಂಬುವಳು ನಿಷೇಕಕರ್ಮಾವಸಾನದಲ್ಲಿ ಯಾವ ದಂಪತಿಗಳಲ್ಲಿ ಶುಕ್ರ-ಶೋಣಿತ ಸಂಯೋಗವುಂಟಾಗಿ ಮುಂದೆ ಸಂತತಿಯಾಗು-ವುದೋ ಅವರಲ್ಲಿ ಆವೇಶವಾಗಿ ಸ್ತ್ರೀ-ಪುರುಷರು ಜಾತಶುಕ್ರವೆಂಬ ದೋಷವನ್ನು ಹೊಂದುವರು.

೧೨೧. ತರುವಾಯ ಅರೂಪಾ ಎಂಬುವಳು ಆವೇಶವಾಗಿ ಕೂಡಲೇ ಆ ದಂಪತಿಗಳಲ್ಲಿ ನಿರ್ಬೀಜತ್ವವುಂಟಾಗುವುದು. ಯಾವ ಮಾನವನು ಸ್ನಾನವಿಲ್ಲದೆ ಭೋಜನಮಾಡುವನೋ ಮತ್ತು ಪರಸ್ಪರ ವಿಯೋಗದಿಂದ ಕಾಲಯಾಪನೆ ಮಾಡುವನೋ ಅಂತಹವನಲ್ಲಿ ಅರೂಪಾ ಎಂಬುವಳ ಆವೇಶವಾಗುವುದು.

ವಿದ್ವೇಷಿಣೀ ತು ಯಾ ಕನ್ಯಾ ಭ್ರುಕುಟೀಕುಟಿಲಾನನಾ ।
ತಸ್ಯಾ ದ್ವೌ ತನಯೌ ಪುಂಸಾಮಪಕಾರಪ್ರಕಾಶಕೌ ||೧೨೨||

ನಿರ್ಬೀಜತ್ವಂ ನರೋ ಯಾತಿ ನಾರೀ ವಾ ಶೌಚವರ್ಜಿತಾ ||೧೨೩||

ಪೈಶುನ್ಯಾಭಿರತಂ ಲೋಲಮಸಜ್ಜನನಿಷೇವಣಮ್ ।
ಪುರುಷದ್ವೇಷಿಣಂ ಚೈತೌ ನರಮಾಕ್ರಮ್ಯ ತಿಷ್ಠತಃ ||೧೨೪||

ಮಾತ್ರಾ ಭ್ರಾತ್ರಾ ತಥಾ ಮಿತ್ರೈರಭೀಷ್ಟೈಃ ಸ್ವಜನೈಃ ಪರೈಃ ।
ವಿದ್ವಿಷ್ಟೋ ನಾಶಮಾಯಾತಿ ಪುರುಷೋ ಧರ್ಮತೋಽರ್ಥತಃ ||೧೨೫||

ಏಕಸ್ತು ಸ್ವಗುಣಾಂಲ್ಲೋಕೇ ಪ್ರಕಾಶಯತಿ ಪಾಪಕೃತ್ ।
ದ್ವಿತೀಯಸ್ತು ಗುಣಾನ್ಮೈತ್ರೀಂ ಲೋಕಸ್ಥಾಮಪಕರ್ಷತಿ ||೧೨೬||

---

೧೨೨. ಹುಬ್ಬು ಗಂಟುಹಾಕಿಕೊಂಡು ಭಯಂಕರವಾದ ಮುಖವುಳ್ಳ ವಿದ್ವೇಷಿಣಿ ಎಂಬ ಯಾವ ಕನ್ಯೆಯು ಹಿಂದೆ ಹೇಳಲ್ಪಟ್ಟಿರುವಳೋ ಅವಳಲ್ಲಿ ಮಾನವರಿಗೆ ಅಪಕಾರವನ್ನು ಮಾಡುವ ಅಪಕಾರ-ಪ್ರಕಾಶಕರೆಂಬ ಇಬ್ಬರು ಪುತ್ರರು ಜನಿಸಿದರು.

೧೨೩. ಈ ಲೋಕದಲ್ಲಿ ವಾಸಮಾಡುವ ಪುರುಷರಾಗಲಿ ಅಥವಾ ಸ್ತ್ರೀಯ-ರಾಗಲಿ ಶೌಚಾನುಷ್ಠಾನವನ್ನು ಬಿಟ್ಟರೆ ನಿರ್ಬೀಜತ್ವವನ್ನು ಹೊಂದುವರು. ಅದರಿಂದ ಸಂತತಿಯ ಪರಂಪರೆಯು ತಡೆಯಾಗುವುದು.

೧೨೪. ಅಪಕಾರ-ಪ್ರಕಾಶಕರೆಂಬ ಈರ್ವರು ಕುಮಾರರು ಚಾಡಿಯಲ್ಲಿ ನಿರತನೂ, ಚಂಚಲನೂ, ದುಷ್ಟಜನರ ಸೇವಕನೂ ಮತ್ತು ಮಾನವದ್ವೇಷಿಯೂ ಆದ ಮಾನವನನ್ನು ಆಕ್ರಮಿಸಿ ವಾಸಮಾಡುವರು.

೧೨೫. ಹಾಗೆ ಇವರ ಆವೇಶವನ್ನು ಹೊಂದಿದ ಮನುಷ್ಯನು ತಾಯಿ, ಸಹೋದರ, ಮಿತ್ರ, ಇಷ್ಟ, ಸ್ವಜನ ಮತ್ತು ಇತರ ಆಪ್ತಜನ-ಇವರೊಡನೆ ದ್ವೇಷವನ್ನು ಬೆಳೆಸಿ ಧರ್ಮ-ಅರ್ಥ ಪುರುಷಾರ್ಥಗಳಿಂದ ಭ್ರಷ್ಟನಾಗುವನು.

೧೨೬. ಈ ಇಬ್ಬರಲ್ಲಿ ಪ್ರಕಾಶಕನೆಂಬ ಒಬ್ಬ ಕುಮಾರನ ಆವೇಶವುಳ್ಳ ಪಾಪಿ ಮನುಜನು ಲೋಕದಲ್ಲಿ ಸ್ವಗುಣಗಳನ್ನು ಪ್ರಕಾಶಮಾಡಿಕೊಳ್ಳುವನು. ಅಪಕಾರನೆಂಬ ಎರಡನೆಯ ಕುಮಾರನು ಮನುಜನಲ್ಲಿದ್ದ ಗುಣ-ಲೋಕ ಮೈತ್ರಿಗಳನ್ನು ನಾಶಮಾಡುವನು.

ಇತ್ಯೇತೇ ದೌಃಸಹಾಃ ಸರ್ವೇ ಯಕ್ಷ್ಮಣಃ ಸನ್ತತಾವಥ ।
ಪಾಪಾಚಾರಾಃ ಸಮಾಖ್ಯಾತಾ ಯೈರ್ವ್ಯಾಪ್ತಮಖಿಲಂ ಜಗತ್ ॥೧೨೭॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ದೌಃಸಹೋತ್ಪತ್ತಿ-ನಿರೂಪಣಂ ನಾಮ ಅಷ್ಟಚತ್ವಾರಿಂಶತ್ತಮೋಽಧ್ಯಾಯಃ

---

೧೨೭. ಈ ರೀತಿಯಾಗಿ ಯಕ್ಷ್ಮರೂಪಿಯಾದ ದುಃಸಹನಿಂದ ತನ್ನ ವಂಶದಲ್ಲಿ ಅನೇಕಮಂದಿ ಪುತ್ರಿ-ಪುತ್ರರು ಜನಿಸಿರುವರು. ಇವರು ಪಾಪಾಚಾರದಿಂದ ಪ್ರಖ್ಯಾತಿಹೊಂದಿದವರು. ಇವರಿಂದ ಎಲ್ಲ ಜಗತ್ತು ವ್ಯಾಪಿಸಲ್ಪಟ್ಟಿರುವುದು.

ಮಾರ್ಕಂಡೇಯಮಹಾಪುರಾಣದಲ್ಲಿ ನಲವತ್ತೆಂಟನೆಯ ಅಧ್ಯಾಯವು ಮುಗಿದುದು

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಏಕೋನಪಞ್ಚಾಶತ್ತಮೋಽಧ್ಯಾಯಃ

(ರುದ್ರಸರ್ಗನಿರೂಪಣಮ್)

ಮಾರ್ಕಣ್ಡೇಯ ಉವಾಚ—

ಇತ್ಯೇಷ ತಾಮಸಃ ಸರ್ಗೋ ಬ್ರಹ್ಮಣೋಽವ್ಯಕ್ತಜನ್ಮನಃ ।
ರುದ್ರಸರ್ಗಂ ಪ್ರವಕ್ಷ್ಯಾಮಿ ತನ್ಮೇ ನಿಗದತಃ ಶೃಣು ||೧||

ತನವಶ್ಚ ತಥೈವಾಷ್ಟೌ ಪತ್ನ್ಯಃ ಪುತ್ರಾಶ್ಚ ತೇ ತಥಾ ||೨||

ಕಲ್ಪಾದಾವಾತ್ಮನಸ್ತುಲ್ಯಂ ಸುತಂ ಪ್ರಧ್ಯಾಯತಃ ಪ್ರಭೋಃ ।
ಪ್ರಾದುರಾಸೀದಥಾಙ್ಕೇಽಸ್ಯ ಕುಮಾರೋ ನೀಲಲೋಹಿತಃ ||೩||

ನಲವತ್ತೊಂಭತ್ತನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಇಂತೆಂದನು :—

೧. ಅವ್ಯಕ್ತತತ್ತ್ವದಿಂದ ಜನಿಸಿದ ಬ್ರಹ್ಮದೇವನಿಂದ ಉಂಟಾದ ತಾಮಸ-ಸೃಷ್ಟಿಯು ಹೀಗೆ ನಿನಗೆ ಹೇಳಲ್ಪಟ್ಟದೆ. ಇನ್ನುಮುಂದೆ ರುದ್ರಸೃಷ್ಟಿಯನ್ನು ಹೇಳುವೆನು. ನಾನು ಹೇಳುವ ರುದ್ರದೇವನ ಸೃಷ್ಟಿಯನ್ನು ಕೇಳು.

೨. ಹಾಗು ರುದ್ರದೇವನು ಹೊಂದಿರುವ ಎಂಟು ಮೂರ್ತಿಗಳನ್ನೂ ಹಾಗು ಅವನ ಪತ್ನೀ-ಪುತ್ರರನ್ನೂ ವಿಸ್ತಾರವಾಗಿ ಹೇಳುವೆನು. ಸಮಗ್ರವಾಗಿ ರುದ್ರಸೃಷ್ಟಿಯ ಚರಿತ್ರವನ್ನು ಕೇಳು.

೩. ಕಲ್ಪದ ಆದಿಯಲ್ಲಿ ಪ್ರಭುವಾದ ಬ್ರಹ್ಮದೇವನು ತನಗೆ ಅನುರೂಪ-ನಾದ ಪುತ್ರನನ್ನು ಸೃಷ್ಟಿಮಾಡುವುದನ್ನು ಧ್ಯಾನಿಸುತ್ತಿರಲು ಆಗ ಅವನ ತೊಡೆಯಲ್ಲಿ ಕಪ್ಪು-ಕೆಂಪುಬಣ್ಣಗಳ ಮೂರ್ತಿಯುಳ್ಳ ಒಬ್ಬ ಕುಮಾರನು ಜನಿಸಿದನು.

ರುರೋದ ಸುಸ್ವರಂ ಸೋಽಥ ದ್ರವಂಶ್ಚ ದ್ವಿಜಸತ್ತಮ ।
ಕಿಂ ರೋದಿಷೀತಿ ತಂ ಬ್ರಹ್ಮಾ ರುದನ್ತಂ ಪ್ರತ್ಯುವಾಚ ಹ ||೪||

ನಾಮ ದೇಹೀತಿ ತಂ ಸೋಽಥ ಪ್ರತ್ಯುವಾಚ ಜಗತ್ಪತಿಮ್ ||೫||

ಬ್ರಹ್ಮೋವಾಚ—

ರುದ್ರಸ್ತ್ವಂ ದೇವ ನಾಮ್ನಾಸಿ ಮಾ ರೋದೀರ್ಧೈರ್ಯಮಾವಹ ।
ಏವಮುಕ್ತಸ್ತತಃ ಸೋಽಥ ಸಪ್ತಕೃತ್ವೋ ರುರೋದ ಹ ||೬||

ತತೋಽನ್ಯಾನಿ ದದೌ ತಸ್ಮೈ ಸಪ್ತ ನಾಮಾನಿ ವೈ ಪ್ರಭುಃ ।
ಸ್ಥಾನಾನಿ ಚೈಷಾಮಷ್ಟಾನಾಂ ಪತ್ನೀಃ ಪುತ್ರಾಂಶ್ಚ ವೈ ದ್ವಿಜ ||೭||

---

೪. ಎಲೈ ದ್ವಿಜೋತ್ತಮನಾದ ಕ್ರೌಷ್ಟುಕಿಯೇ! ತರುವಾಯ ಆ ಕುಮಾರನು ಧಾವಿಸುತ್ತ ಮಧುರಸ್ವರದಿಂದ ಅತ್ತನು. ಆಗ ಬ್ರಹ್ಮನು ಅಳುತ್ತಿರುವ ಕುಮಾರನನ್ನು ಕುರಿತು ಏಕೆ ಅಳುತ್ತಿದ್ದೀಯೆ ? " ಎಂದು ಪ್ರಶ್ನಿಸಿದನು.

೫. ಆಗ ಕುಮಾರನು ಜಗದೀಶ್ವರನಾದ ಬ್ರಹ್ಮನನ್ನು ಕುರಿತು " ಬ್ರಹ್ಮದೇವನೇ, ನನಗೆ ನಾಮಾಂಕನವನ್ನು ಕೊಡು " ಎಂದು ಪ್ರತ್ಯುತ್ತರವನ್ನು ಹೇಳಿದನು.

ಬ್ರಹ್ಮದೇವನಿಂತೆಂದನು :—

೬. ಎಲೈ ದೇವಕುಮಾರನೇ! ನೀನು ರುದ್ರ ಎಂಬ ನಾಮಾಂಕನವುಳ್ಳವನಾಗಿದ್ದೀಯೆ. ಅಳಬೇಡ, ಧೈರ್ಯವನ್ನು ಹೊಂದು—ಹೀಗೆಂದು ಹೇಳಲ್ಪಟ್ಟ ಆ ಕುಮಾರನು ಮತ್ತೆ ಏಳು ಸಲ ಹೀಗೆಯೇ ಅತ್ತನು.

೭. ಎಲೈ ದ್ವಿಜೋತ್ತಮನೆ! ಸರ್ವೇಶ್ವರನಾದ ಬ್ರಹ್ಮನು ರುದ್ರದೇವನಿಗೆ ಬೇರೆಯಾದ ಏಳು ನಾಮಾಂಕನಗಳನ್ನು ಕೊಟ್ಟನು. ಹಾಗು ಒಟ್ಟು ಎಂಟು ಮೂರ್ತಿಗಳಿಗೆ ಸ್ಥಾನ-ಪತ್ನೀ-ಪುತ್ರರನ್ನು ಕೊಟ್ಟು ಅನುಗ್ರಹ ಮಾಡಿದನು.

ಭವಂ ಶರ್ವಂ ತಥೇಶಾನಂ ತಥಾ ಪಶುಪತಿಂ ಪ್ರಭುಃ ।
ಭೀಮಮುಗ್ರಂ ಮಹಾದೇವಮುವಾಚ ಸ ಪಿತಾಮಹಃ ॥೮॥

ಚಕ್ರೇ ನಾಮಾನ್ಯಥೈತಾನಿ ಸ್ಥಾನಾನ್ಯೇಷಾಂ ಚಕಾರ ಹ ॥೯॥

ಸೂರ್ಯೋ ಜಲಂ ಮಹೀ ವಹ್ನಿರ್ವಾಯುರಾಕಾಶಮೇವ ಚ ।
ದೀಕ್ಷಿತೋ ಬ್ರಾಹ್ಮಣಃ ಸೋಮ ಇತ್ಯೇತಾಸ್ತನವಃ ಕ್ರಮಾತ್ ॥೧೦॥

ಸುವರ್ಚಲಾ ತಥೈವೋಮಾ ವಿಕೇಶೀ ಚಾಪರಾ ಸ್ವಧಾ ।
ಸ್ವಾಹಾ ದಿಶಸ್ತಥಾ ದೀಕ್ಷಾ ರೋಹಿಣೀ ಚ ಯಥಾಕ್ರಮಮ್ ॥೧೧॥

ಸೂರ್ಯಾದೀನಾಂ ದ್ವಿಜಶ್ರೇಷ್ಠ ರುದ್ರಾದ್ಯೈರ್ನಾಮಭಿಃ ಸಹ ॥೧೨॥

---

೮. ಪ್ರಭುವಾದ ಪಿತಾಮಹದೇವನು ಆ ಕುಮಾರನನ್ನು ಭವ, ಶರ್ವ, ಈಶಾನ, ಪಶುಪತಿ, ಉಗ್ರ, ರುದ್ರ, ಭೀಮ ಮತ್ತು ಮಹಾದೇವ ಎಂಬ ನಾಮಾಂಕನಗಳನ್ನು ಕೊಟ್ಟು "ನೀನು ಈ ಎಂಟು ನಾಮಾಂಕನಗಳನ್ನು ಹೊಂದಿದ್ದೀಯೆ" ಎಂದು ಹೇಳಿದನು.

೯. ಬ್ರಹ್ಮನು ಹೀಗೆ ಕುಮಾರನಿಗೆ ನಾಮಕರಣವನ್ನು ಮಾಡಿ ಆಯಾಯ ನಾಮಾಂಕಿತಗಳಾದ ಮೂರ್ತಿಗಳಿಗೆ ವಿಧವಿಧವಾದ ಸ್ಥಾನಗಳನ್ನು ಕಲ್ಪಿಸಿದನು.

೧೦. ಸೂರ್ಯ, ಜಲ, ಭೂಮಿ, ಅಗ್ನಿ, ವಾಯು, ಆಕಾಶ, ದೀಕ್ಷಿತ ಬ್ರಾಹ್ಮಣ ಮತ್ತು ಚಂದ್ರ—ಇವು ರುದ್ರನಿಗೆ ಬ್ರಹ್ಮನು ಕೊಟ್ಟಿರುವ ಎಂಟು ಮೂರ್ತಿಗಳು. ಇವುಗಳಿಂದ ರುದ್ರನು ಅಷ್ಟಮೂರ್ತಿಯೆಂದು ಪ್ರಸಿದ್ಧನಾಗಿರುವನು.

೧೧. ಹಾಗು ರುದ್ರನಿಗೆ ಅಷ್ಟಪತ್ನಿಯರು ಬ್ರಹನಿಂದ ಕೊಡಲ್ಪಟ್ಟಿರುವರು. ಅವರು ಕ್ರಮವಾಗಿ ಸುವರ್ಚಲಾ, ಉಮಾ, ವಿಕೇಶೀ, ಸ್ವಧಾ, ಸ್ವಾಹಾ, ದಿಕ್, ದೀಕ್ಷಾ ಮತ್ತು ರೋಹಿಣೀ ಎಂದು ನಾಮಾಂಕಿತರಾಗಿದ್ದರು.

೧೨. ಎಲೈ ದ್ವಿಜೋತ್ತಮನೆ! ರುದ್ರ ಮುಂತಾದ ಎಂಟು ನಾಮಗಳಿಂದ ಅಂಕಿತರಾದ ಸೂರ್ಯ ಮುಂತಾದ ಎಂಟು ಮೂರ್ತಿಗಳಿಗೆ ಕ್ರಮವಾಗಿ ಸುವರ್ಚಲಾ ಮುಂತಾದವರು ಎಂಟುಮಂದಿ ಪತ್ನಿಯರಿದ್ದರು.

ಶನೈಶ್ಚರಸ್ತಥಾ ಶುಕ್ರೋ ಲೋಹಿತಾಙ್ಗೋ ಮನೋಜವಃ ।
ಸ್ಕನ್ದಃ ಸರ್ಗೋಽಥ ಸನ್ತಾನೋ ಬುಧಶ್ಚಾನುಕ್ರಮಾತ್ಸುತಾಃ ॥೧೩॥

ಏವಂಪ್ರಕಾರೋ ರುದ್ರೋಽಸೌ ಸತೀಂ ಭಾರ್ಯಾಮವಿನ್ದತ ।
ದಕ್ಷಕೋಪಾಚ್ಚ ತತ್ಯಾಜ ಸಾ ಸತೀ ಸ್ವಂ ಕಲೇವರಮ್ ॥೧೪॥

ಶರ್ವಸ್ಯೇರವಜ್ಞಾ ಯತ್ರಾಸ್ತೇ ಸ್ಥಾತವ್ಯಂ ನೈವ ಸೂರಿಭಿಃ ॥೧೫॥

ಏತೇ ಚ ಬ್ರಾಹ್ಮಣಾಃ ಸರ್ವೇ ಯೇ ದ್ವಿಷನ್ತೋ ಮಹೇಶ್ವರಮ್ ।
ಭವನ್ತು ತೇ ವೇದಬಾಹ್ಯಾಃ ಪಾಪೋಪಹತಚೇತಸಃ ॥೧೬॥

ಪಾಖಣ್ಡಾಚಾರನಿರತಾಃ ಸರ್ವೇ ನಿರಯಗಾಮಿನಃ ।
ಕಲೌ ಯುಗೇ ತು ಸಂಪ್ರಾಪ್ತೇ ದರಿದ್ರಾಃ ಶೂದ್ರಯಾಜಕಾಃ ॥೧೭॥

---

೧೩. ಮತ್ತು ಶನೈಶ್ಚರ, ಶುಕ್ರ, ಲೋಹಿತಾಂಗ, ಮನೋಜವ, ಸ್ಕಂದ, ಸರ್ಗ, ಸಂತಾನ ಮತ್ತು ಬುಧ—ಎಂಬ ನಾಮಾಂಕಿತರಾದ ಎಂಟು ಮಂದಿ ಕ್ರಮವಾಗಿ ಆಯಾಯ ರುದ್ರಮೂರ್ತಿಗಳ ಪುತ್ರರಾಗಿದ್ದರು.

೧೪. ಈ ಬಗೆಗಳನ್ನು ಹೊಂದಿರುವ ರುದ್ರದೇವನು ಸತೀದೇವಿಯೆಂಬ ದಕ್ಷಪುತ್ರಿಯನ್ನು ಪತ್ನಿಯನ್ನಾಗಿ ಹೊಂದಿದನು. ಆ ಸತೀದೇವಿಯು ದಕ್ಷಪ್ರಜಾ-ಪತಿಯ ಮೇಲಿನ ಕೋಪದಿಂದ ತನ್ನ ದೇಹವನ್ನು ತ್ಯಾಗಮಾಡಿದಳು.

೧೫. ಆಗ ಸತೀದೇವಿಯು "ಈಶ್ವರನ ನಿಂದೆಯು ಯಾವ ಸ್ಥಳದಲ್ಲಿ ನಡೆಯುವುದೋ ಅಲ್ಲಿ ಪ್ರಾಜ್ಞರು ಇರಬಾರದು" ಹೀಗೆಂದು ಹೇಳುತ್ತ ದೇಹತ್ಯಾಗಮಾಡಿದಳು.

೧೬. ಈಗ ಮಹೇಶ್ವರನನ್ನು ದ್ವೇಷಿಸುತ್ತಿದ್ದ ಈ ಎಲ್ಲ ಬ್ರಾಹ್ಮಣರು ವೇದಾಧ್ಯಯನಶೂನ್ಯರೂ ಮತ್ತು ಪಾಪಾಚಾರದಿಂದ ಮಲಿನವಾದ ಬುದ್ಧಿ-ಯುಳ್ಳವರೂ ಆಗಲಿ.

೧೭. ಮತ್ತು ಪಾಖಂಡಿಗಳ ಆಚಾರವನ್ನು ಪ್ರೀತಿಸುವವರೂ, ನರಕ-ಲೋಕಗಾಮಿಗಳೂ ಆಗುವರು. ಹಾಗು ಕಲಿಯುಗವು ಬಂದಾಗ ಮತ್ತೆ ಇವರು ದರಿದ್ರರೂ ಶೂದ್ರಪುರೋಹಿತರೂ ಆಗಿ ಜನಿಸುವರು. ಹೀಗೆಂದು ಸತೀದೇವಿಯು ಶಪಿಸಿದಳು.

ಹಿಮವದ್ದುಹಿತಾ ಸಾಭೂನ್ಮೇನಾಯಾಂ ದ್ವಿಜಸತ್ತಮ ।
ತಸ್ಯಾ ಭ್ರಾತಾ ತು ಮೈನಾಕಃ ಸಖಾಮ್ಭೋಧೇರನುತ್ತಮಃ ॥೧೮॥

ಉಪಯೇಮೇ ಪುನಶ್ಚೇಮಾಮನನ್ಯಾಂ ಭಗವಾನ್ಭವಃ ॥೧೯॥

ದೇವೌ ಧಾತಾವಿಧಾತಾರೌ ಭೃಗೋಃ ಖ್ಯಾತಿರಸೂಯತ ।
ಶ್ರಿಯಂ ಚ ದೇವದೇವಸ್ಯ ಪತ್ನೀ ನಾರಾಯಣಸ್ಯ ಯಾ ॥೨೦॥

ಆಯತಿರ್ನಿಯತಿಶ್ಚೈವ ಮೇರೋಃ ಕನ್ಯೇ ಮಹಾತ್ಮನಃ ।
ಭಾರ್ಯೇ ಧಾತಾವಿಧಾತ್ರೋಸ್ತೇ ತಯೋರ್ಜಾತೌ ಸುತಾವುಭೌ ॥೨೧॥

---

೧೮. ಎಲೈ ದ್ವಿಜೋತ್ತಮನೆ! ದೇಹವನ್ನು ತ್ಯಜಿಸಿದ ಸತೀದೇವಿಯು ಮೇನಾ ಎಂಬ ಧರ್ಮಪತ್ನಿಯಲ್ಲಿ ಹಿಮವಂತನಿಗೆ ಪುತ್ರಿಯಾಗಿ ಪುನರ್ಜನ್ಮವನ್ನು ಹೊಂದಿದಳು. ಆಗ ಅವಳಿಗೆ ಸಮುದ್ರರಾಜನಿಗೆ ಪರಮಮಿತ್ರನಾದ ಮೈನಾಕನು ಸಹೋದರನಾಗಿದ್ದನು.

೧೯. ಷಡ್ಗುಣೈಶ್ವರ್ಯಸಂಪನ್ನನೂ, ಜಗತ್ತಿನ ಉತ್ಪತ್ತಿಗೆ ಕಾರಣನೂ ಆದ ಈಶ್ವರನು ಅನನ್ಯನಾರಿಯಾದ ಆ ಪಾರ್ವತಿಯನ್ನು ಮತ್ತೆ ಮದುವೆಯಾದನು.

೨೦. ಭೃಗುಮುನಿಯ ಪತ್ನಿಯಾದ ಖ್ಯಾತಿ ಎಂಬುವಳು ಧಾತಾ-ವಿಧಾತಾ ಎಂಬ ಇಬ್ಬರು ದೇವಕುಮಾರರನ್ನು ಪುತ್ರರನ್ನಾಗಿ ಪ್ರಸವಿಸಿದಳು. ಮತ್ತು ಶ್ರೀಮನ್ನಾರಾಯಣನ ಪತ್ನಿಯಾದ ಲಕ್ಷ್ಮೀದೇವಿಯು ಖ್ಯಾತಿಯ ಪುತ್ರಿಯಾಗಿದ್ದಳು.

೨೧. ಮಹಾತ್ಮನಾದ ಮೇರುಗಿರಿಗೆ ಆಯತಿ ನಿಯತಿ ಎಂಬ ಇಬ್ಬರು ಪುತ್ರಿಯರಿದ್ದರು. ಧಾತಾ-ವಿಧಾತಾ ಎಂಬ ಭೃಗುಮುನಿಯ ಪುತ್ರರಿಗೆ ಆ ಇಬ್ಬರು ಕನ್ಯೆಯರು ಪತ್ನಿಯರಾದರು. ಅವರಲ್ಲಿ ಇಬ್ಬರು ಪುತ್ರರು ಜನಿಸಿದರು.

ಪ್ರಾಣಶ್ಚೈವ ಮೃಕಣ್ಡುಶ್ಚ ಪಿತಾ ಮಮ ಮಹಾಯಶಾಃ ।
ಮನಸ್ವಿನ್ಯಾಮಹಂ ತಸ್ಮಾತ್ಪುತ್ರೋ ವೇದಶಿರಾ ಮಮ ॥೨೨॥

ಧೂಮ್ರವತ್ಯಾಂ ಸಮುಭವತ್ಪ್ರಾಣಸ್ಯಾಪಿ ನಿಬೋಧ ಮೇ ।
ಪ್ರಾಣಸ್ಯ ದ್ಯುತಿಮಾನ್ಪುತ್ರ ಉತ್ಪನ್ನಸ್ತಸ್ಯ ಚಾತ್ಮಜಃ ॥೨೩॥

ಅಜರಾಶ್ಚ ತಯೋಃ ಪುತ್ರಾಃ ಪೌತ್ರಾಶ್ಚ ಬಹವೋಽಭವನ್ ।
ಪುತ್ರೀ ಮರೀಚೇಃ ಸಮ್ಭೂತಿಃ ಪೌರ್ಣಮಾಸಮಸೂಯತ ॥೨೪॥

ವಿರಜಾಃ ಪರ್ವತಶ್ಚೈವ ತಸ್ಯ ಪುತ್ರೌ ಮಹಾತ್ಮನಃ ।
ತಯೋಃ ಪುತ್ರಾಂಸ್ತು ವಕ್ಷ್ಯೇಽಹಂ ವಂಶಸಂಕೀರ್ತನೇ ದ್ವಿಜ ॥೨೫॥

---

೨೨. ಪ್ರಾಣ ಮತ್ತು ನನ್ನ ತಂದೆಯಾದ ಮೃಕಂಡು ಈ ಇಬ್ಬರು ಮಹಾಯಶಸ್ವಿಗಳಾದ ಪುತ್ರರು ಧಾತಾ-ವಿಧಾತಾ ಎಂಬುವರಿಂದ ಜನಿಸಿದರು. ಮೃಕಂಡುವಿಗೆ ಮನಸ್ವಿನಿ ಎಂಬುವಳಲ್ಲಿ ನಾನು ಪುತ್ರನಾಗಿ ಜನಿಸಿದೆನು. ನನಗೆ ವೇದಶಿರ ಎಂಬ ಪುತ್ರನು ಜನಿಸಿದನು.

೨೩. ನನ್ನ ಪತ್ನಿ ಧೂಮ್ರವತಿಯಲ್ಲಿ ವೇದಶಿರ ಎಂಬ ಪುತ್ರನು ಹುಟ್ಟಿದನು. ಪ್ರಾಣ ಎಂಬುವನ ಸಂತತಿಯನ್ನು ಹೇಳುವೆನು. ಕೇಳು. ಪ್ರಾಣ ಎಂಬುವನಿಗೆ ದ್ಯುತಿಮಾನ್ ಎಂಬ ಕುಮಾರನು ಜನಿಸಿದನು. ಹಾಗು ಅವನಿಗೆ ಅಜರ ಎಂಬ ಪುತ್ರನಿದ್ದನು.

೨೪. ದ್ಯುತಿಮಾನ್ ಮತ್ತು ಅಜರ ಎಂಬುವರ ಪುತ್ರ-ಪೌತ್ರರು ಅನೇಕ ಮಂದಿ ಇದ್ದರು. ಮರೀಚಿಮುನಿಯ ಪತ್ನಿಯಾದ ಸಂಭೂತಿ ಎಂಬುವಳು ಪೌರ್ಣಮಾಸ ಎಂಬ ಪುತ್ರನನ್ನು ಪ್ರಸವಿಸಿದಳು.

೨೫. ಆ ಮಹಾತ್ಮನಾದ ಪೌರ್ಣಮಾಸ ಎಂಬುವನಿಗೆ ವಿರಜ-ಪರ್ವತ ಎಂಬ ಇಬ್ಬರು ಪುತ್ರರು ಹುಟ್ಟಿದರು. ಎಲೈ ದ್ವಿಜನೆ! ಮುಂದೆ ವಂಶಕೀರ್ತನ ಪ್ರಸಂಗದಲ್ಲಿ ವಿರಜ-ಪರ್ವತ ಎಂಬುವರ ಸಂತತಿಯನ್ನು ವರ್ಣಿಸುವೆನು.

ಸ್ಮೃತಿಶ್ಚಾಙ್ಗಿರಸಃ ಪತ್ನೀ ಪ್ರಸೂತಾಃ ಕನ್ಯಕಾಸ್ತಯಾ ।
ಸಿನೀವಾಲೀ ಕುಹೂಶ್ಚೈವ ರಾಕಾ ಚಾನುಮತಿಸ್ತಥಾ ॥೨೬॥

ಅನಸೂಯಾ ತಥೈವಾತ್ರೇರ್ಜಜ್ಞೇ ಪುತ್ರಾನಕಲ್ಮಷಾನ್ ।
ಸೋಮಂ ದುರ್ವಾಸಸಂ ಚೈವ ದತ್ತಾತ್ರೇಯಂ ಚ ಯೋಗಿನಮ್ ॥೨೭॥

ಪ್ರೀತ್ಯಾಂ ಪುಲಸ್ತ್ಯಭಾರ್ಯಾಯಾಂ ದತ್ತೋಽನ್ಯಸ್ತತ್ಸುತೋಽಭವತ್ ।
ಪೂರ್ವಜನ್ಮನಿ ಸೋಽಗಸ್ತ್ಯಃ ಸ್ಮೃತಃ ಸ್ವಾಯಮ್ಭುವೇಽನ್ತರೇ ॥೨೮॥

ಕರ್ದಮಶ್ಚಾರ್ವವೀರಶ್ಚ ಸಹಿಷ್ಣುಶ್ಚ ಸುತತ್ರಯಮ್ ।
ಕ್ಷಮಾ ತು ಸುಷುವೇ ಭಾರ್ಯಾ ಪುಲಹಸ್ಯ ಪ್ರಜಾಪತೇಃ ॥೨೯॥

ಕ್ರತೋಸ್ತು ಸನ್ನತಿರ್ಭಾರ್ಯಾ ವಾಲಖಿಲ್ಯಾನಸೂಯತ ।
ಷಷ್ಟಿರ್ಯಾನಿ ಸಹಸ್ರಾಣಿ ಋಷೀಣಾಮೂರ್ಧ್ವರೇತಸಾಮ್ ॥೩೦॥

---

೨೬. ಅಂಗಿರ ಮುನಿಯ ಪತ್ನಿಯಾದ ಸ್ಮೃತಿ ಎಂಬುವಳಿಂದ ಅನೇಕ ಕನ್ಯೆಯರು ಪ್ರಸವಿಸಲ್ಪಟ್ಟರು. ಆ ಕನ್ಯೆಯರು ಸೀನೀವಾಲೀ, ಕುಹೂ, ರಾಕಾ, ಮತ್ತು ಅನುಮತಿ ಎಂಬ ನಾಮಾಂಕನಗಳನ್ನು ಕ್ರಮವಾಗಿ ಹೊಂದಿದ್ದರು.

೨೭. ಅತ್ರಿಮುನಿಯ ಪತ್ನಿಯಾದ ಅನುಸೂಯೆಯು ಚಂದ್ರ, ದುರ್ವಾಸಮುನಿ ಮತ್ತು ದತ್ತಾತ್ರೇಯಯೋಗಿ ಎಂಬ ನಿರ್ದುಷ್ಟರೂ ಪಾವನರೂ ಆದ ಮೂರು ಮಂದಿ ಪುತ್ರರನ್ನು ಹೊಂದಿದಳು.

೨೮. ಪುಲಸ್ತ್ಯಮುನಿಯ ಪತ್ನಿಯಾದ ಪ್ರೀತಿದೇವಿಯಲ್ಲಿ ಮತ್ತೊಬ್ಬ ದತ್ತಮುನಿಯು ಜನಿಸಿದನು. ಆ ದತ್ತಮುನಿಯು ಸ್ವಾಯಂಭುವಮನ್ವಂತರದಲ್ಲಿ ಪೂರ್ವಜನ್ಮದಲ್ಲಿ ಅಗಸ್ತ್ಯಮುನಿಯಾಗಿದ್ದನೆಂದು ಸ್ಮರಿಸಲ್ಪಟ್ಟಿರುವನು.

೨೯. ಪುಲಹ ಪ್ರಜಾಪತಿಯ ಭಾರ್ಯೆಯಾದ ಕ್ಷಮಾ ಎಂಬುವಳು ಕರ್ದಮ-ಅರ್ವವೀರ ಮತ್ತು ಸಹಿಷ್ಣು ಎಂದು ನಾಮಾಂಕಿತರಾದ ಮೂರು ಮಂದಿ ಪುತ್ರರಿಗೆ ಜನ್ಮವನ್ನಿತ್ತಳು.

೩೦. ಕ್ರತುಪ್ರಜಾಪತಿಯ ಸನ್ನತಿ ಎಂಬ ಭಾರ್ಯೆಯು ವಾಲಖಿಲ್ಯ ಮುನಿಗಳನ್ನು ಪುತ್ರರನ್ನಾಗಿ ಹೊಂದಿದಳು. ವಾಲಖಿಲ್ಯರೆಂದು ಕರೆಯಲ್ಪಡುವ ಅರವತ್ತುಸಹಸ್ರ ಮಂದಿ ಪುತ್ರರು ಊರ್ಧ್ವರೇತರಾಗಿದ್ದರು.

ಊರ್ಜಾಯಾಂ ತು ವಸಿಷ್ಠಸ್ಯ ಸಪ್ತಾಜಾಯನ್ತ ವೈ ಸುತಾಃ ।
ರಜೋ ಗಾತ್ರೋರ್ಧ್ವಬಾಹುಶ್ಚ ಸಬಲಶ್ಚಾನಘಸ್ತಥಾ ॥೩೧॥

ಸುತಪಾಃ ಶುಕ್ಲ ಇತ್ಯೇತೇ ಸರ್ವೇ ಸಪ್ತರ್ಷಯಃ ಸ್ಮೃತಾಃ ॥೩೨॥

ಯೋಽಸಾವಗ್ನಿರಭಿಮಾನೀ ಬ್ರಹ್ಮಣಸ್ತನಯೋಽಗ್ರಜಃ ।
ತಸ್ಮಾತ್ಸ್ವಾಹಾ ಸುತಾಂಲ್ಲೇಭೇ ತ್ರೀನುದಾರೌಜಸೋ ದ್ವಿಜ ॥೩೩॥

ಪಾವಕಂ ಪವನಂ ಚೈವ ಶುಚಿಂ ಚಾಪಿ ಜಲಾಶಿನಮ್ ।
ತೇಷಾಂ ತು ಸನ್ತತಾವನ್ಯೇ ಚತ್ವಾರಿಂಶಚ್ಚ ಪಞ್ಚ ಚ ॥೩೪॥

ಕಥ್ಯನ್ತೇ ಬಹುಶಶ್ಚೈತೇ ಪಿತಾಪುತ್ರತ್ರಯಂ ಚ ಯತ್ ।
ಏವಮೇಕೋನಪಞ್ಚಾಶದ್ವರ್ಜಯಾಃ ಪರಿಕೀರ್ತಿತಾಃ ॥೩೫॥

---

೩೧. ವಸಿಷ್ಠಮುನಿಯ ಪತ್ನಿಯಾದ ಊರ್ಜಾ ಎಂಬುವಳಲ್ಲಿ ಏಳು ಮಂದಿ ಪುತ್ರರು ಜನಿಸಿದರು. ಅವರಲ್ಲಿ ಐದು ಮಂದಿಗೆ ರಜ, ಗಾತ್ರ, ಊರ್ಧ್ವ-ಬಾಹು, ಸಬಲ, ಅನಘ ಎಂದು ಎಂದು ನಾಮಾಂಕನಗಳಿದ್ದುವು.

೩೨. ಮತ್ತು ಉಳಿದ ಇಬ್ಬರು ಕುಮಾರರು ಸುತಪ, ಶುಕ್ಲ ಎಂದು ನಾಮಾಂಕಿತರಾಗಿದ್ದರು. ರಜ ಮುಂತಾದವರು ಏಳು ಮಂದಿ ಸಪ್ತರ್ಷಿಗಳಾ-ಗಿದ್ದರೆಂದು ಸ್ಮರಿಸಲ್ಪಟ್ಟಿರುವರು.

೩೩. ದ್ವಿಜನೆ ! ಬ್ರಹ್ಮದೇವನ ಅಗ್ರಜ ಪುತ್ರನೂ ಅಗ್ನ್ಯಭಿಮಾನಿಯೂ ಆದ ಅಗ್ನಿಕುಮಾರನಿಂದ ಅವನ ಪತ್ನಿಯಾದ ಸ್ವಾಹಾದೇವಿಯಲ್ಲಿ ಉದಾರವಾದ ಮಹಿಮೆಯುಳ್ಳ ಮೂರುಮಂದಿ ಪುತ್ರರು ಹುಟ್ಟಿದರು.

೩೪. ಪಾವಕ, ಪವನ ಮತ್ತು ಜಲಶೋಷಕನಾದ ಶುಚಿ ಎಂಬುವರು ಅಗ್ನಿದೇವನ ಮೂರು ಮಂದಿ ಪುತ್ರರು. ಅವರ ಸಂತತಿಯಲ್ಲಿ ಇನ್ನೂ ನಲವತ್ತೈದು ಮಂದಿ ಅಗ್ನಿಮೂರ್ತಿಗಳು ಜನಿಸಿದರು.

೩೫. ಹೀಗೆ ಹುಟ್ಟಿದ ನಲವತ್ತೈದು ಮಂದಿ ಪುತ್ರರು, ಪಾವಕ ಮುಂತಾದ ಮೂರು ಮಂದಿ ಮತ್ತು ಮೂಲಪುರುಷನಾದ ಅಗ್ನಿ--ಇವರು ಪುರಾಣಗಳಲ್ಲಿ ವರ್ಣಿಸಲ್ಪಟ್ಟಿರುವರು. ಒಟ್ಟು ಸೇರಿ ನಲತ್ತೊಂಭತ್ತು ಮಂದಿ ಅಗ್ನಿಮೂರ್ತಿಗಳು ಅಜೇಯರೆಂದು ಕೀರ್ತಿಸಲ್ಪಟ್ಟಿರುವರು.

ಪಿತರೋ ಬ್ರಹ್ಮಣಾ ಸೃಷ್ಟಾ ಯೇ ವ್ಯಾಖ್ಯಾತಾ ಮಯಾ ತವ ।
ಅಗ್ನಿಷ್ವಾತ್ತಾ ಬರ್ಹಿಷದೋಽನಗ್ನಯಃ ಸಾಗ್ನಯಶ್ಚ ಯೇ ॥೩೬॥

ತೇಭ್ಯಃ ಸ್ವಧಾ ಸುತೇ ಜಜ್ಞೇ ಮೇನಾಂ ವೈ ಧಾರಿಣೀಂ ತಥಾ ।
ತೇ ಉಭೇ ಬ್ರಹ್ಮವಾದಿನ್ಯೌ ಯೋಗಿನ್ಯೌ ಚಾಪ್ಯುಭೇ ದ್ವಿಜ ॥೩೭॥

ಇತಿ ಶ್ರೀಮಾರ್ಕಣ್ಡೇಯ ಮಹಾಪುರಾಣೇ ರುದ್ರಸರ್ಗಾಭಿಧಾನಂ
ನಾಮ ಏಕೋನಪಞ್ಚಾಶತ್ತಮೋಽಧ್ಯಾಯಃ

---

೩೬. ಬ್ರಹ್ಮದೇವನಿಂದ ಉಂಟಾದ ಸೃಷ್ಟಿಯಲ್ಲಿ ಹುಟ್ಟಿದ ಯಾವ ಪಿತೃದೇವತೆಗಳು ನನ್ನಿಂದ ನಿನಗೆ ವರ್ಣಿಸಲ್ಪಟ್ಟಿರುವರೋ ಅವರು ಅನಗ್ನಿ, ಸಾಗ್ನಿ ಎಂದೂ ಅಗ್ನಿಷ್ವಾತ್ತ, ಬರ್ಹಿಷದ ಎಂದೂ ಗುಂಪುಗಳಾಗಿ ವಿಭಾಗವನ್ನು ಹೊಂದಿರುವರು.

೩೭. ದ್ವಿಜೋತ್ತಮನೆ ! ಪಿತೃದೇವತೆಗಳ ಪತ್ನಿಯಾದ ಸ್ವಧಾದೇವಿಯು ಮೇನಾ, ಧಾರಿಣೀ ಎಂಬ ಇಬ್ಬರು ಕನ್ಯೆಯರನ್ನು ಪ್ರಸವಿಸಿದಳು. ಆ ಇಬ್ಬರು ಕನ್ಯೆಯರು ಯೋಗಿನಿಯರೂ ಮತ್ತು ಬ್ರಹ್ಮವಾದಿನಿಯರೂ ಆಗಿದ್ದರು.

ಮಾರ್ಕಂಡೇಯ ಮಹಾಪುರಾಣದಲ್ಲಿ ನಲವತ್ತೊಂಭತ್ತನೆಯ ಅಧ್ಯಾಯವು
ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಪಞ್ಚಾಶತ್ತಮೋಽಧ್ಯಾಯಃ

(ಸ್ವಾಯಮ್ಭುವಮನ್ವನ್ತರಕಥನಮ್)

ಕ್ರೌಷ್ಟುಕಿರುವಾಚ :—

ಸ್ವಾಯಮ್ಭುವಂ ತ್ವಯಾಖ್ಯಾತಮೇತನ್ಮನ್ವನ್ತರಂ ಚ ಯತ್ ।
ತದಹಂ ಭಗವನ್ಸಮ್ಯಕ್ ಶ್ರೋತುಮಿಚ್ಛಾಮಿ ಕಥ್ಯತಾಮ್ ॥೧॥

ಮನ್ವನ್ತರಪ್ರಮಾಣಂ ಚ ದೇವಾ ದೇವರ್ಷಯಸ್ತಥಾ ।
ಯೇ ಚ ಕ್ಷಿತೀಶಾ ಭಗವನ್ದೇವೇನ್ದ್ರಶ್ಚೈವ ಯಸ್ತಥಾ ॥೨॥

ಐವತ್ತನೆಯ ಅಧ್ಯಾಯ

ಕ್ರೌಷ್ಟುಕಿಯು ಹೀಗೆ ಹೇಳಿದನು :—

೧. ಪೂಜ್ಯನಾದ ಮಾರ್ಕಂಡೇಯ ಮುನಿಯೇ ! ಈಗ ನಡೆಯುತ್ತಿರುವ ಸ್ವಾಯಂಭುವ ಮನ್ವಂತರವು ನಿನ್ನಿಂದ ಹೇಳಲ್ಪಟ್ಟಿದೆಯಷ್ಟೆ; ಅದನ್ನೇ ನಾನು ವಿಸ್ತಾರವಾಗಿ ಕೇಳಲು ಇಷ್ಟವುಳ್ಳವನಾಗಿರುವೆನು. ಅದನ್ನು ಹೇಳಬೇಕು.

೨. ಪೂಜ್ಯಮಹರ್ಷಿಯೆ ! ಮನ್ವಂತರದ ಕಾಲಪರಿಮಾಣವು, ಆ ಮನ್ವಂತರದಲ್ಲಿದ್ದ ದೇವೇಂದ್ರ, ಇತರ ದೇವತೆಗಳು, ದೇವರ್ಷಿಗಳು ಮತ್ತು ರಾಜ್ಯವಾಳಿದ ರಾಜರು—ಇವರನ್ನೆಲ್ಲ ನಾನು ಕೇಳಬೇಕೆಂದಿರುವೆನು.

ಮಾರ್ಕಣ್ಡೇಯ ಉವಾಚ :—

ಮಾನುಷೇಣ ಪ್ರಮಾಣೇನ ಶೃಣು ಮನ್ವನ್ತರಂ ಚ ಮೇ ||೩||

ತ್ರಿಂಶತ್ಕೋಟ್ಯಸ್ತು ಸಂಖ್ಯಾತಾಃ ಸಹಸ್ರಾಣಿ ಚ ವಿಂಶತಿಃ ।
ಸಪ್ತಷಷ್ಟಿಸ್ತಥಾನ್ಯಾನಿ ನಿಯುತಾನಿ ಚ ಸಙ್ಖ್ಯಯಾ ||೪||

ಮನ್ವನ್ತರಪ್ರಮಾಣಂ ಚ ಇತ್ಯೇತತ್ಸಾಧಿಕಂ ವಿನಾ ।
ಅಷ್ಟೌ ಶತಸಹಸ್ರಾಣಿ ದಿವ್ಯಯಾ ಸಙ್ಖ್ಯಯಾ ಸ್ಮೃತಮ್ ||೫||

ದ್ವಿಪಞ್ಚಾಶತ್ತಥಾನ್ಯಾನಿ ಸಹಸ್ರಾಣ್ಯಧಿಕಾನಿ ಚ ।
ಸ್ವಾಯಮ್ಭುವೋ ಮನುಃ ಪೂರ್ವಂ ಮನುಃ ಸ್ವಾರೋಚಿಷಸ್ತಥಾ ||೬||

ಮಾರ್ಕಂಡೇಯಮುನಿಯು ಹೇಳಿದನು :—

೩. ದೇವಮಾನದಿಂದ ಚತುರ್ಯುಗಗಳ ಎಪ್ಪತ್ತೊಂದು ಪರ್ಯಾಯವು ಮನ್ವಂತರವೆಂದು ಗಣಿಸಲ್ಪಟ್ಟಿದೆ. ಈಗ ಮಾನುಷಪ್ರಮಾಣದಿಂದ ಮನ್ವಂತರದ ಗಣನೆಯನ್ನು ನನ್ನಿಂದ ಕೇಳು.

೪. ಮಾನುಷಪ್ರಮಾಣದಿಂದ ಮನ್ವಂತರದ ಗಣನೆಯಲ್ಲಿ ಮೂವತ್ತು-ಕೋಟಿ ಎಪ್ಪತ್ತಾರು ಲಕ್ಷ ಇಪ್ಪತ್ತು ಸಹಸ್ರ ಸಂವತ್ಸರಗಳು ಸೇರಿಕೊಂಡಿರುವುವು.

೫. ಅಧಿಕವಾದ ಯುಗಾವೃತ್ತಿಯ ಗಣನೆಯನ್ನು ಬಿಟ್ಟು ಉಳಿದ ವರ್ಷಗಳ ಗಣನೆಯು ಈ ರೀತಿಯಾಗಿರುವುದು. ಇದೇ ಮನ್ವಂತರದ ಪ್ರಮಾಣ-ವನ್ನು ದೇವಮಾನದಿಂದ ಗಣಿಸಿದರೆ ಎಂಟುನೂರು ಸಹಸ್ರ ವರ್ಷಗಳ ಪರಿಮಾಣ-ವೆಂದು ಹೇಳಲ್ಪಟ್ಟಿದೆ.

೬. ಹಿಂದೆ ಹೇಳಿರುವ ಎಂಟುನೂರು ಸಹಸ್ರ ವರ್ಷಗಳ ಜೊತೆಗೆ ಹೆಚ್ಚಾಗಿ ಐವತ್ತೆರಡು ಸಹಸ್ರ ಸಂಖ್ಯೆಯ ವರ್ಷಗಳನ್ನೂ ಸೇರಿಸಿಕೊಳ್ಳಬೇಕು. ಒಟ್ಟಾಗಿ ಲಭಿಸುವ ಗಣನೆಯನ್ನು ದೇವಮಾನದಿಂದ ಮನ್ವಂತರ ಪರಿಮಾಣ-ವೆಂದು ಅರಿಯಬೇಕು.

ಔತ್ತಮಸ್ತಾಮಸಶ್ಚೈವ ರೈವತಶ್ಚಾಕ್ಷುಷಸ್ತಥಾ ।
ಷಡೇತೇ ಮನವೋಽತೀತಾಸ್ತಥಾ ವೈವಸ್ವತೋಽಧುನಾ ॥೭॥

ಸಾವರ್ಣಾಃ ಪಞ್ಚ ರೌಚ್ಯಾಶ್ಚ ಭೌತ್ಯಾಶ್ಚಾಗಾಮಿನಸ್ತ್ವಮೀ ।
ಏತೇಷಾಂ ವಿಸ್ತರಂ ಭೂಯೋ ಮನ್ವನ್ತರಪರಿಗ್ರಹೇ ॥೮॥

ವಕ್ಷ್ಯೇ ದೇವಾನೃಷೀಂಶ್ಚೈವ ದೇವೇನ್ದ್ರಾಃ ಪಿತರಶ್ಚ ಯೇ ।
ಉತ್ಪತ್ತಿಸಂಗ್ರಹಂ ಬ್ರಹ್ಮನ್ ಶ್ರೂಯತಾಮಸ್ಯ ಸನ್ತತಿಃ ॥೯॥

ಯಚ್ಚ ತೇಷಾಮಭೂತ್ಕ್ಷೇತ್ರಂ ತತ್ಪುತ್ರಾಣಾಂ ಮಹಾತ್ಮನಾಮ್ ।
ಮನೋಃ ಸ್ವಾಯಮ್ಭುವಸ್ಯಾಸನ್ ದಶ ಪುತ್ರಾಸ್ತು ತತ್ಸಮಾಃ ॥೧೦॥

---

೭. ಹೀಗೆ ಇದುವರೆಗೆ ಕಳೆದಿರುವ ಅನೇಕ ಮನ್ವಂತರಗಳಲ್ಲಿ ಸ್ವಾಯಂಭುವಮನು, ಸ್ವಾರೋಚಿಷ, ಔತ್ತಮ, ತಾಮಸ, ರೈವತ ಮತ್ತು ಚಾಕ್ಷುಷ ಎಂಬ ಆರು ಮಂದಿ ಮನುಗಳು ಮನ್ವಂತರಾಧಿಪತಿಗಳಾಗಿದ್ದರು. ಈಗ ಏಳನೆಯ ವೈವಸ್ವತಮನ್ವಂತರವು ನಡೆಯುತ್ತಿದೆ.

೮. ಮುಂದೆ ಐದು ಮಂದಿ ಸಾವರ್ಣಮನುಗಳು, ರೌಚ್ಯ, ಭೌತ್ಯ ಎಂಬುವರು ಸೇರಿ ಏಳುಮಂದಿ ಮುಂದಿನ ಮನ್ವಂತರಗಳಿಗೆ ಅಧಿಪತಿಗಳಾಗುವರು. ಇವರೆಲ್ಲರ ಚರಿತ್ರೆಯನ್ನು ಮುಂದೆ ಮನ್ವಂತರ ವರ್ಣನೆಯನ್ನು ಮಾಡುವಾಗ ವಿಸ್ತಾರವಾಗಿ ಕೇಳು.

೯. ಮತ್ತು ಪ್ರತಿಯೊಂದು ಮನ್ವಂತರದಲ್ಲಿರುವ ದೇವೇಂದ್ರ, ದೇವತೆಗಳು, ಋಷಿಗಳು, ಪಿತೃಗಳು—ಇವರನ್ನು ವರ್ಣಿಸುವೆನು. ಅವರ ಉತ್ಪತ್ತಿಯನ್ನು ಸಂಗ್ರಹವಾಗಿ ಹೇಳುವೆನು. ಆ ಮನುವಿನ ಸಂತತಿಯನ್ನೂ ನನ್ನಿಂದ ಕೇಳು.

೧೦. ಹಾಗು ಆಯಾಯ ಮನುಗಳ ಆಧಿಪತ್ಯದ ಕ್ಷೇತ್ರ, ಮಹಾತ್ಮರಾದ ಮನುಪುತ್ರರು ಆಳಿದ ಕ್ಷೇತ್ರವಿಭಾಗ—ಇವುಗಳನ್ನೂ ಹೇಳುವೆನು. ಮೊದಲನೆಯವನಾದ ಸ್ವಾಯಂಭುವ ಮನುವಿಗೆ ಅವನಂತೆ ಮಹಾತ್ಮರಾದ ಹತ್ತು ಮಂದಿ ಪುತ್ರರು ಇದ್ದರು.

ಯೈರಿಯಂ ಪೃಥಿವೀ ಸರ್ವಾ ಸಪ್ತದ್ವೀಪಾ ಸಪರ್ವತಾ ।
ಸಸಮುದ್ರಾಕರವತೀ ಪ್ರತಿವರ್ಷಂ ನಿವೇಶಿತಾ ॥೧೧॥

ಸ್ವಾಯಮ್ಭುವೇಽನ್ತರೇ ಪೂರ್ವಮಾದ್ಯೇ ತ್ರೇತಾಯುಗೇ ತಥಾ ।
ಪ್ರಿಯವ್ರತಸ್ಯ ಪುತ್ರೈಸ್ತೈಃ ಪೌತ್ರೈಃ ಸ್ವಾಯಮ್ಭುವಸ್ಯ ಚ ॥೧೨॥

ಪ್ರಿಯವ್ರತಾತ್ಪ್ರಜಾವತ್ಯಾಂ ವೀರಾತ್ಕನ್ಯಾ ವ್ಯಜಾಯತ ।
ಕನ್ಯಾ ಸಾ ತು ಮಹಾಭಾಗಾ ಕರ್ದಮಸ್ಯ ಪ್ರಜಾಪತೇಃ ॥೧೩॥

ಕನ್ಯೇ ದ್ವೇ ದಶ ಪುತ್ರಾಂಶ್ಚ ಸಮ್ರಾಟ್ಕುಕ್ಷೀ ಚ ತೇ ಉಭೇ ।
ತಯೋರ್ವೈ ಭ್ರಾತರಃ ಶೂರಾ ಪ್ರಜಾಪತಿಸಮಾ ದಶ ॥೧೪॥

---

೧೧. ಆ ಸ್ವಾಯಂಭುವ ಮನುವಿನ ಕುಮಾರರಿಂದ ಏಳು ದ್ವೀಪಗಳಿಂದಲೂ, ಅನೇಕ ಗಿರಿ, ಸಮುದ್ರ-ಗಣಿಗಳಿಂದಲೂ ತುಂಬಿದ ಈ ಭೂಮಿಯು ವರ್ಷಖಂಡಗಳಾಗಿ ವಿಭಾಗಹೊಂದಿ ಇರಿಸಲ್ಪಟ್ಟಿತು.

೧೨. ಸ್ವಾಯಂಭುವ ಮನ್ವಂತರದಲ್ಲಿ ನಡೆದಿರುವ ಯುಗಪರ್ಯಾಯಗಳಲ್ಲಿ ಮೊದಲಿನ ತ್ರೇತಾಯುಗದಲ್ಲಿ ಸ್ವಾಯಂಭುವ ಮನುವಿನ ಮೊಮ್ಮಕ್ಕಳೂ ಮತ್ತು ಪ್ರಿಯವ್ರತನ ಪುತ್ರರೂ ಆದ ಕುಮಾರರಿಂದ ಭೂಮಿಯು ವಿಂಗಡಿಸಲ್ಪಟ್ಟಿತು.

೧೩. ವೀರಪುರುಷನಾದ ಪ್ರಿಯವ್ರತನಿಂದ ಪ್ರಜಾವತೀ ಎಂಬ ಪತ್ನಿಯು ಸಂತತಿಯನ್ನು ಪ್ರಸವಿಸಿದಳು. ಪ್ರಜಾವತೀ ಎಂಬಾಕೆಯು ಕರ್ದಮ ಪ್ರಜಾವತಿಯ ಪುತ್ರಿಯಾಗಿದ್ದಳು.

೧೪. ಪ್ರಿಯವ್ರತನಿಂದ ಆಕೆಯಲ್ಲಿ ಸಮ್ರಾಟ್, ಕುಕ್ಷಿ ಎಂಬ ಇಬ್ಬರು ಕನ್ಯೆಯರು ಜನಿಸಿದರು. ಮತ್ತು ಆ ಕನ್ಯೆಯರಿಗೆ ಶೂರರೂ ಪ್ರಜಾಪತಿಗೆ ಸಮಾನರೂ ಆದ ಹತ್ತುಮಂದಿ ಸಹೋದರರು ಜನಿಸಿದರು.

ಆಗ್ನೀಧ್ರೋ ಮೇಧಾತಿಥಿಶ್ಚ ವಪುಷ್ಮಾಂಶ್ಚ ತಥಾಪರಃ ।
ಜ್ಯೋತಿಷ್ಮಾನ್ದ್ಯುತಿಮಾನ್ಭವ್ಯಃ ಸವನಃ ಸಪ್ತ ಏವ ತೇ ॥೧೫॥

ಮೇಧಾಗ್ನಿಬಾಹುಮಿತ್ರಾಸ್ತು ತ್ರಯೋ ಯೋಗಪರಾಯಣಾಃ ।
ಜಾತಿಸ್ಮರಾ ಮಹಾಭಾಗಾ ನ ರಾಜ್ಯಾಯ ಮನೋ ದಧುಃ ॥೧೬॥

ಪ್ರಿಯವ್ರತೋಽಭ್ಯಷಿಞ್ಚತ್ತಾನ್ ಸಪ್ತ ಸಪ್ತಸು ಪಾರ್ಥಿವಾನ್ ।
ದ್ವೀಪೇಷು ತೇನ ಧರ್ಮೇಣ ದ್ವೀಪಾಂಶ್ಚೈವ ನಿಬೋಧ ಮೇ ॥೧೭॥

ಜಮ್ಬುದ್ವೀಪೇ ತಥಾಗ್ನೀಧ್ರಂ ರಾಜಾನಂ ಕೃತವಾನ್ಪಿತಾ ।
ಪ್ಲಕ್ಷದ್ವೀಪೇಶ್ವರಶ್ಚಾಪಿ ತೇನ ಮೇಧಾತಿಥಿಃ ಕೃತಃ ॥೧೮॥

---

೧೫. ಪ್ರಜಾಪತಿಯಲ್ಲಿ ಜನಿಸಿದ ಹತ್ತು ಮಂದಿ ಕುಮಾರರಲ್ಲಿ ಏಳು ಮಂದಿ ಕುಮಾರರು ಆಗ್ನೀಧ್ರ, ಮೇಧಾತಿಥಿ, ವಪುಷ್ಮಾನ್, ಜ್ಯೋತಿಷ್ಮಾನ್, ದ್ಯುತಿಮಾನ್, ಭವ್ಯ ಮತ್ತು ಸವನ ಎಂದು ನಾಮಾಂಕಿತರಾದ್ದರು.

೧೬. ಮತ್ತು ಮೇಧ, ಅಗ್ನಿಬಾಹು, ಮಿತ್ರ—ಎಂಬುವರು ಕಡೆಯ ಮೂರು ಮಂದಿ ಪುತ್ರರಾಗಿದ್ದರು. ಈ ಮೂರು ಮಂದಿಯು ಯೋಗಾಭ್ಯಾಸ-ಪರರೂ, ಜನ್ಮಾಂತರಸ್ಮರಣವುಳ್ಳವರೂ ಮತ್ತು ಮಹಾನುಭಾವರೂ ಆಗಿದ್ದರು. ಅವರು ರಾಜ್ಯಭೋಗವನ್ನು ಆಶಿಸಲಿಲ್ಲ.

೧೭. ಹೀಗಿರಲು ಪ್ರಿಯವ್ರತನು ಮೊದಲಿನ ಏಳು ಮಂದಿ ಕುಮಾರರಿಗೆ ಏಳು ದ್ವೀಪಗಳಲ್ಲಿ ರಾಜರಾಗಿರುವಂತೆ ಧರ್ಮದಿಂದ ರಾಜ್ಯಪಟ್ಟಾಭಿಷೇಕವನ್ನು ಮಾಡಿದನು. ಅವರು ಆಳಿದ ದ್ವೀಪಗಳನ್ನು ಹೇಳುವೆನು. ಕೇಳು.

೧೮. ತಂದೆಯಾದ ಪ್ರಿಯವ್ರತನು ಜಂಬುದ್ವೀಪದಲ್ಲಿ ಆಗ್ನೀಧ್ರನನ್ನು ರಾಜನನ್ನಾಗಿ ಪಟ್ಟಗಟ್ಟಿದನು. ಮತ್ತು ಪ್ಲಕ್ಷದ್ವೀಪಕ್ಕೆ ಮೇಧಾತಿಥಿಯೆಂಬುವನು ರಾಜನಾಗಿ ಮಾಡಲ್ಪಟ್ಟನು.

ಶಾಲ್ಮಲೇಸ್ತು ವಪುಷ್ಮನ್ತಂ ಜ್ಯೋತಿಷ್ಮನ್ತಂ ಕುಶಾಹ್ವಯೇ ।
ಕ್ರೌಞ್ಚದ್ವೀಪೇ ದ್ಯುತಿಮನ್ತಂ ಭವ್ಯಂ ಶಾಕಾಹ್ವಯೇಶ್ವರಮ್ ॥೧೯॥

ಪುಷ್ಕರಾಧಿಪತಿಂ ಚಾಪಿ ಸವನಂ ಕೃತವಾನ್ ಸುತಮ್ ।
ಮಹಾವೀತೋ ಧಾತಕಿಶ್ಚ ಪುಷ್ಕರಾಧಿಪತೇಃ ಸುತೌ ॥೨೦॥

ದ್ವಿಧಾಕೃತ್ವಾ ತಯೋರ್ವರ್ಷಂ ಪುಷ್ಕರೇ ಸನ್ನ್ಯವೇಶಯತ್ ।
ಭವ್ಯಸ್ಯ ಪುತ್ರಾಃ ಸಪ್ತಾಸನ್ನಾಮತಸ್ತಾನ್ನಿಬೋಧ ಮೇ ॥೨೧॥

ಜಲದಶ್ಚ ಕುಮಾರಶ್ಚ ಸುಕುಮಾರೋ ಮಣೀವಕಃ ।
ಕುಶೋತ್ತರೋಽಥ ಮೇಧಾವೀ ಸಪ್ತಮಸ್ತು ಮಹಾದ್ರುಮಃ ॥೨೨॥

---

೧೯. ಶಾಲ್ಮಲಿದ್ವೀಪದ ರಾಜನು ವಪುಷ್ಮಂತನಾದನು. ಕುಶಾಹ್ವಯಕ್ಕೆ ಜ್ಯೋತಿಷ್ಮಂತನು ದೊರೆಯಾದನು. ಕ್ರೌಂಚದ್ವೀಪಾಧಿಪತಿಯು ದ್ಯುತಿಮಂತನಾದನು. ಮತ್ತು ಶಾಕದ್ವೀಪಕ್ಕೆ ಭವ್ಯನೆಂಬುವನು ರಾಜನಾಗಿ ಆಳಿದನು.

೨೦. ಹಾಗು ಪ್ರಿಯವ್ರತನು ಸವನಕುಮಾರನನ್ನು ಪುಷ್ಕರದ್ವೀಪಾಧಿಪತಿಯನ್ನಾಗಿ ನಿಯಮಿಸಿದನು. ಆ ಪುಷ್ಕರಾಧಿಪತಿಯಾದ ಸವನನಿಗೆ ಮಹಾವೀತ-ಧಾತಕಿ ಎಂಬ ಇಬ್ಬರು ಕುಮಾರರು ಜನಿಸಿದರು.

೨೧. ಆಗ ಸವನನು ತನ್ನ ಪುಷ್ಕರವರ್ಷವನ್ನು ಎರಡು ಭಾಗಗಳನ್ನಾಗಿ ಮಾಡಿ ಅವುಗಳಲ್ಲಿ ಧಾತಕಿ-ಮಹಾವೀತರನ್ನು ಇರಿಸಿದನು. ಭವ್ಯನೆಂಬುವನಿಗೆ ಏಳು ಮಂದಿ ಪುತ್ರರು ಇದ್ದರು. ಅವರ ನಾಮಾಂಕನಗಳನ್ನು ನೀನು ನನ್ನಿಂದ ಕೇಳು.

೨೨. ಜಲದ, ಕುಮಾರ, ಸುಕುಮಾರ, ಮಣೀವಕ, ಕುಶೋತ್ತರ, ಮೇಧಾವಿ ಮತ್ತು ಮಹಾದ್ರುಮ—ಎಂಬುವು ಭವ್ಯನ ಏಳು ಮಂದಿ ಪುತ್ರರ ನಾಮಾಂಕನಗಳಾಗಿದ್ದುವು.

ತನ್ನಾಮಕಾನಿ ವರ್ಷಾಣಿ ಶಾಕದ್ವೀಪೇ ಚಕಾರ ಸಃ ।
ತಥಾ ದ್ಯುತಿಮತಃ ಸಪ್ತ ಪುತ್ರಾಸ್ತಾಂಸ್ತು ನಿಬೋಧ ಮೇ ||೨೩||

ಕುಶಲೋ ಮನುಗಶ್ಚೋಷ್ಣಃ ಪ್ರಾಕಾರಶ್ಚಾರ್ಥಕಾರಕಃ ।
ಮುನಿಶ್ಚ ದುನ್ದುಭಿಶ್ಚೈವ ಸಪ್ತಮಃ ಪರಿಕೀರ್ತಿತಃ ||೨೪||

ತೇಷಾಂ ಸ್ವನಾಮಧೇಯಾನಿ ಕ್ರೌಞ್ಚದ್ವೀಪೇ ತಥಾಭವನ್ ।
ಜ್ಯೋತಿಷ್ಮತಃ ಕುಶದ್ವೀಪೇ ಪುತ್ರನಾಮಾಙ್ಕಿತಾನಿ ವೈ ||೨೫||

ತತ್ರಾಪಿ ಸಪ್ತ ವರ್ಷಾಣಿ ತೇಷಾಂ ನಾಮಾನಿ ಮೇ ಶೃಣು ।
ತಸ್ಯಾಪಿ ಸಪ್ತ ಪುತ್ರಾಸ್ತು ಜ್ಞೇಯಾಸ್ತೇಽಪಿ ಮಹೌಜಸಃ ||೨೬||

---

೨೩. ಭವ್ಯನು ಶಾಕದ್ವೀಪವನ್ನು ವಿಂಗಡಿಸಿ ಪ್ರತ್ಯೇಕವಾಗಿ ತನ್ನ ಏಳು ಮಂದಿ ಪುತ್ರರ ಆಳ್ವಿಕೆಯಿಂದ ಪುತ್ರನಾಮಾಂಕಿತಗಳಾದ ಏಳು ಖಂಡಗಳನ್ನು ಶಾಕದ್ವೀಪದಲ್ಲಿ ಸ್ಥಾಪಿಸಿದನು. ಹಾಗು ದ್ಯುತಿಮಾನ್ ಎಂಬುವನಿಗೆ ಜನಿಸಿದ ಏಳು ಮಂದಿ ಪುತ್ರರನ್ನು ಕೇಳು.

೨೪. ಕುಶಲ, ಮನುಗ, ಉಷ್ಣ, ಪ್ರಾಕಾರ, ಅರ್ಥಕಾರಕ, ಮುನಿ ಮತ್ತು ಏಳನೆಯದಾದ ದುಂದುಭಿ—ಎಂಬುವು ಸೇರಿ ದ್ಯುತಿಮಂತನ ಸಪ್ತ-ಕುಮಾರರ ನಾಮಾಂಕನಗಳಾಗಿದ್ದುವು.

೨೫. ಕ್ರೌಂಚದ್ವೀಪದಲ್ಲಿ ಜ್ಯೋತಿಷ್ಮಂತನ ಪುತ್ರರು ರಾಜ್ಯವಾಳಿ ಆಯಾಯ ಪುತ್ರರ ನಾಮಾಂಕನಗಳನ್ನು ಹೊಂದಿದ ಏಳು ಖಂಡಗಳು ಇದ್ದುವು. ಹಾಗೆ ಕ್ರೌಂಚದ್ವೀಪದಲ್ಲಿಯೂ ಏಳು ವರ್ಷಖಂಡಗಳಿದ್ದುವು. ಅವುಗಳ ಹೆಸರು-ಗಳನ್ನು ಹೇಳುವೆನು. ಕೇಳು.

೨೬. ಹಾಗೆ ವರ್ಷಗಳಿಗೆ ಪ್ರತ್ಯೇಕವಾದ ನಾಮಾಂಕನಗಳುಂಟಾಗು-ವಂತೆ ಕ್ರೌಂಚದ್ವೀಪಾಧಿಪತಿಯಾದ ಜ್ಯೋತಿಷ್ಮಂತನಿಗೆ ಏಳು ಮಂದಿ ಪುತ್ರ-ರಿದ್ದರು. ಅವರು ಮಹತ್ತಾದ ಪರಾಕ್ರಮದಿಂದ ಶೋಭಿಸುತ್ತಿದ್ದರು.

ಉದ್ಭಿದಂ ವೈಣವಂ ಚೈವ ಸುರಥಂ ಲಮ್ಭನಂ ತಥಾ ।
ಧೃತಿಮತ್ಪ್ರಾಕರಂ ಚೈವ ಕಾಪಿಲಂ ಚಾಪಿ ಸಪ್ತಮಮ್ ॥೨೭॥

ವಪುಷ್ಮತಃ ಸುತಾಃ ಸಪ್ತ ಶಾಲ್ಮಲೇಶಸ್ಯ ಚಾಭವನ್ ।
ಶ್ವೇತಶ್ಚ ಹರಿತಶ್ಚೈವ ಜೀಮೂತೋ ರೋಹಿತಸ್ತಥಾ ॥೨೮॥

ವೈದ್ಯುತೋ ಮಾನಸಶ್ಚೈವ ಕೇತುಮಾನ್ಸಪ್ತಮಸ್ತಥಾ ।
ತಥೈವ ಶಾಲ್ಮಲೇಸ್ತೇಷಾಂ ಸಮನಾಮಾನಿ ಸಪ್ತ ವೈ ॥೨೯॥

ಸಪ್ತ ಮೇಧಾತಿಥೇಃ ಪುತ್ರಾಃ ಪ್ಲಕ್ಷದ್ವೀಪೇಶ್ವರಸ್ಯ ವೈ ।
ಯೇಷಾಂ ನಾಮಾಙ್ಕಿತೈರ್ವರ್ಷೈಃ ಪ್ಲಕ್ಷದ್ವೀಪಸ್ತು ಸಪ್ತಧಾ ॥೩೦॥

---

೨೭. ಉದ್ಭಿದ, ವೈಣವ, ಸುರಥ, ಲಂಭನ, ಧೃತಿಮತ್, ಪ್ರಾಕರ ಮತ್ತು ಏಳನೆಯದಾದ ಕಾಪಿಲ ಎಂಬುವು ಪುತ್ರನಾಮಾಂಕಿತಗಳಾದ ಕ್ರೌಂಚ-ದ್ವೀಪಕ್ಕೆ ಸೇರಿದ ಏಳು ವರ್ಷಗಳಾಗಿದ್ದುವು.

೨೮. ಶಾಲ್ಮಲಿದ್ವೀಪದ ಅಧಿಪತಿಯಾದ ವಪುಷ್ಮಾನ್ ಎಂಬುವನಿಗೆ ಏಳು ಮಂದಿ ಕುಮಾರರು ಇದ್ದರು. ಅವರಲ್ಲಿ ಮೊದಲನೆಯ ನಾಲ್ಕು ಮಂದಿ ಕುಮಾರರು ಶ್ವೇತ, ಹರಿತ, ಜೀಮೂತ ಮತ್ತು ರೋಹಿತ ಎಂಬ ನಾಮಾಂಕನ-ಗಳನ್ನು ಹೊಂದಿದ್ದರು.

೨೯. ಹಾಗು ಉಳಿದ ಮೂರು ಮಂದಿ ಕುಮಾರರು ವೈದ್ಯುತ, ಮಾನಸ ಮತ್ತು ಕೇತುಮಾನ್ ಎಂಬ ನಾಮಗಳಿಂದ ಪ್ರಸಿದ್ಧರಾಗಿದ್ದರು. ಶಾಲ್ಮಲಿದ್ವೀಪದ ಏಳು ಖಂಡಗಳು ಪ್ರತ್ಯೇಕವಾಗಿ ಶಾಲ್ಮಲಿದ್ವೀಪಾಧಿಪತಿಯ ಏಳು ಮಂದಿ ಕುಮಾರರ ನಾಮಾಂಕಿತಗಳಾಗಿದ್ದುವು.

೩೦. ಪ್ಲಕ್ಷದ್ವೀಪದ ಪ್ರಭುವಾದ ಮೇಧಾತಿಥಿ ಎಂಬುವನಿಗೆ ಏಳು ಮಂದಿ ಪುತ್ರರು ಇದ್ದರು. ಅವರ ನಾಮಾಂಕನಗಳನ್ನು ಹೊಂದಿದ ಖಂಡಗಳಿಂದ ಪ್ಲಕ್ಷದ್ವೀಪವು ಏಳು ಭಾಗಗಳನ್ನು ಹೊಂದಿಕೊಂಡಿತ್ತು.

ಪೂರ್ವಂ ಶಾಕಭವಂ ವರ್ಷಂ ಶಿಶಿರಂ ತು ಸುಖೋದಯಮ್ ।
ಆನನ್ದಂ ಚ ಶಿವಂ ಚೈವ ಕ್ಷೇಮಕಂ ಚ ಧ್ರುವಂ ತಥಾ ॥೩೧॥

ಪ್ಲಕ್ಷದ್ವೀಪಾದಿಭೂತೇಷು ಶಾಕದ್ವೀಪಾನ್ತಿಮೇಷು ವೈ ।
ಜ್ಞೇಯಃ ಪಞ್ಚಸು ಧರ್ಮಶ್ಚ ವರ್ಣಾಶ್ರಮವಿಭಾಗಜಃ ॥೩೨॥

ನಿತ್ಯಃ ಸ್ವಾಭಾವಿಕಶ್ಚೈವ ಅಹಿಂಸಾವಿಧಿವರ್ಜಿತಃ ॥೩೩॥

ಯಾನಿ ಕಿಮ್ಪುರುಷಾದ್ಯಾನಿ ವರ್ಜಯಿತ್ವಾ ಹಿಮಾಹ್ವಯಮ್ ।
ಸುಖಮಾಯುಶ್ಚ ರೂಪಂ ಚ ಬಲಂ ಧರ್ಮಶ್ಚ ನಿತ್ಯಶಃ ॥೩೪॥

ಪಞ್ಚಸ್ವೇತೇಷು ವರ್ಷೇಷು ಸರ್ವಸಾಧಾರಣಃ ಸ್ಮೃತಃ ॥೩೫॥

---

೩೧. ಪ್ಲಕ್ಷದ್ವೀಪದ ಖಂಡಗಳಲ್ಲಿ ಮೊದಲನೆಯದು ಶಾಕವರ್ಷವೂ, ಮತ್ತು ಶಿಶಿರ, ಸುಖೋದಯ, ಆನಂದ, ಶಿವ, ಕ್ಷೇಮಕ, ಧ್ರುವ ಎಂದು ಕ್ರಮವಾದ ಮತ್ತಾರುವರ್ಷಗಳೂ ಸೇರಿ ಏಳು ಪ್ಲಕ್ಷದ್ವೀಪವರ್ಷಗಳೆಂದು ಪ್ರಸಿದ್ಧವಾಗಿದ್ದುವು.

೩೨. ಪ್ಲಕ್ಷದ್ವೀಪವು ಮೊದಲಾಗಿ ಶಾಕದ್ವೀಪದವರೆಗಿನ ಐದು ದ್ವೀಪಗಳಲ್ಲಿ ವರ್ಣ-ಆಶ್ರಮಗಳ ವಿಭಾಗದಿಂದ ಧರ್ಮವು ವರ್ಣಧರ್ಮ-ಆಶ್ರಮ-ಧರ್ಮವೆಂದು ಎರಡುಬಗೆಯಾಗಿದ್ದಿತು.

೩೩. ಮತ್ತು ವರ್ಣಾಶ್ರಮಧರ್ಮವು ಆಯಾಯ ಪ್ರಜೆಗಳಲ್ಲಿ ನಿತ್ಯವೂ ಸ್ವಾಭಾವಿಕವಾದುದೂ ಅಲ್ಲದೆ ಅಹಿಂಸಾವಿಧಾನದ ತಾತ್ಪರ್ಯದಿಂದ ವರ್ಜಿಸಲ್ಪಟ್ಟದ್ದೂ ಆಗಿತ್ತು. ವಿಹಿತಹಿಂಸಾದಿಗರ್ಭಿತವಾದ ನಿತ್ಯಧರ್ಮವಿತ್ತು.

೩೪. ಹಿಮಾಹ್ವಯವೆಂಬ ಒಂದು ವರ್ಷವನ್ನು ಬಿಟ್ಟು ಉಳಿದಿರುವ ಕಿಂಪುರುಷ ಮುಂತಾದ ವರ್ಷಗಳಲ್ಲಿರುವ ಪ್ರಜೆಗಳಿಗೆ ಸುಖ, ಆಯುಷ್ಯ, ರೂಪ, ಬಲ ಮತ್ತು ಧರ್ಮಗಳು ಸಮಾನವಾಗಿದ್ದುವು.

೩೫. ಹಾಗೆ ಹಿಂದೆ ಹೇಳಿದ ಪ್ಲಕ್ಷದ್ವೀಪ ಮೊದಲಾದ ಐದು ದ್ವೀಪ-ಗಳಲ್ಲಿರುವ ವರ್ಣಾಶ್ರಮಧರ್ಮವು ಎಲ್ಲರಲ್ಲಿಯೂ ಸಮಾನವಾಗಿತ್ತೆಂದು ಸ್ಮರಿಸಲ್ಪಟ್ಟಿರುವುದು.

ಆಗ್ನೀಧ್ರಾಯ ಪಿತಾ ಪೂರ್ವಂ ಜಮ್ಬೂದ್ವೀಪಂ ದದೌ ದ್ವಿಜ ।
ತಸ್ಯ ಪುತ್ರಾ ಬಭೂವುರ್ಹಿ ಪ್ರಜಾಪತಿಸಮಾ ನವ ॥೩೬॥

ಜ್ಯೇಷ್ಠೋ ನಾಭಿರಿತಿ ಖ್ಯಾತಸ್ತಸ್ಯ ಕಿಮ್ಪುರುಷೋಽನುಜಃ ।
ಹರಿವರ್ಷಸ್ತೃತೀಯಸ್ತು ಚತುರ್ಥೋಽಭೂದಿಲಾವೃತಃ ॥೩೭॥

ವರ್ಶ್ಯಶ್ಚ ಪಞ್ಚಮಃ ಪುತ್ರೋ ಹಿರಣ್ಯಃ ಷಷ್ಠ ಉಚ್ಯತೇ ।
ಕುರುಸ್ತು ಸಪ್ತಮಸ್ತೇಷಾಂ ಭದ್ರಾಶ್ವಶ್ಚಾಷ್ಟಮಃ ಸ್ಮೃತಃ ॥೩೮॥

ನವಮಃ ಕೇತುಮಾಲಶ್ಚ ತನ್ನಾಮ್ನಾ ವರ್ಷಸಂಸ್ಥಿತಿಃ ॥೩೯॥

---

೩೬. ಎಲೈ ದ್ವಿಜೋತ್ತಮನೆ! ಪೂರ್ವದಲ್ಲಿ ಆಗ್ನೀಧ್ರನಿಗೆ ಅವನ ತಂದೆಯಾದ ಪ್ರಿಯವ್ರತನು ಜಂಬುದ್ವೀಪವನ್ನು ಕೊಟ್ಟಿರುವನಷ್ಟೆ; ಆ ಆಗ್ನೀಧ್ರನಿಗೆ ಪ್ರಜಾಪತಿಯಂತೊಪ್ಪುವ ಒಂಭತ್ತು ಮಂದಿ ಪುತ್ರರಿದ್ದರು.

೩೭. ಆ ಒಂಭತ್ತು ಮಂದಿಯಲ್ಲಿ ನಾಭಿ ಎಂಬ ಪ್ರಖ್ಯಾತ ಪುತ್ರನು ಜ್ಯೇಷ್ಠನಾಗಿದ್ದನು. ಅವನಿಗೆ ಕಿಂಪುರುಷನೆಂಬ ತಮ್ಮನಿದ್ದನು. ಹರಿವರ್ಷ ಎಂಬುವನು ಮೂರನೆಯವನಾಗಿದ್ದನು. ಹಾಗು ಇಲಾವೃತನು ನಾಲ್ಕನೆಯ ಕುಮಾರನಾಗಿದ್ದನು.

೩೮. ವರ್ಶ್ಯ ಎಂಬುವನು ಐದನೆಯ ಪುತ್ರನಾಗಿದ್ದನು. ಆರನೆಯ ಕುಮಾರನು ಹಿರಣ್ಯ ಎಂದು ಕರೆಯಲ್ಪಡುವನು. ಮುಂದೆ ಹುಟ್ಟಿದ ಏಳನೆಯ ಕುಮಾರನು ಕುರು ಎಂಬುವನಾಗಿದ್ದನು. ಭದ್ರಾಶ್ವನು ಎಂಟನೆಯವನಾಗಿ ಸ್ಮರಿಸಲ್ಪಟ್ಟನು.

೩೯. ಒಂಭತ್ತನೆಯವನು ಕೇತುಮಾಲನೆಂದು ನಾಮಾಂಕಿತನಾಗಿದ್ದನು. ಈ ಒಂಭತ್ತು ಮಂದಿ ರಾಜಕುಮಾರರ ಹೆಸರಿನಿಂದ ವರ್ಷಗಳು ಪ್ರಸಿದ್ಧಿಹೊಂದಿ ಒಂಭತ್ತು ವರ್ಷಗಳು ಜಂಬೂದ್ವೀಪದಲ್ಲಿರುವುವು.

ಯಾನಿ ಕಿಂಪುರುಷಾದ್ಯಾನಿ ವರ್ಜಯಿತ್ವಾ ಹಿಮಾಹ್ವಯಮ್ ।
ತೇಷಾಂ ಸ್ವಭಾವತಃ ಸಿದ್ಧಿಃ ಸುಖಪ್ರಾಯಾ ಹ್ಯಯತ್ನತಃ ॥೪೦॥

ವಿಪರ್ಯಯೋ ನ ತೇಷ್ವಸ್ತಿ ಜರಾಮೃತ್ಯುಭಯಂ ನ ಚ ।
ಧರ್ಮಾಧರ್ಮೌ ನ ತೇಷ್ವಾಸ್ತಾಂ ನೋತ್ತಮಾಧಮಮಧ್ಯಮಾಃ
॥೪೧॥

ನ ವೈ ಚತುರ್ಯುಗಾವಸ್ಥಾ ನಾಶ್ರಮಾ ಋತವೋ ನ ಚ ।
ಆಗ್ನೀಧ್ರಸೂನೋರ್ನಾಭೇಸ್ತು ಋಷಭೋಽಭೂತ್ಸುತೋ ದ್ವಿಜ॥೪೨

ಋಷಭಾದ್ಭರತೋ ಜಜ್ಞೇ ವೀರಃ ಪುತ್ರಶತಾದ್ವರಃ ।
ಸೋಽಭಿಷಿಚ್ಯರ್ಷಭಃ ಪುತ್ರಂ ಮಹಾಪ್ರಾವ್ರಾಜ್ಯಮಾಸ್ಥಿತಃ ॥೪೩॥

---

೪೦. . ಹಿಮಾಹ್ವಯವೆಂಬ ವರ್ಷವನ್ನು ಬಿಟ್ಟು ಮಿಕ್ಕ ಕಿಂಪುರುಷ ಮುಂತಾದ ಎಲ್ಲ ವರ್ಷಗಳಲ್ಲಿಯೂ ಯತ್ನವಿಲ್ಲದೆ ದೊರಕುವ ಸುಖದಿಂದ ಪರಿಪೂರ್ಣವಾದ ಸಿದ್ಧಿಯು ಪ್ರಜೆಗಳಲ್ಲಿ ಸ್ವಾಭಾವಿಕವಾಗಿದ್ದಿತು.

೪೧. ಕಿಂಪುರುಷ ಮುಂತಾದ ವರ್ಷಗಳಲ್ಲಿ ವಾಸಿಸುವ ಪ್ರಜೆಗಳಲ್ಲಿ ಸಿದ್ಧಿಯು ಬದಲಾವಣೆಯಿರಲಿಲ್ಲ. ಮುಪ್ಪು-ಮರಣಗಳ ಭಯವಿಲ್ಲ. ಧರ್ಮ-ಅಧರ್ಮಗಳ ಚಿಂತೆಯಿಲ್ಲ. ಹಾಗು ಉತ್ತಮ-ಮಧ್ಯಮ-ಅಧಮ ಎಂಬ ತಾರತಮ್ಯವಿಲ್ಲ.

೪೨. ಆಥವಾ ಆಯಾಯ ಧರ್ಮವಿಪರ್ಯಯವನ್ನು ಒಳಗೊಂಡಿರುವ ಚತುರ್ಯುಗಗಳ ಅವಸ್ಥೆ, ಆಶ್ರಮ ಮತ್ತು ಋತುಗಳು ಇರಲಿಲ್ಲ. ಎಲೈ ದ್ವಿಜನೆ! ಆಗ್ನೀಧ್ರನ ಜ್ಯೇಷ್ಠಪುತ್ರನಾದ ನಾಭಿ ಎಂಬುವನಿಗೆ ಋಷಭ ಎಂಬ ಪುತ್ರನು ಇದ್ದನು.

೪೩. ಆ ಋಷಭ ಎಂಬುವನಿಂದ ತನಗೆ ಜನಿಸಿದ ನೂರು ಮಂದಿ ಪುತ್ರರಲ್ಲೆಲ್ಲ ಮಹಾವೀರನಾದ ಭರತಕುಮಾರನು ಜನಿಸಿದನು. ಋಷಭನು ತನ್ನ ಪುತ್ರನಾದ ಭರತಕುಮಾರನನ್ನು ಪಟ್ಟಾಭಿಷೇಕಮಾಡಿ ರಾಜ್ಯದಲ್ಲಿರಿಸಿ ತಾನು ಮಹತ್ತಾದ ಸರ್ವಸಂಗತ್ಯಾಗವನ್ನು ಮಾಡಿದನು.

ತಪಸ್ತೇಪೇ ಮಹಾಭಾಗಃ ಪುಲಹಾಶ್ರಮಸಂಶ್ರಯಃ ।
ಹಿಮಾಹ್ವಂ ದಕ್ಷಿಣಂ ವರ್ಷಂ ಭರತಾಯ ಪಿತಾ ದದೌ ॥೪೪॥

ತಸ್ಮಾತ್ತು ಭಾರತಂ ವರ್ಷಂ ತಸ್ಯ ನಾಮ್ನಾ ಮಹಾತ್ಮನಃ ।
ಭರತಸ್ಯಾನ್ವಭೂತ್ಪುತ್ರಃ ಸುಮತಿರ್ನಾಮ ಧಾರ್ಮಿಕಃ ॥೪೫॥

ತಸ್ಮಿನ್ ರಾಜ್ಯಂ ಸಮಾವೇಶ್ಯ ಭರತೋಽಪಿ ವನಂ ಯಯೌ ।
ಏತೇಷಾಂ ಪುತ್ರಪೌತ್ರೈಸ್ತು ಸಪ್ತದ್ವೀಪಾ ವಸುನ್ಧರಾ ॥೪೬॥

ಪ್ರಿಯವ್ರತಸ್ಯ ಪುತ್ರೈಸ್ತು ಭುಕ್ತಾ ಸ್ವಾಯಮ್ಭುವೇಽನ್ತರೇ ।
ಏಷ ಸ್ವಾಯಮ್ಭುವಃ ಸರ್ಗಃ ಕಥಿತಸ್ತೇ ದ್ವಿಜೋತ್ತಮ ॥೪೭॥

---

೪೪. ಮತ್ತು ಪುಲಹಮುನಿಯ ಆಶ್ರಮದಲ್ಲಿ ವಾಸಮಾಡಿ ಮಹಾತ್ಮನಾದ ಋಷಭನು ತಪಸ್ಸನ್ನು ಮಾಡಿದನು. ತಂದೆಯು ಭರತನಿಗೆ ಹಿಮಾಹ್ವಯವೆಂಬ ಹೆಸರುಳ್ಳ ದಕ್ಷಿಣಭಾಗದ ವರ್ಷವನ್ನು ಕೊಟ್ಟನು.

೪೫. ಆದುದರಿಂದ ಭರತನು ರಾಜ್ಯವಾಳಿದ ದಕ್ಷಿಣಭಾಗದ ವರ್ಷಕ್ಕೆ ಮಹಾತ್ಮನ ನಾಮಾಂಕನವು ಬಂದು ಭಾರತವರ್ಷವೆಂದು ಕರೆಯುವಂತಾಯಿತು. ಭರತನಿಗೆ ಸುಮತಿ ಎಂಬ ಧಾರ್ಮಿಕಪುತ್ರನು ಜನಿಸಿದನು.

೪೬. ಭರತನು ಕೂಡ ತನ್ನ ಪುತ್ರನಾದ ಸುಮತಿ ಎಂಬುವನಲ್ಲಿ ರಾಜ್ಯಭಾರವನ್ನು ಒಪ್ಪಿಸಿ ತಪೋವನಕ್ಕೆ ತೆರಳಿದನು. ಏಳು ದ್ವೀಪಗಳಿಂದ ಕೂಡಿದ ಭೂಮಿಯು ಈ ರಾಜಕುಮಾರರ ಪುತ್ರ–ಪೌತ್ರರಿಂದ ತುಂಬಿಕೊಂಡಿತು.

೪೭. ಪ್ರಿಯವ್ರತನ ಪುತ್ರರಿಂದ ಭುಂಜಿಸಲ್ಪಟ್ಟ, ಅನೇಕ ದ್ವೀಪಗಳಿಂದ ಶೋಭಿಸಲ್ಪಟ್ಟ ಭೂಮಿಯು ಅವರ ಪುತ್ರ–ಪೌತ್ರರಿಂದ ಭುಂಜಿಸಲ್ಪಟ್ಟಿತು. ಎಲೈ ದ್ವಿಜವರ್ಯನೆ! ಹೀಗೆ ನಿನಗೆ ಸ್ವಾಯಂಭುವ ಮನ್ವಂತರದ ಸೃಷ್ಟಿಯು ಹೇಳಲ್ಪಟ್ಟಿದೆ.

ಪೂರ್ವಮನ್ವನ್ತರೇ ಸಮ್ಯಕ್ಕಿಮನ್ಯತ್ಕಥಯಾಮಿ ತೇ ॥೪೮॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಭುವನಕೋಶೇ
ಸ್ವಾಯಮ್ಭುವಮನ್ವನ್ತರ ಕಥನಂ ನಾಮ
ಪಞ್ಚಾಶತ್ತಮೋಽಧ್ಯಾಯಃ

---

೪೮. ಹಿಂದೆ ಕಳೆದ ಅನೇಕ ಮನ್ವಂತರಗಳಲ್ಲಿ ಮೊದಲನೆಯ ಸ್ವಾಯಂಭುವ ಮನ್ವಂತರವನ್ನು ವರ್ಣಿಸಿದ್ದೇನೆ. ಮುಂದೆ ಇನ್ನೇನನ್ನು ನಾನು ನಿನಗೆ ವರ್ಣಿಸಲಿ ?

ಮಾರ್ಕಂಡೇಯ ಮಹಾಪುರಾಣದಲ್ಲಿ ಐವತ್ತನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಏಕಪಞ್ಚಾಶತ್ತಮೋಽಧ್ಯಾಯಃ

(ಜಂಬೂದ್ವೀಪವರ್ಣನಮ್)

ಕ್ರೌಷ್ಟುಕಿರುವಾಚ—

ಕತಿ ದ್ವೀಪಾಃ ಸಮುದ್ರಾ ವಾ ಪರ್ವತಾ ವಾ ಕತಿ ದ್ವಿಜ ।
ಕಿಯನ್ತಿ ಚೈವ ವರ್ಷಾಣಿ ತೇಷಾಂ ನದ್ಯಶ್ಚ ಕಾ ಮುನೇ ||೧||

ಮಹಾಭೂತಪ್ರಮಾಣಂ ಚ ಲೋಕಾಲೋಕಂ ತಥೈವ ಚ ।
ಪರ್ಯಾಸಂ ಪರಿಮಾಣಂ ಚ ಗತಿಂ ಚನ್ದ್ರಾರ್ಕಯೋರಪಿ ||೨||

ಐವತ್ತೊಂದನೆಯ ಅಧ್ಯಾಯ

ಕ್ರೌಷ್ಟುಕಿಯು ಹೀಗೆಂದನು :—

೧. ಬ್ರಹ್ಮರ್ಷಿಯಾದ ಮಾರ್ಕಂಡೇಯಮುನಿಯೆ ! ಒಟ್ಟಾಗಿ ದ್ವೀಪಗಳೆಷ್ಟು ? ಹಾಗು ಸಮುದ್ರ-ಪರ್ವತ ಇವುಗಳೆಷ್ಟು ? ವರ್ಷಗಳ ವಿಭಾಗವೆಷ್ಟು ? ಮತ್ತು ಆಯಾಯ ವರ್ಷಗಳಲ್ಲಿರುವ ನದಿಗಳಾವುವು ?

೨. ಮಹಾಭೂತಗಳ ಪರಿಮಾಣ, ಲೋಕಾಲೋಕಪರ್ವತ, ಇದರ ಸ್ಥಿತಿ ಮತ್ತು ಪರಿಮಾಣ, ಹಾಗು ಚಂದ್ರ-ಸೂರ್ಯರ ಗತಿ ಇವುಗಳನ್ನು ಕೇಳಬೇಕೆಂದಿರುವೆನು.

ಏತತ್ಪ್ರಬ್ರೂಹಿ ಮೇ ಸರ್ವಂ ವಿಸ್ತರೇಣ ಮಹಾಮುನೇ ॥೩॥

ಮಾರ್ಕಣ್ಡೇಯ ಉವಾಚ :—

ಶತಾರ್ಧಕೋಟಿವಿಸ್ತಾರಾ ಪೃಥಿವೀ ಕೃತ್ಸ್ನಶೋ ದ್ವಿಜ ।
ತಸ್ಯಾಃ ಸಂಸ್ಥಾನಮಖಿಲಂ ಕಥಯಾಮಿ ಶೃಣುಷ್ವ ತತ್ ॥೪॥
ಯೇ ತೇ ದ್ವೀಪಾ ಮಯಾ ಪ್ರೋಕ್ತಾ ಜಮ್ಬುದ್ವೀಪಾದಯೋ ದ್ವಿಜ ।
ಪುಷ್ಕರಾನ್ತಾ ಮಹಾಭಾಗ ಶೃಣ್ವೇಷಾಂ ವಿಸ್ತರಂ ಪುನಃ ॥೫॥

ದ್ವೀಪಾತ್ತು ದ್ವಿಗುಣೋ ದ್ವೀಪೋ ಜಮ್ಬುಃ ಪ್ಲಕ್ಷೋಽಥ ಶಾಲ್ಮಲಿಃ ।
ಕುಶಃ ಕ್ರೌಞ್ಚಸ್ತಥಾ ಶಾಕಃ ಪುಷ್ಕರದ್ವೀಪ ಏವ ಚ ॥೬॥

---

೩. ಮಹಾಮುನಿಯಾದ ಮಾರ್ಕಂಡೇಯನೆ ! ದ್ವೀಪ-ಸಮುದ್ರ-ಪರ್ವತ ಮುಂತಾದ ವಿಭಾಗವನ್ನು ಕೇಳಲು ಕುತೂಹಲವುಳ್ಳ ನನಗೆ ಎಲ್ಲವನ್ನೂ ವಿಸ್ತಾರವಾಗಿ ಹೇಳು.

ಮಾರ್ಕಂಡೇಯ ಮುನಿಯು ಹೇಳಿದನು :—

೪. ಎಲೈ ಕ್ರೌಷ್ಟುಕಿ ಮುನಿಯೆ ! ಈ ಭೂಮಂಡಲವು ಸಂಪೂರ್ಣವಾಗಿ ಐವತ್ತು ಕೋಟಿ ಯೋಜನಗಳ ವಿಸ್ತಾರವುಳ್ಳದ್ದಾಗಿದೆ. ಇಂತಹ ಭೂಮಿಯ ಸನ್ನಿವೇಶವನ್ನೆಲ್ಲ ವಿಸ್ತಾರವಾಗಿ ಹೇಳುವೆನು. ಅದನ್ನು ನೀನು ಕೇಳು.

೫. ಎಲೈ ಮಹಾಭಾಗನಾದ ದ್ವಿಜೋತ್ತಮನೆ ! ಜಂಬುದ್ವೀಪ ಮೊದಲುಗೊಂಡು ಪುಷ್ಕರದ್ವೀಪದವರೆಗೆ ಯಾವ ದ್ವೀಪಸ್ತೋಮಗಳು ನನ್ನಿಂದ ನಿನಗೆ ಹೇಳಲ್ಪಟ್ಟವೆಯೋ ಈಗ ಮತ್ತೆ ಅವುಗಳ ವಿಸ್ತಾರವನ್ನು ಕೇಳು.

೬. ಒಟ್ಟಾಗಿ ಇರುವ ಸಪ್ತದ್ವೀಪಗಳು ಜಂಬುದ್ವೀಪ, ಪ್ಲಕ್ಷದ್ವೀಪ, ಶಾಲ್ಮಲಿದ್ವೀಪ, ಕುಶದ್ವೀಪ, ಕ್ರೌಂಚದ್ವೀಪ, ಶಾಕದ್ವೀಪ ಮತ್ತು ಪುಷ್ಕರದ್ವೀಪಗಳೆಂದು ನಾಮಾಂಕಿತಗಳಾಗಿವೆ. ಇವುಗಳಲ್ಲಿ ಕ್ರಮವಾಗಿ ಒಂದಕ್ಕಿಂತ ಮತ್ತೊಂದು ದ್ವಿಗುಣವಾಗಿದೆ.

ಲವಣೇಕ್ಷುಸುರಾಸರ್ಪಿರ್ದಧಿಕ್ಷೀರಜಲಾಬ್ಧಿಭಿಃ ।
ದ್ವಿಗುಣೈರ್ದ್ವಿಗುಣೈರ್ವೃದ್ಧ್ಯಾ ಸರ್ವತಃ ಪರಿವೇಷ್ಟಿತಾಃ ॥೭॥

ಜಮ್ಬುದ್ವೀಪಸ್ಯ ಸಂಸ್ಥಾನಂ ಪ್ರವಕ್ಷ್ಯೇಽಹಂ ನಿಬೋಧ ಮೇ ।
ಲಕ್ಷಮೇಕಂ ಯೋಜನಾನಾಂ ವೃತ್ತವಿಸ್ತಾರದೈರ್ಘ್ಯತಃ ॥೮॥

ಹಿಮವಾನ್ ಹೇಮಕೂಟಶ್ಚ ನಿಷಧೋ ಮೇರುರೇವ ಚ ।
ನೀಲಃ ಶ್ವೇತಸ್ತಥಾ ಶೃಙ್ಗೀ ಸಪ್ತ ತದ್ವರ್ಷಪರ್ವತಾಃ ॥೯॥

ದ್ವಿಲಕ್ಷಯೋಜನಾಯಾಮೌ ಮಧ್ಯೇ ತತ್ರ ಮಹಾಚಲೌ ।
ತಯೋರ್ದಕ್ಷಿಣತೋ ಯೌ ತು ಯೌ ತಥೋತ್ತರತೋ ಗಿರೀ ॥೧೦॥

ದಶಭಿರ್ದಶಭಿರ್ನ್ಯೂನೈಃ ಸಹಸ್ರೈಸ್ತೇ ಪರಸ್ಪರಮ್ ।
ದ್ವಿಸಾಹಸ್ರೋಚ್ಛ್ರಯಾಃ ಸರ್ವೇ ತಾವದ್ವಿಸ್ತಾರಿಣಶ್ಚ ತೇ ॥೧೧॥

---

೭. ಇಂತಹ ದ್ವೀಪಗಳು ಲವಣ-ಇಕ್ಷು-ಸುರಾ-ಘೃತ-ದಧಿ-ಕ್ಷೀರ ಮತ್ತು ಜಲ—ಇವುಗಳಿಂದ ತುಂಬಿ ಸಪ್ತಸಮುದ್ರಗಳಿಂದ ಸುತ್ತಲೂ ಸುತ್ತಲ್ಪಟ್ಟಿವೆ. ಈ ಸಮುದ್ರಗಳು ಒಂದಕ್ಕಿಂತ ಮತ್ತೊಂದು ದ್ವಿಗುಣ ವೃದ್ಧಿಯನ್ನು ಹೊಂದಿವೆ.

೮. ಈಗ ಜಂಬುದ್ವೀಪದ ಸನ್ನಿವೇಶವನ್ನು ವಿಸ್ತಾರವಾಗಿ ಹೇಳುವೆನು. ಅದನ್ನು ನನ್ನಿಂದ ಕೇಳು. ಒಂದು ಲಕ್ಷ ಯೋಜನಪರಿಮಾಣವು ಜಂಬುದ್ವೀಪದ ವಿಸ್ತಾರ–ವರ್ತುಲ–ದೀರ್ಘಆಕೃತಿಗಳಲ್ಲಿದೆ.

೯. ಮತ್ತು ಈ ಜಂಬುದ್ವೀಪವನ್ನು ಅನೇಕ ವರ್ಷಗಳಾಗಿ ವಿಭಾಗಿಸಲು ವರ್ಷದ ಅವಧಿ ಪರ್ವತಗಳಾಗಿ ಹಿಮವಾನ್, ಹೇಮಕೂಟ, ನಿಷಧ, ಮೇರು, ನೀಲ, ಶ್ವೇತ ಮತ್ತು ಶೃಂಗಿ ಎಂದು ನಾಮಾಂಕಿತಗಳಾದ ಗಿರಿಗಳಿವೆ.

೧೦. ಇಂತಹ ಜಂಬುದ್ವೀಪದ ಮಧ್ಯದಲ್ಲಿ ಎರಡುಲಕ್ಷ ಯೋಜನಗಳ ದೀರ್ಘಪರಿಮಾಣವುಳ್ಳ ಎರಡು ಮಹಾಗಿರಿಗಳಿವೆ. ಅವುಗಳ ದಕ್ಷಿಣಪಾರ್ಶ್ವ ಮತ್ತು ಉತ್ತರಪಾರ್ಶ್ವಗಳಲ್ಲಿ ಎರಡೆರಡು ಗಿರಿಗಳಿವೆ.

೧೧. ಆ ಎರಡೆರಡು ಗಿರಿಗಳು ಪರಸ್ಪರ ಹತ್ತುಸಹಸ್ರ ಯೋಜನ-ಗಳಷ್ಟು ನ್ಯೂನಪರಿಮಾಣವುಳ್ಳದ್ದಾಗಿವೆ. ಎಲ್ಲ ಗಿರಿಗಳೂ ಎರಡುಸಹಸ್ರ ಯೋಜನಗಳ ಉನ್ನತಿಯನ್ನೂ ಅದೇ ಪರಿಮಾಣದ ವಿಸ್ತಾರವನ್ನೂ ಹೊಂದಿಕೊಂಡಿವೆ.

ಸಮುದ್ರಾನ್ತಃಪ್ರವಿಷ್ಟಾಶ್ಚ ಷಡಸ್ಮಿನ್ವರ್ಷಪರ್ವತಾಃ ।
ದಕ್ಷಿಣೋತ್ತರತೋ ನಿಮ್ನಾ ಮಧ್ಯೇ ತುಙ್ಗಾ ಯಥಾ ಕ್ಷಿತಿಃ ॥೧೨॥

ವೇದ್ಯರ್ಧೇ ದಕ್ಷಿಣೇ ತ್ರೀಣಿ ತ್ರೀಣಿ ವರ್ಷಾಣಿ ಚೋತ್ತರೇ ।
ಇಲಾವೃತಂ ತಯೋರ್ಮಧ್ಯೇ ಚನ್ದ್ರಾರ್ಧಾಕಾರವತ್ ಸ್ಥಿತಮ್॥೧೩॥

ತತಃ ಪೂರ್ವೇಣ ಭದ್ರಾಶ್ವಂ ಕೇತುಮಾಲಂ ಚ ಪಶ್ಚಿಮೇ ।
ಇಲಾವೃತಸ್ಯ ಮಧ್ಯೇ ತು ಮೇರುಃ ಕನಕಪರ್ವತಃ ॥೧೪॥

ಚತುರಾಶೀತಿಸಾಹಸ್ರಸ್ತಸ್ಯೋಚ್ಛ್ರಾಯೋ ಮಹಾಗಿರೇಃ ।
ಪ್ರವಿಷ್ಟಃ ಷೋಡಶಾಧಸ್ತಾದ್ವಿಸ್ತಾರಃ ಷೋಡಶೈವ ತು ॥೧೫॥

---

೧೨. ಈ ಜಂಬುದ್ವೀಪದಲ್ಲಿ ಆರು ವರ್ಷ ಪರ್ವತಗಳು ಸಮುದ್ರದೊಳಗೆ ಪ್ರವೇಶಮಾಡಿಕೊಂಡಿವೆ. ಮತ್ತು ದಕ್ಷಿಣ-ಉತ್ತರ ದಿಗ್ಭಾಗಗಳಲ್ಲಿ ಹಳ್ಳವಾಗಿಯೂ ಮಧ್ಯದಲ್ಲಿ ಮಾತ್ರ ಎತ್ತರವಾಗಿಯೂ ಭೂಮಿಯು ಇರುವ ಹಾಗೆಯೇ ಇವೆ.

೧೩. ವೇದಿಯಂತೆ ಭಾವಿಸಿದ ಭೂಮಿಯಲ್ಲಿ ದಕ್ಷಿಣದಲ್ಲಿ ಮೂರು ವರ್ಷಗಳೂ ಉತ್ತರಭಾಗದಲ್ಲಿ ಮೂರು ವರ್ಷಗಳೂ ಇವೆ. ಅರ್ಧಚಂದ್ರನ ಆಕಾರವನ್ನು ಹೊಂದಿರುವ ಇಲಾವೃತ ವರ್ಷವೆಂಬುದು ಮಧ್ಯಭಾಗದಲ್ಲಿದೆ.

೧೪. ಆ ಇಲಾವೃತ ವರ್ಷದ ಮಧ್ಯದಲ್ಲಿ ಸುವರ್ಣಮಯವಾದ ಮೇರುಪರ್ವತವು ಇರುವುದು. ಅದರ ಪೂರ್ವಭಾಗದಲ್ಲಿ ಭದ್ರಾಶ್ವ ಎಂಬ ವರ್ಷವೂ ಪಶ್ಚಿಮಭಾಗದಲ್ಲಿ ಕೇತುಮಾಲ ಎಂಬ ವರ್ಷವೂ ಇವೆ.

೧೫. ಮಹಾಗಿರಿಯಾದ ಮೇರುಪರ್ವತದ ಉನ್ನತಿಯು ಎಂಭತ್ತುನಾಲ್ಕುಸಹಸ್ರ ಯೋಜನಪರಿಮಾಣವುಳ್ಳದ್ದಾಗಿದೆ. ಹದಿನಾರುಸಹಸ್ರ ಯೋಜನಗಳಷ್ಟು ಆಕಾರವು ಕೆಳಗಡೆ ವ್ಯಾಪಿಸಿದೆ. ಹಾಗು ಅದರ ವಿಸ್ತಾರವು ಹದಿನಾರುಸಹಸ್ರ ಯೋಜನಗಳಷ್ಟು ಇದೆ.

ಶರಾವಸಂಸ್ಥಿತತ್ವಾಚ್ಚ ದ್ವಾತ್ರಿಂಶನ್ಮೂರ್ಧ್ನಿ ವಿಸ್ತೃತಃ ।
ಶುಕ್ಲಃ ಪೀತೋಽಸಿತೋ ರಕ್ತಃ ಪ್ರಾಚ್ಯಾದಿಷು ಯಥಾಕ್ರಮಮ್ ॥೧೬॥

ವಿಪ್ರೋ ವೈಶ್ಯಸ್ತಥಾ ಶೂದ್ರಃ ಕ್ಷತ್ರಿಯಶ್ಚ ಸ್ವವರ್ಣತಃ ।
ತಸ್ಯೋಪರಿ ತಥೈವಾಷ್ಟೌ ಪುರ್ಯೋ ದಿಕ್ಷು ಯಥಾಕ್ರಮಮ್ ॥೧೭॥

ತಸ್ಯೋಪರಿ ಸಭಾ ದಿವ್ಯಾಃ ಪೂರ್ವಾದಿಷು ಕ್ರಮೇಣ ತು ।
ಇನ್ದ್ರಾದಿಲೋಕಪಾಲಾನಾಂ ತನ್ಮಧ್ಯೇ ಬ್ರಹ್ಮಣಃ ಸಭಾ ॥೧೮॥

ಯೋಜನಾನಾಂ ಸಹಸ್ರಾಣಿ ಚತುರ್ದಶ ಸಮುಚ್ಛ್ರಿತಾ ।
ಅಯುತೋಚ್ಛ್ರಯಾಸ್ತಸ್ಯಾಧಸ್ತಥಾ ವಿಷ್ಕಮ್ಭಪರ್ವತಃ ॥೧೯॥

---

೧೬. ಒಂದು ತಟ್ಟೆಯ ಆಕಾರವಾಗಿ ಮೇಲುಭಾಗವಿರುವುದರಿಂದ ಮೂವತ್ತೆರಡುಸಹಸ್ರ ಪರಿಮಾಣ ವಿಸ್ತಾರವು ಇದೆ. ಹಾಗು ಅದರ ವರ್ಣವು ಪೂರ್ವ ಮುಂತಾದ ದಿಕ್ಕುಗಳಲ್ಲಿ ಕ್ರಮವಾಗಿ ಬಿಳುಪು-ಹಳದಿ-ಕಪ್ಪು ಮತ್ತು ಕೆಂಪು ಬಣ್ಣಗಳಿಂದ ಕೂಡಿದೆ.

೧೭. ಆಯಾಯ ವರ್ಣಗಳಿರುವುದರಿಂದ ಪೂರ್ವ ಮುಂತಾದ ದಿಕ್ಕುಗಳಲ್ಲಿ ಆ ಗಿರಿಯು ವಿಪ್ರ, ವೈಶ್ಯ, ಶೂದ್ರ ಮತ್ತು ಕ್ಷತ್ರಿಯ ರೂಪವಾಗಿ ಇರುವಂತೆ ಭಾವಿಸಬೇಕು. ಅದರ ಶಿಖರದಲ್ಲಿ ಹಾಗೆಯೇ ಪೂರ್ವಾದಿ ದಿಕ್ಕುಗಳ ಕ್ರಮದಂತೆ ಎಂಟು ನಗರಗಳು ಇವೆ.

೧೮. ಅದೇ ಗಿರಿಶಿಖರದಲ್ಲಿ ಪೂರ್ವ ಮುಂತಾದ ದಿಕ್ಕುಗಳಲ್ಲಿ ಕ್ರಮವಾಗಿ ಇಂದ್ರ—ಮುಂತಾದ ಲೋಕಪಾಲಕರ ದಿವ್ಯವಾದ ಸಭೆಗಳು ಇವೆ. ಲೋಕಪಾಲಕರ ದಿವ್ಯ ಸಭಾಮಂಟಪಗಳ ಮಧ್ಯದಲ್ಲಿ ಬ್ರಹ್ಮದೇವನ ಸಭೆಯು ಇರುವುದು.

೧೯. ಆ ಬ್ರಹ್ಮದೇವನ ಸಭೆಯು ಹದಿನಾಲ್ಕುಸಹಸ್ರ ಯೋಜನ ಪರಿಮಾಣದಷ್ಟು ಎತ್ತರವುಳ್ಳದ್ದಾಗಿದೆ. ಅದರ ಕೆಳಗಡೆ ವಿಷ್ಕಂಭಪರ್ವತವೂ ಮತ್ತು ಪೂರ್ವಾದಿ ದಿಕ್ಕುಗಳಲ್ಲಿರುವ ಪರ್ವತಗಳೂ ಹತ್ತುಸಹಸ್ರ ಯೋಜನಗಳಷ್ಟು ಉನ್ನತವಾಗಿವೆ.

ಪ್ರಾಚ್ಯಾದಿಷು ಕ್ರಮೇಣೈವ ಮನ್ದರೋ ಗನ್ಧಮಾದನಃ ।
ವಿಪುಲಶ್ಚ ಸುಪಾರ್ಶ್ವಶ್ಚ ಕೇತುಪಾದಪಶೋಭಿತಾಃ ॥೨೦॥

ಕದಮ್ಬೋ ಮನ್ದರೇ ಕೇತುರ್ಜಮ್ಬುರ್ವೈ ಗನ್ಧಮಾದನೇ ।
ವಿಪುಲೇ ಚ ತಥಾಶ್ವತ್ಥಃ ಸುಪಾರ್ಶ್ವೇ ಚ ವಟೋ ಮಹಾನ್ ॥೨೧॥

ಏಕಾದಶಶತಾಯಾಮಾ ಯೋಜನಾನಾಮಿಮೇ ನಗಾಃ ।
ಜಠರೋ ದೇವಕೂಟಶ್ಚ ಪೂರ್ವಸ್ಯಾಂ ದಿಶಿ ಪರ್ವತೌ ॥೨೨॥

ಆನೀಲನಿಷಧಾಯಾತೌ ಪರಸ್ಪರನಿರನ್ತರೌ ।
ನಿಷಧಃ ಪಾರಿಯಾತ್ರಶ್ಚ ಮೇರೋಃ ಪಾರ್ಶ್ವೇ ತು ಪಶ್ಚಿಮೇ ॥೨೩॥

---

೨೦. ಮತ್ತು ಪೂರ್ವ-ದಕ್ಷಿಣ-ಪಶ್ಚಿಮ-ಉತ್ತರ ದಿಕ್ಕುಗಳಲ್ಲಿ ಕ್ರಮವಾಗಿ ಮಂದರ, ಗಂಧಮಾದನ, ವಿಪುಲ, ಸುಪಾರ್ಶ್ವ ಎಂಬ ನಾಲ್ಕು ಪರ್ವತಗಳು ಧ್ವಜರೂಪವಾದ ವೃಕ್ಷಗಳಿಂದ ಶೋಭಿಸಲ್ಪಟ್ಟಿವೆ.

೨೧. ಮಂದರಪರ್ವತದಲ್ಲಿ ಕದಂಬವೃಕ್ಷವು ಧ್ವಜಪ್ರಾಯವಾಗಿದೆ. ಗಂಧಮಾದನಪರ್ವತದಲ್ಲಿ ಜಂಬೂವೃಕ್ಷವು ಧ್ವಜವಾಗಿದೆ. ವಿಪುಲಪರ್ವತದಲ್ಲಿ ಅಶ್ವತ್ಥವೃಕ್ಷವು ಧ್ವಜದಂತಿದೆ. ಮತ್ತು ಸುಪಾರ್ಶ್ವಗಿರಿಯಲ್ಲಿ ಮಹತ್ತಾದ ಆಲದ ಮರವು ಧ್ವಜರೂಪವಾಗಿದೆ.

೨೨. ಧ್ವಜರೂಪವಾದ ಈ ವೃಕ್ಷಗಳು ಹನ್ನೊಂದುಸಹಸ್ರ ಯೋಜನ ಪರಿಮಾಣವಷ್ಟು ದೀರ್ಘವಾಗಿವೆ. ಜಠರ ಮತ್ತು ದೇವಕೂಟ ಎಂಬ ಎರಡು ಪೂರ್ವದಿಕ್ಕಿನಲ್ಲಿ ಉಪಪರ್ವತಗಳಾಗಿವೆ.

೨೩. ಈ ಪರ್ವತಗಳು ಒಂದಕ್ಕೊಂದು ಸೇರಿಕೊಂಡಿರುವುವೂ ಮತ್ತು ನೀಲ-ನಿಷಧ ಪರ್ವತಗಳವರೆಗೆ ದೀರ್ಘಪರಿಮಾಣವುಳ್ಳವುಗಳೂ ಆಗಿವೆ. ನಿಷಧ-ಪಾರಿಯಾತ್ರ ಎಂಬ ಎರಡು ಪರ್ವತಗಳು ಮೇರುಪರ್ವತದ ಪಶ್ಚಿಮ ಪಾರ್ಶ್ವದಲ್ಲಿವೆ.

ಯಥಾ ಪೂರ್ವೌ ತಥಾ ಚೈತಾವಾನೀಲನಿಷಧಾಯತೌ ।
ಕೈಲಾಸೋ ಹಿಮವಾಂಶ್ಚೈವ ದಕ್ಷಿಣೇನ ಮಹಾಚಲೌ ॥೨೪॥

ಪೂರ್ವತಶ್ಚಾಯತಾವೇತಾವರ್ಣವಾನ್ತರ್ವ್ಯವಸ್ಥಿತೌ ॥೨೫॥

ಶೃಙ್ಗವಾಞ್ಜಾರುಧಿಶ್ಚೈವ ತಥೈವೋತ್ತರಪರ್ವತೌ ।
ಯಥೈವ ದಕ್ಷಿಣೇ ತದ್ವದರ್ಣವಾನ್ತರ್ವ್ಯವಸ್ಥಿತೌ ॥೨೬॥

ಮರ್ಯಾದಾಪರ್ವತಾ ಹ್ಯೇತೇ ಕಥ್ಯನ್ತೇಽಷ್ಟೌ ದ್ವಿಜೋತ್ತಮ ।
ಹಿಮವದ್ಧೇಮಕೂಟಾದಿಪರ್ವತಾನಾಂ ಪರಸ್ಪರಮ್ ॥೨೭॥

ನವಯೋಜನಸಾಹಸ್ರಂ ಪ್ರಾಗುದಗ್ದಕ್ಷಿಣೋತ್ತರಮ್ ।
ಮೇರೋರಿಲಾವೃತೇ ತದ್ವದನ್ತರಂ ವೈ ಚತುರ್ದಿಶಮ್ ॥೨೮॥

---

೨೪. ಜಠರ–ದೇವಕೂಟಗಿರಿಗಳಂತೆ ನಿಷಧ-ಪಾರಿಯಾತ್ರಗಳು ನೀಲ-ನಿಷಧಪರ್ವತಗಳಷ್ಟು ದೀರ್ಘವಾಗಿವೆ. ಮತ್ತು ಮೇರುಗಿರಿಯ ದಕ್ಷಿಣಪಾರ್ಶ್ವದಲ್ಲಿ ಕೈಲಾಸ-ಹಿಮವಾನ್ ಎಂಬ ಎರಡು ಮಹಾಪರ್ವತಗಳಿವೆ.

೨೫. ಕೈಲಾಸ, ಹಿಮವಾನ್ ಎಂಬ ಎರಡು ಮಹಾಗಿರಿಗಳು ಪೂರ್ವ-ದಿಕ್ಕಿನ ಭಾಗದಲ್ಲಿ ಅತಿದೀರ್ಘಾಕಾರವುಳ್ಳವುಗಳೂ ಮತ್ತು ಸಮುದ್ರದ ಒಳಭಾಗ-ದಲ್ಲಿ ಪ್ರವೇಶಮಾಡಿರುವುವೂ ಆಗಿವೆ.

೨೬. ಶೃಂಗವಾನ್ ಜಾರುಧಿ ಎಂಬುವು ಮೇರುಪರ್ವತದ ಉತ್ತರಪಾರ್ಶ್ವ-ದಲ್ಲಿರುವ ಗಿರಿಗಳ ನಾಮಾಂಕನಗಳಾಗಿವೆ. ದಕ್ಷಿಣಪಾರ್ಶ್ವದ ಪರ್ವತಗಳಂತೆ ಈ ಪರ್ವತಗಳು ಕೂಡ ಸಮುದ್ರಪಾತ್ರವನ್ನು ಪ್ರವೇಶಮಾಡಿಕೊಂಡಿರುವುವು.

೨೭. ಎಲೈ ದ್ವಿಜೋತ್ತಮನೆ! ಮೇರು ಪರ್ವತದ ನಾಲ್ಕುಪಾರ್ಶ್ವಗಳ-ಲ್ಲಿರುವ ಈ ಎಂಟುಪರ್ವತಗಳು ಎಲ್ಲೆಯನ್ನು ತೋರಿಸುವುದರಿಂದ ಮರ್ಯಾದಾ ಪರ್ವತಗಳೆಂದೆನಿಸುವುವು. ಹಿಮವತ್-ಹೇಮಕೂಟ ಮುಂತಾದ ಪರ್ವತಗಳ ನಡುವೆ ವಿಶಾಲವಾದ ಅಂತರವಿರುವುದು.

೨೮. ಆ ಅಂತರಭಾಗವು ಪೂರ್ವ-ಪಶ್ಚಿಮ–ದಕ್ಷಿಣ–ಉತ್ತರದಿಕ್ಕುಗಳಲ್ಲಿ ಒಂಭತ್ತು ಸಹಸ್ರಯೋಜನ ಪರಿಮಾಣವುಳ್ಳದ್ದಾಗಿದೆ. ಇಲಾವೃತವರ್ಷ–ಮೇರು ಪರ್ವತಗಳಿಗೆ ನಾಲ್ಕುದಿಕ್ಕುಗಳಲ್ಲಿಯೂ ಅಷ್ಟೇ ಪರಿಮಾಣವುಳ್ಳ ಅಂತರವಿರು-ವುದು.

ಫಲಾನಿ ಯಾನಿ ವೈ ಜಮ್ಬ್ವಾಃ ಗನ್ಧಮಾದನಪರ್ವತೇ ।
ಗಜದೇಹಪ್ರಮಾಣಾನಿ ಪತನ್ತಿ ಗಿರಿಮೂರ್ಧನಿ ॥೨೯॥

ತೇಷಾಂ ಸ್ರಾವಾತ್ಪ್ರಭವತಿ ಖ್ಯಾತಾ ಜಮ್ಬೂನದೀತಿ ವೈ ।
ಯತ್ರ ಜಾಮ್ಬೂನದಂ ನಾಮ ಕನಕಂ ಸಮ್ಪ್ರಜಾಯತೇ ॥೩೦॥

ಸಾ ಪರಿಕ್ರಮ್ಯ ವೈ ಮೇರುಂ ಜಮ್ಬೂಮೂಲಂ ಪುನರ್ನದೀ ।
ವಿಶತಿ ದ್ವಿಜಶಾರ್ದೂಲ ಪೀಯಮಾನಾ ಜನೈಶ್ಚ ತೈಃ ॥೩೧॥

ಭದ್ರಾಶ್ವೇಽಶ್ವಶಿರಾ ವಿಷ್ಣುರ್ಭಾರತೇ ಕೂರ್ಮಸಂಸ್ಥಿತಿಃ ।
ವರಾಹಃ ಕೇತುಮಾಲೇ ಚ ಮತ್ಸ್ಯರೂಪಸ್ತಥೋತ್ತರೇ ॥೩೨॥

---

೨೯. ಗಂಧಮಾದನ ಪರ್ವತದಲ್ಲಿರುವ ಜಂಬುವೃಕ್ಷದಲ್ಲಿ ಹಣ್ಣುಗಳು ಒಂದು ಆನೆಯ ದೇಹದಷ್ಟು ದೊಡ್ಡ ಆಕಾರವುಳ್ಳದ್ದಾಗಿರುವುವು. ಅಂತಹ ಹಣ್ಣು-ಗಳು ಗಿರಿಶಿಖರದಲ್ಲಿ ಬೀಳುವುವು.

೩೦. ಆ ಹಣ್ಣುಗಳು ಒಡೆದು ಒಳಗಿನಿಂದ ರಸವು ಸುರಿದು ಜಂಬೂ-ನದೀ ಎಂದು ಪ್ರಖ್ಯಾತವಾದ ನದಿಯಾಗಿ ಹರಿಯುವುದು. ಆ ನದಿಯ ಪಾತ್ರ-ದಲ್ಲಿ ಹುಟ್ಟುವುದರಿಂದ ಜಾಂಬೂನದವೆಂದು ಕರೆಯಲ್ಪಡುವ ಚಿನ್ನವು ಲಭಿಸು-ವುದು.

೩೧. ಎಲೈ ದ್ವಿಜೋತ್ತಮನೆ! ಅಲ್ಲಿ ಹುಟ್ಟಿದ ಜಂಬೂ ನದಿಯು ಮೇರುಪರ್ವತದ ಸುತ್ತಲೂ ಸುತ್ತಿಕೊಂಡು ಹರಿಯುತ್ತ ಅಲ್ಲಿ ವಾಸಮಾಡುವ ಜನರಿಂದ ಪಾನಮಾಡಲ್ಪಡುವ ಜಲವುಳ್ಳದ್ದಾಗಿ ಮತ್ತೆ ಜಂಬೂವೃಕ್ಷದ ಮೂಲ-ವನ್ನು ಸೇರುವುದು.

೩೨. ಹಿಂದೆ ಹೇಳಿರುವ ಅನೇಕ ವರ್ಷಖಂಡಗಳ ಪೈಕಿ ಭದ್ರಾಶ್ವ ವರ್ಷದಲ್ಲಿ ಹಯಗ್ರೀವರೂಪಿಯೂ, ಭಾರತ ವರ್ಷದಲ್ಲಿ ಕೂರ್ಮರೂಪಿಯೂ, ಕೇತುಮಾಲ ವರ್ಷದಲ್ಲಿ ವರಾಹರೂಪಿಯೂ ಮತ್ತು ಉತ್ತರ ವರ್ಷದಲ್ಲಿ ಮತ್ಸ್ಯ-ರೂಪಿಯೂ ಆದ ವಿಷ್ಣುವು ಪೂಜಿಸಲ್ಪಡುವನು.

ತೇಷು ನಕ್ಷತ್ರವಿನ್ಯಾಸಾದೃಷಯಃ ಸಮವಸ್ಥಿತಾಃ ।
ಚತುರ್ಷ್ವಪಿ ದ್ವಿಜಶ್ರೇಷ್ಠ ಗ್ರಹಾಭಿಭವಪಾಠಕಾಃ ॥೩೩॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಭುವನ್ಕೋಶೇ
ಜಮ್ಬೂದ್ವೀಪವರ್ಣನಂ ನಾಮ ಏಕಪಞ್ಚಾಶೋಽಧ್ಯಾಯಃ

---

೩೩. ದ್ವಿಜಶ್ರೇಷ್ಠನೆ ! ಈ ನಾಲ್ಕು ವರ್ಷಖಂಡಗಳಲ್ಲಿ ಗ್ರಹಮಂಡಲದ ತೇಜಸ್ಸನ್ನು ಮೀರುವ ಶಕ್ತಿಯುಳ್ಳ ಸಪ್ತರ್ಷಿಗಳು ನಕ್ಷತ್ರಗಳ ವಿನ್ಯಾಸದಿಂದ ಪ್ರಕಾಶಿಸುತ್ತಿರುವರು.

ಮಾರ್ಕಂಡೇಯ ಮಹಾಪುರಾಣದಲ್ಲಿ ಐವತ್ತೊಂದನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ದ್ವಿಪಞ್ಚಾಶತ್ತಮೋಽಧ್ಯಾಯಃ

(ಜಮ್ಬೂದ್ವೀಪಖಣ್ಡವರ್ಣನಮ್)

ಮಾರ್ಕಣ್ಡೇಯ ಉವಾಚ :—

ಶೈಲೇಷು ಮನ್ದರಾದ್ಯೇಷು ಚತುರ್ಷ್ವಪಿ ದ್ವಿಜೋತ್ತಮ ।
ವನಾನಿ ಯಾನಿ ಚತ್ವಾರಿ ಸರಾಂಸಿ ಚ ನಿಬೋಧ ಮೇ ॥೧॥

ಪೂರ್ವೇ ಚೈತ್ರರಥಂ ನಾಮ ದಕ್ಷಿಣೇ ನನ್ದನಂ ವನಮ್ ।
ವೈಭ್ರಾಜಂ ಪಶ್ಚಿಮೇ ಶೈಲೇ ಸಾವಿತ್ರಂ ಚೋತ್ತರಾಚಲೇ ॥೨॥

ಐವತ್ತೆರಡನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಇಂತೆಂದನು :—

೧. ಎಲೈ ದ್ವಿಜೋತ್ತಮನಾದ ಕ್ರೌಷ್ಟುಕಿಯೆ! ಮಂದರ ಮುಂತಾದ ನಾಲ್ಕು ಶೈಲಗಳಲ್ಲಿರುವ ನಾಲ್ಕು ವನಗಳನ್ನೂ ಮತ್ತು ನಾಲ್ಕು ಸರೋವರಗಳನ್ನೂ ನಾನು ಹೇಳುವೆನು. ಅವುಗಳನ್ನು ಕೇಳು.

೨. ಪೂರ್ವದಿಕ್ಕಿನ ಪರ್ವತದಲ್ಲಿ ಚೈತ್ರರಥವೆಂಬ ವನ, ದಕ್ಷಿಣದಿಕ್ಕಿನ ಪರ್ವತದಲ್ಲಿ ನಂದನವೆಂಬ ವನ, ಪಶ್ಚಿಮದಿಕ್ಕಿನ ಪರ್ವತದಲ್ಲಿ ವೈಭ್ರಾಜವೆಂಬ ವನ ಮತ್ತು ಉತ್ತರದಿಕ್ಕಿನ ಪರ್ವತದಲ್ಲಿ ಸಾವಿತ್ರವೆಂಬ ವನಗಳು ಶೋಭಿಸುತ್ತಿವೆ.

ಅರುಣೋದಂ ಸರಃ ಪೂರ್ವೇ ಮಾನಸಂ ದಕ್ಷಿಣೇ ತಥಾ ।
ಶೀತೋದಂ ಪಶ್ಚಿಮೇ ಮೇರೋರ್ಮಹಾಭದ್ರಂ ತಥೋತ್ತರೇ ॥೩॥

ಶೀತಾರ್ತಶ್ಚಕ್ರಮುಞ್ಜಶ್ಚ ಕುಲೀನೋಽಶ್ವಶ್ಚ ಕಙ್ಗವಾನ್ ।
ಮಣಿಶೈಲೋಽಥ ವೃಷವಾನ್ಮಹಾನೀಲೀ ಭವಾಚಲಃ ॥೪॥

ಸುಬಿನ್ದುರ್ಮನ್ದರೋ ವೇಣುಸ್ತಾಮಸೋ ನಿಷಧಸ್ತಥಾ ।
ದೇವಶೈಲಶ್ಚ ಪೂರ್ವೇಣ ಮನ್ದರಸ್ಯ ಮಹಾಚಲಃ ॥೫॥

ತ್ರಿಕೂಟಃ ಶಿಖರಾದ್ರಿಶ್ಚ ಕಲಿಙ್ಗೋಽಥ ಪತಙ್ಗಕಃ ।
ರುಚಕಃ ಸಾನುಮಾಂಶ್ಚಾದ್ರಿಸ್ತಾಮ್ರಕೋಽಥ ವಿಶಾಖವಾನ್ ॥೬॥

---

೩. ಹಾಗು ಪೂರ್ವದಲ್ಲಿ ಅರುಣೋದವೆಂಬ ಸರೋವರ, ದಕ್ಷಿಣದಲ್ಲಿ ಮಾನಸವೆಂಬ ಸರೋವರ, ಪಶ್ಚಿಮದಲ್ಲಿ ಶೀತೋದವೆಂಬ ಸರೋವರ ಮತ್ತು ಉತ್ತರದಲ್ಲಿ ಮಹಾಭದ್ರವೆಂಬ ಸರೋವರಗಳು ಪ್ರಖ್ಯಾತವಾಗಿವೆ.

೪. ಮೇರುಗಿರಿಯ ಪೂರ್ವಭಾಗದ ವಿಷ್ಕಂಭ ಪ್ರದೇಶಗಳಲ್ಲಿ ಅನೇಕ ಪರ್ವತಗಳಿವೆ. ಅವುಗಳಲ್ಲಿ ಕೆಲವು ಪರ್ವತಗಳಿಗೆ ಕ್ರಮವಾಗಿ ಶೀತಾರ್ತ, ಚಕ್ರ-ಮುಂಜ, ಕುಲೀನ, ಅಶ್ವ, ಕಂಗವಾನ್, ಮಣಿಶೈಲ, ವೃಷವಾನ್, ಮಹಾನೀಲೀ ಮತ್ತು ಭವಾಚಲವೆಂದು ನಾಮಾಂಕನಗಳಿವೆ.

೫. ಸುಬಿಂದು, ಮಂದರ, ವೇಣು, ತಾಮಸ, ನಿಷಧ ಮತ್ತು ದೇವ-ಶೈಲ—ಎಂಬ ನಾಮಾಂಕಿತಗಳಾದ ಕೆಲವು ಪರ್ವತಗಳು ಮೇರು ಪರ್ವತದ ಪೂರ್ವತೀರದ ಪರ್ವತಶ್ರೇಣಿಯಲ್ಲಿ ಸೇರಿಕೊಂಡಿವೆ.

೬. ಮತ್ತು ದಕ್ಷಿಣದಿಕ್ಕಿನ ಪರ್ವತಶ್ರೇಣಿಯಲ್ಲಿ ಸೇರಿದ ಮತ್ತೆ ಕೆಲವು ಪರ್ವತಗಳಿಗೆ ತ್ರಿಕೂಟ, ಶಿಖರಾದ್ರಿ, ಕಲಿಂಗ, ಪತಂಗಕ, ರುಚಕ, ಸಾನು-ಮಾನ್, ತಾಮ್ರಕ ಮತ್ತು ವಿಶಾಖವಾನ್ ಎಂಬ ನಾಮಾಂಕನಗಳನ್ನು ಅರಿಯ-ಬೇಕು.

ಶ್ವೇತೋದರಃ ಸಮೂಲಶ್ಚ ವಸುಧಾರಶ್ಚ ರತ್ನವಾನ್ ।
ಏಕಶೃಙ್ಗೋ ಮಹಾಶೈಲೋ ರಾಜಶೈಲಃ ಪಿಪಾಠಕಃ ||೭||

ಪಞ್ಚಶೈಲೋಽಥ ಕೈಲಾಸೋ ಹಿಮವಾಂಶ್ಚಾಚಲೋತ್ತಮಃ ।
ಇತ್ಯೇತೇ ದಕ್ಷಿಣೇ ಪಾರ್ಶ್ವೇ ಮೇರೋಃ ಪ್ರೋಕ್ತಾ ಮಹಾಚಲಾಃ ||೮||

ಸುರಕ್ಷಶ್ಶಿಶಿರಾಕ್ಷಶ್ಚ ವೈದೂರ್ಯಃ ಪಿಙ್ಗಲಸ್ತಥಾ ।
ಪಿಞ್ಜರೋಽಥ ಮಹಾಭದ್ರಃ ಸುರಸಃ ಕಪಿಲೋ ಮಧುಃ ||೯||

ಅಞ್ಜನಃ ಕುಕ್ಕುಟಃ ಕೃಷ್ಣಃ ಪಾಣ್ಡುರಶ್ಚಾಚಲೋತ್ತಮಃ ।
ಸಹಸ್ರಶಿಖರಶ್ಚಾದ್ರಿಃ ಪಾರಿಯಾತ್ರಃ ಸಶೃಙ್ಗವಾನ್ ||೧೦||

ಪಶ್ಚಿಮೇನ ತಥಾ ಮೇರೋರ್ವಿಷ್ಕಮ್ಭಾತ್ಪಶ್ಚಿಮಾದ್ಬಹಿಃ ।
ಏತೇಽಚಲಾಃ ಸಮಾಖ್ಯಾತಾಃ ಶೃಣುಷ್ವಾನ್ಯಾಂಸ್ತಥೋತ್ತರಾನ್ ||೧೧||

---

೭. ಶ್ವೇತೋದರ, ಸಮೂಲ, ವಸುಧಾರ, ರತ್ನವಾನ್, ಏಕಶೃಂಗ, ರಾಜಶೈಲ ಮತ್ತು ಪಿಪಾಠಕ ಎಂಬ ನಾಮಾಂಕನಗಳಿಂದ ಕೂಡಿದ ಮಹಾ ಪರ್ವತಗಳು ಮೇರುಗಿರಿಯ ದಕ್ಷಿಣಪಾರ್ಶ್ವದಲ್ಲಿರುವುವು.

೮. ಹಾಗು ಪಂಚಶೈಲ, ಕೈಲಾಸ, ಹಿಮವಾನ್ ಎಂಬ ದೊಡ್ಡ ಪರ್ವತಗಳು ಅದೇ ಪರ್ವತಶ್ರೇಣಿಗೆ ಸೇರಿಕೊಂಡಿವೆ. ಹೀಗೆ ಮೇರುಪರ್ವತದ ದಕ್ಷಿಣ ಪಾರ್ಶ್ವದಲ್ಲಿದ್ದ ಮಹಾಚಲಗಳು ಹೇಳಲ್ಪಟ್ಟಿವೆ.

೯. ಸುರಕ್ಷ, ಶಿಶಿರಾಕ್ಷ, ವೈದೂರ್ಯ, ಪಿಂಗಲ, ಪಿಂಜರ, ಮಹಾಭದ್ರ, ಸುರಸ, ಕಪಿಲ, ಮಧು ಎಂಬ ನಾಮಾಂಕನಗಳನ್ನು ಹೊಂದಿರುವ ಕೆಲವು ಪರ್ವತಗಳು ಮೇರುಗಿರಿಯ ಪಶ್ಚಿಮದಿಕ್ಕನ್ನು ಆಶ್ರಯಿಸಿಕೊಂಡಿವೆ.

೧೦. ಹಾಗು ಅಂಜನ, ಕುಕ್ಕುಟ, ಕೃಷ್ಣ, ಪಾಂಡುರ, ಸಹಸ್ರಶಿಖರ, ಪಾರಿಯಾತ್ರ ಮತ್ತು ಶೃಂಗವಾನ್ ಎಂಬ ಮಹಾಗಿರಿಗಳು ಮೇರುಗಿರಿಯ ಪಶ್ಚಿಮದಿಗ್ಭಾಗವನ್ನು ಅವಲಂಬಿಸಿಕೊಂಡಿವೆ.

೧೧. ಮೇರುಪರ್ವತದ ಪಶ್ಚಿಮದಿಕ್ಕಿನಲ್ಲಿ ಪಶ್ಚಿಮ ವಿಷ್ಕಂಭ ಪ್ರಮಾಣದ ಹೊರದೇಶದಲ್ಲಿ ಈ ಪರ್ವತಗಳಿವೆಯೆಂದು ಹೇಳಲ್ಪಟ್ಟಿರುವುವು. ಇನ್ನು ಉತ್ತರ ದಿಕ್ಕಿನಲ್ಲಿರುವ ಪರ್ವತಗಳನ್ನು ಕೇಳುವವನಾಗು.

ಶಙ್ಖಕೂಟೋಽಥ ವೃಷಭೋ ಹಂಸನಾಭಸ್ತಥಾಚಲಃ ।
ಕಪಿಲೇನ್ದ್ರಸ್ತಥಾ ಶೈಲಃ ಸಾನುಮಾನ್ ನೀಲ ಏವ ಚ ॥೧೨॥

ಸ್ವರ್ಣಶೃಙ್ಗಃ ಶಾತಶೃಙ್ಗಃ ಪುಷ್ಪಕೋ ಮೇಘಪರ್ವತಃ ।
ವಿರಜಾಕ್ಷೋ ವರಾಹಾದ್ರಿರ್ಮಯೂರೋ ಜಾರುಧಿಸ್ತಥಾ ॥೧೩॥

ಇತ್ಯೇತೇ ಕಥಿತಾ ಬ್ರಹ್ಮನ್ಮೇರೋರುತ್ತರತೋ ನಗಾಃ ।
ಏತೇಷಾಂ ಪರ್ವತಾನಾಂ ತು ದ್ರೋಣ್ಯೋಽತೀವ ಮನೋಹರಾಃ ॥೧೪॥

ವನೈರಮಲಪಾನೀಯೈಃ ಸರೋಭಿರುಪಶೋಭಿತಾಃ ।
ತಾಸು ಪುಣ್ಯಕೃತಾಂ ಜನ್ಮ ಮನುಷ್ಯಾಣಾಂ ದ್ವಿಜೋತ್ತಮ ॥೧೫॥

ಏತೇ ಭೌಮಾ ದ್ವಿಜಶ್ರೇಷ್ಠ ಸ್ವರ್ಗಾಃ ಸ್ವರ್ಗಗುಣಾಧಿಕಾಃ ।
ನ ತಾಸು ಪುಣ್ಯಪಾಪಾನಾಮಪೂರ್ವಾಣಾಮುಪಾರ್ಜನಮ್ ॥೧೬॥

---

೧೨. ಶಂಖಕೂಟ, ವೃಷಭ, ಹಂಸನಾಭ, ಕಪಿಲೇಂದ್ರ, ಸಾನುಮಾನ್ ನೀಲ ಎಂಬ ನಾಮಾಂಕಿತಗಳಾದ ಮಹಾಚಲಗಳು ಮೇರುಪರ್ವತದ ಉತ್ತರ ದಿಕ್ಕಿನಲ್ಲಿರುವುವು.

೧೩. ಸ್ವರ್ಣಶೃಂಗ, ಶಾತಶೃಂಗ, ಪುಷ್ಪಕ, ಮೇಘಪರ್ವತ, ವಿರಜಾಕ್ಷ, ವರಾಹಾದ್ರಿ, ಮಯೂರ ಮತ್ತು ಜಾರುಧಿ ಎಂಬುವು ಅದೇ ಪರ್ವತಶ್ರೇಣಿಯಲ್ಲಿ ಸೇರಿದ ಪರ್ವತಗಳಾಗಿವೆ.

೧೪. ಎಲೈ ಬ್ರಹ್ಮರ್ಷಿಯೆ! ಈ ವಿಧವಾಗಿ ನಿನಗೆ ಮೇರುಗಿರಿಯ ಉತ್ತರದಿಗ್ಭಾಗದ ಪರ್ವತಗಳು ಹೇಳಲ್ಪಟ್ಟಿರುವುವು. ಈ ಪರ್ವತಗಳಿಗೆ ಸಂಬಂಧಿಸಿದ ಕಣಿವೆಗಳು ಬಹಳ ಮನೋಹರಗಳಾಗಿವೆ.

೧೫. ಆ ಕಣಿವೆಗಳು ನಿರ್ಮಲವಾದ ಜಲದಿಂದ ಕೂಡಿದ ಸರೋವರಗಳಿಂದಲೂ ಮತ್ತು ಸುಂದರವಾದ ವನಗಳಿಂದಲೂ ಕೂಡಿವೆ. ಎಲೈ ದ್ವಿಜೋತ್ತಮನೆ! ಆ ಪ್ರದೇಶಗಳಲ್ಲಿ ಪುಣ್ಯವನ್ನು ಗಳಿಸಿದ ಮಾನವರು ಜನ್ಮವೆತ್ತುವರು.

೧೬. ಎಲೈ ದ್ವಿಜವರ್ಯನೆ! ಈ ಪ್ರದೇಶಗಳು ಭೂಸ್ವರ್ಗವೆನಿಸುವುವು. ಇವು ಪರಮಾರ್ಥವಾದ ಸ್ವರ್ಗಕ್ಕಿಂತಲೂ ಹೆಚ್ಚು ಗುಣಪೂರ್ಣವಾಗಿವೆ. ಇವುಗಳಲ್ಲಿ ಅಪೂರ್ವವಾದ ಪುಣ್ಯ-ಪಾಪಗಳ ಆರ್ಜನೆಯಾಗುವುದಿಲ್ಲ.

ಪುಣ್ಯೋಪಭೋಗ ಏವೋಕ್ತೋ ದೇವಾನಾಮಪಿ ತಾಸ್ವಪಿ ।
ಶೀತಾರ್ತಾದ್ಯೇಷು ಚೈತೇಷು ಶೈಲೇಷು ದ್ವಿಜಸತ್ತಮ ॥೧೭॥

ವಿದ್ಯಾಧರಾಣಾಂ ಯಕ್ಷಾಣಾಂ ಕಿನ್ನರೋರಗರಕ್ಷಸಾಮ್ ।
ದೇವಾನಾಂ ಚ ಮಹಾವಾಸಾ ಗನ್ಧರ್ವಾಣಾಂ ಚ ಶೋಭನಾಃ॥೧೮॥

ಸಭಾಃ ಪುರ್ಯೋ ಮನೋಜ್ಞಾಶ್ಚ ಸದ್ಯೋಪವನೈರ್ಯುತಾಃ ।
ಸರಾಂಸಿ ಚ ಮನೋಜ್ಞಾನಿ ಸರ್ವರ್ತುಸುಖದೋಽನಿಲಃ ॥೧೯॥

ನ ಚೈತೇಷು ಕ್ಲಮೋ ಬಾಧಾ ವೈಮನಸ್ಯಂ ಚ ಕುತ್ರಚಿತ್ ।
ತದೇತತ್ಪಾರ್ಥಿವಂ ಪದ್ಮಂ ಚತುಷ್ಪತ್ರಂ ಮಯೋದಿತಮ್ ॥೨೦॥

---

೧೭. ಎಲೈ ದ್ವಿಜೋತ್ತಮನೆ! ಶೀತಾರ್ತ ಮುಂತಾದ ಮೇರುಪಾರ್ಶ್ವದ ಪರ್ವತಗಳಲ್ಲಿಯೂ ಮತ್ತು ಆ ಪರ್ವತಗಳ ಕಣಿವೆಗಳಲ್ಲಿಯೂ ದೇವತೆಗಳಿಗೂ ಪುಣ್ಯಮಾತ್ರದ ಉಪಭೋಗವು ಲಭಿಸುವುದೆಂದು ಹೇಳಲ್ಪಟ್ಟದೆ.

೧೮. ಇಲ್ಲಿ ವಿದ್ಯಾಧರ, ಯಕ್ಷ, ಕಿನ್ನರ, ಸರ್ಪ, ರಾಕ್ಷಸ, ಗಂಧರ್ವ, ಮತ್ತು ದೇವತೆಗಳು ವಾಸಮಾಡುವ ಮಂಗಳಕರವಾದ ವಾಸಭೂಮಿಗಳು ಇರುತ್ತವೆ.

೧೯. ಇವುಗಳಲ್ಲಿ ದೇವತೆಗಳಿಗೆ ಭೋಗಾರ್ಹವಾದ ಸಭೆಗಳು, ಸುಂದರ ನಗರಗಳು, ಮನೋಹರವಾದ ಉಪವನಗಳು, ರಮಣೀಯವಾದ ಸರೋವರಗಳು ಮತ್ತು ಎಲ್ಲ ಋತುಗಳಲ್ಲಿಯೂ ಹಿತಕರವಾದ ಗಾಳಿ—ಮುಂತಾದ ಭೋಗ್ಯ ವಸ್ತುಗಳು ತುಂಬಿಕೊಂಡಿರುವುವು.

೨೦. ಈ ಪರ್ವತ-ದ್ರೋಣಿಗಳಲ್ಲಿ ವಾಸಮಾಡುವ ವಿದ್ಯಾಧರ ಮುಂತಾದ ಪ್ರಜೆಗಳಿಗೆ ಯಾವಾಗಲೂ ಆಯಾಸ, ಬಾಧೆ, ಮತ್ತು ವೈಮನಸ್ಯ ಮುಂತಾದುವುಗಳು ಸಂಭವಿಸುವುದಿಲ್ಲ. ಹೀಗೆ ನಾಲ್ಕುದಳಗಳ ಭಾಗದಲ್ಲಿ ವರ್ಷಗಳಿಂದ ಕೂಡಿದ ಪದ್ಮಾಕಾರವುಳ್ಳ ಭೂಮಂಡಲವು ನಿನಗೆ ಹೇಳಲ್ಪಟ್ಟದೆ.

ಭದ್ರಾಶ್ವಭಾರತಾದ್ಯಾನಿ ಪತ್ರಾಣ್ಯಸ್ಯ ಚತುರ್ದಿಶಮ್ ।
ಭಾರತಂ ನಾಮ ಯದ್ವರ್ಷಂ ದಕ್ಷಿಣೇನ ಮಯೋದಿತಮ್ ॥೨೧॥

ತತ್ಕರ್ಮಭೂಮಿರ್ನಾನ್ಯತ್ರ ಸಮ್ಪ್ರಾಪ್ತಿಃ ಪುಣ್ಯಪಾಪಯೋಃ ।
ಏತತ್ಪ್ರಧಾನಂ ವಿಜ್ಞೇಯಂ ಯತ್ರ ಸರ್ವಂ ಪ್ರತಿಷ್ಠಿತಮ್ ॥೨೨॥

ಅಸ್ಮಾತ್ಸ್ವರ್ಗಾಪವರ್ಗೌ ಚ ಮಾನುಷ್ಯನಾರಕಾವಪಿ ।
ತಿರ್ಯಕ್ತ್ವಮಥವಾಪ್ಯನ್ಯನ್ನರಃ ಪ್ರಾಪ್ನೋತಿ ವೈ ದ್ವಿಜ ॥೨೩॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಭುವನಕೋಶೇ
ಜಮ್ಬೂದ್ವೀಪಾನ್ತರ್ಗತ ಖಣ್ಡವರ್ಣನಂ ನಾಮ
ದ್ವಿಪಞ್ಚಾಶತ್ತಮೋಽಧ್ಯಾಯಃ

---

೨೧. ಈ ಭೂಮಿಯೆಂಬ ತಾವರೆಹೂವಿಗೆ ಭದ್ರಾಶ್ವ-ಭಾರತ ಮುಂತಾದುವುಗಳು ನಾಲ್ಕುದಿಕ್ಕುಗಳಲ್ಲಿರುವ ದಳಗಳಾಗಿವೆ. ನನ್ನಿಂದ ಹಿಂದೆ ಹೇಳಲ್ಪಟ್ಟಿರುವ ಭಾರತ ಎಂಬ ವರ್ಷವು ದಕ್ಷಿಣದಳದಂತೆಯಿದೆ.

೨೨. ಭಾರತವರ್ಷವು ಕರ್ಮಾನುಷ್ಠಾನಕ್ಕೆ ಯೋಗ್ಯವಾದುದರಿಂದ ಕರ್ಮಭೂಮಿಯೆನಿಸಿದೆ. ಮಿಕ್ಕ ವರ್ಷ-ಖಂಡಗಳಲ್ಲಿ ಪುಣ್ಯ-ಪಾಪಗಳ ಆರ್ಜನೆಯಾಗುವುದಿಲ್ಲ. ಹೀಗೆ ಯಾವ ವರ್ಷದಲ್ಲಿ ಎಲ್ಲವೂ ನೆಲೆಸಿರುವುದೋ ಅಂತಹ ಭಾರತವರ್ಷವು ಸರ್ವೋತ್ತಮವಾದುದು.

೨೩. ಎಲೈ ದ್ವಿಜೋತ್ತಮನೆ! ಮಾನವನು ಈ ಭಾರತವರ್ಷದಲ್ಲಿ ವಾಸಮಾಡುವುದರಿಂದಲೇ ಸ್ವರ್ಗ, ಮೋಕ್ಷ, ಮನುಷ್ಯತ್ವ, ನಾರಕಜನ್ಮ, ಮೂಕಪ್ರಾಣಿಜನ್ಮ, ಅಥವಾ ಇನ್ನಾವುದನ್ನಾದರೂ ಹೊಂದಬೇಕಾಗಿದೆ.

ಮಾರ್ಕಂಡೇಯ ಮಹಾಪುರಾಣದಲ್ಲಿ ಐವತ್ತೆರಡನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ತ್ರಿಪಂಚಾಶತ್ತಮೋಽಧ್ಯಾಯಃ

(ಗಙ್ಗಾವತಾರವರ್ಣನಮ್)

ಮಾರ್ಕಣ್ಡೇಯ ಉವಾಚ :—

ಧರಾಧಾರಂ ಜಗದ್ಯೋನೇಃ ಪದಂ ನಾರಾಯಣಸ್ಯ ಚ ।
ತತಃ ಪ್ರವೃತ್ತಾ ಯಾ ದೇವೀ ಗಙ್ಗಾ ತ್ರಿಪಥಗಾಮಿನೀ ॥೧॥

ಸಾ ಪ್ರವಿಶ್ಯ ಸುಧಾಯೋನಿಂ ಸೋಮಮಾಧಾರಮಮ್ಭಸಾಮ್ ।
ತತಃ ಸಂವರ್ಧಮಾನಾರ್ಕರಶ್ಮಿಸಙ್ಗತಿಪಾವನೀ ॥೨॥

ಐವತ್ತಮೂರನೆಯ ಅಧ್ಯಾಯ

ಮಾರ್ಕಂಡೇಯ ಮುನಿಯು ಹೇಳಿದನು :—

೧. ಜಗತ್ತಿಗೆ ಕಾರಣನಾದ ಶ್ರೀಮನ್ನಾರಾಯಣನ ಪಾದಪದ್ಮವು ಭೂಮಿಯಸ್ಥಿತಿಗೆ ಆಧಾರವಾಗಿದೆ. ಆ ಪಾದಪದ್ಮದಿಂದ ಸ್ವರ್ಗ-ಮರ್ತ್ಯ-ಪಾತಾಲಗಳಲ್ಲಿ ಪ್ರವಹಿಸುವ ದೇವಿಯಾದ ಗಂಗೆಯು ಹುಟ್ಟಿರುವಳು.

೨. ಆ ಗಂಗೆಯು ಹುಟ್ಟಿದ ಕೂಡಲೆ ಅಮೃತಕ್ಕೆ ಕಾರಣನೂ, ಜಲಗಳಿಗೆ ಆಧಾರನೂ ಆದ ಚಂದ್ರನನ್ನು ಪ್ರವೇಶಿಸಿ ಮುಂದೆ ವೃದ್ಧಿಹೊಂದುತ್ತ ಸೂರ್ಯರಶ್ಮಿಗಳ ಸಂಪರ್ಕದಿಂದ ಪಾವನಗಳಾಗಿ ಮುಂದೆ ಮುಂದೆ ಹರಿಯಿತು.

ಪಪಾತ ಮೇರುಪೃಷ್ಠೇ ಚ ಸಾ ಚತುರ್ಧಾ ತತೋ ಯಯೌ ।
ಮೇರುಕೂಟತಟಾನ್ತೇಭ್ಯೋ ನಿಪತನ್ತೀ ವಿವರ್ತಿತಾ ॥೩॥

ವಿಕೀರ್ಯಮಾಣಸಲಿಲಾ ನಿರಾಲಮ್ಬಾ ಪಪಾತ ಸಾ ।
ಮನ್ದರಾದ್ಯೇಷು ಪಾದೇಷು ಪ್ರವಿಭಕ್ತೋದಕಾ ಸಮಮ್ ॥೪॥

ಚತುರ್ಷ್ವಪಿ ಪಪಾತಾಮ್ಬುವಿಭಿನ್ನಾಙ್ಘ್ರಿಶಿಲೋಚ್ಚಯಾ ।
ಪೂರ್ವಾ ಸೀತೇತಿ ವಿಖ್ಯಾತಾ ಯಯೌ ಚೈತ್ರರಥಂ ವನಮ್ ॥೫॥

ತತ್ಪ್ಲಾವಯಿತ್ವಾ ಚ ಯಯೌ ವರುಣೋದಂ ಸರೋವರಮ್ ।
ಶೀತಾನ್ತಂ ಚ ಗಿರಿಂ ತಸ್ಮಾತ್ತತಶ್ಚಾನ್ಯಾನ್ಗಿರೀನ್ಕ್ರಮಾತ್ ॥೬॥

ಗತ್ವಾ ಭುವಂ ಸಮಾಸಾದ್ಯ ಭದ್ರಾಶ್ವೇ ಜಲಧಿಂ ಗತಾ ।
ತಥೈವಾಲಕನನ್ದಾಖ್ಯಾ ದಕ್ಷಿಣೇ ಗನ್ಧಮಾದನೇ ॥೭॥

---

೩. ಹಾಗೆಯೇ ಬಂದು ಮೇರುಪರ್ವತದ ತಪ್ಪಲಿನಲ್ಲಿ ಬಿದ್ದಿತು. ಅಲ್ಲಿಂದ ನಾಲ್ಕುಭಾಗವಾಗಿ ಹರಿದುಹೋಯಿತು. ಹಾಗು ಮೇರುಗಿರಿಯ ಶಿಖರ ಭಾಗದ ತಪ್ಪಲುಗಳಿಂದ ಕೆಳಗೆ ಬೀಳುತ್ತ ಅಲ್ಲಲ್ಲಿ ಹೊರಳಾಡಿದಂತೆ ಪ್ರವಹಿಸಿತು.

೪. ಮತ್ತು ಎರಚಲ್ಪಟ್ಟಂತೆ ಆದ ನೀರುಳ್ಳದ್ದಾಗಿ ಆಲಂಬನವಿಲ್ಲದೆ ಮಂದರ ಮುಂತಾದ ಉಪಪರ್ವತಗಳಲ್ಲಿ ವಿಭಾಗವಾಗಿ ಹರಿಯುವ ನೀರಿನ ಪ್ರವಾಹದಿಂದ ಕೂಡಿ ಕೆಳಗೆ ಧುಮುಕಿತು.

೫. ಹಾಗೆ ಬೀಳುವ ಜಲವೇಗದಿಂದ ಉಪಪರ್ವತಗಳ ಶಿಖರವನ್ನು ಭೇದಿಸುತ್ತ ನಾಲ್ಕು ದಿಕ್ಕುಗಳಲ್ಲಿ ಬಿತ್ತು. ಇವುಗಳಲ್ಲಿ ಸೀತಾ ಎಂದು ಖ್ಯಾತಿ-ಪಡೆದ ಪ್ರವಾಹವು ಚೈತ್ರರಥವೆಂಬ ವನದಲ್ಲಿ ಹರಿಯಿತು.

೬. ಚೈತ್ರರಥವನವನ್ನು ಜಲಮಯವನ್ನಾಗಿ ಮಾಡಿ ವರುಣೋದ ಸರೋವರಕ್ಕೆ ಹೋಯಿತು. ಮುಂದೆ ಶೀತಾರ್ತವೆಂಬ ಗಿರಿಯನ್ನು ಹೊಂದಿ ಅಲ್ಲಿಂದ ಕ್ರಮವಾಗಿ ಎಲ್ಲ ಪರ್ವತಗಳಲ್ಲಿಯೂ ಹರಿಯಿತು.

೭. ಹಾಗೆಯೇ ಭೂಮಿಯನ್ನು ಹೊಂದಿ ಭದ್ರಾಶ್ವವರ್ಷದಲ್ಲಿ ಸಮುದ್ರಕ್ಕೆ ಸೇರಿತು. ದಕ್ಷಿಣದಿಕ್ಕಿನಲ್ಲಿ ಪ್ರವಹಿಸಿದ ಪ್ರವಾಹವು ಅಲಕನಂದಾ ಎಂದು ಪ್ರಸಿದ್ಧವಾಯಿತು. ಅದು ಗಂಧಮಾದನಪರ್ವತದಲ್ಲಿ ಹರಿಯಿತು.

ಮೇರುಪಾದೇ ವನಂ ಗತ್ವಾ ನನ್ದನಂ ದೇವನನ್ದನಮ್ ।
ಮಾನಸಂ ಚ ಮಹಾವೇಗಾತ್ಪ್ಲಾವಯಿತ್ವಾ ಸರೋವರಮ್ ||೮||

ಆಸಾದ್ಯ ಶೈಲರಾಜಾನಂ ರಮ್ಯಂ ತ್ರಿಶಿಖರಂ ಗತಾ ।
ತಸ್ಮಾಚ್ಚ ಪರ್ವತಾನ್ಸರ್ವಾನ್ದಕ್ಷಿಣೇ ಯೇ ಕ್ರಮೋದಿತಾಃ ||೯||

ತಾನ್ಪ್ಲಾವಯಿತ್ವಾ ಸಮ್ಪ್ರಾಪ್ತಾ ಹಿಮವನ್ತಂ ಮಹಾಗಿರಿಮ್ ।
ದಧಾರ ತತ್ರ ತಾಂ ಶಮ್ಭುರ್ನ ಮುಮೋಚ ವೃಷಧ್ವಜಃ ||೧೦||

ಭಗೀರಥೇನೋಪವಾಸೈಃ ಸ್ತುತ್ಯಾ ಚಾರಾಧಿತೋ ವಿಭುಃ ।
ತತ್ರ ಮುಕ್ತಾ ಚ ಶರ್ವೇಣ ಸಪ್ತಧಾ ದಕ್ಷಿಣೋದಧಿಮ್ ||೧೧||

---

೮. ಆ ಅಲಕನಂದಾ ನದಿಯು ಮೇರುಗಿರಿಯ ಪಾದದಲ್ಲಿ ಬಂದು ದೇವತೆಗಳಿಗೆ ಆನಂದವನ್ನು ಕೊಡುವ ನಂದನವನವನ್ನು ಪಾವನವನ್ನಾಗಿಮಾಡಿ ಬಲುವೇಗದಿಂದ ಮಾನಸಸರೋವರವನ್ನು ತುಂಬಿಸಿತು.

೯. ಮತ್ತು ಶೈಲರಾಜನೆನಿಸಿರುವ ರಮ್ಯವಾದ ತ್ರಿಶಿಖರಪರ್ವತಕ್ಕೆ ಬಂದು ಅಲ್ಲಿಂದ ಹೊರಟು ಹಿಂದೆ ನನ್ನಿಂದ ಹೇಳಲ್ಪಟ್ಟಿರುವ ದಕ್ಷಿಣದಿಕ್ಕಿನ ಪರ್ವತಶ್ರೇಣಿಯಲ್ಲೆಲ್ಲ ಪ್ರವಹಿಸಿತು.

೧೦. ಹೀಗೆ ಆ ಪರ್ವತಗಳನ್ನು ಜಲಮಯವನ್ನಾಗಿ ಪಾವನಗೊಳಿಸುತ್ತ ಮಹಾಗಿರಿಯಾದ ಹಿಮಾಚಲಪರ್ವತಕ್ಕೆ ಬಂದಿತು. ಅಲ್ಲಿ ವೃಷಭಚಿಹ್ನದ ಧ್ವಜವುಳ್ಳ ಈಶ್ವರನು ಸ್ತಂಭನಮಾಡಿದನು. ಮುಂದೆ ಚಲಿಸಲು ಬಿಡಲಿಲ್ಲ.

೧೧. ಆಗ ಭಗೀರಥರಾಜನಿಂದ ಸರ್ವೇಶ್ವರನಾದ ಶಂಕರನು ಉಪವಾಸ-ಸ್ತುತಿಪಾಠ ಮುಂತಾದ ಬಗೆಗಳಿಂದ ಆರಾಧಿಸಲ್ಪಟ್ಟನು. ತರುವಾಯ ಪ್ರಸನ್ನನಾದ ಈಶ್ವರನಿಂದ ಬಿಡಲ್ಪಟ್ಟ ನದಿಯು ಏಳುಭಾಗವಾಗಿ ಸಮುದ್ರಕ್ಕೆ ಸಂಗಮವಾಯಿತು.

ಪ್ರವಿವೇಶ ತ್ರಿಧಾ ಪ್ರಾಚ್ಯಾಂ ಪ್ಲಾವಯನ್ತೀ ಮಹಾನದೀ ।
ಭಗೀರಥರಥಸ್ಯಾನು ಸ್ರೋತಸೈಕೇನ ದಕ್ಷಿಣಾಮ್ ॥೧೨॥

ತಥೈವ ಪಶ್ಚಿಮೇ ಪಾದೇ ವಿಪುಲೇ ಸಾ ಮಹಾನದೀ ।
ಸುಚಕ್ಷುರಿತಿ ವಿಖ್ಯಾತಾ ವೈಭ್ರಾಜಂ ಸಾ ವನಂ ಯಯೌ ॥೧೩॥

ಶೀತೋದಂ ಚ ಸರಸ್ತಸ್ಮಾತ್ಪ್ಲಾವಯನ್ತೀ ಮಹಾನದೀ ।
ತಸ್ಮಾತ್ಕ್ರಮೇಣ ಚಾದ್ರೀಣಾಂ ಶಿಖರೇಷು ನಿಪತ್ಯ ಸಾ ॥೧೪॥

ಸುಚಕ್ಷುಃ ಪರ್ವತಂ ಪ್ರಾಪ್ತಾ ತತಶ್ಚ ತ್ರಿಶಿಖಂ ಗತಾ ।
ಕೇತುಮಾಲಂ ಸಮಾಸಾದ್ಯ ಪ್ರವಿಷ್ಟಾ ದಕ್ಷಿಣೋದಧಿಮ್ ॥೧೫॥

ಗತ್ವೋತ್ತರಾಂ ದಿಶಂ ಗಙ್ಗಾ ದಿವ್ಯಾ ಸಾ ಚ ಮಹಾನದೀ ।
ತಸ್ಮಾಚ್ಚ ಋಷಭಾದೀಂಶ್ಚ ಕ್ರಮಾದುತ್ತರಜಾನ್ನಗಾನ್ ॥೧೬॥

---

೧೨. ಅವುಗಳಲ್ಲಿ ಆ ಮಹಾನದಿಯ ಮೂರು ಪ್ರವಾಹಗಳು ಆಯಾಯ ಪ್ರದೇಶಗಳನ್ನು ವ್ಯಾಪಿಸುತ್ತ ಪೂರ್ವದಿಕ್ಕಿಗೆ ಪ್ರವಹಿಸಿದುವು. ಒಂದು ಪ್ರವಾಹವು ಭಗೀರಥರಾಜನನ್ನು ಹಿಂಬಾಲಿಸುತ್ತ ದಕ್ಷಿಣದಿಕ್ಕಿಗೆ ಹರಿಯಿತು.

೧೩. ಹಾಗೆಯೇ ವಿಸ್ತಾರವಾದ ಪಶ್ಚಿಮದಿಕ್ಕಿನ ಪರ್ವತಪಾದದಲ್ಲಿ ಹರಿದಿರುವ ನದಿಯು ಸುಚಕ್ಷು ಎಂದು ಖ್ಯಾತಿಯನ್ನು ಹೊಂದಿತು. ಅದು ವೈಭ್ರಾಜವೆಂಬ ವನವನ್ನು ಪ್ರವೇಶಿಸಿತು.

೧೪. ಆ ಮಹಾನದಿಯು ಶೀತೋದಸರೋವರವನ್ನು ತುಂಬಿಸಿ ಪಾವನಗೊಳಿಸಿ ಅಲ್ಲಿಂದ ಮುಂದೆ ಕ್ರಮವಾಗಿ ಹಿಂದೆ ಹೇಳಿರುವ ಗಿರಿಗಳ ಶಿಖರಗಳಲ್ಲಿ ಬಿದ್ದು ಪ್ರವಹಿಸಿತು.

೧೫. ಆ ಸುಚಕ್ಷು ನದಿಯು ಅನೇಕ ಪರ್ವತಗಳನ್ನು ಹೊಕ್ಕು ಹಾಗೆಯೇ ತ್ರಿಶಿಖಗಿರಿಯನ್ನು ಹೊಂದಿತು. ಕಡೆಯಲ್ಲಿ ಕೇತುಮಾಲ ವರ್ಷದಲ್ಲಿ ಪ್ರವಹಿಸುತ್ತ ದಕ್ಷಿಣ ಸಮುದ್ರವನ್ನು ಸೇರಿತು.

೧೬. ದಿವ್ಯವೂ ಮಹಾನದಿಯೂ ಆದ ಗಂಗೆಯು ಉತ್ತರದಿಕ್ಕನ್ನು ಹೊಂದಿ ಅಲ್ಲಿಂದ ಕ್ರಮವಾಗಿ ಋಷಭ ಮುಂತಾದ ಉತ್ತರದಿಕ್ಕಿನ ಶ್ರೇಣಿಯ ಪರ್ವತಗಳನ್ನು ಪ್ರವೇಶಮಾಡಿತು.

ಸುಪಾರ್ಶ್ವಂ ತು ತಥೈವಾದ್ರಿಂ ಮೇರುಪಾದಂ ಹಿ ಸಾ ಗತಾ ।
ಭದ್ರಸೋಮೇತಿ ವಿಖ್ಯಾತಾ ಸಾ ಯಯೌ ಸವಿತುರ್ವನಮ್ ॥೧೭॥

ತತ್ಪಾವಯನ್ತೀ ಸಂಪ್ರಾಪ್ತಾ ಮಹಾಭದ್ರಂ ಸರೋವರಮ್ ।
ತತಶ್ಚ ಶಙ್ಖಕೂಟಂ ಸಾ ಪ್ರಯಾತಾ ವೈ ಮಹಾನದೀ ॥೧೮॥

ತಸ್ಮಾಚ್ಚ ವೃಷಭಾದೀನ್ಸಾ ಕ್ರಮಾತ್ಪ್ರಾಪ್ಯ ಶಿಲೋಚ್ಚಯಾನ್ ।
ಮಹಾರ್ಣವಮನುಪ್ರಾಪ್ತಾ ಪ್ಲಾವಯಿತ್ವೋತ್ತರಾನ್ಕುರೂನ್ ॥೧೯॥

ಏವಮೇಷಾ ಮಯಾ ಗಙ್ಗಾ ಕಥಿತಾ ತೇ ದ್ವಿಜರ್ಷಭ ।
ಜಮ್ಬೂದ್ವೀಪನಿವೇಶಶ್ಚ ವರ್ಷಾಣಿ ಚ ಯಥಾತಥಮ್ ॥೨೦॥

ವಸನ್ತಿ ತೇಷು ಸರ್ವೇಷು ಪ್ರಜಾಃ ಕಿಮ್ಪುರುಷಾದಿಷು ।
ಸುಖಪ್ರಾಯಾ ನಿರಾತಙ್ಕಾ ನ್ಯೂನತೋತ್ಕರ್ಷವರ್ಜಿತಾಃ ॥೨೧॥

---

೧೭. ಉತ್ತರದಿಕ್ಕಿನ ಪ್ರವಾಹವು ಭದ್ರಸೋಮಾ ಎಂಬ ನಾಮಾಂಕಿತವಾದ ನದಿಯಾಗಿ ಆ ನದಿಯು ಮೇರುಪರ್ವತದ ಉಪಪರ್ವತವಾದ ಸುಪಾರ್ಶ್ವ ಅದ್ರಿಯನ್ನು ಹೊಕ್ಕು ಅಲ್ಲಿಂದ ಮುಂದೆ ಸಾವಿತ್ರವನವನ್ನು ಪ್ರವೇಶಿಸಿತು.

೧೮. ಭದ್ರಸೋಮಾನದಿಯು ಸಾವಿತ್ರವನವನ್ನು ಪಾವನಗೊಳಿಸುತ್ತ ಮಹಾಭದ್ರಸರೋವರವನ್ನು ಪ್ರವೇಶಮಾಡಿತು. ತರುವಾಯ ಆ ಮಹಾನದಿಯು ಶಂಖಕೂಟಪರ್ವತವನ್ನು ಹೊಂದಿತು.

೧೯. ಆ ಪರ್ವತದಿಂದ ಕ್ರಮವಾಗಿ ಋಷಭ ಮುಂತಾದ ಪರ್ವತಗಳ ಸಾಲನ್ನು ಹೊಂದಿ ಉತ್ತರಕುರುಕ್ಷೇತ್ರ ಪ್ರದೇಶದಲ್ಲಿ ಹರಿಯುತ್ತ ಬಂದು ಮಹಾಸಮುದ್ರದಲ್ಲಿ ಸೇರಿತು.

೨೦. ದ್ವಿಜೋತ್ತಮನೇ! ಈ ರೀತಿಯಾಗಿ ನಿನಗೆ ನನ್ನಿಂದ ಗಂಗಾವತಾರವು ಹೇಳಲ್ಪಟ್ಟಿರುವುದು ಮತ್ತು ಜಂಬುದ್ವೀಪದ ಸನ್ನಿವೇಶ, ಅಲ್ಲಿರುವ ವರ್ಷಗಳ ವಿಭಾಗ—ಇವುಗಳು ಯಥಾವತ್ತಾಗಿ ಹೇಳಲ್ಪಟ್ಟವೆ.

೨೧. ಕಿಂಪುರುಷ ಮುಂತಾದ ಎಲ್ಲ ವರ್ಷಖಂಡಗಳಲ್ಲಿ ವಾಸಮಾಡುವ ಪ್ರಜೆಗಳು ಸುಖಮಯರೂ, ಆತಂಕವಿಲ್ಲದವರೂ ಮತ್ತು ಉತ್ಕರ್ಷ-ಅಪಕರ್ಷಗಳಿಲ್ಲದವರೂ ಆಗಿರುವರು.

ನವಸ್ವಪಿ ಚ ವರ್ಷೇಷು ಸಪ್ತ ಸಪ್ತ ಕುಲಾಚಲಾಃ ।
ಏಕೈಕಸ್ಮಿಂಸ್ತಥಾ ದೇಶೇ ನದ್ಯಶ್ಚಾದ್ರಿವಿನಿಸ್ಸೃತಾಃ ॥೨೨॥

ಯಾನಿ ಕಿಂಪುರುಷಾದ್ಯಾನಿ ವರ್ಷಾಣ್ಯಷ್ಟೌ ದ್ವಿಜೋತ್ತಮ ।
ತೇಷೂದ್ಭಿಜ್ಜಾನಿ ತೋಯಾನಿ ನೈವಂ ವಾರ್ಯತ್ರ ಭಾರತೇ ॥೨೩॥

ವಾರ್ಕ್ಷೀ ಸ್ವಾಭಾವಿಕೀ ದೇಶ್ಯಾ ತೋಯೋತ್ಥಾ ಮಾನಸೀ ತಥಾ ।
ಕರ್ಮಜಾ ಚ ನೃಣಾಂ ಸಿದ್ಧಿರ್ವರ್ಷೇಷ್ವೇತೇಷು ಚಾಷ್ಟಸು ॥೨೪॥

ಕಾಮಪ್ರದೇಭ್ಯೋ ವೃಕ್ಷೇಭ್ಯೋ ವಾರ್ಕ್ಷೀ ಸಿದ್ಧಿಃ ಸ್ವಭಾವಜಾ ।
ಸ್ವಾಭಾವಿಕೀ ಸಮಾಖ್ಯಾತಾ ತೃಪ್ತಿರ್ದೇಶ್ಯಾ ಚ ದೈಶಿಕೀ ॥೨೫॥

---

೨೨. ಜಂಬುದ್ವೀಪದಲ್ಲಿರುವ ಒಂಭತ್ತು ವರ್ಷಗಳಲ್ಲಿಯೂ ಏಳೇಳು ಕುಲಪರ್ವತಗಳಿರುವುವು. ಮತ್ತು ಒಂದೊಂದು ಸ್ಥಳದಲ್ಲಿಯೂ ಪರ್ವತಗಳಲ್ಲಿ ಹುಟ್ಟುವ ಅನೇಕ ನದಿಗಳು ಹರಿಯುವುವು.

೨೩. ಎಲೈ ದ್ವಿಜಶ್ರೇಷ್ಠನೆ! ಕಿಂಪುರುಷ ಮುಂತಾದ ವರ್ಷಗಳು ಹಿಂದೆ ನನ್ನಿಂದ ಹೇಳಲ್ಪಟ್ಟವೆಯಷ್ಟೆ. ಅವುಗಳಲ್ಲಿ ಜಲವು ಭೂಮಿಯನ್ನು ಭೇದಿಸಿ ಹುಟ್ಟುವುದು. ಆದರೆ ಭಾರತವರ್ಷದಲ್ಲಿ ಹಾಗೆ ಜಲವು ಉತ್ಪತ್ತಿಯಾಗುವುದಿಲ್ಲ.

೨೪. ಕಿಂಪುರುಷ ಮುಂತಾದ ಎಂಟು ವರ್ಷಗಳಲ್ಲಿ ಪ್ರಜೆಗಳಿಗೆ ವೃಕ್ಷಗಳಿಂದ ಲಭಿಸುವ ಸಿದ್ಧಿ, ಸ್ವಾಭಾವಿಕಸಿದ್ಧಿ, ದೇಶ್ಯಸಿದ್ಧಿ, ಜಲಸಿದ್ಧಿ, ಕರ್ಮಜಸಿದ್ಧಿ ಮತ್ತು ಮಾನಸಸಿದ್ಧಿ ಎಂಬ ಆರು ಸಿದ್ಧಿಗಳು ಇರುತ್ತವೆ.

೨೫. ಇಷ್ಟಾರ್ಥಗಳನ್ನು ಕೊಡುವ ವೃಕ್ಷಗಳಿಂದ ಲಭಿಸುವ ಸಿದ್ಧಿಯು ವಾರ್ಕ್ಷೀ ಸಿದ್ಧಿಯು, ಸ್ವಭಾವಲಭ್ಯವಾದ ಸಿದ್ಧಿಯು ಸ್ವಾಭಾವಿಕಸಿದ್ಧಿಯು. ಆಯಾಯ ದೇಶಮಹಿಮೆಯಿಂದ ಲಭಿಸುವ ಸಿದ್ಧಿಯು ದೇಶ್ಯಸಿದ್ಧಿಯೆಂದು ಕರೆಯಲ್ಪಡುವುದು.

ಅಪಾಂ ಸೌಕ್ಷ್ಮ್ಯಾಚ್ಚ ತೋಯೋತ್ಥಾ ಧ್ಯಾನೋಪೇತಾ ಚ ಮಾನಸೀ ।
ಉಪಾಸನಾದಿ ಕಾರ್ಯಾತ್ತು ಕರ್ಮಜಾ ಸಾಪ್ಯುದಾಹೃತಾ ॥೨೬॥

ನ ಚೈತೇಷು ಯುಗಾವಸ್ಥಾ ನಾಧಯೋ ವ್ಯಾಧಯೋ ನ ಚ ।
ಪುಣ್ಯಾಪುಣ್ಯಸಮಾರಮ್ಭಾ ನೈವ ತೇಷು ದ್ವಿಜೋತ್ತಮ ॥೨೭॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ಗಙ್ಗಾವತಾರ ವರ್ಣನಂ ನಾಮ ತ್ರಿಪಞ್ಚಾಶತ್ತಮೋಽಧ್ಯಾಯಃ

---

೨೬. ಹಾಗು ಜಲದ ಸೂಕ್ಷ್ಮತೆಯಿಂದ ಬೇಕಾದುದನ್ನು ಜಲದಿಂದಲೇ ಹೊಂದುವ ಸಿದ್ಧಿಯು ಜಲಸಿದ್ಧಿಯೆನಿಸುವುದು. ಧ್ಯಾನದಿಂದ ಲಭಿಸುವ ಸಿದ್ಧಿಯು ಮಾನಸೀಸಿದ್ಧಿಯು. ಮತ್ತು ಉಪಾಸನ ಮುಂತಾದ ಕರ್ಮಾನುಷ್ಠಾನದಿಂದ ಲಭಿಸುವ ಸಿದ್ಧಿಯು ಕರ್ಮಜಸಿದ್ಧಿಯು.

೨೭. ಎಲೈ ದ್ವಿಜವರ್ಯನೇ! ಆ ಪರ್ವತ-ದ್ರೋಣಿಗಳಲ್ಲಿ ಯುಗ-ನಿಮಿತ್ತದಿಂದಾಗುವ ಅವಸ್ಥೆಗಳು, ದೇಹವ್ಯಾಧಿ ಮನೋವ್ಯಾಧಿಗಳು ಅಥವಾ ಪುಣ್ಯ–ಪಾಪಗಳ ಉದ್ಯಮಗಳು ಇವಾವುದೂ ಇಲ್ಲ.

ಮಾರ್ಕಂಡೇಯ ಮಹಾಪುರಾಣದಲ್ಲಿ ಐವತ್ತಮೂರನೆಯ ಅಧ್ಯಾಯವು ಮುಗಿದುದು.

|| ಓಂ ಶ್ರೀ ದುರ್ಗಾಯೈ ನಮಃ ||

ಮಾರ್ಕಂಡೇಯ ಪುರಾಣಂ

ಚತುಷ್ಪಞ್ಚಾಶತ್ತಮೋಽಧ್ಯಾಯಃ

(ಭಾರತವರ್ಷನದ್ಯಾದಿವರ್ಣನಮ್)

ಕ್ರೌಷ್ಟುಕಿರುವಾಚ :—

ಭಗವನ್ಕಥಿತಂ ತ್ವೇತಜ್ಜಮ್ಬೂದ್ವೀಪಂ ಸಮಾಸತಃ ।
ಯದೇತದ್ಭವತಾ ಪ್ರೋಕ್ತಂ ಕರ್ಮ ನಾನ್ಯತ್ರ ಪುಣ್ಯದಮ್ ॥೧॥

ಪಾಪಾಯ ವಾ ಮಹಾಭಾಗ ವರ್ಜಯಿತ್ವಾ ತು ಭಾರತಮ್ ।
ಇತಃ ಸ್ವರ್ಗಶ್ಚ ಮೋಕ್ಷಶ್ಚ ಮಧ್ಯಶ್ಚಾನ್ತಶ್ಚ ಗಮ್ಯತೇ ॥೨॥

ಐವತ್ತನಾಲ್ಕನೆಯ ಅಧ್ಯಾಯ

ಕ್ರೌಷ್ಟುಕಿಯು ಇಂತೆಂದನು :—

೧. ಭಗವಂತನಾದ ಮಾರ್ಕಂಡೇಯಮುನಿಯೇ! ಜಂಬೂದ್ವೀಪವು ನಿನ್ನಿಂದ ಸಂಗ್ರಹವಾಗಿ ನನಗೆ ಹೇಳಲ್ಪಟ್ಟಿದೆ. ಹಾಗು ಜಂಬೂದ್ವೀಪವನ್ನು ಬಿಟ್ಟು ಮಿಕ್ಕ ದ್ವೀಪ-ವರ್ಷಗಳಲ್ಲಿ ಪುಣ್ಯಸಂಪಾದಕವಾದ ಕರ್ಮವಿಲ್ಲವೆಂದು ಹೇಳಲ್ಪಟ್ಟಿತು.

೨. ಮಹಾಶಯನೆ! ಭಾರತವರ್ಷವನ್ನು ಬಿಟ್ಟು ಮಿಕ್ಕ ಯಾವ ವರ್ಷಗಳಲ್ಲಿಯೂ ಪುಣ್ಯ-ಪಾಪಗಳಿಗೆ ಸಾಧನವಾದ ಕರ್ಮವಿರುವುದಿಲ್ಲ. ಈ ಭಾರತವರ್ಷದಿಂದ ಮಾತ್ರ ಸ್ವರ್ಗ, ಮೋಕ್ಷ, ಮಧ್ಯಮಲೋಕ, ಅಂತಲೋಕ-ಗಳು ಮುಂತಾದ ಫಲಗಳು ಲಭಿಸುವುವು.

ನ ಖಲ್ವನ್ಯತ್ರ ಮರ್ತ್ಯಾನಾಂ ಭೂಮೌ ಕರ್ಮ ವಿಧೀಯತೇ ।
ತಸ್ಮಾದ್ವಿಸ್ತರಶೋ ಬ್ರಹ್ಮನ್ಮಮೈತದ್ಭಾರತಂ ವದ ॥೩॥

ಯೇ ಚಾಸ್ಯ ಭೇದಾ ಯಾವನ್ತ್ಯೋ ಯಥಾವತ್ಸ್ಥಿತಿರೇವ ಚ ।
ವರ್ಷೋಽಯಂ ದ್ವಿಜಶಾರ್ದೂಲ ಯೇ ಚಾಸ್ಮಿನ್ದೇಶಪರ್ವತಾಃ ॥೪॥

ಮಾರ್ಕಣ್ಡೇಯ ಉವಾಚ :—

ಭಾರತಸ್ಯಾಸ್ಯ ವರ್ಷಸ್ಯ ನವ ಭೇದಾನ್ನಿಬೋಧ ಮೇ ।
ಸಮುದ್ರಾನ್ತರಿತಾ ಜ್ಞೇಯಾಸ್ತೇ ಹ್ಯಗಮ್ಯಾಃ ಪರಸ್ಪರಮ್ ॥೫॥

ಇನ್ದ್ರದ್ವೀಪಃ ಕಶೇರೂಮಾಂಸ್ತಾಮ್ರವರ್ಣೋ ಗಭಸ್ತಿಮಾನ್ ।
ನಾಗದ್ವೀಪಸ್ತಥಾ ಸೌಮ್ಯೋ ಗಾನ್ಧರ್ವೋ ವಾರುಣಸ್ತಥಾ ॥೬॥

---

೩. ಮಾನವರಿಗೆ ಭಾರತವರ್ಷ ಒಂದನ್ನು ಬಿಟ್ಟು ಬೇರೊಂದು ಎಡೆಯಲ್ಲಿ ಕರ್ಮಾನುಷ್ಠಾನವು ವಿಧಿಸಲ್ಪಡಲಿಲ್ಲ. ಬ್ರಹ್ಮರ್ಷಿಯೇ! ಭಾರತವರ್ಷವು ಮಹತ್ತ್ವವುಳ್ಳದ್ದಾದುದರಿಂದ ಅದನ್ನು ನನಗೆ ವಿಸ್ತಾರವಾಗಿ ಹೇಳು.

೪. ದ್ವಿಜೋತ್ತಮನಾದ ಮಾರ್ಕಂಡೇಯಮುನಿಯೇ! ಈ ಭಾರತವರ್ಷವು ಯಾವ ಸನ್ನಿವೇಶವುಳ್ಳದ್ದಾಗಿದೆ? ಇದರ ಪ್ರಭೇದಗಳೆಷ್ಟು? ಅವು ಯಾವುವು? ಮತ್ತು ಇದರಲ್ಲಿರುವ ವರ್ಷಪರ್ವತಗಳಾವುವು? ಇದನ್ನು ಹೇಳಬೇಕು.

ಮಾರ್ಕಂಡೇಯಮುನಿಯು ಉಪದೇಶಿಸಿದನು :—

೫. ಈ ಭಾರತವರ್ಷದಲ್ಲಿರುವ ಒಂಭತ್ತು ಭಾಗಗಳನ್ನು ನಾನು ವಿಸ್ತಾರವಾಗಿ ಹೇಳುವೆನು. ಅವುಗಳನ್ನು ಕೇಳು. ಆ ವಿಭಾಗಗಳು ಸಮುದ್ರದಿಂದ ಸುತ್ತಲ್ಪಟ್ಟಿರುವುದರಿಂದ ಒಂದರಿಂದ ಮತ್ತೊಂದು ವಿಭಾಗಕ್ಕೆ ಹೋಗುವಂತೆ ಇಲ್ಲ.

೬. ಇಂದ್ರದ್ವೀಪ, ಕಶೇರೂಮಾನ್, ತಾಮ್ರವರ್ಣ, ಗಭಸ್ತಿಮಾನ್, ನಾಗದ್ವೀಪ, ಸೌಮ್ಯ, ಗಾಂಧರ್ವ ಮತ್ತು ವಾರುಣ—ಇವು ಭಾರತವರ್ಷದಲ್ಲಿರುವ ಉಪದ್ವೀಪಗಳಲ್ಲಿ ಸೇರಿದ ಎಂಟು ದ್ವೀಪಗಳಾಗಿವೆ.

ಅಯಂ ತು ನವಮಸ್ತೇಷಾಂ ದ್ವೀಪಃ ಸಾಗರಸಂವೃತಃ ।
ಯೋಜನಾನಾಂ ಸಹಸ್ರಂ ವೈ ದ್ವೀಪೋಽಯಂ ದಕ್ಷಿಣೋತ್ತರಮ್ ॥೭॥

ಪೂರ್ವೇ ಕಿರಾತಾ ಯಸ್ಯಾನ್ತೇ ಪಶ್ಚಿಮೇ ಯವನಾಸ್ತಥಾ ।
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚಾನ್ತಃ ಸ್ಥಿತಾ ದ್ವಿಜ ॥೮॥

ಇಜ್ಯಾಧ್ಯಾಯವಣಿಜ್ಯಾದ್ಯೈಃ ಕರ್ಮಭಿಃ ಕೃತಪಾವನಾಃ ।
ತೇಷಾಂ ಸಂವ್ಯವಹಾರಶ್ಚ ಏಭಿಃ ಕರ್ಮಭಿರಿಷ್ಯತೇ ॥೯॥

ಸ್ವರ್ಗಾಪವರ್ಗಪ್ರಾಪ್ತಿಶ್ಚ ಪುಣ್ಯಂ ಪಾಪಂ ಚ ವೈ ತದಾ ॥೧೦॥

ಮಹೇನ್ದ್ರೋ ಮಲಯಃ ಸಹ್ಯಃ ಶುಕ್ತಿಮಾನೃಕ್ಷಪರ್ವತಃ ।
ವಿನ್ಧ್ಯಶ್ಚ ಪಾರಿಯಾತ್ರಶ್ಚ ಸಪ್ತೈವಾತ್ರ ಕುಲಾಚಲಾಃ ॥೧೧॥

---

೭. ಸಮುದ್ರದಿಂದ ಸುತ್ತಲ್ಪಟ್ಟಿರುವ ಈ ದ್ವೀಪವು ಅವುಗಳಲ್ಲಿ ಕಡೆಯದಾದ ಒಂಭತ್ತನೆಯ ದ್ವೀಪವಾಗಿದೆ. ಈ ದ್ವೀಪವು ದಕ್ಷಿಣದಿಂದ ಉತ್ತರಕ್ಕೆ ಒಂದುಸಹಸ್ರ ಯೋಜನಗಳ ಪರಿಮಾಣ ವಿಸ್ತಾರವಾಗಿರುವುದು.

೮. ಎಲೈ ದ್ವಿಜೋತ್ತಮನೆ! ಈ ದ್ವೀಪದ ಪೂರ್ವದಿಕ್ಕಿನ ತುದಿಯಲ್ಲಿ ಕಿರಾತರು, ಪಶ್ಚಿಮದಿಕ್ಕಿನ ಅಂತದಲ್ಲಿ ಯವನರು ಮತ್ತು ನಡುವೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ಚಾತುರ್ವರ್ಣ್ಯವು ಇರುವರು.

೯. ದ್ವೀಪದ ನಡುವೆ ಇರುವ ಚಾತುರ್ವರ್ಣ್ಯದವರು ಯಾಗ, ಅಧ್ಯಯನ, ವಾಣಿಜ್ಯ ಮುಂತಾದ ವಿಹಿತಕರ್ಮಗಳಿಂದ ಪಾವನತೆಯನ್ನು ಹೊಂದಿರುವರು. ಮತ್ತು ಅವರ ಜೀವನ ಮುಂತಾದ ವ್ಯವಹಾರವು ಈ ಕರ್ಮಗಳಿಂದ ನಡೆಯುವುದು ಎಂಬುದು ಪ್ರಾಜ್ಞರ ಇಷ್ಟವಾಗಿದೆ.

೧೦. ಹಾಗು ಸ್ವರ್ಗ-ಮೋಕ್ಷಗಳ ಪ್ರಾಪ್ತಿಯಾಗಲಿ, ಪುಣ್ಯ-ಪಾಪಗಳ ಆರ್ಜನೆಯಾಗಲಿ ಈ ಕರ್ಮಗಳಿಂದ ಸಾಧ್ಯವಾಗುವುದು. ಹೀಗೆ ಭವಿಷ್ಯದ ಶ್ರೇಯಸ್ಸನ್ನು ಕುರಿತು ವಿಹಿತ ಕರ್ಮಗಳನ್ನು ಮಾಡುತ್ತ ಜೀವನವನ್ನು ಕರ್ಮಮಯವನ್ನಾಗಿ ಮಾಡಿಕೊಂಡಿರುವರು.

೧೧. ಮಹೇಂದ್ರ, ಮಲಯ, ಸಹ್ಯ, ಶುಕ್ತಿಮಾನ್, ಋಕ್ಷಪರ್ವತ, ವಿಂಧ್ಯ ಮತ್ತು ಪಾರಿಯಾತ್ರ—ಎಂಬುವು ಈ ದ್ವೀಪದಲ್ಲಿ ಕುಲಾಚಲವೆಂದು ಪ್ರಖ್ಯಾತಿಹೊಂದಿದ ಮಹಾಪರ್ವತಗಳಾಗಿವೆ.

ತೇಷಾಂ ಸಹಸ್ರಶಶ್ಚಾನ್ಯೇ ಭೂಧರಾ ಯೇ ಸಮೀಪಗಾಃ ।
ವಿಸ್ತಾರೋಚ್ಛ್ರಯಿಣೋ ರಮ್ಯಾ ವಿಪುಲಾಶ್ಚಿತ್ರಸಾನವಃ ॥೧೨॥

ಕೋಲಾಹಲಃ ಸವೈಭ್ರಾಜೋ ಮನ್ದರೋ ದರ್ದುರಾಚಲಃ ।
ವಾತಸ್ವನೋ ವೈದ್ಯುತಶ್ಚ ಮೈನಾಕಃ ಸ್ವಸರಸ್ತಥಾ ॥೧೩॥

ತುಙ್ಗಪ್ರಸ್ಥೋ ನಾಗಗಿರೀ ರೋಚನಃ ಪಾಣ್ಡುರಾಚಲಃ ।
ಪುಷ್ಪೋ ಗಿರಿರ್ದುರ್ಜಯನ್ತೋ ರೈವತೋಽರ್ಬುದ ಏವ ಚ ॥೧೪॥

ಋಷ್ಯಮೂಕಃ ಸಗೋಮನ್ತಃ ಕೂಟಶೈಲಃ ಕೃತಸ್ಮರಃ ।
ಶ್ರೀಪರ್ವತಶ್ಚಕೋರಶ್ಚ ಶತಶೋಽನ್ಯೇ ಚ ಪರ್ವತಾಃ ॥೧೫॥

---

೧೨. ಈ ಕುಲಪರ್ವತಗಳ ಸಮೀಪದಲ್ಲಿ ಬೇರೆಯಾಗಿ ಸಾವಿರಾರು ಪರ್ವತಗಳು ಇರುತ್ತವೆ. ಆ ಇತರ ಪರ್ವತಗಳು ವಿಸ್ತಾರ-ಉನ್ನತಿಯುಳ್ಳವುಗಳೂ, ರಮಣೀಯವೂ, ವಿಪುಲವಾಗಿರುವುವೂ ಮತ್ತು ಚಿತ್ರರೂಪವಾದ ತಪ್ಪಲುಗಳಿಂದ ಕೂಡಿರುವುವೂ ಆಗಿವೆ.

೧೩. ಇಲ್ಲಿ ಪ್ರಕಾಶಿಸುವ ಸಾವಿರಾರು ಪರ್ವತಗಳಲ್ಲಿ ಕೋಲಾಹಲ, ವೈಭ್ರಾಜ, ಮಂದರ, ದರ್ದುರಾಚಲ, ವಾತಸ್ವನ, ವೈದ್ಯುತ, ಮೈನಾಕ ಮತ್ತು ಸ್ವಸರ—ಎಂಬುವು ಕೆಲವು ಪರ್ವತಗಳಾಗಿವೆ.

೧೪. ಹಾಗು ತುಂಗಪ್ರಸ್ಥ, ನಾಗಗಿರಿ, ರೋಚನ, ಪಾಂಡುರಾಚಲ, ಪುಷ್ಪಗಿರಿ, ದುರ್ಜಯಂತ, ರೇವತ ಮತ್ತು ಅರ್ಬುದ ಎಂಬುವು ಮತ್ತೆ ಕೆಲವು ಈ ದ್ವೀಪದಲ್ಲಿರುವ ಪರ್ವತಗಳಾಗಿವೆ.

೧೫. ಮತ್ತು ಋಷ್ಯಮೂಕ, ಗೋಮಂತ, ಕೂಟಶೈಲ, ಕೃತಸ್ಮರ, ಶ್ರೀಪರ್ವತ, ಚಕೋರಪರ್ವತ—ಇವು ಮತ್ತೆ ಕೆಲವು ಈ ದ್ವೀಪದ ಪರ್ವತಶ್ರೇಣಿಯಲ್ಲಿ ಸೇರಿದವುಗಳಾಗಿವೆ. ಅಲ್ಲದೆ ಇನ್ನೂ ನೂರಾರು ಪರ್ವತಗಳು ಅಲ್ಲಲ್ಲಿ ಶೋಭಿಸುತ್ತಿವೆ.

ತೈರ್ವಿಮಿಶ್ರಾ ಜನಪದಾ ಮ್ಲೇಚ್ಛಾಶ್ಚಾರ್ಯಾಶ್ಚ ಭಾಗಶಃ |
ತೈಃ ಪೀಯನ್ತೇ ಸರಿಚ್ಛ್ರೇಷ್ಠಾ ಯಾಸ್ತಾಃ ಸಮ್ಯಙ್ನಿಬೋಧ ಮೇ ||೧೬||

ಗಙ್ಗಾ ಸರಸ್ವತೀ ಸಿನ್ಧುಶ್ಚನ್ದ್ರಭಾಗಾ ತಥಾಪರಾ |
ಯಮುನಾ ಚ ಶತದ್ರುಶ್ಚ ವಿತಸ್ತೇರಾವತೀ ಕುಹೂಃ ||೧೭||

ಗೋಮತೀ ಧೂತಪಾಪಾ ಚ ಬಾಹುದಾ ಚ ದೃಷದ್ವತೀ |
ವಿಪಾಶಾ ದೇವಿಕಾ ರಂಕ್ಷುರ್ನಿಶ್ಚೀರಾ ಗಣ್ಡಕೀ ತಥಾ ||೧೮||

ಕೌಶಿಕೀ ಚಾಪಗಾ ವಿಪ್ರ ಹಿಮವತ್ಪಾದನಿಃಸೃತಾಃ |
ವೇದಸ್ಮೃತಿರ್ವೇದವತೀ ವೃತ್ರಘ್ನೀ ಸಿನ್ಧುರೇವ ಚ ||೧೯||

---

೧೬. ಹೀಗೆ ಆಯಾಯ ಪರ್ವತಗಳ ಎಲ್ಲೆಯಿಂದ ಮಿಶ್ರಹೊಂದಿ ಅನೇಕ ದೇಶಗಳಿವೆ. ಅವು ಆರ್ಯ-ಮ್ಲೇಚ್ಛ ಜನರು ವಾಸಮಾಡುವ ಭೂಮಿ-ಭಾಗಗಳಾಗಿವೆ. ಆ ಜನರಿಂದ ಉಪಭೋಗಿಸಲ್ಪಡುವ ಉತ್ತಮವಾದ ನದಿಗಳನ್ನು ವಿಸ್ತಾರವಾಗಿ ಹೇಳುವೆನು. ಅವುಗಳನ್ನು ನೀನು ಕೇಳು.

೧೭. ಗಂಗಾ, ಸರಸ್ವತಿ, ಸಿಂಧು, ಚಂದ್ರಭಾಗಾ, ಯಮುನಾ, ಶತದ್ರು, ವಿತಸ್ತಾ, ಇರಾವತೀ ಮತ್ತು ಕುಹು—ಇವು ಈ ದ್ವೀಪದಲ್ಲಿ ಹರಿಯುವ ಶ್ರೇಷ್ಠನದಿಗಳಲ್ಲಿ ಕೆಲವು ನದಿಗಳಾಗಿರುವುವು.

೧೮. ಮತ್ತು ಗೋಮತಿ, ಧೂತಪಾಪಾ, ಬಾಹುದಾ, ದೃಷದ್ವತೀ, ವಿಪಾಶಾ, ದೇವಿಕಾ, ರಂಕ್ಷು, ನಿಶ್ಚೀರಾ ಹಾಗು ಗಂಡಕೀ—ಎಂಬ ಮತ್ತೆ ಕೆಲವು ಶ್ರೇಷ್ಠನದಿಗಳು ಈ ದ್ವೀಪದಲ್ಲಿ ಪ್ರವಹಿಸುತ್ತಿವೆ.

೧೯. ಎಲೈ ವಿಪ್ರೋತ್ತಮನಾದ ಕ್ರೌಷ್ಟುಕಿಯೆ! ಕೌಶಿಕೀನದಿ-ಯೆಂಬುದು ಸೇರಿ ಹಿಂದೆ ಹೇಳಿದ ನದಿಗಳು ಹಿಮವತ್ಪರ್ವತದ ತಪ್ಪಲಿನಿಂದ ಹುಟ್ಟುವುವು. ಹಾಗು ವೇದಸ್ಮೃತಿ, ವೇದವತಿ, ವೃತ್ರಘ್ನಿ, ಸಿಂಧು—ಇವು ಮತ್ತೆ ಕೆಲವು ಶ್ರೇಷ್ಠನದಿಗಳಾಗಿವೆ.

ವೇಣಾಸಾ ನನ್ದನಾ ಚೈವ ಸದಾನೀರಾ ಮಹೀ ತಥಾ ।
ಪಾರಾ ಚರ್ಮಣ್ವತೀ ನೂಪೀ ವಿದಿಶಾ ವೇತ್ರವತ್ಯಪಿ ॥೨೦॥

ಕ್ಷಿಪ್ರಾ ಹ್ಯವನ್ತೀ ಚ ತಥಾ ಪಾರಿಯಾತ್ರಾಶ್ರಯಾಃ ಸ್ಮೃತಾಃ ।
ಶೋಣೋ ಮಹಾನದಶ್ಚೈವ ನರ್ಮದಾ ಸುರಥಾದ್ರಿಜಾ ॥೨೧॥

ಮನ್ದಾಕಿನೀ ದಶಾರ್ಣಾ ಚ ಚಿತ್ರಕೂಟಾ ತಥಾಪರಾ ।
ಚಿತ್ರೋತ್ಪಲಾ ಸತಮಸಾ ಕರಮೋದಾ ಪಿಶಾಚಿಕಾ ॥೨೨॥

ತಥಾನ್ಯಾ ಪಿಪ್ಪಲಶ್ರೋಣೀರ್ವಿಪಾಶಾ ವಞ್ಜುಲಾ ನದೀ ।
ಸುಮೇರುಜಾ ಶುಕ್ತಿಮತೀ ಸಕುಲೀ ತ್ರಿದಿವಾ ಕ್ರಮುಃ ॥೨೩॥

---

೨೦. ಮತ್ತು ವೇಣಾಸಾ, ನಂದನಾ, ಸದಾನೀರಾ, ಮಹೀ, ಪಾರಾ, ಚರ್ಮಣ್ವತೀ, ನೂಪೀ, ವಿದಿಶಾ ಮತ್ತು ವೇತ್ರವತೀ—ಇವು ಇನ್ನು ಕೆಲವು ಮುಖ್ಯ ನದಿಗಳ ಗುಂಪಿಗೆ ಸೇರಿದ ಈ ದ್ವೀಪದ ನದಿಗಳಾಗಿವೆ.

೨೧. ಮತ್ತು ಕ್ಷಿಪ್ರಾನದಿ, ಅವಂತಿನದಿ ಇವು ಸೇರಿ ಹಿಂದೆ ಹೇಳಿದ ವೇದಸ್ಮೃತಿ ಮುಂತಾದ ನದಿಗಳು ಪಾರಿಯಾತ್ರ ಪರ್ವತದಲ್ಲಿ ಹುಟ್ಟುವ ನದಿಗಳಾಗಿವೆ. ಹಾಗು ಶೋಣ ಎಂಬುದು ದೊಡ್ಡದಾದ ಗಂಡುನದಿಯಾಗಿದೆ. ನರ್ಮದಾ, ಸುರಥಾ, ಅದ್ರಿಜಾ—ಎಂಬುವು ಮತ್ತೆ ಕೆಲವು ನದಿಗಳಾಗಿವೆ.

೨೨. ಮಂದಾಕಿನಿ, ದಶಾರ್ಣಾ, ಚಿತ್ರಕೂಟಾ, ಚಿತ್ರೋತ್ಪಲಾ, ತಮುಸಾ, ಕರಮೋದಾ, ಪಿಶಾಚಿಕಾ—ಎಂಬ ನದಿಗಳು ಋಕ್ಷಪರ್ವತದಲ್ಲಿ ಹುಟ್ಟುವ ನದಿಗಳ ಗುಂಪಿಗೆ ಸೇರಿದ ಮಹಾನದಿಗಳಾಗಿವೆ.

೨೩. ಹಾಗು ಪಿಪ್ಪಲಶ್ರೋಣಿ, ವಿಪಾಶಾ, ವಂಜುಲಾನದಿ, ಸುಮೇರುಜಾ, ಶುಕ್ತಿಮತಿ, ಸಕುಲಿ, ತ್ರಿದಿವಾ ಮತ್ತು ಕ್ರಮುನದಿ—ಇವು ಈ ದ್ವೀಪದಲ್ಲಿ ಹರಿಯುವ ಮುಖ್ಯ ನದಿಗಳಲ್ಲಿ ಕೆಲವು ನದಿಗಳಾಗಿವೆ.

ಋಕ್ಷಪಾದಪ್ರಸೂತಾ ನ್ಯೈ ತಥಾನ್ಯಾ ವೇಗವಾಹಿನೀ ।
ಕ್ಷಿಪ್ರಾ ಪಯೋಷ್ಣೀ ನಿರ್ವಿನ್ಧ್ಯಾ ತಾಪೀ ಚ ನಿಷಧಾವತೀ ॥೨೪॥

ವೇಣ್ಯಾ ವೈತರಣೀ ಚೈವ ಸಿನೀವಾಲೀ ಕುಮುದ್ವತೀ ।
ಕರತೋಯಾ ಮಹಾಗೌರೀ ದುರ್ಗಾ ಚಾನ್ತಃಶಿವಾ ತಥಾ ॥೨೫॥

ವಿನ್ಧ್ಯಪಾದಪ್ರಸೂತಾಸ್ತಾ ನದ್ಯಃ ಪುಣ್ಯಜಲಾಃ ಶುಭಾಃ ।
ಗೋದಾವರೀ ಭೀಮರಥೀ ಕೃಷ್ಣಾ ವೇಣ್ಯಾ ತಥಾಪರಾ ॥೨೬॥

ತುಙ್ಗಭದ್ರಾ ಸುಪ್ರಯೋಗಾ ವಾಹ್ಯಾ ಕಾವೇರ್ಯಥಾಪಗಾ ।
ಸಹ್ಯಪಾದವಿನಿಷ್ಕ್ರಾನ್ತಾ ಇತ್ಯೇತಾಃ ಸರಿದುತ್ತಮಾಃ ॥೨೭॥

---

೨೪. ಹೀಗೆ ಇಲ್ಲಿ ಹೇಳಿದ ಈ ನದಿಗಳು ಋಕ್ಷಪರ್ವತದಲ್ಲಿ ಹುಟ್ಟುವ ಮಹಾನದಿಗಳು. ಹಾಗು ಮತ್ತೆ ಕೆಲವು ವೇಗವಾಹಿನೀ, ಕ್ಷಿಪ್ರಾ, ಪಯೋಷ್ಣಿ, ನಿರ್ವಿಂಧ್ಯಾ, ತಾಪಿ ಮತ್ತು ನಿಷಧಾವತಿ—ಎಂಬ ನಾಮಾಂಕಿತಗಳಾದ ನದಿಗಳು ಇಲ್ಲಿ ಹರಿಯುತ್ತಿವೆ.

೨೫. ಮತ್ತು ವೇಣ್ಯಾ, ವೈತರಣೀ, ಸಿನೀವಾಲೀ, ಕುಮುದ್ವತಿ, ಕರತೋಯಾ, ಮಹಾಗೌರಿ, ದುರ್ಗಾ, ಅಂತಃಶಿವಾ—ಎಂಬ ನಾಮಾಂಕಿತವಾದ ಕೆಲವು ನದಿಗಳು ಈ ದ್ವೀಪದಲ್ಲಿ ಮುಖ್ಯನದಿಗಳಾಗಿ ಹರಿಯುತ್ತವೆ.

೨೬. ಮಂಗಳಕರವೂ, ಪಾವನವಾದ ನೀರಿನಿಂದ ಕೂಡಿರುವುವೂ ಆದ ಈ ನದಿಗಳು ವಿಂಧ್ಯಪರ್ವತದ ತಪ್ಪಲಿನಲ್ಲಿ ಹುಟ್ಟುವುವು. ಹಾಗು ಗೋದಾವರಿ, ಭೀಮರಥಿ, ಕೃಷ್ಣಾ, ವೇಣ್ಯಾ—ಎಂಬುವು ಮತ್ತೆ ಕೆಲವು ಈ ದ್ವೀಪದ ಮುಖ್ಯ ನದಿಗಳಾಗಿವೆ.

೨೭. ಮತ್ತು ತುಂಗಭದ್ರಾ, ಸುಪ್ರಯೋಗಾ, ಬಾಹ್ಯಾ, ಕಾವೇರಿ—ಎಂಬ ನದಿಗಳು ಸಹ್ಯಪರ್ವತದ ತಪ್ಪಲಿನಲ್ಲಿ ಹುಟ್ಟುವುವು. ಈ ನದಿಗಳು ಪಾವನವಾದ ಮಹಾನದಿಗಳಾಗಿವೆ.

ಕೃತಮಾಲಾ ತಾಮ್ರಪರ್ಣೀ ಪುಷ್ಪಜಾ ಸೂತ್ಪಲಾವತೀ ।
ಮಲಯಾದ್ರಿಸಮುದ್ಭೂತಾ ನದ್ಯಃ ಶೀತಜಲಾಸ್ತ್ವಿಮಾಃ ॥೨೮॥

ಪಿತೃಸೋಮರ್ಷಿಕುಲ್ಯಾ ಚ ಇಕ್ಷುಕಾ ತ್ರಿದಿವಾ ಚ ಯಾ ।
ಲಾಙ್ಗೂಲಿನೀ ವಂಶಕರಾ ಮಹೇನ್ದ್ರಪ್ರಭವಾಃ ಸ್ಮೃತಾಃ ॥೨೯॥

ಋಷಿಕುಲ್ಯಾ ಕುಮಾರೀ ಚ ಮನ್ದಗಾ ಮನ್ದವಾಹಿನೀ ।
ಕುಶಾ ಪಲಾಶಿನೀ ಚೈವ ಶುಚಿಮತ್ಪ್ರಭವಾಃ ಸ್ಮೃತಾಃ ॥೩೦॥

ಸರ್ವಾಃ ಪುಣ್ಯಾಃ ಸರಸ್ವತ್ಯಃ ಸರ್ವಾ ಗಙ್ಗಾಃ ಸಮುದ್ರಗಾಃ ।
ವಿಶ್ವಸ್ಯ ಮಾತರಃ ಸರ್ವಾಃ ಸರ್ವಪಾಪಹರಾಃ ಸ್ಮೃತಾಃ ॥೩೧॥

---

೨೮. ಹಾಗು ಕೃತಮಾಲಾ, ತಾಮ್ರಪರ್ಣೀ, ಪುಷ್ಪಜಾ, ಸೂತ್ಪಲಾವತೀ—ಎಂಬುವು ಮಲಯಾದ್ರಿಯಲ್ಲಿ ಜನಿಸುವ ಮಹಾನದಿಗಳು. ಈ ದ್ವೀಪದಲ್ಲಿ ಪ್ರವಹಿಸುವ ಈ ನದಿಗಳೆಲ್ಲವೂ ಶೀತವಾದ ಜಲದಿಂದ ಕೂಡಿರುವುವು.

೨೯. ಹಾಗು ಪಿತೃಕುಲ್ಯಾ, ಸೋಮಕುಲ್ಯಾ, ಋಷಿಕುಲ್ಯಾ, ಇಕ್ಷುಕಾ, ತ್ರಿದಿವಾ, ಲಾಂಗೂಲಿನೀ, ವಂಶಕರಾ—ಎಂಬೀ ನದಿಗಳು ಮಹೇಂದ್ರ ಪರ್ವತದಲ್ಲಿ ಹುಟ್ಟುವ ಮಹಾನದಿಗಳೆಂದು ಸ್ಮರಿಸಲ್ಪಟ್ಟಿವೆ.

೩೦. ಋಷಿಕುಲ್ಯಾ, ಕುಮಾರೀ, ಮಂದಗಾ, ಮಂದವಾಹಿನೀ, ಕುಶಾ ಮತ್ತು ಪಲಾಶಿನೀ—ಇವು ಶುಚಿಮತ್ ಎಂಬ ಪರ್ವತದಲ್ಲಿ ಹುಟ್ಟಿ ಈ ದ್ವೀಪದಲ್ಲಿ ಹರಿಯುವ ಮಹಾನದಿಗಳೆಂದು ಸ್ಮರಿಸಲ್ಪಟ್ಟಿವೆ.

೩೧. ಹಿಂದೆ ಹೇಳಿರುವ ಈ ನದಿಗಳೆಲ್ಲವೂ ಪವಿತ್ರವಾಗಿಯೂ ಸಮುದ್ರವನ್ನು ಸೇರುವುದಾಗಿಯೂ ಮತ್ತು ಪಾವನವಾದ ಗಂಗಾ-ಸರಸ್ವತೀ ನದೀರೂಪವಾಗಿಯೂ ಇವೆಯೆಂದು ಭಾವಿಸಬೇಕು. ಇವು ವಿಶ್ವಕ್ಕೆ ಜನನಿಯಂತೆಯೂ ಸಮಸ್ತ ಪಾಪಗಳನ್ನು ಭಂಜಿಸುವುದಾಗಿಯೂ ಇವೆ.

ಅನ್ಯಾಃ ಸಹಸ್ರಶಶ್ಚೋಕ್ತಾಃ ಕ್ಷುದ್ರನದ್ಯೋ ದ್ವಿಜೋತ್ತಮ ।
ಪ್ರಾವೃಟ್ಕಾಲವಹಾಃ ಕಾಶ್ಚಿತ್ಸರ್ವಕಾಲವಹಾಶ್ಚ ಯಾಃ ॥೩೨॥

ಮತ್ಸ್ಯಾಶ್ವಕೂಟಾಃ ಕುಲ್ಯಾಶ್ಚ ಕುನ್ತಲಾಃ ಕಾಶಿಕೋಶಲಾಃ ।
ಅರ್ಬುದಾಶ್ಚಾರ್ಕಲಿಙ್ಗಾಶ್ಚ ಮಲಕಾಶ್ಚ ವೃಕೈಃ ಸಹ ॥೩೩॥

ಮಧ್ಯದೇಶ್ಯಾ ಜನಪದಾಃ ಪ್ರಾಯಶೋಽಮೀ ಪ್ರಕೀರ್ತಿತಾಃ ॥೩೪॥

ಸಹ್ಯಸ್ಯ ಚೋತ್ತರೇ ಯಸ್ತು ಯತ್ರ ಗೋದಾವರೀ ನದೀ ।
ಪೃಥಿವ್ಯಾಮಪಿ ಕೃತ್ಸ್ನಾಯಾಂ ಸ ಪ್ರದೇಶೋ ಮನೋರಮಃ ॥೩೫॥

ಗೋವರ್ಧನಪುರಂ ರಮ್ಯಂ ಭಾರ್ಗವಸ್ಯ ಮಹಾತ್ಮನಃ ।
ಬಾಹ್ಲೀಕಾ ವಾಟಧಾನಾಶ್ಚ ಆಭೀರಾಃ ಕಾಲತೋಯಕಾಃ ॥೩೬॥

---

೩೨. ಇವುಗಳಲ್ಲದೆ ಇನ್ನೂ ಎಷ್ಟೋ ಸಾವಿರಾರು ಕ್ಷುದ್ರನದಿಗಳು ಈ ದ್ವೀಪದಲ್ಲಿ ಹರಿಯುತ್ತಿವೆ. ವಿಪ್ರೋತ್ತಮನೆ! ಇವುಗಳಲ್ಲಿ ಕೆಲವು ಎಲ್ಲ ಕಾಲದಲ್ಲಿಯೂ ಮತ್ತೆ ಕೆಲವು ವರ್ಷಾಕಾಲದಲ್ಲಿ ಮಾತ್ರವೂ ಹರಿಯುವ ನದಿಗಳಾಗಿವೆ.

೩೩. ಮತ್ಸ್ಯದೇಶ, ಅಶ್ವಕೂಟ, ಕುಲ್ಯ, ಕುಂತಲ, ಕಾಶಿ, ಕೋಸಲ, ಅರ್ಬುದ, ಅರ್ಕಲಿಂಗ, ಮಲಕ ಮತ್ತು ವೃಕ ಎಂಬುವು ಈ ದ್ವೀಪದಲ್ಲಿರುವ ಕೆಲವು ದೇಶಗಳೆಂದು ಗಣಿಸಲ್ಪಟ್ಟಿವೆ.

೩೪. ಪ್ರಾಯಕವಾಗಿ ಇಲ್ಲಿ ಹೇಳಿರುವ ಮತ್ಸ್ಯದೇಶ—ಮುಂತಾದುವು ಮಧ್ಯಭಾರತದ ಜನಪದವೆಂದು ಕೀರ್ತಿಸಲ್ಪಟ್ಟಿವೆ. ಇವುಗಳು ಭಾರತವರ್ಷದ ಮಧ್ಯದಲ್ಲಿರುವ ಮುಖ್ಯದೇಶಗಳೆಂದು ಅರಿಯಬೇಕು.

೩೫. ಸಹ್ಯಪರ್ವತದ ಉತ್ತರದಿಕ್ಕಿನಲ್ಲಿ ಗೋದಾವರೀನದಿಯು ಹರಿಯುತ್ತಿರುವ ಪ್ರದೇಶವು ಸಂಪೂರ್ಣವಾದ ಭೂಮಂಡಲದಲ್ಲಿಯೇ ಮನೋಹರವಾದ ಸ್ಥಳವೆಂದು ಖ್ಯಾತಿಗೊಂಡಿರುವುದು.

೩೬. ಮಹಾತ್ಮನಾದ ಪರಶುರಾಮನ ಗೋವರ್ಧನವೆಂಬ ಪುರವು ರಮಣೀಯವಾದುದು. ಮತ್ತು ಬಾಹ್ಲೀಕ, ವಾಟಧಾನ, ಆಭೀರ, ಕಾಲತೋಯಕ ಎಂಬುವು ಈ ದ್ವೀಪದಲ್ಲಿ ಉತ್ತರದಿಕ್ಕಿಗೆ ಸೇರಿದ ಗಣ್ಯವಾದ ಪ್ರದೇಶಗಳೆಂದು ಭಾವಿಸಬೇಕು.

ಅಪರಾನ್ತಾಶ್ಚ ಶೂದ್ರಾಶ್ಚ ಪಹ್ಲವಾಶ್ಚರ್ಮಖಣ್ಡಿಕಾಃ ।
ಗಾನ್ಧಾರಾ ಯವನಾಶ್ಚೈವ ಸಿನ್ಧುಸೌವೀರಮದ್ರಕಾಃ ॥೩೭॥

ಶತದ್ರುಜಾಃ ಕಲಿಙ್ಗಾಶ್ಚ ಪಾರದಾ ಹಾರಭೂಷಿಕಾಃ ।
ಮಾಠರಾ ಬಹುಭದ್ರಾಶ್ಚ ಕೈಕೇಯಾ ದಶಮಾಲಿಕಾಃ ॥೩೮॥

ಕ್ಷತ್ರಿಯೋಪನಿವೇಶಾಶ್ಚ ವೈಶ್ಯಶೂದ್ರಕುಲಾನಿ ಚ ।
ಕಾಮ್ಭೋಜಾ ದರದಾಶ್ಚೈವ ಬರ್ಬರಾ ಅಙ್ಗಲೌಕಿಕಾಃ ॥೩೯॥

ಚೀನಾಶ್ಚೈವ ತುಷಾರಾಶ್ಚ ಪಹ್ಲವಾ ಬಾಹ್ಯತೋದರಾಃ ।
ಆತ್ರೇಯಾಶ್ಚ ಭರದ್ವಾಜಾಃ ಪುಷ್ಕಲಾಶ್ಚ ಕಶೇರುಕಾಃ ॥೪೦॥

---

೩೭. ಹಾಗು ಅಪರಾಂತ, ಶೂದ್ರ, ಪಹ್ಲವ, ಚರ್ಮಖಂಡಿಕ, ಗಾಂಧಾರ, ಯವನ, ಸಿಂಧು, ಸೌವೀರ ಮತ್ತು ಮದ್ರಕ ಎಂಬುವು ಭಾರತ-ವರ್ಷದ ಉತ್ತರದಿಕ್ಕಿನಲ್ಲಿರುವ ಮುಖ್ಯ ಜನಪದಗಳ ನಾಮಾಂಕನಗಳಾಗಿವೆ.

೩೮. ಶತದ್ರುಜ, ಕಲಿಂಗ, ಪಾರದ, ಹಾರಭೂಷಿಕ, ಮಾಠರ, ಬಹುಭದ್ರ, ಕೇಕಯ ಮತ್ತು ದಶಮಾಲಿಕ—ಇವು ಮತ್ತೆ ಕೆಲವು ಈ ವರ್ಷದ-ಲ್ಲಿರುವ ಮುಖ್ಯ ಜನಪದಗಳ ನಾಮಾಂಕನಗಳಾಗಿವೆ.

೩೯. ಮತ್ತು ಕಾಂಭೋಜ, ದರದ, ಬರ್ಬರ, ಅಂಗಲೌಕಿಕ—ಎಂಬ ನಾಮಾಂಕಿತಗಳಾದ ಜನಪದಗಳು ಈ ವರ್ಷ ಭೂಮಿಯ ಉತ್ತರದಿಕ್ಕಿನಲ್ಲಿರು-ವುವು. ಅಲ್ಲದೆ ಅನೇಕ ಕ್ಷತ್ರಿಯರು ವಾಸಮಾಡುವ ದೇಶಗಳು ವೈಶ್ಯ-ಶೂದ್ರರು ವಾಸಮಾಡುವ ಪ್ರದೇಶಗಳು ಈ ದ್ವೀಪಕ್ಕೆ ಸೇರಿವೆ.

೪೦. ಹಾಗು ಚೀನದೇಶ, ತುಷಾರ, ಪಹ್ಲವ, ಬಾಹ್ಯತೋದರ, ಭರದ್ವಾಜ, ಪುಷ್ಕಲ, ಮತ್ತು ಕಶೇರುಕ ಎಂಬ ನಾಮಾಂಕಿತಗಳಾದ ಕೆಲವು ಪ್ರದೇಶಗಳು ಈ ದ್ವೀಪದಲ್ಲಿರುವ ಗಣ್ಯವಾದ ಜನಪದಗಳಾಗಿವೆ.

ಲಮ್ಪಾಕಾಃ ಶೂಲಕಾರಾಶ್ಚ ಚುಲಿಕಾ ಜಾಗುಡೈಃ ಸಹ ।
ಔಪಧಾಶ್ಚ ನಿಮುದ್ರಾಶ್ಚ ಕಿರಾತಾನಾಂ ಚ ಜಾತಯಃ ॥೪೧॥

ತಾಮಸಾ ಹಂಸಮಾರ್ಗಾಶ್ಚ ಕಾಶ್ಮೀರಾಸ್ತುಮಣಾಸ್ತಥಾ ।
ಶೂಲಿಕಾಃ ಕುಹಕಾಶ್ಚೈವ ಊರ್ಣಾ ದಾರ್ವಾಸ್ತಥೈವ ಚ ॥೪೨॥

ಏತೇ ದಶ ಹ್ಯುದೀಚ್ಯಾಸ್ತು ಪ್ರಾಚ್ಯಾನ್ದೇಶಾನ್ನಿಬೋಧ ಮೇ ।
ಅಭ್ರಾರಕಾ ಮುದ್ಗರಕಾ ಅನ್ತರ್ಗಿರಿಬಹಿರ್ಗಿರಾಃ ॥೪೩॥

ತಥಾ ಪ್ಲವಙ್ಗಾ ರಙ್ಗೇಯಾ ಮಾಲದಾ ಮಲವರ್ತಿಕಾಃ ।
ಬ್ರಾಹ್ಮೋತ್ತರಾಃ ಪ್ರವಿಜಯಾ ಭಾರ್ಗವಾ ಗೇಯಮಲ್ಲಕಾಃ ॥೪೪॥

---

೪೧. ಮತ್ತು ಲಂಪಾಕ, ಶೂಲಕಾರ, ಚುಲಿಕ, ಜಾಗುಡ, ಔಪಧ, ನಿಮುದ್ರ ಎಂಬ ನಾಮಾಂಕಿತವಾದ ಜನಪದಗಳು ಕಿರಾತರು ಹೆಚ್ಚಾಗಿ ವಾಸ-ಮಾಡುವ ಪ್ರದೇಶಗಳು. ಇವು ದ್ವೀಪದ ಉತ್ತರಭಾಗಕ್ಕೆ ಸೇರಿಕೊಂಡಿವೆ.

೪೨. ಮತ್ತು ತಾಮಸ, ಹಂಸಮಾರ್ಗ, ಕಾಶ್ಮೀರ ತುಮಣ, ಶೂಲಿಕ, ಕುಹಕ, ಊರ್ಣ ಹಾಗು ದಾರ್ವ ಎಂಬ ಕೆಲವು ಜನಪದಗಳು ಈ ದ್ವೀಪದ ಉತ್ತರ ದಿಕ್ಕಿನಲ್ಲಿ ಸೇರಿರುವ ಮುಖ್ಯಪ್ರದೇಶಗಳಾಗಿವೆ.

೪೩. ಕಿರಾತರ ವಾಸಭೂಮಿಯಾದ ಔಪಧ ಮುಂತಾದ ಈ ಹತ್ತು ದೇಶಗಳು ಈ ದ್ವೀಪದ ಉದೀಚ್ಯದೇಶಗಳಾಗಿವೆ. ಮುಂದೆ ಪೂರ್ವದೇಶಗಳನ್ನು ಹೇಳುವೆನು. ಅದನ್ನು ಕೇಳು. ಅಭ್ರಾರಕ, ಮುದ್ಗರಕ, ಅಂತರ್ಗಿರ, ಬಹಿರ್ಗಿರ ಎಂಬುವು ಪ್ರಾಚ್ಯದೇಶಗಳಲ್ಲಿ ಸೇರಿಕೊಂಡಿವೆ.

೪೪. ಮತ್ತು ಪ್ಲವಂಗ, ರಂಗೇಯ, ಮಾಲದ, ಮಲವರ್ತಿಕ, ಬ್ರಾಹ್ಮೋತ್ತರ, ಪ್ರವಿಜಯ, ಭಾರ್ಗವ, ಗೇಯಮಲ್ಲಕ—ಎಂಬುವು ಈ ದ್ವೀಪದ ಪ್ರಾಚ್ಯ ಜನಪದಗಳಾಗಿವೆ.

ಪ್ರಾಗ್ಜ್ಯೋತಿಷಾಶ್ಚ ಮದ್ರಾಶ್ಚ ವಿದೇಹಾಸ್ತಾಮ್ರಲಿಪ್ತಕಾಃ ।
ಮಲ್ಲಾ ಮಗಧಗೋಮೇದಾಃ ಪ್ರಾಚ್ಯಾ ಜನಪದಾಃ ಸ್ಮೃತಾಃ॥೪೫॥

ಅಥಾಪರೇ ಜನಪದಾ ದಕ್ಷಿಣಾಪಥವಾಸಿನಃ ।
ಪಾಣ್ಡ್ಯಾಶ್ಚ ಕೇರಲಾಶ್ಚೈವ ಚೋಲಾಃ ಕುನ್ತ್ಯಾಸ್ತಥೈವ ಚ ॥೪೬॥

ಶೈಲೂಷಾ ಮೂಷಿಕಾಶ್ಚೈವ ಕುಮಾರಾ ವಾನವಾಸಕಾಃ ।
ಮಹಾರಾಷ್ಟ್ರ ಮಾಹಿಷಿಕಾಃ ಕಲಿಙ್ಗಾಶ್ಚೈವ ಸರ್ವಶಃ ॥೪೭॥

ಆಭೀರಾಃ ಸಹವೈಶಿಕ್ಯಾ ಆಟವ್ಯಾಃ ಶಬರಾಶ್ಚ ಯೇ ।
ಪುಲಿನ್ದಾ ವಿನ್ಧ್ಯಮಾಲೇಯಾ ವೈದರ್ಭಾ ದಣ್ಡಕೈಃ ಸಹ ॥೪೮॥

---

೪೫. ಪ್ರಾಗ್ಜ್ಯೋತಿಷ, ಮದ್ರ, ವಿದೇಹ, ತಾಮ್ರಲಿಪ್ತಕ, ಮಲ್ಲ, ಮಗಧ, ಗೋಮೇಧ—ಇವುಗಳೆಲ್ಲವೂ ಈ ದ್ವೀಪದ ಪ್ರಾಚ್ಯಜನಗಳೆಂದು ಗಣಿಸಲ್ಪಟ್ಟಿರುವುವು.

೪೬. ಇನ್ನು ಮತ್ತೆ ಕೆಲವು ದೇಶಗಳು ದಕ್ಷಿಣದಿಕ್ಕಿನ ಪ್ರದೇಶವನ್ನು ಅವಲಂಬಿಸಿಕೊಂಡಿರುವುವು. ಪಾಂಡ್ಯ, ಕೇರಲ, ಚೋಲ ಮತ್ತು ಕುಂತ್ಯ—ಇವುಗಳು ದಕ್ಷಿಣದಿಕ್ಕಿನ ದೇಶಗಳಲ್ಲಿ ಕೆಲವಾಗಿವೆ.

೪೭. ಹಾಗು ಶೈಲೂಷ, ಮೂಷಿಕ, ಕುಮಾರ, ವಾನವಾಸಕ, ಮಹಾರಾಷ್ಟ್ರ, ಮಾಹಿಷಿಕ ಮತ್ತು ಕಾಲಿಂಗ—ಇವು ದಕ್ಷಿಣದಿಕ್ಕಿಗೆ ಸೇರಿದ ವಿಸ್ತಾರವಾದ ಜನಪದಗಳಾಗಿವೆ.

೪೮. ಮತ್ತು ಆಭೀರ, ವೈಶಿಕ್ಯ, ಆಟವ್ಯ, ಶಬರ, ಪುಲಿಂದ, ವಿಂಧ್ಯಮಾಲೇಯ, ವೈದರ್ಭ ಮತ್ತು ದಂಡಕ—ಇವುಗಳು ದಕ್ಷಿಣದಿಕ್ಕಿನಲ್ಲಿರುವ ಜನಪದಗಳ ಶ್ರೇಣಿಗೆ ಸೇರಿವೆ.

ಪೌರಿಕಾ ಮೌಲಿಕಾಶ್ಚೈವ ಅಶ್ಮಕಾ ಭೋಗವರ್ಧನಾಃ ।
ನೈಷಿಕಾಃ ಕುನ್ತಲಾ ಆನ್ಧ್ರಾ ಉದ್ಭಿದಾ ವನದಾರಕಾಃ ॥೪೯॥

ದಾಕ್ಷಿಣಾತ್ಯಾಸ್ತ್ವಮೀ ದೇಶಾ ಅಪರಾನ್ತಾನ್ನಿಬೋಧ ಮೇ ।
ಸೂರ್ಯಾರಕಾಃ ಕಾಲಿಬಲಾ ದುರ್ಗಾಶ್ಚಾಮೀಕಟೈಃ ಸಹ ॥೫೦॥

ಪುಲಿನ್ದಾಶ್ಚ ಸುಮೀನಾಶ್ಚ ರೂಪಪಾಃ ಸ್ವಾಪದೈಃ ಸಹ ।
ತಥಾ ಕುರುಮಿನಶ್ಚೈವ ಸರ್ವೇ ಚೈವ ಕಠಾಕ್ಷರಾಃ ॥೫೧॥

ಕಾರಸ್ಕರಾ ಲೋಹಜಙ್ಘಾ ವಾಜೇಯಾ ರಾಜಭದ್ರಕಾಃ ।
ತೋಸಲಾಃ ಕೋಸಲಾಶ್ಚೈವ ತ್ರೈಪುರಾ ವಿದಿಶಸ್ತಥಾ ॥೫೨॥

---

೪೯. ಮತ್ತು ಪೌರಿಕ, ಮೌಲಿಕ, ಅಶ್ಮಕ, ಭೋಗವರ್ಧನ, ನೈಷಿಕ, ಕುಂತಲ, ಆಂಧ್ರ, ಉದ್ಭಿದ, ಹಾಗು ವನದಾರಕ—ಇವುಗಳು ದಕ್ಷಿಣ ದಿಗ್ಭಾಗದ ಜನಪದ ಕೂಟದಲ್ಲಿ ಸೇರಿಕೊಂಡಿರುವುವು.

೫೦. ಹಿಂದೆ ಹೇಳಿದ ದೇಶಗಳೆಲ್ಲವೂ ದಾಕ್ಷಿಣಾತ್ಯ ಜನಪದಗಳೆಂದು ಪ್ರಸಿದ್ಧವಾಗಿವೆ. ಇನ್ನು ಮುಂದೆ ಅಪರಾಂತ ದೇಶಗಳನ್ನು ನನ್ನಿಂದ ಕೇಳು. ಸೂರ್ಯಾರಕ, ಕಾಲಿಬಲ, ದುರ್ಗ ಮತ್ತು ಚಾಮೀಕಟ—ಎಂಬುವು ಅಪರಾಂತ ದೇಶಗಳಲ್ಲಿ ಸೇರಿವೆ.

೫೧. ಮತ್ತು ಪುಲಿಂದ, ಸುಮೀನ, ರೂಪಪ, ಸ್ವಾಪದ, ಕುರುಮಿನ ಹಾಗು ಕಠಾಕ್ಷರ—ಎಂಬ ನಾಮಾಂಕಿತವಾದ ಜನಪದಗಳು ಅಪರಾಂತ ದೇಶಗಳಲ್ಲಿ ಸೇರಿಕೊಂಡಿವೆ.

೫೨. ಮತ್ತು ಕಾರಸ್ಕರ, ಲೋಹಜಂಘ, ವಾಜೇಯ, ರಾಜಭದ್ರಕ, ತೋಸಲ, ಕೋಸಲ, ತ್ರೈಪುರ, ವಿದಿಶ—ಇವು ಅಪರಾಂತ ದೇಶಗಳ ಶ್ರೇಣಿಗೆ ಸೇರಿದ ಕೆಲವು ಜನಪದಗಳ ನಾಮಾಂಕನಗಳಾಗಿವೆ.

ತುಷಾರಾಸ್ತುಮ್ಬುರಾಶ್ಚೈವ ಸರ್ವೇ ಚೈವ ಕರಸ್ಕರಾಃ ।
ನಾಸಿಕ್ಯಾವಾಶ್ಚ ಯೇ ಚಾನ್ಯೇ ಯೇ ಚೈವೋತ್ತರನರ್ಮದಾಃ ॥೫೩॥

ಭೀರುಕಚ್ಛಾಃ ಸಮಾಹೇಯಾಃ ಸಹ ಸಾರಸ್ವತೈರಪಿ ।
ಕಾಶ್ಮೀರಾಶ್ಚ ಸುರಾಷ್ಟ್ರಾಶ್ಚ ಆವನ್ತ್ಯಾಶ್ಚಾರ್ಬುದೈಃ ಸಹ ॥೫೪॥

ಇತ್ಯೇತೇ ಹ್ಯಪರಾನ್ತಾಶ್ಚ ಶೃಣು ವಿನ್ಧ್ಯನಿವಾಸಿನಃ ।
ಸರಜಾಶ್ಚ ಕರೂಷಾಶ್ಚ ಕೇರಲಾಶ್ಚೋತ್ಕಲೈಃ ಸಹ ॥೫೫॥

ಉತ್ತಮರ್ಣಾ ದಶಾರ್ಣಾಶ್ಚ ಭೋಜ್ಯಾಃ ಕಿಷ್ಕಿನ್ಧಕೈಃ ಸಹ ।
ತುಮ್ಬರಾಸ್ತುಮ್ಬುಲಾಶ್ಚೈವ ಪಟವೀನೈಷಧೈಃ ಸಹ ॥೫೬॥

ಅನ್ನಜಾಸ್ತುಷ್ಟಿಕಾರಾಶ್ಚ ವೀರಹೋತ್ರಾ ಹ್ಯವನ್ತಯಃ ।
ಏತೇ ಜನಪದಾಃ ಸರ್ವೇ ವಿನ್ಧ್ಯಪೃಷ್ಠನಿವಾಸಿನಃ ॥೫೭॥

---

೫೩. ತುಷಾರ, ತುಂಬುರ, ಕಾರಸ್ಕರ, ನಾಸಿಕ್ಯಾವ, ಉತ್ತರನರ್ಮದ ಇವೆಲ್ಲವೂ ಜನಪದ ಕೂಟಗಳಾಗಿವೆ. ಈ ಪ್ರತ್ಯೇಕವಾದ ಕೂಟಗಳು ಅಪರಾಂತ ಜನಪದಗಳಲ್ಲಿ ಸೇರಿವೆ.

೫೪. ಮತ್ತು ಭೀರುಕಚ್ಛ, ಮಾಹೇಯ, ಸಾರಸ್ವತ, ಕಾಶ್ಮೀರ, ಸುರಾಷ್ಟ್ರ, ಆವಂತ್ಯ ಹಾಗು ಅರ್ಬುದ—ಎಂಬುವು ಅಪರಾಂತ ಜನಪದ ಕೂಟದಲ್ಲಿ ಸೇರಿದುವೆಂದು ಅರಿಯಬೇಕು.

೫೫. ಹೀಗೆ ಈ ಅಪರಾಂತ ದೇಶಗಳು ನನ್ನಿಂದ ಹೇಳಲ್ಪಟ್ಟಿವೆ. ಮುಂದೆ ವಿಂಧ್ಯಗಿರಿಯ ಸಮೀಪದಲ್ಲಿರುವ ದೇಶಗಳನ್ನು ಕೇಳು. ಸರಜ, ಕರೂಷ, ಕೇರಲ ಮತ್ತು ಉತ್ಕಲ ಎಂಬುವು ವಿಂಧ್ಯಪೃಷ್ಠದಲ್ಲಿರುವ ಜನಪದಗಳಾಗಿವೆ.

೫೬. ಉತ್ತಮಾರ್ಣ, ದಶಾರ್ಣ, ಭೋಜ್ಯ, ಕಿಷ್ಕಿಂಧ, ತುಂಬರ, ತುಂಬುಲ, ಪಟವೀ ಮತ್ತು ನೈಷಧ—ಎಂಬುವು ಮತ್ತೆ ಕೆಲವು ವಿಂಧ್ಯಪೃಷ್ಠದ ಜನಪದಗಳ ನಾಮಾಂಕನಗಳಾಗಿವೆ.

೫೭. ಮತ್ತು ಅನ್ನಜ, ತುಷ್ಟಿಕಾರ, ವೀರಹೋತ್ರ, ಅವಂತಿ— ಎಂಬುವು ವಿಂಧ್ಯಪೃಷ್ಠದ ಜನಪದಗಳಾಗಿವೆ. ಹೀಗೆ ಹಿಂದೆ ಹೇಳಿರುವ ಎಲ್ಲ ಜನಪದಗಳು ವಿಂಧ್ಯಪೃಷ್ಠದಲ್ಲಿರುವ ಜನಪದಗಳೆಂದು ತಿಳಿಯಬೇಕು.

ಅತೋ ದೇಶಾನ್ಪ್ರವಕ್ಷ್ಯಾಮಿ ಪರ್ವತಾಶ್ರಯಿಣಶ್ಚ ಯೇ ।
ನೀಹಾರಾ ಹಂಸಮಾರ್ಗಾಶ್ಚ ಕುರವೋ ಗುರ್ಗಣಾಃ ಖಸಾಃ ॥೫೮॥

ಕುನ್ತಪ್ರಾವರಣಾಶ್ಚೈವ ಊರ್ಣಾ ದಾರ್ವಾಃ ಸಕೃತ್ರಕಾಃ ।
ತ್ರಿಗರ್ತಾ ಗಾಲವಾಶ್ಚೈವ ಕಿರಾತಾಸ್ತಾಮಸೈಃ ಸಹ ॥೫೯॥

ಕೃತತ್ರೇತಾದಿಕಶ್ಚಾತ್ರ ಚತುರ್ಯುಗಕೃತಾಂ ವಿಧಿಃ ।
ಏತತ್ತು ಭಾರತಂ ವರ್ಷಂ ಚತುಸ್ಸಂಸ್ಥಾನಸಂಸ್ಥಿತಮ್ ॥೬೦॥

ದಕ್ಷಿಣಾಪರತೋ ಹ್ಯಸ್ಯ ಪೂರ್ವೇಣ ಚ ಮಹೋದಧಿಃ ।
ಹಿಮವಾನುತ್ತರೇಣಾಸ್ಯ ಕಾರ್ಮುಕಸ್ಯ ಯಥಾ ಗುಣಃ ॥೬೧॥

---

೫೮. ಇನ್ನು ಮುಂದೆ ಪರ್ವತ ಭೂಮಿಯನ್ನು ಆಶ್ರಯಿಸಿಕೊಂಡಿರುವ ದೇಶಗಳನ್ನು ನಿನಗೆ ಹೇಳುವೆನು. ನೀಹಾರ, ಹಂಸಮಾರ್ಗ, ಕುರು, ಗುರ್ಗಣ ಮತ್ತು ಖಸ—ಇವು ಪರ್ವತಾವಲಂಬಿಗಳಾದ ದೇಶಗಳಾಗಿವೆ.

೫೯. ಕುಂತ, ಪ್ರಾವರಣ, ಊರ್ಣ, ದಾರ್ವ, ಕೃತ್ರಕ, ತ್ರಿಗರ್ತ, ಗಾಲವ, ಕಿರಾತ ಮತ್ತು ತಾಮಸ—ಎಂಬುವು ಪರ್ವತ ಭೂಮಿಯನ್ನು ಆಶ್ರಯಿಸಿರುವ ಮತ್ತೆ ಕೆಲವು ದೇಶಗಳಾಗಿವೆ.

೬೦. ಈ ದೇಶಗಳಿಂದ ಶೋಭಿಸಲ್ಪಟ್ಟಿರುವ ಈ ದ್ವೀಪದಲ್ಲಿ ಕೃತ-ತ್ರೇತಾ-ದ್ವಾಪರ-ಕಲಿಯುಗಗಳ ಧರ್ಮಗಳು ಪರ್ಯಾಯದಿಂದ ನಡೆಯುವುವು. ಈ ಭಾರತವರ್ಷವು ನಾಲ್ಕು ದಿಕ್ಕುಗಳಲ್ಲಿ ಆಯಾಯ ಸನ್ನಿವೇಶದಿಂದ ಕೂಡಿರುವುದಾಗಿದೆ.

೬೧. ಈ ಭಾರತವರ್ಷದ ದಕ್ಷಿಣ-ಪಶ್ಚಿಮ ಮತ್ತು ಪೂರ್ವದಿಕ್ಕುಗಳ ಗಡಿಯಲ್ಲಿ ಸಮುದ್ರವು ಆವರಿಸಿಕೊಂಡಿದೆ. ಹೀಗೆ ಮೂರು ದಿಕ್ಕುಗಳಲ್ಲಿ ಗುಂಡಾಗಿ ಬಂದಿರುವ ಈ ವರ್ಷಕ್ಕೆ ಉತ್ತರದಲ್ಲಿ ಸರಲಾಕಾರದ ಹಿಮವತ್ಪರ್ವತವು ಬಿಲ್ಲಿಗೆ ಹುರಿಯನ್ನು ಕಟ್ಟಿದಂತೆ ಇರುವುದು.

ತದೇತದ್ಭಾರತಂ ವರ್ಷಂ ಸರ್ವಬೀಜಂ ದ್ವಿಜೋತ್ತಮ ।
ಬ್ರಹ್ಮತ್ವಮಮರೇಶತ್ವಂ ದೇವತ್ವಂ ಮರ್ತ್ಯತಾಂ ತಥಾ ॥೬೨॥

ಮೃಗಪಶ್ವಪ್ಸರೋಯೋನಿಸ್ತದ್ವತ್ಸರ್ವೇ ಸರೀಸೃಪಾಃ ।
ಸ್ಥಾವರಾಣಾಂ ಚ ಸರ್ವೇಷಾಮಿತೋ ಬ್ರಹ್ಮನ್ ಶುಭಾಶುಭೈಃ॥೬೩॥

ಪ್ರಯಾನ್ತಿ ಕರ್ಮಭೂರ್ಬ್ರಹ್ಮನ್ನಾನ್ಯಲೋಕೇಷು ವಿದ್ಯತೇ ।
ದೇವಾನಾಮಪಿ ವಿಪ್ರರ್ಷೇ ಸದಾ ಏಷ ಮನೋರಥಃ ॥೬೪॥

ಅಪಿ ಮಾನುಷ್ಯಮಾಪ್ಸ್ಯಾಮೋ ದೇವತ್ವಾತ್ಪ್ರಚ್ಯುತಾಃ ಕ್ಷಿತೌ ।
ಮನುಷ್ಯಃ ಕುರುತೇ ತತ್ತು ಯನ್ನ ಶಕ್ಯಂ ಸುರಾಸುರೈಃ ॥೬೫॥

---

೬೨. ಎಲೈ, ದ್ವಿಜನೆ! ಇಂತಹ ಭಾರತ ವರ್ಷವು ಪ್ರಾಪ್ಯವಾದ ಸರ್ವಫಲಗಳಿಗೆ ಬೀಜರೂಪವಾಗಿರುವುದು. ಬ್ರಹ್ಮಪದ, ದೇವರಾಜಪದ, ದೇವತ್ವ ಅಥವಾ ಮರ್ತ್ಯತ್ವ—ಈ ಫಲಗಳನ್ನು ಭಾರತವರ್ಷದಲ್ಲಿ ಮಾಡಿರುವ ಕರ್ಮಗಳಿಂದ ಹೊಂದಬಹುದು.

೬೩. ಎಲೈ ಬ್ರಹ್ಮರ್ಷಿಯೆ! ಮೃಗ, ಪಶು, ಅಪ್ಸರಾಂಗನೆ, ಹಾವು ಮುಂತಾದ ಹರಿಯುವ ಪ್ರಾಣಿ ಮತ್ತು ಸಮಸ್ತ ಸ್ಥಾವರಜಾತಿ—ಈ ಎಲ್ಲ ಜನ್ಮಗಳು ಭಾರತವರ್ಷದಲ್ಲಿ ಆಚರಿಸಿದ ಶುಭ-ಅಶುಭ ಕರ್ಮಗಳಿಂದ ಲಭ್ಯವಾಗಿವೆ.

೬೪. ದ್ವಿಜೋತ್ತಮನಾದ ಕ್ರೌಷ್ಟುಕಿಯೇ! ಈ ಭಾರತವರ್ಷವು ಕರ್ಮಭೂಮಿಯು. ಬೇರೆ ಲೋಕಗಳಲ್ಲಿ ಫಲಾಫಲಗಳನ್ನು ಕೊಡುವ ಕರ್ಮ-ಭೂಮಿಯಿಲ್ಲ. ಕರ್ಮಭೂಮಿಯ ವಿಷಯದಲ್ಲಿ ದೇವತೆಗಳಿಗೆ ಯಾವಾಗಲೂ ಇದೊಂದು ಮನೋರಥವಿರುವುದು.

೬೫. ದೇವತ್ವವನ್ನು ಕೊಟ್ಟ ಪುಣ್ಯವು ಕ್ಷಯಿಸಿದಮೇಲೆ ಅಲ್ಲಿಂದ ಚ್ಯುತರಾದ ನಾವು ಭೂಮಿಯಲ್ಲಿ ಮನುಷ್ಯಜನ್ಮವನ್ನು ಹೊಂದಲಾದೀತೇ! ಸುರ-ಅಸುರರಿಂದ ಸಾಧಿಸಲಾಗದಂತಹ ಕರ್ಮವನ್ನು ಮನುಷ್ಯನು ಮಾಡುವ-ನಲ್ಲವೆ!

ತತ್ಕರ್ಮನಿಗಡಗ್ರಸ್ತೈಃ ಸ್ವಕರ್ಮಖ್ಯಾಪನೋತ್ಸುಕೈಃ ।
ನ ಕಿಂಚಿತ್ಕ್ರಿಯತೇ ಕರ್ಮ ಸುಖಲೇಶೋಪಬೃಹ್ಮಿತೈಃ ॥೬೬॥

ಇತಿ ಶ್ರೀ ಮಾರ್ಕಣ್ಡೇಯ ಮಹಾಪುರಾಣೇ ನದ್ಯಾದಿ ವರ್ಣನಂ ನಾಮ ಚತುಷ್ಪಞ್ಚಾಶತ್ತಮೋಽಧ್ಯಾಯಃ

---

೬೬. ದೇವತ್ವವನ್ನು ಹೊಂದಿದ ನಾವು ಆ ಕರ್ಮಪಾಶದಿಂದ ಬದ್ಧರೂ, ಸ್ವಕರ್ಮವನ್ನು ಪ್ರಕಾಶಪಡಿಸುವ ಉತ್ಸಾಹವುಳ್ಳವರೂ, ಮತ್ತು ದೇವತ್ವದ ಸುಖಲೇಶದಿಂದ ಮುಗ್ಧರೂ ಆಗಿ ಆ ಫಲವನ್ನು ಭುಂಜಿಸುವುದನ್ನು ಬಿಟ್ಟು ಮತ್ತಾವ ಸುಕೃತವನ್ನೂ ಮಾಡುವಂತಿಲ್ಲ—ಎಂದು ಚಿಂತಿಸುತ್ತಿರುವರು.

ಮಾರ್ಕಂಡೇಯ ಮಹಾಪುರಾಣದಲ್ಲಿ ಐವತ್ತನಾಲ್ಕನೆಯ
ಅಧ್ಯಾಯವು ಮುಗಿದುದು.